ISSN 2321 - 3590

10ನೇ ವರ್ಷ

ದಶಮಾನೋತ್ಸವ ವಿಶೇಷ

ಕರ್ನಾಟಕ ಇತಿಹಾಸದ ಹೊಸ ಆಯಾಮಗಳು

ಇತಿಹಾಸ ದರ್ಪಣ


(ತ್ರೈಮಾಸಿಕ)

ಕನ್ನಡದ ಏಕೈಕ ಇತಿಹಾಸ ಸಂಶೋಧನ ತ್ರೈಮಾಸಿಕ ನಿಯತಕಾಲಿಕೆ

ಪುಸ್ತಕ 40–41

(ಸಂಯುಕ್ತ ಸಂಚಿಕೆ)

ಜನವರಿ–ಜೂನ್ 2019




Itihasa Darpana


(Kannada Quarterly)

A Peer Reviewed Journal of Historical Research in Kannada

Book 40-41
(Combined Issue)
January - June 2019









ಪ್ರಾಗಿತಿಹಾಸ 'ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳು'– ಲೇಖನಕ್ಕೆ ಸಂಬಂಧಿತ ವರ್ಣಚಿತ್ರಗಳ

ISSN 2321 - 3590

ಕನ್ನಡದ ಏಕೈಕ ಇತಿಹಾಸ ಸಂಶೋಧನ ತ್ರೈಮಾಸಿಕ ನಿಯತಕಾಲಿಕೆ

ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada

ದಶಮಾನೋತ್ಸವ ವಿಶೇಷ
ಕರ್ನಾಟಕ ಇತಿಹಾಸದ
ಹೊಸ ಆಯಾಮಗಳು



ಇತಿಹಾಸ ದರ್ಪಣ
(ತ್ರೈಮಾಸಿಕ)
ಪುಸ್ತಕ ೪೦-೪೧
(ಸಂಯುಕ್ತ ಸಂಚಿಕೆ)
ಜನವರಿ - ಜೂನ್ ೨೦೧೯

ಸಂಪಾದಕರು, ಇತಿಹಾಸ ದರ್ಪಣ
೩೩/ಎ, ಐ.ಟಿ.ಐ. ಕಾಲೇಜು ಹತ್ತಿರ
ಕೆಂಪೇಗೌಡನಗರ, ವಿಶ್ವನೀಡಂ-ಅಂಚೆ
ಬೆಂಗಳೂರು - ೫೬೦ ೦೯೧
ಮೊಬೈಲ್: ೭೮೨೯೪೦೪೦೬೩
E-mail: itihasadarpana@gmail.com

Itihasa Darpana
(Kannada Quarterly)
Book 40-41
(Combined Issue)
January - June 2019

Editor, ITIHASA DARPANA
33/A, Near ITI College
Kempegowdanagar, Vishwaneedam (P)
Bengaluru - 560 091. Mob: 78294 04063
Website: itihasadarpana.com

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಪುಸ್ತಕ ವಿನ್ಯಾಸ : **ಶ್ವೇತ ಬಿ.ಎಸ್.**
Book Design : **Shwetha B.S.**

ಪರಿವಿಡಿ

ನಾನೇ ಏಕೆ ಒಂದು ಪತ್ರಿಕೆಯನ್ನು ಆರಂಭಿಸಿ ನನ್ನ ಅಭಿಪ್ರಾಯಗಳನ್ನೆಲ್ಲ ಬರೆದುಕೊಳ್ಳಬಾರದು ಎಂಬ ತುಡಿತ ಬಲವಾಗಿತ್ತು. ಪತ್ರಿಕೆಯಲ್ಲಿ ಬರೆಯಬೇಕೆಂಬ ನನ್ನ ಆಸೆಗೆ ಅವಕಾಶವೊಂದು ಒದಗಿ ಬಂದಿತು. 2004ರಲ್ಲಿ ಪ್ರಜಾವಾಣಿಯಲ್ಲಿ ಕರೆದಿದ್ದ ವರದಿಗಾರರ ಹುದ್ದೆಗೆ ನಾನು ಮತ್ತು ಸಹಪಾಠಿ ಮಿತ್ರ ಸಂಪತ್ ಎಸ್. ಕೂಡಿ ಅರ್ಜಿ ಹಾಕಿದ್ದೆವು. ಆದರೆ, ಸಂಪತ್ ಆಯ್ಕೆಯಾದರು. ನನ್ನ ಕನಸು ಕನಸಾಗಿಯೇ ಉಳಿದಿತು. ಅದು 'ಇತಿಹಾಸ ದರ್ಪಣ'ದ ಮೂಲಕ ಸಾಕಾರಗೊಂಡಿತ್ತು.

ಸ್ಪಂದನ ಇತಿಹಾಸ ವೇದಿಕೆಯಿಂದ ಒಂದು ಪತ್ರಿಕೆ ತರಬೇಕೆಂಬ ಒತ್ತಾಯ ಕೂಡ ನನ್ನದೇ ಆಗಿದ್ದರಿಂದ ಅದರ ಸಂಪೂರ್ಣ ಜವಾಬ್ದಾರಿಯೂ ನನ್ನ ಮೇಲೆಯೇ ಇತ್ತು. ಆದ್ದರಿಂದ ವೇದಿಕೆ ನಿಷ್ಕ್ರಿಯವಾದರೂ 'ಇತಿಹಾಸ ದರ್ಪಣ'ವನ್ನು ಮುನ್ನಡೆಸಿಕೊಂಡು ಹೊರಟೆ. ಆ ಹೊತ್ತಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಎಫ್.ಡಿ.ಎ ಹುದ್ದೆಯಲ್ಲಿದ್ದವನು ಕೆ.ಪಿ.ಎಸ್.ಸಿ. ಮೂಲಕ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕನಾಗಿ ನೇಮಕಗೊಂಡು, ತುರುವೇಕೆರೆ ತಾಲ್ಲೂಕಿನ ಸೀಗೇಹಳ್ಳಿಗೆ ಸ್ಥಳನಿಯುಕ್ತಿಗೊಂಡೆ. ನಿತ್ಯ ಬೆಂಗಳೂರಿನಿಂದಲೇ ಹೋಗಿಬಂದು ಮಾಡುತ್ತಿದ್ದೆ. ದಿನನಿತ್ಯ 200 ಕಿ.ಮೀ.ಗಳನ್ನು ಬಸ್ಸಿನಲ್ಲಿಯೇ ಪ್ರಯಾಣಿಸಬೇಕಿತ್ತು. ಕನಿಷ್ಠ ಆರುಗಂಟೆಗಳನ್ನು ಪ್ರಯಾಣಕ್ಕೆ ಮೀಸಲಿಡಬೇಕಿತ್ತು. 'ಇತಿಹಾಸ ದರ್ಪಣ'ದ ಕೆಲಸ ಕಾರ್ಯಗಳಿಗೆ ಯಾವುದೇ ಅಡ್ಡಿ ಆತಂಕಗಳು ಭಾದಿಸದಂತೆ ನಿರ್ವಹಿಸುವುದು ಸವಾಲಿನ ಕೆಲಸವೇ ಆಗಿತ್ತು. ಈ ಸಂದರ್ಭದಲ್ಲಿ ಸ್ನೇಹಿತರೂ ಮತ್ತು ಪತ್ರಿಕೆಯ ಉಪಸಂಪಾದಕರೂ ಆದ ಸುಂಕಂ ಗೋವರ್ಧನ, ರಶ್ಮಿ ಎಸ್. ಹಾಗೂ ಪತ್ರಿಕಾ ಕಾರ್ಯನಿರ್ವಾಹಕ ನಾಗೇಶ್ ಕೆ. ಅವರ ಪಾತ್ರ ಹಿರಿದು.

ಆರಂಭದಲ್ಲಿ "ಖಾಸಗಿ ಪ್ರಸಾರಕ್ಕಾಗಿ" ಎಂತಲೇ ತರಲಾಯಿತು. ನಮ್ಮ ನಿಯತಕಾಲಿಕೆಯನ್ನು ಗಮನಿಸಿದ ಕೆಲವರು ಲೇವಡಿ ಮಾಡಿರುವುದೂ ಉಂಟು. ಚಂದಾ ಕೋರಿದಾಗ ಮೂಗುಮುರಿದಿದ್ದೂ ಉಂಟು. ಆದರೂ ಕೆಲವು ಸಹೃದಯಿ ಚರಿತ್ರಾಸಕ್ತರು ಮಾತ್ರ ಚಂದಾ / ವಂತಿಕೆ ನೀಡಿ ಬೆನ್ನು ತಟ್ಟಿದರು. ಇವರ ಚಂದಾ ಮತ್ತು ನನ್ನ ಸ್ವಂತ ದುಡಿಮೆಯ ಹಣದಲ್ಲಿಯೇ ಇತಿಹಾಸ ದರ್ಪಣವನ್ನು ಪ್ರಕಟಿಸುತ್ತಾ ಬಂದೆ. ಕೆಲವು ವಿಶೇಷ ಸಂಚಿಕೆಗಳನ್ನು ರೂಪಿಸುವಾಗ ಬಡ್ಡಿಗೆ ಹಣ ತಂದು ಮುದ್ರಿಸಿದ್ದೂ ಆಯಿತು. ಈ ಸಂದರ್ಭದಲ್ಲಿ ಪತ್ರಿಕೆಗೆ ಬೌದ್ಧಿಕ ಮತ್ತು ನೈತಿಕ ಶಕ್ತಿಯಾಗಿ ನಿಂತ ಅ.ಲ. ನರಸಿಂಹನ್, ಎಸ್.ಕೆ. ಅರುಣಿ ಮತ್ತು ಮನು ವಿ. ದೇವದೇವನ್ ಅವರ ಸಹಕಾರವನ್ನು ಅತ್ಯಂತ ಗೌರವದಿಂದ ಸ್ಮರಿಸುತ್ತೇನೆ.

ಆರಂಭದಲ್ಲಿ ಇತಿಹಾಸ ದರ್ಪಣಕ್ಕೆ ನಿರ್ದಿಷ್ಟ ಸಂಪಾದಕ ಮಂಡಳಿ ಇರಲಿಲ್ಲ. ಯಾರು ಸಕ್ರಿಯವಾಗಿ ಪತ್ರಿಕೆಯ ಜೊತೆಗೆ ಗುರುತಿಸಿಕೊಳ್ಳುತ್ತಾರೋ ಅವರೇ ಉಪಸಂಪಾದಕರು. ಹೀಗೆ ಬಂದವರು ಒಂದೆರಡು ಸಂಚಿಕೆಗಳು ಹೊರಬರುತ್ತಲೇ ಕೌಟುಂಬಿಕ ಕಾರಣದಿಂದಲೋ, ವೈಯಕ್ತಿಕ ಕೆಲಸದ ಒತ್ತಡದಿಂದಲೋ ದೂರ ಉಳಿದು ಬಿಡುತ್ತಿದ್ದರು. ಹೀಗಾಗಿ ಆರಂಭದ ಸಂಚಿಕೆಗಳಲ್ಲಿ ಸಂಪಾದಕ ಮಂಡಳಿಯ ಸದಸ್ಯರು ಬಂದು ಹೋಗುವುದು ಸಾಮಾನ್ಯವಾಗಿತ್ತು. ಹೀಗೆ ಬಂದವರಲ್ಲಿ ಸುಂಕಂ ಗೋವರ್ಧನ, ರಶ್ಮಿ ಎಸ್., ಶಿವಕುಮಾರಿ ಎಂ.ಎಸ್. ಇವರು ದೀರ್ಘಕಾಲದಿಂದಲೂ ದರ್ಪಣದ ಉಪಸಂಪಾದಕರಾಗಿ ಉಳಿದಿದ್ದಾರೆ. ಆರಂಭದ ಕೆಲವು ವರ್ಷಗಳವರೆಗೆ ನಾಗೇಶ್ ಕೆ. ಅವರು ಕಾರ್ಯನಿರ್ವಾಹಕರಾಗಿ ಸಕ್ರಿಯವಾಗಿ ದುಡಿದುದ್ದನ್ನು ಸ್ಮರಿಸಲೇಬೇಕು. ಆರಂಭಿಕ ವರ್ಷಗಳಲ್ಲಿ ದರ್ಪಣಕ್ಕೆ ಸಲಹಾ ಮಂಡಳಿ ರಚಿಸಿಕೊಳ್ಳಲಾಗಿತ್ತು. ಮಂಡಳಿಯಲ್ಲಿ ಎಚ್.ಎಸ್. ದೊರೆಸ್ವಾಮಿ, ಕಿ.ರಂ. ನಾಗರಾಜ, ಎಸ್. ಚಂದ್ರಶೇಖರ್, ಎಚ್.ಎಸ್.ಗೋಪಾಲ್‌ರಾವ್, ವಸು ಎಂ.ವಿ., ಎಸ್.ಕೆ. ಅರುಣಿ, ಅ.ಲ.ನರಸಿಂಹನ್

ಮನು ವಿ. ದೇವದೇವನ್ ಇದ್ದರು. ಅನಂತರ ಸಲಹಾ ಮಂಡಳಿಯನ್ನು ಕೈಬಿಡಲಾಯಿತು. ಈಗ ಮತ್ತೆ ಸಲಹಾ ಸಮಿತಿ ಮತ್ತು ಸಂಪಾದಕ ಮಂಡಳಿಗಳೆರಡನ್ನೂ ರಚಿಸಿಕೊಂಡು ವಿನೂತನ ಪ್ರಯತ್ನಕ್ಕೆ ಮುನ್ನುಡಿ ಹಾಡಲು ಮುಂದಾಗಿದ್ದೇವೆ.

'ಇತಿಹಾಸ ದರ್ಪಣ'ದ ಆರಂಭದಿಂದಲೇ ಸಂಚಿಕೆ ಮತ್ತು ಸಂಪುಟಗಳ ಗೊಂದಲಗಳಿಗೆ ತೆರೆ ಎಳೆಯಲು ಪುಸ್ತಕ : 1, 2, 3... ಹೀಗೆ ಕ್ರಮ ಸಂಖ್ಯೆಗಳನ್ನು ನೀಡುತ್ತಾ ಬಂದಿದ್ದೇವೆ. ಪ್ರಸ್ತುತ 10ನೇ ವರ್ಷವನ್ನು ಪೂರೈಸುತ್ತಿರುವ ಸಂದರ್ಭದಲ್ಲಿ 40–41ನೇ ಪುಸ್ತಕವನ್ನು 'ಕರ್ನಾಟಕ ಇತಿಹಾಸದ ಹೊಸ ಆಯಾಮಗಳು' ಹೆಸರಿನಲ್ಲಿ ವಿಶೇಷವಾಗಿ ಹೊರತರುತ್ತಿದ್ದೇವೆ. ಇದಕ್ಕೆ ನಾಡಿನ ಗಣ್ಯ ಇತಿಹಾಸಕಾರರು ಮತ್ತು ಭರವಸೆಯ ಯುವ ಸಂಶೋಧಕರು ತಮ್ಮ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಮೊದಲು 'ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ' (ಪುಸ್ತಕ: 4), 'ನಮ್ಮ ಬೆಂಗಳೂರು' (ಪುಸ್ತಕ: 8), 'ಕರ್ನಾಟಕದ ಪುರಾತತ್ವ ಅಧ್ಯಯನಗಳು' (ಪುಸ್ತಕ: 12–13), 'ಹೈದರ್ ಮತ್ತು ಟೀಪೂ ದಾಖಲೆ' (ಬೆಳ್ಳಿ ಪುಸ್ತಕ), 'ಪರಿಶೋಧ: ಕಲೆ, ವಾಸ್ತುಶಿಲ್ಪ ಮತ್ತು ಪುರಾತತ್ವ ಕುರಿತಾದ ಅಧ್ಯಯನಗಳು' (ಪುಸ್ತಕ: 31–32) ಎಂಬ ವಿಶೇಷ ಸಂಚಿಕೆಗಳನ್ನು ವಿವಿಧ ವಿದ್ವಾಂಸರ ಸಂಪಾದಕತ್ವದಲ್ಲಿ ಹೊರತರಲಾಗಿತ್ತು.

ಆರಂಭದ ಸಂಚಿಕೆಗಳಲ್ಲಿ ಪ್ರಕಟಿಸಲಾಗುತ್ತಿದ್ದ ಚುಟುಕು ಬರಹ, ಕಾರ್ಯಕ್ರಮ ವರದಿಗಳು, ಸುದ್ದಿಗಳ ಪ್ರಕಟಣೆ, ಪದ್ಯ ರಚನೆ ಮುಂತಾದವುಗಳಿಗೆ ತಿಲಾಂಜಲಿ ಇಟ್ಟು ಗಂಭೀರವಾದ ಅಕಾಡೆಮಿಕ್ ಬರವಣಿಗೆಗೆ ಆದ್ಯತೆ ನೀಡಲಾಯಿತು. ಹಿರಿಯ ಮತ್ತು ಕಿರಿಯ ಸಂಶೋಧಕರ ಉತ್ಕೃಷ್ಟ ಬರವಣಿಗೆಗಳನ್ನು ತಜ್ಞರ ಪರಿಶೀಲನೆಯ ನಂತರವೇ ಪ್ರಕಟಣೆಗೆ ಪರಿಗಣಿಸಲಾಗುತ್ತಾ ಬರಲಾಗುತ್ತಿದೆ. ಪರಿಣಾಮವಾಗಿ ದರ್ಪಣದ ಗುಣಮಟ್ಟ ಹೆಚ್ಚುತ್ತಾ ಹೋಯಿತು. ಹಾಗೆಯೇ ತಿರಸ್ಕರಿಸಿದ ಕಾರಣಕ್ಕಾಗಿ ಕೆಲವು ಸ್ನೇಹಿತರೇ ನನ್ನನ್ನು ವೈಯಕ್ತಿಕವಾಗಿ ವಿರೋಧಿಸಿ, ಹಣೆಪಟ್ಟಿ ಕಟ್ಟಿದ್ದೂ ಉಂಟು. ಇಂತಹ ಯುವ ಸಂಶೋಧಕ ಮಿತ್ರರಿಗೆ ಒಂದು ಕಿವಿಮಾತು. ನಾಡಿನ ಹಲವು ಹಿರಿಯ ಇತಿಹಾಸಕಾರರ ಬರವಣಿಗೆಗಳನ್ನೇ ಕಾರಣ ನೀಡಿ ವಾಪಸ್ ಕಳುಹಿಸಿರುವುದುಂಟು. ಅಂತಹ ಹಿರಿಯ ವಿದ್ವಾಂಸರೇ ಆಕ್ಷೇಪಿಸದಿರುವಾಗ ವಿನಾಕಾರಣ ಹಣೆಪಟ್ಟಿ ಹಚ್ಚಿ ವಿರೋಧಿಸುವುದರಲ್ಲಿ ಅರ್ಥವಿಲ್ಲ. ಅಂತಹ ಬೀಸು ಹೇಳಿಕೆಗಳಿಗೆ ಪ್ರತಿಕ್ರಿಯಿಸುವ ಅಗತ್ಯವೂ ನನಗಿಲ್ಲ.

ಒಬ್ಬರಂತೂ ಎಂದಿಗೂ ದರ್ಪಣದ ಚಂದಾದಾರರಾದವರಲ್ಲ. ಆದರೆ ಅವರ ನಾಲ್ಕಾರು ಲೇಖನಗಳನ್ನು ಪ್ರಕಟಿಸಿದೆವು. ಆ ವ್ಯಕ್ತಿಗೆ ಒಮ್ಮೆಲೆ ದರ್ಪಣದ ಬಗ್ಗೆ ತಿರಸ್ಕಾರ ಭಾವ ಮೂಡಿ, ತುಚ್ಛವಾಗಿ ನಿಂದಿಸಿದರು. ಅವರಿಗೆ ಅನಿವಾರ್ಯವಾಗಿ ಬಹಳ ನೋವಿನಿಂದ ಒಂದು ಮಾತು ಹೇಳಿದೆ: "ನಿಮ್ಮ ಲೇಖನಗಳನ್ನು ಪ್ರಕಟಣೆಗೆ ನೀಡುವಾಗ ದರ್ಪಣದ ಯೋಗ್ಯತೆಯ ಅರಿವಿರಲಿಲ್ಲವೇ? ...ಎಂದೂ ದರ್ಪಣದ ಚಂದಾದಾರರಾಗದ ನಿಮಗೆ, ನಿಂದಿಸುವ ಕನಿಷ್ಠ ಅರ್ಹತೆಯೂ ಇಲ್ಲ". ಇಂತಹ ಕಹಿ ಅನುಭವಗಳೂ ಇವೆ.

ಇವೆಲ್ಲವುಗಳ ಮಧ್ಯೆ ದರ್ಪಣಕ್ಕೆ 17ನೇ ಪುಸ್ತಕದಿಂದ ಐ.ಎಸ್.ಎಸ್.ಎನ್. ಸಂಖ್ಯೆ (2321–3590) ಕೂಡ ದೊರಕಿತು. ಅದೇರೀತಿ ಅರುಣಿ ಅವರ ಪ್ರಯತ್ನದಿಂದ ಐ.ಸಿ.ಎಚ್.ಆರ್. ವತಿಯಿಂದ ಧನ ಸಹಾಯ ಕೂಡ ದೊರಕಲಾರಂಭಿಸಿತು. ಇದರಿಂದ ನನ್ನ ಜೇಬಿಗೆ ಬೀಳುತ್ತಿದ್ದ ಕತ್ತರಿ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ಈ ಸಂದರ್ಭದಲ್ಲಿ ಐ.ಸಿ.ಎಚ್.ಆರ್. ವತಿಯಿಂದ ಇತಿಹಾಸ ದರ್ಪಣ ಸಂಚಿಕೆಯನ್ನು ಪರಿಶೀಲನೆಗೆ ಕಳುಹಿಸಿಕೊಟ್ಟಾಗ ಉತ್ತಮ ವರದಿ ನೀಡಿ ಶಿಫಾರಸ್ಸು ಮಾಡಿದ ಎಲ್ಲ ವಿದ್ವಾಂಸರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸಲೇಬೇಕು. ಮೂರ್ನಾಲ್ಕು ವರ್ಷಗಳ ಕಾಲ ಐ.ಸಿ.ಎಚ್.ಆರ್. ತನ್ನ ಧನ ಸಹಾಯವನ್ನು ನೀಡಿತು.

ಆದರೆ 2016ರಲ್ಲಿ ಇದ್ದಕ್ಕಿದ್ದಂತೆ ಆರ್ಥಿಕ ನೆರವನ್ನು ನಿಲ್ಲಿಸಿತು. ರೋಮಿಲಾ ಥಾಪರ್ ಅವರ ಸಂದರ್ಶನವನ್ನು ಅನುವಾದಿಸಿ ಪ್ರಕಟಿಸಿದ್ದೇ ಅದಕ್ಕೆ ಕಾರಣವೆಂದು ನಂತರ ತಿಳಿಯಿತು. ಇತಿಹಾಸ ದರ್ಪಣಕ್ಕೆ ಐ.ಸಿ.ಎಚ್.ಆರ್.ನ ಆರ್ಥಿಕ ನೆರವನ್ನು ಕೊಡಿಸಲು ಯಶಸ್ವಿಯಾಗಿದ್ದ ಎಸ್.ಕೆ. ಅರುಣಿ ಅವರೇ ಉನ್ನತ ಸ್ಥಾನದಲ್ಲಿದ್ದರೂ, ಸಂದರ್ಭದ ಅಸಹಾಯಕತೆಯಿಂದ ಆರ್ಥಿಕ ನೆರವನ್ನು ನಿರಾಕರಿಸಿರುವ ಸಂಬಂಧದ ಅಧಿಕೃತ ಪತ್ರಕ್ಕೆ ಸಹಿಹಾಕಬೇಕಾಗಿ ಬಂತು. ಇದು ಅವರಲ್ಲಿ ಅತೀವ ನೋವನ್ನೂ ತಂದಿತ್ತು. ಅಂದು ಅವರು ನವದೆಹಲಿಯ ಐ.ಸಿ.ಎಚ್.ಆರ್.ನಲ್ಲಿ ಸದಸ್ಯ ಕಾರ್ಯದರ್ಶಿಗಳಾಗಿದ್ದರು. ಐ.ಸಿ.ಎಚ್.ಆರ್. ಕೆಲವರ್ಷಗಳ ಮಟ್ಟಿಗಾದರೂ ಅನುದಾನ ನೀಡಿದೆ. ಅದಕ್ಕೆ ನಾನು ಋಣಿಯಾಗಿದ್ದೇನೆ. ಆದರೆ, ಐ.ಸಿ.ಎಚ್.ಆರ್. ಅನುದಾನ ನೀಡುತ್ತದೆ ಎಂದೇನೂ ಇತಿಹಾಸ ದರ್ಪಣ ಆರಂಭಿಸಿದವನಲ್ಲ. ನನ್ನ ಸ್ವಂತ ಶಕ್ತಿಯ ಮೇಲೆಯೇ ಆರಂಭಿಸಿದ್ದೆ. ಅನುದಾನದಿಂದ ಸಂಪೂರ್ಣ ಆರ್ಥಿಕ ಹೊರೆಯಿಂದ ಮುಕ್ತನಾಗಿರಲಿಲ್ಲ; ಒಂದಷ್ಟು ಮಟ್ಟಿಗಾದರೂ ಹೊರೆ ಇಳಿಸಿತ್ತು. ಆ ಹೊರೆ ಮತ್ತೆ ಹೆಚ್ಚಿದೆ. ಚಂದಾದಾರರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಸರಿದೂಗಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ.

ಮುಖ್ಯವಾಗಿ ಚಂದಾದಾರರ ಸಂಖ್ಯೆಯನ್ನು ಹೆಚ್ಚಿಸಲು ಬೆಳಗಾವಿಯಿಂದ ಎ.ಬಿ. ವಗ್ಗರ, ಮಂಗಳೂರಿನಿಂದ ಪ್ರದೀಪ್ ಕುಮಾರ್ ಶೆಟ್ಟಿ ಬೆಂಬಲಕ್ಕೆ ನಿಂತರು. "ರಾಜೇಶ್ ಯೋಚಿಸಬೇಡಿ. ನಿಮ್ಮ ಜೊತೆಗೆ ನಾವಿದ್ದೇವೆ. ಮೌಲ್ಯಮಾಪನದ ಸಂದರ್ಭದಲ್ಲಿ ಒಂದಷ್ಟು ಚಂದಾ ಮಾಡಿಸಿಕೊಡುತ್ತೇವೆ" ಎಂದು ಧೈರ್ಯ ತುಂಬಿದವರು. ಅದೇರೀತಿ ತಮ್ಮ ಶಕ್ತಿಮೀರಿ ಚಂದಾ ಮಾಡಿಸಿ ಕಳುಹಿಸಿದರು. ಇಂತಹ ಗೆಳೆಯರ ಸಹಕಾರಕ್ಕೆ ಧನ್ಯವಾದಗಳನ್ನು ಹೇಳಲೇಬೇಕು.

ನಮ್ಮ ಪಾಲಿಗೆ 'ಕರ್ನಾಟಕ ಇತಿಹಾಸ ಅಕಾದೆಮಿ'ಯ ವಾರ್ಷಿಕ ಸಮ್ಮೇಳನಗಳೇ ಚಂದಾದಾರರ ಬೇಟೆಯ ತಾಣ. ಇಂದಿಗೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಚಂದಾದಾರರಾಗುವುದು ಅಕಾದೆಮಿಯ ವಾರ್ಷಿಕ ಸಮ್ಮೇಳನದಲ್ಲಿಯೇ. ಅಲ್ಲಿ ಅಕಾಡೆಮಿಕ್ ವಲಯದವರಿಗಿಂತಲೂ ಇತಿಹಾಸ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಅವರಿಗೆ 'ಇತಿಹಾಸ ದರ್ಪಣ'ದ ಚಂದಾದಾರರಾಗುವುದೇ ಒಂದು ಖುಷಿಯ ವಿಚಾರ. ಈ ಸಂದರ್ಭದಲ್ಲಿ ಇತಿಹಾಸ ಅಕಾದೆಮಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ನೀಡಿರುವ ಸಹಕಾರ ಮತ್ತು ಉತ್ತೇಜನವನ್ನು ಅತ್ಯಂತ ಕೃತಜ್ಞತೆಯಿಂದ ನೆನೆಯುತ್ತೇನೆ. ನನಗೆ ನೆನಪಿರುವಂತೆ ಇತಿಹಾಸ ದರ್ಪಣದ ಮೊದಲ ಚಂದಾದಾರರಾಗಿದ್ದು ಬಾಳೆಹೊನ್ನೂರಿನಲ್ಲಿ ನಡೆದ ಅಕಾದೆಮಿ ಸಮ್ಮೇಳನದಲ್ಲಿ ತುಮಕೂರಿನ ಡಿ.ಎನ್. ಯೋಗೀಶ್ವರಪ್ಪ. ಅವರು ಅವತ್ತಿನಿಂದ ಇವತ್ತಿನವರೆಗೂ ಇತಿಹಾಸ ದರ್ಪಣದ ಖಾಯಂ ಚಂದಾದಾರರು.

ಕಳೆದ ಹತ್ತು ವರ್ಷಗಳಲ್ಲಿ ಸಹೃದಯ ಇತಿಹಾಸ ಆಸಕ್ತ ಬಂಧುಗಳು ದರ್ಪಣಕ್ಕೆ ದೇಣಿಗೆ ರೂಪದಲ್ಲಿಯೂ ತಮ್ಮ ಶಕ್ತ್ಯಾನುಸಾರ ಆರ್ಥಿಕ ನೆರವು ನೀಡಿದ್ದಾರೆ. ಮುಖ್ಯವಾಗಿ ಮನು ವಿ. ದೇವದೇವನ್, ಎಂ.ಎಚ್. ನಾಗರಾಜು, ಶೋಭಾ ವಿ. (ಮೈಸೂರು ವಿ.ವಿ.), ಕುಮಾರಸ್ವಾಮಿ ವಿ.ಎಂ. (ಯು.ಎಸ್.ಎ), ಎಂ.ಜಿ. ನಾಗರಾಜ, ಮುರಳೀಧರ್ (ವಕೀಲರು), ಹೆಚ್. ಚಂದ್ರಶೇಖರ್ (ಭೂಗರ್ಭಶಾಸ್ತ್ರಜ್ಞರು), ಗೆಳೆಯರಾದ ರಂಗಸ್ವಾಮಿ ಸಿ., ಚಂದ್ರಶೇಖರ್ ಜಿ., ಪ್ರಶಾಂತ್ ಎಂ.ಕೆ., ಮುರುಗೇಶಿ ಟಿ., ಅವರುಗಳ ಕ್ಷಮೆ ಕೋರುತ್ತಾ ನೆನೆಯುತ್ತೇನೆ. ಏಕೆಂದರೆ, ಇವರಾರೂ ಎಲ್ಲಿಯೂ ಕೊಟ್ಟಿದ್ದನ್ನು ಹೇಳಿಕೊಳ್ಳಲು ಇಷ್ಟಪಡುವವರಲ್ಲ. ಅಂಥವರ ನೆರವನ್ನು ಸ್ಮರಿಸುವುದು ನನ್ನ ನೈತಿಕ ಜವಾಬ್ದಾರಿ. ಹಾಗೆಯೇ ದರ್ಪಣದ ಆಜೀವ ಮತ್ತು ಸಾಮಾನ್ಯ ಚಂದಾದಾರರನ್ನೂ, ವಿವಿಧ ಕಾಲೇಜುಗಳ ಪ್ರಾಂಶುಪಾಲರು ಮತ್ತು ಗ್ರಂಥಪಾಲಕರನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲೇ ಬೇಕು.

ಒಂದು ಮಾತು ಹೇಳಲೇಬೇಕು. ಇಲ್ಲಿಯವರೆಗೂ ನಾನು ಯಾರನ್ನೂ ಚಂದಾದಾರರಾಗಿ ಎಂದು ಒತ್ತಾಯಿಸಿಲ್ಲ. ಮಿಗಿಲಾಗಿ ಕೇಳಿಯೂ ಇಲ್ಲ. ಸ್ವಇಚ್ಛೆಯಿಂದ ಬಂದು ಕೇಳಿದವರಿಗೆ ತಿಳಿಸಿದ್ದೇನೆ. ಆಸಕ್ತಿ ತೋರಿದವರನ್ನು ಚಂದಾದಾರರನ್ನಾಗಿ ಮಾಡಿಕೊಂಡಿದ್ದೇನೆ. ಒತ್ತಾಯಕ್ಕೆ ಚಂದಾದಾರರಾಗುವವರು ಎಂದೂ ಓದುವವರಲ್ಲ. ಅಂಥವರ ಅಗತ್ಯ ಕೂಡ ನಮಗಿಲ್ಲ.

ದರ್ಪಣಕ್ಕೆ ವಿಶಿಷ್ಟವಾಗಿ ನೆರವಾದ ವ್ಯಕ್ತಿಯೊಬ್ಬರ ಬಗ್ಗೆ ಇಲ್ಲಿ ಹೇಳಲೇಬೇಕು. ದರ್ಪಣದ ಆರಂಭದ ಸಂಚಿಕೆಯ ಬೆಲೆ ಕೇವಲ ಹತ್ತು ರೂ ಇತ್ತು. ಆ ಸಂದರ್ಭದಲ್ಲಿಯೂ 100/– ರೂ.ಗಳನ್ನು ನೀಡಿ, "ನೀನು, ಈ ಪತ್ರಿಕೆಯನ್ನು ಎಲ್ಲಿವರೆಗೆ ತರುತ್ತಿಯೋ ಅಲ್ಲಿವರೆಗೆ ಪ್ರತೀ ಹೊಸ ಸಂಚಿಕೆ ಕೊಟ್ಟಾಗಲೆಲ್ಲ ನಾನು 100 ರೂಪಾಯಿ ಕೊಡುತ್ತೇನೆ" ಎಂದು ಉತ್ತೇಜಿಸಿದವರು ದೇವರಕೊಂಡಾರೆಡ್ಡಿ ಅವರು. ಇಂದಿಗೂ ತಮ್ಮ ಮಾತಿಗೆ ಬದ್ಧರಾಗಿದ್ದಾರೆ. ಗೌರವ ಪ್ರತಿ ಸ್ವೀಕರಿಸಲು ಯಾವ ಕಾರಣಕ್ಕೂ ಸಿದ್ಧರಿರುವುದಿಲ್ಲ!

ಹತ್ತು ವರ್ಷಗಳಾದರೂ 'ಇತಿಹಾಸ ದರ್ಪಣ'ವು ಸಂಪೂರ್ಣ ಆರ್ಥಿಕ ಸ್ವಾವಲಂಬನೆ ಸಾಧಿಸಲಾಗಿಲ್ಲವೆಂಬ ನೋವಿದೆ. ಕುಟುಂಬದವರ ಕನಿಷ್ಠ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ಕೂಡ ಸಮಯ ಮತ್ತು ಇತರ ಕಾರಣಗಳಿಂದ ಸಾಧ್ಯವಾಗುತ್ತಿಲ್ಲ ಎಂಬ ಕೊರಗಿದೆ. ಅದೆಲ್ಲವನ್ನು ನನ್ನ ತಾಯಿ, ನನ್ನ ಸಂಗಾತಿ ಹಾಗೂ ಪುಟ್ಟ ಮಗು ಸಹಿಸಿಕೊಂಡಿದ್ದಾರೆ. ಅವರಿಗೆ ನಾನು ದುಬಾರಿಯಾದರೂ ಆಬಾರಿಯಾಗಿದ್ದೇನೆ.

'ಕೆಲವರಿಗೆ ಹಿಡಿದ ಚಟ ಹೋಗುವುದಿಲ್ಲ'. ನಮಗೂ ಒಂದು ಚಟವಿದೆ. ಅದು ದುಶ್ಚಟವೊ ಸಚ್ಚಟವೊ ಗೊತ್ತಿಲ್ಲ. ಇತಿಹಾಸದ ಬಗೆಗೆ ಏನಾದರೂ ಕೆಲಸ ಮಾಡಬೇಕೆಂಬ 'ಹಟ–ಚಟ' ನಮ್ಮದು. ಆದ್ದರಿಂದ 'ಇತಿಹಾಸ ದರ್ಪಣ'ದ ದಶಮಾನೋತ್ಸವದ ಸಂದರ್ಭದಲ್ಲಿ 'ಇತಿಹಾಸ ದರ್ಪಣ ಪ್ರಕಾಶನ'ವನ್ನು ಆರಂಭಿಸುವ ಮೂಲಕ ಮತ್ತೊಂದು ಹೊಣೆಗಾರಿಕೆಯನ್ನು ಮೇಲೇರಿಕೊಳ್ಳುತ್ತಿದ್ದೇವೆ. ಪ್ರಕಾಶನವನ್ನು ಶಿವಕುಮಾರಿ ಎಂ.ಎಸ್. ಅವರು ಮುನ್ನಡೆಸಲಿದ್ದಾರೆ. ಪ್ರಕಾಶನದ ವತಿಯಿಂದ ಗುಣಾತ್ಮಕ ಮತ್ತು ಉತ್ಕೃಷ್ಟವಾದ ಇತಿಹಾಸ ಹಾಗೂ ಪುರಾತತ್ವ ಸಂಶೋಧನಾ ಕೃತಿಗಳನ್ನು ಪ್ರಕಟಿಸುವ ಉದ್ದೇಶವಿದೆ. ಈ ಮುಖೇನ ಕನ್ನಡದ ಇತಿಹಾಸ ಮತ್ತು ಪುರಾತತ್ವ ಸಂಶೋಧನಾ ವಿದ್ವಾಂಸರು ಮತ್ತು ವಿದ್ಯಾರ್ಥಿಗಳನ್ನು ವ್ಯಾಪಕವಾಗಿ ಒಳಗೊಳ್ಳುವ ಹಾಗೂ ಬೆಸೆಯುವ ಉದ್ದೇಶವನ್ನೂ ಹೊಂದಿದ್ದೇವೆ. ಜೊತೆಗೆ ಯುವ, ಪ್ರತಿಭಾವಂತ ಸಂಶೋಧಕರ ಉತ್ತಮ ಕೃತಿಗಳನ್ನು ಪ್ರಕಟಿಸುವ ಮೂಲಕ ಪ್ರೋತ್ಸಾಹಿಸುವ ಮತ್ತು ಒಂದು ವೇದಿಕೆ ನಿರ್ಮಿಸಿಕೊಡುವ ಆಶಯವೂ ಇದೆ. ಅಲ್ಲದೆ, ತಜ್ಞರಿಂದ ಉತ್ತಮ ಇತಿಹಾಸ ಸಂಶೋಧನಾ ಕೃತಿಗಳನ್ನು ಬರೆಸಿ, ವಿದ್ಯಾರ್ಥಿಗಳು, ಆಸಕ್ತರು ಮತ್ತು ಜನಸಾಮಾನ್ಯರಲ್ಲಿ ಚರಿತ್ರೆಯ ಪ್ರಜ್ಞೆಯನ್ನು ಬೆಳೆಸುವ ಮತ್ತು ಪಸರಿಸುವ ಸದುದ್ದೇಶವೂ ಇದೆ. ನಮ್ಮೆಲ್ಲ ಒಳ್ಳೆಯ ಕಾರ್ಯಗಳ ಹಿಂದೆ ನಿಮ್ಮಂತಹ ಸಹೃದಯ ಓದುಗರ ಸಹಕಾರ ಇದ್ದೇ ಇರುತ್ತದೆ ಎಂದು ಭಾವಿಸಿದ್ದೇನೆ.

ಕೊನೆಯದಾಗಿ ಒಂದು ಮಾತು ಹೇಳಲೇ ಬೇಕು. ಕೇವಲ ಕರ್ನಾಟಕ ಮತ್ತು ಕನ್ನಡ ಜಗತ್ತಿಗೆ ಸೀಮಿತವಾಗಿದ್ದ 'ಇತಿಹಾಸ ದರ್ಪಣ'ವನ್ನು ತಮ್ಮ ಜ್ಞಾನ ಮತ್ತು ಪರಿಶ್ರಮದ ಮೂಲಕ ಲೋಕದ ಮೂಲೆ ಮೂಲೆಗೆ ತಲುಪಿಸುವಂತಹ ವೆಬ್‌ಸೈಟನ್ನು (www.itihasadarpana.com) ಸೀತಾಲಕ್ಷ್ಮಿ ರಾವ್ ಅವರು ರೂಪಿಸಿ ಕೊಟ್ಟಿದ್ದಾರೆ. ಅವರಿಗೆ ನಮ್ಮ ಬಳಗದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈಗ ನಿಯತಕಾಲಿಕೆ ಮತ್ತು ಪ್ರಕಾಶನಗಳೆರಡರ ವಿವರಗಳು ಇಲ್ಲಿ ಲಭ್ಯ.

ಹತ್ತನೇ ವರ್ಷದ ಶುಭ ಸಂದರ್ಭದಲ್ಲಿ ಇತಿಹಾಸ ದರ್ಪಣಕ್ಕೆ ನೂತನ ಸಲಹಾ ಮಂಡಳಿ ಮತ್ತು ಸಂಪಾದಕ ಸಮಿತಿಯನ್ನು ರಚಿಸಿಕೊಳ್ಳಲಾಗಿದೆ. ಇವುಗಳ ಸರ್ವ ಸದಸ್ಯರನ್ನು

ಇದೇ ಸಂದರ್ಭದಲ್ಲಿ ಅಭಿನಂದಿಸಲು ಇಚ್ಛಿಸುತ್ತೇನೆ. ಅದೇ ರೀತಿ ಆರಂಭದಿಂದಲೂ 'ಇತಿಹಾಸ ದರ್ಪಣ'ವನ್ನು ಮುದ್ರಿಸಿ ಕೊಡುತ್ತಿದ್ದ ಶ್ರೀರಂಗನಾಥ ಪ್ರಿಂಟರ್ಸ್‌ನ ರಾಜಣ್ಣ ಅವರಿಗೆ ಮತ್ತು ಪುಸ್ತಕ ವಿನ್ಯಾಸಗೊಳಿಸುತ್ತಿದ್ದ ಮಹೇಶ್ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅದೇ ರೀತಿ ಪ್ರಸ್ತುತ 'ಇತಿಹಾಸ ದರ್ಪಣ'ವನ್ನು ವಿನ್ಯಾಸಗೊಳಿಸಿ ಕೊಡುವ ಶ್ವೇತ ಬಿ.ಎಸ್. ಅವರನ್ನು ಮತ್ತು ಅಷ್ಟೇ ಅಚ್ಚುಕಟ್ಟಾಗಿ ಮುದ್ರಿಸಿ ಕೊಡುವ ಸ್ವಾನ್ ಪ್ರಿಂಟರ್ಸ್‌ನ ಮಾಲಿಕರಾದ ಕೃಷ್ಣಮೂರ್ತಿ ಮತ್ತು ಸಿಬ್ಬಂದಿ ಅವರುಗಳ ಶ್ರಮ ಮತ್ತು ಕೌಶಲ್ಯವನ್ನು ಪ್ರೀತಿಯಿಂದ ಸ್ಮರಿಸುತ್ತೇನೆ. 'ಇತಿಹಾಸ ದರ್ಪಣ'ಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನೆರವಾದ ಎಲ್ಲಾ ಸನ್ಮಿತ್ರರಿಗೂ ಹಾಗೂ ಹಿತೈಷಿಗಳಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

* * *

ಇತಿಹಾಸ ದರ್ಪಣದ ಸಮಸ್ತ ಓದುಗರಿಗೂ ದಶಮಾನೋತ್ಸವದ ಶುಭಾಶಯಗಳು.

ಪ್ರಸ್ತುತ ದಶಮಾನೋತ್ಸವದ ಸಂಭ್ರಮಕ್ಕೆ ಅಣಿಯಾಗುತ್ತಿರುವ ಇತಿಹಾಸ ದರ್ಪಣ ಬಳಗವು ಹತ್ತನೆಯ ವಸಂತವನ್ನು ಪೂರೈಸುವ ಸಂದರ್ಭದಲ್ಲಿ 40–41ನೆಯ ಪುಸ್ತಕವನ್ನು ಒಂದು ಅರ್ಥಪೂರ್ಣ ಆಕರ ಗ್ರಂಥವಾಗಿ ರೂಪಿಸಲು ನಿಶ್ಚಯಿಸಲಾಯಿತು. ಆದ್ದರಿಂದ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಸ್ಥಿರೀಕರಿಸಲ್ಪಟ್ಟಿರುವ ವಾದ, ಅಭಿಪ್ರಾಯ ಮತ್ತು ಮಂಡನೆಗಳನ್ನು ಹೊಸ ಶೋಧ / ವಿಭಿನ್ನ ಆಯಾಮ / ಸೈದ್ಧಾಂತಿಕ ನೆಲೆಯಲ್ಲಿ ಮರುವ್ಯಾಖ್ಯಾನಿಸುವಂತಹ ಯಾವುದೇ ವಿಷಯ ಮತ್ತು ಚಾರಿತ್ರಿಕ ನೆಲೆಯನ್ನು ಕುರಿತ ಸಂಶೋಧನಾ ಪ್ರಬಂಧಗಳನ್ನು ನಾಡಿನ ಮತ್ತು ಹೊರನಾಡಿನ ಕೆಲವು ಆಯ್ದ ಇತಿಹಾಸಕಾರರಿಂದ ಆಹ್ವಾನಿಸಲಾಯಿತು.

ಈ ಸಂದರ್ಭದಲ್ಲಿ ಇತಿಹಾಸ ದರ್ಪಣದ ಚಂದಾದಾರರಿಂದಲೂ ಪ್ರಬಂಧಗಳನ್ನು ಆಹ್ವಾನಿಸಲು ಬಳಗ ನಿರ್ಧರಿಸಿತು. ಹೀಗೆ ಬಂದ ಪ್ರಬಂಧಗಳಲ್ಲಿ ಗುಣಾತ್ಮಕ ಸಂಶೋಧನಾ ಪ್ರಬಂಧಗಳನ್ನು ಆಯ್ದು **ಕರ್ನಾಟಕ ಇತಿಹಾಸದ ಹೊಸ ಆಯಾಮಗಳು** ಎಂಬ ವಿಶೇಷ ಸಂಚಿಕೆಯನ್ನು ರೂಪಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಈ ವಿಶೇಷ ಸಂಚಿಕೆಯಲ್ಲಿ ಒಟ್ಟು 13 ಲೇಖನಗಳಿವೆ. ಪ್ರತಿಯೊಂದು ಲೇಖನವೂ ಕೂಡ ಕರ್ನಾಟಕ ಇತಿಹಾಸ ಮತ್ತು ಪುರಾತತ್ವ ಕ್ಷೇತ್ರದಲ್ಲಿ ಅತ್ಯಂತ ಮುಖ್ಯವಾದ ವಿಚಾರಗಳನ್ನು ಮುನ್ನೆಲೆಗೆ ತರುವ ಮತ್ತು ಅಧ್ಯಯನ ಕ್ಷೇತ್ರವನ್ನು ವಿಸ್ತರಿಸುವ ಕೆಲಸ ಮಾಡಿವೆ. ಷ. ಶೆಟ್ಟರ್, ಬಿ. ಸುರೇಂದ್ರರಾವ್, ರಾಜಾರಾಮ ಹೆಗಡೆ, ರಹಮತ್ ತರೀಕೆರೆ, ಎಸ್.ಕೆ. ಅರುಣಿ, ಮನು ವಿ. ದೇವದೇವನ್, ಟಿ. ಮುರುಗೇಶಿ ಅವರಂತಹ ರಾಷ್ಟ್ರಮಟ್ಟದ ಇತಿಹಾಸಕಾರರು ಮತ್ತು ಪುರಾತತ್ವತಜ್ಞರು ಈ ವಿಶೇಷ ಸಂಚಿಕೆಗೆ ತಮ್ಮ ಉತ್ಕೃಷ್ಟ ಪ್ರಬಂಧಗಳ ಮೂಲಕ ಅಮೂಲ್ಯ ಕಾಣಿಕೆಯನ್ನು ನೀಡಿದ್ದಾರೆ. ಅಲ್ಲದೆ, ಡಿ.ಎನ್. ಯೋಗೀಶ್ವರಪ್ಪ, ಜಗದೀಶ, ಎ.ಬಿ. ವಗ್ಗರ, ಮೋಹನ್ ಆರ್., ಗಂಗಾಂಬಿಕೆ ಎಸ್., ಪ್ರವೀಣ್ ಕುಮಾರ್ ಅವರಂತಹ ನಾಡಿನ ಹಿರಿಯ – ಕಿರಿಯ ಇತಿಹಾಸ ಮತ್ತು ಪುರಾತತ್ವ ಸಂಶೋಧಕರು ವಿಶಿಷ್ಟವಾದ ಮತ್ತು ಅಪರೂಪದ ವಿಚಾರಗಳನ್ನು ಪ್ರಬಂಧಗಳ ಮೂಲಕ ಹೊರತಂದು ಈ ಸಂಚಿಕೆಯನ್ನು ಶ್ರೀಮಂತಗೊಳಿಸಿದ್ದಾರೆ. ಇಲ್ಲಿ ನಾಲ್ಕಾರು ಪುಟಗಳ ಪ್ರಬಂಧಗಳಿಂದ ಹಿಡಿದು 30–50 ಪುಟಗಳಷ್ಟು ಸುದೀರ್ಘವಾದ ಪ್ರಬಂಧಗಳೂ ಇವೆ. ಎಲ್ಲವೂ ಭಿನ್ನ ಭಿನ್ನವಾದ ವಿಚಾರಗಳ ಮೇಲೆ ಬೆಳಕು ಚೆಲ್ಲುವಂತಿವೆ.

ಇಲ್ಲಿನ ಪ್ರಬಂಧಗಳನ್ನು ಐದು ವಿಭಾಗಗಳಲ್ಲಿ ವರ್ಗೀಕರಿಸಿಕೊಂಡಿದ್ದೇನೆ.

ಮೊದಲ ಭಾಗ "ಸಾಧನ-ವಿಧಾನ". ಈ ಭಾಗದಲ್ಲಿ ಮೌಖಿಕ ಸಾಹಿತ್ಯ ಕೂಡ ಚರಿತ್ರೆಯ ಬಹುಮುಖ್ಯ ಆಕರ ಎಂಬುದನ್ನು ಹಾಗೂ ದುಡಿಸಿಕೊಂಡು ಚರಿತ್ರೆ ಕಟ್ಟಬಹುದಾದ ಸಾಧ್ಯತೆಯನ್ನು "ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಗ್ರಹಿಸುವುದು ಹೇಗೆ?" ಎಂಬ ಪ್ರಬಂಧದಲ್ಲಿ ಸುರೇಂದ್ರರಾವ್ ಅವರು ತೋರಿಸಿಕೊಟ್ಟಿದ್ದಾರೆ. ಹಿರಿಯ ವಿದ್ವಾಂಸರಾದ ಷ. ಶೆಟ್ಟರ್ ಅವರು ತಮ್ಮ "ಕನ್ನಡ ಶಾಸನಾಧ್ಯಯನದ ಪ್ರಧಾನ ಹೆಜ್ಜೆಯ ಗುರುತುಗಳು" ಎಂಬ ಪ್ರಬಂಧದಲ್ಲಿ ಕರ್ನಾಟಕದ ಶಾಸನಗಳ ಅಧ್ಯಯನ ನಡೆದು ಬಂದ ದಾರಿಯನ್ನು ಸಂಕ್ಷಿಪ್ತವಾಗಿ ತೆರೆದಿಟ್ಟಿದ್ದಾರೆ. ಇಲ್ಲಿ ಅವರು ಕೂಟಶಾಸನಗಳನ್ನು ಕುರಿತು ಮಂಡಿಸುವ ವಾದ ಮುಖ್ಯವಾದುದಾಗಿದೆ. ಇದು ಶೆಟ್ಟರ್ ಅವರು ಏಳು ಸಂಪುಟಗಳಲ್ಲಿ ಹೊರತರುತ್ತಿರುವ ಮೊದಲ ಸಹಸ್ರಮಾನದ ಕನ್ನಡ ಶಾಸನಗಳ ಸಂಪುಟಕ್ಕೆ ಬರೆದ ಮುನ್ನುಡಿಯಾಗಿದೆ. ರಹಮತ್ ತರೀಕೆರೆ ಅವರು "ದಾರ್ಶನಿಕ ಪಂಥಗಳ ಅಧ್ಯಯನ: ಯಾಕೆ, ಹೇಗೆ?" ಎಂಬ ತಮ್ಮ ಪ್ರಬಂಧದಲ್ಲಿ ಚರಿತ್ರಾಕಾರರು ದಾರ್ಶನಿಕ ಪಂಥಗಳನ್ನು ಗ್ರಹಿಸುವಲ್ಲಿ ಎಲ್ಲಿ ಎಡವಿದ್ದಾರೆ ಎಂಬುದನ್ನು ಬಹಳ ಸೂಕ್ಷ್ಮವಾಗಿ ತೋರಿಸಿಕೊಟ್ಟಿದ್ದಾರೆ. ಅಷ್ಟು ಮಾತ್ರವಲ್ಲ ಮಿತಿಗಳನ್ನು ದಾಟುವ ಸಾಧ್ಯತೆಗಳ ಬಗೆಗೂ ಬೆಳಕು ಚೆಲ್ಲಿದ್ದಾರೆ. ಒಟ್ಟಾರೆ, ಈ ಭಾಗದ ಪ್ರಬಂಧಗಳು ಸಾಧನಗಳನ್ನು ಬಳಸಿಕೊಂಡು ನಡೆಸಿರುವ ಮತ್ತು ನಡೆಸಬಹುದಾದ ಸಂಶೋಧನಾ ವಿಧಾನ ಮತ್ತು ಸಾಧ್ಯತೆಗಳ ಮೇಲೆ ಬೆಳಕು ಚೆಲ್ಲುತ್ತದೆ.

ಎರಡನೆಯ ಭಾಗ "ಸಾಹಿತ್ಯ-ಇತಿಹಾಸ". ಇಲ್ಲಿನ ಎರಡೂ ಲೇಖನಗಳು ವಚನ ಸಾಹಿತ್ಯವನ್ನು ಕೇಂದ್ರೀಕರಿಸಿವೆ. ಇವುಗಳಲ್ಲಿ ರಾಜಾರಾಮ ಹೆಗಡೆ ಅವರ "ಭಕ್ತಿ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ..." ಪ್ರಬಂಧವು ಈಗಾಗಲೇ ನಡೆದಿರುವ ವಚನಗಳ ಮೇಲಿನ ಚರ್ಚೆಯ ಮುಂದುವರಿದ ಭಾಗವಾದರೂ ವಿದ್ವತ್ಪೂರ್ಣವಾಗಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಮತ್ತೊಂದು ಪ್ರಬಂಧ "ಶಿವಶರಣರ ವಚನಗಳ ಮೂಲರೂಪ" ಮನು ವಿ. ದೇವದೇವನ್ ಅವರದು. ಸಾಮಾನ್ಯವಾಗಿ ವಚನಗಳು ಛಂದೋಮುಕ್ತವಾಗಿದ್ದವು ಎಂಬ ಅಭಿಪ್ರಾಯವಿದೆ. ಮನು ಅವರು ತಮ್ಮ ಪ್ರಬಂಧದ ಮೂಲಕ ವಚನಗಳು ಛಂದಸ್ಸನ್ನು ತೊರೆದಿರಲಿಲ್ಲ ಎಂಬುದನ್ನು ತೋರಿಸಿಕೊಡಲು ಪ್ರಯತ್ನಿಸಿದ್ದಾರೆ.

ಮೂರನೆಯ ಭಾಗ "ಪ್ರಾಕ್ತನ-ಪ್ರಸ್ಥಾನ". ಈ ಭಾಗದಲ್ಲಿನ ಪ್ರಬಂಧಗಳು ಪುರಾತತ್ವಶಾಸ್ತ್ರಕ್ಕೆ ಸಂಬಂಧಿಸಿವೆ. ಟಿ. ಮುರುಗೇಶಿ ಅವರು ಕರಾವಳಿ ಭಾಗದ ಅವಲಕ್ಕಿಪಾರೆ ಎಂಬಲ್ಲಿ ಬಯಲು ಬಂಡೆಯ ಮೇಲೆ ಇತ್ತೀಚೆಗೆ ಶೋಧಿಸಿದ ಕುಟ್ಟುಚಿತ್ರಗಳು ಅಧ್ಯಯನದ ದೃಷ್ಟಿಯಿಂದ ಬಹುಮುಖ್ಯವಾಗಿವೆ. ಕರಾವಳಿ ಭಾಗದ ತೀರ ಪ್ರಾಚೀನ ಬಂಡೆಚಿತ್ರಕಲೆ ಇದಾಗಿದ್ದು, ಅವರ ವಿಶಿಷ್ಟ ಅಧ್ಯಯನದಿಂದಾಗಿ ಗಮನ ಸೆಳೆಯುತ್ತದೆ. ಮೋಹನ್ ಆರ್. ಅವರು ಕರ್ನಾಟಕದ ಬಂಡೆ ಚಿತ್ರಗಳ ಬಗೆಗೆ ಅಧ್ಯಯನ ನಡೆಸಿರುವ ಯುವ ಸಂಶೋಧಕರು. ಇವರು ಪ್ರಾಗೈತಿಹಾಸಿಕ ಬಂಡೆಚಿತ್ರಕಲೆಗೆ 'ಬಾದಾಮಿ ಶೈಲಿಯ ಮಾನವ ವರ್ಣಚಿತ್ರ' ಎಂಬ ವಿಶಿಷ್ಟ ಪ್ರಕಾರವೊಂದನ್ನು ಪರಿಚಯಿಸಿದ್ದಾರೆ. ಅದರ ಬಗೆಗೆ "ಪ್ರಾಗಿತಿಹಾಸ ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳು" ಎಂಬ ಪ್ರಬಂಧದಲ್ಲಿ ಬೆಳಕು ಚೆಲ್ಲಿದ್ದಾರೆ. ಪ್ರವೀಣ್ ಕುಮಾರ್ ಕೆ. ಅವರು ಬೃಹತ್ ಶಿಲಾಯುಗದ ಸಮಾಧಿಗಳ ಬಗೆಗೆ ಅಧ್ಯಯನ ನಡೆಸುತ್ತಿರುವ ಭರವಸೆಯ ಯುವ ಸಂಶೋಧಕರು. ಅವರು "ದಕ್ಷಿಣ ಕರ್ನಾಟಕದ ಕಬ್ಬಿಣಯುಗ ಸಂಸ್ಕೃತಿ" ಎಂಬ ಪ್ರಬಂಧದಲ್ಲಿ ಬೃಹತ್ ಶಿಲಾಯುಗದ ಜನರ ಸಾಮಾಜಿಕ ಮತ್ತು ಆರ್ಥಿಕ ಬದುಕಿನ ಬಗೆಗೆ ಕೆಲವು ಪ್ರಮುಖ ಅಂಶಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಮತ್ತೊಂದು ಎಸ್.ಕೆ. ಅರುಣಿ ಅವರ ಸುದೀರ್ಘವಾದ ಪ್ರಬಂಧ "ಕಲಬುರ್ಗಿ: ಬಹಮನಿ ಸುಲ್ತಾನರ ರಾಜಧಾನಿಯ ರಚನೆ ಹಾಗೂ ವಿಶ್ಲೇಷಣೆ". ಇದು ಬಹಮನಿಯರ ಕಾಲ ಕಲಬುರ್ಗಿ ನಗರ ಮತ್ತು ಕೋಟೆಗೆ ಸೀಮಿತವಾಗಿದೆ. ಕಲಬುರ್ಗಿಯ ನೆಲೆ ಯಾಕೆ ಮುಖ್ಯವಾಗಿದೆ ಎಂಬ ಸಂಗತಿಯಿಂದ

ಆರಂಭಿಸಿ, ಅಂದಿನ ಕೋಟೆಯ ವೈಶಿಷ್ಟ್ಯಗಳನ್ನು ಮತ್ತು ನಗರದ ಪರಿಕಲ್ಪನೆಯನ್ನು ಗುರುತಿಸಿದ್ದಾರೆ. ಇಲ್ಲಿ ಅನೇಕ ವಿನೂತನ ವಿಚಾರಗಳನ್ನು ಮೊಟ್ಟಮೊದಲ ಬಾರಿಗೆ ಬೆಳಕಿಗೆ ತಂದಿರುವ ಕಾರಣದಿಂದ ಅರುಣಿ ಅವರ ಪ್ರಬಂಧ ಬಹುಮುಖ್ಯವಾಗಿದೆ.

ನಾಲ್ಕನೆಯ ಭಾಗ: "ಶೋಧ-ಪರಿಶೋಧ". ಈ ಭಾಗದಲ್ಲಿ ಜಗದೀಶ ಅವರು "ಕದಂಬ ಮೃಗೇಶವರ್ಮನ ಆಳ್ವಿಕೆಯ ಮೊದಲ ವರ್ಷ ಕ್ರಿ.ಶ 465 - ಖಚಿತ ಹೆಜ್ಜೆ" ಎಂಬ ಪುಟ್ಟ ಪ್ರಬಂಧದಲ್ಲಿ ಕದಂಬರ ಮೃಗೇಶವರ್ಮನ ಕಾಲವನ್ನು ನಿಖರವಾಗಿ ಗುರುತಿಸಲು ಪ್ರಯತ್ನ ನಡೆಸಿದ್ದಾರೆ. ಗಂಗಾಂಬಿಕೆ ಎಸ್. ಅವರು "ಹೊಯ್ಸಳರ ಪ್ರಮುಖ ದಂಡನಾಯಕ ಗಂಗರಾಜ ಮತ್ತು ಅವನ ವಂಶೀಯರು" ಎಂಬ ದೀರ್ಘವಾದ ಪ್ರಬಂಧದಲ್ಲಿ ಹೊಯ್ಸಳರ ಕಾಲದಲ್ಲಿದ್ದ ಗಂಗರಾಜ ಎಂಬ ದಂಡನಾಯಕ ಮತ್ತು ಅವನ ವಂಶಸ್ಥರನ್ನು ಮೊಟ್ಟಮೊದಲ ಬಾರಿಗೆ ಬೆಳಕಿಗೆ ತರುವ ಪ್ರಯತ್ನ ನಡೆಸಿದ್ದಾರೆ. ಈ ಗಂಗರಾಜನು ತಲಕಾಡನ್ನು ಆಳಿದ ಗಂಗ ಮನೆತನಕ್ಕೆ ಸೇರಿದವನೆಂಬುದನ್ನು ತೋರಿಸಿಕೊಟ್ಟಿರುವುದು ಮುಖ್ಯವಾದ ಸಂಶೋಧನೆಯಾಗಿದೆ.

ಐದನೆಯ ಹಾಗೂ ಕೊನೆಯ ಭಾಗ: "ಆಕರ-ಪತ್ರಾಗಾರ". ಪತ್ರಾಗಾರಗಳಲ್ಲಿ ಅಡಗಿರುವ ಅಮೂಲ್ಯ ದಾಖಲೆಗಳು ನಾವು ನಂಬಿರುವ ಚರಿತ್ರೆಯ ಬುಡವನ್ನು ಅಲ್ಲಾಡಿಸಿ, ಹೊಸ ಚರಿತ್ರೆಯನ್ನೇ ಕಟ್ಟಬಲ್ಲವು. ಆದ್ದರಿಂದ ಪತ್ರಾಗಾರದಲ್ಲಿನ ಆಕರಗಳನ್ನು ಗಂಭೀರವಾಗಿ ಮತ್ತು ಸಮಗ್ರವಾಗಿ ನಡೆಸಬೇಕಿದೆ. ಈ ನಿಟ್ಟಿನಲ್ಲಿ ಡಿ.ಎನ್. ಯೋಗೀಶ್ವರಪ್ಪ ಅವರು ಇಂಗ್ಲೆಂಡಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ಕರ್ನಲ್ ಮೆಕಂಜಿಯ ದಾಖಲೆಯೊಂದನ್ನು ಶೋಧಿಸಿ, ಗಿಡಗನಹಳ್ಳಿಯ ಗೌಡಮನೆತನದ ಚರಿತ್ರೆಯನ್ನು ಮೊದಲ ಬಾರಿಗೆ ರಚಿಸುವ ಪ್ರಯತ್ನ ನಡೆಸಿದ್ದಾರೆ. ಇದು ಸ್ಥಳೀಯ ಚರಿತ್ರೆಯ ದೃಷ್ಟಿಯಿಂದ ಮುಖ್ಯವಾದ ಅಧ್ಯಯನವಾಗಿದೆ. ಒಂದು ಚಿಕ್ಕ ಮನೆತನ ಅಂದಿನ ರಾಜಕೀಯ ಸನ್ನಿವೇಶದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸಿ ಸು. 200 ವರ್ಷಗಳ ಕಾಲ ಹೇಗೆ ಅಧಿಕಾರ ನಡೆಸಿತು ಎಂಬುದನ್ನು ದಾಖಲಿಸಿದ್ದಾರೆ. ಎ.ಬಿ. ವಗ್ಗರ ಅವರು ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಬಹಳ ಮುಖ್ಯವಾದ ವಸಾಹತುಕಾಲೀನ ದಾಖಲೆಯೊಂದನ್ನು ಪತ್ತೆ ಮಾಡಿದ್ದಾರೆ. ಇದು ಕಿತ್ತೂರು ಬಂಡಾಯಕ್ಕೆ ಮುನ್ನ ನಡೆದ ವಿದ್ಯಮಾನಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ದಾಖಲೆಗಳನ್ನು ಆಧರಿಸಿ "ಕಿತ್ತೂರ ಸಂಸ್ಥಾನದ ದತ್ತು ಸಮಸ್ಯೆಗೆ ಸಂಬಂಧಿಸಿದ ಬ್ರಿಟಿಷ ಪತ್ರಗಳು" ಎಂಬ ಪ್ರಬಂಧ ರಚಿಸಿದ್ದಾರೆ. ವಸಾಹತುಕಾಲದ ದಾಖಲೆಯಲ್ಲಿನ ಸಂಗತಿಗಳನ್ನು ಯಥಾವತ್ತಾಗಿ ನಿರೂಪಿಸುವ ಮೂಲಕ ಇತಿಹಾಸ ಅಧ್ಯಯನಕಾರರಿಗೆ ವ್ಯಾಖ್ಯಾನಿಸಿಕೊಳ್ಳಲು ತೆರೆದಿಟ್ಟಿದ್ದಾರೆ. ಅವರು ಶೋಧಿಸಿರುವ ದಾಖಲೆ ಕಿತ್ತೂರಿನ ಅಧ್ಯಯನದ ದೃಷ್ಟಿಯಿಂದ ಮಹತ್ವದ್ದಾಗಿವೆ.

ಹೀಗೆ **'ಕರ್ನಾಟಕ ಇತಿಹಾಸದ ಹೊಸ ಆಯಾಮಗಳು'** ಎಂಬ ಈ ಸಂಚಿಕೆಯ ಪ್ರತಿಯೊಂದು ಲೇಖನವೂ ಕರ್ನಾಟಕ ಚರಿತ್ರೆಯ ಬೇರೆ ಬೇರೆ ನೆಲೆಗಳನ್ನು ಸ್ಪರ್ಶಿಸುತ್ತವೆ. ಇದು ಕರ್ನಾಟಕದ ಚರಿತ್ರೆಯ ಬಗೆಗೆ ಕುತೂಹಲವುಳ್ಳವರ ಜ್ಞಾನದಾಹವನ್ನು ಸ್ವಲ್ಪಮಟ್ಟಿಗಾದರೂ ತಣಿಸಿ, ಉನ್ನತ ಅಧ್ಯಯನಕ್ಕೆ ಪ್ರೇರೇಪಿಸಿದರೆ ಈ ವಿಶೇಷ ಸಂಚಿಕೆಯ ಪ್ರಯತ್ನ ಸಾರ್ಥಕವಾದಂತೆ.

ಹಂ.ಗು. ರಾಜೇಶ್
ಸಂಪಾದಕರು

ಓದುಗರ ಸಲಹೆ-ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.
ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. -ಸಂ.

ITIHASA DARPANA (Quarterly)
A Peer Reviewed Journal of Historical Research in Kannada
ISSN: 2321-3590
Book No.: 40-41
January – June: 2019
Author: B. Surendra Rao
Title: namma sāmskṛtika itihāsavannu grahisuvudu hēge?

ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಗ್ರಹಿಸುವುದು ಹೇಗೆ?

ಬಿ. ಸುರೇಂದ್ರ ರಾವ್
ಪ್ರಾಧ್ಯಾಪಕರು
'ಅಮೃತವರ್ಷಿಣಿ'
ಅಸೈಗೋಳಿ, ಕೋಣಾಜೆ
ಮಂಗಳಗಂಗೋತ್ರಿ
ಮಂಗಳೂರು
ದಕ್ಷಿಣಕನ್ನಡ-574 199
b.surendrarao@yahoo.com

ಇತಿಹಾಸ ಹೇಗಿರಬೇಕು, ಅದರಲ್ಲಿ ಏನಿರಬೇಕು ಎಂಬ ಪ್ರಶ್ನೆಯನ್ನೋ, ಜಿಜ್ಞಾಸೆಯನ್ನೋ ಇತಿಹಾಸ ರಚನೆಯಲ್ಲಿ ನೀವು ನಾವು ಸಾಕಷ್ಟು ಎದುರಿಸಿದ್ದೇವೆ. ಇದ್ದದ್ದು ಸರಿಯಿಲ್ಲ ಎಂಬುದರ ಬಗ್ಗೆ ನಮ್ಮಲ್ಲಿ ಒಂದು ರೀತಿಯ ಒಮ್ಮತ ಹುಟ್ಟಿದರೂ ಅದರಲ್ಲಿ ಯಾವುದು ಸರಿ, ಅದು ಹೇಗಿರಬೇಕು ಎಂಬುದನ್ನು ಸೂಚಿಸುವ ಗೊಡವೆಗೆ ನಾವು ಹೆಚ್ಚಾಗಿ ಹೋಗಿಲ್ಲ. ಹಾಗೆಂದು ಇದ್ದದ್ದಕ್ಕೆ ಪರ್ಯಾಯವಾಗಿ ಒಂದು ವಿಧಿಯನ್ನು ಸೃಷ್ಟಿಸುವುದು, ಅದಕ್ಕೊಂದು ನಿರ್ದಿಷ್ಟ ಪರಿಧಿಯನ್ನು ಕಲ್ಪಿಸುವುದು, ಹಾಗೂ ಅವುಗಳನ್ನು ಯಾವಾಗಲೂ ಸತ್ಯ ಎಂದು ಒಪ್ಪಿಕೊಳ್ಳುವುದು ಅಗತ್ಯ ಎಂಬ ವಾದವೂ, ನಂಬಿಕೆಯೂ ನನ್ನದಲ್ಲ. ಬದಲಾಗುವ ಸಮಾಜದಲ್ಲಿ ಆಲೋಚನಾ ಕ್ರಮಗಳು ಬದಲಾಗದೇ ಉಳಿಯಲು ಸಾಧ್ಯವಿಲ್ಲ. ಆದುದರಿಂದ ಈ ಬಗೆಯ ಪ್ರಶ್ನೆಗಳು ಯಾವಾಗಲೂ ಹುಟ್ಟಿಕೊಳ್ಳುತ್ತವೆ, ನಮ್ಮನ್ನು ತಿವಿಯುತ್ತಲಿರುತ್ತವೆ. ಅವುಗಳನ್ನು ಎದುರಿಸುವುದು ನಮ್ಮ ಕರ್ತವ್ಯವಾಗುತ್ತದೆ. ಸದ್ಯಕ್ಕೆ ಇತಿಹಾಸವು ಕೇವಲ ರಾಜಕೀಯ ಇತಿಹಾಸ ಅಲ್ಲ ಎಂಬುದನ್ನು ನಾವೆಲ್ಲಾ ಒಪ್ಪಿಕೊಂಡಂತಿದೆ. ರಾಜರು ಮತ್ತು ಅವರ ರಾಜಕೀಯವನ್ನು ಮೀರಿ ಇತಿಹಾಸದ ಕಥನ ಸಾಧ್ಯ. ಅದರ ಅಗತ್ಯ ಇದೆ ಎಂಬುದನ್ನೂ ಇತಿಹಾಸಕಾರರು

ಒಪ್ಪಿದಂತಿದೆ. ಆದರೆ ಗ್ರಾಹಕ ನೆಲೆಯಲ್ಲಿ ಇತಿಹಾಸ ಕಥನವು ರಾಜಕೀಯದ ಅಧ್ಯಕ್ಷೀಯ ಚೌಕಟ್ಟನ್ನು ಪೂರ್ತಿ ಬಿಟ್ಟಿಲ್ಲ. ಅದರೊಳಗೆ ರಾಜರು, ಅವರ ಆಳ್ವಿಕೆಯ ಕಥನ, ಅದನ್ನು ಕಾಲಗಣಿತಿಗೆ ಪೋಣಿಸಿ ಹೇಳುವ ವಾಡಿಕೆ ಉಳಿದುಕೊಂಡಿದೆ. ಮೌರ್ಯ, ಗುಪ್ತ, ಕುಶಾನ, ಚಾಲುಕ್ಯ, ರಾಷ್ಟ್ರಕೂಟ, ಚೋಳರ ಕಾಲ ಎಂದು ಹೇಳಿದಾಗ ನಮ್ಮ ಕಥನದ ಚೌಕಟ್ಟು ಸ್ಥಿರವಾದಂತೆ ಭಾಸವಾಗುತ್ತದೆ. ಅದನ್ನು ಬಿಟ್ಟರೆ ನಾವು ಬತ್ತಲೆಯಾದ ಭಾವನೆ ಬರುತ್ತದೆ. ಆದರೆ ನಮ್ಮ ಕಥೆ ಕೇವಲ ರಾಜರ ಕಥೆಯಾಗದೆ ದೇಶದ ಇತಿಹಾಸವಾಗಬೇಕೆಂಬ ಕಾರಣ ನಾವು ಇದ್ದ ರಾಜರ ಹಾಗೂ ಅವರ ಕುಲದ ಕಥನಕ್ಕೆ ಹೆಚ್ಚಿನ ವಿವರಗಳನ್ನು ನೀಡುತ್ತೇವೆ. ಆ ಕಾಲದಲ್ಲಿ ಬೆಳೆದ ಆರ್ಥಿಕತೆ, ಧಾರ್ಮಿಕತೆ, ಸಮಾಜ, ಸಾಂಸ್ಕೃತಿಕ ಬದುಕು, ಇತ್ಯಾದಿಗಳನ್ನು ಸೇರಿಸಿ ಅವುಗಳೆಲ್ಲವೂ ರಾಜಕೀಯ ಪ್ರಣೀತ ಎಂಬ ನೆಲೆಯಲ್ಲಿ ವಿವರಿಸುತ್ತೇವೆ. ಈ ಕೊಂಡಿ ಸರಿಯೇ, ಇವೆಲ್ಲಾ ರಾಜರಿಂದಲೇ ಆದದ್ದೇ ಎಂಬ ಪ್ರಶ್ನೆಯನ್ನು ಎತ್ತದೆ, ಹೌದು ಎಂಬ ಉತ್ತರವಿತ್ತಂತೆ ವಿವರಿಸುತ್ತೇವೆ. ನಾವು ಶಾಲಾಕಾಲೇಜುಗಳಿಗೆ ರಚಿಸುವ ಪಠ್ಯಕ್ರಮ, ಅವುಗಳನ್ನು ವಿಧಿವತ್ತಾಗಿ ಕ್ಲಾಸಿನಲ್ಲಿ ಪಾಠಹೇಳುವ ಕ್ರಮ, ಪರೀಕ್ಷೆಗಳನ್ನು ನಡೆಸುವ ಕ್ರಮ ಇತ್ಯಾದಿ ಕಾಯಕಗಳು ಇವೆಲ್ಲಾ ಸರಿ ಎಂಬ ಅಂಗೀಕಾರದ ಮೊಹರನ್ನು ನೀಡಿವೆ. ನಾವು ರೂಢಿಸಿಕೊಂಡಿರುವುದು ಸರಿ ಎಂಬುದನ್ನು ಒಪ್ಪಿ ನಡೆಯುವ ಮಂದಿ ಹೆಚ್ಚು. ನಡೆದ ದಾರಿಯಲ್ಲಿ ನಡೆಯುವುದು ಸುಲಭ. ಅದರಲ್ಲಿ ಅಪಾಯ ಕಡಿಮೆ ಎನ್ನುವುದು ಸಾಮಾನ್ಯ ನಂಬಿಕೆ.

ನಮ್ಮ ಇತಿಹಾಸದ ವಸ್ತು ಯಾವುದು ಎಂಬ ನಿಲುವು ವರ್ತಮಾನದ ಕೆಲವು ಅಭಿರುಚಿ ಹಾಗೂ ಅಗತ್ಯಗಳ ಮೇಲೆ ನಿಂತಿದೆ ಎನ್ನಲಾಗಿದೆ. ಹಾಗೆಂದು ಈಗ ರಾಜರಿಲ್ಲ, ಪ್ರಜಾಪ್ರಭುತ್ವದಲ್ಲಿ ಅವರಿಗೆ ಸ್ಥಾನವಿಲ್ಲ. ಇದ್ದ ಕೆಲವು ಹಳಬರನ್ನೂ ಹೊರಗಟ್ಟಲಾಗಿದೆ. ಆದುದರಿಂದ ಅವರನ್ನು ಇತಿಹಾಸ ಪುಟಗಳಿಂದಲೂ ಹೊರದಬ್ಬಬೇಕು ಎಂಬ ವಾದ ಅತಿರೇಕದ್ದು. ಅವರೀಗ ಇಲ್ಲ. ಆದರೆ ಹಿಂದೆ ಇದ್ದದ್ದು, ಆಳಿದ್ದು ನಿಜವಷ್ಟೆ. ಅದನ್ನು ಅಳಿಸಿದ ಮಾತ್ರಕ್ಕೆ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದಂತಾಗುವುದಿಲ್ಲ. ಈಗಿಲ್ಲದವರು ಇತಿಹಾಸಪುಟಗಳಲ್ಲಿದ್ದರೆ ಆತಂಕವೇನು? ಇರಬಾರದು ಎಂಬುದು ಸರ್ವಾಧಿಕಾರತ್ವದ, ಅಥವಾ ವಿಕೃತ ರಾಷ್ಟ್ರೀಯತೆಯ ಲಕ್ಷಣ. ಇದು ಬೇರೆಬೇರೆ ದೇಶಗಳಲ್ಲಿ ವಿವಿಧ ರೀತಿಯಲ್ಲಿ ಪ್ರಕಟಗೊಂಡಿದೆ. ಫ್ರಾನ್ಸಿನ ಮಹಾವಿಪ್ಲವದ ಸಂದರ್ಭದಲ್ಲಿ ಹಳೆಯ ಇತಿಹಾಸ ಹಾಗೂ ಅದರ ಜ್ಞಾಪಕತೆಯನ್ನು ತೊಡೆದುಹಾಕುವ, ಹೊಸ ಕ್ಯಾಲೆಂಡರನ್ನೇ ಸೃಷ್ಟಿಸುವ ಒಂದು ಪ್ರಯತ್ನ ನಡೆಯಿತು. ರಶ್ಯಾದ ಕ್ರಾಂತಿಯ ನಂತರ ಆ ದೇಶದ ಇತಿಹಾಸವು ಬಹುತೇಕ 1917ರ ನಂತರದ್ದೇ ಎಂದು ಬರೆಯುವ, ಬರೆಸುವ ಪ್ರಯತ್ನ ನಡೆಯಿತು. ಲೆನಿನ್‌ನ ಪಾರ್ಥಿವ ಶರೀರವನ್ನು ದಫನ ಮಾಡದೆ ಅದನ್ನು ಮಮ್ಮೀಕರಿಸಿ ಗ್ಲಾಸಿನ ಪೆಟ್ಟಿಗೆಯಲ್ಲಿ ಕಾಪಿರಿಸಿಕೊಂಡದ್ದು, ಆರಾಧಿಸಿಕೊಂಡು ಬಂದದ್ದು ಸಾಂಕೇತಿಕ. ಪಾಕಿಸ್ಥಾನದ ಇತಿಹಾಸವನ್ನು ಬರೆಯುವಾಗ ಅದು ಆರಂಭವಾದದ್ದು ಬಹುತೇಕ ಇಸ್ಲಾಮಿನ ಆಗಮನದ ನಂತರ ಎಂಬ ಹೊಸ ಸತ್ಯವನ್ನು ಸೃಷ್ಟಿಸಿ ಬರೆಯಲಾಗಿದೆ. ನಮ್ಮಲ್ಲಿ ಅಷ್ಟು ದೊಡ್ಡ ಪ್ರಮಾಣದಲ್ಲಿ ಈ ಕೆಲಸ ನಡೆಯದಿದ್ದರೂ, ನಡೆಯುತ್ತಿಲ್ಲ ಎನ್ನುವ ಹಾಗಿಲ್ಲ. ಮುಸ್ಲಿಮರ ಆಳ್ವಿಕೆಯ ಬಗ್ಗೆ ನಮ್ಮಲ್ಲಿ ಕೆಲವು ಬಣಗಳ ನಿಲುವು ಸ್ಪಷ್ಟವಾಗಿ ಅದೇ ಕಡೆಗೆ ವಾಲಿದೆ. ಇಲ್ಲಿಯ ಮುಸ್ಲಿಮ್ ರಾಜರು ಇಲ್ಲಿಯವರೇ ಅಲ್ಲ. ಮುಸ್ಲಿಮರೇ ಪರಕೀಯರು. ಅವರ ರಾಜರೆಲ್ಲಾ ಕ್ರೂರಿಗಳು, ವಿಕೃತಕಾಮಿಗಳು, ಧರ್ಮಾಂಧರು, ದೇವಾಲಯಗಳನ್ನು ನಾಶಮಾಡುವುದರಲ್ಲೇ

ನಿರಂತರವಾಗಿ ತೊಡಗಿಸಿಕೊಂಡವರು. ಆ ಕಾಲದಲ್ಲಿ ಸೃಷ್ಟಿಯಾದ ಭವ್ಯ ಸೌಧಗಳು ಯಾವುದೂ ಅವರದ್ದಲ್ಲ. ಹಿಂದೂಗಳು ಕಟ್ಟಿದ್ದನ್ನು ಕಸಿದುಕೊಂಡು ತಮ್ಮದಾಗಿಸಿಕೊಳ್ಳುವುದರಲ್ಲೇ ಅವರ ನಿಪುಣತೆ, ಎಂಬಿತ್ಯಾದಿ ಚಿತ್ರಣಗಳು, ವಾದಗಳು ಕುಣಿದು ಕುಪ್ಪಳಿಸುತ್ತಿವೆ; ಇತಿಹಾಸದ ಸಾಮಾನ್ಯ ಗ್ರಾಹಕರಿಗೆ ಯಥೇಚ್ಛವಾಗಿ ಲಭ್ಯವಿವೆ. ಅವುಗಳಿಂದ ಪ್ರಭಾವಿತರಾದವರು ನಮ್ಮಲ್ಲಿ ಸಾಕಷ್ಟು ಇದ್ದಾರೆ. ಇತಿಹಾಸ ತಜ್ಞರನ್ನು ಮೀರಿಸುವ, ಇತಿಹಾಸವನ್ನು ಓದದೇ ಅದನ್ನು ನೇರವಾಗಿ ತಿಳಿದುಕೊಂಡ ಮಹನೀಯರು ಅನೇಕರಿದ್ದಾರೆ. ಇತಿಹಾಸದಲ್ಲಿ ನಡೆದ ಯುದ್ಧಗಳಿಗಿಂತ ಇತಿಹಾಸದ ಹೆಸರಿನಲ್ಲಿ ಈಗ ನಡೆಯುವ ಯುದ್ಧಗಳು ಕಮ್ಮಿಯೇನಲ್ಲ. ಅವುಗಳ ಸ್ವರೂಪ ಮಾತ್ರ ಬೇರೆ, ಅಷ್ಟೆ.

ಇದನ್ನು ಸದ್ಯ ಹೊರಗಿಟ್ಟು ಇತಿಹಾಸದ ಒಟ್ಟು ಸ್ವರೂಪ ಹೇಗಿರಬೇಕು ಎಂಬ ಪ್ರಶ್ನೆಯನ್ನೆತ್ತಿಕೊಂಡರೆ, ಮೂಲತಃ ಅದು ಒಂದು ಸಮಾಜದ ಒಟ್ಟು ಅನುಭವದ ಕಥನವಾಗಬೇಕು ಎಂಬ ಉತ್ತರ ಸಮಂಜಸವಾದೀತೋ ಏನೋ. ಈ ಉತ್ತರ ಆಕರ್ಷಕವಾಗಿದೆ. ಆದರೂ ಈ ಒಟ್ಟು ಅನುಭವವನ್ನು ಸೆರೆಹಿಡಿಯುವ ಬಗೆ ಹೇಗೇ? ಒಟ್ಟು ಅನುಭವದ ಕಲ್ಪನೆ ಎಂಬುದು ಅನುಭವವನ್ನು ಮೀರಿದ, ಜಿಜ್ಞಾಸೆಗೆ ಸಂಬಂಧಿಸಿದ್ದು, ನಮ್ಮೊಳಗೆ ನಡೆಯುವ ಮಂಥನ, ಜಿಜ್ಞಾಸೆಗೆ ಸಂಬಂಧಿಸಿದ್ದು. ಅದಿಲ್ಲದಿದ್ದರೆ ನಮ್ಮ ಅನುಭವದ ಸಂವೇದನೆ ನಮಗಿರುವುದಿಲ್ಲ; ಅಲ್ಲಿ ಒಟ್ಟು ಅನುಭವವಂತೂ ಖಂಡಿತವಾಗಿಯೂ ಇಲ್ಲ. ನಮ್ಮ ಇತಿಹಾಸದ ಚೌಕಟ್ಟನ್ನು ನಾವು ಎಷ್ಟು ವಿಸ್ತರಿಸಲು ಸಾಧ್ಯ? ಇಪ್ಪತ್ತನೆಯ ಶತಮಾನದ ಮೊದಲನೆಯ ಒಂದೆರಡು ದಶಕಗಳ ಕಾಲಘಟ್ಟದಲ್ಲಿ ಫ್ರಾನ್ಸಿನಲ್ಲಿ ಇದರ ಬಗ್ಗೆ ಚರ್ಚೆಯಾಯಿತು. "ಸಂಪೂರ್ಣ ಇತಿಹಾಸ" ಅಥವಾ Total History ಎಂಬುದು ಅಸಾಧ್ಯವಾದ ಗುರಿಯಲ್ಲ ಎಂಬ ನಿರ್ಧಾರಕ್ಕೆ ಅಲ್ಲಿಯ ಕೆಲವು ಇತಿಹಾಸಕಾರರು ಬಂದಿದ್ದರು. ಇಂಗ್ಲೆಂಡಿನಲ್ಲಿ ಲಾರ್ಡ್ ಏಕ್ಟನ್ ಮುಂದೆ ಇತಿಹಾಸದ ಬಗ್ಗೆ ಸಿಗಬಹುದಾದ ಎಲ್ಲಾ ಆಧಾರಗಳೂ ಲಭ್ಯವಾದಾಗ ಸಂಪೂರ್ಣವಾದ, ಪ್ರಶ್ನಾತೀತವಾದ ಸಂಪೂರ್ಣ ಇತಿಹಾಸದ ರಚನೆ ಸಾಧ್ಯವಾದೀತು ಎಂಬ ಆಶೆಯನ್ನು ವ್ಯಕ್ತಪಡಿಸಿದ್ದರು. ಅಂದರೆ ಇತಿಹಾಸದ ರಚನೆ ಕೇವಲ ಅದರ ಆಧಾರಗಳ ಮೇಲೆ ಮಾತ್ರ ನಿಂತಿದೆಯಾ? ಇತಿಹಾಸವು ಅಪೂರ್ಣವಾಗುವುದು ಅದರ ಆಕರಗಳು ಅಪೂರ್ಣವಾಗಿ ಲಭ್ಯವಾದುದರಿಂದಲೇ? ಅವು ಪೂರ್ಣವಾಗಿ ಲಭ್ಯವಾಗುವುದು ಯಾವಾಗ? ಹೇಗೆ? ಅವು ಪೂರ್ಣವಾಗಿ ಲಭ್ಯವಾಗಿದೆ ಎಂದು ನಮಗೆ ಮನದಟ್ಟಾಗುವುದು ಹೇಗೆ? ಎಂದು? ಅದರೊಳಗೆ ಬೇರೆ ಪ್ರಶ್ನೆಗಳು ಅಥವಾ ಕಾಲಕಾಲಕ್ಕೆ ಬದಲಾಗುವ ಆಶಯಗಳು ಯಾವುವೂ ಭಾಗವಹಿಸುವುದಿಲ್ಲವೇ? ಹಾಗಿದ್ದಾಗ ಇತಿಹಾಸ ರಚನೆಯಲ್ಲಿ ಮನುಷ್ಯನ, ಸಮಾಜದ, ಒಟ್ಟು ಅನುಭವಗಳನ್ನು ಸೆರೆಹಿಡಿಯಲು ಸಾಧ್ಯವೇ? ಅದರಲ್ಲಿ ಯಾವುದು ಸೇರಬೇಕು? ಎಲ್ಲವೂ ಸೇರಬೇಕೆಂದಾಗ ಯಾವುದನ್ನು ಬಿಡಬೇಕು ಎಂಬ ಪ್ರಶ್ನೆ ಅಪ್ರಸ್ತುತವಾಗುತ್ತದೆ, ಅಲ್ಲವೇ? ಇದು ಸಾಧ್ಯವೇ? ಹಿಂದೆ ನಡೆದದ್ದೆಲ್ಲಾ ನಮ್ಮ ಇತಿಹಾಸ ಎನ್ನುವುದು ಹಿಡಿಯಲಾಗದ, ಬರೆಯಲಾಗದ ಒಂದು ಆದರ್ಶ. ಫ್ರಾನ್ಸಿನ ಎನಾಲ್ (Annales) ಇತಿಹಾಸಕಾರರ ಕಲ್ಪನೆ ಅಂತಹ ಇತಿಹಾಸವಲ್ಲ. ಅದು Integrated History, ಅಥವಾ ಸಮಸ್ತಯದ ಇತಿಹಾಸ; ರಾಜಕೀಯ ಇತಿಹಾಸವನ್ನು ಮೀರಿ, ಸಮಾಜದ, ಅದರ ಆರ್ಥಿಕತೆಯ, ಹಾಗೂ ಭೌಗೋಳಿಕತೆಯು ಜನಜೀವನದ ಮೇಲೆ ಬೀರುವ ಪ್ರಭಾವವನ್ನು ಗುರುತಿಸಿ, ವಿವರಿಸುವ ಪ್ರಯತ್ನ, ಜನರ ಆಲೋಚನಾ ಕ್ರಮವನ್ನು, ಬದುಕಿನ ಪದರುಗಳನ್ನು

ಬಿಚ್ಚಿಟ್ಟು, ಪೋಣಿಸಿಕೊಂಡು, ರಚಿಸುವ ಒಂದು ಕ್ರಮ. ನಮ್ಮ ಒಟ್ಟು ಅನುಭವಗಳನ್ನು ತುಂಡುತುಂಡಾಗಿ ಗ್ರಹಿಸುವ, ಅದಕ್ಕಾಗಿ ಅವುಗಳ ಮಧ್ಯೆ ಕಟ್ಟಿದ ಬೇಲಿಗಳನ್ನು ಒಡೆಯುವ, ಬದುಕನ್ನು, ಸಂಸ್ಕೃತಿಯನ್ನು, ತಿಳಿದು, ಹೆಣೆದು ಪ್ರಸ್ತುತಪಡಿಸುವ ಒಂದು ವರಸೆ. ಅದರೊಳಗೆ ಸಮಾಜಶಾಸ್ತ್ರಜ್ಞರ ಅರಸುವಿಕೆ, ಅರ್ಥಶಾಸ್ತ್ರಜ್ಞರ ಅಧ್ಯಯನ ವಸ್ತು, ಪ್ರಕೃತಿಯು ಮನುಷ್ಯನ ಜೀವನ ಸಾಧನೆಗಳ ಮೇಲೆ ಬೀರುವ ಪ್ರಭಾವ ಹಾಗೂ ಮನುಷ್ಯನ ಬದುಕನ್ನು ಅಸಹಜವಾಗಿ ವಿಂಗಡಿಸಿ ವ್ಯಾಖ್ಯಾನಿಸುವ ಹವ್ಯಾಸವನ್ನು ವಿರೋಧಿಸಿ, ಅದನ್ನು ಮೀರಿ, ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಬದುಕಿನ ಅನುಭವಗಳನ್ನು ವಿಂಗಡಿಸುವುದು ಅವುಗಳನ್ನು ಗ್ರಹಿಸುವ ಸಲುವಾಗಿ, ಸೌಲಭ್ಯವಾಗಿ ಮಾತ್ರ. ಅನುಭವಗಳ ವಿವಿಧ ಮಗ್ಗುಲುಗಳು, ಆಯಾಮಗಳು ಪರಸ್ಪರ ಸಂಬಂಧಿಸಿದ್ದು. ಅವುಗಳ ಮೂಲಭೂತ ಅಖಂಡತೆಯನ್ನು ನಾವು ಗುರುತಿಸದಿದ್ದರೆ ನಮ್ಮ ಬದುಕನ್ನು ಅರ್ಥೈಸುವುದು ಸಾಧ್ಯವಿಲ್ಲ. ನಾವು ನಮ್ಮ ಅನುಕೂಲಕ್ಕಾಗಿ ನಮ್ಮ ಬದುಕನ್ನು ಹೇಗೆ ವಿಂಗಡಿಸುತ್ತೇವೆಯೋ, ಹಾಗೆಯೇ ಅವುಗಳನ್ನು ಪೋಣಿಸುವ, ಸಂಯೋಜಿಸುವ, ಸಮನ್ವಯಗೊಳಿಸಿ ನೋಡುವ ಕಲೆಯನ್ನೂ ಅಳವಡಿಸಿಕೊಳ್ಳಬೇಕು ಎಂಬ ವಾದವನ್ನು ಅಲ್ಲಿನ ಇತಿಹಾಸಕಾರರು ಮಂಡಿಸಿದರು. ಇದರೊಳಗೆ ಕೇವಲ ಪ್ರಾಮುಖ್ಯ ಘಟನೆಗಳನ್ನು ನಿರೂಪಿಸುವುದನ್ನು ಬಿಟ್ಟು, ಮನುಷ್ಯನು ಬೆಳೆಸಿಕೊಂಡು ಬಂದ ಮನೋವೃತ್ತಿಗಳ ಅಧ್ಯಯನ ಹಾಗೂ ವಿವರಣೆ, ಆಲೋಚನಾ ವೈಶಿಷ್ಟ್ಯಗಳ ಅಧ್ಯಯನ ಮೊದಲಾದ ವಿಚಾರಗಳನ್ನು ಇತಿಹಾಸದ ವಸ್ತುಗಳನ್ನಾಗಿ ಗುರುತಿಸಲಾಯಿತು. ಇದರಿಂದಾಗಿ ಇತಿಹಾಸವನ್ನು ನೋಡುವ ದೃಷ್ಟಿ ಬದಲಾಯಿತು. ಇತಿಹಾಸ ರಚನೆಯ ವರಸೆಗಳು ಬದಲಾಯಿತು. ಇತಿಹಾಸ ಆಕರಗಳ ಬಗ್ಗೆ ಇತಿಹಾಸಕಾರರ ನಿಲುವುಗಳು ಬದಲಾಯಿತು. ಇದುವರೆಗೆ ಆಕರಗಳೆಂದು ಗುರುತಿಸಿಕೊಳ್ಳದ ಆಕರಗಳಿಗೆ ಮನ್ನಣೆ ದೊರಕಿತು. ಅವುಗಳನ್ನು ಮಾತನಾಡಿಸುವ ಬಗೆಗಳನ್ನು ಕಂಡುಕೊಳ್ಳಲಾಯಿತು. ಅವುಗಳಲ್ಲೂ ಅನೇಕ ಚರ್ಚೆ ಜಿಜ್ಞಾಸೆಗಳು ಹುಟ್ಟಿಕೊಂಡವು. ಅದರೊಳಗೂ ಅನೇಕ ವಿಧಗಳು, ನಿಲುವುಗಳು ಹುಟ್ಟಿಕೊಂಡವು. ಮೊದಲನೆಯ ಘಟ್ಟದಲ್ಲಿ ಲೂಶಿಯನ್ ಫೆವ್ರೆ, ಮಾರ್ಕ್ ಬ್ಲೋಕ್, ಫೆರ್ನಾಂಡ್ ಬ್ರೌದೆಲ್, ಮುಂದಿನ ದಿನಗಳಲ್ಲಿ ಜಾಕ್ ಲೆಗೋಫ್, ಇಮ್ಯಾನುಎಲ್ ಲಾದೂರಿ ಮೊದಲಾದವರು ಇತಿಹಾಸದ ವಿವಿಧ ವಸ್ತುಗಳನ್ನು ಆಯ್ದುಕೊಂಡು, ಅವುಗಳಲ್ಲಿ ಈ ರೀತಿಯ ಕ್ರೋಢೀಕರಣ ನಡೆಸುವ ಪ್ರಯತ್ನಗಳನ್ನು ಮಾಡಿದರು. ಸಮಾಜದಲ್ಲಿ ಮನುಷ್ಯನ ಬದುಕನ್ನು ನಿರೂಪಿಸುವ ನಿಟ್ಟಿನಲ್ಲಿ ಇವೆಲ್ಲಾ ನಿಲುವುಗಳು, ರಚನಾಕ್ರಮಗಳು ಭಾಗಿಯಾದುವು ಎನ್ನಬಹುದು. ಇತಿಹಾಸದ ಪರಿಧಿಯನ್ನು ಇದು ಸಾಕಷ್ಟು ವಿಸ್ತಾರಗೊಳಿಸಿತು.

ಇದರ ಪ್ರಭಾವ ಜಗತ್ತಿನ ಎಲ್ಲಾ ಕಡೆಯಲ್ಲೂ ಆಯಿತು ಎನ್ನುವುದು ಕಷ್ಟ. ನಮ್ಮ ದೇಶದಲ್ಲಿ ಇದನ್ನು ಗುರುತಿಸಿಕೊಂಡಿದ್ದು ತೀರ ಇತ್ತೀಚೆಗೆ. ಫ್ರೆಂಚಿನಿಂದ ಇಂಗ್ಲಿಷಿಗೆ ಅವರ ಪುಸ್ತಕಗಳು ಅನುವಾದಗೊಂಡದ್ದೂ ತಡವಾಗಿಯೇ ಎನ್ನಬೇಕು. ಆದಾಗ ಬಹುತೇಕ ಇತಿಹಾಸದ ಪರಿಧಿಯನ್ನು ವಿಸ್ತರಿಸುವ ಅಗತ್ಯವನ್ನು ಇತಿಹಾಸಕಾರರು ಕಂಡುಕೊಂಡರು. ಅದರ ಒಂದು ಆಯಾಮ ಸಾಂಸ್ಕೃತಿಕ ಇತಿಹಾಸ. ಅದು ಪರ್ಯಾಯ ಇತಿಹಾಸ ಎನ್ನುವುದು ಕಷ್ಟ. ಇದು ಸಾಮಾನ್ಯವಾಗಿ ನಿರ್ದಿಷ್ಟ ಪ್ರದೇಶ, ರಾಜಕೀಯ ವ್ಯವಸ್ಥೆಗಳನ್ನು ಮೀರಿ, ಜನರಿಗೆ ಹೆಚ್ಚು ನೇರವಾಗಿ ಸಂಬಂಧಿಸಿದ, ಜನರು ಸೃಷ್ಟಿಸಿಕೊಂಡ ಇತಿಹಾಸ ಎಂದು ಗುರುತಿಸಲಾಗಿದೆ. ಒಂದು ಕಡೆಯ ಸಾಂಸ್ಕೃತಿಕ ಇತಿಹಾಸವನ್ನು ಬರೆಯುವುದು

ಅಲ್ಲಿಯ ಜನರ ಹಿರಿಮೆಯನ್ನು ಕೊಂಡಾಡಿದಂತೆ ಎಂಬ ಭಾವನೆ ಇದೆ. ಅದರೊಳಗೆ ಏನೆಲ್ಲಾ ಇರಬೇಕು? ಇದನ್ನು ನಾವು ಸುಲಭವಾಗಿ ನಿರ್ಧಾರ ಮಾಡಿದಂತಿದೆ. ನಮ್ಮ ಇತಿಹಾಸದಲ್ಲಿ ರಾಜರನ್ನು ಗೌರವಯುತವಾಗಿ ಅಳವಡಿಸಿಕೊಂಡು, ಅವರ ಹಾಗೂ ಅವರ ಮನೆತನದ ಆಳ್ವಿಕೆಯಲ್ಲಿ ರಾಜಕೀಯವಾಗಿ ಹೊರತಾದ ಸಾಧನೆಗಳನ್ನು ಪಟ್ಟಿಮಾಡುವುದು ಸಾಮಾನ್ಯ. ಅವರು ಯಾವ ಧರ್ಮದ ಅನುಯಾಯಿಯಾಗಿದ್ದರು, ಯಾವ ಧರ್ಮಗಳಿಗೆ ಪ್ರೋತ್ಸಾಹವನ್ನಿತ್ತರು, ಇದರಿಂದ ದೇಶದಲ್ಲಿ ಧಾರ್ಮಿಕವಾಗಿ ಯಾವ ಪ್ರಮುಖ ಬದಲಾವಣೆಗಳು ಕಂಡುಬಂದವು? ಸಾಹಿತ್ಯ ಕ್ಷೇತ್ರದಲ್ಲಿ ಅವರ ಕಾಲದ "ಕೊಡುಗೆ"ಗಳು ಏನು? ಅವರ ಆಸ್ಥಾನದಲ್ಲಿ ಆಶ್ರಯ ಪಡೆದ ಕವಿಪುಂಗವರು ಯಾರು, ಅಥವಾ ಆ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಕವಿಗಳು ಅಥವಾ ಪಂಡಿತರು ಯಾರು? ಆ ಕಾಲದಲ್ಲಿ ಕಟ್ಟಲಾದ ಮುಖ್ಯ ವಾಸ್ತುಶಿಲ್ಪದ ಮಾದರಿಗಳೇನು? ಅವುಗಳ ವಿವರಗಳೇನು? ಇವುಗಳನ್ನು ಇತಿಹಾಸ ಪುಟಗಳಲ್ಲಿ ನೀಡುವ ಸಂಭ್ರಮ ದೊಡ್ಡದೇ. ಆದರೆ ಅವುಗಳನ್ನೇ ನಮ್ಮ ಸಂಸ್ಕೃತಿ ಎಂದುಕೊಂಡರೆ ಸಾಕೇ? ಸಂಸ್ಕೃತಿ ಎಂಬುದಕ್ಕೆ ನಾವು ನೀಡುವ ಅರ್ಥವಾದರೂ ಏನು?

"ಸಂಸ್ಕೃತಿ" ಎಂದರೆ ನಾವು ಬದುಕುವ ರೀತಿ. ಬದುಕಿದ್ದ ರೀತಿ. ಇದು ಭೂತಕಾಲಕ್ಕೆ ಮಾತ್ರ ಸಂಬಂಧಿಸಿದ್ದಲ್ಲ; ಅದನ್ನು ಗುರುತಿಸಿ, ಸಂಭ್ರಮಿಸುವ ವರ್ತಮಾನಕ್ಕೂ ಸಂಬಂಧಿಸಿದ್ದು. ನಮ್ಮ ಹಿಂದಿನ ಸಂಸ್ಕೃತಿ ಬಹಳ ಶ್ರೇಷ್ಠ ಎಂದು ಇಂದಿನ ಅಸಂಸ್ಕೃತ ಜನ ಘೋಷಿಸಿದರೆ ಕಸಿವಿಸಿಯಾದೀತು. ಅಷ್ಟೇ ಅಲ್ಲ. ಒಂದು ದೇಶದೊಳಗೆ, ಒಂದು ಭೌಗೋಳಿಕ ಪ್ರದೇಶದೊಳಗೆ ಒಂದೇ ಸಂಸ್ಕೃತಿ ಎಂಬ ನಂಬಿಕೆ ತಪ್ಪಾದೀತು. ಅಲ್ಲಿ ಅನೇಕ ಸಂಸ್ಕೃತಿಗಳಿರಲು ಸಾಧ್ಯ. ಅವುಗಳನ್ನು ಮೇಳೈಸುವ ಕೆಲವು ಶಕ್ತಿಗಳೂ ಇರಲು ಸಾಧ್ಯ. ನಾವೆಲ್ಲಾ ಒಂದೇ ಎಂಬ ಮಾತು ಹೇಳಲು ಸುಲಭ, ಕೇಳಲು ಆಪ್ಯಾಯಮಾನ. ನಾವೆಲ್ಲರೂ ಮನುಷ್ಯರಾದರೂ ನಮ್ಮ ಬದುಕಿನಲ್ಲಿ ಅನೇಕ ವ್ಯತ್ಯಾಸಗಳಿವೆ, ವಿಶೇಷಗಳಿವೆ. ನಮ್ಮ ಭಾಷೆ, ಧರ್ಮ, ಜೀವನಶೈಲಿ, ಆಲೋಚನಾಕ್ರಮಗಳು, ಸಾಧನೆಗಳು, ಇತ್ಯಾದಿ ಬೇರೆಬೇರೆಯಾಗಿರುತ್ತವೆ. ಆದರೆ ಅವುಗಳೆಲ್ಲವೂ ಪರಸ್ಪರ ವಿರೋಧಿಗಳಾಗಬೇಕೆಂದಿಲ್ಲ. ಅವುಗಳ ನಡುವೆ ಅನೇಕ ಸೇತುವೆಗಳಿರಲು ಸಾಧ್ಯ, ಅಥವಾ ಸೇತುವೆಗಳನ್ನು ನಿರ್ಮಿಸಲು ಸಾಧ್ಯ. ಎಲ್ಲರೂ ತಮ್ಮತಮ್ಮ ಸಂಸ್ಕೃತಿಯನ್ನು ಶ್ರೇಷ್ಠ ಎಂದುಕೊಳ್ಳುತ್ತಾರೆ. ಇತರರು ನಮಗೆ ಸಾಟಿಯಲ್ಲ ಎನ್ನುತ್ತಾರೆ. ಇದು ಇದ್ದದ್ದೇ. ನಮ್ಮ ಸಂಸ್ಕೃತಿಯು ಹಿರಿದು ಎಂದು ಪ್ರತಿಪಾದಿಸಲು ನಾವು ಅನೇಕ ಪುರಾವೆಗಳನ್ನು ನೀಡುತ್ತೇವೆ. ಇತರರು ನೀಡಿದ ಪ್ರಶಸ್ತಿ ಪತ್ರವನ್ನು ನೋಡಿ ಹಿಗ್ಗುತ್ತೇವೆ. ಇತರರು ನಮ್ಮನ್ನು ಶ್ರೇಷ್ಠರಲ್ಲ ಎಂದಾಗ ನಾವು ವ್ಯಗ್ರರಾಗುತ್ತೇವೆ. ನಮ್ಮ ಸಂಸ್ಕೃತಿ ಕಥನದಲ್ಲಿ ಇವೆಲ್ಲಾ ಸೇರಿಹೋಗುತ್ತವೆ. ಆದರೆ ಇವು "ಸಂಸ್ಕೃತಿ" ಎಂಬ ವಿವರಣೆಗೆ ಸರಿಹೊಂದುತ್ತವೆಯೇ? ಇವೆಲ್ಲಾ ಒಂದು ಸಂಸ್ಕೃತಿ ಎಂದುಕೊಂಡರೆ ಎಷ್ಟು ಸರಿ? ಕಾಳಿದಾಸ ಮಹಾಕವಿ ಎಂಬುದು ನಿರ್ವಿವಾದ. ಆತನ ಹಿರಿಮೆಯನ್ನು ಆತನ ಕೃತಿಗಳು ನಿರೂಪಿಸುತ್ತವೆ. ಅವನಂತೆ ಅನೇಕ ಸಾಹಿತ್ಯ ರತ್ನಗಳು, ಶ್ರೇಷ್ಠ ಚಿಂತಕರು ನಮ್ಮಲ್ಲಿದ್ದರು. ಕಲಾವಿದರಿದ್ದರು, ಕಲಾಪ್ರೇಮಿಗಳಿದ್ದರು. ಇವರನ್ನು ಪಟ್ಟಿಮಾಡಿ, ಅವರ ಸಾಧನೆಗಳನ್ನು ವಿವರಿಸಿ ಅವರಲ್ಲಿನ ಪ್ರಕಾಶವನ್ನು ನಮ್ಮದೇ ಎಂದುಕೊಂಡರೆ ಅದು ಎಷ್ಟು ಸರಿ? ನಮ್ಮ ದೇಶದಲ್ಲಿ ಮಹಿಳೆಯರ ಸ್ಥಾನಮಾನಗಳೇನು ಎಂಬ ಪ್ರಶ್ನೆಯನ್ನೆತ್ತಿದಾಗ, "ಎಲ್ಲಿ ಮಹಿಳೆಯರನ್ನು ಪೂಜಿಸುತ್ತಾರೋ ಅಲ್ಲಿ ದೇವರುಗಳು ನೆಲೆಸಿರುತ್ತಾರೆ" ಎಂಬ ಮಾತನ್ನೋ,

ಬಿಚ್ಚಿಟ್ಟು, ಪೋಣಿಸಿಕೊಂಡು, ರಚಿಸುವ ಒಂದು ಕ್ರಮ. ನಮ್ಮ ಒಟ್ಟು ಅನುಭವಗಳನ್ನು ತುಂಡುತುಂಡಾಗಿ ಗ್ರಹಿಸುವ, ಅದಕ್ಕಾಗಿ ಅವುಗಳ ಮಧ್ಯೆ ಕಟ್ಟಿದ ಬೇಲಿಗಳನ್ನು ಒಡೆಯುವ, ಬದುಕನ್ನು, ಸಂಸ್ಕೃತಿಯನ್ನು, ತಿಳಿದು, ಹೆಣೆದು ಪ್ರಸ್ತುತಪಡಿಸುವ ಒಂದು ವರಸೆ. ಅದರೊಳಗೆ ಸಮಾಜಶಾಸ್ತ್ರಜ್ಞರ ಅರಸುವಿಕೆ, ಅರ್ಥಶಾಸ್ತ್ರಜ್ಞರ ಅಧ್ಯಯನ ವಸ್ತು, ಪ್ರಕೃತಿಯು ಮನುಷ್ಯನ ಜೀವನ ಸಾಧನೆಗಳ ಮೇಲೆ ಬೀರುವ ಪ್ರಭಾವ ಹಾಗೂ ಮನುಷ್ಯನ ಬದುಕನ್ನು ಅಸಹಜವಾಗಿ ವಿಂಗಡಿಸಿ ವ್ಯಾಖ್ಯಾನಿಸುವ ಹವ್ಯಾಸವನ್ನು ವಿರೋಧಿಸಿ, ಅದನ್ನು ಮೀರಿ, ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಬದುಕಿನ ಅನುಭವಗಳನ್ನು ವಿಂಗಡಿಸುವುದು ಅವುಗಳನ್ನು ಗ್ರಹಿಸುವ ಸಲುವಾಗಿ, ಸೌಲಭ್ಯವಾಗಿ ಮಾತ್ರ. ಅನುಭವಗಳ ವಿವಿಧ ಮಗ್ಗುಲುಗಳು, ಆಯಾಮಗಳು ಪರಸ್ಪರ ಸಂಬಂಧಿಸಿದ್ದು. ಅವುಗಳ ಮೂಲಭೂತ ಅಖಂಡತೆಯನ್ನು ನಾವು ಗುರುತಿಸದಿದ್ದರೆ ನಮ್ಮ ಬದುಕನ್ನು ಅರ್ಥೈಸುವುದು ಸಾಧ್ಯವಿಲ್ಲ. ನಾವು ನಮ್ಮ ಅನುಕೂಲಕ್ಕಾಗಿ ನಮ್ಮ ಬದುಕನ್ನು ಹೇಗೆ ವಿಂಗಡಿಸುತ್ತೇವೆಯೋ, ಹಾಗೆಯೇ ಅವುಗಳನ್ನು ಪೋಣಿಸುವ, ಸಂಯೋಜಿಸುವ, ಸಮನ್ವಯಗೊಳಿಸಿ ನೋಡುವ ಕಲೆಯನ್ನೂ ಅಳವಡಿಸಿಕೊಳ್ಳಬೇಕು ಎಂಬ ವಾದವನ್ನು ಅಲ್ಲಿನ ಇತಿಹಾಸಕಾರರು ಮಂಡಿಸಿದರು. ಇದರೊಳಗೆ ಕೇವಲ ಪ್ರಾಮುಖ್ಯ ಘಟನೆಗಳನ್ನು ನಿರೂಪಿಸುವುದನ್ನು ಬಿಟ್ಟು, ಮನುಷ್ಯನು ಬೆಳೆಸಿಕೊಂಡು ಬಂದ ಮನೋವೃತ್ತಿಗಳ ಅಧ್ಯಯನ ಹಾಗೂ ವಿವರಣೆ, ಆಲೋಚನಾ ವೈಶಿಷ್ಟ್ಯಗಳ ಅಧ್ಯಯನ ಮೊದಲಾದ ವಿಚಾರಗಳನ್ನು ಇತಿಹಾಸದ ವಸ್ತುಗಳನ್ನಾಗಿ ಗುರುತಿಸಲಾಯಿತು. ಇದರಿಂದಾಗಿ ಇತಿಹಾಸವನ್ನು ನೋಡುವ ದೃಷ್ಟಿ ಬದಲಾಯಿತು. ಇತಿಹಾಸ ರಚನೆಯ ವರಸೆಗಳು ಬದಲಾಯಿತು. ಇತಿಹಾಸ ಆಕರಗಳ ಬಗ್ಗೆ ಇತಿಹಾಸಕಾರರ ನಿಲುವುಗಳು ಬದಲಾಯಿತು. ಇದುವರೆಗೆ ಆಕರಗಳೆಂದು ಗುರುತಿಸಿಕೊಳ್ಳದ ಆಕರಗಳಿಗೆ ಮನ್ನಣೆ ದೊರಕಿತು. ಅವುಗಳನ್ನು ಮಾತನಾಡಿಸುವ ಬಗೆಗಳನ್ನು ಕಂಡುಕೊಳ್ಳಲಾಯಿತು. ಅವುಗಳಲ್ಲೂ ಅನೇಕ ಚರ್ಚೆ ಜಿಜ್ಞಾಸೆಗಳು ಹುಟ್ಟಿಕೊಂಡವು. ಅದರೊಳಗೂ ಅನೇಕ ವಿಧಗಳು, ನಿಲುವುಗಳು ಹುಟ್ಟಿಕೊಂಡವು. ಮೊದಲನೆಯ ಘಟ್ಟದಲ್ಲಿ ಲೂಶಿಯನ್ ಫೆವ್ರೆ, ಮಾರ್ಕ್ ಬ್ಲೋಕ್, ಫೆರ್ನಾಂಡ್ ಬ್ರೌದೆಲ್, ಮುಂದಿನ ದಿನಗಳಲ್ಲಿ ಜಾಕ್ ಲೆಗೋಫ್, ಇಮ್ಯಾನುಎಲ್ ಲಾದೂರಿ ಮೊದಲಾದವರು ಇತಿಹಾಸದ ವಿವಿಧ ವಸ್ತುಗಳನ್ನು ಆಯ್ದುಕೊಂಡು, ಅವುಗಳಲ್ಲಿ ಈ ರೀತಿಯ ಕ್ರೋಢೀಕರಣ ನಡೆಸುವ ಪ್ರಯತ್ನಗಳನ್ನು ಮಾಡಿದರು. ಸಮಾಜದಲ್ಲಿ ಮನುಷ್ಯನ ಬದುಕನ್ನು ನಿರೂಪಿಸುವ ನಿಟ್ಟಿನಲ್ಲಿ ಇವೆಲ್ಲಾ ನಿಲುವುಗಳು, ರಚನಾಕ್ರಮಗಳು ಭಾಗಿಯಾದುವು ಎನ್ನಬಹುದು. ಇತಿಹಾಸದ ಪರಿಧಿಯನ್ನು ಇದು ಸಾಕಷ್ಟು ವಿಸ್ತಾರಗೊಳಿಸಿತು.

ಇದರ ಪ್ರಭಾವ ಜಗತ್ತಿನ ಎಲ್ಲಾ ಕಡೆಯಲ್ಲೂ ಆಯಿತು ಎನ್ನುವುದು ಕಷ್ಟ. ನಮ್ಮ ದೇಶದಲ್ಲಿ ಇದನ್ನು ಗುರುತಿಸಿಕೊಂಡಿದ್ದು ತೀರ ಇತ್ತೀಚೆಗೆ. ಫ್ರೆಂಚಿನಿಂದ ಇಂಗ್ಲಿಷಿಗೆ ಅವರ ಪುಸ್ತಕಗಳು ಅನುವಾದಗೊಂಡದ್ದೂ ತಡವಾಗಿಯೇ ಎನ್ನಬೇಕು. ಆದಾಗ ಬಹುತೇಕ ಇತಿಹಾಸದ ಪರಿಧಿಯನ್ನು ವಿಸ್ತರಿಸುವ ಅಗತ್ಯವನ್ನು ಇತಿಹಾಸಕಾರರು ಕಂಡುಕೊಂಡರು. ಅದರ ಒಂದು ಆಯಾಮ ಸಾಂಸ್ಕೃತಿಕ ಇತಿಹಾಸ. ಅದು ಪರ್ಯಾಯ ಇತಿಹಾಸ ಎನ್ನುವುದು ಕಷ್ಟ. ಇದು ಸಾಮಾನ್ಯವಾಗಿ ನಿರ್ದಿಷ್ಟ ಪ್ರದೇಶ, ರಾಜಕೀಯ ವ್ಯವಸ್ಥೆಗಳನ್ನು ಮೀರಿ, ಜನರಿಗೆ ಹೆಚ್ಚು ನೇರವಾಗಿ ಸಂಬಂಧಿಸಿದ, ಜನರು ಸೃಷ್ಟಿಸಿಕೊಂಡ ಇತಿಹಾಸ ಎಂದು ಗುರುತಿಸಲಾಗಿದೆ. ಒಂದು ಕಡೆಯ ಸಾಂಸ್ಕೃತಿಕ ಇತಿಹಾಸವನ್ನು ಬರೆಯುವುದು

ಅಲ್ಲಿಯ ಜನರ ಹಿರಿಮೆಯನ್ನು ಕೊಂಡಾಡಿದಂತೆ ಎಂಬ ಭಾವನೆ ಇದೆ. ಅದರೊಳಗೆ ಏನೆಲ್ಲಾ ಇರಬೇಕು? ಇದನ್ನು ನಾವು ಸುಲಭವಾಗಿ ನಿರ್ಧಾರ ಮಾಡಿದಂತಿದೆ. ನಮ್ಮ ಇತಿಹಾಸದಲ್ಲಿ ರಾಜರನ್ನು ಗೌರವಯುತವಾಗಿ ಅಳವಡಿಸಿಕೊಂಡು, ಅವರ ಹಾಗೂ ಅವರ ಮನೆತನದ ಆಳ್ವಿಕೆಯಲ್ಲಿ ರಾಜಕೀಯವಾಗಿ ಹೊರತಾದ ಸಾಧನೆಗಳನ್ನು ಪಟ್ಟಿಮಾಡುವುದು ಸಾಮಾನ್ಯ. ಅವರು ಯಾವ ಧರ್ಮದ ಅನುಯಾಯಿಯಾಗಿದ್ದರು, ಯಾವ ಧರ್ಮಗಳಿಗೆ ಪ್ರೋತ್ಸಾಹವನ್ನಿತ್ತರು, ಇದರಿಂದ ದೇಶದಲ್ಲಿ ಧಾರ್ಮಿಕವಾಗಿ ಯಾವ ಪ್ರಮುಖ ಬದಲಾವಣೆಗಳು ಕಂಡುಬಂದವು? ಸಾಹಿತ್ಯ ಕ್ಷೇತ್ರದಲ್ಲಿ ಅವರ ಕಾಲದ "ಕೊಡುಗೆ"ಗಳು ಏನು? ಅವರ ಆಸ್ಥಾನದಲ್ಲಿ ಆಶ್ರಯ ಪಡೆದ ಕವಿಪುಂಗವರು ಯಾರು, ಅಥವಾ ಆ ಕಾಲದಲ್ಲಿ ಪ್ರಸಿದ್ಧಿಗೆ ಬಂದ ಕವಿಗಳು ಅಥವಾ ಪಂಡಿತರು ಯಾರು? ಆ ಕಾಲದಲ್ಲಿ ಕಟ್ಟಲಾದ ಮುಖ್ಯ ವಾಸ್ತುಶಿಲ್ಪದ ಮಾದರಿಗಳೇನು? ಅವುಗಳ ವಿವರಗಳೇನು? ಇವುಗಳನ್ನು ಇತಿಹಾಸ ಪುಟಗಳಲ್ಲಿ ನೀಡುವ ಸಂಭ್ರಮ ದೊಡ್ಡದೇ. ಆದರೆ ಅವುಗಳನ್ನೇ ನಮ್ಮ ಸಂಸ್ಕೃತಿ ಎಂದುಕೊಂಡರೆ ಸಾಕೇ? ಸಂಸ್ಕೃತಿ ಎಂಬುದಕ್ಕೆ ನಾವು ನೀಡುವ ಅರ್ಥವಾದರೂ ಏನು?

"ಸಂಸ್ಕೃತಿ" ಎಂದರೆ ನಾವು ಬದುಕುವ ರೀತಿ. ಬದುಕಿದ್ದ ರೀತಿ. ಇದು ಭೂತಕಾಲಕ್ಕೆ ಮಾತ್ರ ಸಂಬಂಧಿಸಿದ್ದಲ್ಲ; ಅದನ್ನು ಗುರುತಿಸಿ, ಸಂಭ್ರಮಿಸುವ ವರ್ತಮಾನಕ್ಕೂ ಸಂಬಂಧಿಸಿದ್ದು. ನಮ್ಮ ಹಿಂದಿನ ಸಂಸ್ಕೃತಿ ಬಹಳ ಶ್ರೇಷ್ಠ ಎಂದು ಇಂದಿನ ಅಸಂಸ್ಕೃತ ಜನ ಘೋಷಿಸಿದರೆ ಕಸಿವಿಸಿಯಾದೀತು. ಅಷ್ಟೇ ಅಲ್ಲ. ಒಂದು ದೇಶದೊಳಗೆ, ಒಂದು ಭೌಗೋಳಿಕ ಪ್ರದೇಶದೊಳಗೆ ಒಂದೇ ಸಂಸ್ಕೃತಿ ಎಂಬ ನಂಬಿಕೆ ತಪ್ಪಾದೀತು. ಅಲ್ಲಿ ಅನೇಕ ಸಂಸ್ಕೃತಿಗಳಿರಲು ಸಾಧ್ಯ. ಅವುಗಳನ್ನು ಮೇಳೈಸುವ ಕೆಲವು ಶಕ್ತಿಗಳೂ ಇರಲು ಸಾಧ್ಯ. ನಾವೆಲ್ಲಾ ಒಂದೇ ಎಂಬ ಮಾತು ಹೇಳಲು ಸುಲಭ, ಕೇಳಲು ಆಪ್ಯಾಯಮಾನ. ನಾವೆಲ್ಲರೂ ಮನುಷ್ಯರಾದರೂ ನಮ್ಮ ಬದುಕಿನಲ್ಲಿ ಅನೇಕ ವ್ಯತ್ಯಾಸಗಳಿವೆ, ವಿಶೇಷಗಳಿವೆ. ನಮ್ಮ ಭಾಷೆ, ಧರ್ಮ, ಜೀವನಶೈಲಿ, ಆಲೋಚನಾಕ್ರಮಗಳು, ಸಾಧನೆಗಳು, ಇತ್ಯಾದಿ ಬೇರೆಬೇರೆಯಾಗಿರುತ್ತವೆ. ಆದರೆ ಅವುಗಳೆಲ್ಲವೂ ಪರಸ್ಪರ ವಿರೋಧಿಗಳಾಗಬೇಕೆಂದಿಲ್ಲ. ಅವುಗಳ ನಡುವೆ ಅನೇಕ ಸೇತುವೆಗಳಿರಲು ಸಾಧ್ಯ, ಅಥವಾ ಸೇತುವೆಗಳನ್ನು ನಿರ್ಮಿಸಲು ಸಾಧ್ಯ. ಎಲ್ಲರೂ ತಮ್ಮತಮ್ಮ ಸಂಸ್ಕೃತಿಯನ್ನು ಶ್ರೇಷ್ಠ ಎಂದುಕೊಳ್ಳುತ್ತಾರೆ. ಇತರರು ನಮಗೆ ಸಾಟಿಯಲ್ಲ ಎನ್ನುತ್ತಾರೆ. ಇದು ಇದ್ದದ್ದೇ. ನಮ್ಮ ಸಂಸ್ಕೃತಿಯು ಹಿರಿದು ಎಂದು ಪ್ರತಿಪಾದಿಸಲು ನಾವು ಅನೇಕ ಪುರಾವೆಗಳನ್ನು ನೀಡುತ್ತೇವೆ. ಇತರರು ನೀಡಿದ ಪ್ರಶಸ್ತಿ ಪತ್ರವನ್ನು ನೋಡಿ ಹಿಗ್ಗುತ್ತೇವೆ. ಇತರರು ನಮ್ಮನ್ನು ಶ್ರೇಷ್ಠರಲ್ಲ ಎಂದಾಗ ನಾವು ವ್ಯಗ್ರರಾಗುತ್ತೇವೆ. ನಮ್ಮ ಸಂಸ್ಕೃತಿ ಕಥನದಲ್ಲಿ ಇವೆಲ್ಲಾ ಸೇರಿಹೋಗುತ್ತವೆ. ಆದರೆ ಇವು "ಸಂಸ್ಕೃತಿ" ಎಂಬ ವಿವರಣೆಗೆ ಸರಿಹೊಂದುತ್ತವೆಯೇ? ಇವೆಲ್ಲಾ ಒಂದು ಸಂಸ್ಕೃತಿ ಎಂದುಕೊಂಡರೆ ಎಷ್ಟು ಸರಿ? ಕಾಳಿದಾಸ ಮಹಾಕವಿ ಎಂಬುದು ನಿರ್ವಿವಾದ. ಆತನ ಹಿರಿಮೆಯನ್ನು ಆತನ ಕೃತಿಗಳು ನಿರೂಪಿಸುತ್ತವೆ. ಅವನಂತೆ ಅನೇಕ ಸಾಹಿತ್ಯ ರತ್ನಗಳು, ಶ್ರೇಷ್ಠ ಚಿಂತಕರು ನಮ್ಮಲ್ಲಿದ್ದರು. ಕಲಾವಿದರಿದ್ದರು, ಕಲಾಪ್ರೇಮಿಗಳಿದ್ದರು. ಇವರನ್ನು ಪಟ್ಟಿಮಾಡಿ, ಅವರ ಸಾಧನೆಗಳನ್ನು ವಿವರಿಸಿ ಅವರಲ್ಲಿನ ಪ್ರಕಾಶವನ್ನು ನಮ್ಮದೇ ಎಂದುಕೊಂಡರೆ ಅದು ಎಷ್ಟು ಸರಿ? ನಮ್ಮ ದೇಶದಲ್ಲಿ ಮಹಿಳೆಯರ ಸ್ಥಾನಮಾನಗಳೇನು ಎಂಬ ಪ್ರಶ್ನೆಯನ್ನೆತ್ತಿದಾಗ, "ಎಲ್ಲಿ ಮಹಿಳೆಯರನ್ನು ಪೂಜಿಸುತ್ತಾರೋ ಅಲ್ಲಿ ದೇವರುಗಳು ನೆಲೆಸಿರುತ್ತಾರೆ" ಎಂಬ ಮಾತನ್ನೋ.

ಆಶಯವನ್ನೋ ಸಂಸ್ಕೃತ ಶ್ಲೋಕದ ಮೂಲಕ ಹೇಳಿ, ನಮ್ಮಲ್ಲಿ ದೇವಿಯರ ಆರಾಧನೆ, ಕೆಲವು ಪ್ರಸಿದ್ಧ ರಾಣಿಯರ ಹೆಸರನ್ನು, ರಾಜಕೀಯದಲ್ಲಿ ಮೇಲೆ ಏರಿದ ಮಹಿಳೆಯರ ಪ್ರಭಾವವನ್ನು, ಕವಯತ್ರಿಗಳ ಸಾಧನೆಯನ್ನು, ಕೆಲವು ಮಹಿಳಾ ಆಟಗಾರರ ಹೆಸರನ್ನು ಪಟ್ಟಿಮಾಡಿದರೆ ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಾನ ಹಿರಿದು ಎಂದು ಪ್ರತಿಪಾದಿಸಿದಂತಾಗುತ್ತದೆಯೇ? ಪ್ರತಿಫಲಿತ ಪ್ರಕಾಶವನ್ನು ಎಷ್ಟುದಿನ ನಮ್ಮದು ಎಂದು ಹೇಳಿಕೊಳ್ಳಬಹುದು? ಅದು ನಮ್ಮ ಸಂಸ್ಕೃತಿಯ ಒಂದು ಭಾಗವಾಗಬಹುದಷ್ಟೇ ಅಲ್ಲದೆ, ಅದು ನಮ್ಮ ಬದುಕನ್ನು ನೇರವಾಗಿ ಪ್ರತಿನಿಧಿಸಲು ಸಾಧ್ಯವಿಲ್ಲ. ನಮ್ಮಲ್ಲಿ ಯಾರಾದರೂ ದೊಡ್ಡ ಸಾಧನೆ ಮಾಡಿದರೆ ಅವರ ಬಗ್ಗೆ ನಾವು ಹೆಮ್ಮೆ ಪಡುವುದು ಸಹಜ ಹಾಗೂ ಅದು ಒಂದು ಒಳ್ಳೆಯ ಗುಣ. ಆದರೆ ಅದೇ ನಮ್ಮ ಬದುಕಿನ ಗುರುತಾಗಲು ಸಾಧ್ಯವಿಲ್ಲ. ರಾಜ ಹೇಗೆ ಬದುಕಿದ್ದ ಎಂದು ನೋಡಿ ಪ್ರಜೆಯೂ ಹಾಗಿದ್ದ ಎಂದರೆ ಎಷ್ಟು ಸರಿ? ಎಲ್ಲಾ ಪ್ರಜೆಗಳ ಬದುಕೂ ಒಂದೇ ರೀತಿಯದ್ದಲ್ಲ. ನಾವು ಇತಿಹಾಸದಲ್ಲಿ "ಸುವರ್ಣ ಯುಗ"ಗಳ ಕುರಿತು ಸುಲಭವಾಗಿ ಮಾತನಾಡುತ್ತೇವೆ. ಸಾಹಿತ್ಯ ಕ್ಷೇತ್ರವನ್ನೋ, ಕಲಾಕ್ಷೇತ್ರವನ್ನೋ ನೋಡಿ ಇತಿಹಾಸಕಾರರು ಬರುವ ತೀರ್ಮಾನ ಇದು. ಅಷ್ಟೆ ಹಾಗೆಯೇ "ಸುವರ್ಣಯುಗ"ಗಳ ಆಯ್ಕೆಯಲ್ಲಿ ಸಾಕಷ್ಟು ರಾಜಕೀಯಗಳು ನೆಲೆಯಾಗಿವೆ. ಸುವರ್ಣ ಯುಗದ ಕಲ್ಪನೆ ಒಂದು ದಿವ್ಯ ಭ್ರಮೆ. ಕೆಲವರಿಗೆ ಎಲ್ಲಾ ಕಾಲವೂ ಸುವರ್ಣ ಯುಗವೇ! ಕೆಲವರಿಗೆ ಎಲ್ಲಾ ಕಾಲವೂ ಅನಿಷ್ಟ ಕಾಲವೇ. ಆದರೆ ಹಿಂದಿನ ದಿನಗಳು ಭವ್ಯವಾಗಿತ್ತು ಎಂಬ ಭ್ರಮೆ ಇಂದಿನ ದಾರಿದ್ರ್ಯದ ನೋವನ್ನು ಸ್ವಲ್ಪಮಟ್ಟಿಗೆ ಮರೆಸುತ್ತದೆ: "ನನ್ನಜ್ಜನಿಗೊಂದು ಆನೆ ಇತ್ತು" ಎಂದು ಹೇಳಿಕೊಂಡಂತೆ. ನಮ್ಮ ಇತಿಹಾಸದ ಬಗ್ಗೆ ನಮಗೆ ಹೆಮ್ಮೆ ಬೇಕು. ಆದರೆ ಅದಕ್ಕೂ ಮುಖ್ಯವಾಗಿ ಅದರ ಕುರಿತು ವಿವೇಚನೆ, ವಿಶ್ಲೇಷಣೆ ಅಗತ್ಯ. ಅದಕ್ಕೆ ನಮ್ಮಲ್ಲಿ ಶಕ್ತಿ ಬೇಕು. ಇತಿಹಾಸ ಪ್ರಜ್ಞೆಯನ್ನು ಬದಿಗೊತ್ತಿ ಇತಿಹಾಸವೆಂದು ನಂಬಿದ್ದನ್ನು ಆರಾಧಿಸುವ ಮನೋಧರ್ಮ ಕೇವಲ ಭ್ರಮೆಯನ್ನು ಮಾತ್ರ ಹುಟ್ಟುಹಾಕೀತು, ಅದಕ್ಕೆ ಹೆಚ್ಚಿನ ಹುಲ್ಲು-ಹಿಂಡಿ ಹಾಕಿದಂತಾದೀತು.

ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ನಾವು ರಚಿಸುವಾಗ ಜನರ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಂಶಗಳನ್ನು ಗುರುತಿಸಿ ವಿವರಿಸಿದರೆ ಹೆಚ್ಚು ಅರ್ಥಪೂರ್ಣವಾದೀತು. ಇದೆಲ್ಲಾ ಆಳರಸರ ಕೃಪೆ ಎನ್ನುವುದಕ್ಕಿಂತ ಆಳಿಸಿಕೊಂಡವರ ಬದುಕು, ನೀತಿ, ಆಲೋಚನಾಕ್ರಮ ಇತ್ಯಾದಿಗಳನ್ನು ವಿಶ್ಲೇಷಿಸಿದರೆ ಹೆಚ್ಚು ಸೂಕ್ತವಾದೀತು. ನಮ್ಮ ಬದುಕು ಮತ್ತು ಅದನ್ನು ರೂಪಿಸುವ, ಅಥವಾ ಅದು ಸೃಜಿಸುವ ಆಲೋಚನಾ ಕ್ರಮಗಳು ನಮ್ಮ ಸಂಸ್ಕೃತಿ. ನಮ್ಮಲ್ಲಿರುವ ಅಮೋಘ ಕೋಟೆಕೊತ್ತಲಗಳು, ಭವ್ಯ ದೇವಾಲಯಗಳು, ಕಲೆಯ ಬೀಡುಗಳು ನಮ್ಮ ಸಾಧನೆಗಳು ಹೌದು. ಆದರೆ ಅವುಗಳು ಜನರ ಬದುಕನ್ನು ಪ್ರತಿನಿಧಿಸುತ್ತವೆಯೇ? ಅಥವಾ ಎಷ್ಟರಮಟ್ಟಿಗೆ ಪ್ರತಿನಿಧಿಸುತ್ತವೆ? ನಮ್ಮ ಸಂಸ್ಕೃತಿಯನ್ನು ನಾವು ವಿವರಿಸುವಾಗ ನಮ್ಮ ಜಾನಪದವನ್ನು ನಾವು ಹೊರಗಿಟ್ಟಂತೆ ಕಾಣುತ್ತದೆ. ಜಾನಪದವು ನಮ್ಮ ಬದುಕಿನ ನೇರ, ನಿಷ್ಠುರ ಪ್ರತಿಬಿಂಬ. ಅದು ನಮ್ಮ ಸುತ್ತಮುತ್ತ ಇದೆ. ಅದರಲ್ಲಿ ಕೆಲವು ಪದರುಗಳು ಹೆಚ್ಚು ಜೀವಂತವಾಗಿವೆ ಅಥವಾ ಹಿಂದೆ ಜೀವಂತವಾಗಿದ್ದ ಬದುಕಿಗೆ ಸಾಕ್ಷಿಗಳಾಗಿ ಉಳಿದಿವೆ. ಅದಕ್ಕೆ ನಿರ್ದಿಷ್ಟ ಕಾಲದ ಚೌಕಟ್ಟನ್ನು ಹಾಕುವುದು ಕಷ್ಟ ಎಂದಮಾತ್ರಕ್ಕೆ ಅದು ಅವಗಣನೆಗೆ ಯೋಗ್ಯವೇ? ಸಂಸ್ಕೃತಿಗೆ ಕಾಲಮಿತಿಗಳನ್ನು ಹಾಕುವುದು ಸಾಧ್ಯವೇ ಅಥವಾ ಸೂಕ್ತವೇ? ಅದರ ಕಾಲಚೌಕಟ್ಟು ಸ್ಥೂಲವಾಗಿಯೇ ಇರಬೇಕು. ಅಲ್ಲಿ ಅದರ

ಕಾಲಘಟ್ಟವು ಅರ್ಥಪೂರ್ಣವಾದಂತೆ ಕಾಲಗಣನೆಯು ಆಗಲು ಸಾಧ್ಯವಿಲ್ಲ. ಅದು ಸಾಮಾನ್ಯ ಈ ಕಾಲದ್ದು ಎಂದು ನಾವು ಗುರುತಿಸಲು ಸಾಧ್ಯವಾದರೆ ನಾವು ನಮ್ಮ ಸಂಸ್ಕೃತಿಯ ಸ್ವರೂಪ, ರೂಪರೇಷೆಗಳನ್ನು ಜಾನಪದದಲ್ಲಿ ಕಂಡುಕೊಳ್ಳಲು ಸಾಧ್ಯ. ಅಲ್ಲಿಯ ವಿವರಗಳನ್ನು ನಿರ್ದಿಷ್ಟ ಮಾಹಿತಿಗಳೆಂದು ಗ್ರಹಿಸದೆ ಒಟ್ಟು ಆಶಯಗಳೆಂದು ತಿಳಿದರೆ ಅವುಗಳು ಹೆಚ್ಚು ಉಪಯೋಗಿ. ಸಮಾಜವು ತನ್ನ ವಿಚಾರಗಳನ್ನು, ಸಂವೇದನೆಗಳನ್ನು ಕೇವಲ ಮೌಖಿಕವಾಗಿ ತಿಳಿಸುವ ಒಂದು ಘಟ್ಟವನ್ನು ದಾಟಿ ಬರವಣಿಗೆಯ ಉಪಯೋಗವನ್ನು ಕಂಡುಕೊಂಡ ಘಟ್ಟವನ್ನು ತಲುಪಿದರೆ ಇತಿಹಾಸ ರಚನೆಗೆ ಬೇಕಾದ ಆಕರಗಳ ಸ್ವರೂಪ ಬದಲಾಗುತ್ತದೆ, ಅಷ್ಟೆ ಆ ಬದಲಾವಣೆಗಳನ್ನು ನಿರ್ವಹಿಸುವ ಹೊಣೆಗಾರಿಕೆ ಇತಿಹಾಸಕಾರನದ್ದು. ಶಾಸನಗಳನ್ನು ಅಥವಾ ಇತರ ಬರವಣಿಗೆಗಳಲ್ಲಿ ಬಂದಿಯಾದ ವಿಚಾರಗಳನ್ನು ಇತಿಹಾಸಕಾರರು ಬಳಸಿಕೊಳ್ಳುವಾಗ, ನೇರವಾಗಿ, ಮುಗ್ಧರಾಗಿ ಬಳಸಿಕೊಳ್ಳುವುದಿಲ್ಲ. ಅವುಗಳನ್ನು ವಿವೇಚನೆಗೆ ಒಳಪಡಿಸಿಯೇ ಅವುಗಳೆಷ್ಟು ಸತ್ಯಸಂಧರು, ಹೇಗೆ ಸತ್ಯವನ್ನು ಮರೆಮಾಚಲು ಉದ್ಯುಕ್ತವಾಗಿವೆ ಎಂಬುದನ್ನು ನಿರ್ಧರಿಸುವ ಕೆಲಸ ಇತಿಹಾಸಕಾರ ಮಾಡುತ್ತಾನೆ. ಅಥವಾ ಬೇರೆಬೇರೆ ಆಕರಗಳನ್ನು ಕಟಕಟೆಯಲ್ಲಿ ನಿಲ್ಲಿಸಿ ಅವುಗಳಿಂದ ಸತ್ಯಾಸತ್ಯತೆಗಳನ್ನು ಹೊರಗೆಡಹಬಲ್ಲ ಪರಿಣತರು ಆ ಕೆಲಸವನ್ನು ಇತಿಹಾಸಕಾರರ ಪರವಾಗಿ ಮಾಡುತ್ತಾರೆ. ಆದರೆ ಇತಿಹಾಸಕ್ಕೆ ಸಾಕ್ಷಿಯಾಗಿ ಯಾರನ್ನು ಕರೆಯಿಸಬೇಕು ಎಂಬ ನಿರ್ಧಾರ ಇತಿಹಾಸಕಾರನದ್ದೇ ಆಗುತ್ತದೆ. ಈ ಸಾಕ್ಷಿಗಳ ಬಗ್ಗೆ ಇತಿಹಾಸಕಾರನ ನಿಲುವು ಇತಿಹಾಸ ರಚನೆಯಲ್ಲಿ ಹಾಗೂ ಆತ ರಚಿಸುವ ಇತಿಹಾಸದ ಸ್ವರೂಪದ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುತ್ತವೆ.

ನಮ್ಮ ಸಂಸ್ಕೃತಿ ನಮ್ಮ ಬದುಕಿನ ಕನ್ನಡಿ ಎನ್ನುವುದು ನಿಜವಾದರೆ ನಮ್ಮ ಜಾನಪದವು ಅದರ ನಿಜವಾದ, ನಿಷ್ಠುರವಾದ ಕನ್ನಡಿಯಾಗುತ್ತದೆ. ಆದರೆ ಅದನ್ನು ಇತಿಹಾಸಕಾರರು ಸಾಮಾನ್ಯವಾಗಿ ಉಪೇಕ್ಷಿಸಿದ್ದಾರೆ. ನಾವು "ಮಾರ್ಗ", "ದೇಸಿ" ಎಂಬ ವಿಭಜನೆಯನ್ನು ಸುಲಭವಾಗಿ ಮಾಡುತ್ತೇವೆ; ಆದರೆ ನಮ್ಮ ಸಂಸ್ಕೃತಿಯ ವಕ್ತಾರರಾಗಿ ನಾವು "ಮಾರ್ಗ"ವನ್ನು ಬಹುತೇಕ ನೆಚ್ಚಿಕೊಳ್ಳುತ್ತೇವೆ. ಏಕೆಂದರೆ ಅದು ನಮ್ಮ ಜಾಹೀರಾತುಗಳಿಗೆ, "ಕಟ್-ಔಟ್"ಗಳಾಗಿ ಹೆಚ್ಚು ಉಪಯೋಗಿಯಾಗಿ ಕಂಡುಬರುತ್ತದೆ. ಅದರಲ್ಲಿ ಭವ್ಯತೆ ಸಾಕಷ್ಟಿದೆ. ಅಂಥವುಗಳೊಡನೆ ನಮ್ಮ ಹೆಸರನ್ನು ಜೋಡಿಸಿಕೊಳ್ಳಲು ನಮ್ಮಲ್ಲಿ ಹೆಚ್ಚು ಉತ್ಸುಕತೆ ಇದೆ. ನಮ್ಮ ದೂರದ ನೆಂಟರು ಸಾಕಷ್ಟು ಪ್ರಸಿದ್ಧರಾಗಿದ್ದರೆ, ಪ್ರಭಾವಿಗಳಾಗಿದ್ದರೆ, ಅವರ ಹೆಸರನ್ನು ಹೇಳಿಕೊಳ್ಳಲು, ಅವರ ಸಂಬಂಧದ ಬಗ್ಗೆ ವ್ಯಾಖ್ಯಾನಿಸಲು ನಮಗಿರುವ ಹುಮ್ಮಸ್ಸು ನಮ್ಮ ಬಡ ತಂದೆಯ ಹೆಸರನ್ನೋ, ಯಾವ ಪ್ರಸಿದ್ಧಿಯನ್ನೂ ಹೊತ್ತಿರದ ಬಡ ಅಣ್ಣನ ಹೆಸರನ್ನೋ ಹೇಳಿಕೊಳ್ಳುವುದರಲ್ಲಿ ಇರುವುದಿಲ್ಲ. ಇದು ನಮ್ಮಲ್ಲಿ ಅನೇಕರಲ್ಲಿ ಕಂಡುಬರುವ ಸ್ವಭಾವ. ನಮ್ಮ ಸಂಸ್ಕೃತಿಯ ವ್ಯಾಖ್ಯಾನದಲ್ಲೂ ಇದು ಕಾಣಬರುತ್ತದೆ. ಆದರೆ "ದೇಸಿ"ಯ ವಾಸ್ತವತೆಯನ್ನು ಕಡೆಗಣಿಸುವುದು ಸಾಧ್ಯವೇ? ನಾವು ನಮ್ಮ ಸಂಸ್ಕೃತಿ ಎನ್ನುವಾಗ ನಮ್ಮಲ್ಲಿ ಯಾರ ಸಂಸ್ಕೃತಿ ಎಂಬ ಪ್ರಶ್ನೆಯನ್ನು ತಡೆಹಿಡಿಯಲು ಸಾಧ್ಯವಿಲ್ಲ. ನಮ್ಮಲ್ಲಿ ದೊಡ್ಡವರ ಭವ್ಯ ಸಂಸ್ಕೃತಿ ಇದೆ, ಸಾಮಾನ್ಯ ಜನರ ಸಂಸ್ಕೃತಿ ಬೇರೆ ಇದೆ. ಅದರೊಳಗೆ ಭವ್ಯತೆ ಇಲ್ಲದಿದ್ದರೂ ಅದು ಒಂದು ನಿರ್ದಿಷ್ಟ, ಭಿನ್ನವಾದ ಸಂಸ್ಕೃತಿಯೇ. ಒಂದನ್ನು ಸಾಕಷ್ಟು ಹಾಡಿ, ಹೊಗಳಿ, ಇನ್ನೊಂದನ್ನು ಮುಜುಗರದಿಂದ ಬದಿಗೊತ್ತಿದರೆ ನಮ್ಮ ಸಮಾಜದ ಬದುಕನ್ನು ಪ್ರಾಮಾಣಿಕವಾಗಿ ಚಿತ್ರಿಸಿದಂತಾಗುವುದಿಲ್ಲ. ರಾಜನ ಆಸ್ಥಾನದಲ್ಲಿರುವ

ಕವಿವರೇಣ್ಯ ತನ್ನನ್ನು ಪೋಷಿಸಿಕೊಂಡುಬಂದಿರುವ ರಾಜನನ್ನು ಹೊಗಳಿದ್ದನ್ನು, ಅಥವಾ ಅದೇ ರಾಜ ತನಗೋಸ್ಕರ ಬರೆಸಿದ ಶಾಸನಗಳನ್ನು ನಂಬಲು ನಮಗೆ ಕಷ್ಟವಾಗುವುದಿಲ್ಲ. ಆದರೆ ಅದೇ ರಾಜನ ಬಗ್ಗೆ ಜನ ಏನು ಆಡಿಕೊಳ್ಳುತ್ತಾರೆ ಎಂಬುದು ಜಾನಪದದಲ್ಲಿ ಕೇಳಿಬಂದರೆ ಅದನ್ನು ಪರಿಗಣಿಸಲು ನಾವು ಹಿಂಜರಿಯುತ್ತೇವೆ. ರಾಜನ ಆಸ್ಥಾನದಲ್ಲಿ ಬೆಳಗುತ್ತಿರುವ ಕವಿ ಅಲ್ಲಿ ಖೈದಿಯಾಗಿರುವುದೂ ಅಷ್ಟೇ ಸತ್ಯ. ಅದು ಆತನಿಗೆ "ಸತ್ಯಂ ವದ" ಎಂಬ ದೀಕ್ಷೆಯನ್ನು ನೀಡುವುದಿಲ್ಲ. ಆತ ನುಡಿಯುವ ಸತ್ಯ ಆತ ಹೊಗಳುವ ನುಡಿ. ಇದು ರಾಜರು ಬರೆಸುವ ಶಾಸನಗಳಿಗೂ ಬಹುತೇಕ ಅನ್ವಯವಾಗುತ್ತದೆ. ಅದರೊಳಗೆ ಝಗಝಗಿಸುವ ಸ್ತುತಿತೋರಣಗಳನ್ನು ಕೆಲವು ಇತಿಹಾಸಕಾರರು ಮುಗುಳ್ನಕ್ಕು ಕಡೆಗಣಿಸಲು ಶಕ್ತರಾಗಿದ್ದಾರೆ. ಆದರೆ ಎಷ್ಟೋಬಾರಿ ಅವುಗಳನ್ನು ಜನಪದರ ಭಾವನೆಗಳಿಗೆ ಹೋಲಿಸಿನೋಡುವ ಅಗತ್ಯವನ್ನು ಕಂಡುಕೊಂಡಿಲ್ಲ. ಶಾಸನವು ಬರಹದಲ್ಲಿದ್ದದ್ದು ಅದರ ಹಿರಿಮೆ; ಜಾನಪದವು ಮೌಖಿಕವಾಗಿ ನಮಗೆ ಒದಗಿ ಬಂದದ್ದು ಅದು ನಂಬಲರ್ಹವೇ ಎಂಬ ಪ್ರಶ್ನೆಯನ್ನೂ ನಮ್ಮೆದುರಿಗೆ ಎಸೆದಂತಿದೆ. ಆದರೆ ಅದರ ನಿಲುವು ಬೇರೆಯೇ ಆಗಿ ನಮಗೆ ಲಭ್ಯವಾದರೆ, ಅದನ್ನು ಪರಿಗಣಿಸುವ ಅಗತ್ಯವಿಲ್ಲವೇ? ಇದು ನಮ್ಮ ಸಾಂಸ್ಕೃತಿಕ ಜೀವನವನ್ನು ನಿರೂಪಿಸುವ ಕೆಲಸದಲ್ಲಿ ನಾವೆತ್ತಬೇಕಾದ ಪ್ರಶ್ನೆ. ಮೌಖಿಕ ಆಕರಗಳನ್ನು ಬಳಸುವ ಅಗತ್ಯವನ್ನು, ಬಗೆಗಳನ್ನು ಸಾಕಷ್ಟು ವಿವರವಾಗಿ ವಿದ್ವಾಂಸರುಗಳು ಚರ್ಚಿಸಿದ್ದಾರೆ. ಯಾನ್ ವಾನ್ಸಿನಾ (Jan Vansina. 2006(2009)). ಪೌಲ್ ಥೋಂಪ್ಸನ್ Paul Thompson. 1978(2000)) ಮೊದಲಾದವರ ಸಂಶೋಧನೆಗಳು ನಮ್ಮೆದುರಿಗೆ ಇವೆ. ಆದರೆ ನಮ್ಮ ಈಗಿನ ಸ್ಥಿತಿಯಲ್ಲಿ ಇತಿಹಾಸಕಾರರು ಚಿತ್ರಿಸುವ ಸಂಸ್ಕೃತಿ ಬೇರೆ. ಜಾನಪದದಲ್ಲಿ ಪ್ರತಿಫಲಿತಗೊಳ್ಳುವ ಸಂಸ್ಕೃತಿ ಬೇರೆ. ಒಂದಕ್ಕೊಂದು ಸಂಬಂಧವಿಲ್ಲ ಎಂಬಂತೆ ನಮ್ಮ ಸಂಸ್ಕೃತಿಯ ಕಥನವಿದೆ. ಇತಿಹಾಸದ ಎಲ್ಲಾ ಆಯಾಮಗಳನ್ನು ಜಾನಪದದ ಬೆಳಕಿನಲ್ಲಿ ವಿವರಿಸಲು ಸಾಧ್ಯವಿಲ್ಲ. ಇದು ಆಕರವಾಗಿ ಜಾನಪದದ ಇತಿಮಿತಿ. ಎಲ್ಲಾ ಆಕರಗಳಿಗೂ ಅದರದರ ಇತಿಮಿತಿಗಳಿವೆ. ಆದರೆ ಎಲ್ಲಿ ಸಾಧ್ಯವೋ ಅಲ್ಲಿ ಜಾನಪದವನ್ನು ಉಪಯೋಗಿಸಲು ಅಡ್ಡಿ ಇರಬಾರದು. ಅದರ ಧ್ವನಿ, ನಿಲುವುಗಳು ಇತಿಹಾಸಕಾರರು ಸಾಮಾನ್ಯವಾಗಿ ನಂಬುವ ಆಕರಗಳಿಂದ ಭಿನ್ನವಾಗಿರುವುದೇ ವಿಶೇಷ. ಅವುಗಳನ್ನು ಗುರುತಿಸುವುದು ಅಗತ್ಯ. ಆಗ ನಮ್ಮ ಸಂಸ್ಕೃತಿಯ ಸ್ವರೂಪ, ಆಶಯಗಳನ್ನು ಹೆಚ್ಚು ವಿಸ್ತೃತವಾಗಿ, ಪ್ರಾಮಾಣಿಕವಾಗಿ ಚಿತ್ರಿಸಲು ನಾವು ಶಕ್ತರಾಗುತ್ತೇವೆ. ನಾವು ಹಾಕಿಕೊಂಡಿರುವ ಕಣ್ಣಾಪುಗಳೇ ನಮ್ಮ ದೃಷ್ಟಿಯನ್ನು ತೀರ ನೇರಗೊಳಿಸಿವೆ. ಕುದುರೆಗಳಿಗೆ ಅವು ಅಗತ್ಯ. ಇತಿಹಾಸಕಾರರಿಗೆ ಅವು ಅಡ್ಡಿ, ಅಷ್ಟೆ.

ಇತ್ತೀಚೆಗೆ ನಾವು ಕೆಳಸ್ತರದ ಇತಿಹಾಸವನ್ನು ಅನಾವರಣಗೊಳಿಸುವ ಅಗತ್ಯವನ್ನು ಸಾಕಷ್ಟು ಮನಗಂಡಿದ್ದೇವೆ. ಸಬಾಲ್ಟರ್ನ್ ಇತಿಹಾಸಕಾರರ ಭಿನ್ನವಾದ ಒಂದು ಪಂಗಡ ನಡೆಸಿದ ಪ್ರಯೋಗದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಅವರು ಬರೆದ ಇತಿಹಾಸವು ಮುಖ್ಯವಾಹಿನಿಯ ಇತಿಹಾಸಕ್ಕೆ ಬದಲಿಯಾದ ಇತಿಹಾಸವಾಗಬಲ್ಲುದೇ? ಅಥವಾ ಅದೊಂದು ಭಿನ್ನ ಕಥನವಾಗಬಹುದಷ್ಟೆಯೇ? ಇದರ ಕುರಿತಾಗಿ ಸಹ ಸಾಕಷ್ಟು ಚರ್ಚೆ ನಡೆದಿದೆ. ಪ್ರಾಯಶಃ ಇತಿಹಾಸವನ್ನು ನಿರ್ದಿಷ್ಟ ಕಥನಗಳನ್ನು ಮೀರಿ ಪ್ರತಿಪಾದಿಸತೊಡಗಿದರೆ ನಾವೆಲ್ಲೋ ಇತಿಹಾಸದ ಹೇರಿಕೆಯನ್ನು ಅನುಮೋದಿಸಲು ತೊಡಗಿದ್ದೇವೆಯೋ ಎಂಬ ಭೀತಿಯನ್ನು ಎದುರಿಸಬೇಕಾಗುತ್ತದೆ. Historiography - ಇತಿಹಾಸ ರಚನಾ ಸಂಪ್ರದಾಯ

ಅಥವಾ ಕಾಲಕಾಲಕ್ಕೆ ಇತಿಹಾಸವನ್ನು ರಚಿಸಿದ ಕ್ರಮಗಳನ್ನು ನಿರಾಕರಿಸಿ ಒಂದು ದೇಶಕ್ಕೆ ಒಂದು ಅಧಿಕೃತವಾದ ಇತಿಹಾಸವಿದೆ, ಅದನ್ನು ಜನ ಒಪ್ಪಬೇಕಾದದ್ದು ಅವರ ಕರ್ತವ್ಯ, ಇಲ್ಲದಿದ್ದರೆ ಅವರಿಗೆ ದೇಶದ್ರೋಹದ ಪಾಪ ಅಂಟೀತು, ಅದಕ್ಕೆ ಸರಿಯಾದ ಶಿಕ್ಷೆಗೆ ಅವರು ಪಾತ್ರರಾಗಬೇಕಾದೀತು ಎಂಬ ಸೂಚನೆ ಇದರಲ್ಲಿದೆ. ಇತಿಹಾಸವನ್ನು "ಇತಿಹಾಸ" ಅಂದರೆ "ಹೀಗೆ ನಡೆದದ್ದು" ಎಂಬರ್ಥದಲ್ಲಿ ವ್ಯಾಖ್ಯಾನಿಸುವ ಬದಲು ಅದೊಂದು "ಶೋಧನೆ", "ಹುಡುಕುವಿಕೆ", ಅದು ನಿರಂತರವಾಗಿ ನಡೆಯಬೇಕಾದದ್ದು ಎಂದು ತಿಳಿದರೆ ಇತಿಹಾಸವು ಒಂದು ಹೆಪ್ಪುಗಟ್ಟಿದ ಅಥವಾ ಗೊಡ್ಡಾಗಿ ಬಿದ್ದಿರುವ ವಿಚಾರವಲ್ಲ, ಅಥವಾ ಕೇವಲ ಆರಾಧನಾ ಯೋಗ್ಯವಾದ ನಿರ್ದಿಷ್ಟ ವಿಷಯವಲ್ಲ, ಬದಲಾಗಿ ಒಂದು ಕ್ರಿಯಾಶೀಲವಾದ, ಬದಲಾಗುವ ವಿಚಾರ ಎಂಬುದು ಮನದಟ್ಟಾಗುತ್ತದೆ. "ಹೊಸ ಇತಿಹಾಸ"ವನ್ನು ಬರೆಯುವುದು ಒಂದು ಹುಚ್ಚುತನ, ಇತಿಹಾಸವನ್ನು ತಿರುಚಿ ವಿಕಟ ಸಂಭ್ರಮವನ್ನು ಪಡೆಯುವವರ ಕೆಲಸ, ಎನ್ನುವವರು ಇತಿಹಾಸ ಒಂದೇ, ಅದು ಬದಲಾಗುವುದಿಲ್ಲ ಎಂಬ ನಂಬಿಕೆಯನ್ನು ಪೆದ್ದರಂತೆ ಹೊತ್ತವರು. ಬದಲಾಗುವ ಇತಿಹಾಸ ಎಂದರೆ ಬದಲಾಗುವ ಇತಿಹಾಸದ ಜ್ಞಾನ. ಇತಿಹಾಸವನ್ನು ಗಂಭೀರವಾಗಿ ಓದಿದವರು, ಅದರ ರಚನೆ ಹೇಗಾಗುತ್ತದೆ ಎಂದು ತಿಳಿದವರು ಇದನ್ನು ಅರ್ಥಮಾಡಿಕೊಳ್ಳಲು ಶಕ್ತರಾಗುತ್ತಾರೆ. ಇತಿಹಾಸವು ಬದಲಾಗುವುದಿಲ್ಲ ಎಂಬ ಮೊಂಡು ನಂಬಿಕೆಯ ಗುಲಾಮರಾಗುವುದಿಲ್ಲ.

ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ನಾವು ರಚಿಸುವಾಗ ನಮ್ಮ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಬರೆಯುವುದು ಸರಿ ಹಾಗೂ ಅದು ವಾಡಿಕೆ ಕೂಡ. ಮಹಿಳೆಯರು ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುವ, ಉಳಿಸುವವರು ಎಂದು ನಮ್ಮ ಸಮಾಜ ನಂಬಿದೆ. ಆದರೆ ಅದರೊಳಗೆ ನೆಲೆಸಿದ ಕೆಲವು ವಾಡಿಕೆಗಳ ಬಗ್ಗೆ ಕೆಲವು ಮಾತುಗಳನ್ನು ನಾನು ಈಗಾಗಲೇ ಹೇಳಿದ್ದೇನೆ. ಶಿಷ್ಟ ಆಕರಗಳಲ್ಲಿ ಮಹಿಳೆಯರ ಚಿತ್ರಣಗಳು ಹೇಗೆ ದೊರಕುತ್ತವೆ ಎನ್ನುವ ಬಗ್ಗೆ ಸೂಚಿಸಿದ್ದೇನೆ. ಆದರೆ ಇದು ಸಮಾಜದ ಒಟ್ಟು ನಿಲುವಾಗಿ ಪರಿಗಣಿಸತಕ್ಕದ್ದೇ ಎಂಬುದು ನಮ್ಮನ್ನು ಕಾಡುವ ಪ್ರಶ್ನೆಯಾಗಿಯೇ ಉಳಿಯುತ್ತದೆ. ಹಾಗಿದ್ದರೆ ಯಾವ ಆಕರಗಳು ಇದಕ್ಕೆ ಸೂಕ್ತ ಉತ್ತರ ನೀಡಬಲ್ಲುದು? ಒಟ್ಟು ಚಿತ್ರಣವನ್ನು ಪಡೆಯುವುದು ದುಸ್ತರವೆಂದು ಒಪ್ಪಿಕೊಂಡರೂ, ಇದ್ದದ್ದಕ್ಕೆ ಪರ್ಯಾಯವಾದ ಚಿತ್ರಣಗಳು ಕೆಲವು ಬೇರೆ ಆಕರಗಳಲ್ಲಿ ಸಿಗಬಹುದೆಂಬ ಆಶಯವನ್ನಿಟ್ಟುಕೊಳ್ಳುವುದು ತಪ್ಪೇನಲ್ಲ. ನಮ್ಮ ನಾಣ್ಣುಡಿಗಳಲ್ಲಿ, ಗಾದೆಯ ಮಾತುಗಳಲ್ಲಿ ಕೆಲವು ಚಿತ್ರಣಗಳು ಲಭ್ಯವಿವೆ. ಇವುಗಳನ್ನು ಗಮನಿಸಿ ಮಹಿಳೆಯರ ಬಗ್ಗೆ ನಮ್ಮ ನಿಲುವುಗಳ ವಿವಿಧ ಆಯಾಮಗಳನ್ನು ನಾವು ಗುರುತಿಸಲು ಸಾಧ್ಯ. ಲೈಡನ್ ವಿಶ್ವವಿದ್ಯಾಲಯದ ಮಿನೆಕಿ ಶಿಪ್ಪರ್ ಎಂಬಾಕೆ ಬರೆದ **Never Marry a Woman with Big Feet: Women in Proverbs from Around the World** ಎಂಬ ಪುಸ್ತಕ ಈ ನಿಟ್ಟಿನಲ್ಲಿ ನನ್ನನ್ನು ಆಕರ್ಷಿಸಿತು (Mineke Schipper, 2004 (2017)). ಬೇರೆಬೇರೆ ಸಮಾಜಗಳು ಮಹಿಳೆಯರು ಯಾವ ನಿಲುವನ್ನು ತಾಳಿದ್ದವು ಎಂಬ ಅಧ್ಯಯನವನ್ನು ಅಲ್ಲಿ ಪ್ರಚಲಿತವಿರುವ ಗಾದೆಗಳ ಮೂಲಕ ಮಾಡುವ ಕ್ರಮದಲ್ಲಿ ನವೀನತೆ ಇದೆ. ಅವರು 16,000 ಗಾದೆಗಳನ್ನು ಜಗತ್ತಿನ ಬೇರೆಬೇರೆ ದೇಶಗಳಿಂದ, ಸಮಾಜಗಳಿಂದ, ಭಾಷೆಗಳಿಂದ ಸಂಗ್ರಹಿಸಿ ಅವುಗಳನ್ನು ತಮ್ಮ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅವುಗಳಲ್ಲಿ ಅನೇಕ ಸಾಮ್ಯವನ್ನು ಕಂಡಿದ್ದಾರೆ, ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಅವುಗಳಲ್ಲಿ

ಹಲವು ಹೊಸ ಹೊಳಹುಗಳು ಲಭ್ಯವಿವೆ. ಈ ಎಲ್ಲಾ ಗಾದೆಗಳು ಯಾವ ಕಾಲಕ್ಕೆ ಹುಟ್ಟಿಕೊಂಡವು, ಯಾರು ಸೃಷ್ಟಿ ಮಾಡಿದರು ಎಂಬ ಪ್ರಶ್ನೆಗೆ ನಮ್ಮಲ್ಲಿ ಉತ್ತರವಿಲ್ಲದೇ ಹೋಗಬಹುದು. ಇದು ಜನಪದ ವಿಚಾರಗಳಲ್ಲಿ ಹೆಪ್ಪುಗಟ್ಟಿರುವ ಮೌನ. ಆದರೆ ಗಾದೆನಾಣ್ಣುಡಿಗಳು ನಮ್ಮೊಡನೆ ನೆಲಸಿಕೊಂಡು, ವ್ಯವಹರಿಸಿಕೊಂಡು ಇರುವಂಥವು. ಅವುಗಳನ್ನು ನಮ್ಮದಲ್ಲ ಎಂದು ನಿರಾಕರಿಸುವುದು ಸಾಧ್ಯವೇ? ಅವುಗಳು ಹೇಳುವ ಮಾತುಗಳಲ್ಲಿ, ಅವುಗಳ ಧಾಟಿಯಲ್ಲಿ ಕೆಲವು ನಿರ್ದಿಷ್ಟ ನಿಲುವುಗಳಿವೆ ಎಂಬ ಅರಿವು ನಮ್ಮಲ್ಲಿದ್ದರೆ ಸಾಕು. ಅವುಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬ ಸವಾಲಿಗೆ ನಾವೇ ಉತ್ತರ ಹುಡುಕಲು ಶಕ್ತರಾದೇವು.

ಇದರೊಳಗೆ ಇನ್ನೊಂದು ವಿಚಾರವನ್ನೂ ಹೇಳಬೇಕು. ನಾವು ಜಾನಪದ, ಗಾದೆಗಳನ್ನು ಬಳಸಿಕೊಳ್ಳುವಾಗ ಅವು ಎರಡು ಬಗೆಯಲ್ಲಿ ನಮಗೆ ಲಭ್ಯವಾಗುತ್ತವೆ. ಗಾದೆಗಳು ಮಹಿಳೆಯರ ಬಗ್ಗೆ ಏನು, ಅಥವಾ ಏನೆಲ್ಲಾ ಹೇಳುತ್ತವೆ ಎನ್ನುವಾಗ ಅವುಗಳು ನಮ್ಮ ಆಕರಗಳಾಗುತ್ತವೆ. ಆದರೆ ಈ ಗಾದೆಗಳು ಅವು ಹುಟ್ಟಿಕೊಂಡ ಸಮಾಜದ ಒಟ್ಟು ಕನ್ನಡಿಯಾಗಿಯೂ ಅವು ನಮಗೆ ಒದಗಿಬರುತ್ತವೆ. ಇವುಗಳನ್ನು ಗ್ರಹಿಸುವ ಶಕ್ತಿ ನಮ್ಮಲ್ಲಿರಬೇಕು, ಅಷ್ಟೆ. ಶಾಸ್ತ್ರಗಳು, ಕವಿವರೇಣ್ಯರು ಮಹಿಳೆಯರ ಬಗ್ಗೆ ಏನು ಹೇಳುತ್ತಾರೆ ಎಂಬುದಕ್ಕಿಂತ ನಮ್ಮಲ್ಲಿರುವ ಗಾದೆಗಳು ಹೆಚ್ಚು ನೇರವಾಗಿ, ಪ್ರಾಮಾಣಿಕವಾಗಿ ಕೆಲವು ವಿಚಾರಗಳನ್ನು ಹೇಳುತ್ತವೆ. ಮುಲಾಜಿಲ್ಲದೆ ಹೇಳುತ್ತವೆ. ಶಾಸ್ತ್ರಗಳು ಹೇಳುವುದು ಸುಳ್ಳು, ಗಾದೆಗಳು ಅರುಹುವುದು ಸತ್ಯ ಎಂಬುದು ನನ್ನ ವಾದವಲ್ಲ. ಅವುಗಳು ಪರ್ಯಾಯ ಸತ್ಯಗಳನ್ನು ಹೇಳಲು ಶಕ್ತ ಎಂಬುದಷ್ಟೇ ನನ್ನ ವಾದ. ಶಾಸ್ತ್ರಗಳನ್ನು ಉದಾಹರಿಸುವಲ್ಲಿ ನಮಗಿರುವ ಶ್ರದ್ಧೆ ಗಾದೆಗಳ ಬಗ್ಗೆ ನಮಗೇಕಿಲ್ಲ ಎಂಬುದಷ್ಟೇ ನನ್ನ ಪ್ರಶ್ನೆ. ಸತ್ಯ ಎಂಬುದು ಒಂದೇ ಎಂಬ ನಮ್ಮ ನಿಲುವು ಉಳಿದದ್ದೆಲ್ಲಾ ಅಸತ್ಯವೆಂದು ಪರಿಗಣಿಸುತ್ತದೆ. ಇದೊಂದು ನಾವು ನಮಗರಿವಿಲ್ಲದೇ ಸಾಕಿಕೊಂಡಿರುವ ಮೂಲಭೂತವಾದ.

ಜನಪದ ಕಥೆಗಳು ನಮಗೆ ಮೌಖಿಕವಾಗಿ ಬಂದಂಥವು. ಅವುಗಳು ಸಂಸ್ಕೃತಿಯ ಕನ್ನಡಿ ಎಂಬುದನ್ನು ಜಾನಪದ ತಜ್ಞರು ಈಗಾಗಲೇ ಗುರುತಿಸಿದ್ದಾರೆ. ಆದರೆ ಅವುಗಳು ಯಾವ ಇತಿಹಾಸ ಸತ್ಯಗಳನ್ನು ಹೊರಗೆಡಹುತ್ತವೆ? ಎಂಬುದು ಒಂದು ನಮಗೆದುರಾಗುವ ಸವಾಲು. ಅವುಗಳನ್ನು ಬಹುತೇಕ ಅಡಗೂಲಜ್ಜಿ ಕಥೆಗಳೆಂದುಕೊಂಡು ಅವುಗಳು ಮಕ್ಕಳ ಮನೋರಂಜನೆಗಾಗಿ ಮಾತ್ರ ಇರುವಂಥವು. ಅವುಗಳನ್ನು ಇತಿಹಾಸಕ್ಕೆ ಹೋಲಿಸಿದರೆ ನಾವು ಇತಿಹಾಸಕ್ಕೂ, ಜಾನಪದಕ್ಕೂ ಅನ್ಯಾಯ ಎಸಗಿದಂತೆ ಎನ್ನುವುದುಂಟು. ಮೇಲ್ನೋಟಕ್ಕೆ ಇದು ಸರಿ. ಆದರೆ ಜನಪದ ಕಥೆಗಳಲ್ಲಿ ಕೆಲವು ವಿಶೇಷ ಒಳನೋಟಗಳು ಒದಗಿಬರುವ ಸಾಧ್ಯತೆಗಳಿವೆ. ನನಗೆ ಇತ್ತೀಚೆಗೆ ತುಳು ಜನಪದ ಕಥೆಗಳನ್ನು ಅಧ್ಯಯನಮಾಡಿ ಅವುಗಳಲ್ಲಿ ಅರುವತ್ತು ಕಥೆಗಳನ್ನು ಇಂಗ್ಲಿಷ್‌ಗೆ ನನ್ನ ಮಿತ್ರ ಪ್ರೊಫೆಸರ್ ಕೆ. ಚಿನ್ನಪ್ಪ ಗೌಡರ ಸಹಯೋಗದೊಡನೆ ಅನುವಾದ ಮಾಡುವ ಸಂದರ್ಭ ಬಂತು (Surendra Rao and Chinnappa Gowda, 2018). ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸುವಾಗ ಅಲ್ಲಿ ನನಗೆ ಒಂದು ವಿಶೇಷವಾದ ಹೊಳಹು ಕಂಡುಬಂತು. ತುಳುನಾಡಿನ ಇತಿಹಾಸ ಮತ್ತು ಸಂಸ್ಕೃತಿಗಳ ಬಗ್ಗೆ ವ್ಯಾಖ್ಯಾನಿಸುವಾಗ ನಾನು ಎಷ್ಟೋಬಾರಿ ಹೇಳಿದ್ದುಂಟು: ಮಧ್ಯಕಾಲೀನ ತುಳುನಾಡಿನಲ್ಲಿ ಆಳಿದ ಅನೇಕ ತುಂಡರಸರು ಸ್ವತಂತ್ರರಾಗಿ ಆಳ್ವಿಕೆ ನಡೆಸಲಿಲ್ಲ. ಅವರಲ್ಲಿ ಬಹುತೇಕ ಮಂದಿ ಪ್ರಭಾವಿ ಜಮೀನ್ದಾರರು, ಆ ಊರಿಗೆ ಒಡೆಯರು. ಸಾಮಾನ್ಯ ಜನರಿಗೆ ಅವರೇ

ಅರಸರು. ಇಲ್ಲಿ ಹೊಯ್ಸಳ, ವಿಜಯನಗರ ಅರಸರು ಅಥವಾ ಇಕ್ಕೇರಿ ನಾಯಕರು ಆಳ್ವಿಕೆ ನಡೆಸಿದ್ದರು, ಇಲ್ಲಿನ ತುಂಡರಸರ ಮೂಲಕ ಅಧಿಕಾರವನ್ನು ಚಲಾಯಿಸಿದ್ದರು. ಆದರೆ ಜನರ ಅನುಭವದಲ್ಲಿ ಅಧಿಕಾರವನ್ನು ಚಲಾಯಿಸಿದ್ದು ಇಲ್ಲಿಯ ಜಮೀನ್ದಾರ ವರ್ಗ. ಅವರು ರಾಜರೆಂದು ಕರೆಸಿಕೊಂಡು, ರಾಜತ್ವದ ಕೆಲವು ಚಿಹ್ನೆಗಳನ್ನು ಹೊತ್ತುಕೊಂಡು, ತುಳುನಾಡಿನ ಹೊರಗೆ ಸ್ಥಾಪನೆಗೊಂಡ ಹೆಚ್ಚು ಪ್ರಭಾವಿಗಳಾದ ರಾಜಮನೆತನಗಳಿಗೆ ಹೊಂದಿಕೊಂಡು ತಮ್ಮ ಸೀಮಿತ ವಲಯದಲ್ಲಿ ತಮ್ಮ ಆಳ್ವಿಕೆ ನಡೆಸಿದ್ದರು. ಇಲ್ಲಿಯ ಶಾಸನಗಳು ತುಳುವಿನಲ್ಲಿಲ್ಲ, ಬಹುತೇಕ ಕನ್ನಡದಲ್ಲಿವೆ. ತುಳು ರಾಜಮನೆತನಗಳು ಇನ್ನೊಬ್ಬರ ಪರವಾಗಿಯೇ ಆಳ್ವಿಕೆ ನಡೆಸಿದ್ದು ಎಂಬ ಚಿತ್ರಣ ಇಲ್ಲಿಯ ಇತಿಹಾಸವನ್ನು ವೈಭವೀಕರಿಸಲು ಸಹಾಯಕವಾಗುವುದಿಲ್ಲ ಎಂಬುದರ ಬಗ್ಗೆ ಅಸಂತೋಷ ವ್ಯಕ್ತಪಡಿಸಿದವರಿದ್ದರು. ನಮಗೊಂದು ಇತಿಹಾಸವಿದ್ದರೆ ಅದು ವೈಭವದ್ದಾಗಿರಬೇಕು ಎಂಬ ಭಾವನೆ ನಮ್ಮಲ್ಲಿ ನೆಲೆಯೂರಿದೆ. ಅದನ್ನು ಅನುಮೋದಿಸದ, ಅದನ್ನು ಭವ್ಯವಾಗಿ ಚಿತ್ರಿಸಲಾಗದ ಇತಿಹಾಸಕಾರ ನಾಲಾಯಕ್ಕು, ಅಯೋಗ್ಯ ಎಂಬ ಭಾವನೆಯೂ ನಮ್ಮಲ್ಲಿದೆ. ಆದರೆ ತುಳು ಜನಪದ ಕಥೆಗಳಲ್ಲಿ ಬರುವ ಎಲ್ಲಾ "ಅರಸರು" ನಮ್ಮ ಭವ್ಯ ಕಲ್ಪನೆಗಳನ್ನು ಎತ್ತಿಹಿಡಿಯುವಲ್ಲಿ ಉಪಯೋಗಿಯಲ್ಲ. ಅವರು ಹಳ್ಳಿಯ ಅಥವಾ ಕೆಲವು ಹಳ್ಳಿಗಳ ಒಡೆಯರಾದ ಜಮೀನ್ದಾರರು. ಕುಲೀನ ಮನೆತನದ ಒಡೆಯರು. ಅವರಿಗಿರುವುದು ಪ್ರಜೆಗಳಲ್ಲ, ಒಕ್ಕಲುಗಳು. ತನ್ನ ಒಕ್ಕಲುಗಳನ್ನು ಜಮೀನ್ದಾರನೊಬ್ಬ ಹೇಗೆ ನೋಡಿಕೊಂಡಿದ್ದ, ಅವರ ಸಂಬಂಧಗಳಲ್ಲಿ ನೆಲೆಸಿದ್ದ ಕ್ರೌರ್ಯ, ಅಧಿಕಾರದ ಹೇರಿಕೆ ಇತ್ಯಾದಿಗಳ ಚಿತ್ರಣ ಜನಪದ ಕಥೆಗಳಲ್ಲಿ ಕಾಣಬರುತ್ತದೆ. ಅಲ್ಲಿ ರಾಣಿ ಜಮೀನ್ದಾರನ ಹೆಂಡತಿ, ಕೆಲವೊಮ್ಮೆ ಒಂದೇ, ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು. ಅವರೆಲ್ಲರೂ ಮನೆಯ ದೈನಂದಿನ ಕೆಲಸಗಳಲ್ಲಿ ನಿರತರಾಗಿರುವವರು, ಅಷ್ಟೆ (Surendra Rao and Chinnappa Gowda, 2018: 30-33). ಜನಪದ ಕಥೆಗಳಲ್ಲಿ ತುಳು ಗುತ್ತಿನ ಮನೆಗಳು ಅರಮನೆಗಳಾಗಿ ಚಿತ್ರಿತಗೊಳ್ಳುತ್ತವೆ. ಜನರಿಗೆ, ಕೇಳುಗರಿಗೆ ಅರ್ಥವಾಗುವ ಚಿತ್ರಣಗಳವು. ಈ ಕಥೆಗಳನ್ನು ಹೇಳಿದವರಿಗೆ ಅಥವಾ ಕೇಳುಗರಿಗೆ ಇಲ್ಲಿಯ ಇತಿಹಾಸದ ಪಾಠವೇನೂ ಆಗಿರಲಿಲ್ಲ. ಅರಸ ಎಂಬ ಕಲ್ಪನೆ ಜನರಲ್ಲಿ ಹೇಗಿತ್ತು ಎಂಬುದು ಜನಪದಕಥೆಗಳಲ್ಲಿ ನಿರಾಳವಾಗಿ, ಸಲೀಸಾಗಿ, ಒಂದು ಮುಗ್ಧಸತ್ಯವಾಗಿ ಒಸರುತ್ತದೆ. ಇದನ್ನು ರಾಜಕೀಯ ಇತಿಹಾಸವಾಗಿ ನೋಡಬೇಕೇ ಅಥವಾ ತುಳುನಾಡಿನ ಸಂಸ್ಕೃತಿಯ ಒಂದು ಅಂಗವಾಗಿ ಕಾಣಬೇಕೇ ಎಂಬುದು ನಮ್ಮ ಇತಿಹಾಸ ಪ್ರಜ್ಞೆಗೆ ಸೇರಿದ ವಿಚಾರ. ಜನಪದ ಕಥೆಗಳನ್ನು ಕೇಳುವಾಗ, ವಿಶ್ಲೇಷಿಸುವಾಗ ಅವುಗಳಲ್ಲಿ ಇತಿಹಾಸದ ಸಮರ್ಥನೆ ದೊರಕದೇ ಇರಬಹುದು; ಆದರೆ ಆ ಕಥೆಗಳೂ ಹುಟ್ಟಿಕೊಂಡದ್ದು ಅದೇ ಸಮಾಜದಲ್ಲಿ. ಆದುದರಿಂದ ಆ ಸಮಾಜದ ಬದುಕಿನ ಕೆಲವು ಅಂಶಗಳು ಈ ಕಥೆಗಳಲ್ಲಿ ಆಗಾಗ ಇಣುಕಿನೋಡುವುದನ್ನು ನಾವು ಕಾಣಬಹುದು. ಅವುಗಳನ್ನು ಗಮನಿಸಿ ಅವುಗಳನ್ನು ಅರ್ಥಮಾಡಿಕೊಳ್ಳುವ ಕೆಲಸ ಇತಿಹಾಸಕಾರನದ್ದು. ಆಗ ಇತಿಹಾಸದ ಅರ್ಥ ತಿಳಿಯಾಗುತ್ತದೆ, ಹಾಗೂ ಅದರ ಪರಿಧಿ ದೊಡ್ಡದಾಗುತ್ತದೆ.

ನಮ್ಮ ಇತಿಹಾಸವನ್ನು ನಾವು ಗ್ರಹಿಸಬಲ್ಲ ಒಂದು ಆಕರ ನಮ್ಮ ಭಾಷೆ. ಅದನ್ನು ನಾವು ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸಿದರೆ ಅದರೊಳಗೆ ನಮಗೆ ಕೆಲವು ವಿಶೇಷ ಹೊಳಹುಗಳು ದೊರಕುತ್ತವೆ. ನಾವು ನಮ್ಮ ಭಾಷೆಯಲ್ಲಿ ಬಳಸುವ ಪದಗಳು ಎಲ್ಲಿಂದ ಬಂದವು? ಅವುಗಳ ಪಯಣದ ಹಾದಿಯೇನು? ಎಂಬುದು ನಮ್ಮ ಬದುಕಿಗೆ ಒಂದು

ಕನ್ನಡಿ. ಪದ ವ್ಯುತ್ಪತ್ತಿ ವಿಜ್ಞಾನವು (Etymology) ಕೇವಲ ನಿಘಂಟುಕಾರರಿಗೆ ಸಂಬಂಧಿಸಿದ್ದಲ್ಲ. ಭಾಷೆ ನಮ್ಮ ವ್ಯವಹಾರಕ್ಕೋಸ್ಕರ ಇರುವ ಒಂದು ಸಾಧನ, ನಮ್ಮ ವ್ಯವಹಾರಗಳಿಂದ, ಕೊಡು–ಕೊಳ್ಳುವಿಕೆಯಿಂದ ಬೆಳೆಯುವ, ಬದಲಾಗುವ ಸಾಧನ. ಅಂದರೆ ಅದು ನಮ್ಮ ಸಂಸ್ಕೃತಿಯನ್ನು ಪ್ರತಿಫಲಿಸುವ ಒಂದು ಸಾಧನ. ಯಾವ ಭಾಷೆಯೂ ಸಿದ್ಧ ಉಡುಪಿನಂತೆ ಅಂಗಡಿಗಳಲ್ಲಿ ದೊರಕುವುದಿಲ್ಲ. ಹಾಗೆಂದು ಗ್ರಹಿಸಿದರೆ, ಭಾಷೆಯು ಬೆಳೆದುಬಂದ ಹಾದಿಯನ್ನು ನಾವು ಗಮನಿಸಿದೆ ಇದ್ದರೆ ನಮ್ಮ ಸಂಸ್ಕೃತಿಯ ಪರಿಚಯ ನಮಗೆ ಆಗಲು ಸಾಧ್ಯವಿಲ್ಲ. ನಾವು ಬಳಸುವ ಭಾಷೆಯಲ್ಲಿ ನಾವು ಇತರ ಭಾಷೆಗಳಿಂದ ಆಮದಾದ ಅದೆಷ್ಟು ಪದಗಳನ್ನು ಬಳಸುತ್ತಿದ್ದೇವೆ ಎಂದು ಗಮನಿಸಿದರೆ ನಾವು ಬೆಳೆದು ಬಂದ, ಬೆಳೆಸಿದ ಸಂಸ್ಕೃತಿಯಲ್ಲಿ ನಮ್ಮ ವ್ಯವಹಾರಗಳೇನು, ಯಾರೊಂದಿಗೆ, ಹೇಗೆ ವ್ಯವಹರಿಸಿದ್ದೇವೆ ಎಂಬುದಕ್ಕೆ ಕೆಲವು ಮಾಹಿತಿಗಳು ದೊರಕುತ್ತವೆ. ಅವುಗಳು ನಮ್ಮೊಡನೆಯೇ ಇರುತ್ತವೆ, ಆದರೆ ಅವುಗಳನ್ನು ನಾವು ಎಷ್ಟೋ ಬಾರಿ ಗುರುತಿಸಲು ಶಕ್ತರಾಗುವುದಿಲ್ಲ. ನಾವು ಕನ್ನಡದ ಬಗ್ಗೆ ಮಾತನಾಡುವಾಗ "ಅಂಡಯ್ಯನ ಕನ್ನಡ"ವನ್ನು ಪ್ರತಿಪಾದಿಸಲು ಹೊರಟರೆ ಅಸಂಗತವಾದೀತು. ನಮ್ಮ ಅಪ್ಪಟ ಕನ್ನಡ ನಮಗೆ ಅರ್ಥವಾಗುವ ಕನ್ನಡವಾಗಬೇಕೆಂದಿಲ್ಲ. ನಮ್ಮ ಕನ್ನಡದೊಳಗೆ ಪರ್ಶಿಯನ್, ಅರೆಬಿಕ್, ಪೋರ್ಚುಗೀಸ್, ಇಂಗ್ಲಿಷ್ ಭಾಷೆಗಳ ಶಬ್ದಗಳು ನಿರಾತಂಕವಾಗಿ ನೆಲೆಸಿ ವ್ಯವಹರಿಸುತ್ತಿವೆ. ಅವುಗಳು ತಮ್ಮ ಪರಕೀಯತೆಯನ್ನು ಕಳಚಿಕೊಂಡು ನಮ್ಮದೇ ಆಗಿವೆ. ಅವುಗಳಿಗೆ ಪ್ರತ್ಯೇಕ ಪೌರತ್ವವನ್ನು ನೀಡುವ ಅಗತ್ಯವಿಲ್ಲ. ಯಾವುದೇ ಭಾಷೆಯ "ಜ್ಞಾತಿಪದಕೋಶ"ವನ್ನು ತಯಾರಿಸುವ ಸಂದರ್ಭದಲ್ಲಿ ಆ ಭಾಷೆಯು ಇತರ ನೆರೆಹೊರೆಯ ಭಾಷೆಗಳೊಡನೆ ನಡೆಸಿದ ವ್ಯವಹಾರಗಳಿಗೆ ದಟ್ಟವಾದ ಸೂಚನೆಗಳು ಸಿಗುತ್ತವೆ. ಅವುಗಳು ಭಾಷಾಸಂಸ್ಕೃತಿಯ ವಿವಿಧ ಮಗ್ಗುಲುಗಳನ್ನು ತೆರೆದಿಡಲು ಸಹಕರಿಸುತ್ತವೆ.

ನಾವು ಸಮಾಜವನ್ನು ಸಾಂಸ್ಕೃತಿಕ ಬೆಳವಣಿಗೆಯ ದೃಷ್ಟಿಯಲ್ಲಿ ನೋಡುವಾಗ ಸಾಹಿತ್ಯವನ್ನು ಬದಿಗೊತ್ತಿ ಮುಂದುವರಿಯುತ್ತೇವೆ. ಸಾಹಿತ್ಯವು ಇತಿಹಾಸ ರಚನೆಗೆ ಪೂರಕ ಎಂದು ಒಪ್ಪಿಕೊಂಡರೂ ಅದು ಹೇಗೆ ಎನ್ನುವ ಬಗ್ಗೆ ನಾವು ಹೆಚ್ಚಾಗಿ ತಲೆಕೆಡಿಸಿಕೊಂಡಂತಿಲ್ಲ. ಸಾಹಿತ್ಯವೇ ಸಂಸ್ಕೃತಿ ಎಂದರೆ ಎಲ್ಲವೂ ಹೇಳಿದಂತಾಯಿತು. ಆದರೆ ಇತಿಹಾಸ ರಚನೆಯಲ್ಲಿ ಸಾಹಿತ್ಯವನ್ನು ಹೇಗೆ ದುಡಿಸಿಕೊಳ್ಳಬೇಕು? ನಾವು ನಮ್ಮ ಸಂಸ್ಕೃತಿಯ ಯಾವುದೇ ವಿಚಾರವು ಸಾಹಿತ್ಯದಲ್ಲಿ ಹೇಗೆ ಮೂಡಿಬಂದಿದೆ ಎಂಬುದು ಅದನ್ನು ಅಂದಿನ ಸಮಾಜವು ಹೇಗೆ ಕಂಡಿದೆ ಎಂಬುದಕ್ಕೆ ಸಾಕ್ಷಿ. ಇದು ಹಿಂದಿನ ಕಾವ್ಯ, ನಾಟಕಗಳಲ್ಲಿ ಮಾತ್ರವಲ್ಲ, ಇಂದಿನ ಕಾದಂಬರಿ, ಸಣ್ಣ ಕಥೆಗಳಿಗೂ ಅನ್ವಯವಾಗುತ್ತದೆ. ಸಾಹಿತಿಗಳು ಸಮಾಜದ ಅಂಗವಾಗಿ ಸಮಾಜದ ಸ್ಥಿತಿಗತಿಗಳನ್ನು ಅನುಭವಿಸಿ, ವಿವರಿಸಿ ವಿಶ್ಲೇಷಿಸುವಲ್ಲಿ ಶಕ್ತರಾದವರು. ಅವರ ನಿಲುವುಗಳನ್ನು ಸಮಾಜದ ಒಟ್ಟು ಅಭಿಪ್ರಾಯವೆಂದು ತಿಳಿಯುವುದು ಸರಿಯಲ್ಲವಾದರೂ, ಅದು ಸಮಾಜದ ಒಂದು ಪ್ರತಿಕ್ರಿಯೆ ಎನ್ನಲಡ್ಡಿಯಿಲ್ಲ. ಅದಕ್ಕೆ ಕಾಲದ, ಸಾಹಿತಿಯ ವೈಯಕ್ತಿಕ ಅನುಭಗಳ ಚೌಕಟ್ಟನ್ನು ನೀಡಿದರೆ ನಮಗೆ ನಮ್ಮ ಸಂಸ್ಕೃತಿಯ ಒಂದು ಮಗ್ಗುಲನ್ನು ಪರಿಚಯಿಸಿಕೊಳ್ಳಲು ಸಾಧ್ಯ. ಕಾರಂತರ "ಚೋಮನ ದುಡಿ"ಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದು ನಮ್ಮ ಒಂದು ಸಾಂಸ್ಕೃತಿಕ ವಲಯದಲ್ಲಿ ಒಂದು ದಲಿತ ಸಮಾಜದಲ್ಲಿ ಹುಟ್ಟಿ ಬೆಳೆದವನ ಹಾಗೂ ಆತನ ಆಶಯ ಮತ್ತು ನಿರಾಶೆಯ ಕಥನ ಮಾತ್ರವಲ್ಲ. ಅದನ್ನು ಒಂದು ಕಾಲದಲ್ಲಿ ಗಾಂಧೀ ವಿಚಾರಗಳಿಂದ

ಪ್ರಭಾವಿತನಾದ ಮೇಲ್ವರ್ಗದ ಸಾಹಿತಿ ಹೇಗೆ ಪರಿಭಾವಿಸಿದ ಎನ್ನುವುದಕ್ಕೆ ಒಂದು ಕನ್ನಡಿ. ಇದು ಸತ್ಯದ ಒಂದು ಮುಖ. ಈಗ ಅದನ್ನು ಅಪೂರ್ಣವೆಂದೋ, ಸುಳ್ಳೆಂದೋ ಪ್ರತಿಪಾದಿಸುವುದು ಸುಲಭ. ಹಾಗೆಂದರೆ ನಿಜವಾದ ಸತ್ಯ ಯಾವುದು? ಅದು ಒಂದೇ ಎಂದಾಗಿ ನಿರ್ಧರಿಸಿದವರು ಅದೇನೆಂದು ನಿರ್ಧರಿಸಲು ಸಾಧ್ಯವಾಗಿಲ್ಲ. ಸತ್ಯದರ್ಶನ ವಾಗುವುದು ಅದರ ಕಣ್ಣುಮುಚ್ಚಾಲೆ ಆಟಗಳಲ್ಲೇ. ಅದು ಒಮ್ಮೆ ಕಂಡಂತಾಗುತ್ತದೆ, ಕೂಡಲೇ ಮಾಯವಾಗುತ್ತದೆ. ಆದುದರಿಂದ ಸಂಸ್ಕೃತಿಯ ಪೂರ್ಣ ದರ್ಶನ ಯಾರಿಗೆ ಆಗಲು ಸಾಧ್ಯ? ಅದು ಅಪೂರ್ಣವಲ್ಲ; ಆದರೆ ಅದರ ಅದರ ದರ್ಶನ ಅಪೂರ್ಣವೇ. ಕುರುಡರು ಆನೆಯನ್ನು ವಿವರಿಸಿದಂತೆ. ಈ ಅಪೂರ್ಣತೆಯೊಳಗೆ ಒಂದು ಸತ್ಯವು ಅಡಗಿದೆ. ನಮ್ಮ ಅಪೂರ್ಣತೆಯು ನಮಗೆ ಅನುಭವವಾಗಿ ಲಭಿಸಿದರೆ ಪೂರ್ಣತೆಯ ಸಾಧ್ಯತೆಯ ಬಗ್ಗೆ ಚಿಂತಿಸಲು ಸಾಧ್ಯವಾಗುತ್ತದೆ. ಅದು ನಮಗೆ ಸಾಕ್ಷಾತ್ಕಾರವಾಗಬಹುದೇ ಇಲ್ಲವೇ ಎಂಬುದು ಮುಖ್ಯವಲ್ಲ. ಚಿಂತನ ಮುಖ್ಯ, ಅನ್ವೇಷಣೆ ಮುಖ್ಯ. ಇವೆಲ್ಲವೂ ಸತ್ಯದ ಪರಿಕಲ್ಪನೆಯಲ್ಲಿ ಪಾಲುಗೊಳ್ಳುತ್ತವೆ.

ರಾಜಕೀಯ ಚೌಕಟ್ಟುಗಳಲ್ಲಿ ಸಂಸ್ಕೃತಿಗಳನ್ನು ಗುರುತಿಸುವುದು ತೀರ ಅಸಹಜವಾದ, ಕೆಲವೊಮ್ಮೆ ಅಪಾಯಕಾರಿಯಾದ ಕೆಲಸ. ದೇಶಕ್ಕೊಂದು ಸಂಸ್ಕೃತಿ ಎಂಬ ಮಾತು ಸಾಮಾನ್ಯವಾಗಿ ಕೇಳಿಬರುವ ಮಾತು. ಇದು ಎಷ್ಟು ಸರಿ ಎಂಬ ಪ್ರಶ್ನೆ ಅಪ್ರಸ್ತುತವೂ ಅಲ್ಲ, ದೇಶವಿರೋಧಿಯೂ ಅಲ್ಲ ಎಂಬುದು ನನ್ನ ಅಭಿಮತ. ನಮ್ಮ ದೇಶದ ಭೂಪಟದೊಳಗೆ ಒಂದೇ ಸಂಸ್ಕೃತಿಯನ್ನು ಗುರುತಿಸಿ ಅಲ್ಲಿ ಒಂದೇ ಬಣ್ಣವನ್ನು ತುರುಕಿಸಿದರೆ ಎಷ್ಟು ಸರಿ? ಸರಿ ಎಂದು ವಾದಿಸಿದರೆ 1947ರಲ್ಲಿ ನಮ್ಮ ದೇಶದ ಭೂಪಟದ ಸ್ವರೂಪ ಬದಲಾದಾಗ ನಮ್ಮ ಸಂಸ್ಕೃತಿಗೇನಾಯಿತು? ದೇಶದ ವಿಭಜನೆಯನ್ನು ವಿರೋಧಿಸಿದ, ಈಗಲೂ ಅದರ ಬಗ್ಗೆ ಆಕ್ರೋಶವನ್ನು ನಿವಾರಿಸಿಕೊಳ್ಳದ ಮಂದಿ ಈಗ ಪಾಕಿಸ್ಥಾನ ಮತ್ತು ಭಾರತದ ಸಂಸ್ಕೃತಿಗಳು ಒಂದೇ ಎಂದು ವಾದಿಸಿದ್ದು ಕಂಡುಬರುತ್ತಿಲ್ಲ. ಅಂದರೆ, ನಮ್ಮ ಸಂಸ್ಕೃತಿಗಳು ಬೇರೆಬೇರೆಯಾದದ್ದು 1947ರ ನಂತರ ಎಂದಾಯಿತಲ್ಲವೇ? ಹಾಗಿಲ್ಲವಾದರೆ ಎರಡೂ ದೇಶಗಳ ಸಂಸ್ಕೃತಿಗಳು ಈಗಲೂ ಒಂದೇ ಎಂದು ವಾದಿಸಬೇಕಾಗುತ್ತದೆ. ಹಾಗೇನಾದರೂ ಹೇಳಿದರೆ ಕಡು ರಾಷ್ಟ್ರೀಯತೆ ವಕ್ತಾರರು ಅದನ್ನು ಉಗ್ರವಾಗಿ ಪ್ರತಿಭಟಿಸಿಯಾರು. ವಾಸ್ತವವಾಗಿ ಒಂದು ಭೂಪಟದೊಳಗೆ ಅನೇಕ ಸಂಸ್ಕೃತಿಗಳಿರಲು ಸಾಧ್ಯ. ಅವುಗಳ ನಡುವೆ ಸ್ನೇಹ, ವ್ಯವಹಾರ ಸೇತುವೆಗಳು ಏರ್ಪಡಲು ಸಾಧ್ಯ. ಅವುಗಳನ್ನು ಕಟ್ಟುವುದು, ಇದ್ದವುಗಳನ್ನು ಉಳಿಸಿಕೊಳ್ಳುವುದು ಸಮಾಜದ ಕೆಲಸ. ಬದುಕಿನಲ್ಲಿ ಅದು ಅಗತ್ಯ ಕೂಡ. ಭಿನ್ನತೆಯು ವಿರೋಧದ ಲಕ್ಷಣವಾಗಬೇಕೆಂದಿಲ್ಲ, ಯುದ್ಧಕ್ಕೆ ಆಹ್ವಾನವಾಗಬೇಕೆಂದಿಲ್ಲ. ಹಾಗಿದ್ದರೆ ನಾವು ಯಾವಾಗಲೂ ಯುದ್ಧಮಾಡುತ್ತಲೇ ಇರಬೇಕಷ್ಟೆ, ಒಬ್ಬರನ್ನೊಬ್ಬರು ನಾಶಮಾಡುವ ಕೆಲಸದಲ್ಲಿ ನಿರತರಾಗಿರಬೇಕಷ್ಟೆ. ಅದರಲ್ಲಿ ಯಾರು ಗೆದ್ದರೂ ನಮ್ಮ ಹಾಗೂ ನಮ್ಮ ಸಂಸ್ಕೃತಿಯ ನಾಶ ಮಾತ್ರ ಖಂಡಿತ.

ನಮ್ಮ ಕರ್ನಾಟಕದಲ್ಲಿ ನಾವು ಭಾವುಕರಾಗಿ ಒಂದು ಸಂಸ್ಕೃತಿಯ ಬಗ್ಗೆ ಮಾತನಾಡುತ್ತೇವೆ. ಆದರೆ ಅದರೊಳಗೆ ಹಲವು ಸಂಸ್ಕೃತಿಗಳು ಇವೆ ಎಂಬುದಂತೂ ಸತ್ಯವೇ. ಕರ್ನಾಟಕದಲ್ಲಿ ಅನೇಕ ಕರ್ನಾಟಕಗಳಿವೆ. ಏಕತೆಯೂ ಸತ್ಯ, ಭಿನ್ನತೆಯೂ ಸತ್ಯ ಎನ್ನುವುದನ್ನು ನಿರ್ವಹಿಸುವುದಾದರೂ ಹೇಗೆ? ನಮ್ಮಲ್ಲಿ ಹಲವು ಸಾಂಸ್ಕೃತಿಕ ವಲಯಗಳು ಇವೆ ಎಂದು ಗುರುತಿಸಿ ಅವುಗಳನ್ನು ಗೌರವಿಸಿದರೆ ಅಲ್ಲಿ ರಾಜಕೀಯ ಭೂಪಟಕ್ಕೆ

ಅಪಾಯವೇನೂ ಬರಲಾರದು. ಸಾಂಸ್ಕೃತಿಕ ವಲಯಗಳು ಹುಟ್ಟಿ ಬೆಳೆಯುವುದು ಬದುಕಿನ ಕೆಲವು ಸಾಮೀಪ್ಯಗಳಿಂದ. ಅವು ಭಾಷೆ, ಜೀವನಕ್ರಮ, ಇತ್ಯಾದಿಗಳು ಸೃಷ್ಟಿಸುವ ಸಂಬಂಧಗಳು. "ಬಾಂಬೆ ಕರ್ನಾಟಕ" ಎಂಬುದು ಒಂದು ಕಾಲಕ್ಕೆ ರಾಜಕೀಯವು ಸೃಷ್ಟಿಸಿದ ಭೂಪಟದ ಅಂಶವಾಗಿತ್ತು. ಅದು ಕರ್ನಾಟಕಕ್ಕೆ ಸೇರಿದಾಗ ಅದು ಕೆಲವು ತಗಾದೆಗಳನ್ನು ಹುಟ್ಟುಹಾಕಿತು. ಆದರೆ ಆ ಪ್ರದೇಶವು ಒಂದು ನಿರ್ದಿಷ್ಟ ಸಾಂಸ್ಕೃತಿಕ ವಲಯವಾಗಿತ್ತು ಎಂಬುದು ಸ್ಪಷ್ಟ. ಮರಾಠಿ-ಕನ್ನಡಗಳ ಮೇಳೈಸುವಿಕೆ, ಹಿಂದುಸ್ಥಾನಿ ಸಂಗೀತದ ಪ್ರಭಾವ, ಆಹಾರ, ಉಡುಗೆ-ತೊಡಿಗೆ ಇತ್ಯಾದಿಗಳು ಆ ಪ್ರದೇಶವನ್ನು ನಿರ್ವಚಿಸುವಲ್ಲಿ ಸಾಕಷ್ಟು ಭಾಗಿಯಾಗಿವೆ. ಹಾಗೆಯೇ "ಹೈದರಾಬಾದ್ ಕರ್ನಾಟಕ" ಎಂಬ ಪ್ರದೇಶಕ್ಕೂ ಅದರದ್ದೇ ಆದ ಒಂದು ಸಾಂಸ್ಕೃತಿಕ ಅನನ್ಯತೆ ಇದೆ. ತುಳು ಸಂಸ್ಕೃತಿಯೇ ಪ್ರಧಾನವಾಗಿರುವ ದಕ್ಷಿಣಕನ್ನಡಕ್ಕೂ ಅದರದ್ದೇ ಆದ ಸಾಂಸ್ಕೃತಿಕ ವಲಯವಿದೆ. ಅದು ಕೇರಳದ ಕಾಸರಗೋಡಿಗೂ ವಿಸ್ತರಿಸಿದೆ. ಕನ್ನಡ-ಮಲೆಯಾಳಗಳು ವ್ಯವಹಾರದಲ್ಲಿ ಭಿನ್ನವಾದರೂ, ಸಾಂಸ್ಕೃತಿಕವಾಗಿ ದಕ್ಷಿಣಕನ್ನಡವು ಕೇರಳಕ್ಕೆ ಹೆಚ್ಚು ನಿಕಟವಾದ ಸಂಬಂಧವನ್ನು ಹೊಂದಿರುವುದು ಸತ್ಯ. ಇಲ್ಲಿನ ಉಡುಗೆ-ತೊಡುಗೆ, ಆಹಾರಕ್ರಮ, ಜನಪದ ಆರಾಧನೆ, ಇತ್ಯಾದಿಗಳಲ್ಲಿ ಹೆಚ್ಚಿನ ಸಾಮ್ಯವಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲಿ ಸಾಂಸ್ಕೃತಿಕ ವಲಯಗಳ ಏಕೀಕರಣವು ಅಸಾಧ್ಯವಾದ ಕಾರ್ಯಸೂಚಿಯಾಯಿತು.

ನಾವು ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ರಚಿಸುವಾಗ ರಾಜಕೀಯ ಪ್ರಣೀತ ಭೂಪಟವನ್ನು ಕಾರ್ಯತಃ ಬದಿಗೊತ್ತಬೇಕಾಗುತ್ತದೆ. ನಮ್ಮ ಸಾಂಸ್ಕೃತಿಕ ನೆಲೆಗಳು ಬೇರೆ, ರಾಜಕೀಯ, ಆಡಳಿತಾತ್ಮಕ ತುರ್ತುಗಳು ಬೇರೆ. ಹಾಗೆಂದು ನಾವು ಗುರುತಿಸಲು ಶಕ್ತರಾಗದಿದ್ದರೆ ನಮ್ಮ ಇತಿಹಾಸವನ್ನು ಕೆಲವು ನಿರ್ದಿಷ್ಟ ಅಚ್ಚುಗಳಿಗೆ ಬಲವಂತವಾಗಿ ತುರುಕಿದಂತಾಗುತ್ತದೆ; ಕೆಲವು ಹೇರಿಕೆಗಳನ್ನು ನಾವು ಒಪ್ಪಿಕೊಂಡಂತಾಗುತ್ತದೆ. ರಾಜಕೀಯ ಅಥವಾ ಆಡಳಿತಾತ್ಮಕ ತುರ್ತುಗಳು ಬದಲಾಗುತ್ತಿರುತ್ತದೆ. ಜನರ ಬದುಕು ಅದೇ ರೀತಿ ಬದಲಾಗುವುದಿಲ್ಲ. ಅದಕ್ಕೆ ಅದರದ್ದೇ ಆದ ಛಂದೋಗತಿ ಇರುತ್ತದೆ. ಜನರ ಭಾಷೆಗಳಲ್ಲಿ ಕೊಡು-ಕೊಳ್ಳುವಿಕೆಯು ಸ್ವಾಭಾವಿಕವಾಗಿ ನಡೆಯುತ್ತಿರುತ್ತವೆ. ಒಂದು ಜನ ಯಾವೆಲ್ಲಾ ಜನಗಳೊಡನೆ ಸಂಬಂಧಗಳನ್ನಿರಿಸಿಕೊಂಡಿದ್ದಾರೋ ಅವರೆಲ್ಲರೊಡನೆಯೂ ತಮ್ಮ ಕೊಡು-ಕೊಳ್ಳುವಿಕೆಯನ್ನು ನಡೆಸಿಕೊಂಡು ಬಂದಿದ್ದಾರೆ. ಇದಕ್ಕೊಂದು ಠರಾವು ಮಂಡಿಸಿ, ಮುಂದುವರಿಯುವ ಅಗತ್ಯವನ್ನೇನೂ ಅವರು ಕಾಣಲಿಲ್ಲ. ಇದು ಸಾಮಾನ್ಯವಾಗಿ ನಡೆದುಕೊಂಡು ಬಂದ ಪ್ರಕ್ರಿಯೆ. ನಮ್ಮ ಭಾಷೆಯಲ್ಲಿರುವ ಅನೇಕ ಆಮದಾದ ಪದಗಳು ಇದಕ್ಕೆ ಸಾಕ್ಷಿ. ಇವುಗಳನ್ನು ಹಾಗೂ ನಮ್ಮೊಡನೆ ಇರುವ ಸ್ಥಳನಾಮಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅವುಗಳನ್ನು ವಿವರಿಸಲು ಸಾಧ್ಯವಾದರೆ ನಮ್ಮ ಸಾಮಾನ್ಯ ಬದುಕಿನ ಹಲವು ಪದರುಗಳ ಪರಿಚಯ ಸಾಧ್ಯವಾದೀತು.

ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ರಚಿಸುವಾಗ ಅದು ಹೀಗಿರಬೇಕು, ಅದರಲ್ಲಿ ಇವುಗಳೆಲ್ಲಾ ಸೇರಿರಬೇಕು, ಇವುಗಳು ನಿಷಿದ್ಧ ಎಂಬ ನಿಲುವು ಸರಿಯಲ್ಲ. ನಮ್ಮ ಸಂಸ್ಕೃತಿಯಲ್ಲಿ ಏನೇನು ಇರಬೇಕೆಂದು ಒಂದು ನಿರ್ದಿಷ್ಟ ಪಟ್ಟಿಮಾಡಿಕೊಂಡರೆ ನಾವು ಆ ನಿರ್ಧಾರಕ್ಕೆ ಗುಲಾಮರಾಗಬೇಕಾಗುತ್ತದೆ. ಸಂಸ್ಕೃತಿಯು ಅದನ್ನು ಬೆಳೆಸಿಕೊಳ್ಳುವ ಸಮಾಜದ ಬೆಳವಣಿಗೆಯ ಲಕ್ಷಣ. ಒಂದುಕಾಲದಲ್ಲಿ ನಾವು ಸಂಸ್ಕೃತಿಯನ್ನು ನಿರ್ವಚಿಸಿದ ರೀತಿಯನ್ನು ನಾವೇ ಈಗ ನಿರಾಕರಿಸಿಕೊಂಡಿದ್ದೇವೆ. ಅದನ್ನು ಬೇರೆ ರೀತಿಯಲ್ಲಿ ಪರಿಭಾವಿಸಿದ್ದೇವೆ. ಅದು ನಾವು ಬದಲಾದುದರಿಂದ ನಡೆದ ಪ್ರಕ್ರಿಯೆ. ಇದು ನಿರಂತರವಾಗಿ

ನಡೆಯುವಂಥಾದ್ದು, ಅಥವಾ ನಡೆಯಬೇಕಾದದ್ದು. ಆದರೆ ನಮ್ಮ ಒಟ್ಟು ಸಮಾಜದ ನೆಲೆಗಳನ್ನು ನಿರಾಕರಿಸಿಕೊಂಡು, ಕೆಲವರಿಗೆ ಅಗ್ರಪೂಜೆಯನ್ನು ಸಲ್ಲಿಸಿ, ಇನ್ನಷ್ಟು ಮಂದಿಯನ್ನು ಕಡೆಗಣಿಸಿ ನಾವು ನಮ್ಮ ಸಂಸ್ಕೃತಿಯನ್ನು ನಿರ್ವಚಿಸಲು ಸಾಧ್ಯವಿಲ್ಲ. ಎಲ್ಲರ ಅನುಭವಗಳು ಒಂದೇ ಅಲ್ಲದಿದ್ದರೂ ಎಲ್ಲರ ಅನುಭವಗಳಿಗೂ ಮನ್ನಣೆ ನೀಡುವ ಶಕ್ತಿ ಹಾಗೂ ಸೌಜನ್ಯ ನಮ್ಮ ಸಂಸ್ಕೃತಿಗೆ ಇರಬೇಕು.

ಇದನ್ನು ಹೇಗೆ ಮಾಡುವುದು, ಅಥವಾ ಯಾರು ಮಾಡುವುದು ಎಂಬುದು ಇನ್ನೊಂದು ಪ್ರಶ್ನೆ. ಇದನ್ನು ನಾವೇ ಮಾಡುವಂಥಾದ್ದು. ಇತಿಹಾಸವನ್ನು ಹೊಸದಾಗಿ ಬರೆಯುವಂಥಾದ್ದು ಎಂದರೆ ಇತಿಹಾಸದ ಇನ್ನೊಂದು ಪುಸ್ತಕವನ್ನು ಬರೆದು ಪ್ರಕಟಿಸುವುದು, ಇದ್ದ ಪುಸ್ತಕಗಳನ್ನು ರದ್ದಿವಾಲನಿಗೆ ಕೊಡುವುದು ಎಂದರ್ಥವಲ್ಲ. ಇತಿಹಾಸದ ಪುನಾರಚನೆಯಾಗುವುದು ಮೂಲತಃ ನಮ್ಮ ಆಲೋಚನೆಗಳು ಬದಲಾದಾಗ, ಅವುಗಳಲ್ಲಿ ಹೊಸತು ಮೂಡಿದಾಗ, ಅವುಗಳನ್ನು ತಿಳಿಸಲು ಶಕ್ತರಾದಾಗ, ಹಾಗೆ ತಿಳಿಸಿದ್ದನ್ನು ಓದುವ, ಅಧ್ಯಯನ ಮಾಡುವ, ಅದನ್ನು ಸಂಪೂರ್ಣವಾಗಿ ಒಪ್ಪದಿದ್ದರೂ ಅದರ ಬಗ್ಗೆ ಗಂಭೀರವಾಗಿ ವಿಶ್ಲೇಷಣೆ ಮಾಡುವ ಶಕ್ತಿಯನ್ನು ನಾವು ಗಳಿಸಿಕೊಂಡಾಗ, ಸಹನೆಯನ್ನು ಬೆಳೆಸಿಕೊಂಡಾಗ. ಸತ್ಯ ಒಂದೇ ಎಂಬ ನಿಲುವು ಇತರ ಸತ್ಯಗಳನ್ನು, ಅವುಗಳ ಇತರ ಸಾಧ್ಯತೆಗಳನ್ನು ನಿರಾಕರಿಸುತ್ತದೆ. ಇದುವೇ ಮೂಲಭೂತವಾದ. ಅದು ಇನ್ನೊಬ್ಬರಲ್ಲಿದ್ದಾಗ ಅದನ್ನು ಖಂಡಿಸಿ, ನಮ್ಮಲ್ಲಿದದ್ದನ್ನು ಶ್ರದ್ಧೆಯಿಂದ ಬೆಳೆಸಿಕೊಂಡು ಬರುವುದನ್ನು ಕಾಣುತ್ತೇವೆ. ಇದು ನಮ್ಮ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದರಲ್ಲಿ ಅಥವಾ ಅದರ ಇತಿಹಾಸವನ್ನು ಅರ್ಥಪೂರ್ಣವಾಗಿ ಪುನಾರಚಿಸುವಲ್ಲಿ ಸಹಕಾರಿಯಾಗಲಾರದು.

ಕೊನೆ ಟಿಪ್ಪಣಿಗಳು

1. ಇದು ಮಲೆಯಾಳದ ಪ್ರಸಿದ್ಧ ಲೇಖಕ ವೈಕೊಮ್ ಮೊಹಮ್ಮದ್ ಬಷೀರ್ ಅವರ ಒಂದು ಕಾದಂಬರಿಯ ಶೀರ್ಷಿಕೆ.
2. ಗುತ್ತಿನ ಮನೆಗಳು ತುಳುನಾಡಿನ ಪ್ರಭಾವೀ ಜಮೀನ್ದಾರ ಮನೆಗಳು. ಒಕ್ಕಲುಗಳಿಂದ ಬೇಸಾಯ ನಡೆಸಿಕೊಂಡು ಬರುವ ಈ ಮನೆತನಗಳು ಊರಿನ ಯಜಮಾನಿಕೆಯನ್ನೂ ನಡೆಸಿಕೊಂಡು ಬರುತ್ತಿದ್ದುವು. ಸಾಮಾಜಿಕ, ಆರ್ಥಿಕ ಹಾಗೂ ವಾಸ್ತವನೆಲೆಯಲ್ಲಿ ರಾಜಕೀಯವಾಗಿಯೂ ಗುತ್ತಿನ ಮನೆತನಗಳು ಆ ಊರಿಗೆ ರಾಜರಾಗಿ ಅಧಿಕಾರ ಚಲಾಯಿಸುತ್ತಿದ್ದರು. ಅವರೊಳಗೆ ಕೆಲವರಿಗೆ ಪಟ್ಟಾಭಿಷೇಕವಾಗಿ ಆ ಚಿತ್ರವನ್ನು ಪೂರ್ತಿಗೊಳಿಸುವ ಪರಂಪರೆಯೂ ನಡೆದುಬಂದಿತ್ತು. ನೋಡಿ: Surendra Rao, Bunts in History and Culture, (Udupi, 2010).

ಆಕರ ಸೂಚಿ

1. Jan Vansina. 2006(2009). **Oral Tradition, A Study in Historical Methodology. New Brunswick,** (New Jersey): Aldine Transaction.
2. Paul Thompson. 1978 (2000). **The Voice of the Past: Oral History,** Oxford.
3. Mineke Schipper. 2004 (2017). **Never Marry a Woman with a Big Feet: Women in Proverbs from Around the World.** Yale University (Published in India, Speaking Tiger).
4. Surendra Rao B. and Chinnappa Gowda K. (Editors and Translators). 2018. **The Rainboy: Tulu Folk Tales.** New Delhi: Kannada Language Chair, Jawaharlal Nehru University (Manohar).

■

ಚಂದಾದಾರರಾಗ ಬಯಸುವಿರಾ?

'ಇತಿಹಾಸ ದರ್ಪಣ'ದ ಚಂದಾದಾರರಾಗ ಬಯಸುವವರು ನಿಮ್ಮ ಆಯ್ಕೆಯ ಚಂದಾ ಹಣವನ್ನು ಡಿ.ಡಿ./ಚೆಕ್/ಎಂ.ಓ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

- ಡಿ.ಡಿ. ಕಳುಹಿಸಿಕೊಡುವವರು "EDITOR, ITIHASA DARPANA" ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ತೆಗೆಸಿ, ಅದನ್ನು ನಿಮ್ಮ ವಿಳಾಸವುಳ್ಳ ಪತ್ರದೊಂದಿಗೆ ನಮಗೆ ಕಳುಹಿಸಿ ಕೊಡಿ.
- ಚೆಕ್ ಮೂಲಕ ಕಳುಹಿಸಿಕೊಡುವವರು ಚೆಕ್ಕನ್ನು "EDITOR, ITIHASA DARPANA" ಹೆಸರಿಗೆ ಬರೆದು, ಚೆಕ್ಕಿನ ಮೇಲ್ಭಾಗದ ಎಡಮೂಲೆಯಲ್ಲಿ "A/C Pay" ಎಂದು ನಮೂದಿಸಿ, ನಿಮ್ಮ ವಿಳಾಸದ ಪತ್ರದೊಂದಿಗೆ ಕಳುಹಿಸಿ. ಬೆಂಗಳೂರಿನ ಹೊರಗಡೆಯ ಚೆಕ್ಕುಗಳಾಗಿದ್ದಲ್ಲಿ ಬ್ಯಾಂಕಿನ ಸೇವಾಶುಲ್ಕ 40/- ರೂ.ಗಳನ್ನು ಚಂದಾ ಹಣದ ಮೊತ್ತದಲ್ಲಿ ಸೇರಿಸಿ ಕಳುಹಿಸಿ ಕೊಡಿ.
- ಇಲ್ಲವಾದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕಿನ ಪ್ರಧಾನ ಶಾಖೆಯಲ್ಲಿರುವ "EDITOR, ITIHASA DARPANA" ಹೆಸರಿನ ಚಾಲ್ತಿಖಾತೆ ಸಂ: 101 882ಕ್ಕೆ ಚಂದಾಹಣವನ್ನು ನಿಮ್ಮ ಹೆಸರಿನಲ್ಲಿ ಜಮಾ ಮಾಡಿ, ಸ್ವೀಕೃತಿಯ ನಕಲನ್ನು ನಿಮ್ಮ ವಿಳಾಸದ ಪತ್ರದೊಂದಿಗೆ ನಮಗೆ ಕಳುಹಿಸಿಕೊಡಿ.

ಪರಿಷ್ಕೃತ ಚಂದಾ ವಿವರ

	ವಯಕ್ತಿಕ ಚಂದಾ	ಶಾಲಾ ಕಾಲೇಜು ಮತ್ತು ಸಂಘ ಸಂಸ್ಥೆಗಳ ಚಂದಾ
ವಾರ್ಷಿಕ	400/-	600/-
ದ್ವೈವಾರ್ಷಿಕ	700/-	1100/-
ತ್ರೈವಾರ್ಷಿಕ	1000/-	1500/-

ಚಂದಾ ಕಳುಹಿಸಿಕೊಡಬೇಕಾದ ವಿಳಾಸ

ಸಂಪಾದಕರು, 'ಇತಿಹಾಸ ದರ್ಪಣ'
#33/ಎ, ಐ.ಟಿ.ಐ.ಕಾಲೇಜು ಹತ್ತಿರ
ಕೆಂಪೇಗೌಡನಗರ, ವಿಶ್ವನೀಡಂ-ಅಂಚೆ,
ಬೆಂಗಳೂರು-560 091.
ಮೊ-7829404063.

Editor, ITIHASA DARPANA
33/A, Near ITI College,
Kempegowda Nagar
Vishwaneedam Post
Bengaluru - 560 091
Mob: 78294 04063

ITIHASA DARPANA (Quarterly)
A Peer Reviewed Journal of Historical Research in Kannada
ISSN: 2321-3590
Book No.: 40-41
January – June: 2019
Author: S. Settar
Title: kannaḍa śāsanādhyayanada pradhāna hejjeya gurutugaḷu

ಕನ್ನಡ ಶಾಸನಾಧ್ಯಯನದ ಪ್ರಧಾನ ಹೆಜ್ಜೆಯ ಗುರುತುಗಳು

ಷ. ಶೆಟ್ಟರ್
ಎಮಿರೇಟಸ್ ಪ್ರೊಫೆಸರ್,
ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್
ಅಡ್ವಾನ್ಸ್‌ಡ್ ಸ್ಟಡೀಸ್,
ಇಂಡಿಯನ್ ಇನ್‌ಸ್ಟಿಟ್ಯೂಟ್
ಆಫ್ ಸೈನ್ಸ್ ಕ್ಯಾಂಪಸ್,
ಬೆಂಗಳೂರು–560012.
ssettar@yahoo.co.in

ಕನ್ನಡ ಶಾಸನಗಳನ್ನು ಸಂಗ್ರಹಿಸುವ ಕಾರ್ಯವು ಸುಮಾರು 1800ರಲ್ಲಿ ಕರ್ನಲ್ ಮೆಕಂಜಿಯವರಿಂದ ಆರಂಭಗೊಂಡರೂ ಇವನ್ನು ವ್ಯವಸ್ಥಿತವಾಗಿ ಪರಿಚಯಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು 1830ರಲ್ಲಿ ವಾಲ್ಟರ್ ಇಲ್ಲಿಯಟ್‌ನಿಂದ. ಟಿಪ್ಪೂಸುಲ್ತಾನನ ಪತನಾನಂತರ ಮೈಸೂರ್ ಕಮಿಷನ್ ಸೇರಿದ ಮೆಕಂಜಿ, ಕಿತ್ತೂರು ಕದನದಲ್ಲಿ ಪಾಲ್ಗೊಂಡು ಧಾರವಾಡ ಜೈಲಿನಲ್ಲಿ ಕೆಲಕಾಲ ಕೈದಿಯಾಗಿದ್ದ ಇಲ್ಲಿಯಟ್‌ನಂತೆ ಶಾಸನಗಳ ಬಗ್ಗೆ ಹೆಚ್ಚು ಅರಿತವನಾಗಿರಲಿಲ್ಲ. ಕಾರಾಗೃಹದಿಂದ ಹೊರಬಂದನಂತರ ಶಾಸನಗಳನ್ನು ಶೋಧಿಸಿ, ಸಂಗ್ರಹಿಸಿ, ಪ್ರಕಟಿಸುವುದನ್ನು ತನ್ನ ಪ್ರಧಾನ ಹವ್ಯಾಸವನ್ನಾಗಿ ಮಾಡಿಕೊಂಡು, 1873ರವರೆಗೂ ಇದನ್ನು ಮುಂದುವರಿಸಿದ ಇಲ್ಲಿಯಟ್, ಕರ್ನಾಟಕ ಮತ್ತು ಆಂಧ್ರಪ್ರದೇಶದ ಒಟ್ಟು 1,339 ಶಾಸನಗಳನ್ನು ಸಂಗ್ರಹಿಸಿದ್ದನು. ಆದರೆ ಹಡಗಿನಲ್ಲಿ ಇವನ್ನು ಇಂಗ್ಲೆಂಡ್‌ಗೆ ರವಾನಿಸುವಾಗ, ಉಪ್ಪುನೀರಿನ ಸಂಪರ್ಕಕ್ಕೊಳಗಾಗಿ ಇದರಲ್ಲಿ ಸುಮಾರು 735 (ಹೆಚ್ಚಾಗಿ ಆಂಧ್ರಪ್ರದೇಶದ)ಪ್ರತಿಗಳು ನಾಶವಾಗಿ, 595 ಮಾತ್ರ ಉಳಿದಿದ್ದವು. ಇವುಗಳ ಮೂರು ನಕಲುಗಳನ್ನು ಸಿದ್ಧಗೊಳಿಸಿ, ಎರಡನ್ನು ರಾಯಲ್ ಏಸಿಯಾಟಿಕ್ ಸೊಸೈಟಿ ಬಾಂಬೆ ಮತ್ತು ಮದ್ರಾಸ್

ಶಾಖೆಗಳಿಗೆ, ಒಂದು ನಕಲನ್ನು ಇದೇ ಸಂಸ್ಥೆಯ ಲಂಡನ್ ಶಾಖೆಗೆ ಕೊಟ್ಟಿದ್ದನು. ಆದರೆ 1870ರ ಸುಮಾರಿಗೆ ಬಾಂಬೆ ಮತ್ತು ಮದ್ರಾಸ್ ಸಂಗ್ರಹಗಳೆರಡೂ ಮಾಯವಾಗಿ, ಲಂಡನ್ ಸಂಗ್ರಹ ಮಾತ್ರ ಉಳಿದಿತ್ತು. ಈ ಸಂಗ್ರಹವು ಇಂದಿಗೂ ಉಳಿದುಕೊಂಡಿದೆ.

ಶಾಸನಾಧ್ಯಯನದ ಆರಂಭ

ಇಲ್ಲಿಯಟ್ ಸಂಗ್ರಹಿಸಿದ್ದು ಹೆಚ್ಚು, ಪ್ರಕಟಿಸಿದ್ದು ಕಡಿಮೆ. ಆದರೆ ಕನ್ನಡ ಲಿಪಿಯ ಬಗ್ಗೆ ಮೊದಲು ಲೇಖನ ಬರೆದ ಕೀರ್ತಿ ಈತನದಾಗಿದೆ. 1833ರಲ್ಲಿ ಮುಂಬೈನಲ್ಲಿ ಪ್ರಕಟಿಸಿದ **ಓಲ್ಡ್ ಕನರೀಸ್ ಆಲ್ಫಬೆಟ್ಸು** ಎಂಬುದು ಆ ಪುಸ್ತಿಕೆಯ ಶೀರ್ಷಿಕೆ. ಇದರಂತೆ **ಬಾಂಬೆ ಏಸಿಯಾಟಿಕ್ ಸೊಸೈಟಿಯ ಜರ್ನಲ್**ನಲ್ಲಿ (ಸಂ.vii) ಮತ್ತು **ಮದ್ರಾಸ್ ಜರ್ನಲ್ ಆಫ್ ಲಿಟರೇಚರ್ ಅಂಡ್ ಸೈನ್ಸ್** ನಲ್ಲಿ (ಸಂ.vii), **ಹಿಂದೂ ಇನ್‌ಸ್ಕ್ರಿಪ್ಷನ್ಸ್** ಲೇಖನವನ್ನು ಪ್ರಕಟಿಸಿ, ಪ್ರಥಮ ಬಾರಿಗೆ ಕರ್ನಾಟಕದ ಶಾಸನಗಳನ್ನು ಹೊರಜಗತ್ತಿಗೆ ಈತನೇ ಪರಿಚಯಿಸಿದ್ದನು. ಈ ಕಾಲದಲ್ಲಿ ಶಾಸನಗಳನ್ನು ಪ್ರಕಟಿಸಲು ಪ್ರತ್ಯೇಕ ಜರ್ನಲ್‌ಗಳಿರಲಿಲ್ಲ, ಆದರೆ **ರಾಯಲ್ ಏಸಿಯಾಟಿಕ್ ಸೊಸೈಟಿಯ ಜರ್ನಲ್** ಇನ್ನಿತರ ಲೇಖನಗಳೊಡನೆ ಶಾಸನಗಳನ್ನೂ ಪ್ರಕಟಿಸುತ್ತಿತ್ತು. 1872ರಲ್ಲಿ ಪ್ರಾರಂಭವಾದ **ದಿ ಇಂಡಿಯನ್ ಆಂಟಿಕ್ವೆರಿಯು ಏಸಿಯಾಟಿಕ್ ಸೊಸೈಟಿ ಜರ್ನಲ್** ಮಾದರಿಯನ್ನನುಸರಿಸಿ, ಇತರ ಲೇಖನಗಳ ಜೊತೆಗೆ ಶಾಸನಗಳನ್ನೂ ಪ್ರಕಟಿಸತೊಡಗಿತು. ಇದರ ಸಂಪಾದಕರಾದ ಜಾಸ್. ಬರ್ಜೆಸ್ ಮೊದಲ ತಲೆಮಾರಿನ ಹೆಸರಾಂತ ಶಾಸನತಜ್ಞರಲ್ಲಿ ಒಬ್ಬರಾಗಿದ್ದರು.

ಶಾಸನ ಪ್ರಕಟನೆಗಾಗಿ ಪ್ರತ್ಯೇಕ ಸಂಚಿಕೆಗಳು

ಶಾಸನ ಪ್ರಕಟನೆಗಾಗಿಯೇ ಪ್ರತ್ಯೇಕ ವೇದಿಕೆಯೊಂದು ದೊರೆಕಿದ್ದು **ಎಪಿಗ್ರಾಫಿಯ ಇಂಡಿಕಾ** ಜರ್ನಲ್ 1892ರಲ್ಲಿ ಪ್ರಾರಂಭವಾದಾಗ. ಅಂದಿನಿಂದ ಇಂದಿನವರೆಗೂ ತನ್ನ ಕಾರ್ಯವನ್ನು ಅವಿರತವಾಗಿ ಮುಂದುವರಿಸಿಕೊಂಡು ಬಂದು, ದೇಶದ ಮೂಲೆಮೂಲೆಗಳಲ್ಲಿದ್ದ ಸಾವಿರಾರು ಶಾಸನಗಳನ್ನು ಬೆಳಕಿಗೆ ತಂದದ್ದು ಈ ಜರ್ನಲ್‌ನ ಹಿರಿಮೆ. ಇದೇ ಅವಧಿಯಲ್ಲಿ ಇನ್ನೂ ಕೆಲವು ವೇದಿಕೆಗಳು ಕಾರ್ಯಮಾಡತೊಡಗಿದ್ದವು. ಅವುಗಳಲ್ಲಿ 1877ರಲ್ಲಿ ಪ್ರಾರಂಭವಾದ **ಕಾರ್ಪಸ್ ಇನ್‌ಸ್ಕ್ರಿಪ್ಷನ್ಸ್ ಇಂಡಿಕೇರಮ್** (ಕಾರ್ಪಸ್ ಇನ್‌ಸ್ಕ್ರಿಪ್ಷನ್ಸ್ ಗ್ರೀಕೇರಮ್ ಅನುಸರಿಸಿ), ಮತ್ತು 1890ರಲ್ಲಿ ಪ್ರಾರಂಭವಾದ **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್** ಮಾಲಿಕೆಗಳು ಪ್ರಮುಖವಾಗಿದ್ದವು. ತಮ್ಮ ತಮ್ಮ ರಾಜ್ಯಗಳ ಪ್ರಾಕ್ತನ ಸಂಶೋಧನೆಗೆಗಾಗಿ ತಂಜಾವೂರಿನ ಅರಸರು 'ಟ್ರಾವಂಕೂರ್ ಪ್ರಾಕ್ತನ ಇಲಾಖೆ'ಯನ್ನು (1891), ಮೈಸೂರು ಅರಸರು 'ಮೈಸೂರು ಪ್ರಾಕ್ತನ ಇಲಾಖೆ'ಯನ್ನು (1894)ಸ್ಥಾಪಿಸಿ, ಶಾಸನಾಧ್ಯಯನವನ್ನು ಸಾಕಷ್ಟು ವಿಸ್ತರಿಸಿದ್ದೂ ಇದೆ ಕಾಲದಲ್ಲಿಯೆ.

ಮೊದಮೊದಲ ಶಾಸನತಜ್ಞರು

ಶಾಸನ ಪ್ರಕಟಣೆಗಾಗಿಯೆ ಪ್ರತ್ಯೇಕ ವೇದಿಕೆಗಳು ದೊರಕಿದ ಆರಂಭಿಕ ಹಂತದಿಂದಲೇ ಕನ್ನಡ ಶಾಸನಗಳು ಬೆಳಕು ಕಾಣತೊಡಗಿದವು. ಉದಾಹರಣೆಗೆ, **ಇಂಡಿಯನ್ ಆಂಟಿಕ್ವೆರಿಯ** ಮೊದಲ ಸಂಚಿಕೆಯಲ್ಲಿ (1872) ಹಿರೇಹಡಗಲಿ, ಮರ್ಕೆರಾ, ತಿಡಗುಂದಿ ತಾಮ್ರಶಾಸನಗಳಲ್ಲದೆ, ಕದ್ರೋಳಿ ಮತ್ತು ಸಾಲೋಟ್ಗಿ ಶಿಲಾಶಾಸನಗಳು ಪ್ರಕಟನೆಗೊಂಡರೆ, **ಎಪಿಗ್ರಾಫಿಯಾ ಇಂಡಿಕಾ**ದ ಮೊದಲ ಸಂಚಿಕೆಯಲ್ಲಿ (1892) ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ತಾಮ್ರಪಟ, ಗಂಗ ಎರೆಯಪ್ಪರಸನ ಬೇಗೂರು ಶಾಸನ, ಮತ್ತು ವಿಜಯನಗರದರಸ ಕೃಷ್ಣದೇವರಾಯನ ಹಂಪಿಯ ಶಾಸನಗಳು ಪ್ರಕಟಗೊಂಡಿದ್ದವು. ಕರ್ನಾಟಕದ ಶಾಸನಗಳಲ್ಲಿ

ಆಗ ವಿಶೇಷ ಆಸಕ್ತಿ ಹೊಂದಿದ್ದವರಲ್ಲಿ ಜಾಸ್. ಬರ್ಜೆಸ್, ಜೆ.ಎಫ್. ಫ್ಲೀಟ್, ಹುಲ್ಟ್ಷ್, ಕರ್ನಲ್ ಮೆಕೆಂಜಿ, ಬಿ.ಎಲ್. ರೈಸ್, ಎಫ್. ಕಿಟ್ಟಲ್, ಕೆ.ಜಿ. ಭಂಡಾರ್ಕರ್, ವಿ.ಎನ್. ನರಸಿಮ್ಮಯ್ಯಂಗಾರ್ ಮತ್ತು ಎಸ್. ಪಾಂಡುರಂಗ ಪಂಡಿತ ಮುಂತಾದವರಿದ್ದರು. ಈ ದಶಕಗಳಲ್ಲಿ ಪ್ರಾರಂಭವಾದ ಕರ್ನಾಟಕದ ಶಾಸನಗಳ ಪ್ರಕಟನೆಯು, ತನ್ನ ಪ್ರಮಾಣವನ್ನು ಸತತವಾಗಿ ಹೆಚ್ಚಿಸಿಕೊಳ್ಳುತ್ತಲೇ ಮುಂದುವರಿದು, ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ದೇಶದಲ್ಲಿಯೇ ಅತಿಹೆಚ್ಚು ಸಂಖ್ಯೆಯ ಶಾಸನಗಳನ್ನು ಪರಿಚಯಿಸಿದ ಕೀರ್ತಿಗೆ ಪಾತ್ರವಾಗಿತ್ತು.

ಪಾಶ್ಚಾತ್ಯ ಶಾಸನತಜ್ಞರು ಮತ್ತು ದೇಸೀ ಪಂಡಿತರು

ಶಾಸನಾಧ್ಯಯವು 1800ರ ಸುಮಾರಿನಲ್ಲಿ ಪ್ರಾರಂಭವಾದಾಗ ಶಿಲೆ ಅಥವಾ ತಾಮ್ರಪಟದ ಮೇಲೆ ಕೊರೆದಿದ್ದ ಅಕ್ಷರಗಳನ್ನು ನೇರವಾಗಿ ಓದಿ, ಪ್ರತಿಮಾಡಲಾಗುತ್ತಿತ್ತು. ಇದನ್ನು 'ಐ-ಕಾಪಿ', ಅಥವಾ 'ನೋಟಕ್ಕೆ ನಿಲುಕುವ ನಕಲು' ('ಕಣ್ಣಚ್ಚು'-ಸಂ.) ಎಂದು ಕರೆಯಲಾಗಿತ್ತು. ಮೆಕಂಜಿ ಮತ್ತು ವಾಲ್ಟರ್ ಇಲ್ಲಿಯಟ್ ಶಾಸನಗಳನ್ನು ಸಂಗ್ರಹಿಸಿದ್ದು ಇದೇ ಬಗೆಯಲ್ಲಿ. ಶಿಲಾಶಾಸನ ಮತ್ತು ತಾಮ್ರಪಟಗಳ ಲಿಪಿಗಳನ್ನು ಗುರುತಿಸಿ, ಸರಿಸುಮಾರು ಅವನ್ನು ಅರ್ಥೈಸಿ, ಆಧುನಿಕ ಲಿಪಿಯಲ್ಲಿ ನಕಲು ಮಾಡುವ ಕನ್ನಡ ಮತ್ತು ಸಂಸ್ಕೃತ ಪಂಡಿತರು ಆ ಕಾಲದಲ್ಲಿದ್ದುದರಿಂದ ಅವರ ಸಹಾಯ ಪಡೆದುಕೊಂಡೇ 19ನೆಯ ಶತಮಾನದ ಬಹುತೇಕ ವಿದೇಶಿ ಪಂಡಿತರು ಶಾಸನಗಳನ್ನು ಓದಿದ್ದರು. 18ನೆಯ ಶತಮಾನದಲ್ಲಿ ಬ್ರಾಹ್ಮೀಲಿಪಿಯನ್ನು ಓದಬಲ್ಲ ಒಬ್ಬ ಪಂಡಿತನೂ ದೇಶದಲ್ಲಿ ಇರದಿದ್ದುದಕ್ಕಿಂತ ಇದು ಭಿನ್ನವಾಗಿತ್ತು. ಮೆಕೆಂಜಿ ಮತ್ತು ಇಲ್ಲಿಯಟ್‌ಗೆ ಸಹಾಯಕರಾಗಿದ್ದ ಆಂಧ್ರಪ್ರದೇಶದ ಕಾವೆಲ್ಲಿ ಸೋದರರು, ಶ್ರೀವರ್ಮಸೂರಿ, ಕಾದಂಬರಿ ಜಗನ್ನಾಥಗುರು, ವಲಿಲ ಸುಬ್ಬರಾವ್, ಚಿರಪುರಿ ಜಯರಾಮುಡು, ಅಲ್ಲದೆ ಇನ್ನೂ ಕೆಲವು ತೆಲುಗು ನಿಯೋಗಿ ಬ್ರಾಹ್ಮಣರ ಬಗ್ಗೆ, ಮತ್ತು ಕರ್ನಾಟಕದ ಧುಮಯ್ಯ (ಧರ್ಮಯ್ಯ), ರೋಣದ ನಾಗಪ್ಪಶಾಸ್ತ್ರಿ ಮತ್ತು ಈತನ ಮಗನ ಬಗ್ಗೆ, ಮಾಹಿತಿ ಇದೆ. ಆದರೆ ಶಾಸನಾಧ್ಯಯನವು ಸಾಂಸ್ಥಿಕ ಸ್ವರೂಪ ಪಡೆದುಕೊಂಡ ನಂತರ, ಇವುಗಳಲ್ಲಿ ನೌಕರಿಗೆ ಸೇರಿ 'ಯುವರ್ ಮೋಸ್ಟ್ ಒಬಿಡಿಯಂಟ್ ಸರ್ವೆಂಟ್ಸ್' ಎಂದು ಸಹಿ ಮಾಡುತ್ತಾ, ಜೆ.ಎಫ್. ಫ್ಲೀಟ್, ಬಿ.ಎಲ್. ರೈಸ್, ಮುಂತಾದವರಿಗೆ ಸಹಾಯಕರಾಗಿದ್ದ ನೂರಾರು ಸ್ಥಳೀಕರಲ್ಲಿ ಒಬ್ಬಿಬ್ಬರ ಹೆಸರುಗಳು ಮಾತ್ರ ಈಗ ಉಳಿದುಕೊಂಡಿವೆ. ಈ ಕಾಲದಲ್ಲಿ ಇಲಾಖೆಯ ಮುಖ್ಯಸ್ಥನನ್ನು ಹೊರತುಪಡಿಸಿ, ಉಳಿದವರೆಲ್ಲರೂ ತೆರೆಯ ಮರೆಯಲ್ಲಿಯೇ ದುಡಿಯಬೇಕಾದ ವ್ಯವಸ್ಥೆ ಇತ್ತು. ದುರಾದೃಷ್ಟವಶಾತ್, ಈ ಅನಿಷ್ಟ ಕಲೋನಿಯಲ್ ಪದ್ಧತಿಯನ್ನು ಇಂದಿನ ಪ್ರಾಕ್ತನ ಇಲಾಖೆ, ಪ್ರಧಾನ ಶಾಸನತಜ್ಞರ ಕಚೇರಿ, ಕೇಂದ್ರ ಹಾಗೂ ರಾಜ್ಯ ಪತ್ರಾಗಾರ ಇಲಾಖೆ, ವಸ್ತು ಸಂಗ್ರಹಾಲಯ, ಈ ಮುಂತಾದ ಸರಕಾರಿ ಸಂಸ್ಥೆಗಳು ಮುಂದುವರಿಸಿಕೊಂಡು ಬರುತ್ತಲಿವೆ. ಇದರಿಂದಾಗಿ ಈ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರತಿಭಾವಂತ ಯುವಕರಿಗೆ ತಮ್ಮ ಕೆಲಸದಲ್ಲಿ ಉತ್ಸಾಹವಿಲ್ಲದಂತಾಗಿ, ಈ ಸಂಸ್ಥೆಗಳು ಸೊರಗತೊಡಗಿವೆ.

ಮೈಸೂರು ರಾಜ್ಯದ ಸಾಧನೆ

ಮೈಸೂರು ರಾಜ್ಯದ ಸಾಧನೆಯ ಹೆಚ್ಚಿನ ಪಾಲು ಬಿ.ಎಲ್. ರೈಸ್‌ಗೆ ಸಲ್ಲುವುದು. **ಮೈಸೂರು ಪ್ರಾಕ್ತನ ವಾರ್ಷಿಕ ವರದಿಗಳನ್ನಲ್ಲದೆ, ಎಪಿಗ್ರಾಫಿಯಾ ಕರ್ನಾಟಿಕಾ** ಶೀರ್ಷಿಕೆಯ 12 ಸಂಪುಟಗಳನ್ನು (1894-1905) ಪ್ರಕಟಿಸಿ, ಸುಮಾರು ಒಂದು ದಶಕದ ಕಾಲದಲ್ಲಿ 8,864 ಶಾಸನಗಳನ್ನು ಇವರು ಬೆಳಕಿಗೆ ತಂದಿದ್ದರು. ಇಷ್ಟೊಂದು ಸಂಖ್ಯೆಯ ಶಾಸನಗಳು

ಯಾವ ರಾಜ್ಯದ ಯಾವ ಭಾಷೆಯಲ್ಲೂ ಆಗ ಪ್ರಕಟವಾಗಿರಲಿಲ್ಲ. ಅಲ್ಲದೆ ಈ ಸಂಪುಟಗಳ ಸಂಪಾದನಾ ಕಾರ್ಯದಲ್ಲಿ ತೊಡಗಿಕೊಳ್ಳುವುದಕ್ಕಿಂತ ಸುಮಾರು ಎರಡು ದಶಕಗಳ ಮುಂಚೆಯೇ ಬಿ.ಎಲ್. ರೈಸ್ **ಇಂಡಿಯನ್ ಆಂಟಿಕ್ವೆರಿಯ** ಏಳನೆಯ ಸಂಪುಟದಲ್ಲಿ (1878) ಶಿವಮೊಗ್ಗ ಜಿಲ್ಲೆಯ ತಾಗರ್ತಿ ಅಗ್ರಹಾರದ ಕನ್ನಡ-ಸಂಸ್ಕೃತ ದ್ವಿಭಾಷಾ ತಾಮ್ರಪಟವನ್ನು ಪ್ರಕಟಿಸಿ, ಇದರ ಕಾಲವು ಸು.ಕ್ರಿ.ಶ. 350 ಇರಬಹುದೆಂದಿದ್ದರು. ಈ ಕಾರಣ ಇದು ಕನ್ನಡದ ಅತಿ ಪೂರ್ವಕಾಲದ ಶಾಸನವೆನಿಸಿತ್ತು. ವಾದಕ್ಕೆ ಮುಕ್ತ ವೇದಿಕೆಯನ್ನು ಒದಸಿದ್ದ ಈ ಜರ್ನಲ್‌ನಲ್ಲಿ ರೈಸ್ ಪ್ರಕಟಿಸಿದ ಲೇಖನಕ್ಕೆ ಯಾವ ಭಿನ್ನಾಭಿಪ್ರಾಯವೂ ವ್ಯಕ್ತವಾಗಿರಲಿಲ್ಲ; ಅಂದು ಮಾತ್ರವಲ್ಲ, ಇಂದಿನವರೆಗೂ ಆಗಿಲ್ಲ.

20ನೆಯ ಶತಮಾನದಾರಂಭದಲ್ಲಿ ಒಡೆಯರ ಮೈಸೂರು ರಾಜ್ಯವು ಸಾಧಿಸಿದ ಪ್ರಗತಿಯನ್ನು ಸರಿಗಟ್ಟುವ ಮತ್ತೊಂದು ನಿದರ್ಶನವು ಯಾವ ರಾಜ್ಯದಲ್ಲಿಯೂ ಯಾವ ಭಾಷೆಯಲ್ಲಿಯೂ ಇರಲಿಲ್ಲ. ಇದಲ್ಲದೆ 1905-1946 ಅವಧಿಯಲ್ಲಿ, ಪ್ರತಿವರ್ಷವೂ ನಿಯಮಬದ್ಧವಾಗಿ ಮೈಸೂರು ಪ್ರಾಕ್ತನ ಇಲಾಖೆಯು ಪ್ರಕಟಿಸುತ್ತಿದ್ದ ವಾರ್ಷಿಕ ವರದಿಗಳಲ್ಲಿ ಸುಮಾರು 2,000 ಶಾಸನಗಳನ್ನು ಬೆಳಕಿಗೆ ತರಲಾಗಿತ್ತು. ಇವುಗಳನ್ನು ಜಿಲ್ಲಾವಾರು ವಿಂಗಡಿಸಿ, **ಎಪಿಗ್ರಾಫಿಯ ಕರ್ನಾಟಿಕಾದ** ಅನುಬಂಧ ಸಂಪುಟಗಳಲ್ಲಿ ಪ್ರಕಟಿಸುವ ಕಾರ್ಯವು 1940ರಲ್ಲಿ ಪ್ರಾರಂಭವಾಯಿತು. ಆದರೆ ಈ ಸಂಪುಟಗಳ ಪ್ರಕಟನೆಯು ನಿಯಮಬದ್ಧವಾಗಿ ಆಗದಿದ್ದುದರಿಂದ, 1972 ವರೆಗೂ ಆರು ಜಿಲ್ಲೆಗಳ ಅನುಬಂಧ ಸಂಪುಟಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಾಗಿ, ಇನ್ನುಳಿದ ಜಿಲ್ಲಾ ಸಂಪುಟಗಳು ಪ್ರಕಟಗೊಳ್ಳದೇ ಉಳಿದಿದ್ದವು. ಇದರಿಂದಾಗಿ **ಎಪಿಗ್ರಾಫಿಯಾ ಕರ್ನಾಟಿಕಾದ** ಮೊದಲ 12 ಸಂಪುಟಗಳಲ್ಲಿ ವ್ಯವಸ್ಥಿತವಾಗಿ ದೊರಕುತಿದ್ದ ಮಾಹಿತಿಯು, 40 ವಾರ್ಷಿಕ ವರದಿಗಳಲ್ಲಿ ಮತ್ತು ಅಪೂರ್ಣಾವಸ್ಥೆಯಲ್ಲಿ ನಿಂತಿದ್ದ ಅನುಬಂಧ ಸಂಪುಟದಲ್ಲಿ ಸಿಗದಂತಾಗಿ, ಸಂಶೋಧಕರಿಗೆ ತೊಂದರೆಯಾಗಿತ್ತು. ಇದನ್ನು ತಿಳಿಗೊಳಿಸಲೆಂದು, 1974ರಲ್ಲಿ ಒಂದು ಸಮೀಕ್ಷೆಯನ್ನು ಕೈಕೊಂಡು ಯಾವ ಯಾವ ಸಂಪುಟಗಳಲ್ಲಿ ಯಾವ ಶಾಸನಗಳು ಪ್ರಕಟವಾಗಿವೆ, ಪ್ರಕಟವಾಗದೆ ಉಳಿದುಕೊಂಡಿವೆ, ಎಂಬುದನ್ನು ತಿಳಿಸಿಕೊಡಲು ನಾನೊಂದು ಪ್ರಯತ್ನ ಮಾಡಿದ್ದೆ, ಇದರಿಂದಾಗಿ 1956ವರೆಗೂ ಈ ಇಲಾಖೆಯು ಸುಮಾರು 13,300 ಶಾಸನಗಳನ್ನು ಪ್ರಕಟಿಸಿದ್ದ ವಿವರವು ಬಹಿರಂಗಗೊಂಡಿತ್ತು. 1956ರಿಂದ ಈವರೆಗೂ (2019), ಅಂದರೆ ಇತ್ತೀಚಿನ ದಶಕಗಳಲ್ಲಿ, ಮೈಸೂರು ಪ್ರಾಕ್ತನ ಇಲಾಖೆಯು ಪ್ರಕಟಿಸಿರುವ ಶಾಸನಗಳ ಸಂಖ್ಯೆ ಅತ್ಯಲ್ಪ, ಅಲ್ಲದೆ ಈ ಇಲಾಖೆಯು ಪ್ರಕಟನೆಗಳು ಈಗ ತುಂಬಾ ಅನಿಯತವಾಗಿರುವುದರಿಂದ ಸಂಶೋಧಕರು ಅವುಗಳನ್ನು ಎದುರು ನೋಡುವುದರಲ್ಲಿ ಆಸಕ್ತಿಯನ್ನು ಬಹುತೇಕ ಕಳೆದುಕೊಂಡಿರುವರು.

ಶಾಸನಗಳನ್ನು ಓದುವ ಹಾಗೂ ಪ್ರತಿಮಾಡುವ ವಿಧಾನ

ಶಾಸನಗಳನ್ನು ಓದುವ ವಿಧಾನವು 19ನೆಯ ಶತಮಾನದಲ್ಲಿ ಅವೈಜ್ಞಾನಿಕವಾಗಿ ದ್ದುದರಿಂದ, ಇದನ್ನು ಸರಿಪಡಿಸಿ, ಗುಣಮಟ್ಟದ ವಿಧಾನವೊಂದನ್ನು ದೇಶಾದ್ಯಂತ ಜಾರಿಗೆ ತರಲು ಈ ಕಾಲದಲ್ಲಿ ಹೆಚ್ಚು ಆಸಕ್ತನಾಗಿದ್ದವನೆಂದರೆ **ಇಂಡಿಯನ್ ಆಂಟಿಕ್ವೆರಿಯ** ಸಂಪಾದಕನಾದ ಜಾಸ್. ಬರ್ಜೆಸ್. 'ಆಂಟಿಕ್ವೆರಿ'ಯ ಮೊದಲ ಸಂಚಿಕೆಯಲ್ಲಿ ಜೆ.ಎಫ್. ಫ್ಲೀಟ್ ಕೂಡಾ ಒಂದು ಪತ್ರ ಪ್ರಕಟಿಸಿ, ಶಾಸನಶಿಲೆಗೆ ಮೆತ್ತಿದ್ದ ಲೆಪ್ಪವನ್ನು ಹೇಗೆ ನಿವಾರಿಸಿ, ಫಲಕವನ್ನು ಶುಭ್ರಗೊಳಿಸಬೇಕೆಂಬುದು ಯಾರಿಗಾದರೂ ಗೊತ್ತಿದ್ದರೆ ತಿಳಿಸಲು

ಕೇಳಿಕೊಂಡಿದ್ದನು. ಇದಕ್ಕೆ ಉತ್ತರವೂ ಬಂದಿತ್ತು. ಆದರೆ ಇದರಿಂದ ಶಿಲೆಯನ್ನು ಶುಭ್ರಗೊಳಿಸಿ ಶಾಸನವನ್ನು ಓದಲು ಸಹಾಯವಾಗಿತ್ತೇ ವಿನಃ ಅದನ್ನು ಸಮರ್ಪಕವಾಗಿ ಪ್ರತಿಮಾಡಲು ಸಹಾಯವಾಗಿರಲಿಲ್ಲ.

ಇಂಡಿಯನ್ ಆಂಟಿಕ್ವೆರಿಯು ಮೊದಮೊದಲ ಸಂಚಿಕೆಗಳಲ್ಲಿ ಶಾಸನಗಳನ್ನು ಪ್ರಕಟಿಸುತ್ತಿದ್ದ ಮೂರು ಮಾದರಿಗಳು ದೊರಕುವವು. ಅವು: (1) ನೋಟಕ್ಕೆ ನಿಲುಕುವ ನೈಜ ನಕಲು, (eye-copy ಅಥವಾ facsimile); (2) ಕೆಮರಾದಿಂದ ಸೆರೆಹಿಡಿದ ಫೋಟೋ ಪ್ರತಿ (photo-copy); (3) ಪಠ್ಯವನ್ನು ಆಧುನಿಕ ಲಿಪಿಯಲ್ಲಿ ಬರೆದ ಹಸ್ತಪ್ರತಿ. ಮೆಕಂಜಿ ಮತ್ತು ಇಲ್ಲಿಯಟ್ ಸಂಗ್ರಹಿಸಿದ ಬಹುತೇಕ ಶಾಸನಗಳು 'ಫಾಕ್ಸಿಮೈಲ್' ಇಲ್ಲವೆ ಹಸ್ತಪ್ರತಿಗಳಾಗಿದ್ದವು. ಪ್ರತಿಮಾಡುವವರು ಅಸಮರ್ಥರಾಗಿದ್ದರೆ ಅವುಗಳಲ್ಲಿ ಹೆಚ್ಚಿನ ದೋಷಗಳು, ಸಮರ್ಥರಾಗಿದ್ದರೆ ಕಡಿಮೆ ದೋಷಗಳ ಸೇರಿರುತ್ತಿದ್ದವು. ಇಲ್ಲಿಯಟ್‌ನ ಸಂಗ್ರಹವನ್ನು ನೋಡಿದ್ದ ಫ್ಲೀಟ್ ಅವುಗಳಲ್ಲಿರುವ ದೋಷಗಳ ಬಗ್ಗೆ ದೂರಿದ್ದನು. **ಆಂಟಿಕ್ವೆರಿಯಲ್ಲಿ** ಪ್ರಕಟನೆ ಬೇಡಿ ಆಗ ಬರುತ್ತಿದ್ದ ಬಹುತೇಕ ಶಾಸನಗಳ 'ಫಾಕ್ಸಿಮೈಲ್'ಗಳನ್ನು ಸಂಪಾದಕನಾದ ಜಾಸ್. ಬರ್ಜೆಸ್ ಸ್ವತಃ ತಯಾರಿಸಿ ಪ್ರಕಟಿಸುತ್ತಿದ್ದನು. ಇದರ ಬಗ್ಗೆ ಹೆಚ್ಚು ಚಿಂತಿತನಾಗಿದ್ದ ಈತನು 1873ರಲ್ಲಿ, ಅಂದರೆ **ಆಂಟಿಕ್ವರಿ** ಪ್ರಾರಂಭವಾದ ಮರುವರ್ಷ, ಒಂದು ಸುದೀರ್ಘ ಲೇಖನವನ್ನು ಬರೆದು, ಒತ್ತು ಹಾಳೆಯ ಪ್ರತಿಗಳನ್ನು ಮಾಡುವ ವಿಧಾನವನ್ನು ವಿವರಿಸಿದ್ದನು, ಹಾಗೂ ಫ್ರೆಂಚ್ ಭಾಷೆಯಲ್ಲಿ **'ಎಸ್ಟೆಂಪೇಜ್'** (estempage) ಎಂಬ ಪದದಿಂದ ಇವನ್ನು ಕರೆಯುತ್ತಿದ್ದುದನ್ನೂ ತಿಳಿಸಿದ್ದನು. ಶಿಲಾಫಲಕಗಳ ಮೇಲೆ ಒದ್ದೆ ಕಾಗದವನ್ನು ಹರಡಿ, ಬಟ್ಟೆಯ ಗಂಟಿನಿಂದ (dabbar) ಲಘುವಾಗಿ ಬಡಿದು, ಕಾಡಿಗೆಯನ್ನು ತೀಡಿ, ಪ್ರತಿಗಳನ್ನು ಸಿದ್ಧಗೊಳಿಸುವ ಈ ಎಸ್ಟೆಂಪೇಜ್ ವಿಧಾನವು ಅಂದು ಪ್ರಾರಂಭಗೊಂಡು ಇಂದಿನವರೆಗೂ ಮುಂದುವರೆದುಕೊಂಡು ಬಂದಿದೆ. ಒಬ್ಬನು ಓದಿದ ಶಾಸನ ಪಠ್ಯವು ಸರಿಯೋ ತಪ್ಪೋ ಎಂಬುದನ್ನು ದೃಢೀಕರಿಸಿಕೊಳ್ಳಲು, ಪಡಿಯಚ್ಚುಗಳನ್ನು ಶಾಸನದ ಪಾಠದೊಡನೆ ಪ್ರಕಟಿಸಲು, ಮತ್ತು ಇವನ್ನು ಶಾಶ್ವತವಾಗಿ ಪತ್ರಾಗಾರದಲ್ಲಿ ರಕ್ಷಿಸಲು ಇದರಿಂದ ಸಾಧ್ಯವಾಗಿದೆ.

II. ಹಳಗನ್ನಡ ಶಾಸನಗಳ ಸಂಖ್ಯಾ ಪ್ರಮಾಣ

ಕಳೆದ ಒಂದೂವರೆ ಶತಮಾನದಲ್ಲಿ ಮೈಸೂರು ರಾಜ್ಯದಲ್ಲಿ ಶೋಧಿಸಿ ಪ್ರಕಟಿಸಿದ ಶಾಸನಗಳ ಸಂಖ್ಯೆಯ ತಿಳುವಳಿಕೆ ಇನ್ನೂ ಸ್ಪಷ್ಟಗೊಳ್ಳಬೇಕಾಗಿದ್ದರೂ, ಇದಕ್ಕಿಂತಲೂ ಹೆಚ್ಚು ಅಸ್ಪಷ್ಟವಾಗಿರುವುದು ಮುಂಬೈ, ಹೈದರಾಬಾದ್ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ಒಂದೆ ಹಂಚಿಹೋಗಿದ್ದ ಕನ್ನಡ ಪ್ರದೇಶಗಳ ಶಾಸನಗಳ ಮಾಹಿತಿ. ಅದಿನ್ನೂ ಊಹೆಯಲ್ಲಿಯೇ ಇರುವುದರಿಂದ, ಕರ್ನಾಟಕದ ಒಟ್ಟುಶಾಸನ ಸಂಖ್ಯೆಯ ಬಗ್ಗೆ ಏನನ್ನೂ ನಿಖರವಾಗಿ ಹೇಳದಂತಾಗಿದೆ. ಈ ಪ್ರಾಂತ್ಯಗಳಲ್ಲಿ ರಾಜಧಾನಿ ಪಟ್ಟಣಗಳನ್ನು ಕಟ್ಟಿ ಆಳಿದ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚೂರಿ, ವಿಜಯನಗರ, ಮತ್ತು ಬಹುಮನಿ ಸುಲ್ತಾನರು ಮತ್ತು ಇವರ ಸಾಮಂತರು ಬರೆಸಿದ್ದ ಶಾಸನಗಳ ಸಂಖ್ಯೆಯು ಹಳೆಯ ಮೈಸೂರು ರಾಜ್ಯದಲ್ಲಿ ರಾಜಧಾನಿಗಳನ್ನು ಕಟ್ಟಿ ಆಳಿದ ರಾಜವಂಶಜರು ಬರೆಸಿದ್ದ ಶಾಸನ ಸಂಖ್ಯೆಗಿಂತ ಕಡಿಮೆ ಇರಲಾರದೆನಿಸಿದರೂ ಕೂಲಂಕಷ ಶೋಧನೆಯಾಗುವವರೆಗೂ ಈ ಬಗ್ಗೆ ಯಾವ ನಿರ್ಣಯಕ್ಕೂ ಬರುವಂತಿಲ್ಲ. ಆದರೆ ಇತ್ತೀಚಿಗೆ ಕೈಗೊಂಡ ಸಮೀಕ್ಷೆಯಿಂದ ಸ್ಪಷ್ಟಚಿತ್ರವೊಂದು ನಮಗೆ ದೊರೆಕಿದ್ದು, ಅದು

ನಾಲ್ಕನೆಯ ಶತಮಾನದಿಂದ 10ನೆಯ ಶತಮಾನದ ಕೊನೆಯವರೆಗೆ, ಕದಂಬರು, ಚಾಳುಕ್ಯರು, ಗಂಗರು, ರಾಷ್ಟ್ರಕೂಟರು ಮತ್ತು ಇವರ ಸಮಕಾಲೀನರು ಹಳಗನ್ನಡದಲ್ಲಿ ಬರೆಸಿದ ಶಿಲಾ ಮತ್ತು ತಾಮ್ರಪಟಗಳ ಸಂಖ್ಯೆ 2000ಕ್ಕೂ ಕಡಿಮೆ ಇಲ್ಲವೆಂಬುದು. ಇದು ಈವರೆಗೂ ಬೆಳಕಿಗೆ ಬಂದಿರುವ ಹಾಗೂ ನಮಗಿಂದಿಗೂ ಕೈಗೆಟಕುವ ಶಾಸನಗಳ ಸಂಖ್ಯೆ ಮಾತ್ರವಾಗಿದ್ದು, ಮೊದಲ ಸಹಸ್ರಮಾನದಲ್ಲಿ ಈ ರಾಜವಂಶಗಳಡಿ ಬರೆಸಿದ ಎಲ್ಲ ಹಳಗನ್ನಡ ಶಾಸನಗಳನ್ನು ಒಳಗೊಂಡಿಲ್ಲ.

ಆರಂಭಕಾಲದ ಶಾಸನಗಳ ಭಾಷಾ ವಿಭಜನೆ

ಸುಮಾರು ಕ್ರಿ.ಶ. ನಾಲ್ಕರಿಂದ 10ನೆಯ ಶತಮಾನದವರೆಗೂ ಬರೆಸಿದ ಸುಮಾರು 2,000ಕ್ಕೂ ಹೆಚ್ಚು ಸಂಖ್ಯೆಯ ಹಳಗನ್ನಡ ಶಾಸನಗಳಲ್ಲದೆ ನಾಲ್ಕನೆಯ ಶತಮಾನಕ್ಕಿಂತ ಮುಂಚೆ ಬರೆಸಿದ ಸುಮಾರು 400 ಪ್ರಾಕೃತ (ತುಂಡು) ಶಾಸನಗಳು, ನಾಲ್ಕನೆಯ ಶತಮಾನದ ನಂತರ ಕನ್ನಡ ಲಿಪಿಯಲ್ಲಿ ಬರೆಸಿದ ಕನಿಷ್ಠ 500 ಸಂಸ್ಕೃತ ಶಾಸನಗಳ ಲೆಕ್ಕವೂ ದೊರೆಕಿದ್ದು, ಇವೆಲ್ಲವನ್ನು ಕೂಡಿಸಿದರೆ ಕ್ರಿ.ಶ. ಮೊದಲ ಸಹಸ್ರಮಾನದ ಕರ್ನಾಟಕದಲ್ಲಿ ಬರೆಸಿದ ಶಾಸನಗಳ ಸಂಖ್ಯೆಯು ಕನಿಷ್ಠ 3,000 ತಲುಪುವುದು. ಶಾಸನ ಕ್ಷೇತ್ರದಲ್ಲಿ ತಮಿಳರು ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದರೂ ಮೊದಲ ಸಹಸ್ರಮಾನದ ಅವಧಿಯಲ್ಲಿ ತಮಿಳು ಲಿಪಿ ಮತ್ತು ಭಾಷೆಯಲ್ಲಿ ಬರೆಸಿದ ಶಾಸನಗಳು ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆಸಿದ ಶಾಸನ ಸಂಖ್ಯೆಗೆ ಸಮನಾಗಿರಲಿಲ್ಲ ವೆನಿಸುವುದು. ಇದಕ್ಕೆ ಕಾರಣ ಬರಹ ಕ್ಷೇತ್ರದಲ್ಲಿ ತಮಿಳರ ನಾಗಾಲೋಟ ಪ್ರಾರಂಭವಾಗಿದ್ದು ಎರಡನೆಯ ಸಹಸ್ರಮಾನದಲ್ಲಿ, ಅಂದರೆ ತಂಜಾವೂರಿನ ಚೋಳರ ಆಳ್ವಿಕೆ ಪ್ರಾರಂಭವಾದಂದಿನಿಂದ. ಮೊದಲ ಸಹಸ್ರಮಾನದಲ್ಲಿ ತಮಿಳರು ಬರೆಸಿದ ಶಾಸನಗಳ ಸಂಖ್ಯೆಯನ್ನು ತಿಳಿದುಕೊಳ್ಳಲು ನಾವು ಈಗ ಮಾಡಿರುವಂತಹ ಸಮೀಕ್ಷೆಯನ್ನು ಅವರೂ ಮಾಡಬೇಕಾಗುವುದು. ಇದು ಏನೇ ಇರಲಿ, ಹಳಗನ್ನಡ ಶಾಸನಗಳಲ್ಲಿ ಕಂಡು ಬರುವ ಕೆಲವು ವಿಶೇಷತೆಗಳನ್ನು ನಾವು ಗಮನಿಸಬೇಕಾದ ಅವಶ್ಯಕತೆ ಇದೆ. ಅವು,

(1) ಕ್ರಿ.ಶ. ಏಳನೆಯ ಶತಮಾನಕ್ಕಿಂತ ಮುಂಚೆ ಕರ್ನಾಟಕದಲ್ಲಿ ಬರೆಸಿದ ಸಂಸ್ಕೃತ ಶಾಸನಗಳೆಲ್ಲವೂ ಕನ್ನಡ ಲಿಪಿಯಲ್ಲಿದ್ದವು ಮತ್ತು ಹಳಗನ್ನಡ ವರ್ಣಗಳಾದ ಱ–ೞ ಗಳನ್ನು ಇವುಗಳಲ್ಲಿ ಬಳಸಲಾಗಿತ್ತು. ಈ ವರ್ಣಗಳಿರುವ ಮೊದಲ ಸಂಸ್ಕೃತ ಶಾಸನಗಳು ಬನವಾಸಿ ಕದಂಬರವಾಗಿದ್ದು, ಅವುಗಳಲ್ಲಿಯೇ ಮೊದಲಿನ ಶಾಸನವೆಂದರೆ ಸು. ಕ್ರಿ.ಶ. 405–430ರ ತಾಳಗುಂದ ಶಾಸನ. ಕದಂಬರ ಹೆಸರಾಂತ ಸಂಸ್ಕೃತ ಕವಿ ಕುಬ್ಜನೂ ಈ ವರ್ಣಗಳನ್ನು ತನ್ನ ಸಂಸ್ಕೃತ ಭಾಷಾ ಪ್ರಶಸ್ತಿಯಲ್ಲಿ ಬಳಸಿರುವುದು ವಿಶೇಷ ಗಮನಾರ್ಹ.

(2) ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಬರೆದ ದ್ವಿಭಾಷಾ ಶಾಸನಗಳು ಹೊರಬಂದದ್ದು ಇದೇ ಕಾಲದಲ್ಲಿ. ಇವುಗಳಲ್ಲಿ ಮೊದಲಿನದೆಂದರೆ ಭೋಗಿವರ್ಮನ ತಗರೆ ತಾಮ್ರಪಟವು. ಅಂದರೆ ಈ ಶಾಸನಗಳನ್ನು ಬರೆಸುವವರೂ ಬರೆಯುವವರೂ ದ್ವಿಭಾಷಿಗಳಾಗಿದ್ದರೆನ್ನುವುದರಲ್ಲಿ ಅನುಮಾನವಿಲ್ಲ. ಸಂಸ್ಕೃತವೂ ಕನ್ನಡವೂ ಒಟ್ಟು ಬಾಳಿ ಬೆಳೆದ್ದುದನ್ನೂ ಮತ್ತು ಸಂಸ್ಕೃತ ಭಾಷೆಯನ್ನು ಕನ್ನಡ ಲಿಪಿ ಸಮರ್ಥವಾಗಿ ನಿರ್ವಹಿಸಿದ್ದನ್ನು ಇದು ತೋರಿಸಿಕೊಡುವುದು.

(3) ಎಂಟನೆಯ ಶತಮಾನದಲ್ಲಿ ನಾಗರೀ ಲಿಪಿಯು ಕರ್ನಾಟಕವನ್ನು ಪ್ರವೇಶಿಸಿ, ಸಂಸ್ಕೃತಭಾಷಾ ಬರವಣಿಗೆಯನ್ನು ಕನ್ನಡಲಿಪಿಯೊಡನೆ ಹಂಚಿಕೊಳ್ಳತೊಡಗಿತು. ಸಂಸ್ಕೃತ ಶಾಸನವನ್ನು ಎರಡು ಲಿಪಿ(ಕನ್ನಡ ಮತ್ತು ನಾಗರೀ)ಗಳಲ್ಲಿ ಬರೆಸಿದ ಮೊದಲ ನಿದರ್ಶನವು ಆಲಂಪುರದಲ್ಲಿದೆ. ಇದನ್ನು 713ರಲ್ಲಿ ಬರೆಸಿದವನು ಚಾಲುಕ್ಯ ವಿಜಯಾದಿತ್ಯನು. ಆದರೆ ಇದರ ಲಿಪಿಕಾರನಾದ ಈಶಾನ್ಯಾಚಾರ್ಯನು ಕನ್ನಡದಲ್ಲಿ ಸಹಿಮಾಡಿ ತನ್ನ ತಾಯ್ನುಡಿ ಯಾವುದೆಂಬುದನ್ನು ಸ್ಪಷ್ಟಪಡಿಸಿರುವನು. ಇದಕ್ಕಿಂತ ಮುಂಚೆ, ಅಂದರೆ 595ರಲ್ಲಿ, ಚಾಲುಕ್ಯ ಮಂಗಲೇಶ್ವರನ ಮಹಾಕೂಟ ಸ್ತಂಭಶಾಸನವನ್ನು ಸಂಸ್ಕೃತದಲ್ಲಿ ಬರೆದ 'ದಾಟ ಆನ' ಎಂಬವನೂ ತನ್ನ ತಾಯಿಭಾಷೆ ಕನ್ನಡ ಎಂಬುದನ್ನು ಪ್ರದರ್ಶಿಸಿಕೊಂಡಿದ್ದನು. ಇದಕ್ಕೆ ಭಿನ್ನವಾಗಿ ಕನ್ನಡಭಾಷೆಯಲ್ಲಿ ಶಾಸನಗಳನ್ನು ಬರೆದು ಸಂಸ್ಕೃತದಲ್ಲಿ ಸಹಿಮಾಡಿದ ಲಿಪಿಕಾರರೂ ಈ ಕಾಲದಲ್ಲಿದ್ದರು. ಅಂಥವರಲ್ಲಿ ಬಹುಶಃ ಮೊದಲಿಗನೆಂದರೆ ಇಮ್ಮಡಿ ವಿಕ್ರಮಾದಿತ್ಯನ ಐಹೊಳೆ ಶಾಸನ ಬರೆದ 'ಚಂದ್ರ ದೇವಸ್ಯ'ನು.

(4) ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಮಿಶ್ರಮಾಡಿ ಬರೆದ ದ್ವಿಭಾಷಾ ಶಾಸನಗಳು ಕಾಣಿಸಿಕೊಂಡಿದ್ದು ಇದೇ ಕಾಲದಲ್ಲಿಯೇ. ಇವುಗಳಲ್ಲಿ 10 ಸಂಸ್ಕೃತ ಮತ್ತು 12 ಕನ್ನಡ ಪದಗಳಿರುವ ಚಾಲುಕ್ಯ ಮಂಗಲೇಶ್ವರನ ಬಾದಾಮಿ ಶಾಸನವು ವಿಶೇಷ ಗಮನಸೆಳೆದಿದೆ. ಈ ಮಿಶ್ರಭಾಷಾ ಬರಹಗಳು ಬಹುತೇಕ ಸಂಸ್ಕೃತ ಮತ್ತು ಕನ್ನಡ ಭಾಷೆಗಳಿಗೆ ಮೊದಮೊದಲು ಸೀಮಿತವಾಗಿದ್ದರೂ ಇವು ಬೇರೆ ಬೇರೆ ಭಾಷೆಗಳ ಮಿಶ್ರಣಕ್ಕೆ ನಂತರ ವಿಸ್ತರಿಸಿಕೊಂಡವು. ಇಂತಹ ಒಂದು (ಬಹುಶಃ ಪ್ರಥಮ) ನಿದರ್ಶನವೆಂದರೆ ವೈದುಂಬ ಗಂಡತ್ರಿನೇತ್ರನಶಾಸನ. ಇದರಲ್ಲಿ ಎಂಟು ಸಾಲುಗಳ ತೆಲುಗು ಮತ್ತು ಎಂಟು ಸಾಲುಗಳ ಕನ್ನಡ ಬರಹಗಳಿದ್ದು, ಇವೆರಡರಲ್ಲೂ ಹಳಗನ್ನಡದ ಱ–ೞ ವರ್ಣಗಳನ್ನು ಬಳಸಲಾಗಿವೆ. ಇವುಗಳಿಂದ ಭಿನ್ನವಾದದ್ದು ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ 782ರಲ್ಲಿ ಬರೆಸಿದ ರಾಷ್ಟ್ರಕೂಟ ಕಂಬಯ್ಯನ ತ್ರಿಭಾಷಾ ತಾಮ್ರಪಟವು. ಇದು ಗರುಗದಹಳ್ಳಿಯಲ್ಲಿ ದೊರಕಿದೆ.

ಕನ್ನಡ ಲಿಪಿಯ ಉಗಮ

ಕ್ರಿ.ಶ. ಮೂರನೆಯ ಶತಮಾನದಲ್ಲಿ ಪ್ರಾಕೃತ ಭಾಷೆಯ ಏಕಸ್ವಾಮ್ಯವು ಅಂತ್ಯಗೊಂಡಾಗ, ಬ್ರಾಹ್ಮೀ ಲಿಪಿಯ ಬರಹಗಳೂ ಕ್ಷೀಣಿಸತೊಡಗಿ, ಹೊಸ ಲಿಪಿಗಳು ದೇಶದ ಬಹುತೇಕ ಕಡೆ ಮೂಡಲಾರಂಭಿಸಿದವು. ಈ ಎಲ್ಲಾ ಲಿಪಿಗಳ ಜನನಿಯು ಬ್ರಾಹ್ಮೀಯಾದರೂ ವಿನ್ಯಾಸದಲ್ಲಿ ಭಿನ್ನಭಿನ್ನವಾಗಿರುವ ಇವು ದೇಸಿ ಭಾಷೆಗಳ ಅಗತ್ಯತೆಗನುಗುಣವಾಗಿ ರೂಪುಗೊಂಡಿದ್ದವು. ದಕ್ಷಿಣ ಭಾರತದಲ್ಲಿ ಹೊರಹೊಮ್ಮಿದ ಮೊದಲ ದೇಸೀಲಿಪಿಯು ಕನ್ನಡವೆನ್ನಬಹುದು. ಏಕೆಂದರೆ ಆಗ ಮೇಲ್ದಖ್ಖಣದಲ್ಲಿ ಮಹಾರಾಷ್ಟ್ರೀ ಪ್ರಾಕೃತ ಬರಹವು ಬ್ರಾಹ್ಮೀಲಿಪಿಯಲ್ಲಿಯೇ ಮುಂದುವರಿದಿದ್ದರೆ, 'ತಮಿಳು ಬ್ರಾಹ್ಮೀ' ಲಿಪಿಯು ದಕ್ಷಿಣದಂಚಿನ ಬರಹಗಳನ್ನು ಮುಂದುವರಿಸಿತ್ತು. ಅಲ್ಲದೆ ಪೂರ್ವದಖ್ಖಣದಲ್ಲಿ, ಅಂದರೆ ಇಂದಿನ ಆಂಧ್ರಪ್ರದೇಶದಲ್ಲಿ, ಸಂಸ್ಕೃತ ಹಾಗೂ ಪ್ರಾಕೃತ ಭಾಷಾ ಬರಹಗಳೆರಡನ್ನೂ ಐದನೆಯ ಶತಮಾನದವರೆಗೂ ಬ್ರಾಹ್ಮೀಯೇ ನಿರ್ವಹಿಸಿತ್ತು. ಹೀಗಾಗಿ, ಬ್ರಾಹ್ಮೀಯಿಂದ ಬೇರ್ಪಟ್ಟ ಲಿಪಿಯೊಂದು ಸ್ಪಷ್ಟವಾಗಿ ಮೊದಲು ಗೋಚರಿಸಿಕೊಂಡಿದ್ದು ನಾಲ್ಕನೆಯ ಶತಮಾನದ ಕೆಳದಖ್ಖಣದಲ್ಲಿ. ಇದನ್ನು ಬಳಸಿದವರಲ್ಲಿ ಮೊದಲಿಗರು ಗಂಗ, ಕದಂಬ ಹಾಗೂ ಅವರ ಸಾಮಂತರು. ಇಂದಿನ ಕರ್ನಾಟಕದಲ್ಲಿ ಮೊದಲು ಬಳಕೆಗೆ ಬಂದ ಈ ಲಿಪಿಯನ್ನು

(ತಮಿಳರು ತಮ್ಮ ಪ್ರದೇಶದ ಬ್ರಾಹ್ಮೀಯನ್ನು ತಮಿಳುಬ್ರಾಹ್ಮೀ ಎಂದು ಕರೆದಂತೆ) ಕನ್ನಡದ ಹೆಸರಿನಿಂದಲ್ಲದೆ ಮತ್ತಾವ ಹೆಸರಿನಿಂದಲೂ ಕರೆಯಲು ಸಾಧ್ಯವಿರದಿದ್ದರೂ ಅಂದಿನ ಭಾಷಾ ರಾಜಕೀಯದಿಂದಾಗಿ ಈ ಹೆಸರು ಆರಂಭ ಕಾಲದ ಗಂಗ, ಮತ್ತು ಕದಂಬರ ಬರವಣಿಗೆಗಳಿಗೆ ದಕ್ಕಿರಲಿಲ್ಲ.

ಭಾಷಾ ರಾಜಕೀಯ

ಕರ್ನಾಟಕದ ಬುಡಕಟ್ಟಿನ ಜನಾಂಗವೊಂದಕ್ಕೆ ಸೇರಿದ ಗಂಗರು (ಶಂಗಂ ಕಾವ್ಯದ 'ಕೊಂಗರು') ತಮ್ಮ ಆಳ್ವಿಕೆಯ ಆರಂಭದಿಂದಲೂ ಶಾಸನಗಳನ್ನು ಬರೆಸಲು ಬಳಸಿದ್ದು ಕನ್ನಡಲಿಪಿಯನ್ನು, ಆದರೆ ಕಳೆದ ಶತಮಾನದ ಶಾಸನತಜ್ಞರು ಇದನ್ನು 'ಕನ್ನಡ'ದ ಹೆಸರಿನಿಂದ ಗುರುತಿಸದೆ, ಬೇರೆ ಬೇರೆ ಹೆಸರುಗಳಿಂದ ಗುರುತಿಸುವ ರಾಜಕೀಯ ಮಾಡಿದರು. ಶಾಸನಕೋಟೆ, ಕುಡಿಳಿಯಮ್, ಚೂಕುಟ್ಟೂರು, ಪೆನುಕೊಂಡ, ಕೂಡಲೂರು, ಮುಂತಾದ ಗಂಗರ ಶಾಸನಗಳ ಸಂಪಾದಕರು, ಇವುಗಳಲ್ಲಿ ಬಳಸಿದ ಲಿಪಿಯನ್ನು 'ಹಿಂಚೂಣಿ ಬ್ರಾಹ್ಮೀಯ ದಕ್ಷಿಣಲಿಪಿ' ಎಂದು ಕರೆದರೆ, ಜಿಂಡಿಗನವಿಲೆ, ನೋಣಮಂಗಲ, ಮೆಳೆಕೋಟೆ, ಮುಂತಾದ ಗಂಗರ ಶಾಸನಗಳ ಸಂಪಾದಕರು ಇವುಗಳ ಲಿಪಿಯನ್ನು 'ದಕ್ಷಿಣದ ಲಿಪಿಯ ಪ್ರಭೇದ' ಎಂದು ಕರೆದಿದ್ದರು. 'ಹಿಂಚೂಣಿ ಬ್ರಾಹ್ಮೀಯ ದಕ್ಷಿಣ ಲಿಪಿ' ಎಂಬ ಹೆಸರನ್ನು ಸ್ವತಃ ಟಂಕಿಸಿ ಅದನ್ನು ಜಾರಿಗೆ ತರಲೆತ್ನಿಸಿದವರು ತಮಿಳುನಾಡಿನ ಶಾಸನತಜ್ಞನಾದ ಸಿ.ಆರ್.ಕೃಷ್ಣಮಾಚಾರ್ಲು. ಒಬ್ಬರಿಂದ ಪ್ರಭಾವಿತರಾಗಿ ಮತ್ತೊಬ್ಬರು ತಮ್ಮ ಅಭಿಮತವನ್ನು ರೂಪಿಸಿಕೊಳ್ಳುತ್ತಿದ್ದುದು ಈ ಕಾಲದ ಮದ್ರಾಸ್ ಪ್ರಾಂತದಲ್ಲಿ ಕೇಂದ್ರಿಕೃತವಾಗಿದ್ದ ಶಾಸನ ಕುಟುಂಬದಲ್ಲಿ ಎದ್ದು ಕಾಣುತ್ತಿತ್ತು. ಈ ಹೆಸರುಗಳನ್ನು ಪ್ರಶ್ನಿಸಲು ಮತ್ತು ಇವುಗಳಲ್ಲಿದ್ದ ವಿರೋಧಾಭಾಸಗಳನ್ನು ಎತ್ತಿತೋರಿಸಲು ಅವಕಾಶಗಳಿದ್ದರೂ ಅಂತಹ ಧೈರ್ಯವನ್ನಾಗಲೀ ಒಲವನ್ನಾಗಲೀ ಅಲ್ಪ ಸಂಖ್ಯೆಯಲ್ಲಿದ್ದ ಅಂದಿನ ಕನ್ನಡ ಶಾಸನತಜ್ಞರಾರೂ ಮಾಡಲಿಲ್ಲ. ಉದಾಹರಣೆಗೆ ಶಾಸನಕೋಟೆಯ ತಾಮ್ರಪಟವನ್ನು ಮತ್ತು ಕಂಡಸಲ ತಾಮ್ರಪಟವನ್ನು 'ಸರ್ವ್ವರಹಸ್ಯಾಧಿಕೃತೇನ' ಸೋಮಶರ್ಮನೆಂಬ ಒಬ್ಬನೇ ಲಿಪಿಕಾರನು ಬರೆದಿದ್ದನು. ಮೊದಲ ತಾಮ್ರಪಟವನ್ನು ಸಂಪಾದಿಸಿದ ಶಾಸನತಜ್ಞನು ಇದು 'ದಕ್ಷಿಣಲಿಪಿ'ಯಲ್ಲಿ ಬರೆದಿರುವುದೆಂದು, ಎರಡನೆಯ ತಾಮ್ರಪಟದ ಸಂಪಾದಕನು ಇದು 'ಹಳಗನ್ನಡಲಿಪಿ'ಯಲ್ಲಿರುವುದೆಂದಿದ್ದನು. ಒಬ್ಬನೇ ಲಿಪಿಕಾರನು 'ಎರಡು' ಲಿಪಿಗಳಲ್ಲಿ ಬರೆದ ನಿದರ್ಶನವು ಶಾಸನ ಇತಿಹಾಸದಲ್ಲಿಯೇ ಇಲ್ಲದಿರುವಾಗ, ಇಲ್ಲಿ ಮಾತ್ರ ಅದು ಇರಲು ಹೇಗೆ ಸಾಧ್ಯ? ಎಂಬ ಪ್ರಶ್ನೆಯನ್ನೆತ್ತಿ, ಪ್ರಾದೇಶಿಕ ಹಿನ್ನೆಲೆಯಲ್ಲಿ ಈ ಲಿಪಿಯನ್ನು 'ಕನ್ನಡ'ವೆಂದು ಕರೆದರೆ ಸೂಕ್ತ ಎಂದು, ಅಂದಿನ ಕನ್ನಡ ಶಾಸನ ತಜ್ಞರು ವಾದಿಸಬಹುದಾಗಿತ್ತು. ಅಂದಿನವರು ಮಾತ್ರವಲ್ಲ ಮುಂದೆ ಬಂದ ಕನ್ನಡ ಶಾಸನತಜ್ಞರಾರೂ ಇದನ್ನು ಮಾಡಲಿಲ್ಲ.

III. ಕೋಟಾ ಶಾಸನಗಳೆಂಬ ಆರೋಪ

ಆರಂಭಕಾಲದ ಗಂಗರ ತಾಮ್ರಪಟಗಳ ಬಗ್ಗೆ ಎತ್ತಿದ್ದ ಇನ್ನೊಂದು ತಕರಾರೆಂದರೆ, ಅವುಗಳಲ್ಲಿ ಕೆಲವು ಕಾಲಾನಂತರದ ಪ್ರತಿಗಳಾದ ಕಾರಣ ಅವು ಕೋಟಾ ದಾಖಲೆಗಳೆಂಬುದು. ಇವುಗಳಲ್ಲಿ ಕೆಲವು ಎಂಟು-ಒಂಭತ್ತನೆಯ ಶತಮಾನಗಳಲ್ಲಿ ಪ್ರತಿಗೊಳಗಾಗಿದ್ದು ನಿಜ, ಆದರೆ ಲಿಪಿಶೈಲಿಯನ್ನು ಮಾತ್ರ ಆಧರಿಸಿ ಇವೆಲ್ಲವೂ ಕೋಟಾ ಶಾಸನಗಳೆಂದು ಸಾರಸಗಟಾಗಿ ತಳ್ಳಿಹಾಕಿದ್ದನ್ನು ಹೇಗೆ ಒಪ್ಪಲುಸಾಧ್ಯ? ದುರುದ್ದೇಶ ಪೂರ್ವಕವಾಗಿ ಮರುಸೃಷ್ಟಿಸಿ ಆ ಮೂಲಕ ಲಾಭಮಾಡಿಕೊಂಡ ಯಾವ ಕುರುಹುಗಳನ್ನೂ ಈ ತಾಮ್ರಪಟಗಳಲ್ಲಿ

ಕಾಣದಿರುವುದರಿಂದ, ಇವು ಕಾರಣಾಂತರದಿಂದ ಮಾಡಿದ ಪ್ರತಿಗಳೆನ್ನಬಹುದೇ ಹೊರತು, ಕಪಟಿಗಳು ಸೃಷ್ಟಿಸಿದ ಕೋಟಾಗಳೆನ್ನಲಾಗದು. ಲಿಪಿವಿನ್ಯಾಸವನ್ನು ಬಿಟ್ಟು ಬೇರೆ ಆತಂಕಗಳಿದ್ದರೆ ಅಂಥವುಗಳ ಪುನರ್ ಪರಿಶೀಲನೆಯನ್ನು ಕೈಕೊಳ್ಳಲು ಅಭ್ಯಂತರವಿರಲಿಲ್ಲ. ಆದರೆ ಇಂತಹ ಆತಂಕಗಳಾವನ್ನೂ (ಸ್ವಲ್ಪಮಟ್ಟಿಗೆ ಮೊದಲ ಶಾಸನ(ತಾಗರ್ತಿ)ವೊಂದನ್ನು ಬಿಟ್ಟು) ಇವುಗಳಲ್ಲಿ ಕಾಣಲಾಗಿರಲಿಲ್ಲ. ಜೆ.ಎಫ್. ಫ್ಲೀಟ್ ಪ್ರಾರಂಭಿಸಿದ ಈ ಕೋಟಾ ತಾಮ್ರಪಟಗಳ ವಾದವನ್ನು ಸಕಾರಣದಿಂದ ಪ್ರಶ್ನಿಸುವ ಧೈರ್ಯವನ್ನು ಅಂದು ಯಾರೂ ಮಾಡಲಿಲ್ಲ ಮಾತ್ರವಲ್ಲ, ಇಂದಿಗೂ ಮಾಡುತ್ತಿಲ್ಲ. ಕಲೋನಿಯಲ್ ಪ್ರಭುಗಳಿಗೆ ಶರಣಾದ ನಮ್ಮ ಪಂಡಿತರ ಮನೋಪ್ರವೃತ್ತಿಗೆ ಇದೊಂದು ನಿದರ್ಶನ.

ಶಾಸನಗಳನ್ನು ಪ್ರತಿಮಾಡುವುದಕ್ಕೆ ಕಾರಣ

ಪ್ರತಿಗೊಳಗಾದ ಗಂಗರ ತಾಮ್ರಪಟಗಳನ್ನು ಅನಾವಶ್ಯಕವಾಗಿ ಅನುಮಾನಿಸಿದವರು, ಶಾಸನಗಳನ್ನು ಪ್ರತಿಮಾಡಲು ನಮ್ಮ ಪೂರ್ವಜರು ರಚಿಸಿಕೊಂಡಿದ್ದ ಪಾರಂಪರಿಕ ನಿಯಮಾವಳಿಗಳನ್ನು ಗಮನಿಸದಿರುವುದು ಎದ್ದುಕಾಣುವುದು. ಸವೆತಕ್ಕೊಳಗಾಗಿದ್ದ ಇಲ್ಲವೇ ಇನ್ನಿತರ ಕಾರಣಗಳಿಂದ ಘಾಸಿಗೊಂಡಿದ್ದ ತಾಮ್ರಪಟಗಳನ್ನು ಪ್ರತಿಮಾಡಿಸಿ ಅವನ್ನು ರಕ್ಷಿಸುವುದು ಇವರಿಗೆ ಧಾರ್ಮಿಕ ಕರ್ತವ್ಯವೆನಿಸಿತ್ತು, ಪುಣ್ಯಕಾರ್ಯವೆನಿಸಿತ್ತು, ಎಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ. ಹತ್ತನೆಯ ಶತಮಾನದ ಚೋಳ ಅರಸಿ ಸೆಂಬಿಯನ್ ಮಹಾದೇವಿಯು ಕೆಲವು ದೇವಾಲಯಗಳನ್ನು ಕಟ್ಟಿಸಿದಾಗ ಮತ್ತು ಇನ್ನು ಕೆಲವನ್ನು ನವೀಕರಿಸಿದಾಗ, ಘಾಸಿಗಾಳಗಾಗಿದ್ದ ಶಾಸನಗಳನ್ನು ಪ್ರತಿಮಾಡಿಸಿ ರಕ್ಷಿಸಿದ್ದು ಇದಕ್ಕೊಂದು ಉದಾಹರಣೆ. ತಿರುಕ್ಕೋಡಿಕ್ಕಾವಲ್ ಮತ್ತು ಅದುತುರೈ ದೇವಾಲಯಗಳಲ್ಲಿ ಆಕೆ ಪ್ರತಿಮಾಡಿಸಿದ ಶಾಸನಗಳು ಇಂದಿಗೂ ಉಳಿದುಕೊಂಡಿವೆ. ಇದರಂತೆ ತಂಜಾವೂರಿನ ಬೃಹದೇಶ್ವರ ದೇವಾಲಯದ ಮೇಲೆ ರಾಜರಾಜಚೋಳನು ಮತ್ತು ಗಂಗೈಕೊಂಡ ಚೋಳಪುರದ ದೇವಾಲಯದ ಮೇಲೆ ರಾಜೇಂದ್ರಚೋಳನು ಕೊರೆಸಿದ್ದ ಶಾಸನಗಳೂ ಆನಂತರ ಕಾಲದಲ್ಲಿ ಪ್ರತಿಗೊಳಗಾಗಿದ್ದವು. ಇವುಗಳಲ್ಲಿ ತಂಜಾವೂರಿನ ದೇವಾಲಯದ ಶಾಸನಗಳನ್ನು ರಾಜರಾಜನ ಮರಣಾನಂತರ ಪ್ರತಿಮಾಡಿಸಿದಾಗ ಮೂಲ ದಿನಾಂಕವನ್ನು ಹಾಗೆಯೇ ಉಳಿಸಿಕೊಂಡಿದ್ದರೆ, ಗಂಗೈಕೊಂಡಚೋಳಪುರ ದೇವಾಲಯದ ಮೇಲೆ ರಾಜೇಂದ್ರನು ಬರೆಸಿದ್ದ ಶಾಸನಗಳನ್ನು ಪ್ರತಿಮಾಡಿಸುವಾಗ ಮೂಲ ದಿನಾಂಕವನ್ನು ಕೈಬಿಟ್ಟು, ನವೀಕರಿಸಿದ ದಿನಾಂಕವನ್ನು ನಮೂದಿಸಲಾಗಿತ್ತು. ಆದರೂ ಇವುಗಳ ಗೌರವಕ್ಕೆ ಚ್ಯುತಿ ಬರಲಿಲ್ಲ. ಈ ಬಗೆಯ ಪರಂಪರೆಯ ಪಾಲನೆಯನ್ನು ಕರ್ನಾಟಕದಲ್ಲೂ ಕಾಣುವೆವು. ಸೆಂಬಿಯನ್ ಮಹಾದೇವಿಯ ಸಮಕಾಲೀನಳೂ ಸಮಾನಮನಸ್ಕಳೂ ಆದ ಕಲ್ಯಾಣ ಚಾಳುಕ್ಯ ರಾಜ್ಯದ ಅತ್ತಿಮಬ್ಬೆ ಎಂಬ ಜಿನಭಕ್ತಳು ತಾನು ಗೌರವಿಸಿದ ಪ್ರಸಿದ್ಧ ಕವಿಯೊಬ್ಬನ ಗ್ರಂಥವನ್ನು (ರನ್ನನ **ಅಜಿತನಾಥಪುರಾಣತಿಲಕ**) ಸಾವಿರ ಸಂಖ್ಯೆಯಲ್ಲಿ ಪ್ರತಿಮಾಡಿಸಿ, ಪ್ರಸಾರಮಾಡಿ, ಚರಿತ್ರೆಯಲ್ಲಿ ಚಿರಸ್ಥಾನವನ್ನು ಪಡೆದುಕೊಂಡಿರುವಳು. ಹಿರಿಯ ಕನ್ನಡ ಕವಿಗಳ ಹೊಗಳಿಕೆಗೆ ಪಾತ್ರಳಾದ ಈಕೆಯ ಈ ಪುಣ್ಯಕಾರ್ಯವನ್ನು, ಸುಮಾರು ನಲವತ್ತು ಶಾಸನಗಳಲ್ಲಿ ಸ್ಮರಿಸಲಾಗಿದೆ. ಇಲ್ಲಿ ಗಮನಿಸಬೇಕಾದದ್ದು, ರನ್ನನ ಕೃತಿ ಮಾತ್ರವಲ್ಲ, ಇಂದು ನಮಗೆ ಲಭ್ಯವಿರುವ ಬಹುತೇಕ ಕನ್ನಡ ಕವಿಗಳ ಕೃತಿಗಳು ಕಾಲಕಾಲದಲ್ಲಿ ಮಾಡಿಸಿದ ಪ್ರತಿಗಳೇ ಎಂಬುದನ್ನು.

ಇದೇ ಬಗೆಯಲ್ಲಿ ಶಾಸನಗಳನ್ನು ಪ್ರತಿಮಾಡಿಸಿ ರಕ್ಷಿಸಿದ ನಿದರ್ಶನಗಳೂ ಕರ್ನಾಟಕದಲ್ಲಿವೆ. ಶ್ರವಣಬೆಳ್ಗೊಳದ ಚಾವುಂಡರಾಯ ಬಸದಿಯಲ್ಲಿ ಪ್ರತಿಗೊಳಗಾದ

ಶಾಸನವು ಇದಕ್ಕೊಂದು ನಿದರ್ಶನ. ಹತ್ತನೆಯ ಶತಮಾನದಲ್ಲಿ ಕಟ್ಟಿಸಿದ ಈ ಬಸದಿಯನ್ನು ಆನಂತರ ನವೀಕರಿಸುವಾಗ ಚಾವುಂಡರಾಯ ಸ್ವತಃ ಬರೆಸಿದ ಶಾಸನವು ಹಾಳಾಯಿತೆನಿಸುವುದು. ಇದನ್ನು ರಕ್ಷಿಸಲು "ಶ್ರೀ ಚಾಮುಣ್ಡರಾಜಂ ಮಾಡಿಸಿದಂ" ಎಂದು ದೇವಾಲಯದ ಹೊರ ಜಗತಿಯ ಮೇಲೆ ಎರಡು ಬಾರಿ 11ನೆಯ ಶತಮಾನದಲ್ಲಿ ಬರೆಸಲಾಯಿತು. ಗೊಮ್ಮಟ ವಿಗ್ರಹದ ಅಡಿಯಲ್ಲಿರುವ ಚಾಮುಣ್ಡರಾಜ–ಗಂಗರಾಜನ ಶಾಸನಗಳಲ್ಲಿಯೂ ಯಾವುದು ಮೂಲದಲ್ಲಿ ಬರೆದದ್ದು ಯಾವುದು ಪ್ರತಿಮಾಡಿಸಿದ್ದು ಎಂಬುದರ ಗೊಂದಲವಿದೆ.

ಪ್ರತಿಮಾಡುವಾಗ ಪಾಲಿಸುತ್ತಿದ್ದ ನಿಯಮಗಳು

ಪ್ರತಿಮಾಡಲು ಮತ್ತು ಮಾಡಿಸಲು ಇದ್ದ ಕಾರಣಗಳನ್ನು ಇವು ತಿಳಿಸಿದರೆ ಇಂತಹ ಕಾರ್ಯವನ್ನು ಎಷ್ಟು ಶ್ರದ್ಧಾಪೂರ್ವಕವಾಗಿ, ನಿಯಮಬದ್ಧವಾಗಿ, ಬಹಿರಂಗವಾಗಿ, ಮಾಡಿಸಲಾಗುತ್ತಿತ್ತೆನ್ನುವುದನ್ನು ಕ್ರಿ.ಶ. ಒಂಬತ್ತನೆಯ ಶತಮಾನದ ಧಾರವಾಡ ಜಿಲ್ಲೆಯ ಕೊಣ್ಣೂರು ಶಿಲಾಶಾಸನವು ತಿಳಿಸುವುದು. ಈ ಸುದೀರ್ಘ ಸಂಸ್ಕೃತ ತಾಮ್ರಪಟವನ್ನು (ಸಾ. 1–59) ರಾಷ್ಟ್ರಕೂಟ ಅಮೋಘವರ್ಷನ 'ಧರ್ಮಾಧಿಕರಣಿಕ', 'ಗ್ರಾಮಪ(ಟ್ಟ)ಳಾದಿ', (ಗ್ರಾಮ ದಾಖಲೆಗಳ ನಿರ್ವಾಹಕ), ಮತ್ತು 'ಲೇಖಕರಣಹಸ್ತಿ' (ಲೇಖಕರಲ್ಲಿ ಗಜ) ಬಿರುದಿನ, ಭೋಜಕ ವತ್ಸರಾಜನು ಸಾಮಂತ ಬಂಕೆಯನು ಕಟ್ಟಿಸಿದ ಜಿನಾಲಯಕ್ಕೆ ಸ್ವತಃ ಅರಸನು ಕೊಟ್ಟಿದ್ದ ಗ್ರಾಮದತ್ತಿಯ ವಿವರಗಳನ್ನು ದಾಖಲಿಸಲು ರಚಿಸಿದ್ದನು. ಇದಾದ ಸುಮಾರು ಮುನ್ನೂರು ವರ್ಷಗಳ ನಂತರ ಈ ತಾಮ್ರಪಟವು ಸವೆದುದರಿಂದ, ಇದನ್ನು ರಕ್ಷಿಸಲು ಶಿಲೆಯ ಮೇಲೆ ಅದನ್ನು ಪ್ರತಿಮಾಡಿಸಬೇಕೆಂದು ಜೈನಸಂಘದ ವೀರಣನ್ದಿ ಮುನಿಯು ತೀರ್ಮಾನಿಸುವನು. ಈ ಪ್ರತಿಮಾಡುವ ಕಾರ್ಯವೇನೂ ಗೌಪ್ಯವಾಗಿ ನಡೆಯಲಿಲ್ಲ. ಮೂರು ಪುರಗಳ ಮತ್ತು ಪಂಚಮಠಸ್ಥಾನ ಪ್ರಧಾನರ ಸಮ್ಮುಖದಲ್ಲಿ ನಡೆಯಿತು. ಅಲ್ಲದೆ 'ತಾಂಬ್ರ ಶಾಸನಮಂ ನೋಡಿ (ಪುನಃ) ಬರೆಯಿಸಿಮ್' ಎಂಬ ಮುನಿಯ ಆದೇಶದನುಗುಣವಾಗಿ 'ಶಾಸನದೊಳ್ ಎನ್ತಿದ್ದುದ್‌ಅಂತೀ ಶಿಲಾಶಾಸನಂ' ಕೋಳಿಮಾರುವಿನ ಮಹಾಪ್ರಭುವಾದ ಹುಲಿಯಮ ಅರಸನು ಬರೆಸಿದ್ದನು. ಸವೆದ ತಾಮ್ರಪಟದ ವಿವರಗಳನ್ನು ಶಿಲೆಯ ಮೇಲೆ ಪ್ರತಿಮಾಡಿಸಿ ದತ್ತಿಯನ್ನು ಶಾಶ್ವತಗೊಳಿಸುವ ಮತ್ತು ದತ್ತಿಯ ವಿವರಗಳನ್ನು ಸಾರ್ವಜನಿಕರಿಗೆ ಒದಗಿಸುವ ಸದುದ್ದೇಶಗಳು ಇದರಿಂದ ಪೂರ್ಣಗೊಂಡಿದ್ದವು. ಶಾಸನವನ್ನು ಪ್ರತಿಮಾಡಿದವನು ಯಾವ ಬದಲಾವಣೆಗಳನ್ನೂ ಅದರಲ್ಲಿ ಮಾಡದೆ, ತನ್ನ ಹೆಸರನ್ನೆಲ್ಲೂ ಸೇರಿಸದೆ, 'ಶಾಸನದೊಳ್ ಎಂತಿದ್ದುದೋ ಅಂತೆಯೇ' ಬರೆದುದಕ್ಕೆ ಇದೊಂದು ನಿದರ್ಶನವಾಗಿದೆ. ಅಲ್ಲದೆ, ಪ್ರತಿಮಾಡುವುದು ಒಂದು ಗೌರವಾನ್ವಿತ ಧಾರ್ಮಿಕ ಕರ್ತವ್ಯವಾಗಿತ್ತೆನ್ನುವುದನ್ನೂ ಅದನ್ನು ಸಮಾಜವು ಸನ್ಮಾನಿಸಿದ್ದನ್ನೂ ಇದು ಸ್ಪಷ್ಟಗೊಳಿಸುವುದು. ಇಂತಹ ನಿದರ್ಶನಗಳು ಇನ್ನೂ ಹಲವಿದ್ದು, ಇವುಗಳಲ್ಲಿ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಬರೆಸಿದ ತಾಮ್ರಪಟಗಳನ್ನು 10–11ನೆಯ ಶತಮಾನಗಳಲ್ಲಿ ಶಿಲೆಯ ಮೇಲೆ ಪ್ರತಿಮಾಡಿಸಿದ ಉದಾಹರಣೆಗಳು ಗಮನಾರ್ಹವಾಗಿವೆ. ಈ ಹಿನ್ನೆಲೆಯಲ್ಲಿ ನೋಡಿದರೆ ಆರಂಭಕಾಲದ ಗಂಗರ ತಾಮ್ರಪಟಗಳನ್ನು ಕೋಟಾಗಳೆನ್ನಲು ಅವಕಾಶವೇ ಇರುವುದಿಲ್ಲ. ಮೊದಲ ಮಾಧವವರ್ಮ ಮತ್ತು ಆತನ ಪುತ್ರ ಹರಿವರ್ಮ ಬರೆಸಿದ ನಂದಿ ಮತ್ತು ಕೂಡ್ಲೂರು ತಾಮ್ರಪಟಗಳು ಒಂಭತ್ತನೆಯ ಶತಮಾನದಲ್ಲಿ ಪ್ರತಿಗೊಳಗಾಗಿದ್ದು ನಿಜವಾದರೂ ಅವನ್ನು ಮೊದಲು ಬರೆಸಿದ್ದು ಕ್ರಿ.ಶ. ನಾಲ್ಕನೆಯ ಶತಮಾನದ ಕನ್ನಡ ಲಿಪಿಯಲ್ಲಿ ಎಂಬುದು, ಮತ್ತು ಅವನ್ನು ಪ್ರತಿಮಾಡಿಸಲು ಸರಿಯಾದ ಕಾರಣಗಳಿದ್ದುದರಿಂದ

ಅವು ಕೋಟಾಗಳಲ್ಲ ಎಂಬುದು ಇದರಿಂದ ಸಾಬೀತಾಗುವುದು. ಅಂದರೆ ಇವುಗಳ ಮೂಲ ಲಿಪಿ ಮೂಂಚೂಣಿ ಕನ್ನಡವಾಗಿತ್ತೇ ವಿನಃ 'ದಕ್ಷಿಣದ ಹಿಂಚೂಣಿ ಬ್ರಾಹ್ಮೀ' ಆಗಿರಲಿಲ್ಲವೆಂಬುದೂ ಮತ್ತು ಈ ದಕ್ಷಿಣದ ಹಿಂಚೂಣಿ ಬ್ರಾಹ್ಮೀ ಎಂಬ ಲಿಪಿಯು ಈ ಪ್ರದೇಶದಲ್ಲೆಲ್ಲೂ ಪ್ರಸಾರದಲ್ಲಿರಲಿಲ್ಲ ಎಂಬುದೂ ಸ್ಪಷ್ಟಗೊಳ್ಳುವುದು.

IV. ಶಾಸನಗಳನ್ನು ಪರಿಚಯಿಸುವ ವಿಧಾನ – ಎಪಿಗ್ರಾಫಿಯಾ ಇಂಡಿಕಾ ಮಾದರಿ

ಶಾಸನ ಪಾಠವನ್ನು ಪರಿಚಯಿಸುವಾಗ ಅನುಸರಿಸುತ್ತಿದ್ದ ಸಂಪಾದಕರ ವಿಧಾನದ ಬಗ್ಗೆ ಕೆಲವು ಮಾತುಗಳು. **ಇಂಡಿಯನ್ ಆಂಟಿಕ್ವೆರಿ** ಅನುಸರಿಸುತ್ತಿದ್ದ ವಿಧಾನವನ್ನು ಇನ್ನಷ್ಟೂ ಶಿಸ್ತುಗೊಳಿಸಿ ಹೆಚ್ಚು ವೈಜ್ಞಾನಿಕವಾಗಿ ಶಾಸನಗಳನ್ನು ಪ್ರಕಟಿಸುವುದನ್ನು ಜಾರಿಗೆ ತಂದದ್ದು 1892ರಲ್ಲಿ ಪ್ರಾರಂಭವಾದ **ಎಪಿಗ್ರಾಫಿಯಾ ಇಂಡಿಕಾದಲ್ಲಿ**. ಅಂದು ಪ್ರಾರಂಭವಾದ ನಿಯಮಬದ್ಧ ಪ್ರಕಟನಾ ವಿಧಾನಗಳನ್ನು ಈಗಲೂ ಈ ನಿಯತಕಾಲಿಕೆಯು ಅನುಸರಿಸಿಕೊಂಡು ಬರುತ್ತಲಿದೆ (ಆದರೆ, ಇತ್ತೀಚೆಗೆ ಇದು ಅನಿಯತಕಾಲಿಕೆ ಆಗುತ್ತಿರುವುದೊಂದು ಖೇದದ ಸಂಗತಿ). ಈ ಜರ್ನಲ್ ಜಾರಿಗೆ ತಂದ ಶಾಸನಾಧ್ಯಯನದ ವಿಧಾನವನ್ನು ಸರಿಗಟ್ಟುವ ಬೇರೆ ಉದಾಹರಣೆಗಳು ರಾಷ್ಟ್ರೀಯ ಮಟ್ಟದಲ್ಲಾಗಲೀ ಪ್ರಾದೇಶಿಕ ಮಟ್ಟದಲ್ಲಾಗಲೀ ಕಾಣಿಸಿಗುವುದಿಲ್ಲ. **ಇಂಡಿಯನ್ ಆಂಟಿಕ್ವೆರಿ** ಮತ್ತು **ಎಪಿಗ್ರಾಫಿಯಾ ಇಂಡಿಕಾದಲ್ಲಿ** ಕನ್ನಡದ ನೂರಾರು ಶಾಸನಗಳು ಪ್ರಕಟನೆಯಾಗಿದ್ದು, ಇವನ್ನು ಸಂಪಾದಿಸಿಕೊಟ್ಟವರಲ್ಲಿ ಮೊದಲಿಗರೆಂದರೆ ಜಾಸ್. ಬರ್ಜೆಸ್ ಮತ್ತು ಜೆ.ಎಫ್. ಫ್ಲೀಟ್; ಇವರಿಬ್ಬರಲ್ಲಿ ಹೆಚ್ಚು ಸಂಖ್ಯೆಯ ಶಾಸನಗಳನ್ನು ಪ್ರಕಟಿಸಿದ್ದು ಜೆ.ಎಫ್. ಫ್ಲೀಟ್.

ಎಪಿಗ್ರಾಫಿಯಾ ಕರ್ನಾಟಿಕಾ ಮಾದರಿ

ಸಾವಿರಾರು ಸಂಖ್ಯೆಯ ಶಾಸನಗಳನ್ನು ಸಂಗ್ರಹಿಸಿ, ಕಾಲಮಿತಿಯಲ್ಲಿ ಪ್ರಕಟಿಸುತ್ತಿದ್ದ **ಎಪಿಗ್ರಾಫಿಯಾ ಕರ್ನಾಟಿಕಾದ** ಸಂಪಾದಕರಿಗಾಗಲೀ, ಪ್ರಾದೇಶಿಕ ತಳಹದಿಯನ್ನಾದರಿಸಿ ಶಾಸನಗಳನ್ನು ಆಗಾಗ ಪ್ರಕಟಿಸುತ್ತಿದ್ದ **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್** ಸಂಪಾದಕರಿಗಾಗಲೀ, ಇಂಡಿಕಾದ ಮಾದರಿಯನ್ನು ಅನುಸರಿಸಲು ಸಾಧ್ಯವಾಗದಿದ್ದುದರಿಂದ ಇವರು ತಮ್ಮದೇ ವಿಧಾನವನ್ನು ರೂಪಿಸಿಕೊಂಡು ಸಂಪುಟಗಳನ್ನು ಪ್ರಕಟಿಸಿದ್ದರು. ಶಾಸನದ ಪಠ್ಯವನ್ನು ಟ್ರಾನ್ಸ್‌ಕ್ರಿಪ್ಟ್ (ಇಂಗ್ಲಿಷ್ ಅಕ್ಷರ)ದಲ್ಲಿ ಹಾಗೂ ಅದನ್ನು ಬರೆದ ಮೂಲಭಾಷೆಯಲ್ಲಿ ಎರಡು ಪ್ರತ್ಯೇಕ ಭಾಗಗಳಲ್ಲಿ ಒದಗಿಸಿ, ಅವುಗಳ ಸಂಕ್ಷಿಪ್ತ ಅನುವಾದಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಇನ್ನೊಂದು ಭಾಗದಲ್ಲಿ ಒದಗಿಸುವ ವಿಧಾನವನ್ನು **ಎಪಿಗ್ರಾಫಿಯಾ ಕರ್ನಾಟಿಕಾದ** ಸಂಪಾದಕರು ಅನುಸರಿಸಿದರೆ, **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್** ಸಂಪಾದಕರು ಇಂಗ್ಲಿಷ್ ಭಾಷೆಯಲ್ಲಿ ಸಂಕ್ಷಿಪ್ತವಾಗಿ ಶಾಸನವನ್ನು ಪರಿಚಯಿಸಿ, ಪಠ್ಯವನ್ನು ಮೂಲ ಭಾಷೆಯಲ್ಲಿಯೇ ಒದಗಿಸುವ ವಿಧಾನವನ್ನು ಅನುಸರಿಸಿದ್ದರು. ಶಾಸನಗಳ ಕಾಲ, ಭಾಷೆ, ಶೈಲಿ, ರಾಜವಂಶ ಅಥವಾ ಆಳರಸನ ವಿವರಗಳನ್ನು ಹಾಗೂ ಆಡಳಿತ ಹಾಗೂ ಸಾಂಸ್ಕೃತಿಕ ವಿವರಗಳನ್ನು ಮೇಲ್ನೋಟದಲ್ಲಿಯೇ ಗ್ರಹಿಸಿಕೊಳ್ಳಲು ಇವು ಹೆಚ್ಚು ಸಹಕಾರಿಯಾಗಿರಲಿಲ್ಲ. ಆದರೆ ಸಂಪುಟದ ಆರಂಭದಲ್ಲಿ ಕೊಡುತ್ತಿದ್ದ ಸುದೀರ್ಘ ಮುನ್ನುಡಿಯಲ್ಲಿ ಚರ್ಚಿಸಿದ್ದ ವಿವರಗಳು ತುಂಬಾ ಉಪಯುಕ್ತವಾಗಿದ್ದವು.

ಶಿರೋಭಾಗದ ವಿವರಗಳು

ಶಾಸನದ ಶಿರೋಭಾಗದಲ್ಲಿ ಒದಗಿಸಿದ ವಿವರಗಳಲ್ಲಿ ಎರಡು ಬಗೆಗಳಿದ್ದು, ಅದರಲ್ಲಿ ಒಂದು, ಶಾಸನವಿರುವ ಸ್ಥಳ ಮತ್ತು ಅದರ ಕರ್ತೃವಿನ ಬಗ್ಗೆ ಒಂದೇ ವಾಕ್ಯದಲ್ಲಿ ಮಾಹಿತಿ

ಒದಗಿಸುವುದು. ಈ ವಿಧಾನವನ್ನು **ಇಂಡಿಯನ್ ಆಂಟಿಕ್ವೆರಿ, ಎಪಿಗ್ರಾಫಿಯಾ ಇಂಡಿಕಾ, ಕಾರ್ಪಸ್ ಇನ್‌ಕ್ರಿಪ್ಷನ್ಸ್ ಇಂಡಿಕೇರಮ್**, ಮುಂತಾದ ಆರಂಭಕಾಲದ ಜರ್ನಲ್‌ಗಳು ಅನುಕರಿಸಿದ್ದವು. **ಎಪಿಗ್ರಾಫಿಯಾ ಇಂಡಿಕಾ**ದಲ್ಲಿ ಬೇಗೂರು ಶಾಸನವನ್ನು ಪ್ರಕಟಿಸುವಾಗ ಜೆ.ಎಫ್. ಫ್ಲೀಟ್ ಕೊಟ್ಟ "Begur Stone Inscriptions of the Ganga King Ereyapparasa" ಎಂಬ ಶೀರ್ಷಿಕೆ ಇದಕ್ಕೊಂದು ಉದಾಹರಣೆ.

ಇದಕ್ಕೆ ಭಿನ್ನವಾದ ವಿಧಾನವನ್ನು **ಎಪಿಗ್ರಾಫಿಯಾ ಕರ್ನಾಟಿಕಾ** ಸಂಪಾದಕರು ಅನುಸರಿಸಿದ್ದರು. ಇಲ್ಲಿ ಒಂದೇ ಶಾಸನವನ್ನು ಮೂರು ಪ್ರತ್ಯೇಕ ವಿಭಾಗಗಳಲ್ಲಿ ಪರಿಚಯಿಸಿರುವುದರಿಂದ, ಈ ವಿಭಾಗಗಳ ತಲೆಕಟ್ಟುಗಳು ಭಿನ್ನ ಭಿನ್ನವಾಗಿವೆ. ಮೊದಲ ವಿಭಾಗದಲ್ಲಿರುವ ಟ್ರಾನ್ಸ್‌ಕ್ರಿಪ್ಟ್ ಪಠ್ಯದ ಶಿರೋಭಾಗದಲ್ಲಿ ಶಾಸನ ದೊರಕಿರುವ ಗ್ರಾಮ, ಹೋಬಳಿ, ತಾಲೂಕುಗಳ ಹೆಸರುಗಳನ್ನು ತಿಳಿಸಲಾಗಿದೆ; ಎರಡನೆಯ ವಿಭಾಗದ ಇಂಗ್ಲಿಷ್ ಭಾಷಾಂತರದ ಶಿರೋಭಾಗದಲ್ಲಿ ಅದು ಶಿಲಾಶಾಸನವೋ ತಾಮ್ರಪಟವೋ ಎಂಬುದನ್ನು ಸ್ಪಷ್ಟಪಡಿಸಿ, ಅದು ಇರುವ ಸ್ಥಾನದ (location) ಬಗ್ಗೆ ಹೇಳಲಾಗಿದೆ; ಕನ್ನಡ ಪಠ್ಯವಿರುವ ಮೂರನೆಯ ವಿಭಾಗದ ಶಿರೋಭಾಗದಲ್ಲಿ ಶಾಸನದ ದಿನಾಂಕವನ್ನು ಸೂಚಿಸಲಾಗಿದೆ. ಈ ಮೂರೂ ವಿಭಾಗಗಳ ತಲೆಕಟ್ಟುಗಳನ್ನು ಒಗ್ಗೂಡಿಸಿದಾಗ ಮಾತ್ರ ಶಾಸನದ ಭೌಗೋಳಿಕ ಪರಿಸರ, ಸ್ವರೂಪ(ಶಿಲೆಯೋ, ತಾಮ್ರಪಟವೋ,) ಮತ್ತು ಕಾಲ ತಿಳಿದುಬರುವುದು.

ಇದಕ್ಕೆ ಭಿನ್ನವಾದ ವಿಧಾನವನ್ನು ಅನುಸರಿಸಿದ್ದನ್ನು **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್, ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು, ತಮಿಳುನಾಡು ಮತ್ತು ಕೇರಳ ಶಾಸನ ಸಂಪುಟಗಳು,** ಮತ್ತು ಗಂಗ, ಪಲ್ಲವ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ, ಮೊದಲಾದ ಅರಸು ಮನೆತನಗಳ ಪ್ರತ್ಯೇಕಶಾಸನ ಸಂಪುಟಗಳಲ್ಲಿ ಕಾಣುವೆವು. ಇಲ್ಲಿ ಶಿರೋಭಾಗದಲ್ಲಿಯೇ ಶಾಸನವಿರುವ ಸ್ಥಳವನ್ನು ಮತ್ತು ಈ ಸ್ಥಳವಿರುವ ಈಗಿನ ಆಡಳಿತಾ ಘಟಕಗಳನ್ನು (ತಾಲೂಕು, ಜಿಲ್ಲೆ, ಪ್ರಾಂತ, ಮುಂ.), ರಾಜವಂಶ, ಆಳರಸನ ಹೆಸರು, ಕಾಲ, ಶಾಸನದ ಸ್ವರೂಪ (ಶಿಲಾಶಾಸನವೋ, ತಾಮ್ರಪಟವೋ)ಗಳನ್ನಲ್ಲದೆ, ಕೆಲವು ಬಾರಿ ಅದರ ಉದ್ದೇಶವನ್ನು ಇಂಗ್ಲಿಷ್ ಇಲ್ಲವೇ ಪ್ರಾದೇಶಿಕ ಭಾಷೆಯಲ್ಲಿ ಕೊಡಲಾಗಿದೆ.

ಪಠ್ಯವನ್ನು ಪರಿಚಯಿಸುವ ವಿಧಾನ

ಇಂಡಿಯನ್ ಆಂಟಿಕ್ವೇರಿ ಮತ್ತು **ಎಪಿಗ್ರಾಫಿಯಾ ಇಂಡಿಕಾ** ಸಂಪುಟಗಳಲ್ಲಿ ಶಾಸನದಲ್ಲಿರುವ ಬಹುತೇಕ ವಿಷಯಗಳನ್ನು (ಅಂದರೆ ಅರಸ, ವಂಶಾವಳಿ, ಕಾಲ, ಮುಖ್ಯ ಉದ್ದೇಶ, ಬರಹ ಭಾಷೆ ಮತ್ತು ಲಿಪಿ, ಹಾಗೂ ಇನ್ನಿತರ ಹತ್ತು ಹಲವಾರು ವಿಷಯಗಳನ್ನು) ಕೂಲಂಕಷವಾಗಿ ಚರ್ಚೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಮಾಡಿ, ನಂತರ ಶಾಸನ ಪಠ್ಯದ ಟ್ರಾನ್ಸ್‌ಕ್ರಿಪ್ಟ್ ಮತ್ತು ಅದರ ಭಾಷಾಂತರವನ್ನು ಇದೇ ಭಾಷೆಯಲ್ಲಿ ಕೊಡಲಾಗಿದೆ. ಇದಕ್ಕೆ ಭಿನ್ನವಾಗಿದ್ದ **ಎಪಿಗ್ರಾಫಿಯಾ ಕರ್ನಾಟಕ**ದ ವಿಧಾನವನ್ನು ಈಗಾಗಲೇ ಮೇಲೆ ವಿವರಿಸಲಾಗಿದೆ. ಇವೆರಡಕ್ಕೂ ಭಿನ್ನವಾದ ವಿಧಾನಗಳನ್ನು ಕೆಲವು ಸಂಚಿಕೆಗಳ ಮತ್ತು ಸಂಪುಟಗಳ ಸಂಪಾದಕರು ಅನುಸರಿಸಿದ್ದು, ಇವುಗಳಲ್ಲಿ ಹೆಚ್ಚಿನವು ಶಾಸನ ಪಠ್ಯವನ್ನು ಆಧುನಿಕ ಲಿಪಿಯಲ್ಲಿ ಮಾತ್ರ ಒದಗಿಸಿವೆ. ಇಲ್ಲಿ ಶಾಸನದ ಭಾಷಾಂತರವಾಗಲೀ ವಿವರಾತ್ಮಕ ಚರ್ಚೆಯಾಗಲೀ ಇಲ್ಲದಿರುವುದರಿಂದ ಮೂಲಪಠ್ಯವನ್ನು ಓದಿಯೇ ಇವನ್ನು ತಿಳಿದುಕೊಳ್ಳಬೇಕಾಗುವುದು. ಈ ವಿಧಾನವನ್ನು ಮಾದರಿಯನ್ನಾಗಿಸಿ ಕೊಂಡು ಕರ್ನಾಟಕದಿಂದ ಆಳಿದ ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರ ಶಾಸನ

ಸಂಪುಟಗಳು, ಆಂಧ್ರದ ವಿಜಯನಗರ ಶಾಸನ ಸಂಪುಟ, ತಮಿಳುನಾಡಿನ ಪಲ್ಲವರ ಶಾಸನ ಸಂಪುಟಗಳು ಪ್ರಕಟಗೊಂಡಿರುವವು.

ಪ್ರಸ್ತುತ ಸಂಪುಟಗಳಲ್ಲಿ ಅನುಸರಿಸಿರುವ ವಿಧಾನ

ಪ್ರಸ್ತುತ ಹಳಗನ್ನಡ ಶಾಸನ ಸಂಪುಟಗಳಲ್ಲಿ **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್** ವಿಧಾನವನ್ನು ಸ್ಥೂಲವಾಗಿ ಅನುಸರಿಸಿ, ಶಾಸನಸಂಖ್ಯೆ, ಮೂಲೋದ್ದೇಶ, ಸ್ಥಳ, ಊರು, ತಾಲೂಕು, ಜಿಲ್ಲೆಯ ಹೆಸರು, ಆ ಪೂರ್ವದಲ್ಲಿ ಪ್ರಕಟವಾದ ಸಂಚಿಕೆಯ ಹೆಸರು, ರಾಜಮನೆತನ ಮತ್ತು ರಾಜನ ಹೆಸರು, ಈ ಮುಂತಾದವನ್ನು ಶಿರೋಭಾಗದಲ್ಲಿ ಕೊಡಲಾಗಿದೆ. ಇದಾದನಂತರ (1) ಶಾಸನ ಪೂರ್ಣಪಠ್ಯವನ್ನಿತ್ತು (2) ಪಠ್ಯದ ವಾಕ್ಯ ಮತ್ತು ಪದಗಳನ್ನು ವಿಭಜಿಸುವ ಕ್ರಮವನ್ನು ತಿಳಿಸಿ, (3) ಪ್ರತಿ ಪದದ ಅರ್ಥವನ್ನೊದಗಿಸಿ, (4) ಶಾಸನದ ಭಾವಾರ್ಥವನ್ನು ಆಧುನಿಕ ಕನ್ನಡದಲ್ಲಿ ಕೊಡಲಾಗಿದೆ.

ಶಾಸನದ ಓದನ್ನು ಸರಳಗೊಳಿಸಿ, ಶಾಸನದಲ್ಲಿರುವ ವಾಕ್ಯ ಹಾಗೂ ಪದಗಳನ್ನು ಸುಲಭವಾಗಿ ಗುರುತಿಸಿ, ಶಾಸನದ ವಿವರಗಳನ್ನು ತೀವ್ರಗತಿಯಲ್ಲಿ ಗ್ರಹಿಸಿಕೊಳ್ಳಲು ಇದರಿಂದ ಸಹಾಯವಾಗುವುದರಲ್ಲಿ ಅನುಮಾನವಿಲ್ಲ. ಇದಲ್ಲದೆ ಇನ್ನೂ ಗಮನಯೋಗ್ಯವಾದ ಕೆಲವು ಅಂಶಗಳೆಂದರೆ:

1. ಶಾಸನದ ಶಿರೋಭಾಗದಲ್ಲಿ ಹೊಸತೇನನ್ನೂ ಕೊಡದಿದ್ದರೂ, ಈವರೆಗೂ ಸಂಪಾದಕರು ಒದಗಿಸಿದ್ದ ವಿವರಗಳಿಗಿಂತಲೂ ಹೆಚ್ಚಿನ ವಿವರಗಳನ್ನು ಇಲ್ಲಿ ಒದಗಿಸಿರುವುದರಿಂದ, ಕ್ಷಣನೋಟದಲ್ಲಿ ಶಾಸನದ ತಿರುಳನ್ನು ಅರಿತುಕೊಳ್ಳಲು ಇದರಿಂದ ಸಹಾಯವಾಗಿದೆ.

2. ಶಾಸನ ಪಠ್ಯದ ವಾಕ್ಯಗಳನ್ನೂ ಪದಗಳನ್ನೂ ಗುರುತಿಸುವ ವಿಧಾನವನ್ನು **ಇಂಡಿಯನ್ ಆಂಟಿಕ್ವೆರಿ, ಎಪಿಗ್ರಾಫಿಯಾ ಇಂಡಿಕಾ,** ಹಾಗೂ **ಎಪಿಗ್ರಾಫಿಯಾ ಕರ್ನಾಟಿಕ**ದಲ್ಲಿ ಇಂಗ್ಲೀಷ್ ಟ್ರಾನ್ಸ್‌ಕ್ರಿಪ್ಷನ್‌ನಲ್ಲಿ ಮಾತ್ರ ತಿಳಿಸಲಾಗಿತ್ತು.

ಕನ್ನಡ ಪಠ್ಯವನ್ನು ಅದೇ ಬಗೆಯಲ್ಲಿ ಸರಳೀಕರಿಸಿಕೊಡುವ ಬಗೆಯನ್ನು, (ಅಂದರೆ ಪದಗಳನ್ನು ವಾಕ್ಯಗಳನ್ನು ವಿಭಜಿಸುವ ಕ್ರಮವನ್ನು), ಬಹುಶಃ ಈವರೆಗೂ ಯಾರೂ ಮಾಡದಿರುವ ಪ್ರಯೋಗವನ್ನು ಇಲ್ಲಿ ಮೊದಲ ಬಾರಿಗೆ ಮಾಡಲಾಗಿದೆ.

ಈ ಸಂಪುಟಗಳ ವಿಶೇಷತೆ

19ನೆಯ ಶತಮಾನದ ಉತ್ತರಾರ್ಧದಿಂದ 21ನೆಯ ಶತಮಾನದ ಪ್ರಾರಂಭದವರೆಗೆ ಹಲವು ಸಂಪುಟಗಳಲ್ಲಿ, ಸಂಚಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ, ಪ್ರಕಟವಾಗಿರುವ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಹಳಗನ್ನಡ ಶಾಸನಗಳನ್ನು ಶೋಧಿಸಿ, ಸಂಗ್ರಹಿಸಿ, ಕಾಲಾನುಕ್ರಮದಲ್ಲಿ ಹೊಂದಿಸಿ, ಪೂರ್ಣ ಪಠ್ಯವನ್ನೂ ಪ್ರತಿಪದದ ಅರ್ಥವನ್ನೂ ಮತ್ತು ಶಾಸನದ ಭಾವಾಂತರವನ್ನೂ ಆಧುನಿಕ ಕನ್ನಡದಲ್ಲಿ ಒದಗಿಸಿರುವುದು ಈ ಮಾಲಿಕೆಯ ವಿಶೇಷತೆ. ದೇಶದ ಯಾವ ಭಾಷೆಯ ಶಾಸನಾಧ್ಯಯನದಲ್ಲಿ ಈವರೆಗೂ ಮಾಡದಿರುವ ಸಾಧನೆ ಇದೆನ್ನಬಹುದು.

ಅಲ್ಲದೆ, ಒಂದೊಂದು ಕಾಲಘಟ್ಟದಲ್ಲಿ ಬಳಕೆಗೆ ಬಂದ ಕನ್ನಡ ಪದಗಳ ಸಮಗ್ರಯಾದಿಯನ್ನು ಪ್ರತಿ ಸಂಪುಟದ ಕೊನೆಯಲ್ಲಿ ಅನುಬಂಧಿಸಿ, ಅವು ಕನ್ನಡ ಮೂಲದವುಗಳೋ, ಸಂಸ್ಕೃತಮೂಲದವುಗಳೋ, ಮಿಶ್ರಭಾಷಾ ಪದಗಳೋ, ಎಂಬುದನ್ನು

ಸೂಚಿಸಲಾಗಿದೆ. ಯಾವ ಕನ್ನಡಪದವು ಯಾವಾಗ ಮತ್ತು ಯಾವ ಸಂದರ್ಭದಲ್ಲಿ ಮೊದಲು ಬಳಕೆಗೆ ಬಂತು, ಎಂಬುದನ್ನು ಇದು ತೋರಿಸಿಕೊಡುವುದರಿಂದ, ಇದು ವಿಶೇಷವಾಗಿ ಮುಂದೆ ಬರುವ ನಿಘಂಟು ತಜ್ಞರಿಗೆ ಹೆಚ್ಚು ಉಪಯೋಗವಾಗುವುದರಲ್ಲಿ ಅನುಮಾನವಿಲ್ಲ. ಕಿಟ್ಟಲ್ ಮತ್ತು ಸಾಹಿತ್ಯ ಪರಿಷತ್ತಿನ ನಿಘಂಟುಗಳನ್ನೊಳಗೊಂಡು ಈವರೆಗೂ ಪ್ರಕಟವಾಗಿರುವ ಯಾವ ನಿಘಂಟೂ ಕನ್ನಡ ಪದಗಳ ಮೊತ್ತಮೊದಲ ಪ್ರಯೋಗಗಳನ್ನು ತಿಳಿಸದಿರುವುದಕ್ಕೆ ಕಾರಣ ಇಂತಹ ಸಮಗ್ರ ಪದಪಟ್ಟಿಯು ಅವುಗಳ ಸಂಪಾದಕರಿಗೆ ಲಭ್ಯವಿರದಿದ್ದುದು. ಒಂದು ಕಾಲಘಟ್ಟದಲ್ಲಿ ಬಳಕೆಗೆ ಬಂದ ಹಾಗೂ ಅದರ ಹಿಂದೆ ಬಳಕೆಯಲ್ಲಿದ್ದ ಪದಗಳನ್ನು ಗುರುತಿಸಿ, ಪದ ಬಳಕೆಯ ಇತಿಹಾಸವನ್ನು ರಚಿಸಲು ಇದರಿಂದ ಸುಲಭವಾಗಬಹುದು.

ಈ ಮಾಲಿಕೆಯ ಏಳನೆಯ ಸಂಪುಟವು ಕನ್ನಡ ಬರವಣಿಗೆ ಆರಂಭವಾದಂದಿನಿಂದ ಕ್ರಿ.ಶ. 1000 ರವರೆಗೆ ಬಳಕೆಯಾಗಿದ್ದ ಸಮಗ್ರ ಪದಸಂಪದವನ್ನು ಹೊಂದಿದೆ. ಅಂದರೆ ಚಲಾವಣೆಗೆ ಬಂದಿದ್ದ ಹಳಗನ್ನಡದ ಪದಗಳ ಮತ್ತು ಅವನ್ನು ಬಳಸಿದ ವಿಧಾನ ಇಲ್ಲಿ ದೊರಕುವುದೆಂದರ್ಥ. ಈ ಪದಗಳಿಗೆ ಅರ್ಥ ಬರೆದರೆ ಸಮಗ್ರ 'ಹಳಗನ್ನಡ ನಿಘಂಟು' ಸಿದ್ಧವಾಗುವುದು; ಬಳಕೆ ಮಾಡಿದ ಸಂದರ್ಭವನ್ನು (context) ಸೂಚಿಸಿದರೆ, 'ಪದಪ್ರಯೋಗ ಕೋಶ'ವು (Annotated Dictionary ಅಥವಾ Concordance of Old Kannada Words) ಸಿದ್ಧವಾಗುವುದು. ಈ ಎರಡನ್ನೂ ಮಾಡಬೇಕೆಂಬ ಹಂಬಲ ನನ್ನದಾಗಿದೆ. ಆದರೆ ಕಾರಣಾಂತರದಿಂದ ಇದು ನನ್ನಿಂದ ಸಾಧ್ಯವಾಗದಿದ್ದರೆ, ಈ ಸಂಪದವನ್ನು ಬಳಸಿಕೊಂಡು ಮುಂದೆ ಯಾರಾದರೂ ಅದನ್ನು ಮಾಡಲು ಸಾಧ್ಯವೂ ಸುಲಭವೂ ಆಗಬಹುದು. ಅಲ್ಲದೆ ಮೊದಲ ಸಹಸ್ರಮಾನದ ಗ್ರಾಮನಾಮಗಳನ್ನು, ವ್ಯಕ್ತಿನಾಮಗಳನ್ನು, ಸಂಸ್ಥೆ ಮತ್ತು ಸಾಮಾಜಿಕ ಘಟಕಗಳನ್ನು, ಧರ್ಮಸಂಸ್ಥೆಗಳನ್ನು, ಅರಸರನ್ನು, ಆಡಳಿತಾ ಘಟಕಗಳನ್ನು, ಧರ್ಮಸಂಪ್ರದಾಯಗಳನ್ನು, ಈ ಬಗೆಯ ಇನ್ನೂ ಹತ್ತಾರು ವಿಷಯಗಳನ್ನು ಕ್ಷಣಮಾತ್ರದಲ್ಲಿ ಗುರುತಿಸುವ ಅನುಕೂಲತೆಯನ್ನು ಸಂಶೋಧಕರು ಇನ್ನು ಮುಂದೆ ಈ ಸಂಪುಟಗಳಿಂದ ಪಡೆದುಕೊಳ್ಳಬಹುದಾಗಿದೆ. ಹತ್ತಾರು ಸಂಪುಟಗಳಲ್ಲಿ ಹಾಗೂ ಸಂಚಿಕೆಗಳಲ್ಲಿ ಹಂಚಿಹೋಗಿದ್ದ ವಿಷಯಗಳನ್ನು ಇಲ್ಲಿ ವ್ಯವಸ್ಥಿತವಾಗಿ ಒಂದೆಡೆ ಒದಗಿಸಿರುವುದರಿಂದ, ಇದರ ಲಾಭ ಪಡೆದುಕೊಂಡು ಪುರಾತನ ಇತಿಹಾಸ ರಚನೆಯು ಮತ್ತು ಹಳಗನ್ನಡದ ಅಧ್ಯಯನವು ಹೆಚ್ಚು ತೀವ್ರತೆ ಪಡೆದುಕೊಂಡು ಹೆಚ್ಚು ಪ್ರಗತಿ ಸಾಧಿಸುವ ಸಾಧ್ಯತೆಯನ್ನುಂಟು ಮಾಡಿದೆ.

ಸುಮಾರು ಎರಡು ದಶಕಗಳ ಕಾಲದ ಪರಿಶ್ರಮದ ಫಲವನ್ನು ಈಗ ಕನ್ನಡಿಗರ ಮುಂದಿಡುವ ಅವಕಾಶ ನನಗೆ ದೊರಕಿರುವುದು ನನ್ನ ಸೌಭಾಗ್ಯವೆಂದು ಭಾವಿಸುವೆ.

---

* ಷ. ಶೆಟ್ಟರ್ ಅವರು ಏಳು ಸಂಪುಟಗಳಲ್ಲಿ ಹೊರತರುತ್ತಿರುವ 'ಹಳಗನ್ನಡ ಶಾಸನ ಸಂಪುಟ'ಕ್ಕೆ ಬರೆದ ಮುನ್ನಡಿ ಭಾಗ ಇದಾಗಿದೆ.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: Rahamath Tarikere
Title: dārśanika panthagaḷa adhyayana: yāke, hēge?

ದಾರ್ಶನಿಕ ಪಂಥಗಳ ಅಧ್ಯಯನ: ಯಾಕೆ, ಹೇಗೆ?

ರಹಮತ್ ತರೀಕೆರೆ
ಪ್ರಾಧ್ಯಾಪಕರು
1425, 'ಸೂಫಿ'
ಎಂ.ಪಿ. ಪ್ರಕಾಶನಗರ
ಹೊಸಪೇಟೆ –583 201
ಬಳ್ಳಾರಿ ಜಿಲ್ಲೆ
rtarikere@gmail.com

– 1 –

ಕನ್ನಡದಲ್ಲಿ ಧರ್ಮ ಮತ್ತು ದರ್ಶನಗಳ ಅಧ್ಯಯನಗಳಲ್ಲಿರುವ ಮುಖ್ಯ ಸಮಸ್ಯೆಯೆಂದರೆ, 'ಪ್ರಧಾನ' ಎನಿಸಿರುವ ಧರ್ಮ, ದಾರ್ಶನಿಕರು ಹಾಗೂ ಪಠ್ಯಗಳನ್ನು ಬಿಟ್ಟು ಬಾರದಿರುವುದು; ಜನಸಮುದಾಯಗಳ ಬದುಕಿನಲ್ಲಿ ಆಚರಣೆಯಲ್ಲಿರುವ ದರ್ಶನ ಮತ್ತು ಪಂಥಗಳನ್ನು ಗಮನಿಸದಿರುವುದು. ವಿದ್ವತ್ ವಲಯದಲ್ಲಿರುವ ಈ ಮನೋವೃತ್ತಿ ಶೈಕ್ಷಣಿಕ ಪಠ್ಯಕ್ರಮಕ್ಕೂ ಚಾಚಿಕೊಂಡಿದೆ. ಈ ಸಮಸ್ಯೆಗೆ ಒಂದು ಕಾರಣ, ಧರ್ಮ ಮತ್ತು ದರ್ಶನ ಕುರಿತ ಮೂಲಪಠ್ಯಗಳಲ್ಲೂ ಇದೆ. ವಿಜಯನಗರ ಆಳ್ವಿಕೆಯ ಕಾಲದಲ್ಲಿದ್ದ ಮಾಧವ ಸಾಯಣನ (–1387) 'ಸರ್ವದರ್ಶನ ಸಂಗ್ರಹ'ವನ್ನು ಗಮನಿಸಬೇಕು. ಅದರಲ್ಲಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ನ್ಯಾಯ, ವೈಶೇಷಿಕ ಇತ್ಯಾದಿ ದರ್ಶನಗಳ ಪರಿಚಯವೂ ಇದೆ; ಜೈನ, ಬೌದ್ಧ, ಚಾರ್ವಾಕ, ಶಾಕ್ತ ಮುಂತಾದ ಅವೈದಿಕ ದರ್ಶನಗಳ ಪ್ರಸ್ತಾಪವೂ ಇದೆ. ಆದರೆ ಸಿದ್ಧ, ನಾಥ, ಅರೂಢ, ಅವಧೂತ ಇತ್ಯಾದಿ ಗುರುಪಂಥಗಳ ಉಲ್ಲೇಖವಿಲ್ಲ. ಮಹಾರಾಜಾ ಕಾಲೇಜಿನಲ್ಲಿದ್ದ ಎಂ. ಹಿರಿಯಣ್ಣ, ಎಸ್. ರಾಧಾಕೃಷ್ಣನ್ ಮುಂತಾದ ಆಧುನಿಕ ವಿದ್ವಾಂಸರಾದರೂ, ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ

ದರ್ಶನಗಳ ಚರ್ಚೆ ಮಾಡಿದರು. ಜನ ಸಮುದಾಯಗಳ ಬದುಕಿನ ಭಾಗವಾಗಿರುವ ಆನುಭಾವಿಕ ಪಂಥಗಳ ಮತ್ತು ಅವುಗಳ ದಾರ್ಶನಿಕ ಧಾರೆಗಳ ಅಸ್ತಿತ್ವವನ್ನು ಗುರುತಿಸಲಿಲ್ಲ.

ಇದು ಮಧ್ಯಕಾಲೀನ ಸಂಕಲನಕಾರರ ಮತ್ತು ಆಧುನಿಕ ವಿದ್ವಾಂಸರ ಲೋಕದೃಷ್ಟಿಯಲ್ಲೇ ಇದ್ದ ಮೂಲಭೂತ ಸಮಸ್ಯೆಗಳಲ್ಲಿ ಒಂದು. ಅವರು ವೇದಪ್ರಮಾಣಗಳನ್ನು ಮಾನ್ಯ ಮಾಡದ ದರ್ಶನ-ಪಂಥಗಳನ್ನು; ಸ್ಥಳೀಯ ದೇಶಭಾಷೆಗಳಲ್ಲಿರುವ, ರಾತ್ರಿಸಂಪ್ರದಾಯಕ್ಕೆ ಸೇರಿದ, ಹಾಡಿಕೆ ರೂಪದಲ್ಲಿರುವ ವಾಙ್ಮಯಗಳನ್ನು, ರೈತರು, ಕೂಲಿಕಾರರು, ದಲಿತರು, ಹೆಂಗಸರು ಭಾಗವಹಿಸುವ ಆಚರಣ ಲೋಕಗಳನ್ನು ಪರಿಗಣಿಸಲಿಲ್ಲ. ಅಕ್ಷರಸ್ಥ ಆಕರಗಳನ್ನು ಬಿಟ್ಟು ಅರೆಅಕ್ಷರಸ್ಥ / ಮೌಖಿಕ ಆಕರಗಳನ್ನು ನೋಡಲು ಬೇಕಾದ ತರಬೇತಿಯೂ ಅವರಿಗಿರಲಿಲ್ಲ. ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿರುವ ತತ್ವಶಾಸ್ತ್ರ ವಿಭಾಗಗಳ ಪಠ್ಯಕ್ರಮವನ್ನಾಗಲಿ ಪ್ರಕಟಣೆಗಳನ್ನಾಗಲಿ ಗಮನಿಸಿದರೆ, ಈ ಕೊರತೆ ಎದ್ದುಕಾಣುತ್ತದೆ. ಈ ವಿಭಾಗಗಳು ಡಿವಿಜಿ, ಕುವೆಂಪು, ಬೇಂದ್ರೆ, ಲಂಕೇಶ್, ತೇಜಸ್ವಿ ಮುಂತಾದವರು ತತ್ವಶಾಸ್ತ್ರದ ಹಿನ್ನೆಲೆಯಲ್ಲಿ ಬರೆದ ಸಾಹಿತ್ಯವನ್ನೂ ವಿಶ್ಲೇಷಣೆ ಮಾಡಲಿಲ್ಲ. ವೈರುಧ್ಯವೆಂದರೆ, ಕರ್ನಾಟಕದವರೇ ಆದ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರೂ ಆಗಿದ್ದ ಆರ್.ಡಿ. ರಾನಡೆ (1886–1957) ಅವರು 50ರ ದಶಕದಲ್ಲೇ ಕರ್ನಾಟಕ-ಮಹಾರಾಷ್ಟ್ರಗಳ ಗುರುಪಂಥಗಳ ಮೇಲೆ ಆಳವಾದ ಅಧ್ಯಯನ ಮಾಡಿ, ಹೊಸಹಾದಿ ತೆರೆದಿದ್ದರು. ಆದರೆ ಆ ಹಾದಿಯನ್ನು ತತ್ವಶಾಸ್ತ್ರದ ವಿಭಾಗಗಳು ತುಳಿಯಲಿಲ್ಲ. ಈ ವಿಭಾಗಗಳು ಬೌದ್ಧಿಕವಾಗಿ ಅನಾಕರ್ಷಕವಾಗಿರಲು ಮತ್ತು ಸಮಕಾಲೀನ ಸ್ಪಂದನೆಯನ್ನು ಕಳೆದುಕೊಂಡಿರಲು, ದರ್ಶನಗಳ ಚರ್ಚೆಗೆ ಸಂಸ್ಕೃತದಲ್ಲಿರುವ ಪ್ರಮಾಣ ಗ್ರಂಥಗಳಿಗೆ ಸೀಮಿತಗೊಂಡಿದ್ದು ಪ್ರಮುಖ ಕಾರಣವೆನ್ನಬಹುದು.

ಈ ಕೊರತೆಯೊಳಗೂ ಕನ್ನಡದಲ್ಲಿ ಶರಣ ಹಾಗೂ ದಾಸ ಸಾಹಿತ್ಯ ಮತ್ತು ದರ್ಶನಗಳ ಮೇಲೆ ಸಾಕಷ್ಟು ಕೆಲಸಗಳಾಗಿವೆ. ಆದರೆ ಸೂಫಿ, ಆರೂಢ, ಅವಧೂತ ಮುಂತಾಗಿ ಜನರ ಬದುಕು, ಆಲೋಚನಕ್ರಮ ಹಾಗೂ ಸಂಸ್ಕೃತಿಗಳ ಮೇಲೆ ಪ್ರಭಾವ ಬೀರಿರುವ ಗುರುಪಂಥಗಳ ಮೇಲೆ ಅಷ್ಟೊಂದು ಕೆಲಸಗಳಾಗಿಲ್ಲ. ನಿಜಗುಣ ಶಿವಯೋಗಿ, ಶಿಶುನಾಳ ಶರೀಫ, ಸಿದ್ಧಾರೂಢ, ಕಡಕೋಳದ ಮಡಿವಾಳಪ್ಪ, ಕೈವಾರದ ತಾತಯ್ಯ ಮುಂತಾದ ಕರ್ನಾಟಕದ ಪ್ರಮುಖ ಮತ್ತು ಜನಪ್ರಿಯ ದಾರ್ಶನಿಕರ ಬಗ್ಗೆ, ತತ್ವಶಾಸ್ತ್ರದವರೂ ಸಾಂಪ್ರದಾಯಿಕ ಇತಿಹಾಸಕಾರರೂ ಮಹತ್ವದ ಯಾವ ತಿಳುವಳಿಕೆಯನ್ನೂ ಸೃಷ್ಟಿಮಾಡಿಲ್ಲ. ಇದಕ್ಕೆ ಮೂರು ಕಾರಣಗಳಿದ್ದಂತೆ ತೋರುತ್ತದೆ.

ಅ. ಚರಿತ್ರೆಯ ಅಧ್ಯಯನಗಳು ರಾಜಕೀಯ ಚರಿತ್ರೆಯ ನೆಲೆಯಿಂದ ಪೂರ್ಣವಾಗಿ ಹೊರಗೆ ಬಾರದಿರುವುದು. ಸ್ಥಳೀಯ ಚರಿತ್ರೆ ಮತ್ತು ಸಬಾಲ್ಟರ್ನ್ ಪರಿಕಲ್ಪನೆ ಬಂದ ಬಳಿಕ, ಅನೇಕರು ಹೊರಬಂದು ಅಧ್ಯಯನ ಮಾಡಿರುವ ನಿದರ್ಶನಗಳಿವೆ. ಆದರೂ ಈ ಕ್ಲಾಸಿಕಲ್ ಮನೋಭಾವವು ದಟ್ಟವಾಗಿ ಅಲ್ಲಿ ಉಳಿದುಕೊಂಡಿದೆ.

ಆ. ಸಮಾಜ ವಿಜ್ಞಾನಕ್ಕೆ ಸೇರಿದ ರಾಜಕೀಯ ಚರಿತ್ರೆ ಸಮಾಜ ಮುಂತಾದ ಶಾಸ್ತ್ರಿಸುತ್ತಗಳಿಗೆ ಸಾಹಿತ್ಯ, ಭಾಷೆ, ತತ್ವಶಾಸ್ತ್ರಗಳಲ್ಲಿ ಅಗತ್ಯವಾದ ಪ್ರವೇಶ ಇಲ್ಲದಿರುವುದು. ಉದಾಹರಣೆಗೆ 'ಭಕ್ತಿಪಂಥಗಳು' ಎಂಬ ಹೆಸರಲ್ಲಿ ಮಾಡಲಾಗಿರುವ ಬಹುತೇಕ ಅಧ್ಯಯನಗಳನ್ನು ಗಮನಿಸಬಹುದು. ಅಲ್ಲಿ ವಿಗ್ರಹಾರಾಧಕ ಭಕ್ತಿ (ಡೆವೋಶನ್), ಆನುಭಾವಿಕ (ಮಿಸ್ಟಿಕಲ್) ಹಾಗೂ ಆಧ್ಯಾತ್ಮಿಕ (ಸ್ಪಿರಿಚ್ಯುಯಲ್)ಗಳ ನಡುವೆ ಸೂಕ್ಷ್ಮ ವ್ಯತ್ಯಾಸವನ್ನೂ

ಮಾಡಿಕೊಳ್ಳುವುದಿಲ್ಲ. ಭಕ್ತಿ, ಆಧ್ಯಾತ್ಮ, ಅನುಭಾವ–ಇವು ಸಮಾನಾರ್ಥಕ ಪರಿಕಲ್ಪನೆಗಳಲ್ಲ. 'ಭಕ್ತಿ'ಯು ಮುಖ್ಯವಾಗಿ ಒಂದು ಅಲೌಕಿಕ ಶಕ್ತಿಯನ್ನು ಒಪ್ಪಿಕೊಂಡು ಅದಕ್ಕೆ ಶರಣಾಗುವುದನ್ನು ಸೂಚಿಸುತ್ತದೆ; 'ಶರಣ' ಪರಿಕಲ್ಪನೆಯಲ್ಲಿ ಪಾರ್ಶ್ವಿಕವಾಗಿಯೂ 'ದಾಸ'ದಲ್ಲಿ ಇಡಿಯಾಗಿಯೂ ಸಬ್‌ಮಿಶನ್ ಆಯಾಮವಿದೆ. ಭಕ್ತಿಯಲ್ಲಿ ಕೇಂದ್ರ ಗುರುವಲ್ಲ; ದೈವ. ಅಲ್ಲಿ ಭಾವುಕತೆ ಮುಖ್ಯವೇ ಹೊರತು ಅರಿವಲ್ಲ. ಆದರೆ ಅನುಭಾವಿ ಆರೂಢ ಅವಧೂತರಲ್ಲಿ ಗುರು, ಗುರುದೀಕ್ಷೆ, ಸಾಧನೆ, ಸಾಧನೆಯಿಂದ ಸಿಗುವ ಸ್ವಾನುಭವ ಮತ್ತು ಅರಿವು ಮುಖ್ಯ. ಸಾಧಕರು ತಮ್ಮೊಳಗಿನ ವಿಶ್ವಾತ್ಮಕ ಚೈತನ್ಯವನ್ನು ತಾವೇ ಕಂಡುಕೊಂಡು ತಾವೇ ದೈವವಾಗಬೇಕು ಎಂಬುದು ಇಲ್ಲಿನ ತತ್ವ. 'ಹೌದಪ್ಪ ಹೌದೋ ನೀನೇ ದೇವರಾ, ನಿನ್ನ ನೀನು ತಿಳಿದರೆ ಇಲ್ಲಪ್ಪ ದೂರಾ' ಎಂದವು ಪ್ರತಿಪಾದಿಸುತ್ತವೆ. ಗುರುದರ್ಶನಗಳ ಸಾರವನ್ನು ಎರಡು ಪದಗಳಲ್ಲಿ ಹಿಡಿಯುವುದಾದರೆ, ಅದು 'ತನ್ನ ತಾನರಿವುದು'. ಎಂತಲೇ ಗುರುಪಂಥಗಳದ್ದು ಮನುಷ್ಯಕೇಂದ್ರಿತ ದರ್ಶನ. ಜಗತ್ತನ್ನು ತನ್ನ ಇಚ್ಛಾಶಕ್ತಿಯಿಂದ ಆಡಿಸುವ ಒಂದು ಅಲೌಕಿಕ ಶಕ್ತಿಯಿದೆ ಎಂದು ಅವು ನಂಬುವುದಿಲ್ಲ. ಕೆಲವು ಯೋಗಿಗಳು ತುಸು ಮುಂದೆ ಹೋಗಿ, ವಿಶ್ವಾತ್ಮಕ ಚೈತನ್ಯವು ಮನುಷ್ಯರನ್ನು ಒಳಗೊಂಡಂತೆ ಸಕಲ ಜೀವಿಗಳಲ್ಲೂ ಇವೆಯೆಂದು ಭಾವಿಸುವುದರಿಂದ, ನಾಯಿ, ಗಿಡ, ಮರಗಳ ಸಮೇತ ಸಕಲಜೀವಿಗಳ ಅಸ್ತಿತ್ವವನ್ನೂ ಮನ್ನಿಸಿದರು. ನಾಯಿಗಳನ್ನು ತಮ್ಮ ಜತೆ ಸಮಾಧಿಗೊಳಿಸಿಕೊಂಡರು. ಕೋಲಾರ ಸೀಮೆಯ ದೊಡ್ಡಿ ವೆಂಕಟಗಿರಿಯಪ್ಪ, ಮರಗಿಡಗಳ ದೊಡ್ಡ ವನವನ್ನೇ ಬೆಳೆಸಿದನು. ಇದು ಆರೂಢರ ಸಾಮಾಜಿಕವಾಗಿ 'ಸಮಾಜವಾದಿ' ಎನ್ನಬಹುದಾದ ನಿಲುವನ್ನು ರೂಪಿಸಿದ ಪ್ರೇರಕತತ್ವವಾಯಿತು.

ಆದರೆ 'ಭಕ್ತಿಪಂಥಗಳು' ಎಂಬ ಅತಿವ್ಯಾಪ್ತಿಯ ಚೌಕಟ್ಟಿನಲ್ಲಿ, ತಮಿಳಿನ ನಾಯನ್ಮಾರರನ್ನು ಆಳ್ವಾರರನ್ನು ಕರ್ನಾಟಕದ ಶರಣರನ್ನು ಹಾಗೂ ದಾಸರನ್ನು, ಮರಾಠಿಯ ಜ್ಞಾನದೇವ, ತುಕಾರಾಮ, ಏಕನಾಥರನ್ನು ಹಾಗೂ ಉತ್ತರದ ಕಬೀರ, ಮೀರಾ ಚೈತನ್ಯಪ್ರಭು ಅವರನ್ನು ಇಟ್ಟು, ಸಾಧಾರಣೀಕರಣಗೊಳಿಸಿ ಚರ್ಚಿಸುವ ಪದ್ಧತಿ ಕನ್ನಡದಲ್ಲಿ ಜಾರಿಯಲ್ಲಿದೆ. ಪಠ್ಯಕ್ರಮದ ಅನುಕೂಲಕ್ಕಾಗಿ ಸಂಘಟಿತವಾಗಿರುವ ಈ ವಿಭಾಗೀಕರಣವು, ಸಂಶೋಧನೆ ದೃಷ್ಟಿಯಿಂದ ಅಸೂಕ್ಷ್ಮ ಮತ್ತು ಅಚಾರಿತ್ರಿಕವಾಗಿದೆ. ಯಾಕೆಂದರೆ ಭಕ್ತ ಪಂಥೀಯರು ಎಂದು ಕರೆಯಲಾಗುವ ಸಂತರಲ್ಲಿ–ನಮ್ಮ ಹರಿದಾಸರ ಹಾಗೆ– ವಿಗ್ರಹಾರಾಧನೆ ಮಾಡುವವರಿದ್ದಾರೆ. ಅದನ್ನು ವಿರೋಧಿಸುವವರಿದ್ದಾರೆ. ಆಸ್ತಿಕರಿದ್ದಾರೆ, ನಾಸ್ತಿಕರಿದ್ದಾರೆ. ಆದರೆ ಬಹುತೇಕ ಆರೂಢರು–ಅವಧೂತರು ದೈವ, ಸ್ವರ್ಗ, ನರಕ, ಗುಡಿ, ಮೂರ್ತಿಪೂಜೆ, ಪ್ರಮಾಣ ಗ್ರಂಥಗಳನ್ನು ನಿರಾಕರಿಸುವರು. ಅವರಿಗೆ ದೈವಕ್ಕೆ ಸಮಾನವಾದುದು ಇದ್ದರೆ ಅದು ಗುರು. ಎಂತಲೇ ಅವು ಗುರುಪಂಥಗಳು. ಹೀಗಾಗಿ ಶಿಥಿಲವೂ ಮತ್ತು ವಿಶಾಲವೂ ಆದ 'ಭಕ್ತಿಪಂಥ'ದ ಚೌಕಟ್ಟಿನೊಳಗೆ ಹಲವು ಕಾಲಘಟ್ಟದ, ವಿಭಿನ್ನ ದಾರ್ಶನಿಕ ಹಿನ್ನೆಲೆಯ, ವಿಭಿನ್ನ ಪ್ರದೇಶದ ಸಂತರನ್ನು ತುರುಕುವ ಕ್ರಮದಿಂದ ಬಹಳ ಪ್ರಯೋಜನವಾಗಿಲ್ಲ.

ಇ. ಗುರುಪಂಥಗಳ ದಾರ್ಶನಿಕ ಲೋಕಗಳಲ್ಲಿರುವ ರಾಜಕೀಯ ಸಾಮಾಜಿಕ ಆಯಾಮಗಳ ಸಮರ್ಥ ವಿಶ್ಲೇಷಣೆ ಮಾಡಲು ಇನ್ನೂ ಸಾಧ್ಯವಾಗದಿರುವುದು. ಬಹಳಷ್ಟು ವಿದ್ವಾಂಸರಲ್ಲಿ 'ಭಕ್ತಿಪಂಥ'ಗಳಲ್ಲಿ ಸಂಸಾರವಿರಕ್ತಿ ಮತ್ತು ಅಲೌಕಿಕ ಸೆಳೆತಗಳು ಮಾತ್ರ ಇರುತ್ತವೆ ಎಂಬ ಸರಳ ಗ್ರಹಿಕೆಯಿದ್ದಂತಿದೆ. ಆದರೆ ಈ ಗುರುಪಂಥಗಳಿಗೆ ತಮ್ಮ ಕಾಲದ ರಾಜಕೀಯ ಸಾಮಾಜಿಕ ವಿದ್ಯಮಾನಗಳಿಗೆ ತೀಕ್ಷ್ಣವಾದ ಪ್ರತಿಕ್ರಿಯೆ ಕೊಟ್ಟಿರುವ 'ಲೌಕಿಕ' ಆಯಾಮವೂ ಇದೆ. ಅದರಲ್ಲೂ ಜಾತಿಕುಲ, ಲಿಂಗತಾರತಮ್ಯ, ಸಂಪತ್ತಿನ ಶೇಖರಣೆ,

ಪುರೋಹಿತಶಾಹಿ ಮತ್ತು ಸಾಂಸ್ಥಿಕ ಧರ್ಮಗಳ ಕರ್ಮಾಚರಣೆಗಳ ಬಗ್ಗೆ ಅವು ತಳೆದ ಕಟುವಿಮರ್ಶೆಯೇ, ಅವನ್ನು ಕ್ರಾಂತಿಕಾರಕವಾಗಿಸಿದವು. ಈ ಹಿನ್ನೆಲೆಯಲ್ಲಿ ಕರ್ನಾಟಕ ಗುರುಪಂಥಗಳಲ್ಲಿರುವ ದಾರ್ಶನಿಕ ಪರಂಪರೆಗಳನ್ನು ಗುರುತಿಸುವ, ಅಲ್ಲಿರುವ ವಾಗ್ವಾದ ಜಿಜ್ಞಾಸೆ ಲೋಕದೃಷ್ಟಿಗಳನ್ನು ಚರ್ಚಿಸುವ ಕಾರ್ಯಕ್ಕೆ ವಿಧಾನಗಳನ್ನು ಅನ್ವೇಷಿಸಬೇಕಿದೆ.

– 2 –

ಕರ್ನಾಟಕದ ಆರೂಢ-ಅವಧೂತ ಪಂಥಗಳನ್ನು ಅಧ್ಯಯನ ಮಾಡಲು ಇರುವ ಪ್ರಮುಖ ಆಕರಗಳೆಂದರೆ- ಸಂತರ ಗದ್ದುಗೆ, ಮಠ/ಆಶ್ರಮ/ಗುಹೆ ಇತ್ಯಾದಿ ವಾಸ್ತುರಚನೆಗಳು; ಸಂತರ ಮೂರ್ತಿಗಳು ಹಾಗೂ ಚಿತ್ರಪಟಗಳು; ದೀಕ್ಷೆ, ಸತ್ಸಂಗ, ಆರಾಧನೆ, ಗುರುಬಂಧುವಿನ ಅಂತ್ಯಸಂಸ್ಕಾರ ಮುಂತಾದ ಆಚರಣೆಗಳು; ಹಸ್ತಪ್ರತಿ ಹಾಗೂ ಪುಸ್ತಕಗಳ ರೂಪದಲ್ಲಿರುವ ತತ್ವಪದ ಸಾಹಿತ್ಯ ಮತ್ತು ಅದರ ಭಾಷೆ; ಹಾಡಿಕೆಯಲ್ಲಿರುವ ಸಂಗೀತ ಮತ್ತು ವಾದ್ಯಗಳು; ಅವಧೂತರು-ಆರೂಢರನ್ನು ಕುರಿತು ಬಂದಿರುವ ಜೀವನ ಚರಿತ್ರೆಗಳು; ಗುರುಬೋಧ ಕೊಡುವ ಗುರು ಹಾಗೂ ಅದನ್ನು ಸ್ವೀಕರಿಸಿರುವ ಶಿಷ್ಯರ ಜತೆ ಮಾಡಬಹುದಾದ ಮಾತುಕತೆ; ಈ ಲೋಕವನ್ನು ಕುರಿತು ಸಾಂಪ್ರದಾಯಿಕ ಧರ್ಮದಲ್ಲಿರುವವರ ಪ್ರತಿಕ್ರಿಯೆಗಳು.

ಕರ್ನಾಟಕ ಆರೂಢ-ಅವಧೂತ ಲೋಕವನ್ನು ಭೌಗೋಳಿಕ ನೆಲೆಯಲ್ಲಿ ಸ್ಥೂಲವಾಗಿ ಹತ್ತು ವಲಯಗಳಾಗಿ ಕಲ್ಪಿಸಿಕೊಳ್ಳಬಹುದು. 1. ಕೈವಾರ ನಾರೇಯಣ, ಗಟ್ಟಳ್ಳಿ ಅಂಜನಪ್ಪ, ಕೃಷ್ಣಾವಧೂತ, ರಾಮಾವಧೂತ, ಬುಟ್ಟಪ್ಪ, ಸರ್ಪಭೂಷಣಸ್ವಾಮಿ, ದೊಡ್ಡಿ ವೆಂಕಟಗಿರಿಯಪ್ಪ, ಮಾಲೂರ ಸೊಣ್ಣಪ್ಪ ಮುಂತಾದವರು ಇರುವ ಬೆಂಗಳೂರು-ಕೋಲಾರ ವಲಯ. 2. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಚನ್ನಾರೂಢ, ಹಸನ್ ಮಾತಾಜಿ ಇರುವ ಮೈಸೂರು-ಮಂಡ್ಯ ವಲಯ. 3. ಶಂಕರಾನಂದ ಶಿವಯೋಗಿ, ಕೆರೆಕೋಡಿ ರಂಗಾಪುರದ ತಾತ, ನರಹರಿತೀರ್ಥ, ಗೋಸಿಕೆರೆ ಸಾರವಾಡೇಶ್ವರ, ತುರುವನೂರ ಲಿಂಗಾರ್ಯ, ಕೊಳಗಲ್ಲಿನ ಕೆಂಚಾವಧೂತ, ಕಳವಿಬಾಗಿಯ ರಂಗಾವಧೂತ, ಹಾಗಲವಾಡಿ ಮುದ್ವೀರಸ್ವಾಮಿ ಮುಂತಾದವರು ಚಿತ್ರದುರ್ಗ-ತುಮಕೂರು ವಲಯ. 4. ಹೇರೂರ ವಿರುಪನಗೌಡ, ಹೊಳಗುಂದಿಯ ಸಾಹಿಬಣ್ಣ, ಗುಡೀಕಲ್ಲಿನ ಅಲ್ಲಿಪೀರಾ, ಚಿಪ್ಪಗಿರಿಯ ಭಂಭಂಸ್ವಾಮಿ, ಶಿಲವೇರಿ ಶಿವಪ್ಪ, ಅಲ್ಲಿಪುರದ ಮಹದೇವತಾತ, ಚೆಳ್ಳಗುರ್ಕಿ ಯರ್ರಿತಾತ, ರಾಯದುರ್ಗದ ಶೇಕ್‌ಅಬ್ದುಲ್, ಆದೋನಿ ಲಕ್ಷ್ಮಮ್ಮ, ಹೊಸಪೇಟೆಯ ಕೆಂಪಾವಧೂತ, ರಾಮಾವಧೂತ, ಕಾಳಘಟ್ಟದ ರುದ್ರಮುನಿ ಇರುವ ಬಳ್ಳಾರಿ ವಲಯ. 5. ನೀರಲಕೇರಿ ಬಸವಲಿಂಗ, ಕೂಡಲೂರು ಬಸವಲಿಂಗಪ್ಪ, ವಡಿಕೆಪ್ಪ ತಾತ, ಗುರುಪೀರಾ ಖಾದ್ರಿ, ಚಿದಾನಂದವಧೂತ, ಹೇರೂರ ವಿರುಪನಗೌಡ, ಹನಮಂತಾವಧೂತ, ಅರೋಲಿಯ ಬಿಜಲಿ, ರಾಯಚೂರಿನ ಹನುಮಂತವ್ವ, ಅಂಕಲಗಿ ನಿರುಪಾಧೀಶ, ಗೂಗಲ್ ಪರಪ್ಪಯ್ಯ, ಗಬ್ಬೂರ ಹಂಪಣ್ಣ, ಘನಮಠದ ಶಿವಯೋಗಿ ಅವರ ರಾಯಚೂರು ವಲಯ. 7. ಕಡಕೋಳದ ಮಡಿವಾಳಪ್ಪ, ಚನ್ನೂರ ಜಲಾಲಸಾಬ್, ರಾಂಪುರದ ಬಕ್ಕಪ್ಪ, ಖೈನೂರು ಕೃಷ್ಣಪ್ಪ, ಮೋಟ್ನಳ್ಳಿ ಹಸನಸಾಬ್, ಧುಮ್ಮನಸೂರ ಸಿದ್ಧಪ್ರಭು, ಮರಕುಂದಿ ಬಸವಣ್ಣೆಪ್ಪ, ಮಾಣಿಕನಗರದ ಮಾಣಿಕಪ್ರಭು, ನಿಡವಂಚಿಯ ಭದ್ರೇಶ್ವರ ಮುಂತಾದವರ ಕಲಬುರ್ಗಿ-ಬೀದರ ವಲಯ. 8. ನವಿಲುಗುಂದದ ನಾಗಲಿಂಗ, ಕಳಸದ ಗೋವಿಂದಭಟ್ಟ, ಶಿಶುನಾಳದ ಶರೀಫ, ಗರಗದ ಮಡಿವಾಳಪ್ಪ, ಬಾಲಲೀಲಾ ಮಹಾಂತಯೋಗಿ, ಚಲುವಾದಿ ಚಂದಪ್ಪ ಇರುವ ಹುಬ್ಬಳ್ಳಿ-ಧಾರವಾಡ ಸೀಮೆ. 9. ಅಲಭೈರಿ, ಹುಲಕುಂದದ ಭೀಮಕವಿ, ಅಂಕಲಗಿ ಅಡವಿಸಿದ್ಧ, ದುರದುಂಡಿಯ

ದುರದುಂಡೇಶ್ವರ, ಕಲ್ಮೇಶ್ವರ ಇರುವ ಬೆಳಗಾವಿ ವಲಯ. 10. ನಿಂಬರಗಿ ಮಹಾರಾಜ, ಜತ್ತದ ಶಿವಲಿಂಗವ್ವ, ಕಾಖಂಡಕಿ ಮಹಿಪತಿರಾಯ, ಸಾರವಾಡದ ಚಿಕ್ಕಪ್ಪ, ಇಂಚಗೇರಿ ಸಂಪ್ರದಾಯದ ಗುರುದೇವ ರಾನಡೆ, ಭಾವುರಾವ್, ಸಿಂದಗಿ ಭೀಮಾಶಂಕರ ಮುಂತಾದವರು ಬರುವ ಬಿಜಾಪುರ ವಲಯ. ಸಂತರ ದಾರ್ಶನಿಕ ಹಿನ್ನೆಲೆಯಿಂದಲೂ ಅವಧೂತ, ಅದ್ವಯವಾದಿ, ಅದ್ವೈತವಾದಿ, ವಿಹಗವಾದಿ, ಪಿಪೀಲಿಕಾವಾದಿ, ಅಚಲರು ಎಂದು ವಿಂಗಡಣೆ ಸಾಧ್ಯವಿದೆ.

– 3 –

ಕರ್ನಾಟಕದ ಆರೂಢ/ಅವಧೂತರ ಅಧ್ಯಯನಗಳಿಗೆ ಶತಮಾನದ ಚರಿತ್ರೆಯಿದೆ. ಈ ಅಧ್ಯಯನಗಳ ಮುಖ್ಯ ನೆಲೆಗಳನ್ನು ಹೀಗೆ ಗುರುತಿಸಬಹುದು.

1. **ಸಾಹಿತ್ಯ ಚರಿತ್ರೆಯ ನೆಲೆ:** ವಸಾಹತುಶಾಹಿ ಕಾಲದಲ್ಲಿ ಕರ್ನಾಟಕದ ಚರಿತ್ರೆಯನ್ನು ಕಟ್ಟಿಕೊಳ್ಳುವ ಭಾಗವಾಗಿ ಸಾಹಿತ್ಯ ಚರಿತ್ರೆಗಳೂ ಕಟ್ಟುಗೊಂಡವು. ಅವುಗಳಲ್ಲಿ 17 ರಿಂದ 19ನೇ ಶತಮಾನದ ತನಕ ಬರುವ ತತ್ವಪದದ ಕವಿಗಳನ್ನು ಪಟ್ಟಿಮಾಡಲಾಯಿತು. ಇಲ್ಲಿ ಕವಿಯ ಕಾಲ, ಚರಿತ್ರೆ ಮತ್ತು ಕೃತಿಯ ಹೆಸರು ಮುಖ್ಯವೇ ಹೊರತು, ಅದರೊಳಗಿನ ಸಾಹಿತ್ಯವಾಗಲಿ ದಾರ್ಶನಿಕತೆಯಾಗಲಿ ಚರ್ಚಿಸುವುದಲ್ಲ.

2. **ಸಾಹಿತ್ಯಕ ನೆಲೆ:** ಆಧುನಿಕ ಶೈಕ್ಷಣಿಕ ವ್ಯವಸ್ಥೆ ಹಾಗೂ ಪ್ರಭುತ್ವಗಳು ಅಕ್ಷರಸ್ಥ ಸಾಹಿತ್ಯವನ್ನು ಮಾನ್ಯ ಮಾಡಿದ್ದರಿಂದ, ಮೌಖಿಕ ಪರಂಪರೆಯ ಸಾಹಿತ್ಯದ ಪರವಾಗಿ ಇರುವವರು ಒಂದು ಬಗೆಯ ಅನ್ಯಾಯಭಾವ ಅನುಭವಿಸಿದರು. ಆಗ ಜನಪದ ಸಾಹಿತ್ಯ ಮತ್ತು ತತ್ವಪದ ಸಾಹಿತ್ಯಗಳನ್ನು ಸಹ ಪ್ರಧಾನ ಧಾರೆಯ ಸಾಹಿತ್ಯದಲ್ಲಿ ಪರಿಗಣಿಸಬೇಕೆಂದು ಒತ್ತಾಸೆ ನಿರ್ಮಾಣವಾಯಿತು. ಈ ನೆಲೆಯಿಂದ ನಡೆದ ಅಧ್ಯಯನಗಳಿಗೆ ತತ್ವಪದಗಳಿಗೆ ಲಗತ್ತಾಗಿರುವ ತತ್ವ, ಸಂಗೀತ, ಜಿಜ್ಞಾಸೆ (ಸತ್ಸಂಗ), ಆಚರಣಲೋಕ ಅಷ್ಟು ಮುಖ್ಯವಾಗಿರಲಿಲ್ಲ. ಹಾಗೆ ಮುಖ್ಯವಾಗಬೇಕಾದರೆ, ಜನರ ಬಳಿಗೆ ಅಧ್ಯಯನಕಾರರು ಹೋಗಬೇಕಿತ್ತು. ಅವರು ಹಾಡು–ಮಾತು ಕೇಳಿಸಿಕೊಳ್ಳಬೇಕಿತ್ತು. ಬದಲಿಗೆ ಈ ಅಧ್ಯಯನಗಳು ತತ್ವಪದಗಳ ಬಂಧ, ಭಾಷೆ, ರೂಪಕ ಉಪಮೆ, ಕಾವ್ಯಗುಣಗಳ ಚರ್ಚೆಗೆ ತಮ್ಮನ್ನು ಸೀಮಿತಗೊಳಿಸಿಕೊಂಡವು.

3. **ದಾರ್ಶನಿಕ ನೆಲೆ:** ಗುರುಪಂಥಗಳನ್ನು ದರ್ಶನ ಮತ್ತು ಸಾಧಕರ ನೆಲೆಯಿಂದ ನೋಡುವ ಅಧ್ಯಯನಗಳಿವು. ಇಲ್ಲಿ ಗುರುಪಂಥಗಳಲ್ಲಿರುವ ವಿವಿಧ ಪರಿಕಲ್ಪನೆಗಳ ತತ್ವಶಾಸ್ತ್ರೀಯ ಜಿಜ್ಞಾಸೆ ಮುಖ್ಯ. ಇವು ಆರೂಢ–ಅವಧೂತ–ಅನುಭಾವ ದರ್ಶನಗಳನ್ನು 'ಪ್ರಧಾನ'ಧಾರೆಯ ಮತಧರ್ಮಗಳಿಗಾಗಲಿ ಆಚರಣೆಗಾಗಲಿ ಹೆಚ್ಚು ಲಗತ್ತು ಮಾಡುವುದಿಲ್ಲ. ಈ ಅಧ್ಯಯನಗಳಿಗೆ ಗುರುಪಂಥಗಳಲ್ಲಿರುವ ಸಾಮಾಜಿಕ ಪ್ರಜ್ಞೆಯ ಆಯಾಮವೂ ಅಷ್ಟು ಮುಖ್ಯವಲ್ಲ. ಸಾಧಕರು ತಮ್ಮ ಆತ್ಮವಿಮೋಚನೆಗಾಗಿ ಹಿಡಿಯುವ ಪಥವನ್ನು ಕಾಣಿಸುವ ಈ ಮಾದರಿಯ ಅಧ್ಯಯನಗಳನ್ನು ರಾನಡೆಯವರು ಆರಂಭಿಸಿದರು.

4. **ಅವೈದಿಕ ದರ್ಶನಗಳ ಶೋಧದ ನೆಲೆ:** ಈಚಿನ ಅಧ್ಯಯನಕಾರರು ಭಾರತದ ಬೌದ್ಧ ಮತ್ತು ಇನ್ನತರೆ ಅವೈದಿಕ ದರ್ಶನ ಹಾಗೂ ಸಂಸ್ಕೃತಿಗಳು ಶೋಧದ ಭಾಗವಾಗಿ ಆರೂಢ–ಅವಧೂತರನ್ನು ಅಧ್ಯಯನಿಸುತ್ತಿರುವರು.[1] ಈ ಅಧ್ಯಯನಗಳು ಆರೂಢ ಪರಂಪರೆಯನ್ನು ಸಮಕಾಲೀನ ರಾಜಕೀಯ ಸಾಮಾಜಿಕ ಚಳುವಳಿಯ ಭಾಗವಾಗಿಸಲು ಬಯಸುತ್ತವೆ; ಅದನ್ನು ಆಧುನಿಕ ಚಿಂತನಾ ಪರಂಪರೆಯಲ್ಲಿಟ್ಟು ನೋಡುತ್ತವೆ.

ಸಮಸ್ಯೆಯೆಂದರೆ, ತಮ್ಮ ಅತಿ ಸಾಮಾಜಿಕ ದೃಷ್ಟಿಕೋನದಿಂದ, ತತ್ವಪದ ಸಾಹಿತ್ಯದಲ್ಲಿರುವ ಭಾಷಾಪ್ರತಿಭೆ ಸಾಹಿತ್ಯಕ ಶಕ್ತಿಗಳನ್ನು ಅಷ್ಟಾಗಿ ಇವು ಗಮನಿಸುವುದಿಲ್ಲ; ಗುರುಪಂಥಗಳಲ್ಲಿರುವ ವಿರಕ್ತವಾದಿ ನಿಲುವುಗಳಲ್ಲಿರುವ ಸಂಸಾರ ವಿರೋಧಿ ಮತ್ತು ಸ್ತ್ರೀಶಂಕಿತವಾದಿ ಧೋರಣೆಗಳನ್ನು ನಿಷ್ಠುರವಾಗಿ ವಿಮರ್ಶಿಸುವುದಿಲ್ಲ. ಎಲ್ಲ ಚಾರಿತ್ರಿಕ ಒತ್ತಡದಲ್ಲಿ ಹುಟ್ಟುವ ಎಲ್ಲ ಬಗೆಯ ಸಾಂಸ್ಕೃತಿಕ ರಾಜಕಾರಣದ ಅಧ್ಯಯನಗಳಲ್ಲಿ ತಮ್ಮ ಪ್ರಮೇಯ ಮಂಡನೆಗೆ ಪೂರಕವಲ್ಲದ ಅಂಶಗಳನ್ನು ಸೂಕ್ಷ್ಮವಾಗಿ ಬೈಪಾಸ್ ಮಾಡುವ ಸಮಸ್ಯೆಯೊಂದು ಇರುತ್ತದೆಯೆಂದು ಕಾಣುತ್ತದೆ.

5. **ಮತಧಾರ್ಮಿಕ ನೆಲೆ:** ಇಲ್ಲಿ ಗುರುಪಂಥಗಳ ದರ್ಶನ ಮತ್ತು ಸಾಹಿತ್ಯಗಳನ್ನು ನಿರ್ದಿಷ್ಟ ಮತಧರ್ಮದ ಚೌಕಟ್ಟಿಗೆ ಒಳಪಡಿಸಿ ನೋಡುವ ಉಮೇದು ಹೆಚ್ಚಿರುತ್ತದೆ. ಒಂದೊಮ್ಮೆ ಸಂತಸಾಹಿತ್ಯ ಮತ್ತು ತಾತ್ವಿಕತೆಗಳು ಇದಕ್ಕೆ ಪೂರಕವಾಗಿಲ್ಲದಾಗ, ಸಂತರ ಹುಟ್ಟಿನ ಹಿನ್ನೆಲೆಯಿಂದ ಅವರನ್ನು ತಮ್ಮವರೆಂದು ಹಕ್ಕುಸಾಧಿಸುವ ಯತ್ನ ಮಾಡಲಾಗುತ್ತದೆ. ದಾಸ ಸಾಹಿತ್ಯ ಮತ್ತು ಬ್ರಾಹ್ಮಣವಾದಿ ದರ್ಶನಗಳ ಭಾಗವಾಗಿ ಮಹಿಪತಿರಾಯರನ್ನು, ಲಿಂಗಾಯತ ಮತದ ಭಾಗವಾಗಿ ಕೂಡಲೂರು ಬಸವಲಿಂಗ, ಘನಮಠದ ಶಿವಯೋಗಿ, ನಿಜಗುಣ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಸರ್ಪಭೂಷಣಸ್ವಾಮಿ ಅವರನ್ನು, ಇಸ್ಲಾಮಿನ ಭಾಗವಾಗಿ ಗುರುಪೀರಾ, ಶಿಶುನಾಳರನ್ನು ವ್ಯಾಖ್ಯಾನಿಸುವ ಯತ್ನಗಳು ಇಂಥವು. ಕರ್ನಾಟಕದಲ್ಲಿ ಬಲವಾಗಿ ಬೀಸುತ್ತಿರುವ ಅಸ್ಮಿತೆ ರಾಜಕಾರಣದ ಹವೆಯು, ಈ ಬಗೆಯ ಒಳಗೊಳ್ಳುವಿಕೆ ಮತ್ತು ಹಕ್ಕುಸಾಧನ ಪ್ರವೃತ್ತಿಗೆ ಪೂರಕವಾಗಿದೆ. ಈ ನೆಲೆಯ ಬರೆಹಗಳು ಅಂತಿಮವಾಗಿ ಸಾಂಪ್ರದಾಯಿಕ ಮತಧರ್ಮದ ಹಂಗನ್ನು ಹರಿದು ಹೋದ ಸಂತರನ್ನು ಮತ್ತೆ ಅವೇ ಚೌಕಟ್ಟಿನೊಳಗೆ ತಂದು ಅವರನ್ನು ಸಂಕುಚಿತಗೊಳಿಸುತ್ತವೆ.

6. **ವೈಭವೀಕರಣದ ನೆಲೆ:** ಇದು ದೇಶೀಯ ಸಂತರನ್ನು ಯಾವುದೇ ಕೊರತೆಯಿಲ್ಲದ ಆತ್ಯಂತಿಕ ಆಧ್ಯಾತ್ಮಿಕ ಸಾಧಕರೆಂದು ನೋಡಲು ಹವಣಿಸುತ್ತದೆ. ಪಾಶ್ಚಿಮಾತ್ಯ ವಿಜ್ಞಾನ ಆಧುನಿಕತೆಯ ಭರಾಟೆಯಲ್ಲಿ, ಭಾರತದ ದೇಶೀಯ ಧರ್ಮ ಸಂಸ್ಕೃತಿ ದರ್ಶನಗಳನ್ನು ಭಾವುಕವಾಗಿ ನೋಡುತ್ತ, ನಮ್ಮ ಆಧ್ಯಾತ್ಮಿಕ ಲೋಕಗಳಿಗೆ ನಾವು ಕುರುಡರಾಗಿಬಿಟ್ಟೆವು ಎಂಬುದು ಇಲ್ಲಿನ ನಿಲುವು. ದೇಶೀಯ ಆಧ್ಯಾತ್ಮಿಕ ಸಂಪತ್ತಿನ ಬಗ್ಗೆ ಯಾವುದೇ ಸ್ವವಿಮರ್ಶೆಯಿಲ್ಲದೆ, ಪಶ್ಚಿಮದ ದರ್ಶನ ವಿಚಾರವಾದಗಳು ಮಾಡಿರುವ ಪ್ರಭಾವದ ಬಗ್ಗೆ ಯಾವುದೇ ಮೆಚ್ಚುಗೆಯಿಲ್ಲದೆ ಇದು ಹೇಳಿಕೆ ಮಾಡುತ್ತವೆ. ಅಂತಿಮವಾಗಿ ಬಲಪಂಥೀಯ ರಾಜಕಾರಣದ ಬತ್ತಳಿಕೆಯಲ್ಲಿ ಹತ್ಯಾರವಾಗಿ ಹೋಗಿ ನಿಲ್ಲುತ್ತದೆ.

- 4 -

ಮೇಲ್ಕಾಣಿಸಿದ ಮಿತಿಗಳನ್ನು ದಾಟುವಂಥ ಅಧ್ಯಯನ ಹಾದಿಗಳನ್ನು ವಿವಿಧ ಜ್ಞಾನಶಿಸ್ತುಗಳಿಗೆ ಸೇರಿದ ಸಂಶೋಧಕರು ಸೋಸುವ ಅಗತ್ಯವಿದೆ. ಈ ದಿಸೆಯಲ್ಲಿ ಇರುವ ಕೆಲವು ಸಾಧ್ಯತೆಗಳನ್ನು ಹೀಗೆ ಮಂಡಿಸಬಹುದು:

1. 'ಭಕ್ತಿ'/ಅನುಭಾವಿ ಪಂಥಗಳ ಅಧ್ಯಯನಗಳು ಸೃಷ್ಟಿಕೊಂಡಿರುವ ಕೆಲವು ಸೀಮಿತಾರ್ಥವುಳ್ಳ ಪರಿಕಲ್ಪನೆಗಳನ್ನು ಕೈಬಿಡುವುದು. ಉದಾಹರಣೆಗೆ 'ಸ್ವರವಚನಕಾರರು' 'ತತ್ವಪದಕಾರರು' 'ಶಿವದಾಸರು' ಇತ್ಯಾದಿ ಪರಿಕಲ್ಪನೆಗಳು. ಇವು 'ವಚನಕಾರರು' 'ಕೀರ್ತನಕಾರರು' ಮಾದರಿಯಲ್ಲಿಯೇ ಸಂಗೀತ, ಸಾಹಿತ್ಯ ಮತ್ತು ಮತ ಕೇಂದ್ರಿತವಾಗಿ ಸೃಷ್ಟಿಯಾಗಿರುವಂಥವು. ಶರಣರು – ಆರೂಢರು – ಅವಧೂತರು ತಮ್ಮನ್ನು ವಚನಕಾರರು

ತತ್ವಪದಕಾರರು ಶಿವಯೋಗಿಗಳು ಎಂದು ಎಲ್ಲೂ ಕರೆದುಕೊಂಡಿಲ್ಲ. ಈ ಪರಿಭಾಷೆಯಿಂದ ಸಾಹಿತ್ಯ ರಚನೆ ಮಾಡಿದವರನ್ನು ಮಾತ್ರ ಸಂತರು ಎಂದು ಪರಿಗಣಿಸುವಂತಾಗಿ, ಇದು ಪಂಥಗಳ ಚರ್ಚೆಯನ್ನೇ ಸಂಕುಚಿತಗೊಳಿಸಿದೆ. ಯಾಕೆಂದರೆ, ಸಮುದಾಯಗಳ ಆಲೋಚನಕ್ರಮವನ್ನು ತಮ್ಮ ಕ್ರಿಯೆಗಳ ಮೂಲಕ ಪ್ರಭಾವಿಸಿದ ಸಂತರು ಈ ಪರಿಕಲ್ಪನೆಯೊಳಗೆ ಬರದೆ ಹೊರಗೆ ಉಳಿದುಬಿಡುವರು. ಹುಬ್ಬಳ್ಳಿಯ ಸಿದ್ಧಾರೂಢರು (1836–1929) ಶರೀಫರಂತೆ (1819–1889) ತತ್ವಪದ ಸಾಹಿತ್ಯ ರಚನೆ ಮಾಡಲಿಲ್ಲ. ಆದರೆ ತಮ್ಮ ಜೀವಿತ ಕಾಲದಲ್ಲಿ ತಮ್ಮ ಆಸುಪಾಸಿನ ಪರಿಸರದ ಮೇಲೆ ಶರೀಫರಿಗಿಂತಲೂ ಗಾಢವಾದ ಪ್ರಭಾವ ಬೀರಿದರು. ಕರ್ನಾಟಕಕ್ಕೆ ಹಿಂದೂಸ್ತಾನಿ ಸಂಗೀತ ತರುವಲ್ಲಿ ಅವರ ಪಾತ್ರವಿದೆ. ಸಾಮಾಜಿಕ ಸುಧಾರಣೆಯ ಹರಿಕಾರರಾಗಿದ್ದ ಕೊಲ್ಲಾಪುರದ ಶಾಹು ಮಹಾರಾಜರು (1874–1922) ಸಿದ್ಧಾರೂಢರೊಡನೆ ಒಡನಾಟ ಇರಿಸಿಕೊಂಡಿದ್ದರು. ಅವರದು ಬಹುಮುಖಿಯಾದ ವ್ಯಕ್ತಿತ್ವ. ಈ ಹಿನ್ನೆಲೆಯಲ್ಲಿ ದರ್ಶನ ಮತ್ತು ಪಂಥಗಳ ಅಧ್ಯಯನಗಳನ್ನು ಶುದ್ಧ ಸಾಹಿತ್ಯಕ ಚೌಕಟ್ಟಿನಿಂದ ಹೊರತರುವ ಸರಳ ಉಪಾಯವೆಂದರೆ, ಆರೂಢರು, ಸೂಫಿಗಳು, ಅವಧೂತರು, ನಾಥರು, ಶರಣರು–ಎಂಬ ಪರಿಭಾಷೆಗಳನ್ನು ಬಳಸುವುದು. ಇವು ಸಂತರು ರಚಿಸಿರಬಹುದಾದ ಸಾಹಿತ್ಯವನ್ನು ಮಾತ್ರವಲ್ಲದೆ, ಅವರ ದರ್ಶನವನ್ನೂ ಆಕ್ಟಿವಿಸಮನ್ನೂ ಒಳಗೊಳ್ಳುತ್ತವೆ; ಗುರುಪಂಥಗಳಿಗಿರುವ ಸಾಮಾಜಿಕ ರಾಜಕೀಯ ಆರ್ಥಿಕ ಆಯಾಮಗಳನ್ನು ಚರ್ಚಿಸಲು ಇದರಿಂದ ಅನುವಾಗುತ್ತದೆ.

2. 'ಪ್ರಧಾನಧರ್ಮ' ಎನಿಸಿಕೊಂಡ ಇಸ್ಲಾಂ, ಹಿಂದೂ, ಜೈನ ಇತ್ಯಾದಿಗಳ ಭಿತ್ತಿಯಲ್ಲಿಟ್ಟು ಗುರುಪಂಥಗಳನ್ನು ಮತ್ತು ಅವುಗಳ ದರ್ಶನಗಳನ್ನು ನೋಡುವುದರಿಂದ ಹೊರಬರುವುದು. ಇದರಿಂದ ಈ ಗುರುಪಂಥಗಳ ಸ್ವಾಯತ್ತತೆಯನ್ನು ಗುರುತಿಸಿದಂತಾಗುತ್ತದೆ ಹಾಗೂ ಸಾಂಸ್ಥಿಕ ಧರ್ಮಗಳ ಜತೆ ಅವು ಹೊಂದಿರುವ ಸ್ನೇಹ ಮತ್ತು ಸಂಘರ್ಷಾತ್ಮಕ ಸಂಬಂಧವನ್ನು ಚರ್ಚಿಸಲು ಸಾಧ್ಯವಾಗುತ್ತದೆ. ಗುರುಪಂಥಗಳು ಮೂಲತಃ ದಾರ್ಶನಿಕ ಧಾರೆಗಳು. ಅವುಗಳಲ್ಲಿ ಖಚಿತವಾದ ಆಧ್ಯಾತ್ಮಿಕವಾದ ಹಾಗೂ ಸಾಮಾಜಿಕವಾದ ಒಂದು ಲೋಕದೃಷ್ಟಿಯಿದೆ. ಈ ಲೋಕದೃಷ್ಟಿಯ ಮೂಲಕವೇ ಅವು ಮನುಷ್ಯರಲ್ಲಿ ತರತಮ ಮಾಡುವ, ಮೂಲಭೂತವಾದ, ಪುರೋಹಿತಶಾಹಿ, ಸಾಂಸ್ಥಿಕ ಧರ್ಮಗಳ ಆಚರಣೆ, ಜಾತಿಕುಲಗಳ ಪರಿಕಲ್ಪನೆ, ವೇದಶಾಸ್ತ್ರ ಪುರಾಣದಂಥ ಪ್ರಮಾಣ ಗ್ರಂಥಗಳನ್ನು ನಿರಾಕರಿಸಿದವು. ಈ ನಿರಾಕರಣೆಯೇ ಅವು ಕೆಳಜಾತಿ ಕೆಳವರ್ಗಗಳ ಲೋಕದಲ್ಲಿ ಬೇರುಬಿಡಲು ಪ್ರೇರಕವಾಯಿತು. ಈ ಅರ್ಥದಲ್ಲಿ ಅವುಗಳದ್ದು– ಜೆ.ಪಿ. ಶೌದನ್ ಅವರು ಬಳಸಿದ ಪರಿಭಾಷೆಯ ಮೂಲಕ ಹೇಳುವುದಾದರೆ– **ಅನುಭಾವಿಗಳ ಕ್ರಾಂತಿ** (1991). ಈ ಅರ್ಥದಲ್ಲಿ ಗುರುಪಂಥಗಳು ಸೃಷ್ಟಿಸಿರುವ ಚಿಂತನೆಯನ್ನು 'ಅನುಭಾವಿಕ ವಿಚಾರವಾದ' (ಮಿಸ್ಟಿಕಲ್ ರ್‍ಯಾಶನಲಿಸಂ) ಎಂದೂ ಕರೆಯಬಹುದು. ತಮ್ಮ ಈ ಕ್ರಾಂತಿಕಾರಕ ನಿಲುವಿನ ಕಾರಣದಿಂದ ಸ್ಥಾಪಿತ ವ್ಯವಸ್ಥೆಯಿಂದ ಕಿರುಕುಳವನ್ನು ಅವೈದಿಕ ದರ್ಶನಗಳಾದ ಚಾರ್ವಾಕ, ಬೌದ್ಧ ಹಾಗೂ ಸೂಫಿಸಂ ಚರಿತ್ರೆಯಲ್ಲಿ ಎದುರಿಸಿದವು. ಅನೇಕ ಸಂತರು ಸ್ಥಾಪಿತ ಹಿತಾಸಕ್ತಿಗಳಿಂದ ಇನ್ನಿಲ್ಲದ ಕಷ್ಟಕೋಟಲೆ ಎದುರಿಸಿದರು. ತುಕಾರಾಮ, ಸೂಫಿ ಸರ್ಮದ್ ಮುಂತಾದವರು ತಲೆದಂಡ ತೆರಬೇಕಾಯಿತು. ವಿಧವೆಯ ಮಗನಾಗಿ ಕಡಕೋಳ ಮಡಿವಾಳಪ್ಪನೂ, ಅವನ ತಾಯಿ ಗಂಗಮ್ಮನೂ ಅನುಭವಿಸಿದ ವೇದನೆ, ಅವರಿಬ್ಬರ ಪದಗಳಲ್ಲಿ ವ್ಯಕ್ತವಾಗಿದೆ. ಈ ಬಗೆಯ ಸಂಘರ್ಷ–ಪ್ರತಿರೋಧಗಳು ಸಂತರಿಗೆ ನಡೆದುಕೊಳ್ಳುವ ಸಮುದಾಯಗಳ ಆಲೋಚನ ಕ್ರಮ ಮತ್ತು ಜೀವನ ವಿಧಾನಗಳನ್ನು ಹೇಗೆ ರೂಪಿಸಿದವು ಎಂಬುದನ್ನು ತಿಳಿಯುವ ಅಗತ್ಯವಿದೆ.

3. ಗುರುಪಂಥಗಳು ಏಕರೂಪಿಯಲ್ಲ, ಬಹುರೂಪಿಯೆಂದು ಭಾವಿಸುವುದು. ಸೂಫಿಗಳಲ್ಲಿ ಹಲವು ಶಾಖೆಗಳಿರುವಂತೆ, ಗುರುಪಂಥಗಳಲ್ಲೂ ಹಲವಾರು ಧಾರೆಗಳಿವೆ. ಇಲ್ಲಿ ವೇದಾಂತವಾದಿ ಅದ್ವೈತಿಗಳು, ಶೈವ ಸೋಹಂವಾದಿಗಳು, ಅದ್ವಯವಾದಿಗಳು, ವೇದಾಂತ ವಿರೋಧಿಗಳು, ಶಾಕ್ತರೂಢರು, ಶಿವಯೋಗಿಗಳು ಇದ್ದಾರೆ. ರಾಜಯೋಗಿಗಳು, ಹಠಯೋಗಿಗಳು, ಸಹಜಯೋಗಿಗಳು ಇದ್ದಾರೆ. ಹೀಗೆ ಯಾವುದೇ ಕ್ರಮಬದ್ಧ ದರ್ಶನಕ್ಕೆ ಒಗ್ಗದ ನಿರಂಕುಶಮತಿಗಳೂ ಉನ್ಮತ್ತರೂ ಆದ ಅವಧೂತರಿದ್ದಾರೆ. ಇವರೆಲ್ಲರ ನಡುವೆ ದಾರ್ಶನಿಕ ಭೇದಗಳಿದ್ದವು ಅವು ಕೆಲವೊಮ್ಮೆ ವಾಗ್ವಾದ ಮತ್ತು ಸಂಘರ್ಷಗಳಿಗೂ ಕಾರಣವಾದವು. 1950ರ ದಶಕದಲ್ಲಿ ಚಿತ್ರದುರ್ಗ ಸೀಮೆಯಲ್ಲಿ 'ಪಿಪೀಲಿಕಾ'ವಾದಿಗಳಿಗೂ 'ವಿಹಗ'ವಾದಿಗಳಿಗೂ ನಡೆದ ವಾಗ್ವಾದವು ಇದಕ್ಕೆ ನಿದರ್ಶನ (ಕಣಜನಹಳ್ಳಿ ನಾಗರಾಜ, 2004: 89–94). ಗುರುಪಂಥಗಳಲ್ಲಿರುವ ಈ ತಾತ್ವಿಕ ಬಹುತ್ವವನ್ನು, ಅವುಗಳ ನಡುವಣ ಸಂಘರ್ಷ ಮತ್ತು ಕೂಡಿಕೆಗಳನ್ನು ಹಿಡಿಯುವ ಅಗತ್ಯವಿದೆ.

4. ಗುರುಪಂಥದ ಸ್ಥಳೀಯತೆ ಮತ್ತು ಅಖಿಲಭಾರತೀಯತೆಯ ಹರಡಿಕೆಯ ಸ್ವರೂಪವನ್ನು ಪರಿಶೀಲಿಸುವುದು. ಕರ್ನಾಟಕದಲ್ಲಿ ನಿರ್ದಿಷ್ಟ ದಾರ್ಶನಿಕ ಧಾರೆಗಳು ನಿರ್ದಿಷ್ಟ ಪ್ರದೇಶದಲ್ಲಿ ಜನಪ್ರಿಯವಾಗಿವೆ. ದಲಿತರು ಪ್ರಮುಖವಾಗಿರುವ ಕೋಲಾರ ಸೀಮೆಯಲ್ಲಿ ಆಂಧ್ರದ ಅಚಲಿಗರ ಕಾರಣದಿಂದ ವೇದಾಂತ ಧಾರೆಗೆ ಬದಲಾಗಿ ಅದ್ವಯ ಧಾರೆಯಿದೆ. ಬಹುಶಃ ವಾರಕರಿ ಪಂಥದ ಕಾರಣದಿಂದಲೂ ಬ್ರಾಹ್ಮಣ ಸಂತರಿಂದಲೂ ಅಲ್ಲಿ ವೇದಾಂತಿಮಾರ್ಗವು ಹೆಚ್ಚಳಗೊಂಡಿರಬಹುದು. ಆರೂಢರಿಗೆ ಅಖಿಲ ಭಾರತ ನೆಲೆಯ ತಾತ್ವಿಕ ಪ್ರೇರಣೆ ಇದೆಯಾದರೂ, ಅವರು ಸ್ಥಳೀಕರಣದ ನೆಲೆಯಲ್ಲೇ ಮೂಡಿದವರು. ಬಹಳಷ್ಟು ಕಡೆ ಅವರ ಹೆಸರು ತಾಲ್ಲೂಕು ಗಡಿಯನ್ನೂ ದಾಟಿರುವುದಿಲ್ಲ. ಅಕ್ಷರಮಟ್ಟಿಗೆ ಅವರು ಸೀಮಿತವಾದ ವಲಯದಲ್ಲಿ ಜನರ ಆಲೋಚನ ಕ್ರಮವನ್ನು ಪ್ರಭಾವಿಸಿದವರು. ಸಂತರ ಪ್ರಭಾವದ ಇಂತಹ ಕಿರುವಲಯಗಳ ಮೂಲಕ ಕರ್ನಾಟಕದ ಪ್ರಾದೇಶಿಕತೆಯನ್ನು ಶೋಧಿಸುವ ಸಾಧ್ಯತೆಗಳಿವೆ. ಇಲ್ಲಿಯೇ ನಮೂದಿಸಬೇಕಾದ ಸಂಗತಿಯೆಂದರೆ, ಕರ್ನಾಟಕದ ಎಲ್ಲ ಕಡೆ ಇರುವ ಅನುಭಾವಿ ಪಂಥಗಳು, ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಇಲ್ಲ. ಈ ಗೈರುಹಾಜರಿಯ ಒಗಟನ್ನು ಬಿಡಿಸಬೇಕಿದೆ.

5. ಗುರುಪಂಥಗಳಲ್ಲಿ ಪರಸ್ಪರ ನಡೆದಿರುವ ದಾರ್ಶನಿಕ ಕೊಡುಕೊಳುವಿಕೆಯನ್ನು ಅಧ್ಯಯನ ಮಾಡುವುದು. ಕರ್ನಾಟಕದಲ್ಲಿ ಆರೂಢ ಪರಂಪರೆಯ ಮೇಲೆ ಆಂಧ್ರಮೂಲದ ಅಚಲ ಸಂಪ್ರದಾಯ, ಕರ್ನಾಟಕದ ಸೂಫಿ ಸಂಪ್ರದಾಯ, ಕಲ್ಯಾಣದ ಶರಣರ ಶರಣ ಸಂಪ್ರದಾಯ, ದಾಸಸಂಪ್ರದಾಯ, ವಾರಕರಿ ಸಂಪ್ರದಾಯಗಳ ಪ್ರಭಾವ ಮತ್ತು ಪ್ರೇರಣೆಗಳಿವೆ. ಬಿಜಾಪುರ–ಬೆಳಗಾವಿ ವಲಯಗಳಿಗೆ ಮರಾಠಿ ಮಹಾನುಭಾವ ಪರಂಪರೆಯ ಸಂಪರ್ಕವಿದ್ದರೆ, ಬಿಜಾಪುರ – ಗುಲಬರ್ಗ – ರಾಯಚೂರು ಸೀಮೆಯ ಸಂತರಿಗೆ ಸೂಫಿ ಪರಂಪರೆಯ ಒಡನಾಟವಿದೆ; ಕೋಲಾರ ಸೀಮೆಗೆ ತೆಲುಗಿನ ವೀರಬ್ರಹ್ಮ ಪರಂಪರೆಯ ಸಂಪರ್ಕವಿದೆ. ಸಾಲುಗುಂದಿಯ ಗುರುಪೀರಾರಲ್ಲಿ ಕಲ್ಯಾಣದ ಶರಣರ, ಬಗ್ದಾದಿನ ಮನ್ಸೂರ್ ಹಲ್ಲಾಜನ, ಕಾಶಿಯ ಕಬೀರನ ಹಾಗೂ ಸಮಕಾಲೀನರಾದ ಶಿಶುನಾಳರ ಪ್ರಭಾವಗಳನ್ನು ಒಟ್ಟಿಗೇ ನೋಡಬಹುದು. ಆದ್ದರಿಂದ ಗುರುಪಂಥಗಳ ಪರಂಪರೆಯು ಏಕಕಾಲಕ್ಕೆ ಜಾಗತಿಕವೂ ಹೌದು. ಪ್ರತಿ ಪ್ರದೇಶದ ವಿಶಿಷ್ಟ ಲಕ್ಷಣಗಳನ್ನು ಆವಾಹಿಸಿಕೊಂಡಿರುವ ಸ್ಥಳೀಯವೂ ಹೌದು. ಈ ಅಂತಾರಾಷ್ಟ್ರೀಯತೆ ಅಥವಾ ಅಖಿಲ ಭಾರತೀಯತೆಗಳ ಜತೆ ಸ್ಥಳೀಯತೆ ಮಾಡಿರುವ ಅನುಸಂಧಾನಗಳನ್ನು ಹಿಡಿಯಬೇಕಿದೆ.

6. ಗುರುಪಂಥಗಳ ವೈಚಾರಿಕತೆಯ ಸ್ವರೂಪವನ್ನು ವಿಶ್ಲೇಷಿಸುವುದು. ವರ್ತಮಾನದಲ್ಲಿ ನಾವು ಎದುರುಗೊಳ್ಳುತ್ತಿರುವ ಧಾರ್ಮಿಕ, ಸಾಮಾಜಿಕ ಕೇಡುಗಳನ್ನೇ ಬೇರೆರೂಪದಲ್ಲಿ ಆಧುನಿಕ ಪೂರ್ವಕಾಲದ ಸಂತರೂ ಮುಖಾಮುಖಿಗೊಂಡರು. ಆಧುನಿಕಪೂರ್ವ ಕಾಲಘಟ್ಟದ ಭಾರತದ ವೈಚಾರಿಕತೆಯನ್ನು ರೂಪಿಸುವಲ್ಲಿ ಬೌದ್ಧ, ಜೈನ, ಚಾರ್ವಾಕ, ಶರಣ, ತತ್ವಪದಕಾರ ಹಾಗೂ ಸೂಫಿಗಳ ಪಾಲಿದೆ. ಇದನ್ನು 'ಆಧ್ಯಾತ್ಮಿಕ ವಿಚಾರವಾದ', 'ಅನುಭಾವಿಕ ವಿಚಾರವಾದ' ಎನ್ನಬಹುದು. ದೇಶೀ ಸಂತರು, ಅನುಭಾವಿಕ/ಆಧ್ಯಾತ್ಮಿಕ ನೆಲೆಯಲ್ಲಿ ತಮ್ಮದೇ ಆದ ವೈಚಾರಿಕತೆ ಮತ್ತು ವಿಶ್ವಮಾನವ ತತ್ವವನ್ನು ಪ್ರತಿಪಾದಿಸಿದರು. ಇವರ ವಿಚಾರಗಳು ವೈಯಕ್ತಿಕ ನೆಲೆಯಲ್ಲಿ ಉಳಿಯದೆ ಆಯಾ ಪ್ರದೇಶದ ಸಮುದಾಯಗಳ ಪ್ರಜ್ಞೆಯ ಭಾಗವಾದವು. ತನ್ನ ತಾನರಿಯುವ ದರ್ಶನದ ಮೇಲೆ ನಿಂತಿರುವ ಈ ಗುರುಪಂಥಗಳಲ್ಲಿ ಅನೇಕ ಜಿಜ್ಞಾಸುಗಳು ಆಗಿಹೋದರು. ಈಗಲೂ ಬದುಕಿರುವ ಹಂಪಿಯ ಸದಾಶಿವಯೋಗಿ (1934–) ಅವರಿಗೆ ಪ್ರಸಿದ್ಧ ವಿಚಾರವಾದಿ ಅಬ್ರಾಹಂ ಕೂವೂರ್ (1898–1978) ಅವರ ಜತೆ ಸಂಬಂಧವಿತ್ತು. ಈ ಹಿನ್ನೆಲೆಯಲ್ಲಿ ಗುರುಪೀರಾ (1822–1896), ಕಡಕೋಳ ಮಡಿವಾಳಪ್ಪ (1755–1876), ಕೈವಾರ ನಾರೇಯಣ (1730–1840) ಮುಂತಾದವರ ಚಿಂತನೆಗಳ ಸ್ವರೂಪವನ್ನು, ಇವು ಸಮುದಾಯಗಳ ಮೇಲೆ ಬೀರಿದ ಪರಿಣಾಮಗಳನ್ನು ಅರಿಯಬೇಕಿದೆ.

7. ಗುರುಪಂಥಗಳ ಸಮಾಜೋ ಆರ್ಥಿಕ ಅಧ್ಯಯನ ಮಾಡುವುದು. ಜಾತಿ, ಧರ್ಮ, ವರ್ಗ, ಲಿಂಗ ಹಾಗೂ ವರ್ಗ ತರತಮಗಳು ಭಾರತೀಯ ಸಮಾಜವನ್ನು ತಲ್ಲಣಕ್ಕೆ ಈಡುಮಾಡಿದ–ಮಾಡುತ್ತಿರುವ ಸಾಮಾಜಿಕ ಸಮಸ್ಯೆಗಳೂ ಆಗಿವೆ. ಈ ಹಿನ್ನೆಲೆಯಲ್ಲಿ ಗುರುಪಂಥಗಳಲ್ಲಿ ಧಾರ್ಮಿಕ, ಸಾಮಾಜಿಕ, ಲಿಂಗಭೇದಗಳಿಗೆ ಹಾಗೂ ಆರ್ಥಿಕ ಅಸಮಾನತೆಗಳಿಗೆ ಪ್ರತಿರೋಧ, ನಿರ್ಲಿಪ್ತತೆ ಮತ್ತು ಕೆಲವೊಮ್ಮೆ ಸಮರ್ಥನೆ ಪ್ರತಿಕ್ರಿಯೆಗಳನ್ನು ನೋಡಬಹುದು. ಈ ಪಂಥಗಳಲ್ಲಿ ಗುರುಗಳಾಗಿ ಸಾಧಕರಾಗಿ ತತ್ವಪದಕಾರರಾಗಿ ಗಾಯಕರಾಗಿ ಮತ್ತು ಜನಪ್ರಿಯ ಆಚರಣೆಗಳಲ್ಲಿ ಕೇವಲ ಭಕ್ತರಾಗಿ ಇರುವವರಲ್ಲಿ ಹೆಚ್ಚಿನವರು, ಕೂಲಿಕಾರರು, ಸಣ್ಣ ವ್ಯಾಪಾರಿಗಳು, ಸಣ್ಣರೈತರು, ದರ್ಜಿಗಳು, ಚರ್ಮಕಾರರು, ನೇಕಾರರು; ಮುಸಲ್ಮಾನರಲ್ಲಿ ಹಿಂದುಳಿದ ಪಂಗಡಗಳಿಗೆ ಸೇರಿದ ಪಿಂಜಾರರು. ಗುರುಪಂಥಗಳಲ್ಲಿರುವ ಗುರು–ಶಿಷ್ಯರ ಜೋಡಿಗಳ ಸಾಮಾಜಿಕ ಹಿನ್ನೆಲೆ ನೋಡಿದರೆ, ಮುಸ್ಲಿಮರು ಮತ್ತು ದಲಿತರು ಗುರುವಾಗಿರುವ, ಬ್ರಾಹ್ಮಣ ಹಿನ್ನೆಲೆಯಿಂದ ಬಂದವರು ಅವರ ಶಿಷ್ಯರಾಗಿರುವ ನೂರಾರು ನಿದರ್ಶನಗಳಿವೆ.

ಇಲ್ಲಿಯೇ ಕೇಳಿಕೊಳ್ಳಬೇಕಾದ ಪ್ರಶ್ನೆಗಳೆಂದರೆ– ಯಾಕೆ ಕುಶಲಕರ್ಮಿಗಳು, ದೈಹಿಕ ಶ್ರಮಿಕರು, ಹಿಂದುಳಿದ ಪಂಗಡಕ್ಕೆ ಸೇರಿದ ಮುಸ್ಲಿಮರು, ಕೆಳಜಾತಿಯವರು ಗುರುಪಂಥಗಳಲ್ಲಿ ತಮ್ಮನ್ನು ಗುರುತಿಸಿಕೊಂಡರು? ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಕೊಡದ ವ್ಯವಸ್ಥೆಯ ಬಗೆಗಿನ ಅಸಮಾಧಾನವನ್ನು ಇವರು ಈ ಪಂಥಗಳ ಮೂಲಕ ಹೇಗೆ ಹೊರಹಾಕಿದರು? ಸಮಾಜದಲ್ಲಿ ತಮಗೆ ಆಗುವ ಅಪಮಾನ ಮುಜುಗರಗಳನ್ನು ನಿವಾರಿಸಿಕೊಳ್ಳುವ ಮತ್ತು ಆತ್ಮವಿಶ್ವಾಸ ಪಡೆದುಕೊಳ್ಳುವ ಭಾಗವಾಗಿ ಗುರುಪಂಥಗಳಲ್ಲಿ ಗುರುತಿಸಿಕೊಂಡರೇ? ಗುರುಪಂಥಗಳು ಸಾಮಾಜಿಕ ಮತ್ತು ಆಧ್ಯಾತ್ಮಿಕ (ಇಲ್ಲಿ ಇವು ಬೇರೆಯಾಗಿರುವುದಿಲ್ಲ) ಒಂದು ವಿಮೋಚನ ತತ್ವವಾಗಿ ಕೆಲಸ ಮಾಡಿವೆಯೇ? ಈ ವಿಮೋಚನ ತತ್ವವು ಆಧುನಿಕ ವೈಚಾರಿಕತೆ ಮತ್ತು ವಿಮೋಚನ ಚಳುವಳಿಗಳಿಗಿಂತ ಹೇಗೆ ಭಿನ್ನ? ಆಧುನಿಕ ವಿಮೋಚನ

ಚಳುವಳಿಗಳು ಈ ಪರಂಪರೆಯೊಂದಿಗೆ ಯಾವ ರೀತಿ ಅನುಸಂಧಾನ ಮಾಡಿದವು? ಗುರುಪಂಥಗಳ ಮೂಲಕ ಸಾಧ್ಯವಾದ ಕೆಳಜಾತಿ ಸಾಧಕರ ಮೇಲ್ಚಲನೆಯು ನೀಡಿದ ಬಿಡುಗಡೆ ಭಾವ ಮತ್ತು ಆತ್ಮಗೌರವಗಳು, ವ್ಯಕ್ತಿನೆಲೆಗೆ ಸೀಮಿತವಾದವೇ? ಸಾಧಕರ ಸಮುದಾಯಗಳಲ್ಲಿರುವ ಸಾಮಾಜಿಕ ತಾರತಮ್ಯವನ್ನು ನಿವಾರಿಸಿದವೇ? ಸಾಮಾಜಿಕ ಸಮಾನತೆಗಾಗಿ ನಡೆದ ಚಳವಳಿಗಳ ವಿಫಲತೆಯಿಂದ ಕಂಗೆಟ್ಟಿರುವರು, ಆಧ್ಯಾತ್ಮಿಕ-ಅನುಭಾವಿಕ ಪಂಥಗಳಲ್ಲಿ ಸಾಮಾಜಿಕ ಸಮಾನತೆಯ ಆಶಯಗಳನ್ನು; ಸಾಮಾಜಿಕ ಚಳವಳಿಗಳಿಗೆ ಬೇಕಾದ ದೇಶೀಯ ಪರಂಪರೆಯನ್ನು ಹುಡುಕುತ್ತಿದ್ದಾರೆಯೇ? ಈ ಪ್ರಶ್ನೆಗಳ ಮೂಲಕ ಹೊರಟರೆ ಗುರುಪಂಥಗಳ ಅಧ್ಯಯನವು ಸಾಮಾಜಿಕ ಆರ್ಥಿಕ ರಾಜಕೀಯದ ಮೂರೂ ಆಯಾಮಗಳನ್ನು ಒಳಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಆರೂಢ ಪಂಥದಲ್ಲಿ ತೊಡಗಿಕೊಂಡಿರುವ ವರ್ಗ ಮತ್ತು ಸಮುದಾಯಗಳ ಭಾಗವಹಿಸುವಿಕೆಯ ಸ್ವರೂಪವನ್ನು ವಿಶ್ಲೇಷಣೆ ಮಾಡಬಹುದು. ಆಗ ಗುರುಪಂಥಗಳನ್ನು ಅವುಗಳ ಫಿಲಾಸಫಿ, ಸಾಹಿತ್ಯ, ಸಂಗೀತ ಮತ್ತು ಆಚರಣ ಲೋಕವನ್ನು ಕರ್ನಾಟಕದ ಸಾಮಾಜಿಕ-ಆರ್ಥಿಕ-ರಾಜಕಾರಣಗಳ ಚೌಕಟ್ಟಿನಲ್ಲಿಟ್ಟು ಚರ್ಚಿಸುವ ಹಾದಿ ಮೂಡಬಹುದು.

8. ಕರ್ನಾಟಕದ ಗುರುಪಂಥಗಳಲ್ಲಿ ಬಿದನೂರ ಗಂಗಮ್ಮ, ಜತ್ತದ ಶಿವಲಿಂಗವ್ವ ಮುಂತಾದ ತತ್ವಪದಕಾರರು ಇದ್ದಾರೆ; ತತ್ವಪದಕಾರರಲ್ಲದ ಯೋಗಿನಿಯರೂ ಇದ್ದಾರೆ. ಗುರುಪಂಥಗಳು ಎಷ್ಟೇ ಸಾಮಾಜಿಕ ತಾರತಮ್ಯವನ್ನು ಕುರಿತು ಚಿಂತಿಸಿದರೂ, ಅಲ್ಲಿ ಮಹಿಳಾ ಸಾಧಕಿಯರ ಪ್ರಮಾಣ ಕಡಿಮೆ. ಇದಕ್ಕೆ ಪೂರಕವಾಗಿ ಸ್ತ್ರೀಯನ್ನು ಮಾಯೆಯೆಂದೂ ಪುರುಷ ಸಾಧಕರ ಹಾದಿಯ ಮುಳ್ಳುಗಳೆಂದು ಪ್ರತಿಪಾದಿಸುವ ಸಂತರೂ ಕೆಲವರಿದ್ದಾರೆ.[2] ಜಾತಿವಿನಾಶ ವೈದಿಕವಿರೋಧಿ ಕೋಮುಸಾಮರಸ್ಯವಾದಿ ವಿಚಾರವಾದಿ ಚಿಂತನೆಗಳು ಆರೂಢರನ್ನು ಗಂಭೀರವಾಗಿ ಪರಿಗಣಿಸುವಂತೆ, ಮಹಿಳಾ ವಿಮೋಚನ ಚಳವಳಿಗಳು ಯಾಕೆ ಪರಿಗಣಿಸಲಿಲ್ಲ? ಈ ಪ್ರಶ್ನೆಯ ಹಿನ್ನೆಲೆಯಲ್ಲಿ ಗುರುಪಂಥಗಳಲ್ಲಿರುವ ಸ್ತ್ರೀಪರ ಮತ್ತು ಪುರುಷವಾದಿ ಅಂಶಗಳನ್ನು ವಿಮರ್ಶೆಗೆ ಒಡ್ಡಬೇಕಿದೆ.

– 5 –

ಈಚೆಗೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಆರೂಢ-ಅವಧೂತರ ಅಧ್ಯಯನಗಳು ಜರುಗಿವೆ. ಆದರೆ ಹೆಚ್ಚಿನವು ಪಿಎಚ್.ಡಿ., ಪದವಿಗೆ ಬೇಕಾದ ತುರ್ತುಳ್ಳ, ಮಾಹಿತಿ ಪ್ರಧಾನ ಅಧ್ಯಯನಗಳು. ಅವು ತಂದು ಸೇರಿಸಿರುವ ಮಾಹಿತಿಯು ಅಮೂಲ್ಯವಾಗಿದೆ. ಈಗ ಚರಿತ್ರೆ, ಸಂಸ್ಕೃತಿ, ರಾಜಕಾರಣದ ಅಧ್ಯಯನಗಳಲ್ಲಿ ತೊಡಗಿರುವ ಸಂಶೋಧಕರು ಇತ್ತ ಗಮನ ಹರಿಸಲು ತಕ್ಕ ಸನ್ನಿವೇಶ ನಿರ್ಮಾಣವಾಗಿದೆ. ಗುರುಪಂಥಗಳ ಮೇಲೆ ಮಾನವಿಕದವರಿಗಿಂತ ಭಿನ್ನವಾದ ಶೋಧವನ್ನು ಸಮಾಜಶಾಸ್ತ್ರಗಳು ಮಾಡುವ ಸಾಧ್ಯತೆಯಿದೆ ಎಂದು ಲೇಖನ ಮೊದಲಿಗೆ ಹೇಳಲಾಯಿತು. ಆದರೆ ಅಧ್ಯಯನಗಳಲ್ಲಿ ಹೀಗೆ ಮಾನವಿಕ-ಸಮಾಜವಿಜ್ಞಾನ ಎಂಬ ಕೃತಕ ವಿಭಜನೆ ಕೂಡ ಉಚಿತವಲ್ಲ. ಕರ್ನಾಟಕ ಚರಿತ್ರೆ ದರ್ಶನ ಸಂಸ್ಕೃತಿ ಸಮಾಜ ಭಾಷೆಯ ಅಧ್ಯಯನಗಳಲ್ಲಿ ಮುಖ್ಯ ಕ್ಷೇತ್ರವಾಗಿರುವ ಗುರುಪಂಥಗಳ ಲೋಕವನ್ನು ವಿದ್ವಾಂಸರು ಒಂದು ಸಂಶೋಧನ ಸಮುದಾಯವಾಗಿ, ತಮ್ಮತಮ್ಮ ಶಾಸ್ತ್ರಗಳ ಸೀಮೋಲ್ಲಂಘನೆ ಮಾಡಿ, ಬಹುಶಿಸ್ತೀಯ ವಿಧಾನಗಳಲ್ಲಿ ಶೋಧಿಸುವ ಮಾರ್ಗಗಳನ್ನು ತೆರೆಯುವ ಜರೂರಿಯಿದೆ.

ಕೊನೆ ಟಿಪ್ಪಣಿಗಳು

1. ಮುಖ್ಯವಾಗಿ ನಟರಾಜ ಬೂದಾಳು, ಪದ್ಮಾಲಯ ನಾಗರಾಜ್, ಲಕ್ಷ್ಮೀಪತಿ ಕೋಲಾರ ಹಾಗೂ ಮೀನಾಕ್ಷಿ ಬಾಳಿ ಅವರ ಅಧ್ಯಯನಗಳು.
2. 18–19ನೇ ಶತಮಾನದಲ್ಲಿದ್ದು ಕೈವಲ್ಯ ಸಾಹಿತ್ಯ ರಚಿಸಿದ, ವಿರಕ್ತವಾದಿಗಳೂ ಮಠಸ್ಥ ಯೋಗಿಗಳೂ ಆದವರಲ್ಲಿ ಈ ನಿಲುಮೆ ಹೆಚ್ಚು ಢಾಳಾಗಿ ಪ್ರಕಟವಾಗುತ್ತದೆ. ಉದಾಹರಣೆಗೆ ಸರ್ಪಭೂಷಣ ಸ್ವಾಮಿ (1795–1839) ಹಾಗೂ ಸಂತೆಕಲ್ಲೂರಿನ ಘನಮಠದ ಶಿವಯೋಗಿ (1830–1900) ಅವರ ರಚನೆಗಳನ್ನು ನೋಡಬಹುದು.

ಆಕರಸೂಚಿ

1. ಕಣಜನಹಳ್ಳಿ ನಾಗರಾಜ. 2004. **ಚಿತ್ರದುರ್ಗ ಜಿಲ್ಲೆಯ ಅಜ್ಞಾತ ಅವಧೂತರು**. ಬೆಂಗಳೂರು: ಸಿವಿಜಿ ಪ್ರಕಾಶನ.
2. ಕಾಳೇಗೌಡ ನಾಗವಾರ ಮತ್ತು ಜಿ.ವಿ.ಆನಂದಮೂರ್ತಿ(ಸಂ). 2000. **ಹಲವು ತೋಟದ ಹೂಗಳು (ಆಯ್ದ ತತ್ವಪದಗಳು)**. ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
3. ಗುರುಖಾದರಿ ಪೀರಾ. 2000. **ಜ್ಞಾನಸಮುದ್ರ**. ಬಳ್ಳಾರಿ: ರಾಷ್ಟ್ರೀಯ ಮಾನವತಾ ಸೂಫೀ ಶರಣರ ಸಂಘ.
4. ನರಸಿಂಹಾಚಾರ್ ಆರ್. 1973 (1919). **ಕರ್ಣಾಟಕ ಕವಿ ಚರಿತೆ, ಸಂಪುಟ –2**. ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
5. ನಾಗಭೂಷಣ ಶಾಸ್ತ್ರಿ, ಶಾಸ್ತ್ರೀಮಠ(ಸಂ). 1985. **ಕೈವಲ್ಯಪದ್ಧತಿ**. ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
6. ನಾಗಭೂಷಣಸ್ವಾಮಿ ಓ.ಎಲ್., ಲಿಂಗರಾಜು ಎಸ್., ಶಿವಣ್ಣ, ವೀರಣ್ಣ ದಂಡೆ, ನಟರಾಜ ಬೂದಾಳು (ಸಂ). 2000. **ತತ್ವಪದಗಳು**. ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
7. ಪದ್ಮಾಲಯ ನಾಗರಾಜ್. 2008. **ನಡೆಕಾರ ದೊಡ್ಡಿ ವೆಂಕಟಗಿರಿಯಪ್ಪ ಮತ್ತು ಅವರ ಆಧ್ಯಾತ್ಮಿಕ ಪರಂಪರೆ**. ಕೋಲಾರ: ಆದಿಮ ಪ್ರಕಾಶನ.
8. ಪದ್ಮಾಲಯ ನಾಗರಾಜ್. 2018. **ಅಚಲ ಗುರುಮಾರ್ಗ: ಮರೆತದಾರಿಗಳ ಅಧ್ಯಯನ,** ಕೋಲಾರ ಆದಿಮ ಪ್ರಕಾಶನ.
9. ಪ್ರಭು ಖಾನಾಪುರೆ(ಸಂ.). 1998. **ಮುಸ್ಲಿಂ ತತ್ವಪದಕಾರರು**. ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
10. ಬೆಳಗೆರೆ ಕೃಷ್ಣಶಾಸ್ತ್ರೀ 1991. **ಯೇಗ್ದಾಗೆಲ್ಲಾ ಐತೆ** (ಮುಕಂದೂರು ಸ್ವಾಮಿಗಳ ಜೀವನ ಚರಿತ್ರೆ), ಬೆಂಗಳೂರು: ಅಭಿನವ.
11. ಮಲ್ಲಿಕಾರ್ಜುನ ಲಠ್ಠೆ (ಸಂ.) 1982. **ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು**. ಗದಗ: ಶ್ರೀ ತೋಂಟದಾರ್ಯ ಮಠ.
12. ಮಲ್ಲಿಕಾರ್ಜುನ ಸಿಂದಗಿ. 2006. **ಶ್ರೀ ಶಿಶುನಾಳ ಶರೀಫ ಸಾಹೇಬರ ಜೀವನ ಲೀಲಾಮೃತ,** ಹುಬ್ಬಳ್ಳಿ: ಸಿದ್ಧಾರೂಢ ಪ್ರಕಾಶನ.
13. ರಘುನಾಥರಾವ್ ಡಿ. 2008. **ತತ್ವಪದಕಾರರು ಮತ್ತು ವಸಾಹತುಶಾಹಿ ವ್ಯವಸ್ಥೆ: ಒಂದು ಅಧ್ಯಯನ,** ಬೆಂಗಳೂರು ನವಕರ್ನಾಟಕ.
14. ರಾನಡೆ ಆರ್.ಡಿ. (ಅನು.) ದೇಶಪಾಂಡೆ ಎಂ.ಎಸ್. 1976. **ಕನ್ನಡ ಸಂತರ ಪರಮಾರ್ಥ ಪಥ**. ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
15. ಲಿಂಗರಾಜು (ಸಂ.). 2005. **ಗುರುಕೊಟ್ಟ ಕಾಮಧೇನು (ತತ್ವಾನುಭವ ಪದಗಳು)**. ಬೆಂಗಳೂರು: ಸಿವಿಜಿ ಪ್ರಕಾಶನ.
16. ವಿವಿಧ ಲೇಖಕರು. 1993. **ತತ್ವಪದಕಾರರು**. ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

17. ಶೌದನ್ ಜಾನ್ ಪೀಟರ್. 1995(1991). **ರೆವ್ಯಲೂಶನ್ ಆಫ್ ಮಿಸ್ಟಿಕ್ಸ್**. ಮೋತಿಲಾಲ್ ಬನಾರಸಿದಾಸ್.
18. ಸದಾಶಿವಯೋಗಿ. 2006(1970) **ಭಾರತೀಯರಿಗೆ ಭಗವಂತರೆಷ್ಟು**? ಬೆಂಗಳೂರು: ನವಕರ್ನಾಟಕ.
19. ಮೀನಾಕ್ಷಿ ಬಾಳಿ. 2004. **ತನ್ನ ತಾನು ತಿಳಿದ ಮೇಲೆ**. ಕಡಕೋಳ: ವೀರೇಶ್ವರ ಪ್ರಕಾಶನ.
20. ಹರಿಶ್ಚಂದ್ರ ದಿಗ್ಸಂಗಿಕರ್. 2002. **ದಲಿತ ತತ್ವಪದಕಾರ ಜಂಬಗಿ ಶರಣ,** ಗುಲಬರ್ಗಾ: ಅಭಯ ಪ್ರಕಾಶನ.

ಲೇಖನಗಳು

1. ನಟರಾಜ ಬೂದಾಳು. 2017. 'ಪ್ರಸ್ತಾವನೆ'. **ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ**. ಬೆಂಗಳೂರು: ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ.
2. ರಹಮತ್ ತರೀಕೆರೆ. 2006. 'ಮುಸ್ಲಿಂ ತತ್ವಪದಕಾರರು: ಹೀಗೆನ್ನುವುದು ಯಾಕೆ ಕಷ್ಟ?'. **ಕತ್ತಿಯಂಚಿನ ದಾರಿ**. ಬೆಂಗಳೂರು: ಅಭಿನವ ಪ್ರಕಾಶನ.
3. ಲಕ್ಷ್ಮೀಪತಿ ಕೋಲಾರ. 2001. 'ವಸಾಹತುಶಾಹಿ ಹಿನ್ನೆಲೆಯಲ್ಲಿ ತತ್ವಪದಕಾರರ ರಚನೆಗಳು'. **ಕಾಲುದಾರಿ**. ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್.
4. ಶಿವಪ್ರಕಾಶ್ ಎಚ್.ಎಸ್. 1995. 'ಎಲ್ಲ ಜಾತಿಯ ಮರಗಳ ಕಾಡು: ತತ್ವಪದಕಾರರು'. **ಮೊದಲ ಕಟ್ಟಿನ ಗದ್ಯ**. ಬೆಂಗಳೂರು: ಅಭಿನವ ಪ್ರಕಾಶನ.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: Rajaram Hegde
Title: bhakti sāhitya arthamāḍikoḷḷuva niṭṭinalli…

ಭಕ್ತಿ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ.....

ರಾಜಾರಾಮ ಹೆಗಡೆ
ಪ್ರಾಧ್ಯಾಪಕರು
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ
rajaramainakai@gmail.com

ಭಾರತೀಯ ವಿದ್ಯಾವಂತರಲ್ಲಿ ಭಕ್ತಿ ಚಳವಳಿ ಎಂಬ ನುಡಿಗಟ್ಟು ಆಳವಾಗಿ ಬೇರೂರಿದೆ. ಇದು ಕೇವಲ ಸಂಶೋಧಕರ ಆಸಕ್ತಿಯಾಗಷ್ಟೇ ಉಳಿದಿಲ್ಲ, ರಾಜಕಾರಣಿಗಳನ್ನು ಮೊದಲುಗೊಂಡು, ಪ್ರಗತಿಪರ ಚಳವಳಿಕಾರರನ್ನು ಹಿಡಿದು ಸಂಪ್ರದಾಯವಾದಿಗಳು ಹಾಗೂ ಮಠಾಧೀಶರ ವರೆಗೆ ಅಂಥ ಆಸಕ್ತರ ಜಗತ್ತು ವ್ಯಾಪಿಸಿಕೊಂಡಿದೆ. ನಮ್ಮ ಗತಕಾಲದ ಸಂಗತಿಗಳಲ್ಲಿ ತುಂಬಾ ಜತನವಾಗಿ ರಕ್ಷಿಸಿಕೊಳ್ಳಬೇಕಾದ ಸತ್ಯವಿದೆಂಬುದಾಗಿ ಈ ಎಲ್ಲರೂ ಬೇರೆ ಬೇರೆ ಕಾರಣಗಳಿಗಾಗಿ ಭಾವಿಸಿಕೊಂಡಿದ್ದಾರೆ. ನಮ್ಮ ಸ್ಕೂಲು ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಭಕ್ತಿ ಚಳವಳಿಯೊಂದು ಕಡ್ಡಾಯವಾಗಿ ಕಾಣಿಸಿಕೊಳ್ಳುವ ಪಾಠವಾಗಿದೆ. ಭಕ್ತಿಚಳವಳಿಯ ಪಾಠಗಳು ನಮಗೆ ತಿಳಿಸುವಂತೆ ಅದರೊಳಗೆ ಈ ಮುಂದಿನ ಅಂಶಗಳು ಮಹತ್ವ ಪಡೆದಿದ್ದವು: 1. ಮಧ್ಯಕಾಲದಲ್ಲಿ, ಅಂದರೆ 12ನೆಯ ಶತಮಾನದ ನಂತರದ ಭಾರತದಲ್ಲಿ ಅನೇಕ ದೇವತೆಗಳಿಗೆ ಸಂಬಂಧಿಸಿದ ಪಂಥಗಳು ಭಕ್ತಿ ಚಳವಳಿಯ ಹೊಸ ಆಯಾಮವನ್ನು ಧರಿಸಿ ಜನಪ್ರಿಯತೆಯನ್ನು ಗಳಿಸಿದವು. 2. ಅವು ಮೂಲತಃ ಸಾಮಾಜಿಕ ಹಾಗೂ ರಿಲಿಜನ್ನಿಗೆ ಸಂಬಂಧಿಸಿದ ಸುಧಾರಣಾ ಚಳವಳಿಗಳಾಗಿದ್ದು ಅವು ಹಿಂದೂ ಸಮಾಜದೊಳಗೆ ರೂಢವಾಗಿದ್ದ ಅನೇಕ ದೋಷಗಳನ್ನು ತೊಡೆಯುವ ಉದ್ದೇಶವನ್ನು ಹೊಂದಿದ್ದವು. ಹಿಂದೂ ಸಮಾಜದ ಬ್ರಾಹ್ಮಣ

ಪುರೋಹಿತಶಾಹಿ, ವರ್ಣ ವ್ಯವಸ್ಥೆ, ಲಿಂಗ ತಾರತಮ್ಯ, ಸಂಸ್ಕೃತ ಭಾಷೆ, ಹಾಗೂ ಇಂಥವೇ ಇನ್ನೂ ಅನೇಕ ತಾರತಮ್ಯಗಳು ಇಂಥ ದೋಷಗಳೆಂದು ತಿಳಿಸಲಾಗುತ್ತದೆ. ವೈದಿಕ ಬ್ರಾಹ್ಮಣ ರಿಲಿಜನ್ನು ಇವೆಲ್ಲ ದೋಷಗಳಿಗೆ ಮೂಲವಾಗಿದ್ದು ಆ ರಿಲಿಜನ್ನಿನ ವಿರುದ್ಧ ಬಂಡಾಯಗಳೇ ಈ ಚಳವಳಿಯಾಗಿದೆ. ಈ ಗ್ರಹಿಕೆಗಳು ಪಠ್ಯ ಪುಸ್ತಕ ಹಾಗೂ ಸಂಶೋಧನಾ ಬರೆಹಗಳ ತಳಹದಿಗಳಾಗಿವೆ.

ಈ ಮೇಲಿನ ಗ್ರಹಿಕೆಗಳಿಗೆ ಆಧಾರವಾಗಿ ಆ ಕಾಲದಲ್ಲಿ ಇಂಥ ಪಂಥಗಳು ರಚಿಸಿದ ಸಾಹಿತ್ಯವನ್ನು ಉದಾಹರಿಸಲಾಗುತ್ತದೆ. ಇದಕ್ಕೆ ಸಮರ್ಥನೆಯಾಗಿ ಭಕ್ತಿಸಾಹಿತ್ಯದಲ್ಲಿ ಈ ಮುಂದಿನ ಅಂಶಗಳನ್ನು ಸೂಚಿಸಲಾಗುತ್ತದೆ: 1. ಬ್ರಾಹ್ಮಣರ ಟೀಕೆ. 2.ಸಂಸ್ಕೃತ ಗ್ರಂಥಗಳ ಟೀಕೆ. 3. ವೈದಿಕ ವಿಧಿವಿಧಾನಗಳ ಟೀಕೆ. 4. ಸಮಾಜದಲ್ಲಿರುವ ಜಾತಿ, ಲಿಂಗ ತಾರತಮ್ಯದ ಕುರಿತ ಟೀಕೆಗಳು. 5. ಭಕ್ತಿ ಸಾಹಿತ್ಯವನ್ನು ಪ್ರಾದೇಶಿಕ ಭಾಷೆಗಳಲ್ಲಿ ರಚಿಸಿರುವುದು. 6. ಭಕ್ತಿ ಪಂಥಗಳ ಸಂತರಲ್ಲಿ ಕೆಳಜಾತಿ ಹಾಗೂ ಸ್ತ್ರೀಯರ ಚರಿತ್ರೆಗಳಲ್ಲಿ ಅವರ ಮೇಲೆ ನಡೆದಿರುವ ತಾರತಮ್ಯ ಹಾಗೂ ದಮನಗಳ ಕಥೆಗಳು.

–1–

ನಾಣ್ಯದ ಮತ್ತೊಂದು ಮುಖ

ಭಕ್ತಿ ಸಾಹಿತ್ಯದಲ್ಲಿ ಇವಷ್ಟೇ ಇದ್ದಿದ್ದರೆ ಸಮಸ್ಯೆಯಿರಲಿಲ್ಲ. ಆದರೆ ಅವನ್ನು ಗಂಭೀರವಾಗಿ ಓದುವವರಿಗೆ ಅದರ ವಿವರಗಳನ್ನು ಈ ಮೇಲಿನ ರೀತಿಯಲ್ಲಿ ನಿರೂಪಿಸುವುದರಲ್ಲಿನ ಸಮಸ್ಯೆಗಳೂ ಕೂಡಾ ಗಮನಕ್ಕೆ ಬರದೇ ಇರಲಾರವು. ಭಕ್ತಿ ಅಧ್ಯಯನಗಳಲ್ಲಿ ತೊಡಗಿಸಿಕೊಂಡವರು ಇಂಥ ಸಮಸ್ಯೆಗಳನ್ನು ಎತ್ತಿ ತೋರಿಸುತ್ತಾರೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಕೆಳಗೆ ಚರ್ಚಿಸಲಾಗಿದೆ:

1.ಅ. ಪ್ರತ್ಯಕ್ಷಾಧಾರಗಳ ಕೊರತೆ

ಸಾಮಾಜಿಕ ಹಾಗೂ ರಿಲಿಜನ್ನಿನ ಸುಧಾರಣೆಯನ್ನು ಉದ್ದೇಶದಲ್ಲಿಟ್ಟುಕೊಂಡೇ ಭಕ್ತಿ ಸಾಹಿತ್ಯವನ್ನು ರಚಿಸಿದ ಪಕ್ಷದಲ್ಲಿ ಆ ಸಂದೇಶವು ಸ್ಪಷ್ಟವಾಗಿ ಹಾಗೂ ಸತತವಾಗಿ ಅವುಗಳಲ್ಲಿ ಬರಬೇಕಿತ್ತು. ಏಕೆಂದರೆ ಜನಜಾಗೃತಿಯನ್ನು ಮಾಡುವವರು ಆದಷ್ಟೂ ಸರಳವಾಗಿ ಹಾಗು ಸ್ಪಷ್ಟವಾಗಿ ಜನಸಾಮಾನ್ಯರಿಗೆ ತಲುಪುವಂತೆ ಬರೆಯುತ್ತಿದ್ದರೆನ್ನುವುದು ಸಕಾರಣವಾದ ನಿರೀಕ್ಷೆಯಾಗಿದೆ. ಅಂದರೆ ಈ ಮುಂದಿನ ಅಂಶಗಳು ಅವುಗಳಲ್ಲಿರಬೇಕು: 1. ಅದಕ್ಕೆ ಪೂರಕವಾದ ಹೇಳಿಕೆಗಳು ಎಲ್ಲಾ ಕೃತಿಗಳಲ್ಲಿಯೂ, ಅಥವಾ ಬಹು ಸಂಖ್ಯೆಯ ಕೃತಿಗಳಲ್ಲಿ ಕಾಣಿಸಬೇಕು. ಅಂದರೆ ಅವು ತಮ್ಮ ಟೀಕೆಯಲ್ಲಿ ಬ್ರಾಹ್ಮಣರು, ವರ್ಣವ್ಯವಸ್ಥೆ, ಸಂಸ್ಕೃತ ಗ್ರಂಥಗಳು ಇತ್ಯಾದಿಗಳ ಕುರಿತು ವಿರೋಧಾಭಿಪ್ರಾಯವನ್ನು ಮಾತ್ರ ಗಟ್ಟಿಗೊಳಿಸಬೇಕು. 2. ಅದಕ್ಕೆ ವಿರುದ್ಧ ಅಭಿಪ್ರಾಯಗಳು ಒಂದು ಉದಾಹರಣೆಯಲ್ಲೂ ಕಾಣಿಸಬಾರದು.

ಆದರೆ ನಮ್ಮ ಈ ನಿರೀಕ್ಷೆಯನ್ನು ಈ ಸಾಹಿತ್ಯವು ತೃಪ್ತಿಪಡಿಸುವುದಿಲ್ಲ. ಭಕ್ತಿ ಚಳವಳಿಯ ಕುರಿತು ಬರೆಯುವವರು ಭಕ್ತಿ ಸಾಹಿತ್ಯದಲ್ಲಿ ಒಂದೆರಡು ಕೃತಿಗಳನ್ನು ಅಥವಾ ಉದಾಹರಣೆಗಳನ್ನು ಉಲ್ಲೇಖಿಸುತ್ತ ತಮ್ಮ ವಾದವನ್ನು ಮಂಡಿಸುತ್ತಾರೆಯೇ ವಿನಃ ಉಳಿದ ಬಹುಸಂಖ್ಯೆಯ ಕೃತಿಗಳ ಕುರಿತು ಮಾತನಾಡುವುದಿಲ್ಲ. ಕೆಲವರ್ಷಗಳ ಹಿಂದೆ ವಚನ ಸಾಹಿತ್ಯದ ಕುರಿತು ಕನ್ನಡದಲ್ಲಿ ಉಗ್ರ ಚರ್ಚೆ ನಡೆಯಿತು. ವಚನಕಾರರನ್ನು ಜಾತಿ ವಿರೋಧಿ ಚಳವಳಿಕಾರರೆಂಬುದಾಗಿ ಪ್ರತಿಪಾದಿಸಲಾಗಿದೆ. ಆದರೆ ಬಾಲಗಂಗಾಧರ ಹಾಗೂ ಡಂಕಿನ್ ಝಳಕಿ ಅವರು ವಚನಗಳ ಕುರಿತು ನಡೆಸಿದ ಸಂಶೋಧನೆಯಲ್ಲಿ ಈ ಗ್ರಹಿಕೆಯನ್ನು

ಪ್ರಶ್ನಿಸಿದರು (ಜಳಕಿ ಮತ್ತು ಬಾಲಗಂಗಾಧರ, 2012; ಜಳಕಿ 2015). ಸುಮಾರು 21000 ಪ್ರಕಟಿತ ವಚನಗಳಲ್ಲಿ 72 ವಚನಗಳು ಮಾತ್ರವೇ ಬ್ರಾಹ್ಮಣರ ಹಾಗೂ ಜಾತಿಯ ಟೀಕೆಯನ್ನು ಮಾಡುತ್ತವೆ. ಈ ವಚನಗಳು ಕೂಡ ಸಮಾಜದಲ್ಲಿನ ಜಾತಿಯನ್ನು ನಿರ್ಮೂಲನ ಮಾಡುವ ಹೇಳಿಕೆಯನ್ನು ನೀಡುವುದಿಲ್ಲ. ಬದಲಾಗಿ ಅವು ಶಿವಶರಣರೊಳಗೆ ಜಾತಿಭೇದವನ್ನು ಟೀಕಿಸುತ್ತವೆ. ಇದಕ್ಕೂ ಹೆಚ್ಚಿನ ಸಂಖ್ಯೆಯ ವಚನಗಳು ಬ್ರಾಹ್ಮಣರ/ ಬ್ರಾಹ್ಮಣ ಪರಿಕಲ್ಪನೆಯ ಕುರಿತು ಒಳ್ಳೆಯ ಅಭಿಪ್ರಾಯವನ್ನು ನೀಡುತ್ತವೆ. ಇವುಗಳಿಗೆ ಹೊರತಾಗಿ ಉಳಿದ ಬಹುಪಾಲು ವಚನಗಳು ವೀರಶೈವರ ಆಧ್ಯಾತ್ಮಿಕ ಸಾಧನೆಯ ಕುರಿತು ತಿಳಿಸುತ್ತವೆ. ಆಶ್ಚರ್ಯವೆಂದರೆ ಈ 21000 ದಷ್ಟು ವಚನಗಳಲ್ಲಿ ಕೇವಲ ಹತ್ತು ಹನ್ನೆರಡು ವಚನಗಳನ್ನು ಮಾತ್ರ ಎಲ್ಲರೂ ಉಲ್ಲೇಖಿಸಿ ತಮ್ಮ ವಾದವನ್ನು ಮಂಡಿಸಿದ್ದಾರೆ.

1.ಆ– ವ್ಯತಿರಿಕ್ತ ಉದಾಹರಣೆಗಳು, ಹಾಗೂ ತಾತ್ಪೂರ್ತಿಕ ವಿವರಣೆಗಳು

ಸಾಕಷ್ಟು ವಚನಗಳಲ್ಲಿ ವೇದಗಳು ಹಾಗೂ ಬ್ರಾಹ್ಮಣರ ಕುರಿತು ಒಳ್ಳೆಯ ಅಭಿಪ್ರಾಯಗಳು ವ್ಯಕ್ತವಾಗಿರುವುದನ್ನು ಡಂಕಿನ್ ಅವರ ಸಂಶೋಧನೆಯಲ್ಲಿ ಉಲ್ಲೇಖಿಸಲಾಗಿದೆ. ಶೂದ್ರ ಜಾತಿಯ ಹಿನ್ನೆಲೆಯಿಂದ ಬಂದ ಕನಕ ದಾಸರ ಕುಲಕುಲಕುಲವೆಂದು.... ಕೀರ್ತನೆಯನ್ನು ಉಲ್ಲೇಖಿಸಿ ಅವರು ಬ್ರಾಹ್ಮಣ ಪುರೋಹಿತಶಾಹಿ ಹಾಗೂ ಜಾತಿನಿರ್ಮೂಲನೆಗಾಗಿ ಕರೆ ಕೊಟ್ಟಿದ್ದರು ಎಂದು ವಾದಿಸಲಾಗುತ್ತದೆ. ಆದರೆ ಅದೇ ದಾಸರ ಕೀರ್ತನೆಗಳಲ್ಲಿ ಬ್ರಾಹ್ಮಣರು, ವೇದಗಳು ಹಾಗೂ ವರ್ಣವ್ಯವಸ್ಥೆಯ ಕುರಿತ ಪ್ರಶಂಸೆಯನ್ನು ಒಳಗೊಂಡ ಕೀರ್ತನೆಗಳೂ ಸಿಗುತ್ತವೆ (ಹೆಗಡೆ 2010). ಅಂದರೆ ಈ ವಚನಕಾರರು ಅಥವಾ ದಾಸರು ಬ್ರಾಹ್ಮಣರು ಹಾಗೂ ವೇದಗಳ ಕುರಿತು ವಿರೋಧವನ್ನು ಹೊಂದಿದ್ದರೆನ್ನಲು ಕೆಲವೇ ಕೃತಿಗಳು ಸಾಕಾಗಿದ್ದಲ್ಲಿ, ಅಷ್ಟೇ ಸಂಖ್ಯೆಯ ಕೃತಿಗಳನ್ನು ಆಧರಿಸಿ ಅವರು ಬ್ರಾಹ್ಮಣರು ಹಾಗೂ ವೇದಗಳ ಕುರಿತು ಪ್ರಶಂಸೆಯನ್ನು ಹೊಂದಿದ್ದರೆಂದು ಏಕೆ ತೀರ್ಮಾನಿಸಬಾರದು? ಮಾರ್ಟಿನ್ ಫಾರೆಕ್ ಎಂಬವರು ತಮ್ಮ ಇತ್ತೀಚಿನ ಲೇಖನವೊಂದರಲ್ಲಿ ಇಂಥ ಸಮಸ್ಯೆಗಳ ಕುರಿತು ಸಾಕಷ್ಟು ಚರ್ಚಿಸಿದ್ದಾರೆ (ಫಾರೆಕ್ 2017:130–38).

ಮರಾಠೀ, ತಮಿಳು, ಬೆಂಗಾಲಿ ಹಾಗೂ ಹಿಂದೀ ಭಾಷೆಗಳ ಭಕ್ತಿ ಸಾಹಿತ್ಯಗಳೂ ಇಂಥ ವಿರೋಧಾಭಾಸವನ್ನು ಪ್ರಕಟಿಸುತ್ತವೆ. ಸುಪ್ರಸಿದ್ಧ ಎಡಪಂಥೀಯ ಇತಿಹಾಸಕಾರರಾದ ಡಿ.ಡಿ.ಕೊಸಾಂಬಿಯವರು ಮರಾಠಿಯ ವಾರ್ಕರಿ ಸಾಹಿತ್ಯದಲ್ಲಿ ಇಂಥ ವಿರೋಧಾಭಾಸವನ್ನು ಗುರುತಿಸಿದ್ದರು. ಮರಾಠೀ ಸಂತರು ತಮ್ಮ ಕೆಲವು ಹೇಳಿಕೆಗಳಲ್ಲಿ ಇವುಗಳ ವಿರುದ್ಧ ಕಟು ಟೀಕೆಗಳನ್ನು ಮಾಡುತ್ತಾರೆ. ಆದರೆ ಅವರೇ ಬ್ರಾಹ್ಮಣರು ಹಾಗೂ ಯಜ್ಞಗಳ ಕುರಿತು ಪ್ರಶಂಸೆಯನ್ನೂ ಮಾಡಿ ನಮ್ಮನ್ನು ತಬ್ಬಿಬ್ಬುಗೊಳಿಸುತ್ತಾರೆ (ಕೊಸಾಂಬಿ 1962:32–35). ಫಾರೆಕ್ ಅವರು ಬಂಗಾಲದ ಚೈತನ್ಯ ವೈಷ್ಣವ ಪಂಥದ ಕುರಿತು ಬರೆಯುವಾಗ ಅದರ ಸಾಹಿತ್ಯದ ಸಾಲುಗಳನ್ನು ಉಲ್ಲೇಖಿಸಿ ಅದು ವರ್ಣ ವಿರೋಧೀ, ಬ್ರಾಹ್ಮಣ ವಿರೋಧೀ ಚಳವಳಿಯಾಗಿತ್ತು ಎಂಬ ಅಭಿಪ್ರಾಯವನ್ನು ಮರುಚಿಂತನೆ ನಡೆಸುವ ಅಗತ್ಯವಿದೆಯೆನ್ನುತ್ತಾರೆ (ಫಾರೆಕ್ 2015:91–119). ಇತ್ತೀಚೆಗೆ ಸಂತ ಮೀರಾ ಕುರಿತು ನಡೆಸಿದ ಅಧ್ಯಯನವೂ ಕೂಡ ಆಕೆಯು ಲಿಂಗ ತಾರತಮ್ಯದ ವಿರುದ್ಧ ಹೋರಾಡಿದ್ದಳೆನ್ನುವುದಕ್ಕೆ ಆಧಾರಗಳಿಲ್ಲ, ಬದಲಾಗಿ ಆಕೆ ಗಂಡು ಹೆಣ್ಣಿನ ನಡುವೆ ಸಾಂಪ್ರದಾಯಿಕ ಸಂಬಂಧವನ್ನು ಛಾಪಿಸಿಕೊಂಡಿದ್ದಳೆನ್ನುವುದಕ್ಕೆ ಪೂರಕವಾದ ಸಾಲುಗಳು ಇವೆ ಎಂಬುದನ್ನು ನಮ್ಮ ಗಮನಕ್ಕೆ ತರುತ್ತದೆ (ಹಜಾರಿಕಾ 2013:60–63). ಭಾರತದ ಬೇರೆ ಬೇರೆ ಭಾಗಗಳ ಅಸ್ಪೃಶ್ಯ ಸಂತರ ಜೀವನಚರಿತ್ರೆಯನ್ನು ಅಧ್ಯಯನಕ್ಕೊಳಪಡಿಸಿದ ಪ್ಯಾಟನ್ ಬರ್ಕೆಟ್ ಅವರು ಕೂಡ ಈ ಸಮಸ್ಯೆಯನ್ನು ಎದುರಿಸುತ್ತಾರೆ (ಪು.115–141). ಅವರು ತಮಿಳು

ನಾಡಿನ ತಿರುಪ್ಪನ್ ಆಳ್ವಾರ್ ಹಾಗೂ ನಂದನಾರ್, ವಾರಣಾಸಿಯ ರಾಯದಾಸ್, ಮಹಾರಾಷ್ಟ್ರದ ಚೋಕಾಮೇಳ, ಇವರ ಚರಿತ್ರೆಯಲ್ಲಿ ಗಮನಿಸುವುದೆಂದರೆ,

"ಅಸ್ಪೃಶ್ಯ ಸಂತರ ಕೃತಿಗಳು ಹಾಗೂ ಚರಿತ್ರೆಗಳಲ್ಲಿ ಜಾತಿ ಹಾಗೂ ಬ್ರಾಹ್ಮಣರ ಕುರಿತು ಪರಸ್ಪರ ವಿರೋಧಾಭಿಪ್ರಾಯಗಳು ಕಂಡುಬರುತ್ತವೆ ಹಾಗೂ ಅವು ಅವರು ತರಬಯಸಿದ ಸಮಾನತೆಗೆ ವಿರುದ್ಧವಾಗಿ ಕೆಲಸ ಮಾಡುವಂತಿವೆ"(126).

ಪ್ಯಾಟನ್ ಅವರ ತೀರ್ಮಾನವೆಂದರೆ ಬ್ರಾಹ್ಮಣ್ಯ ಹಾಗೂ ಜಾತಿಗೆ ಸಂಬಂಧಿಸಿದಂತೆ ಇಂಥ ವಿರೋಧಾಭಾಸವು ಭಾರತೀಯ ಸಂಸ್ಕೃತಿಗೆ ಪ್ರಾಚೀನ ಕಾಲದಿಂದಲೂ ಸಾಮಾನ್ಯವಾದುದಾಗಿದೆ. ಭಕ್ತಿಯೊಂದು ಸುಧಾರಣಾ ಚಳವಳಿ ಎಂಬ ಪೂರ್ವಗ್ರಹೀತವನ್ನು ಇಟ್ಟುಕೊಂಡು ಭಕ್ತಿ ಸಾಹಿತ್ಯವನ್ನು ಓದುವ ವಿದ್ವಾಂಸರಿಗೆ ಇದೊಂದು ಒಗಟಾಗಿ ಕಾಡುವುದು ಸಹಜ. ಈ ಒಗಟನ್ನು ಬಿಡಿಸಲು ಕೆಲವರು ಪ್ರಯತ್ನವನ್ನು ಕೂಡ ಮಾಡಿದ್ದಾರೆ. ಅಂದರೆ ಈ ವಿರೋಧಾಭಾಸಕ್ಕೆ ವಿವರಣೆಯನ್ನು ಬೆಳೆಸುವ ಕೆಲಸವೂ ನಡೆದಿದೆ. ಕೊಸಾಂಬಿಯವರು ವಾರ್ಕರಿ ಚಳವಳಿಯ ಕುರಿತು ನೀಡುವ ವಿವರಣೆ ಹೀಗಿದೆ: ಅಂದಿನ ಸಮಾಜದಲ್ಲಿ ಬೆಳೆದ ವರ್ಗ ಸಂಘರ್ಷದ ಭೌತಿಕ ಬಿಕ್ಕಟ್ಟುಗಳಿಗೆ ಭಕ್ತಿ ಎಂಬುದೊಂದು ವಾಸ್ತವಿಕ ಪರಿಹಾರವಾಗಿರಲು ಸಾಧ್ಯವಿರಲಿಲ್ಲ. ಏಕೆಂದರೆ (ಕೋಸಾಂಬಿಯವರ ಪ್ರಕಾರ) ಭಕ್ತಿ ಎಂಬುದು ಫ್ಯೂಡಲ್ ವ್ಯವಸ್ಥೆಯ ಮೌಲ್ಯವಾಗಿತ್ತು. ಭಕ್ತಿಯು ವಿಧೇಯತೆಯನ್ನು ಬೋಧಿಸುತ್ತದೆ. ಹಾಗೂ ಈ ವಿಧೇಯತೆಯು ಫ್ಯೂಡಲ್ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಸಾಧನವಾಗಿತ್ತು.

"ಇಂಥ ಸಮಾಜವನ್ನು ಹಾಗೂ ಅದರ ಪ್ರಭುತ್ವ ವ್ಯವಸ್ಥೆಯನ್ನು ಒಟ್ಟಿಗೇ ಹಿಡಿದಿಡಲು ಭಕ್ತಿಯನ್ನು ಎತ್ತಿಹಿಡಿಯುವ ರಿಲಿಜನ್ ಅತ್ಯಂತ ಸೂಕ್ತವಾದುದಾಗಿತ್ತು "(1962:32).

ಭಕ್ತಿಯ ಕಾರಣದಿಂದಲೇ ಮಧ್ಯಯುಗದಲ್ಲಿ ಬ್ರಾಹ್ಮಣ ಸಂಸ್ಥೆಗಳು ಹಾಗೂ ವಿಧಿಗಳು ಅತಿಯಾಗಿ ಬೆಳೆದವು ಹಾಗೂ ಸಾಮಾಜಿಕ ದಮನವು ಸಾಧ್ಯವಾಯಿತು. ವಾರ್ಕರಿ ಚಳವಳಿಯು ಮೂಲತಃ ಇಂಥ ವ್ಯವಸ್ಥೆಯ ಅನ್ಯಾಯಕ್ಕೆ ಹುಟ್ಟಿಕೊಂಡ ಪ್ರತಿರೋಧವಾಗಿದ್ದರೂ ಕೂಡ ಭಕ್ತಿಯು ಫ್ಯೂಡಲ್ ಮೌಲ್ಯವಾದುದರಿಂದ ಈ ಚಳವಳಿಯು ಫ್ಯೂಡಲ್ ವ್ಯವಸ್ಥೆಯ ವಿರುದ್ಧ ನಡೆಯಲಿಲ್ಲ. ಅದು ಈ ಚಳವಳಿಯಲ್ಲಿ ವಿರೋಧಾಭಾಸವನ್ನು ಸೃಷ್ಟಿಸಿ ಅದನ್ನು ವಿಫಲಗೊಳಿಸಿತು (1962:35). ಕೊಸಾಂಬಿಯವರ ನಂತರ ಬಂದ ಭಾರತೀಯ ಎಡಪಂಥೀಯ ವಿದ್ವಾಂಸರು ಈ ವಾದದ ಎಳೆಗಳನ್ನು ಮತ್ತಷ್ಟು ಹಿಗ್ಗಿಸಿ ಭಕ್ತಿಯ ಫ್ಯೂಡಲ್ ರೂಪವನ್ನು ಮತ್ತಷ್ಟು ಶೋಧಿಸಿದ್ದಾರೆ. (ಶರ್ಮಾ 2001:278–81; ಚಕ್ರವರ್ತಿ 2001; ನಾರಾಯಣನ್ ಮತ್ತು ವೆಲುಥಟ್ 2000, ನಂದಿ 1975). ಎಡಪಂಥೀಯ ಅಧ್ಯಯನಗಳು ತಿಳಿಸುವಂತೆ ಭಕ್ತಿಯು ಮೂರು ವಿಭಿನ್ನ ರೂಪವನ್ನು ತಳೆದಿದೆ: 1. ಅದು ಫ್ಯೂಡಲ್ ಐಡಿಯಾಲಜಿಯಾಗಿ ಪ್ರಾರಂಭಿಕ ಮಧ್ಯಕಾಲದಲ್ಲಿ ಫ್ಯೂಡಲಿಸಂ ಬೇರುಬಿಡುವುದಕ್ಕೆ ಹಾಗೂ ಗಟ್ಟಿಗೊಳ್ಳುವುದಕ್ಕೆ ಸಹಕರಿಸಿತು. 2. ನಂತರ ಮಧ್ಯಕಾಲದಲ್ಲಿ ಫ್ಯೂಡಲಿಸಂನಲ್ಲಿ ಬಿಕ್ಕಟ್ಟು ಸೃಷ್ಟಿಯಾದಾಗ ಅದರ ವಿರುದ್ಧ ಪ್ರತಿಭಟನೆಯ ಚಳವಳಿಯನ್ನು ಹುಟ್ಟುಹಾಕಲು ಪ್ರಯತ್ನಿಸಿದವರು ಭಕ್ತಿಯನ್ನು ಸಾಧನವನ್ನಾಗಿ ಮಾಡಿಕೊಂಡರು. 3. ಅಂತಿಮವಾಗಿ ಅದು ತನ್ನ ಆಂತರಿಕ ಸ್ವರೂಪದ ಕಾರಣದಿಂದಾಗಿ ಇಂಥ ಪ್ರತಿಭಟನೆಗಳನ್ನು ವಿಫಲಗೊಳಿಸಿ ಬ್ರಾಹ್ಮಣ ಸಂಸ್ಥೆಗಳನ್ನು ಗಟ್ಟಿಗೊಳಿಸುವ ಪಾತ್ರವಹಿಸಿತು. ಅದು ಜಾತಿ ವ್ಯವಸ್ಥೆಯ ಸಮಾಜದಲ್ಲಿ ತಾನೇ ಹೊಸ ಹೊಸ ಜಾತಿ, ಉಪಜಾತಿಗಳನ್ನು ಹುಟ್ಟುಹಾಕಿ ಕೃತಾರ್ಥವಾಯಿತು.

ಇದು ಎಡಪಂಥೀಯ ವಿವರಣೆಗಳ ಜಾಡಾದರೆ ದಲಿತ ಹೋರಾಟದ ದೃಷ್ಟಿಕೋನದಿಂದ ಬೇರೆ ಥರದ ವಿವರಣೆಗಳೂ ಈ ಕುರಿತು ಬಂದಿವೆ. ಸ್ವತಃ ಅಂಬೇಡ್ಕರ್ ಅವರೇ ಭಕ್ತಿ ಯುಗದ ಸಂತರು ಜಾತಿ ಹಾಗೂ ಅಸ್ಪೃಶ್ಯತೆಯ ವಿರುದ್ಧ ಎಂದೂ ಹೋರಾಡಿರಲಿಲ್ಲ ಎಂಬ ಅಭಿಪ್ರಾಯವನ್ನು 1914ರಲ್ಲೇ ಪ್ರಕಟಿಸಿದ್ದರು (ಫಾರೆಕ್ 2015: 138). ಇಂದಿನ ಕೆಲವು ದಲಿತ ಸಂಶೋಧಕರು ಒಂದು ಹೆಜ್ಜೆ ಮುಂದೆ ಹೋಗಿ ಭಕ್ತಿ ಸಾಹಿತ್ಯದಲ್ಲಿನ ಬ್ರಾಹ್ಮಣ ಪರ ಹೇಳಿಕೆಗಳನ್ನು ಆಧರಿಸಿ ಭಕ್ತಿ ಸಾಹಿತ್ಯದಲ್ಲಿ ಬರುವ ಸುಧಾರಣಾವಾದೀ ಹೇಳಿಕೆಗಳ ವಿಶ್ವಾಸಾರ್ಹತೆಯನ್ನು ಸಂದೇಹಿಸುತ್ತಾರೆ. ಚೋಕಾಮೇಳನ ಸಂದರ್ಭದಲ್ಲಿ ಗೋಖಲೆ-ಟರ್ನರ್ ಎಂಬ ಲೇಖಕರು ನೀಡುವ ಈ ಹೇಳಿಕೆಯನ್ನು ಗಮನಿಸಿ:

"ಜಾತಿಯ ಕುರಿತು, ಭಕ್ತಿ ಪಂಥಗಳ ತಿಳಿವಳಿಕೆ ಹಾಗೂ ಅಸ್ಪೃಶ್ಯತೆಯ ನಿರ್ಮೂಲನೆಯ ಕುರಿತು ಅದರ (ಚೋಕಾಮೇಳನ ಕೃತಿಗಳ) ವಿಚಾರಗಳು ಮೇಲ್ಜಾತಿಗಳು ಸೃಷ್ಟಿಸಿದ ಐಡಿಯಾಲಜಿಯ ಕಗ್ಗಂಟುಗಳ ಉರುಳಿಗೆ ಕೆಳಜಾತಿಗಳು ಬಲಿಯಾದ ದೃಷ್ಟಾಂತಗಳೆಂದು ನೋಡಲಾಗುತ್ತಿದೆ" (ಪ್ಯಾಟನ್ 2009:124).

ಅಂದರೆ ಭಕ್ತಿಯೆಂಬುದು ಕೆಳಜಾತಿಯ ಸಂತರಿಗೆ ಮೇಲ್ಜಾತಿಗಳ ಐಡಿಯಾಲಜಿಯು ಸೃಷ್ಟಿಸಿದ ಉರುಳುಗಳು ಹಾಗೂ ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಕೆಲಸವನ್ನಷ್ಟೇ ಅದು ಮಾಡಿತು ಎಂಬುದಾಗಿ ಈ ಚಿಂತಕರು ಭಾವಿಸಿದರೆ ಇನ್ನೂ ಹಲವರು ಭಕ್ತಿಯನ್ನು ಇನ್ನೂ ಇತರ ಕಾರಣಗಳಿಗಾಗಿ ಸುಧಾರಣಾ ಚಳವಳಿ ಎಂಬುದಾಗಿ ನೋಡಲು ನಿರಾಕರಿಸುತ್ತಾರೆ. ಭಕ್ತಿ ಎಂಬುದು ಎಂದೂ ಆಮೂಲಾಗ್ರ ಸಾಮಾಜಿಕ ಬದಲಾವಣೆಯನ್ನು ಉದ್ದೇಶಿಸಿರಲಿಲ್ಲ, ಬದಲಾಗಿ ಅದು ಬ್ರಾಹ್ಮಣ ವ್ಯವಸ್ಥೆಯನ್ನು ಸರ್ವಗ್ರಾಹ್ಯವಾಗುವಂತೆ ಮಾಡಲು ಸುರಕ್ಷಾ ಕವಾಟದಂತೆ ಕೆಲಸ ಮಾಡಿತು ಎಂದೂ ಅಭಿಪ್ರಾಯ ಪಟ್ಟವರಿದ್ದಾರೆ (ಈಶ್ವರನ್ 1980:74). ಈ ಮೇಲೆ ಉಲ್ಲೇಖಿಸಿದ ನಿರೂಪಣೆಗಳಲ್ಲಿ ಭಕ್ತಿ ಸಾಹಿತ್ಯವನ್ನೇ ಆಧರಿಸಿ ಭಕ್ತಿ ಚಳವಳಿಯ ಕುರಿತ ಇಂದಿನ ಜನಪ್ರಿಯ ಗ್ರಹಿಕೆಗಳಿಗೆ ತದ್ವಿರುದ್ಧ ನಿರ್ಣಯಗಳು ಹೊರಡುವುದನ್ನು ಕಾಣುತ್ತೇವೆ.

1 ಇ. ಸಂಸಾರದ ಕುರಿತು ಭಕ್ತರ ನಿಲುವು

ಭಕ್ತಿಯ ಪರಿಭಾಷೆಗೂ ಸುಧಾರಣೆಯ ಪರಿಭಾಷೆಗೂ ಮೇಲ್ನೋಟದ ಸಂಬಂಧವನ್ನು ಕಲ್ಪಿಸಿಯೇ ನೂರಾರು ವರ್ಷಗಳಿಂದ ಅವುಗಳ ಆಧುನಿಕ ಚಿತ್ರಣವನ್ನು ಕಟ್ಟಿರುವುದರಿಂದ ಭಕ್ತಿ ಸಾಹಿತ್ಯದ ಅರ್ಥವು ಸುಧಾರಣೆಯ ಸಾಹಿತ್ಯದಂತೇ ಇರುವಂತೆ ಭಾಸವಾಗುತ್ತದೆ. ಆದರೆ ಭಕ್ತರ ಧೋರಣೆಗೂ ಸುಧಾರಕರ ಧೋರಣೆಗೂ ನಡುವೆ ಢಾಳಾಗಿ ಹೊಡೆದು ತೋರುವ ಒಂದು ವ್ಯತ್ಯಾಸ ನಮ್ಮೆಲ್ಲರ ಗಮನಕ್ಕೆ ಬರದೇ ಇರದು. ಭಾರತದಲ್ಲಿ ಬೌದ್ಧಾದಿ ನಾಸ್ತಿಕ ಪಂಥಗಳೂ, ಭಕ್ತಿ ಪಂಥಗಳೂ, ವೈದಿಕ ಅಧ್ಯಾತ್ಮ ಪಂಥಗಳೂ ಸಂಸಾರದ ಕುರಿತು ಒಂದು ಮೂಲಭೂತ ಧೋರಣೆಯನ್ನು ಹೊಂದಿವೆ. ಅದೇಂದರೆ ಅವರ ಗುರಿಯು ಈ ಸಂಸಾರದ ಕುರಿತು ನಿರ್ಲಿಪ್ತತೆಯನ್ನು ಬೆಳೆಸಿಕೊಳ್ಳುವುದು. ಅವರೆಲ್ಲರ ಗುರಿ ಅಂತಿಮವಾಗಿ ಜನನ ಮರಣ ಚಕ್ರದಿಂದಲೇ ಮುಕ್ತಿ ಹೊಂದುವುದು. ಇಲ್ಲಿ ಮುಕ್ತಿ ಎಂದರೆ ಯಾವುದೇ ಇಹ ಪರದ ಬಂಧನದ ಆಸೆಯಿಂದಲೂ ಮುಕ್ತಿ. ಪ್ರಾಪಂಚಿಕ ವ್ಯವಹಾರಗಳ ಕುರಿತು ನಿರ್ಲಿಪ್ತತೆ ಸಾಧಿಸಿದಷ್ಟೂ ತಮ್ಮ ಗುರಿ ಹತ್ತಿರವಾಗುತ್ತದೆ ಎಂಬುದು ಅವರ ಪ್ರತಿಪಾದನೆ. ಅಂಥ ನಿರ್ಲಿಪ್ತತೆ ಸಾಧಿಸುವ ನಿಟ್ಟಿನಲ್ಲಿ ಪ್ರಪಂಚವು ಪಾರಮಾರ್ಥಿಕ ಸತ್ಯವಲ್ಲ, ಮಾಯೆ ಎಂಬ ಜ್ಞಾನವನ್ನು ಗಳಿಸಿಕೊಳ್ಳಬೇಕು. ಈ ಮುಕ್ತತೆಯನ್ನು ಸಾಧಿಸಿದವನು ಪ್ರಪಂಚದಲ್ಲೇ ವ್ಯವಹರಿಸುತ್ತಿರಲೂ ಬಹುದು. ಆದರೆ ಅವನು ಜೀವನ್ಮುಕ್ತನಂತೆ ಇರುತ್ತಾನೆ. ಭಕ್ತರು

ಪರಮಾತ್ಮ-ಭಕ್ತ ಎಂಬ ದ್ವೈತದ ಮೂಲಕ ಈ ಗುರಿಯನ್ನು ಸಾಧಿಸುವ ಮಾರ್ಗವನ್ನು ಹಿಡಿದವರು. ಈ ಗುರಿಯಿಂದ ನಮ್ಮನ್ನು ವಿಚಲಿತಗೊಳಿಸುವ ಯಾವುದೇ ಯೋಚನೆಯಾದರೂ ತೊಡಕೇ ಆಗುತ್ತದೆ. 'ಲೋಕದ ಡೊಂಕ ನೀವೇಕೆ ತಿದ್ದುವಿರಯ್ಯ', 'ಪರಚಿಂತೆ ನಮಗೇಕಯ್ಯ', 'ನೀ ಲೋಕದ ಚಿಂತಿ ಮಾಡತಿನಂತಿ', ಇವೆಲ್ಲ ಸಾಲುಗಳು ತೋರಿಸುವಂತೆ ಈ ಮಾರ್ಗಗಳಲ್ಲಿ ಗುರಿ ತಲುಪುವ ಪ್ರಕ್ರಿಯೆ ನಮ್ಮ ಮನಸ್ಸಿನೊಳಗೇ ನಡೆಯಬೇಕಾದ್ದು ಅನಿವಾರ್ಯ. ಸುಧಾರಣೆ ಏನಿದ್ದರೂ ನಮ್ಮ ಅಜ್ಞಾನವನ್ನು ಕಳೆದುಕೊಳ್ಳುವ ಕೆಲಸವಾಗಿದೆ, ಶುದ್ಧೀಕರಿಸುವ ಕೆಲಸವೇನಿದ್ದರೂ ಮನಸ್ಸಿನ ನಿರ್ಮಲತೆಯನ್ನು ಕಾಯ್ದುಕೊಳ್ಳುವ ಕೆಲಸವೇ ಆಗಿದೆ. ಈ ಸಾಧನಾ ಮಾರ್ಗದಲ್ಲಿ ಲೌಕಿಕ ಪ್ರಪಂಚದ ಸಂಸ್ಥೆಗಳ ಕುರಿತು ವ್ಯಕ್ತವಾಗುವ ನಿಲುವನ್ನು ಸುಧಾರಣಾವಾದೀ ದೃಷ್ಟಿಕೋನದಿಂದ ನೋಡಿದ ವಿದ್ವಾಂಸರಿಗೆ ಅದೊಂದು ಅರ್ಥವಾಗದ ಒಗಟಾಗಿಬಿಡುತ್ತದೆ. ಹಾಗಾಗಿ ಭಾರತೀಯ ಸುಧಾರಣಾ ಪಂಥಗಳು ಎಂದು ಗುರುತಿಸಿದ ಇಂಥ ಸಂಪ್ರದಾಯಗಳನ್ನೇ ಪಲಾಯನವಾದ, ತಪ್ಪು ಮಾರ್ಗಗಳು ಅಥವಾ ವಿಫಲ ಪ್ರಯತ್ನಗಳು, ಎಂದು ವರ್ಣಿಸಿದವರೂ ಇದ್ದಾರೆ.

1 ಈ-ಚಳವಳಿಯ ಅವನತಿಯ ಕುರಿತ ಕಥೆಗಳಲ್ಲಿನ ಸಮಸ್ಯೆ

ಭಕ್ತಿಯು ಸುಧಾರಣಾ ಚಳವಳಿ ಎಂಬ ಅಭಿಪ್ರಾಯಕ್ಕೆ ಮತ್ತೊಂದು ಸಮಸ್ಯೆ ಎದುರಾಗುತ್ತದೆ. ಇಷ್ಟೆಲ್ಲ ಚಳವಳಿಗಳು ಜಾತಿವ್ಯವಸ್ಥೆ ಹಾಗೂ ಬ್ರಾಹ್ಮಣರ ವಿರುದ್ಧ ನಡೆದರೂ ಕೂಡ ಏಕೆ ಭಾರತೀಯ ಸಮಾಜವು ಜಾತಿವ್ಯವಸ್ಥೆಯನ್ನು ಉಳಿಸಿಕೊಂಡು ಬಂದಿದೆ? ಉಳಿದವರು ಹೋಗಲಿ ಸ್ವತಃ ಈ ಚಳವಳಿಗಳೆಂದು ಕರೆವ ಗುಂಪುಗಳೇ ಇಂದು ಜಾತ್ಯತೀತ ಗುಂಪುಗಳಾಗಿ ಉಳಿದಿಲ್ಲವೇಕೆ? ಇಂದು ಈ ಅಭಿಪ್ರಾಯದ ಬಹುತೇಕ ಪ್ರತಿಪಾದಕರು ನಂಬಿರುವಂತೆ ಈ ಚಳವಳಿಗಳು ಸುಧಾರಣೆಯ ವಿಫಲ ಪ್ರಯತ್ನಗಳಾಗಿದ್ದವು. ಅವು ಕಾಲಕ್ರಮೇಣ ತಮ್ಮ ಉದ್ದೇಶವನ್ನು ಕಳೆದುಕೊಂಡು ಭ್ರಷ್ಟಗೊಂಡವು. ಬ್ರಾಹ್ಮಣರ ಫಿತೂರಿಯಿಂದಾಗಿ ಅವುಗಳೊಳಗೆ ಅಧ್ಯಾತ್ಮ, ಸಂಸ್ಕೃತ, ಬ್ರಾಹ್ಮಣ ಆಚರಣೆಗಳು, ಮುಂತಾದವುಗಳು ನುಸುಳಿದವು. ದೇವಾಲಯ, ಮಠ ಮುಂತಾದ ಬ್ರಾಹ್ಮಣ ಸಂಸ್ಥೆಗಳು ಮತ್ತೆ ತಲೆಯೆತ್ತಿದವು. ಒಂದೊಮ್ಮೆ ಈ ಅಭಿಪ್ರಾಯವು ಸತ್ಯವೇ ಆಗಿದ್ದಲ್ಲಿ ಈ ಚಳವಳಿಗಳನ್ನು ವಿಫಲಗೊಳಿಸಿದ ಪುರೋಹಿತಶಾಹಿ ಸಂಸ್ಥೆಗಳು ಪುರೋಹಿತಶಾಹಿ ವಿರೋಧೀ ಹಾಗೂ ಜಾತಿ ವಿರೋಧಿ ಭಕ್ತಿ ಸಾಹಿತ್ಯವನ್ನು ನಾಶಪಡಿಸಬೇಕಿತ್ತು. ಆದರೆ ವಾಸ್ತವ ಇದಕ್ಕೆ ತದ್ವಿರುದ್ಧವಾಗಿ ಇದ್ದಂತಿದೆ. 20ನೆಯ ಶತಮಾನದಲ್ಲಿ ಆಧುನಿಕ ವಿದ್ವಾಂಸರು ಭಕ್ತಿ ಸಾಹಿತ್ಯವನ್ನು ಸಂಗ್ರಹಿಸುವ ಕೆಲಸ ಪ್ರಾರಂಭಿಸಿದಾಗ ಅದರ ಮೌಖಿಕ ಹಾಗೂ ಗ್ರಂಥಸ್ಥ ರೂಪಗಳೆರಡೂ ಈ ಸಂಸ್ಥೆಗಳಲ್ಲೇ ಸಿಕ್ಕವು. ಅದೂ ಅವು ನೂರಾರು ವರ್ಷಗಳಿಂದ ಪ್ರತಿಮಾಡಿ ಜತನದಿಂದ ಕಲಿತು ಕಲಿಸಿ ಕಾಪಾಡಿಕೊಂಡ ಬಂದ ರೂಪದಲ್ಲಿ ಸಿಕ್ಕವು! ಅನೇಕ ಬ್ರಾಹ್ಮಣ ಕುಟುಂಬಗಳೂ, ಮಠ ಮಾನ್ಯಗಳು ಕೂಡಾ ಅಂಥ ಸಾಹಿತ್ಯವನ್ನು ಉಳಿಸಿಕೊಂಡು ಬಂದಿದ್ದವು. ಇದು ಅವನತಿಯ ಕಥೆಯನ್ನು ನಂಬುವವರ ಕಣ್ತೆರೆಸುವ ಸಂಗತಿಯಾಗಬಹುದು. ಜಾತಿವ್ಯವಸ್ಥೆಯನ್ನು ನಾಶ ಪಡಿಸುವ ಚಳವಳಿಗಳ ಸಾಹಿತ್ಯವನ್ನು ಅದೇ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಶಕ್ತಿಗಳು ರಕ್ಷಿಸಿ ಉಳಿಸಿಕೊಂಡು ಬಂದು ಆಧುನಿಕ ವಿದ್ವಾಂಸರಿಗೆ ನೀಡುತ್ತವೆ! ಉದಾಹರಣೆಗೆ ಯಾವ ಬ್ರಾಹ್ಮಣ ಸಂಪ್ರದಾಯವು ಕನಕದಾಸರನ್ನು ಜಾತೀಯ ತರತಮಕ್ಕೆ ಒಳಪಡಿಸಿ ಶೋಷಿಸಿತ್ತೆಂದು ಹೇಳಲಾಗುತ್ತದೆಯೋ ಅದೇ ಸಂಪ್ರದಾಯವೇ ಹೆಮ್ಮೆಯಿಂದ ಕನಕನ ಕಿಂಡಿ, ಕುಲಕುಲಕುಲವೆನ್ನುತಿಹರು ಮುಂತಾದ ಕೀರ್ತನೆಗಳನ್ನೂ ಒಳಗೊಂಡಂತೆ ಅವರ ಎಲ್ಲಾ ಕೃತಿಗಳನ್ನೂ ರಕ್ಷಿಸಿಕೊಂಡು ಬರುತ್ತದೆ.

ಅಂದರೆ ಈ ಬ್ರಾಹ್ಮಣ ಸಂಪ್ರದಾಯಕ್ಕೆ ಈ ಸಾಹಿತ್ಯದ ನಿಜ ಉದ್ದೇಶವು ತಿಳಿದಿರಲಿಲ್ಲವೆ? ಆಧುನಿಕ ವಿದ್ವಾಂಸರು ಮಾತ್ರ ಈ ಸತ್ಯವನ್ನು ಮನಗಾಣುವಷ್ಟು ಪ್ರತಿಭಾವಂತರೆ? ಇಂಥ ನಿರ್ಣಯಗಳು ಭಕ್ತಿ ಸಾಹಿತ್ಯದ ಈ ಸಾಂಪ್ರದಾಯಿಕ ರಕ್ಷಕರ ಬುದ್ಧಿಮತ್ತೆಯ ಅವಹೇಳನಗಳಷ್ಟೇ ಆಗಬಲ್ಲವು. ಏಕೆ ಬ್ರಾಹ್ಮಣ ಸಂಪ್ರದಾಯವನ್ನೊಳಗೊಂಡಂತೆ ಭಕ್ತಿ ಚಳವಳಿಯನ್ನು ವಿಫಲಗೊಳಿಸಿದ ಶಕ್ತಿಗಳೇ ಭಕ್ತಿಸಾಹಿತ್ಯವನ್ನು ರಕ್ಷಿಸಿಕೊಂಡು ಬಂದವು ಹಾಗೂ ತಮ್ಮ ನಾಶಕ್ಕಾಗಿ ಹೋರಾಡಿದವರನ್ನೇ ದೈವೀ ಪುರುಷರನ್ನಾಗಿ ಮಾಡಿ ಪೂಜಿಸಿದವು? ಈ ಸಂಗತಿಯು ಆಧುನಿಕ ಧೋರಣೆಗಳು ಸಮಸ್ಯಾತ್ಮಕವಾಗಿವೆ ಎಂಬುದರತ್ತ ಬೆರಳು ಮಾಡಿ ತೋರಿಸುತ್ತದೆ ಹಾಗೂ ಭಕ್ತಿ ಸಾಹಿತ್ಯದ ಕುರಿತು ನಾವು ಕಟ್ಟಿಕೊಂಡ ಇತಿಹಾಸವನ್ನು ಪ್ರಶ್ನೆಗೆ ಒಡ್ಡುತ್ತದೆ.

–2–

ಸಮಸ್ಯೆಯ ಸ್ವರೂಪ

ಭಕ್ತಿ ಸಾಹಿತ್ಯದ ವಿಶಿಷ್ಟ ಸ್ವರೂಪದಿಂದಾಗಿಯೇ ಈ ಮೇಲೆ ಉಲ್ಲೇಖಿಸಿದ ಚರ್ಚೆಯು ಹುಟ್ಟಿಕೊಂಡಿದೆ ಎಂಬುದು ಸ್ಪಷ್ಟ. ಹಾಗೂ ಈ ಚರ್ಚೆಯು ಭಕ್ತಿಯು ರಿಲಿಜನ್ನಿನ ಅಥವಾ ಸಮಾಜದ ಸುಧಾರಣಾ ಚಳವಳಿ ಎಂಬ ಅಭಿಪ್ರಾಯವನ್ನು ಪ್ರಶ್ನಿಸುವಂತೆ ಮಾಡುತ್ತದೆ. ಇದರ ಪರಿಣಾಮವಾಗಿ ಈ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಕೆಳಗಿನ ಎರಡರಲ್ಲಿ ಒಂದು ಮಾರ್ಗವನ್ನು ತುಳಿಯುವ ಅನಿವಾರ್ಯತೆ ಹುಟ್ಟುತ್ತದೆ: 1. ಅದು ಸುಧಾರಣಾ ಚಳವಳಿ ಎಂಬುದನ್ನು ಸಾಧಿಸಲು ವ್ಯತಿರಿಕ್ತ ಉದಾಹರಣೆಗಳನ್ನು ಹಾಗೂ ಅಪವಾದಗಳನ್ನು ಪ್ರಾತಿನಿಧಿಕವಲ್ಲ ಎಂದು ಉಪೇಕ್ಷಿಸಬೇಕು ಅಥವಾ ಅಂಥ ಉದಾಹರಣೆಗಳು ನಂತರ ಕಾಲದಲ್ಲಿ ಈ ಚಳವಳಿಗಳ ಅವನತಿಯಿಂದ ಅಥವಾ ಪುರೋಹಿತಶಾಹಿಯ ಪ್ರಾಬಲ್ಯದಿಂದ ಸೇರಿಸಲ್ಪಟ್ಟಿವೆ ಎಂದು ತೀರ್ಮಾನಿಸಬೇಕು. 2. ಇಲ್ಲ ಈ ಪರಸ್ಪರ ವಿರುದ್ಧ ಹೇಳಿಕೆಗಳು ಏಕೆ ಕಾಣಿಸಿಕೊಳ್ಳುತ್ತವೆ ಎಂಬುದನ್ನು ವಿವರಿಸಬೇಕು.

ಮೊದಲನೆಯ ಮಾರ್ಗಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಇಂಥ ಉದಾಹರಣೆಗಳನ್ನು ಅಪವಾದಗಳೆಂದು ತಿರಸ್ಕರಿಸುವಂತಿಲ್ಲ. ಏಕೆಂದರೆ ಅವು ಭಾರತದಾದ್ಯಂತ ಭಕ್ತಿ ಸಾಹಿತ್ಯದ ಒಂದು ಸಾಮಾನ್ಯ ಲಕ್ಷಣವೆಂಬಂತೆ ಕಾಣಿಸಿಕೊಳ್ಳುತ್ತವೆ. ವಚನಗಳ ಸಂದರ್ಭದಲ್ಲಿ ನಾವು ನೋಡುವುದೆಂದರೆ ಸುಧಾರಣಾ ಚಳವಳಿ ಎಂಬ ವಾದದ ಸಮರ್ಥನೆಗೆ ಬಳಕೆಯಾದ ಉದಾಹರಣೆಗಳೇ ಕೆಲವು, ಹಾಗೂ ಅವುಗಳನ್ನು ಕೂಡ ತಪ್ಪಾಗಿ ಅರ್ಥೈಸಿರುವುದನ್ನೂ ನೋಡುತ್ತೇವೆ. ಅಂಥ ವಚನಗಳು ಕೂಡ ತಮ್ಮ ಟೀಕೆಯಲ್ಲಿ ವಿರೋಧಾಭಾಸಗಳನ್ನು ವ್ಯಕ್ತಪಡಿಸುತ್ತಿರುವಂತೆ ಭಾಸವಾಗುತ್ತದೆ. ಎರಡನೆಯ ಮಾರ್ಗವನ್ನು ಹಿಡಿದು ಅದಕ್ಕೆ ಪರ್ಯಾಯವಾಗಿ ವಿವರಣೆಯನ್ನು ಬೆಳೆಸುವವರೂ ಕೂಡ ಭಕ್ತಿ ಎಂಬುದು ಬ್ರಾಹ್ಮಣರು ಹಾಗೂ ಪುರೋಹಿತರ ಉದ್ದೇಶಸಾಧನೆಯನ್ನು ಈಡೇರಿಸುವ ಸಾಧನ ಎಂಬಂತೆ ವಾದಿಸುತ್ತಾರೆ. ಇಂಥ ವಿವರಣೆಗಳ ಪ್ರಕಾರ ಐತಿಹಾಸಿಕವಾಗಿ ಆಗಿಹೋದ ಭಕ್ತಿಯುಗದ ಸಾಧಕರು ತಮ್ಮ ಸಾಹಿತ್ಯದ ಪರಿಣಾಮವೇನು ಎಂಬುದೇ ತಿಳಿದಿರದಷ್ಟು ಮೂರ್ಖರು ಅಥವಾ ಅವರು ಬ್ರಾಹ್ಮಣ ಪುರೋಹಿತರ ಕೈಗೊಂಬೆಯಾಗಿದ್ದರು! ನಮಗಿರುವ ಆಯ್ಕೆ ಎಂದರೆ ಇಂಥ ಅತಾರ್ಕಿಕ ವಾದಗಳನ್ನು ಒಪ್ಪಿಕೊಳ್ಳಬೇಕು ಇಲ್ಲ ಇವುಗಳಲ್ಲಿ ಯಾವ ಮಾರ್ಗವೂ ಭಕ್ತಿ ಸಾಹಿತ್ಯವನ್ನು ಅರ್ಥೈಸುವ ವೈಜ್ಞಾನಿಕ ತರ್ಕ ವಿಧಾನವಲ್ಲ ಎಂಬ ನಿರ್ಣಯಕ್ಕೆ ಬರಬೇಕು.

ಈ ಚರ್ಚೆಯ ಕುರಿತು ಪ್ರಸ್ತುತ ಲೇಖನದ ನಿಲುವೆಂದರೆ ಈ ಮೇಲಿನ ಚರ್ಚೆಯು ಒಂದು ಹುಸಿ/ಅವಾಸ್ತವಿಕ ಸಮಸ್ಯೆಯನ್ನು ಊಹಿಸಿಕೊಳ್ಳುತ್ತಿದೆ: ಅದೆಂದರೆ ಭಕ್ತರು ಪುರೋಹಿತಶಾಹಿಯ ಪರವೊ ವಿರೋಧವೊ? ಎಂಬ ಸಮಸ್ಯೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಭಕ್ತಿಯು ಪುರೋಹಿತಶಾಹಿಯನ್ನು ವಿರೋಧಿಸಲು ಹುಟ್ಟಿಕೊಂಡಿದೆ ಎಂಬ ನಂಬಿಕೆಯಿಂದಾಗಿ ಈ ಹುಸಿ ಸಮಸ್ಯೆ ಹುಟ್ಟಿಕೊಂಡಿದೆ; ಭಕ್ತರು ಬ್ರಾಹ್ಮಣರ ಕುರಿತು ಮಾಡುವ ಟೀಕೆಯನ್ನು ಪುರೋಹಿತಶಾಹಿಯ ವಿರುದ್ಧದ ಪ್ರತಿಭಟನೆ ಎಂಬುದಾಗಿ ಅರ್ಥೈಸಿದಾಗ ಮಾತ್ರವೇ ಅವರ ಕುರಿತು ಮಾಡುವ ಹೊಗಳಿಕೆಗಳು ಪುರೋಹಿತಶಾಹಿಯನ್ನು ಗಟ್ಟಿಮಾಡುವ ಸಾಧನಗಳಂತೆ ಕಾಣಿಸುತ್ತವೆ. ಟೀಕೆಗಳು ಪುರೋಹಿತಶಾಹಿಯ ವಿರುದ್ಧದ ಪ್ರತಿಭಟನೆ ಎಂದು ಗ್ರಹಿಸದಿದ್ದರೆ ಹೊಗಳಿಕೆಗಳು ಪುರೋಹಿತಶಾಹಿಯ ಸಮರ್ಥನೆ ಎಂಬ ಸುಳ್ಳು ಸಮಸ್ಯೆ ಹುಟ್ಟಿಕೊಳ್ಳುವುದಿಲ್ಲ. ಅಂದರೆ ಇದು ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಭಕ್ತಿಯನ್ನು ಅರ್ಥೈಸುವಾಗ ಹುಟ್ಟಿಕೊಳ್ಳುವ ಸಮಸ್ಯೆಯಾಗಿದೆ. ಹಾಗೂ ಆ ಚೌಕಟ್ಟೇ ಈ ಹುಸಿ ಸಮಸ್ಯೆಯನ್ನು ಹುಟ್ಟುಹಾಕುತ್ತದೆ. ಮುಂದಿನ ಭಾಗದಲ್ಲಿ ಈ ಚೌಕಟ್ಟಿನ ಸಂದರ್ಭವನ್ನು ಸ್ಪಷ್ಟೀಕರಿಸಲು ಪ್ರಯತ್ನಿಸಲಾಗುವುದು.

2 ಅ. ಚೌಕಟ್ಟಿನ ಕುರಿತು

ವಸಾಹತೋತ್ತರ ನಿಲುವನ್ನಿಟ್ಟುಕೊಂಡು ಇತ್ತೀಚೆಗೆ ನಡೆದ ಅಧ್ಯಯನಗಳು ಭಕ್ತಿ ಅಧ್ಯಯನಗಳ ಕುರಿತು ಕೆಲವು ಜ್ಞಾನ ಮೀಮಾಂಸೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎತ್ತುತ್ತವೆ. ಅವು ತಿಳಿಸುವಂತೆ ಭಕ್ತಿ ಚಳವಳಿ ಎಂಬುದು ವಸಾಹತು ಕಾಲದ ನಿರ್ಮಾಣ. ಈ ಕುರಿತು ಮುಖ್ಯವಾಗಿ ಎರಡು ರೀತಿಯ ಸಿದ್ಧಾಂತಗಳಿವೆ. ಮೊದಲನೆಯದು ನಿರ್ಮಾಣವಾದ, ಎರಡನೆಯದು ಶಾಮೀಲುವಾದ. ನಿರ್ಮಾಣವಾದಿಗಳು ಹೇಳುವುದೆಂದರೆ ಪೂರ್ವದೇಶಗಳ ಕುರಿತು ಆಧುನಿಕ ಅಧ್ಯಯನಗಳನ್ನು ರೂಪಿಸಿದ ಓರಿಯೆಂಟಲಿಸ್ಟ್ ವಿದ್ವಾಂಸರು ಭಾರತದಲ್ಲಿ ಹಿಂದೂಯಿಸಂ, ಬುದ್ಧಿಸಂ ಮುಂತಾದ ರಿಲಿಜನ್ನುಗಳನ್ನು ತಮ್ಮ ಅಧ್ಯಯನಗಳ ಮೂಲಕ ಪಾಶ್ಚಾತ್ಯ ವಸಾಹತು ಕಾರ್ಯಕ್ರಮದ ಅಂಗವಾಗಿ ಕಟ್ಟಿದರು. ಶಾಮೀಲುವಾದಿಗಳು ತಿಳಿಸುವುದೆಂದರೆ ಈ ಕಟ್ಟುವಿಕೆಯು ಏಕಮುಖವಾಗಿ ನಡೆಯಲಿಲ್ಲ ಬದಲಾಗಿ ಪೌರ್ವಾತ್ಯ ಪಂಡಿತರು ಹಾಗೂ ದೇಶೀ ಪಂಡಿತರು ಜಂಟಿಯಾಗಿ ಈ ಕೆಲಸ ನಡೆಸಿದರು.

ಆದರೆ ಭಕ್ತಿ ಚಳವಳಿಯ ಕಲ್ಪನೆ ರೂಪುಗೊಂಡಿದ್ದು ವಸಾಹತು ಯುಗದಲ್ಲಿ ಎಂಬ ಕಾರಣಕ್ಕೆ ಇದೊಂದು ವಸಾಹತು ಕಾರ್ಯಕ್ರಮದ ಅಗತ್ಯಕ್ಕಾಗಿ ಹುಟ್ಟಿಕೊಂಡ ನಿರ್ಮಾಣ ಎನ್ನಬಹುದೆ? ವಸಾಹತುಕಾಲದಲ್ಲಿ ಅಧಿಕಾರ ಹಾಗೂ ಜ್ಞಾನದ ಸಂಬಂಧ ಏರ್ಪಟ್ಟ ಪರಿಣಾಮವಾಗಿ ಭಾರತದ ಕುರಿತ ವಸಾಹತು ನಿರೂಪಣೆಗಳು ಅಸ್ತಿತ್ವಕ್ಕೆ ಬಂದಿವೆ ಎಂದು ವಸಾಹತೋತ್ತರವಾದಿಗಳು ತಿಳಿಸುತ್ತಾರೆ. ಆದರೆ ಈಚಿನ ಅಧ್ಯಯನಗಳು ನಿರ್ಮಾಣ ಸಿದ್ಧಾಂತದ ಮಿತಿಗಳನ್ನು ಎತ್ತಿತೋರಿಸಿವೆ. ಮೊದಲನೆಯದಾಗಿ ನಿರ್ಮಾಣವಾದಿಗಳು ತಮ್ಮ ವಾದವನ್ನು ವ್ಯವಸ್ಥಿತವಾಗಿ ಇಡುತ್ತಿಲ್ಲ. ಹಾಗಾಗಿ ನಿರ್ಮಾಣ ಎಂದರೇನು ಎನ್ನುವುದು ಸ್ಪಷ್ಟವಿಲ್ಲ. ಹಾಗೂ ಭಕ್ತಿ ಚಳವಳಿಯ ಅಧ್ಯಯನದ ಸಂದರ್ಭದಲ್ಲಿ ಇಂಥ ನಿರ್ಮಾಣಗಳು ಯಾವ ಅಧಿಕಾರವನ್ನು ವಸಾಹತುಶಾಹಿಗೆ ನೀಡಿದವು ಎಂಬುದನ್ನು ತೋರಿಸಲಾಗಿಲ್ಲ. ಅಂಥ ವಾದಗಳಲ್ಲಿನ ಸಮಸ್ಯೆಯನ್ನು ಕೆಲವು ವಿದ್ವಾಂಸರು ಸೂಚಿಸಿದ್ದಾರೆ (ದ ರೂವರ್ ಮತ್ತು ಕ್ಲಾರ್‌ಹಟ್ 2010). ಅದೇ ಥರ ಶಾಮೀಲು ವಾದವನ್ನೂ ಭಕ್ತಿ ಚಳವಳಿಯ ಸಂದರ್ಭದಲ್ಲಿ ಅನ್ವಯಿಸುವುದು ಕಷ್ಟ. ಏಕೆಂದರೆ ಪಶ್ಚಿಮದಲ್ಲೇ ರಚನೆಯಾಗಿ ಬಂದ ಇಂಥ ಕಲ್ಪನೆಗಳನ್ನು ಕಟ್ಟುವಲ್ಲಿ ಭಾರತೀಯರ ಪಾತ್ರವೇನು? ಇಂಥ ಪಾಶ್ಚಾತ್ಯ

ಚೌಕಟ್ಟುಗಳು ಹಾಗೂ ಪರಿಭಾಷೆಗಳು ಭಾರತೀಯರಿಗೆ ಅಂದು ಹೋಗಲಿ ಇಂದಾದರೂ ಅರ್ಥವಾಗಿವೆಯೆ? ಹಾಗಾದರೆ ಭಕ್ತಿ ಚಳವಳಿ ಎಂಬುದಾಗಿ ಇಂದು ಸಮಾಜ ವಿಜ್ಞಾನದಲ್ಲಿ ಪ್ರಸ್ತುತತೆ ಪಡೆದ ಪರಿಕಲ್ಪನೆಯ ಸ್ವರೂಪವೇನು? ಎಸ್. ಎನ್ ಬಾಲಗಂಗಾಧರ ಅವರು ಈ ಪರಿಸ್ಥಿತಿಯನ್ನು ಹೆಚ್ಚು ತರ್ಕಬದ್ಧವಾಗಿ ವಿವರಿಸುತ್ತಾರೆ. ಅವರ ಪ್ರಕಾರ ಹಿಂದೂಯಿಸಂ, ಬುದ್ಧಿಸಂ ಇತ್ಯಾದಿಗಳು ಪಶ್ಚಿಮದವರು ಭಾರತದ ಕುರಿತು ತಮ್ಮ ಅನುಭವವನ್ನು ಅರ್ಥೈಸಿದ ರೀತಿಗಳು ಅಷ್ಟೆ. ರಾಫ್ ಗೆಲ್ಡರ್ಸ್ ಮತ್ತು ಬಾಲಗಂಗಾಧರ ಅವರು ಭಾರತದ ಕುರಿತ ಇಂಥ ಗ್ರಹಿಕೆಗಳು ವಸಾಹತು ಅಗತ್ಯಕ್ಕಾಗಿ ಹುಟ್ಟಿಕೊಂಡದ್ದಲ್ಲ, ಕ್ರೈಸ್ತ ಥಿಯಾಲಜಿಯ ಚೌಕಟ್ಟನ್ನು ಬಳಸಿಕೊಂಡು ಭಾರತೀಯ ಸಂಸ್ಕೃತಿಯ ಕುರಿತು ಆಲೋಚಿಸುವುದರಿಂದ ಇಂಥ ಚಿತ್ರಣಗಳು ಹುಟ್ಟಿಕೊಂಡಿವೆ (ಗೆಲ್ಡರ್ಸ್ ಮತ್ತು ಬಾಲಗಂಗಾಧರ 2011) ಎನ್ನುತ್ತಾರೆ. ವಸಾಹತು ಪೂರ್ವ ಕಾಲದಲ್ಲೂ ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟಾಂಟ್ ದೃಷ್ಟಿಕೋನಗಳು ಭಾರತದ ಕುರಿತ ಪಾಶ್ಚಾತ್ಯರ ಧೋರಣೆಗಳನ್ನು ಈ ರೀತಿಯಲ್ಲೇ ರಚಿಸಿದ್ದವು. ಭಾರತೀಯರು ಬಿಬ್ಲಿಕಲ್ ಆಡಂ ಮತ್ತು ಈವ್‌ರ ಸಂತತಿಗಳು ಎಂದು ಪಾಶ್ಚಾತ್ಯರು ಗ್ರಹಿಸಿದ್ದರು. ಆ ಕಾರಣದಿಂದ ಇವರು ಕೂಡ ರಿಲಿಜನ್ನಿನ ವಾರಸುದಾರರು ಎಂದುಕೊಂಡಿದ್ದರು. ಭಾರತೀಯ ಸಂಪ್ರದಾಯಗಳನ್ನು ರಿಲಿಜನ್ನುಗಳೆಂದು ಭಾವಿಸಿದ ಕ್ಯಾಥೋಲಿಕರು ಬ್ರಾಹ್ಮಣರು ಕೂಡ ತಮ್ಮಂತೆಯೇ ಪ್ರೀಸ್ಟ್‌ಗಳೆಂದು ಭಾವಿಸಿ ಅವರ ಕುರಿತು ಗೌರವಪೂರ್ವಕ ಚಿತ್ರಣಗಳನ್ನು ಕಟ್ಟಿಕೊಂಡಿದ್ದರು ಎಂಬುದಕ್ಕೆ 16ನೆಯ ಶತಮಾನದಿಂದಲೂ ಆಧಾರಗಳು ಸಿಗುತ್ತವೆ.. ಆದರೆ ಯುರೋಪಿನಲ್ಲಿ ಪ್ರೊಟೆಸ್ಟಾಂಟ್ ಚಳವಳಿಯ ನಂತರ ಆದರ ಅನುಯಾಯಿಗಳು ಬ್ರಾಹ್ಮಣರು ಕೂಡ ಕ್ಯಾಥೋಲಿಕ್ ಪ್ರೀಸ್ಟ್‌ಗಳಂತೆ ಭ್ರಷ್ಟತೆಯ ಸಂಕೇತ ಎಂಬುದಾಗಿ ಚಿತ್ರಿಸತೊಡಗಿದರು. ಕ್ಯಾಥೋಲಿಕ್ ಪ್ರೀಸ್ಟ್‌ಗಳಂತೆ ಅವರೂ ಕೂಡ ಅನುಯಾಯಿಗಳಲ್ಲಿ ಮೌಢ್ಯವನ್ನು ಬೆಳೆಸಿ, ಸಾಮಾಜಿಕ ತರತಮಗಳನ್ನು ರಚಿಸಿ ತಮ್ಮ ಶ್ರೇಷ್ಟತೆಯನ್ನು ಸ್ಥಾಪಿಸಿಕೊಂಡರು ಎಂಬುದಾಗಿ ಗ್ರಹಿಸಿದರು. ಇದರ ಮುಂದುವರಿಕೆಯಾಗಿ ಯುರೋಪಿನಲ್ಲಿ ಸಾಮಾಜಿಕ ಸಂಶೋಧನೆಗಳು ಥಿಯಾಲಜಿಯ ಗ್ರಹಿಕೆಗಳನ್ನು ಸೆಕ್ಯುಲರ್ ರೂಪಕ್ಕೆ ಪರಿವರ್ತಿಸಿ ಸಾಮಾಜಿಕ ಸಿದ್ಧಾಂತಗಳನ್ನಾಗಿ ಮಾಡಿದವು. 18, 19ನೆಯ ಶತಮಾನಗಳಲ್ಲಿ ಮೊತ್ತಮೊದಲು ಪೌರ್ವಾತ್ಯ ವಿದ್ವಾಂಸರು ಭಕ್ತಿ ಸಂಪ್ರದಾಯಗಳ ಕುರಿತು ಬರವಣಿಗೆಯನ್ನು ಮಾಡುವಾಗ ಭಕ್ತಿಯನ್ನು ಕ್ರೈಸ್ತಮತದೊಂದಿಗೆ ತುಲನೆ ಮಾಡಿ ಭಕ್ತಿ ಸಂಪ್ರದಾಯಗಳ ಮೇಲೆ ಕ್ರೈಸ್ತ ಪ್ರಭಾವವನ್ನು ನಿದರ್ಶಿಸಲು ಪ್ರಯತ್ನಿಸಿದರು (ಪಿಂಚ್ 2003:175–180) ಹಾಗೂ ಅದರ ಮುಂದುವರಿದ ಭಾಗವಾಗಿ ಅವುಗಳು ಪ್ರೊಟೆಸ್ಟಾಂಟ್ ಚಳವಳಿಗಳ ಹಾಗೆ ಅವತರಿಸಿದವು. ವಸಾಹತು ಕಾಲದಲ್ಲಿ ಪ್ರಚಲಿತದಲ್ಲಿ ಬಂದ ವೈದಿಕ ಬ್ರಾಹ್ಮಣರ ಹಿಂದೂಯಿಸಂ ಹಾಗೂ ಅದಕ್ಕೆ ಪ್ರತಿಭಟನೆಗಳಾದ ಬುದ್ಧಿಸಂ, ವೀರಶೈವಿಸಂ ಇತ್ಯಾದಿ ಕಲ್ಪನೆಗಳು ಕೂಡ ಈ ಯೋಚನಾಕ್ರಮದ ಸೃಷ್ಟಿಗಳೇ ಆಗಿವೆ. ಪಶ್ಚಿಮದವರು ತಮ್ಮ ರಿಲಿಜನ್ನಿನ ಇತಿಹಾಸದ ಕುರಿತು ಹೇಗೆ ಯೋಚಿಸಿದರೋ ಅದೇ ಚೌಕಟ್ಟಿನಲ್ಲೇ ಭಾರತೀಯ ಸಂಪ್ರದಾಯಗಳ ಕುರಿತು ಕೂಡ ಯೋಚಿಸಿದರು. ಅಂದರೆ ಪಶ್ಚಿಮದವರು ಭಾರತದ ಕೆಲವೊಂದು ಸಂಪ್ರದಾಯಗಳನ್ನು ಪ್ರೊಟೆಸ್ಟಾಂಟ್ ಚಳವಳಿಗಳು ಎಂಬುದಾಗಿ ಯೋಚಿಸಿದರು. ಭಕ್ತಿ ಚಳವಳಿಯು ಮೂಲತಃ ಪ್ರೊಟೆಸ್ಟಾಂಟಿಸಂ ಎಂಬ ಪರಿಕಲ್ಪನೆಯೇ ಆಗಿದೆ. ವಸಾಹತು ಕಾಲದ ಪೌರ್ವಾತ್ಯವಾದಿಗಳಿರಬಹುದು ಇಲ್ಲ ಭಾರತೀಯ ವಿದ್ವಾಂಸರಿರಬಹುದು ಅವರು ಈ ಯೋಚನೆಗಳನ್ನು ಥರಾವರಿಯಾಗಿ ಪುನರುತ್ಪಾದಿಸಿದರು ಅಷ್ಟೆ.

ಭಕ್ತಿ ಚಳವಳಿಯ ಕುರಿತ ಆಧುನಿಕ ಬರವಣಿಗೆಗಳ ಸಮೀಕ್ಷೆಯು ತಿಳಿಸುವಂತೆ ಈ ಶಬ್ದಗುಚ್ಛವು 20ನೆಯ ಶತಮಾನದಲ್ಲಿ ಅವತರಿಸಿತು. ಸ್ಟ್ರಾಟನ್ ಹಾವ್ಲೆ ಎಂಬ ವಿದ್ವಾಂಸರು ಈ ಕುರಿತು ನಮ್ಮ ಗಮನವನ್ನು ಸೆಳೆಯುತ್ತಾರೆ. ಅವರ ಪ್ರಕಾರ ಈ

ಪದಗುಚ್ಛವು ದೇಶೀ ವಿದ್ವಾಂಸರ ಸಂಶೋಧನೆಯಾಗಿದೆ. ಭಕ್ತಿ ಆಂದೋಲನ ಎಂಬ ಶಬ್ದವು ಹುಟ್ಟಿಕೊಂಡು ಜನಪ್ರಿಯವಾದದ್ದೇ ಹಿಂದಿ ಸಾಹಿತ್ಯದಲ್ಲಿ. (ಹಾವ್ಲೆ 2015:37–42). ಆದರೆ ಭಕ್ತಿ ಆಂದೋಲನ ಎಂಬುದು ನಂತರ ಕಾಲದ್ದಾದರೂ ಕೂಡ ಭಕ್ತಿಯನ್ನು ಪ್ರೊಟೆಸ್ಟಾಂಟ್ ಚಳವಳಿಗೆ ಸಮೀಕರಿಸುವ ಕೆಲಸವು 19ನೆಯ ಶತಮಾನದಿಂದಲೇ ಪ್ರಾರಂಭವಾಗಿತ್ತು ಎಂಬುದನ್ನು ಮರೆಯುವಂತಿಲ್ಲ. ಭಾರತೀಯ ಸಂಪ್ರದಾಯಗಳನ್ನು ಅಧ್ಯಯನಕ್ಕೊಳಪಡಿಸಿದ ಪಾಶ್ಚಾತ್ಯರು ಅವನ್ನು ಯುರೋಪಿನ ರಿಲಿಜನ್ನಿನ ಇತಿಹಾಸದ ಬೆಳಕಿನಲ್ಲಿ ಅರ್ಥೈಸಿದರು. ಯುರೋಪಿನಲ್ಲಿ ಅದಾಗಲೇ ಕ್ಯಾಥೋಲಿಕ್ ಚರ್ಚಿನ ವಿರುದ್ಧ ಪ್ರೊಟೆಸ್ಟಾಂಟ್ ಚಳವಳಿಗಳು ನಡೆದಿದ್ದವು. ಹಾಗಾಗಿ ರಿಲಿಜನ್ನುಗಳಲ್ಲಿ ಕೆಲವು ಭ್ರಷ್ಟ ಪುರೋಹಿತಶಾಹಿ ವ್ಯವಸ್ಥೆಯನ್ನು ಪೋಷಿಸುತ್ತವೆ, ಇನ್ನೂ ಕೆಲವು ಅವನ್ನು ವಿರೋಧಿಸಿ ರಿಲಿಜನ್ನನ್ನು ಶುದ್ಧೀಕರಿಸಲು ಪ್ರಯತ್ನಿಸುತ್ತವೆ ಎಂಬುದು ಯುರೋಪಿಯನ್ನರ ಸಾಮಾನ್ಯ ಜ್ಞಾನವಾಗಿ ಬೇರೂರಿತ್ತು. ಇದೊಂದು ಸಾರ್ವತ್ರಿಕ ಸತ್ಯ ಎಂಬ ಧೋರಣೆ ಪಾಶ್ಚಾತ್ಯ ವಿದ್ವಾಂಸರಲ್ಲಿತ್ತು. ಹಾಗಾಗಿ ಭಾರತದ ಅಧ್ಯಯನದಲ್ಲೂ ಅವರು ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟಾಂಟ್ ಮಾದರಿಯ ಸಂಪ್ರದಾಯಗಳನ್ನು ಭಾವಿಸಿಕೊಂಡರು. ಕ್ಯಾಥೋಲಿಕ್ ಚರ್ಚಿನಂತೇ ಹಿಂದೂಯಿಸಂ ಎಂಬುದು ವೈದಿಕ ಪುರೋಹಿತಶಾಹಿಯಾದ ಬ್ರಾಹ್ಮಣರಿಂದ ಭ್ರಷ್ಟಗೊಂಡು ಜಾತಿ ವ್ಯವಸ್ಥೆಯನ್ನು ಹುಟ್ಟುಹಾಕಿದ ಸಂಸ್ಥೆ ಎಂಬುದಾಗಿ ಪೌರ್ವಾತ್ಯ ವಿದ್ವಾಂಸರು ಗ್ರಹಿಸಿದರು. ಅವರೇ 19ನೆಯ ಶತಮಾನದಲ್ಲೇ ಬುದ್ಧಿಸಂ, ಜೈನಿಸಂ, ಇತ್ಯಾದಿ ಶಬ್ದಗಳನ್ನು ಹುಟ್ಟುಹಾಕಿ ವೈದಿಕ ರಿಲಿಜನ್ನಿಗೆ ಪ್ರತಿಯಾಗಿ ಅವುಗಳನ್ನು ಪ್ರೊಟೆಸ್ಟಾಂಟ್ ಚಳವಳಿಗಳೆಂಬುದಗಿ ಅರ್ಥೈಸಿದ್ದರು. ಅದೇ ರೀತಿ ವೀರಶೈವಿಸಂ ಕೂಡ ಪ್ರೊಟೆಸ್ಟಾಂಟ್ ಚಳುವಳಿಯ ಮಾದರಿಯಾಗಿದ್ದು ಅದು ಬ್ರಾಹ್ಮಣ ಪುರೋಹಿತಶಾಹಿಯ ವೈದಿಕ ಸಂಪ್ರದಾಯದ ವಿರುದ್ಧ ನಡೆದ ಬಂಡಾಯವೆಂಬುದಾಗಿ ಗ್ರಹಿಸಿದರು. ಬುದ್ಧ, ಬಸವ ಇವರನ್ನು ಮಾರ್ಟಿನ್ ಲೂಥರ್‌ಗೆ ಹೋಲಿಸಿದರು. 1840ರಷ್ಟು ಮೊದಲೇ ಈ ಪ್ರೊಟೆಸ್ಟಾಂಟ್ ಸುಧಾರಣಾ ಚಳವಳಿಯ ಮಾದರಿಯನಿಟ್ಟುಕೊಂಡು ವೀರಶೈವಿಸಂಅನ್ನು ಚಿತ್ರಿಸುವ ಪ್ರಯತ್ನ ನಡೆದಿತ್ತು (ಜಳಕಿ 2009: 132–141). ಅದೇ ಸಮಯದಲ್ಲೇ ಬುದ್ಧಿಸಂ ಕೂಡ ಪ್ರೊಟೆಸ್ಟಾಂಟ್ ಚಳವಳಿಯೆಂಬ ಬರವಣಿಗೆಗಳೂ ಕಾಣಿಸಿಕೊಂಡವು (ಫಾರೆಕ್ 2017:51).

20ನೆಯ ಶತಮಾನದ ನಂತರ ಈ ಪ್ರೊಟೆಸ್ಟಾಂಟ್ ಚೌಕಟ್ಟನ್ನು ಇತರ ಭಕ್ತಿ ಸಂಪ್ರದಾಯಗಳಿಗೂ ವಿಸ್ತರಿಸಲಾಯಿತು. 20ನೆಯ ಶತಮಾನದಲ್ಲಿ ನಡೆದ ಅಧ್ಯಯನಗಳು 19ನೆಯ ಶತಮಾನದ ಅಧ್ಯಯನಗಳ ಮುಂದುವರಿಕೆಗಳಾಗಿವೆ. ಹಾಗೂ ಭಕ್ತಿಯ ಕುರಿತ ಇಂದಿನ ಗ್ರಹಿಕೆಗಳನ್ನು ರೂಪಿಸುವಲ್ಲಿ 19ನೆಯ ಶತಮಾನದ ಸಾಮಾಜಿಕ ಹಾಗೂ ರಿಲಿಜನ್ನಿನ ಸುಧಾರಣಾ ಚಳವಳಿಗಳೂ ಕಾರಣವಾಗಿವೆ. 19ನೆಯ ಶತಮಾನದ ಸುಧಾರಣಾ ಚಳವಳಿಗಳು ಪ್ರೊಟೆಸ್ಟಾಂಟ್ ಗ್ರಹಿಕೆಗಳನ್ನು ಮಾದರಿಯಾಗಿಟ್ಟುಕೊಂಡು ಹಿಂದೂಯಿಸಂ ಅನ್ನು ಸುಧಾರಿಸಲು ಪ್ರಯತ್ನಿಸಿದವು ಹಾಗೂ ಈ ಸುಧಾರಕರು ಮಧ್ಯಕಾಲೀನ ಭಕ್ತಿ ಚಳವಳಿಯ ರೂಪುರೇಷೆಗಳನ್ನು 19ನೆಯ ಶತಮಾನದ ತಮ್ಮ ಪರಿಭಾಷೆಯಲ್ಲಿ ಅರ್ಥೈಸಲು ಪ್ರಯತ್ನಿಸಿದರು. ಇದರ ಪರಿಣಾಮವಾಗಿ ಭಕ್ತಿಯು ಆಧುನಿಕ ಸುಧಾರಣಾ ಚಳವಳಿಗಳ ಐತಿಹಾಸಿಕ ಮುಖವಾಗಿ ಬಿಂಬಿತವಾಯಿತು (ಹಜಾರಿಕಾ 2013: 51). ಮಧ್ಯಕಾಲೀನ ಭಕ್ತಿ ಸಂಪ್ರದಾಯದ ಕುರಿತು ಆಧುನಿಕ ಸುಧಾರಣಾವಾದೀ ಅಭಿಪ್ರಾಯಗಳನ್ನು ರೂಪಿಸಿದ ಒಬ್ಬ ಮಹತ್ವದ ವ್ಯಕ್ತಿಯೆಂದರೆ ಎಂ.ಜಿ.ರಾನಡೆಯವರು (ಹಾವ್ಲೆ 2015:32). 19ನೆಯ ಶತಮಾನದ ಸುಧಾರಕರಲ್ಲಿ ರಾನಡೆಯವರು ಒಬ್ಬ ಮಹತ್ವದ ಹೆಸರು ಎಂಬುದು ಗಮನಾರ್ಹ. 20ನೆಯ ಶತಮಾನದಲ್ಲಿ ಸುಧಾರಣೆಯ ಕಲ್ಪನೆಯು ರಾಷ್ಟ್ರೀಯತೆಯ

ಒಂದು ಅವಿಭಾಜ್ಯ ಅಂಗವಾಗುವುದರೊಂದಿಗೆ ಭಕ್ತಿ ಚಳವಳಿಯ ಕಲ್ಪನೆ ಗಟ್ಟಿಗೊಂಡಿತು. ಇಂಥ ನಿರೂಪಣೆಗಳು ಭಕ್ತಿ ಸಾಹಿತ್ಯದಲ್ಲಿ ಅನುಕೂಲವಾದ ಸಾಲುಗಳನ್ನು ಆಯ್ದು ಉದಾಹರಣೆಗಳನ್ನು ಒದಗಿಸಿದವು.

ಆದರೆ ಭಕ್ತಿ ಚಳವಳಿ ಪರಿಕಲ್ಪನೆಯನ್ನು ಗಟ್ಟಿಗೊಳಿಸುವ ಪ್ರಕ್ರಿಯೆ ನಡೆಯುತ್ತಿರುವಾಗಲೇ ಅದನ್ನು ಅಸಂಗತಗೊಳಿಸುವ ವ್ಯತಿರಿಕ್ತ ಉದಾಹರಣೆಗಳು ಕೂಡ ಭಕ್ತಿ ಸಾಹಿತ್ಯದಲ್ಲಿ ಅನಾವರಣಗೊಂಡವು. ಅಂದರೆ ನಾವು ಮಾಡಲು ಕಲಿತ ಆಲೋಚನೆಗೂ ಭಕ್ತಿ ಸಾಹಿತ್ಯದಲ್ಲಿನ ಪ್ರತ್ಯಕ್ಷಾಧಾರಗಳಿಗೂ ತಾಳೆಯಾಗುತ್ತಿಲ್ಲ. ಈ ಲೇಖನದ ಪ್ರಾರಂಭದಲ್ಲಿ ಉಲ್ಲೇಖಿಸಿದ ಚರ್ಚೆಗಳು ಭಕ್ತಿ ಚಳವಳಿಯ ಕುರಿತ ಸಿದ್ಧಾಂತಕ್ಕೆ ಎದುರಾದ ಇಂಥ ಸವಾಲುಗಳನ್ನು ಅರ್ಥೈಸುವ ಹಾಗೂ ಎದುರಿಸುವ ಪ್ರಯತ್ನಗಳು ಅಷ್ಟೆ. ಆದರೆ ರಿಲಿಜನ್ನಿನ ಕುರಿತ ಪಾಶ್ಚಾತ್ಯ ಇತಿಹಾಸವನ್ನು ಯಥಾವತ್ತಾಗಿ ಸ್ವೀಕರಿಸಿ ಈ ಸವಾಲನ್ನು ಎದುರಿಸುವಾಗ ಭಕ್ತಿಯು ಪ್ರೊಟೆಸ್ಟಾಂಟ್ ಚಳವಳಿಯಲ್ಲವಾದರೆ ಅದು ಕ್ಯಾಥೋಲಿಕ್ ರಿಲಿಜನ್ನಿನಂತಿದೆ ಎಂಬ ಪರ್ಯಾಯ ವಿವರಣೆಯೊಂದೇ ಗತಿ. ಇದು ಈ ಚರ್ಚೆಗಳಲ್ಲಿ ನಿದರ್ಶಿತವಾಗಿದೆ. ಅಂದರೆ ಭಕ್ತಿಯನ್ನು ಅರ್ಥೈಸಲು ಪಾಶ್ಚಾತ್ಯ ರಿಲಿಜನ್ನಿನ ಇತಿಹಾಸವೊಂದೇ ಸಾಧನ ಎಂಬ ಧೋರಣೆ ಇಂದು ಜನಪ್ರಿಯವಾಗಿದೆ.

2 ಆ. ಒಂದು ಪ್ರಭೇದ ದೋಷ

ಪ್ರಸ್ತುತ ಲೇಖನದ ವಾದವೆಂದರೆ ಭಕ್ತಿ ಎನ್ನುವುದು ರಿಲಿಜನ್ನಿನ ಪ್ರಭೇದಕ್ಕೆ ಸೇರಿದೆ ಎಂದು ತಿಳಿಯುವುದು ನಿಜವಾದ ಪ್ರಭೇದ ದೋಷ. ಅಂದರೆ ಮೂಲತಃ ಒಂದು ಪ್ರಭೇದವನ್ನು ರಚಿಸುವ ಗುಣಲಕ್ಷಣಗಳನ್ನು ಅದಕ್ಕೆ ಅರ್ಥಾರ್ಥ ಸಂಬಂಧವಿಲ್ಲದ ಮತ್ತೊಂದು ಪ್ರಭೇದಕ್ಕೆ ಆರೋಪಿಸಿದಾಗ ಈ ದೋಷ ಸೃಷ್ಟಿಯಾಗುತ್ತದೆ. ಉದಾಹರಣೆಗೆ "ಅವನ ಯೋಚನೆ ಹಸಿರು ಬಣ್ಣದ್ದು" ಎಂದರೆ ಅಥವಾ "ಅವನ ಹಾಡಿಗೆ ಜ್ವರ ಬಂದಿದೆ" ಎಂದರೆ ನಮಗೆ ಅಸಂಬದ್ಧವಾಗಿ ಕೇಳಿಸುತ್ತದೆ. ಏಕೆಂದರೆ ಹಸಿರುತನ ಯೋಚನೆಗಳ ಪ್ರಭೇದದ ಲಕ್ಷಣವಲ್ಲ, ಜ್ವರ ಬರುವುದು ಹಾಡಿನ ಪ್ರಭೇದದ ಲಕ್ಷಣವಲ್ಲ. ಅದೇ ರೀತಿ ಭಕ್ತಿಗೆ ಪ್ರೊಟೆಸ್ಟಾಂಟ್ ಸುಧಾರಣೆಯ ಗುಣಗಳನ್ನು ಆರೋಪಿಸುವ ಯಾವುದೇ ಪ್ರಯತ್ನವೂ ಕೂಡ ಈ ಹಿಂದೆ ಉಲ್ಲೇಖಿಸಿದ ಒಗಟುಗಳನ್ನು, ಅಸಂಬದ್ಧತೆಗಳನ್ನು ಹುಟ್ಟುಹಾಕುತ್ತದೆ. ಭಕ್ತಿ ಎನ್ನುವುದು ರಿಲಿಜನ್ನಿನ ಪ್ರಭೇದಕ್ಕೆ ಸೇರಿದ್ದು ಎಂದು ಭಾವಿಸಿಕೊಂಡು ಅದಕ್ಕೆ ಪ್ರೊಟೆಸ್ಟಾಂಟ್ ಹೋಲಿಕೆಯನ್ನು ವಿರೋಧಿಸಿದರೂ ಅದು ಕ್ಯಾಥೋಲಿಕ್ ರಿಲಿಜನ್ನಿನಂತಿದೆ ಎಂದು ವಾದಿಸುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಭಕ್ತಿಯು ರಿಲಿಜನ್ನಿನ ಸುಧಾರಣೆಯ ಚಳವಳಿ ಎಂದರೂ ಸಮಸ್ಯೆ, ರಿಲಿಜನ್ನನ್ನು ಗಟ್ಟಿಮಾಡುವ ಸಾಧನ ಎಂದರೂ ಇಷ್ಟೇ ಸಮಸ್ಯೆ. ಏಕೆಂದರೆ ಭಕ್ತಿಯು ರಿಲಿಜನ್ನಿನ ಪ್ರಭೇದಕ್ಕೆ ಸೇರದ ಒಂದು ಸಂಗತಿಯಾಗಿದೆ. ಈ ಕುರಿತ ಚರ್ಚೆಯು ಎರಡು ಮುಖದ ಪಕ್ಷಿ ನಿಜವಾಗಿಯೂ ಇದೆಯೆಂದು ನಂಬಿಕೊಂಡು ಅದಕ್ಕೆ ನಾಲ್ಕು ಕಾಲುಗಳಿವೆಯೋ ಎರಡು ಕಾಲುಗಳಿವೆಯೋ ಎಂದು ಚರ್ಚಿಸಿದಷ್ಟೇ ನಿಷ್ಫಳ.

ನಾನು ಬಾಲಗಂಗಾಧರ ಅವರು ರಿಲಿಜನ್ ಹಾಗೂ ಭಾರತೀಯ ಸಂಪ್ರದಾಯಗಳ ಕುರಿತು ಮಂಡಿಸಿದ ಊಹಾಸಿದ್ಧಾಂತಗಳನ್ನು ಆಧರಿಸಿ ಇದನ್ನು ಅರ್ಥೈಸಲು ಪ್ರಯತ್ನಿಸುತ್ತೇನೆ. ಅವರ ಕೃತಿಗಳು ರಿಲಿಜನ್ನು ಎಲ್ಲಾ ಸಂಸ್ಕೃತಿಗಳಲ್ಲೂ ಇದೆಯೆಂಬ ನಂಬಿಕೆಯನ್ನೇ ಪ್ರಶ್ನಿಸುವುದರ ಜೊತೆಗೆ ರಿಲಿಜನ್ನಿಲ್ಲದ ಸಂಸ್ಕೃತಿಗೆ ಭಾರತವೇ ಉದಾಹರಣೆ ಎಂಬುದಾಗಿ ಅವರು ವಾದಿಸುತ್ತಾರೆ. ರಿಲಿಜನ್ನು ಎಲ್ಲಾ ಸಂಸ್ಕೃತಿಗಳಲ್ಲೂ ಇದೆಯೆಂಬುದು ಪಾಶ್ಚಾತ್ಯರ ಧೋರಣೆ ಅಷ್ಟೆ. ಅದನ್ನು ಪಾಶ್ಚಾತ್ಯರು ವೈಜ್ಞಾನಿಕ ಅಧ್ಯಯನದಿಂದ ಕಂಡುಕೊಂಡದ್ದಲ್ಲ.

ಅವರು ರಿಲಿಜನ್ನು ರೂಪಿಸಿದ ಸಂಸ್ಕೃತಿಯಲ್ಲಿ ಬೆಳೆದ ಕಾರಣದಿಂದ ಅನ್ಯ ಸಂಸ್ಕೃತಿಗಳಲ್ಲಿ ರಿಲಿಜನ್ನು ಇದೆಯೆಂಬ ಧೋರಣೆಯನ್ನು ಪರೀಕ್ಷಿಸದೇ ಒಪ್ಪಿಕೊಂಡಿದ್ದಾರೆ. ಅದರ ಜೊತೆಗೇ ರಿಲಿಜನ್ನು ಭ್ರಷ್ಟಗೊಂಡು ಅವನತಿ ಹೊಂದುವುದು ಹಾಗೂ ಅದನ್ನು ಶುದ್ಧೀಕರಿಸಿ ಸುಧಾರಿಸುವುದು ಎಲ್ಲಾ ಸಂಸ್ಕೃತಿಗಳಲ್ಲೂ ನಡೆದಿದೆ ಅಂದುಕೊಳ್ಳುತ್ತಾರೆ. ಕ್ಯಾಥೋಲಿಕ್ ರಿಲಿಜನ್ನು ಭ್ರಷ್ಟ ಗೊಳ್ಳಲು ಅದರ ಪ್ರೀಸ್ಟ್‌ಹುಡ್ ಹಾಗೂ ಚರ್ಚುಗಳೇ ಕಾರಣ ಎಂಬ ವಿವರಣೆಯನ್ನು ಅನ್ಯ ಸಂಸ್ಕೃತಿಗಳಿಗೂ ಆರೋಪಿಸುತ್ತಾರೆ. ಇದೇ ಧೋರಣೆಯನ್ನು ಹೊಂದಿದ ಪೌರ್ವಾತ್ಯ ವಿದ್ವಾಂಸರು ಭಾರತದಲ್ಲೂ ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟಾಂಟ್ ರಿಲಿಜನ್ನುಗಳನ್ನು ಗುರುತಿಸುತ್ತ ಇಲ್ಲಿನ ಸಂಪ್ರದಾಯಗಳನ್ನು ಅರ್ಥೈಸಲು ಪ್ರಯತ್ನಿಸಿದರು. ಇದು ಭಾರತೀಯ ಸಂಪ್ರದಾಯಗಳನ್ನು ಅರ್ಥೈಸಲು ವೈಜ್ಞಾನಿಕ ಸಿದ್ಧಾಂತಗಳ ಸ್ಥಾನವನ್ನು ಅಲಂಕರಿಸಿತು. ಆದರೆ ಭಾರತದಲ್ಲಿ ದೇಸೀ ರಿಲಿಜನ್ನುಗಳೇ ಇರಲಿಲ್ಲ ಎಂದಾದಮೇಲೆ ಪ್ರೀಸ್ಟ್ ಹುಡ್ ಅಥವಾ ಚರ್ಚುಗಳ ಅಸ್ತಿತ್ವವೂ ಸಾಧ್ಯವಿಲ್ಲ. ರಿಲಿಜನ್ನೇ ಇಲ್ಲದ ಮೇಲೆ ಅದು ಭ್ರಷ್ಟವಾಗುವುದಾಗಲೀ, ಅದರ ಸುಧಾರಣೆಯಾಗಲೀ ಹೇಗೆ ಸಾಧ್ಯ? ಹಾಗಿರುವಾಗ ಭಾರತದ ದೇಸೀ ಸಂಪ್ರದಾಯಗಳ ಸಂದರ್ಭದಲ್ಲಿ ರಿಲಿಜನ್ನು ಭ್ರಷ್ಟಗೊಳ್ಳುವುದು, ಅದನ್ನು ಸುಧಾರಿಸುವುದು ಇತ್ಯಾದಿ ಪರಿಕಲ್ಪನೆಗಳು ಅಸಂಗತ ಎನಿಸುತ್ತವೆ. ಪಾಶ್ಚಾತ್ಯರು ಭಕ್ತಿ ಸಂಪ್ರದಾಯಗಳನ್ನು ಭಾರತೀಯ ರಿಲಿಜನ್ನು ಎಂಬುದಾಗಿ ಅರ್ಥೈಸಿ ತಮ್ಮ ಅನುಭವ ಪ್ರಪಂಚದೊಳಗೆ ಅದನ್ನು ಸೇರಿಸಿಕೊಂಡು ಆಲೋಚನೆಗಳನ್ನು ಬೆಳೆಸಿದರು. ಅದರ ಅಂಗವಾಗಿಯೇ ಭಕ್ತಿ ಚಳವಳಿ ಎಂಬ ಪರಿಕಲ್ಪನೆಯೂ ಮೈದಳೆಯಿತು. ಆದರೆ ಭಾರತೀಯ ಆಧ್ಯಾತ್ಮಿಕ ಸಂಪ್ರದಾಯಗಳನ್ನು ಪ್ರೊಟೆಸ್ಟಾಂಟ್ ಚಳವಳಿಗಳೆಂದು ಭಾವಿಸುವಾಗ ಅವರು ಪ್ರಭೇದ ದೋಷವನ್ನು ಎಸಗಿದ್ದರು. ಹಾಗೂ ಆಧ್ಯಾತ್ಮದ ಪರಿಭಾಷೆಗಳನ್ನು ಪ್ರೊಟೆಸ್ಟಾಂಟ್ ಪರಿಭಾಷೆಗಳಿಗೆ ಸಮೀಕರಿಸುವ ಪ್ರಯತ್ನ ಮೊದಲುಗೊಂಡಿತು. ಭಕ್ತಿ ಸಂಪ್ರದಾಯಗಳ ಕುರಿತ ಆಧುನಿಕ ಅಧ್ಯಯನವು ಈ ದಿಕ್ಕುತಪ್ಪಿದ ಹುಡುಕಾಟವಾಗಿದೆ.

ರಿಲಿಜನ್ನಿನ ಸುಧಾರಣೆ ಎಂಬ ಪರಿಕಲ್ಪನೆ ಹಾಗೂ ಅದನ್ನಾಧರಿಸಿದ ಕಾರ್ಯಕ್ರಮಗಳು ಸಾಂಸ್ಥಿಕ ಭ್ರಷ್ಟತೆಯನ್ನು ಪೂರ್ವಭಾವಿಯಾಗಿ ಕಲ್ಪಿಸಿಕೊಳ್ಳುತ್ತವೆ. ಇಂಥ ಸುಧಾರಣೆಗಳ ಮೂಲ ಪ್ರಶ್ನೆಯೆಂದರೆ ಶಾಪಗ್ರಸ್ತರಾದ ಮಾನವರು ಗಾಡ್ ಜೊತೆಗೆ ಅನುಬಂಧವನ್ನು ಮರು ಸ್ಥಾಪಿಸಿಕೊಳ್ಳುವುದು ಹೇಗೆ ಎಂಬುದಾಗಿತ್ತು. ರಿಲಿಜನ್ ಶಬ್ದವು ರಿಲಿಗೇರ್ ಎಂಬ ಧಾತುವಿನಿಂದ ವ್ಯುತ್ಪತ್ತಿಯಾಗಿದೆ ಎಂಬುದಾಗಿ ಥಿಯಾಲಜಿ ತಿಳಿಸುತ್ತದೆ. ರಿಲಿಗೇರ್ ಎಂದರೆ ಪುನಃ ಬಂಧಿಸುವುದು, ಅಥವಾ ಶಾಪಗ್ರಸ್ತರಾಗಿ ಭೂಮಿಗೆ ಬಿದ್ದ ಮಾನವರು ಪುನಃ ಗಾಡ್‌ನ ಅನುಬಂಧವನ್ನು ಹೊಂದುವ ಮಾರ್ಗ ಎಂದರ್ಥ. ರಿಲಿಜನ್ನಿನ ಸುಧಾರಣೆಯ ಕಲ್ಪನೆಯ ಹಿಂದೆ ರಿಲಿಜನ್ನು ಮೂಲತಃ ಗಾಡ್‌ನಿಂದ ಶುದ್ಧರೂಪದಲ್ಲಿ ಪ್ರವಾದಿಯ ಮೂಲಕ ಕೊಡಲ್ಪಟ್ಟಿದೆ ಎಂಬ ನಂಬಿಕೆಯಿದೆ. ಕಾಲ ಕ್ರಮೇಣ ಚರ್ಚೆಂಬ ಸಂಸ್ಥೆ ಹಾಗೂ ಅದನ್ನು ನಿಯಂತ್ರಿಸುವ ಪ್ರೀಸ್ಟ್‌ಗಳು ಅಧಿಕಾರವನ್ನು ಕೇಂದ್ರೀಕರಿಸಿಕೊಂಡು ರಿಲಿಜನ್ನನ್ನು ಭ್ರಷ್ಟಗೊಳಿಸುತ್ತಾರೆ. ಚರ್ಚೆಂಬ ಸಂಸ್ಥೆಯು ಶ್ರೇಣೀಕರಣ, ತರತಮಗಳನ್ನು ರಚಿಸಿಕೊಂಡು ಎಲ್ಲರಿಗೂ ಸಮಾನವಾಗಿ ರಿಲಿಜನ್ನಿನ ಲಭ್ಯತೆಯನು ನಿರಾಕರಿಸಿ ಅವರನ್ನು ಪ್ರೀಸ್ಟ್‌ಗಳ ಕೈಗೊಂಬೆಯನ್ನಾಗಿ ಮಾಡಿತು. ಆ ಮೂಲಕ ಗಾಡ್ ಎಲ್ಲ ಮಾನವರಿಗೂ ಉದ್ಧಾರ ಸಾಧನವಾಗಿ ನೀಡಿದ ಈ ರಿಲಿಜನ್ನು ಅದರ ಮೂಲ ಅರ್ಥ ಹಾಗೂ ಉದ್ದೇಶವನ್ನೇ ಕಳೆದುಕೊಳ್ಳುತ್ತದೆ. ಇಂಥ ತಪ್ಪು ಆಚರಣೆಗಳನ್ನು, ಸುಳ್ಳುಗಳನ್ನು ತೊಡೆದು ಅದನ್ನು ಶುದ್ಧರೂಪದಲ್ಲಿ ಮತ್ತೆ ಪ್ರತಿಪಾದಿಸುವುದೇ ರಿಲಿಜನ್ನಿನ ಸುಧಾರಣೆ. ಅಂದರೆ ಒಂದು ದೇವ ವಾಣಿ, ಪವಿತ್ರ ಗ್ರಂಥ, ಇತ್ಯಾದಿಗಳ ಸರಿ ನಿರೂಪಣೆಗಳೇ ಈ ಸುಧಾರಣೆಗೆ ಮಾನದಂಡಗಳು. ಪೇಗನ್ ಮೌಢ್ಯಗಳನ್ನು ಅಳವಡಿಸಿಕೊಂಡ

ಬ್ಯಾಬಿಲೋನಿನ ಸೂಳೆ ಎಂದು ಕ್ಯಾಥೋಲಿಕ್ ರಿಲಿಜನ್ನನ್ನು ಜರಿದ ಪ್ರೊಟೆಸ್ಟಾಂಟರು ಶುದ್ಧ ರಿಲಿಜನ್ನಿನ ಕುರಿತು ತಮ್ಮದೇ ನಿರೂಪಣೆಗಳನ್ನು ಬೆಳೆಸಿದರು. ಅವರು ಕ್ಯಾಥೋಲಿಕ್ ಚರ್ಚಿನ ಅಧಿಕಾರ ರಚನೆಯನ್ನು, ಆಚರಣೆಗಳನ್ನು, ಅಧಿಕಾರಿ ವರ್ಗದವರನ್ನು ನಿರಾಕರಿಸಿದರು. ಕ್ಯಾಥೋಲಿಕ್ ಬೈಬಲ್ಲು ಜನಸಾಮಾನ್ಯರಿಗೆ ಅರ್ಥವಾಗದ ಲ್ಯಾಟಿನ್ನಿನಲ್ಲಿ ಇತ್ತು, ಪ್ರೊಟೆಸ್ಟಾಂಟರು ಅದನ್ನು ಪ್ರಾದೇಶೀಕ ಭಾಷೆಗಳಿಗೆ ತರ್ಜುಮೆ ಮಾಡಿದರು. ಪ್ರೀಸ್ಟ್‌ಗಳ ಮೂಲಕವೇ ರಿಲಿಜನ್ನಿನ ಆಚರಣೆಗಳನ್ನು ನಡೆಸಬೇಕು ಎಂಬ ಕಟ್ಟಳೆಯನ್ನು ಮುರಿದರು. ಪ್ರತಿಯೊಬ್ಬ ವ್ಯಕ್ತಿಯ ದೇಹವೇ ಚರ್ಚು, ಪ್ರತಿಯೊಬ್ಬನೂ ಪ್ರೀಸ್ಟು ಎಂದು ಪ್ರತಿಪಾದಿಸಿ ಗಾಡ್‌ನನ್ನು ಸೇರಲು ಚರ್ಚು ಹಾಗೂ ಪ್ರೀಸ್ಟ್‌ಗಳ ಮಧ್ಯವರ್ತಿತ್ವವನ್ನು ನಿರಾಕರಿಸಿದರು. ಇವೆಲ್ಲ ಸುಧಾರಣೆಗಳೇಕೆಂದರೆ ಅದು ಭ್ರಷ್ಟವಾಗಿ ಹೋಗಿದ್ದ ರಿಲಿಜನ್ನಿನ ಸತ್ಯ ಶುದ್ಧ ರೂಪವನ್ನು ದೇವವಾಣಿ, ಪವಿತ್ರ ಗ್ರಂಥಗಳ ಬೆಳಕಿನಲ್ಲಿ ಮರು ರೂಪಿಸುವ ಕೆಲಸವಾಗಿದೆ. ಸಂಸ್ಥೆಯನ್ನು ಶುದ್ಧೀಕರಿಸದಿದ್ದರೆ ಉದ್ಧಾರ ಮಾರ್ಗವೇ ನಷ್ಟವಾಗುತ್ತದೆ. ಹಾಗೂ ರಿಲಿಜನ್ನು ಭ್ರಷ್ಟವಾದಾಗ ಸಂಸ್ಥೆಯ ಶುದ್ಧೀಕರಣವೊಂದೇ ಪರ್ಯಾಯ ಮಾರ್ಗ ಎಂದು ರಿಲಿಜನ್ನಿನ ಸುಧಾರಣೆ ತಿಳಿಸುತ್ತದೆ. ಯುರೋಪಿನಲ್ಲಿ ಪ್ರೊಟೆಸ್ಟಾಂಟ್ ಸಾಹಿತ್ಯವು ಇಂಥದ್ದೊಂದು ನಂಬಿಕೆಯನ್ನು ಕಟ್ಟಿಕೊಟ್ಟು, ಕ್ಯಾಥೋಲಿಕ್ ಚರ್ಚು ಹಾಗೂ ಅದರ ಪ್ರೀಸ್ಟ್‌ಗಳ, ಆಚರಣೆಗಳ ಕಟು ಟೀಕೆಯನ್ನು ಮಾಡಿತು.

ಪಾಶ್ಚಾತ್ಯ ವಿದ್ವಾಂಸರು ಭಾರತದಲ್ಲಿ ಕೂಡ ಒಂದು ಕಾಲದಲ್ಲಿ ಶುದ್ಧವಾದ ರಿಲಿಜನ್ನಿತ್ತು, ನಂತರ ಅದು ಭ್ರಷ್ಟವಾಗುವ ಪ್ರಕ್ರಿಯೆ ಇತಿಹಾಸದುದ್ದಕ್ಕೂ ನಡೆದಿದೆ ಹಾಗೂ ಅದನ್ನು ಸುಧಾರಿಸುವ ಪ್ರಯತ್ನ ಕೂಡ ಇತಿಹಾಸದುದ್ದಕ್ಕೂ ನಡೆಯಿತು ಎಂದು ಭಾವಿಸಿದರು. ಅದಕ್ಕೆ ಮುಖ್ಯ ಕಾರಣವೆಂದರೆ ಹಿಂದೂಯಿಸಂನ ಪವಿತ್ರ ಗ್ರಂಥಗಳೆಂದು ಭಾವಿಸಲಾದ ವೇದಗಳನ್ನು, ಅದರ ಪ್ರೀಸ್ಟ್‌ಗಳೆಂದು ಭಾವಿಸಲಾದ ಬ್ರಾಹ್ಮಣರನ್ನು, ಅವರ ಆಚರಣೆಗಳನ್ನು ಟೀಕಿಸುವ ಸಂಪ್ರದಾಯಗಳು ಹಾಗೂ ಸಾಹಿತ್ಯ ಅವರಿಗೆ ಇಲ್ಲಿ ಸಿಕ್ಕಿದವು. ಮೊದಲು ಜೈನ, ನಂತರ ಬೌದ್ಧ, ವೀರಶೈವ ಹೀಗೆ ಒಂದಾದ ಮೇಲೆ ಒಂದು ಅವರಿಗೆ ಕಂಡುಬಂದವು. ಆ ಮೂಲಕ ಇಲ್ಲೂ ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟಾಂಟ್ ರಿಲಿಜನ್ನುಗಳು ಅವತರಿಸಿದವು. ವೈದಿಕ ಯಜ್ಞಯಾಗಗಳು, ಪ್ರಾಣಿಬಲಿ, ಬ್ರಾಹ್ಮಣರು, ವೇದಗಳು, ಸಂಸ್ಕೃತ, ವರ್ಣವ್ಯವಸ್ಥೆ ಇತ್ಯಾದಿ ಲಕ್ಷಣಗಳು ಈ ಭಾರತೀಯ ಕ್ಯಾಥೋಲಿಕ್ ರಿಲಿಜನ್ನಿನ ಲಕ್ಷಣಗಳಾದವು. ಹಾಗೂ ಇವೆಲ್ಲವನ್ನೂ ನಿರಾಕರಿಸುವ ಚಳವಳಿಗಳು ಇಲ್ಲೂ ನಡೆದಿದ್ದವೆಂಬ ಅನಿಸಿಕೆಗೆ ಸಾಹಿತ್ಯದ ಕೆಲವು ಟೀಕೆಗಳು, ಹೇಳಿಕೆಗಳು ಸಾಕ್ಷಿಯಾಗಿ ಕಂಡವು. ಆದರೆ ಭಾರತದಲ್ಲಿ ಬೌದ್ಧ, ಜೈನ ಪರಂಪರೆಗಳಾಗಲೀ, ಭಕ್ತಿ ಸಂಪ್ರದಾಯಗಳಾಗಲೀ ಯಾವ ರಿಲಿಜನ್ನನ್ನು ಹಾಗೂ ಅದರ ಸಂಸ್ಥೆಗಳನ್ನು ಶುದ್ಧೀಕರಿಸುವ ಚಳವಳಿಗಳು ಎಂಬುದು ಈ ಯಾವ ಅಧ್ಯಯನಗಳಲ್ಲೂ ಸ್ಪಷ್ಟವಿಲ್ಲ. ಅವು ವೈದಿಕ ರಿಲಿಜನ್ನನ್ನು ಶುದ್ಧೀಕರಿಸುವ ಚಳವಳಿಗಳೆ? ಅವು ವೇದವನ್ನೇ ನಿರಾಕರಿಸುತ್ತವೆ ಎನ್ನಲಾಗಿದೆ. ಯುರೋಪಿನಲ್ಲಿ ಪ್ರೊಟೆಸ್ಟಾಂಟರು ಕ್ಯಾಥೋಲಿಕ್ ಚರ್ಚನ್ನು ವಿರೋಧಿಸಿದರೂ ಕೂಡ ಅದು ಎತ್ತಿಹಿಡಿದ ಗಾಡ್ ಅಥವಾ ಬೈಬಲ್ಲನ್ನು ಅಲ್ಲಗಳೆಯಲಿಲ್ಲ. ಅವುಗಳ ಸತ್ಯವಾದ ರೂಪವನ್ನು ಸ್ಥಾಪಿಸುವುದೇ ಪ್ರೊಟೆಸ್ಟಾಂಟರ ಗುರಿಯಾಗಿತ್ತು. ಅವು ಮೂಲತಃ ಸತ್ಯ, ಆದರೆ ತಪ್ಪಾಗಿ ಅರ್ಥೈಸಲ್ಪಟ್ಟು ಆಚರಣೆಯಲ್ಲಿವೆ ಎಂದು ಪ್ರತಿಪಾದಿಸಿಯೇ ಚಳವಳಿ ನಡೆಸಿದರು, ಹಾಗಾಗಿ ಅದನ್ನು ಕ್ರಿಶ್ಚಿಯಾನಿಟಿಯ ಸುಧಾರಣೆ ಎಂದರೆ ಅದು ಅರ್ಥಮಾಡಿಕೊಳ್ಳಲಾಗದ ಒಗಟೇನೂ ಅಲ್ಲ. ಆದರೆ ಭಾರತೀಯ ಪ್ರೊಟೆಸ್ಟಾಂಟರು ವೇದವನ್ನೇ, ಅದರ ದೇವತೆಗಳನ್ನೇ ನಿರಾಕರಿಸಿದರೆ, ಮತ್ಯಾವ ಸತ್ಯವಾದ ರಿಲಿಜನ್ನನ್ನು ಹಾಗೂ ಪವಿತ್ರಗ್ರಂಥವನ್ನು ಸ್ಥಾಪಿಸಲು ಚಳವಳಿ ಮಾಡಿದರು? ಯಾವ ಸಂಸ್ಥೆಯನ್ನು ಶುದ್ಧೀಕರಿಸಲು ಪ್ರಯತ್ನಿಸಿದರು? ಮತ್ಯಾವ ಗಾಡ್‌ನ ಜೊತೆಗೆ ಅನುಬಂಧವನ್ನು

ಸ್ಥಾಪಿಸಲು ಹೋರಾಟ ನಡೆಸಿದರು? ಅವು ಪ್ರೊಟೆಸ್ಟಾಂಟ್ ಚಳವಳಿಗಳೇ ಆಗಿದ್ದರೆ ಈ ಪ್ರಶ್ನೆಗಳಿಗೆ ಖಚಿತ ಉತ್ತರ ದೊರಕುತ್ತಿತ್ತು. ಆದರೆ ಇವು ಉತ್ತರವಿಲ್ಲದ ಪ್ರಶ್ನೆಗಳು. ಏಕೆಂದರೆ ಭಾರತದಲ್ಲಿ ಹಾಗೆ ಸುಧಾರಣೆಗೆ ಕಾದುಕೊಂಡ ದೇಶೀ ರಿಲಿಜನ್ನಾಗಲೀ, ಚರ್ಚಾಗಲೀ, ಪ್ರೀಸ್ಟ್‌ಗಳಾಗಲೀ ಇರಲಿಲ್ಲ.

3. ಕಲಿಕೆಯ ಸ್ಥಳಗಳು: ಒಂದು ಊಹೆ

ಭಕ್ತಿ ಸಾಹಿತ್ಯದಲ್ಲಿ ಬ್ರಾಹ್ಮಣರ, ವೇದಗಳ, ಯಜ್ಞಗಳ ಟೀಕೆಗಳು ಏಕೆ ಕಾಣಿಸಿಕೊಳ್ಳುತ್ತವೆ? ಎಂಬ ಪ್ರಶ್ನೆಗೆ ನಾವು ಈ ಮೇಲಿನ ವಾಸ್ತವವನ್ನು ಗಮನದಲ್ಲಿಟ್ಟುಕೊಂಡೇ ವಿವರಿಸಬೇಕಾಗುತ್ತದೆ. ಭಾರತದಲ್ಲಿ ಭ್ರಷ್ಟ ರಿಲಿಜನ್ನು ಇಲ್ಲದಿದ್ದರೆ ಮತ್ತೇಕೆ ಈ ಟೀಕೆಗಳು? ಈಗಾಗಲೇ ತಿಳಿಸಿದಂತೆ ಈ ಟೀಕೆಗಳು ಪ್ರೊಟೆಸ್ಟಾಂಟ್ ಸಾಹಿತ್ಯ ಎಂದು ಭಾವಿಸಿದಾಗ ಇಂಥ ಪ್ರಶ್ನೆಗಳು ಏಳುತ್ತವೆ. ಆದರೆ ಒಂದೊಮ್ಮೆ ಅದೇ ಸತ್ಯವಾಗಿದ್ದರೆ ಅದೇ ಸಾಹಿತ್ಯವು ಹಾಗೂ ಅದೇ ಲೇಖಕನು ವೇದ, ಬ್ರಾಹ್ಮಣ ಇತ್ಯಾದಿಗಳನ್ನು ಪ್ರಶಂಸಿಸುವ ಸಾಲುಗಳೂ ಏಕೆ ಸಿಗುತ್ತವೆ? ಎಂಬ ಪ್ರಶ್ನೆಗೆ ಉತ್ತರ ಸಾಧ್ಯವಿಲ್ಲ. ಅದನ್ನು ಉತ್ತರಿಸುವ ನಿಟ್ಟಿನಲ್ಲಿ ಭಕ್ತರು ಸಂಚುಗಾರರು, ಇಲ್ಲ ಸಂಚಿಗೆ ಒಳಗಾದ ಅಮಾಯಕರು, ಇಲ್ಲ ಅವು ನಂತರದ ಪ್ರಕ್ಷಿಪ್ತ ಎಂದೆಲ್ಲ ಅಸಂಬದ್ಧ ನಿರ್ಣಯಗಳಿಗೆ ಬರಬೇಕಾಗುತ್ತದೆ ಎಂಬುದನ್ನೂ ನೋಡಿದ್ದೇವೆ. ಅಂದರೆ ಭಕ್ತರ ಕುರಿತು ಇಂಥ ವಿರೋಧಾಭಾಸಗಳು ಏಳದಂತೆ ಅವರನ್ನು ಪ್ರೌಢ ವಿಚಾರವಂತರೆಂದು, ಸದುದ್ದೇಶವುಳ್ಳವರೆಂದು ಭಾವಿಸಿ ಅವರ ಎಲ್ಲಾ ಸಾಲುಗಳನ್ನೂ ಸುಸಂಗತವಾಗಿ ಅರ್ಥೈಸುವ ಅನ್ಯ ಮಾರ್ಗವನ್ನು ಶೋಧಿಸುವ ಜರೂರಿದೆ ಅಂತಾಯಿತು. ಈ ನಿಟ್ಟಿನಲ್ಲಿ ಪ್ರಸ್ತುತ ಲೇಖನವು ವಿದ್ವಾಂಸರ ಅವಗಾಹನೆಗಾಗಿ ಒಂದು ಊಹೆಯನ್ನು ಮಂಡಿಸಿ ಚರ್ಚೆಯನ್ನು ಪ್ರಾರಂಭಿಸಬಯಸುತ್ತದೆ. ಅದೆಂದರೆ ಇಂಥ ಟೀಕೆಗಳು ಸಂಸ್ಥೆಗಳನ್ನು ಸುಧಾರಿಸುವ ಉದ್ದೇಶದಿಂದ ಹುಟ್ಟಿಕೊಂಡದ್ದಲ್ಲ. ಬದಲಾಗಿ ಇಂಥ ಟೀಕೆಗಳು ಈ ಮಾರ್ಗದಲ್ಲಿ ಮುನ್ನಡೆಯುವವರಿಗೆ ಹಾಗೂ ಸಾಧಕರಿಗೆ ಕಲಿಕೆಯ ಸ್ಥಳಗಳಾಗಿದ್ದವು. ಯಾವ ರೀತಿಯ ಆಚರಣೆ ನಮ್ಮನ್ನು ಗುರಿ ತಲುಪಿಸುತ್ತದೆ ಎಂಬುದನ್ನು ಕಲಿಯುವುದು ಅವುಗಳ ಉದ್ದೇಶ. ಇಂಥ ಟೀಕೆಗಳು ಭಾರತೀಯ ಸಂಪ್ರದಾಯಗಳಲ್ಲಿ ಆಧ್ಯಾತ್ಮಿಕ ಕಲಿಕೆಗೆ ಸಾಧನಗಳಾಗಿವೆ. ಹಾಗಾಗಿ ಈ ಸಂಪ್ರದಾಯಗಳಲ್ಲಿ ಅಂಥ ಟೀಕೆಗಳ ರಾಶೀಯೇ ಬಿದ್ದಿದೆ. ಅವು ಕೇವಲ ಪ್ರೊಟೆಸ್ಟಾಂಟ ಚಳವಳಿಗಳೆಂದು ಗುರುತಿಸಿದ ಸಂಪ್ರದಾಯಗಳಲ್ಲಷ್ಟೇ ಅಲ್ಲ, ಭ್ರಷ್ಟ ಹಿಂದೂಯಿಸಂ ಎಂದು ಗುರುತಿಸಿದ ಸಂಪ್ರದಾಯಗಳ ಸಾಹಿತ್ಯದಲ್ಲೂ ಅಷ್ಟೇ ವಿಫುಲವಾಗಿ ಸಿಗುತ್ತವೆ. ಅವು ಆಧ್ಯಾತ್ಮ ಪಂಥಗಳಲ್ಲಿ ಜ್ಞಾನವನ್ನು ಸಂವಹಿಸುವ ಹಾಗೂ ಆಚರಣೆಗಳನ್ನು ಕಲಿಸುವ ತಂತ್ರಗಾರಿಕೆಯ ಭಾಗಗಳಾಗಿವೆ. ಭಾರತೀಯರಿಗೆ ಇಂದಿಗೂ ಇದೊಂದು ವಾಸ್ತವವಾಗಿರುವುದರಿಂದ ನಾನು ಉಲ್ಲೇಖಿಸುವ ಸಂಗತಿಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ಕೆಳಗೆ ಕೆಲವು ದೃಷ್ಟಾಂತಗಳನ್ನು ನೀಡುವ ಮೂಲಕ ನನ್ನ ವಾದವನ್ನು ಮನದಟ್ಟು ಮಾಡಲು ಪ್ರಯತ್ನಿಸುತ್ತೇನೆ:

3 ಅ. ಬ್ರಾಹ್ಮಣರ ಹಾಗೂ ಅವರ ಆಚರಣೆಗಳ ವಿರುದ್ಧ ಟೀಕೆಯ ಕುರಿತು

ಭಾರತೀಯ ಇತಿಹಾಸಕಾರರು ನಮಗೆ ತಿಳಿಸುವ ಪ್ರಕಾರ ಭಾರತದಲ್ಲಿ ಸಾಂಪ್ರದಾಯಿಕ ಪುರೋಹಿತಶಾಹಿ ಹಾಗೂ ಅದರ ಪ್ರತಿಪಾದನೆಗಳನ್ನು ಅಲ್ಲಗಳೆದ ಹೆರೆಟಿಕ್ ಪಂಥಗಳು ಇದ್ದವು: ಉದಾಹರಣೆಗೆ ಬೌದ್ಧರು, ಜೈನರು, ಆಜೀವಿಕರು, ಲೋಕಾಯತರು, ಇತ್ಯಾದಿ. ವೇದಗಳ ಹಾಗೂ ಬ್ರಾಹ್ಮಣರ ಕುರಿತ ಪ್ರಶ್ನೆಗಳು ಹಾಗೂ ಟೀಕೆಗಳೇ ಇದಕ್ಕೆ ಆಧಾರ. ಆದರೆ ಎರಡು ಮುಖ್ಯ ಕಾರಣಗಳಿಗಾಗಿ ಭಾರತೀಯ ಸಂಪ್ರದಾಯಗಳ ಇಂಥ ಪ್ರಶ್ನೆಗಳಿಗೂ ಹೆರೆಸಿಗೂ ಸಂಬಂಧವಿಲ್ಲ. 1. ಹೆರೆಟಿಕ್‌ಗಳೆಂದರೆ ಒಂದು ರಿಲಿಜನ್ನಿನ ಸ್ಥಾಪಿತವಾದ

ಡಾಕ್ಟ್ರಿನ್‌ಗಳನ್ನು ಅಲ್ಲಗಳೆದವರು. ಅಂದರೆ ಒಂದು ರಿಲಿಜನ್ನಿನ ಪವಿತ್ರ ಗ್ರಂಥದ ಸ್ಥಾಪಿತ ನಿರೂಪಣೆಯನ್ನು ಅಲ್ಲಗಳೆದು ಆ ರಿಲಿಜನ್ನಿನ ಕುರಿತು ತಮ್ಮದೇ ನಿರೂಪಣೆಗಳನ್ನು ಪ್ರತಿಪಾದಿಸುವವರು. ಹಾಗೆ ಮಾಡುತ್ತ ರಿಲಿಜನ್ನಿನಲ್ಲಿ ಸೆಕ್ಟ್ (ವಿಭಾಗ) ಹುಟ್ಟಿಕೊಳ್ಳುತ್ತದೆ. ಇಂಥ ಪಂಥಗಳನ್ನು ಹೆರೆಟಿಕ್ ಸೆಕ್ಟ್‌ಗಳೆಂದು ಪಾಶ್ಚಾತ್ಯ ರಿಲಿಜನ್ನಿನ ಇತಿಹಾಸಕಾರರು ಗುರುತಿಸುತ್ತಾರೆ. ಅವನ್ನು ಹಿಂದೂಯಿಸಂನಲ್ಲೂ ಗುರುತಿಸಲಾಯಿತು. ಆದರೆ ಭಾರತದಲ್ಲಿ ಈ ಇತಿಹಾಸಕಾರರು ಹೆರೆಟಿಕ್ ಎಂದು ಕರೆಯುವ ಯಾವ ಪಂಥವೂ ವೇದಗಳ ನಿರೂಪಣೆಯನ್ನು ತಪ್ಪಾಗಿ ಮಾಡಲಾಗಿದೆ ಎಂದು ಭಾವಿಸಿ ಅದರ ಸರಿಯಾದ ನಿರೂಪಣೆಯನ್ನು ಮಾಡುವ ಉದ್ದೇಶದಿಂದ ಹುಟ್ಟಿಕೊಂಡದ್ದಲ್ಲ, ಅಥವಾ ವೇದಗಳನ್ನು ಅಲ್ಲಗಳೆಯಲು ಹುಟ್ಟಿಕೊಂಡವುಗಳೂ ಅಲ್ಲ. ಅವು ವೈದಿಕ ರಿಲಿಜನ್ನಿನ ವಿಭಾಗಗಳಲ್ಲ. ಹಾಗಾಗಿ ಅವು ಸೆಕ್ಟ್‌ಗಳೂ ಅಲ್ಲ. ಅವು ಪ್ರತ್ಯೇಕ ಮುಕ್ತಿ ಮಾರ್ಗ ಅಥವಾ ಪಂಥಗಳು. ಸತ್ಯವನ್ನು ತಲುಪಲು ಒಂದೇ ದೇವವಾಣಿ ಇರಬೇಕು ಎಂದು ನಂಬಿದ ರಿಲಿಜನ್ನುಗಳಲ್ಲಿ ಹೆರೆಸಿ ಹುಟ್ಟಿಕೊಳ್ಳುತ್ತದೆ. ಆದರೆ ಸತ್ಯವನ್ನು ತಲುಪಲು ಹಲವು ಮಾರ್ಗಗಳು ಇರುತ್ತವೆ ಎಂದು ಪ್ರತಿಪಾದಿಸುವ ಭಾರತದ ಈ ಪಂಥಗಳಿಗೆ ಹೆರೆಸಿ ಎಂಬ ಕಲ್ಪನೆ ಹೊಂದುವುದಿಲ್ಲ.
2. ಭಾರತದಲ್ಲಿ ನಿಜವಾದ ಬ್ರಾಹ್ಮಣ ಯಾರು ಎಂಬ ಪ್ರಶ್ನೆಯನ್ನು ಕೇವಲ ನಾಸ್ತಿಕ, ಅವೈದಿಕ ಪಂಥಗಳು ಮಾತ್ರ ಕೇಳಿಲ್ಲ, ವೈದಿಕ ಪಂಥಗಳೂ ಕೇಳಿದ್ದವು (ಹೆಗಡೆ 2014). ಅದರ ಸಂದರ್ಭ ಆಧ್ಯಾತ್ಮವೇ ಹೊರತೂ ಪಂಥ ವೈರವಲ್ಲ. ಈ ಪಂಥಗಳಿಗೆ ಬ್ರಾಹ್ಮಣ ಆಚರಣೆಗಳ ಟೀಕೆ, ಹಾಗೂ ಬ್ರಾಹ್ಮಣ ಪರಿಕಲ್ಪನೆಯ ಅರ್ಥದ ನಿಷ್ಕರ್ಷೆ ಬೇರೆ ಕಾರಣಗಳಿಗಾಗಿ ಮುಖ್ಯವಾಗಿತ್ತು ಎಂಬುದನ್ನು ಇದು ಸೂಚಿಸಬಹುದು.

ಭಾರತದಲ್ಲಿ ಪಾರಮಾರ್ಥಿಕ ಸತ್ಯವನ್ನು ಅರಸಿದ ಎಲ್ಲಾ ಸಂಪ್ರದಾಯಗಳು ಕೇಳಿದ ಒಂದು ಪ್ರಶ್ನೆಯೆಂದರೆ ನಿಜವಾದ ಬ್ರಾಹ್ಮಣನೆಂದರೆ ಯಾರು? ಬ್ರಾಹ್ಮಣನೆಂದರೆ ಬ್ರಹ್ಮಜ್ಞಾನವನ್ನು ಹೊಂದಿದವನು, ಪ್ರಾಪಂಚಿಕತೆಯಿಂದ ಮುಕ್ತನಾದವನು, ಎಂಬ ಅರ್ಥವನ್ನು ಒಪ್ಪಿಕೊಂಡರೆ ಲೌಕಿಕವಾಗಿ ಅಂಥವರನ್ನು ಗುರುತಿಸುವುದು ಹೇಗೆ ಎಂಬ ಪ್ರಶ್ನೆ ಏಳುತ್ತದೆ. ಬ್ರಾಹ್ಮಣರೆಂದು ಕರೆದುಕೊಂಡಷ್ಟಕ್ಕೆ, ಆ ಜಾತಿ, ವರ್ಣ ಹಾಗೂ ಬ್ರಾಹ್ಮಣ ಆಚರಣೆ ಮತ್ತು ಸಂಪ್ರದಾಯಗಳನ್ನು ಹೊಂದಿದಷ್ಟಕ್ಕೆ ಅವರು ಬ್ರಹ್ಮತ್ವವನ್ನು ಹೊಂದಿಬಿಡುವುದಿಲ್ಲ. ವಾಸ್ತವ ಹೀಗಿರುವಾಗ ಬ್ರಹ್ಮಜ್ಞಾನಿಯನ್ನು ಗುರುತಿಸುವುದು ಹೇಗೆ, ಆ ಅವಸ್ಥೆಯನ್ನು ತಲುಪುವುದು ಹೇಗೆ ಎಂಬ ಪ್ರಶ್ನೆ ಸ್ವತಃ ಬ್ರಾಹ್ಮಣ ಸಂಪ್ರದಾಯಗಳಿಗೇ ಯಕ್ಷ ಪ್ರಶ್ನೆಯಾಗಿ ಕಾಡಿತ್ತು. ಅಂಥದ್ದೇ ಗುರಿಯನ್ನು ಅರಸಿದ ಬೌದ್ಧರು ಕೂಡ ಈ ಪ್ರಶ್ನೆಯನ್ನು ಕೇಳಿದ್ದರು, ವೀರಶೈವರು ಕೂಡ ಇದನ್ನು ಕೇಳಿದ್ದರು. ಅವರು ಬ್ರಾಹ್ಮಣ ಶಬ್ದವನ್ನು ತಮ್ಮ ಸಂದರ್ಭಕ್ಕೆ ನಿರೂಪಿಸಿಕೊಳ್ಳಲು, ಅನ್ವಯಿಸಿಕೊಳ್ಳಲು ಪ್ರಯತ್ನಿಸಿದ್ದರು. ಲೌಕಿಕ ಬ್ರಾಹ್ಮಣರ ನಿರರ್ಥಕ ಆಚರಣೆಗಳ ಕುರಿತು ಟೀಕೆಗಳು ಕೂಡ ಇದೇ ಸಂದರ್ಭದಲ್ಲೇ ಮಹತ್ವ ಪಡೆಯುತ್ತವೆ. ಇಂಥ ಪ್ರಶ್ನೆಗಳನ್ನು ಹಾಗೂ ಟೀಕೆಗಳನ್ನು ಬ್ರಾಹ್ಮಣ ಪುರೋಹಿತಶಾಹಿಯ ವಿರುದ್ಧದ ಬಂಡಾಯವೆಂಬುದಾಗಿ ಭಾವಿಸಲಾಗಿದೆ.

ಉದಾಹರಣೆಗೆ ಬೌದ್ಧ ತಿಪಿಟಕಗಳಲ್ಲಿ ಅವು ಕಾಣಿಸಿಕೊಳ್ಳುತ್ತವೆ. ಬುದ್ಧನ ಸಂಭಾಷಣೆಯಲ್ಲಿ ಸೋನದಂಡ ಸುತ್ತದಂಥ ಭಾಗಗಳಲ್ಲಿ ಈ ಪ್ರಶ್ನೆ ಏಳುವುದನ್ನು ನೋಡುತ್ತೇವೆ. ಬೌದ್ಧರದೇ ಆದ ವಜ್ರಸೂಚಿ ಎಂಬ ಕೃತಿಯು ಸಂಪೂರ್ಣವಾಗಿ ಈ ನಿಷ್ಕರ್ಷೆಗಾಗಿಯೇ ರಚನೆಯಾಗಿದೆ. ಇಂಥ ಭಾಗಗಳನ್ನು ಆಧರಿಸಿ ಬುದ್ಧನನ್ನು ಕೆಲವು ಪಾಶ್ಚಾತ್ಯ ವಿದ್ವಾಂಸರು ಪೂರ್ವದ ಮಾರ್ಟಿನ್ ಲೂಥರ್ ಎಂದು ಕರೆದರು. ಬಾಲಗಂಗಾಧರ ಅವರು ಈ ಗ್ರಹಿಕೆಯು ಪ್ರಭೇದ ದೋಷದಿಂದ ಹುಟ್ಟಿದೆ ಎಂಬುದಾಗಿ

ವಾದಿಸುತ್ತಾರೆ(ಬಾಲಗಂಗಾದರ 2005:2017–217). ಅವರು ಇದನ್ನು ಬ್ರಾಹ್ಮಣ ಹಾಗೂ ಶ್ರಮಣ ಸಂಪ್ರದಾಯಗಳ ಸಂದರ್ಭದಲ್ಲಿ ಇಟ್ಟು ಅರ್ಥೈಸಬೇಕೆನ್ನುತ್ತಾರೆ. ಏಕೆಂದರೆ ಇಂಥ ಭಾಗಗಳು ನಿಜವಾದ ಬ್ರಾಹ್ಮಣ ಯಾರು ಎಂಬುದನ್ನು ನಿಷ್ಕರ್ಷಿಸುತ್ತವೆಯೇ ಹೊರತೂ ಬ್ರಾಹ್ಮಣ ಪರಿಕಲ್ಪನೆಯನ್ನೇ ತಿರಸ್ಕರಿಸಬೇಕೆನ್ನುವುದಿಲ್ಲ ಹಾಗೂ ಬುದ್ಧನು ವರ್ಣ ಕಲ್ಪನೆಯನ್ನು ತಿರಸ್ಕರಿಸುವುದಿಲ್ಲ. ಇತ್ತೀಚೆಗೆ ಫಾರೆಕ್ ಅವರು ಚೈತನ್ಯ ಭಕ್ತಿ ಸಂಪ್ರದಾಯದಲ್ಲಿ ಉಲ್ಲೇಖವಾಗುವ ಬ್ರಾಹ್ಮಣ ಪರಿಕಲ್ಪನೆಯನ್ನು ವಿಶ್ಲೇಷಿಸುತ್ತ ಅದಕ್ಕೆ ಭಾರತೀಯ ಭಕ್ತಿ ಸಾಹಿತ್ಯದಲ್ಲಿ ಯಾವ ಸಂದರ್ಭವಿದೆ ಎಂಬುದನ್ನು ನಿಷ್ಕರ್ಷಿಸುತ್ತಾರೆ (ಫಾರೆಕ್ 2016). ಪ್ರಾದೇಶಿಕ ಭಾಷೆಗಳ ಭಕ್ತಿ ಸಾಹಿತ್ಯದಲ್ಲಿಯಾಗಲೀ, ಪಾಳಿ ಭಾಷೆಯಲ್ಲಾಗಲೀ ಬರುವ ಇಂಥ ಚರ್ಚೆಗಳು ಉಪನಿಷತ್ತು ಹಾಗೂ ಮಹಾಭಾರತದಂಥ ಸಂಸ್ಕೃತ ಗ್ರಂಥಗಳಲ್ಲಿ ಬರುವ ಚರ್ಚೆಗಳಿಗಿಂತ ಮೂಲಭೂತವಾಗಿ ಬೇರೆಯಲ್ಲ.

ಇಂಥ ಟೀಕೆಗಳು ಯಾವುದೋ ಅನ್ಯ ಪಂಥದ ವಿರುದ್ಧರ ಪ್ರತಿಭಟನೆಗಳು ಎನ್ನುವುದಕ್ಕಿಂತ ಆಯಾ ಪಂಥಗಳಲ್ಲಿ ಹೇಗೆ ಗುರಿಯನ್ನು ತಲುಪಬೇಕೆಂಬುದನ್ನು ಕಲಿಯುವ ಸ್ಥಳಗಳಾಗಿದ್ದವು. ಅವು ತಮ್ಮ ಮಾರ್ಗದಲ್ಲಿ ಸಂಭವನೀಯ ತಪ್ಪುಗಳ ಕುರಿತು ಬೆಳೆಸಿಕೊಂಡ ಆಲೋಚನೆಗಳು ಹಾಗೂ ತಪ್ಪು ಆಚರಣೆಗಳ ಕುರಿತ ವಿಮರ್ಶೆಗಳಾಗಿದ್ದವು. ಉದಾಹರಣೆಗೆ ವಚನಗಳು ಶಿವಭಕ್ತಿಯ ಸಂದರ್ಭದಲ್ಲಿ ವೇದಗಳು, ಬ್ರಾಹ್ಮಣರು, ಆಗಮಗಳು, ಪುರಾಣಗಳು ಹಾಗೂ ಬ್ರಾಹ್ಮಣರ ಆಚರಣೆಗಳು ಇತ್ಯಾದಿಗಳ ಕುರಿತು ಟೀಕೆಯನ್ನು ಮಾಡುತ್ತವೆ ಎಂಬುದು ಗಮನದಲ್ಲಿಡಬೇಕಾದ ಸಂಗತಿ. ವೀರಶೈವ ಆಚರಣೆಗಳು ಹಾಗೂ ವಚನಗಳು ಆಗಮಗಳನ್ನಾಧರಿಸಿ ರೂಪುತಳೆದಂಥವುಗಳಾಗಿವೆ. ಆಗಮಗಳಿಗೆ ಒಂದು ಬ್ರಾಹ್ಮಣ ಸಂದರ್ಭವಿದೆ. ಹಾಗಾಗಿ ಶಿವಭಕ್ತಿಗೆ ಈ ಎಲ್ಲಾ ಸಂದರ್ಭಗಳೂ ಇದ್ದವು. ಇವೆಲ್ಲವುಗಳೂ ಶಿವಭಕ್ತಿಗೆ ಸಂಬಂಧಿಸಿದಂತೆ ಅವರಿಗೆ ಮುಖ್ಯವಾಗುತ್ತವೆಯಾದ್ದರಿಂದ ಅವುಗಳ ವಿಮರ್ಶೆಯೂ ಅಷ್ಟೇ ಮುಖ್ಯ.ವಾಯಿತು. ಅವುಗಳಲ್ಲಿ ವೈಷ್ಣವರು, ಜೈನರು ಹಾಗೂ ವೈದಿಕರ ಕುರಿತು ಟೀಕೆಗಳು ಬಂದಿದ್ದರೆ ಅದಕ್ಕೂ ಶಿವಭಕ್ತಿಯ ಸಂದರ್ಭವೇ ಇತ್ತು. ಭವಿಯಾದವನೊಬ್ಬನು ಶಿವಭಕ್ತಿಯ ಪಥದಲ್ಲಿ ಮುನ್ನಡೆಯುವಾಗ ಅದಕ್ಕೆ ಪೂರಕವಲ್ಲದ ಆಚರಣೆಗಳಿಂದ ಹೇಗೆ ಕಳಚಿಕೊಳ್ಳಬೇಕೆಂಬುದು ಇಂಥ ಟೀಕೆಗಳ ಸೂಚನೆಯೇ ವಿನಃ ಜೈನ ವೈಷ್ಣವಾದಿ ಪಂಥಗಳು ಸುಳ್ಳು ಮಾರ್ಗಗಳೆಂದು ಅವುಗಳನ್ನು ತೊಡೆಯುವುದು ವಚನಗಳ ಉದ್ದೇಶವಾಗಿರಲಿಲ್ಲ. ಇಂಥ ವಚನಗಳು ಭೂಮಿಯ ಮೇಲಿನ ಎಲ್ಲಾ ಅನ್ಯ ಪಂಥಗಳೂ ಸುಳ್ಳೆಂಬುದಾಗಿ ಪ್ರತಿಪಾದಿಸಿ ಅವೆಲ್ಲವೂ ವೀರಶೈವವಾಗಿ ಬದಲಾಗಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡಿರಲಿಲ್ಲ. ಅವು ಶಿವಭಕ್ತರ ಸಮುದಾಯದೊಳಗೆ ಅವರ ಮಾರ್ಗದರ್ಶನಕ್ಕಾಗಿ ರಚಿಸಿದ ಕೃತಿಗಳಾಗಿದ್ದವು (ಪ್ರವೀಣ್ 2015 ಮತ್ತು ಶಿವಕುಮಾರ 2015). ಇಂಥ ವಚನಗಳಲ್ಲಿ ಗಣನೀಯ ಸಂಖ್ಯೆಯ ವಚನಗಳು ವೀರಶೈವ ಆಚರಣೆಗಳನ್ನು ಯಾಂತ್ರಿಕವಾಗಿ ಆಚರಿಸುವವರ ಕುರಿತ ಟೀಕೆಗಳಾಗಿವೆ ಎಂಬುದನ್ನು ಗಮನಿಸಿದಾಗ ಅವುಗಳ ಸಂದರ್ಭ ಹೊಲಬಾಗುತ್ತದೆ (ಸಂತೋಷ 2015).

ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಬ್ರಾಹ್ಮಣ ಆಚರಣೆಗಳ ಕುರಿತ ಟೀಕೆಗಳು ಭಕ್ತಿ ಸಾಹಿತ್ಯದಲ್ಲಿ ಕೇವಲ ಬ್ರಾಹ್ಮಣೇತರರಿಂದ ಮಾತ್ರ ಬಂದಿಲ್ಲ. ಬ್ರಾಹ್ಮಣ ಭಕ್ತರ ಸಾಹಿತ್ಯದಲ್ಲೂ ಅಷ್ಟೇ ಪ್ರಖರವಾಗಿ ಬರುತ್ತವೆ. ಇದಕ್ಕಿಂತ ಆಸಕ್ತಿಪೂರ್ಣವಾದ ಸಂಗತಿಯೆಂದರೆ ಬ್ರಾಹ್ಮಣ ಪುರೋಹಿತಶಾಹಿಯ ರಚನೆಯೆಂದು ಪರಿಗಣಿಸಲಾದ ಸಾಹಿತ್ಯದಲ್ಲೂ ಅಂಥವೇ ಮಾತುಗಳು ಕಾಣಿಸಿಕೊಳ್ಳುತ್ತವೆ. ವೇದಕ್ಕೆ ಒರೆಯನಿಕ್ಕುವೆ... ಮುಂತಾದ ಸಾಲುಗಳನ್ನು ಆಧರಿಸಿ ಅವು ಬ್ರಾಹ್ಮಣ ಪುರೋಹಿತಶಾಹಿಯ ಮೌಲ್ಯಗಳನ್ನು

ಧಿಕ್ಕರಿಸುವ ಸಾಲುಗಳು ಎನ್ನಲಾಗುತ್ತದೆ. ಆದರೆ ವೇದಾಂತ ಸಾಹಿತ್ಯವಾದ ಉಪನಿಷತ್ತುಗಳಲ್ಲೇ ಇಂಥ ಟೀಕೆಗಳ ಮೂಲರೂಪಗಳು ಬರುತ್ತವೆ. ಸಂಸ್ಕೃತ ಇತಿಹಾಸ, ಪುರಾಣ, ಮತ್ತು ಆಗಮಗಳಲ್ಲೂ ಇಂಥ ಹೇಳಿಕೆಗಳು ಬರುತ್ತವೆ. ಎಷ್ಟರ ಮಟ್ಟಿಗೆಂದರೆ ಪ್ರಾದೇಶಿಕ ಭಕ್ತಿ ಸಾಹಿತ್ಯದಲ್ಲಿ ಕಂಡುಬರುವ ಇಂಥ ಅನೇಕ ಹೇಳಿಕೆಗಳು ಮೂಲ ಸಂಸ್ಕೃತ ಸಾಹಿತ್ಯದ ಪ್ರಾದೇಶಿಕ ರೂಪಗಳಾಗಿವೆ ಎಂದರೆ ಅತಿಶಯೋಕ್ತಿಯಲ್ಲ. ಅನ್ಯ ಮತಗಳನ್ನು ಬಗ್ಗುಬಡಿದು ಬ್ರಾಹ್ಮಣ ಪುರೋಹಿತಶಾಹಿಯನ್ನು ಸ್ಥಾಪಿಸಿದವರೆಂದು ಪ್ರಗತಿಪರರಿಂದ ಪರಿಗಣಿತರಾಗಿರುವ ಶಂಕರಾಚಾರ್ಯರ ಕೃತಿಗಳು ವೇದ ಹಾಗೂ ಬ್ರಾಹ್ಮಣ ಆಚರಣೆಗಳ ಕುರಿತು ಇವೆಲ್ಲಕ್ಕಿಂತಲೂ ಹೆಚ್ಚಿನ ಕಟುಟೀಕೆಯನ್ನು ಒಳಗೊಂಡಿವೆ ಎನ್ನುವುದು ಇನ್ನೊಂದು ಸೋಜಿಗವಾಗಿದೆ! (ಹೆಗಡೆ 2015:57–62). ಅವರ **ವಿವೇಕ ಚೂಡಾಮಣಿ, ಮಾನಿಷಪಂಚಕ** ಮುಂತಾದವುಗಳನ್ನು ಭಕ್ತಿ ಸಾಹಿತ್ಯವನ್ನು ಓದುವ ದೃಷ್ಟಿಕೋನದಲ್ಲೇ ಓದಿದರೆ ಶಂಕರಾಚಾರ್ಯರು ಕೂಡ ಜಾತಿ ವ್ಯವಸ್ಥೆಯನ್ನು ನಾಶಪಡಿಸುವ ಹೋರಾಟಗಾರರಾಗಿ ಕಾಣಿಸುವುದರಲ್ಲಿ ಆಶ್ಚರ್ಯವಿಲ್ಲ. ಆದರೂ ಶಂಕರಾಚಾರ್ಯರ ಇಂಥ ಸಾಲುಗಳು ಸುಧಾರಣಾವಾದಿಗಳ ಕಣ್ಣಿಗೆ ಏಕೆ ಬಿದ್ದಿಲ್ಲ ಎಂದೂ ಆಶ್ಚರ್ಯವಾಗುತ್ತದೆ. ಸಂಸ್ಕೃತ ಭಾಷೆ ಹಾಗೂ ಬ್ರಾಹ್ಮಣ ವರ್ಣವನ್ನು ಪುರೋಹಿತಶಾಹಿ ಎಂದು ಭಾವಿಸಿರುವ ಕಾರಣದಿಂದಲೇ ಅದು ಕಣ್ಣಿಗೆ ಬಿದ್ದಿಲ್ಲ ಎಂಬುದನ್ನು ಬಿಟ್ಟರೆ ಬೇರೆ ಉತ್ತರಗಳೇನೂ ಕಾಣಿಸುವುದಿಲ್ಲ.

ಈ ಮೇಲಿನ ವಾಸ್ತವವನ್ನು ಗಮನಿಸಿದಾಗ ಭಾರತೀಯ ಆಧ್ಯಾತ್ಮಿಕ ಸಂಪ್ರದಾಯಗಳಲ್ಲಿ ಬ್ರಾಹ್ಮಣರ ಕುರಿತ ಟೀಕೆಗೆ ಬೇರೇನೋ ಮಹತ್ವವಿದೆ ಎನ್ನುವುದು ಸ್ಪಷ್ಟ. ಲೌಕಿಕವಾಗಿ ಇದ್ದಿರಬಹುದಾದ ಬ್ರಾಹ್ಮಣ ಎಂಬ ವರ್ಣ/ಜಾತಿಯ ಗುಂಪು ಹಾಗೂ ಅದರ ಪರಂಪರೆಯನ್ನು ನಿರಾಕರಿಸುವ ಉದ್ದೇಶ ಈ ಟೀಕೆಯಲ್ಲಿ ಇದ್ದ ಪಕ್ಷದಲ್ಲಿ ಬ್ರಾಹ್ಮಣ ಸಂಪ್ರದಾಯಗಳೂ ಖುದ್ದಾಗಿ ಯಾಕೆ ಈ ಟೀಕೆಗಳನ್ನು ಮಾಡಬೇಕು? ಅಂದರೆ ಇದು ಆ ಮಾರ್ಗದಲ್ಲಿ ಸರಿಯಾಗಿ ಸಾಗುವುದನ್ನು ಕಲಿಯುವ ವಿಧಾನವಾಗಿತ್ತು ಎನ್ನುವುದೇ ಹೆಚ್ಚು ಸುಸಂಬದ್ಧವಾಗಿ ಕಾಣುತ್ತದೆ.

3ಆ ಜಾತಿ ಹಾಗೂ ಲಿಂಗ ತಾರತಮ್ಯದ ವಿರುದ್ಧ ಬಂಡಾಯದ ಕುರಿತು

ರಿಲಿಜನ್ನಿನ ಆಚರಣೆಯಲ್ಲಿ ತಾರತಮ್ಯ ಇರಬಾರದು ಎಂಬುದು ಪ್ರೊಟೆಸ್ಟಾಂಟ್ ಪ್ರತಿಪಾದನೆ. ಗಾಡ್ ಪ್ರತೀ ಮನುಷ್ಯನಿಗೂ ರಿಲಿಜನ್ ನೀಡಿ ಎಲ್ಲ ಮಾನವರ ಉದ್ಧಾರದ ಮಾರ್ಗವನ್ನು ಸಮಾನವಾಗಿ ಕಲ್ಪಿಸಿದ್ದಾನೆ. ಕ್ಯಾಥೋಲಿಕರು ಅದರಲ್ಲಿ ತರತಮವನ್ನು ಬೆಳೆಸಿ ರಿಲಿಜನ್ನನ್ನು ಭ್ರಷ್ಟಗೊಳಿಸಿದರು. ಅದು ದೈವೀ ಸಂಕಲ್ಪಕ್ಕೆ ವಿರುದ್ಧವಾದುದರಿಂದ ಅದು ಪಾಪ. ರಿಲಿಜನ್ನಿನ ಸದಸ್ಯರೊಳಗೆ ಜಾತಿ ಮತ್ತು ಲಿಂಗ ತಾರತಮ್ಯ ತೊಡೆಯಬೇಕಾದ ಅನಿಷ್ಟಗಳಾಗುವುದು ಹೀಗೆ. ಅಂದರೆ ಪ್ರೊಟೆಸ್ಟಾಂಟ್ ಚಳವಳಿಯೆನ್ನುವುದು ಕ್ರಿಶ್ಚಿಯನ್ ರಿಲಿಜನ್ನಿನಲ್ಲಿ ತಾರತಮ್ಯಕ್ಕೊಳಗಾದವರು ಸಮಾನತೆಯನ್ನು ಗಳಿಸಿಕೊಳ್ಳುವ ಒಂದು ಹೋರಾಟವಾಗಿದೆ. ಕ್ರಿಶ್ಚಿಯಾನಿಟಿಯ ಆಚೆಗೆ ವರ್ಗಭೇದ, ವರ್ಣಭೇದಗಳಂಥ ಸಂದರ್ಭದಲ್ಲಿ ಈ ಕಾರ್ಯಕ್ರಮವು ಪ್ರೊಟೆಸ್ಟಾಂಟರಿಗೂ ಪ್ರಸ್ತುತವಾಗಿರಲಿಲ್ಲ. ಆದರೆ ಪ್ರೊಟೆಸ್ಟಾಂಟ್ ಕ್ರೈಸ್ತ ನಂಬಿಕೆಗಳನ್ನಾಧರಿಸಿದ ಆಧುನಿಕ ಪಾಶ್ಚಾತ್ಯ ಲಿಬರಲ್ ಚಿಂತನೆಗಳು ಇಂಥ ಸಮಾನತೆಯನ್ನು ಒಂದು ಸಾರ್ವತ್ರಿಕ ಮೌಲ್ಯವೆಂಬುದಾಗಿ ಸ್ವೀಕರಿಸಿದವು. ಹಿಂದೂಯಿಸಂ ಎಂಬ ರಿಲಿಜನ್ನನ್ನು ಕಲ್ಪಿಸಿಕೊಂಡ ಅವರಿಗೆ ಇದರೊಳಗಿರುವ ಜಾತಿ ಭೇದ, ಲಿಂಗಭೇದದ ಆಚರಣೆಗಳು ಅಮಾನವೀಯವಾಗಿ ಕಾಣಿಸಿದವು. ಇದೇ ದೃಷ್ಟಿಕೋನವನ್ನು ಅಳವಡಿಸಿಕೊಂಡ ಭಾರತೀಯ ಸುಧಾರಣಾವಾದಿಗಳಿಗೆ ಕೂಡ ಹಿಂದೂಯಿಸಂ ಸಂದರ್ಭದಲ್ಲಿ ಈ ಎರಡು ಭೇದಗಳು ಮಹಾಪಾಪಗಳಾಗಿ ಕಂಡವು. ಭಕ್ತಿ ಸಾಹಿತ್ಯದೊಳಗೆ

ಈ ಭೇದಗಳನ್ನು ಟೀಕಿಸುವ ಸಾಲುಗಳು ಅವರಿಗೆ ತಮ್ಮದೇ ಪ್ರತಿಪಾದನೆಯಂತೆ ಕಂಡಿರುವುದರಲ್ಲಿ ಆಶ್ಚರ್ಯವಿಲ್ಲ.

ಆದರೆ ಭಾರತೀಯ ಸಂದರ್ಭದಲ್ಲಿ ಭಕ್ತಿಸಾಹಿತ್ಯವನ್ನು ಇಟ್ಟು ನೋಡಿದಾಗ ಕಾಣುವುದೇನು? ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗುವವನು ಅಹಂಕಾರ ಮಮಕಾರಗಳಿಂದ ಮುಕ್ತನಾಗಬೇಕೆಂಬುದಾಗಿ ಈ ಮಾರ್ಗಗಳು ತಿಳಿಸುತ್ತವೆ. ಜಾತಿ, ಕುಲ, ಸಂಪತ್ತು, ಯೌವನ, ಸೌಂದರ್ಯ, ಕೀರ್ತಿ ಮುಂತಾದವುಗಳಿಂದ ವಿಚಲಿತನಾಗದೇ ಸಮದೃಷ್ಟಿಯನ್ನು ಬೆಳೆಸಿಕೊಳ್ಳುವುದು ಇಂಥ ಮಾರ್ಗಗಳಲ್ಲಿ ಗುರಿ ತಲುಪಲು ಅತ್ಯಗತ್ಯ. ಈ ಸಂದರ್ಭದಲ್ಲಿ ಜಾತಿ ಕುಲಗಳ ಪ್ರಭೇದಗಳಿಂದ ಜಗತ್ತನ್ನು ನೋಡುವ ದೃಷ್ಟಿ ಅಳಿಯಬೇಕು ಎಂಬುದಾಗಿ ಈ ಸಾಹಿತ್ಯ ಪ್ರತಿಪಾದಿಸುತ್ತದೆ. ಕೇವಲ ಜಾತಿ ಕುಲ ಇತ್ಯಾದಿಗಳು ಮಾತ್ರವಲ್ಲ, ಶ್ರೇಷ್ಠ-ಕನಿಷ್ಠ ಪುಣ್ಯ-ಪಾಪ, ಮೇಲು-ಕೀಳು ಕೀರ್ತಿ-ಅಪಕೀರ್ತಿ ಇತ್ಯಾದಿ ವಿಭಾಗಗಳೂ ಅಂಥವನಲ್ಲಿ ಅಳಿಯಬೇಕು ಎನ್ನುತ್ತವೆ. ಹಾಗೆ ಹೊರಬಂದವನಿಗೆ ಮಾತ್ರವೇ ಆತ್ಮಜ್ಞಾನ ಸಾಧ್ಯ. ಅಂಥ ಜ್ಞಾನಿಯಲ್ಲಿ ಸಮದರ್ಶನ ಇರುತ್ತದೆ. ಅಂದರೆ ಅವನು ಎಲ್ಲರನ್ನೂ, ಎಲ್ಲವನ್ನೂ ಒಂದೇ ರೀತಿಯಲ್ಲಿ ನೋಡುತ್ತಾನೆ.

ಕೇವಲ ಪ್ರಾದೇಶೀಕ ಭಾಷೆಯಲ್ಲಿ ಮಾತ್ರವಲ್ಲ, ಅದಕ್ಕೂ ಪೂರ್ವದ ಸಂಸ್ಕೃತದ ಪುರಾಣಾಗಮಗಳಲ್ಲೂ ಕೂಡ ಭಕ್ತಿಯ ಸಂದರ್ಭದಲ್ಲಿ ಜಾತಿ ಪರಿಗಣಿಸಬೇಕಾದ ಸಂಗತಿಯಾಗಿರಲಿಲ್ಲ. ಅವು ಅದೊಂದು ಅಜ್ಞಾನ ಎನ್ನುತ್ತವೆ. ಶಿವ, ವಿಷ್ಣು ಅಥವಾ ಇಂಥವೇ ಇತರ ದೇವತೆಗಳ ಆರಾಧನೆಯಲ್ಲಿ ಭಕ್ತನಾಗಿರದ ಬ್ರಾಹ್ಮಣನಿಗಿಂತ, ಭಕ್ತನಾದ ಚಾಂಡಾಲನೇ ಪರಮಾತ್ಮನಿಗೆ ಪ್ರಿಯನಾದವನು ಎನ್ನುತ್ತವೆ ಅವು. ಹೀಗೆ ಭಕ್ತಿ ಪಂಥಗಳು ಪ್ರಾರಂಭದಿಂದಲೂ ಜಾತ್ಯತೀತವಾಗಿ ತಮ್ಮ ಪ್ರಸ್ತುತತೆಯನ್ನು ಪ್ರತಿಪಾದಿಸಿಕೊಂಡು ಬಂದಿವೆ. ಅಂಥ ಪ್ರಭೇದಗಳನ್ನು ಲೌಕಿಕರು ಅಥವಾ ಭವಿಗಳು ಮಾಡಿಕೊಂಡು ವ್ಯವಹರಿಸುವುದರಿಂದ ಅವರು ಭವಿಗಳಾಗಿ ಅಜ್ಞಾನದೊಳಗೆ ಮುಳುಗಿರುತ್ತಾರೆ. ಭಕ್ತನಾದವನು ಅದರಿಂದ ಹೊರಬಂದು ಪರಮಾತ್ಮನನ್ನು ಅರಸಬೇಕು ಎಂಬುದಾಗಿ ಎಲ್ಲಾ ಭಕ್ತಿ ಪಂಥಗಳೂ ನಿರ್ದೇಶಿಸುತ್ತವೆ. ಭಕ್ತಿ ಸಾಹಿತ್ಯದಲ್ಲಿ ಜಾತಿ, ಕುಲಗಳ ಕುರಿತ ಟೀಕೆಯಾಗಲೀ, ಲಿಂಗ ತಾರತಮ್ಯದ ಕುರಿತ ಟೀಕೆಯಾಗಲೀ ಅಧ್ಯಾತ್ಮದ ಈ ಹಿನ್ನೆಲೆಯನ್ನು ಹೊಂದಿರುತ್ತವೆ. ಹಾಗೂ ಇಂಥ ಟೀಕೆಗಳು ಉಪನಿಷತ್ತುಗಳ ಕಾಲದಿಂದಲೇ ಭಾರತೀಯ ಆಧ್ಯಾತ್ಮಿಕ ಸಾಹಿತ್ಯದ ಭಾಗಗಳಾಗಿವೆ. ಆ ಮಾರ್ಗವನ್ನು ಅರಸುವವನಿಗೆ ತಪ್ಪು ದಾರಿಯ ಕುರಿತು ಎಚ್ಚರಿಸುವ ಹಾಗು ಅರಿವು ಮೂಡಿಸುವ ಉದ್ದೇಶವನ್ನು ಅವು ಹೊಂದಿವೆ. ವಚನಗಳ ಸಂದರ್ಭದಲ್ಲಿ ಅಂಥ ಟೀಕೆಗಳು ಬರುವುದು, ಒಬ್ಬ ಭವಿಯಾದವನು ಭಕ್ತನಾದ ಮೇಲೂ ಇಂಥ ಭೇದಗಳನ್ನು ಇಟ್ಟುಕೊಂಡು ವ್ಯವಹರಿಸುವುದರ ಕುರಿತು (ವೀಣಾ 2015:351-75). ಎಲ್ಲಾ ಶಿವಭಕ್ತರೂ ಒಂದೇ ಮಾರ್ಗದಲ್ಲಿ ಸಾಗುವವರು ಎಂಬ ಭಾವ ಉದಿಸಬೇಕೆಂಬುದು ಹಾಗೂ ಅವರು ಪ್ರಪಂಚವನ್ನು ನೋಡುವ ರೀತಿ ಭವಿಗಳು ನೋಡಿದಂತಿರಬಾರದೆಂಬುದು ಇಲ್ಲಿ ಕಲಿಯಬೇಕಾದ ಧೋರಣೆಗಳಾಗಿವೆ. ಅವು ಈ ಜಗತ್ತಿನಲ್ಲಿ ಇರುವ ಪ್ರಭೇದಗಳನ್ನು ತೊಡೆಯುವ ಉದ್ದೇಶವನ್ನು ಹೊಂದಿರಲಿಲ್ಲ. ಅವುಗಳ ಕುರಿತು ಭಕ್ತರು ಯಾವ ಧೋರಣೆಯನ್ನು ತಳೆಯಬೇಕೆಂಬುದನ್ನು ಉದ್ದೇಶಿಸಿದ್ದವು.

ಭಾರತದ ತುಂಬೆಲ್ಲ ವಿಭಿನ್ನ ಭಕ್ತಿ ಸಂಪ್ರದಾಯಗಳಲ್ಲಿ ಅವುಗಳದೇ ಆದ ಮೇಲ್ಜಾತಿಯ ಹಾಗೂ ಕೆಳಜಾತಿಯ ಸಂತರೂ ಇಂದು ಆರಾಧನೆಗೊಳಪಟ್ಟಿದ್ದಾರೆ. ಈ ಮಾರ್ಗಗಳಲ್ಲಿ ಸ್ತ್ರೀ ಹಾಗೂ ಕೆಳಜಾತಿಗಳ ಅನೇಕ ಭಕ್ತರು ತುಂಬ ಎತ್ತರದ ಸ್ಥಾನವನ್ನು ಏರಿ

ಪೂಜನೀಯರಾಗಿದ್ದಾರೆ. ಸಾಧಾರಣವಾಗಿ ಕೆಳಜಾತಿಯ ಭಕ್ತರು ಹಾಗೂ ಅವರಿಗೆ ಸಂಬಂಧಿಸಿದ ಕಥೆಗಳನ್ನು ಪ್ರಮುಖವಾಗಿ ಆಧರಿಸಿಕೊಂಡು ಇದೊಂದು ಜಾತಿವ್ಯವಸ್ಥೆಯ ವಿರುದ್ಧದ ಚಳವಳಿ ಎನ್ನಲಾಗುತ್ತದೆ. ಮೇಲೆ ಉಲ್ಲೇಖಿಸಿದ ಭಕ್ತಿಮಾರ್ಗದ ವೈಶಿಷ್ಟ್ಯತೆಯ ಹಿನ್ನೆಲೆಯಿಂದ ನೋಡಿದಾಗ ಇವೆಲ್ಲ ಆ ಸಂಪ್ರದಾಯಗಳಿಗೆ ಸಹಜವಾದ ಪ್ರಕ್ರಿಯೆಯಾಗಿದೆ ಎನ್ನುವುದು ಮನದಟ್ಟಾಗದೇ ಇರದು. ಆದರೆ ಇವುಗಳನ್ನು ಸುಧಾರಣಾ ಚಳವಳಿಗಳೆಂದು ಪ್ರತಿಪಾದಿಸುವವರು ಈ ಸಂಗತಿಯನ್ನೇ ತಮ್ಮ ಸಿದ್ಧಾಂತಕ್ಕೆ ದೃಷ್ಟಾಂತವೆಂಬಂತೆ ಬಳಸುತ್ತಾರೆ. ಇಂಥವರ ಪ್ರಕಾರ ಭಕ್ತಿ ಚಳವಳಿಗಳು ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಕೆಳಜಾತಿಗಳಿಗೆ ಹಾಗೂ ಸ್ತ್ರೀಯರಿಗೆ ನಿರಾಕರಿಸಲಾಗಿದ್ದ ಪೂಜೆಯ ಸ್ವಾತಂತ್ರ್ಯವನ್ನು ನೀಡಿ ಸಮಾನ ಸ್ಥಾನಮಾನವನ್ನು ಕಲ್ಪಿಸಿದವು. ಇದಕ್ಕೆ ಪೂರಕವಾಗಿ ಭಕ್ತರ ಜೀವನದಲ್ಲಿನ ಕಥೆಗಳನ್ನು ಉದಾಹರಿಸಲಾಗುತ್ತದೆ. ಅಂಥ ಕಥೆಗಳಲ್ಲಿ ಜಾತಿ ಹಾಗೂ ಲಿಂಗಕ್ಕೆ ಸಂಬಂಧಿಸಿದ ಕಟ್ಟುನಿಟ್ಟುಗಳನ್ನು ಅವರ ಮೇಲೆ ಹೇರಿ ನಿಷೇಧಿಸುವ ಘಟನೆಗಳಿರುತ್ತವೆ. ಈ ಭಕ್ತರು ಪವಾಡಗಳನ್ನು ಮಾಡಿ ಅಂಥ ಕಟ್ಟುಗಳನ್ನು ಮುರಿಯುವ ಘಟನೆಗಳು ಇರುತ್ತವೆ. ಅವರ ಆರಾಧ್ಯ ದೇವನೂ ಕೂಡ ತನ್ನ ಭಕ್ತರ ಪರವಾಗಿ ನಿಲ್ಲುತ್ತಾನೆ. ಇದನ್ನು ಜಾತಿ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯೆನ್ನಲಾಗುತ್ತದೆ. ಆದರೆ ಭಕ್ತಿ ಸಾಹಿತ್ಯವು ಇಂಥ ಪ್ರತಿಪಾದನೆಗೆ ವಿರುದ್ಧ ಉದಾಹರಣೆಗಳನ್ನು ಕೂಡ ನೀಡುವುದರಿಂದ ಅಂಥ ಉದಾಹರಣೆಗಳನ್ನು ಸುಸಂಬದ್ಧವಾಗಿ ಅರ್ಥೈಸುವ ಪರ್ಯಾಯ ಮಾರ್ಗವನ್ನು ಹುಡುಕುವ ಅಗತ್ಯವಿದೆ ಎಂಬುದಾಗಿ ನೋಡಿದ್ದೇವೆ.

ವೈದಿಕ ಸಂಪ್ರದಾಯವು ವೇದ ವಿದ್ಯೆಯನ್ನು ಸ್ತ್ರೀ ಶೂದ್ರರಿಗೆ ನಿರಾಕರಿಸುವ ಹೇಳಿಕೆಗಳು ಎಲ್ಲರಿಗೂ ಗೊತ್ತು. ಆದರೆ ಸ್ತ್ರೀ ಶೂದ್ರರಿಗೆ ಇನ್ನಿತರ ಮೋಕ್ಷ ಮಾರ್ಗಗಳು ತೆರೆದಿವೆ ಎಂದು ಅದೂ ಪ್ರತಿಪಾದಿಸಿದೆ. ಅಂದರೆ ಸ್ತ್ರೀ ಶೂದ್ರರಿಗೆ ಮೋಕ್ಷವನ್ನು ಅದು ಅಲ್ಲಗಳೆದಿಲ್ಲ (ಹೆಗಡೆ 2014:11–15). ಬೇರೆ ಮಾತುಗಳಲ್ಲಿ ಹೇಳುವುದಾದರೆ ನನಗೆ ತಿಳಿದಂತೆ ಸ್ತ್ರೀ ಶೂದ್ರರು ಮೋಕ್ಷಕ್ಕೆ ಅಥವಾ ಆತ್ಮಜ್ಞಾನಕ್ಕೆ ಅರ್ಹರಲ್ಲ ಎಂದು ಇಡೀ ಸಂಸ್ಕೃತ ಸಾಹಿತ್ಯದಲ್ಲೇ ಯಾವ ಹೇಳಿಕೆಯೂ ಬರುವುದಿಲ್ಲ. ಬದಲಾಗಿ ಅವರಿಗೆ ವೇದ ಶ್ರವಣದ ಅಧಿಕಾರ ಇಲ್ಲದುದರಿಂದ ಅವರಿಗೆಂದೇ ವಿಶೇಷವಾಗಿ ಭಕ್ತಿ ಮಾರ್ಗ, ಇತಿಹಾಸ ಪುರಾಣಾದಿಗಳು ಕಲ್ಪಿತವಾಗಿವೆ ಎನ್ನಲಾಗಿದೆ. ಅದಕ್ಕೆ ಸಾಕ್ಷಿಯಾಗಿ ಭಾರತದ ತುಂಬೆಲ್ಲ ಭಕ್ತಿ ಮಾರ್ಗಗಳಲ್ಲಿ ಇವರು ನಮಗೆ ಕಂಡುಬರುವುದು ಸಹಜವೇ ಆಗಿದೆ. ಹಾಗಿರುವಾಗ ಭಕ್ತಿ ಹಾಗೂ ಪೂಜೆಯ ಸಂದರ್ಭದಲ್ಲಿ ಸ್ತ್ರೀ ಶೂದ್ರರು ಬಂಡಾಯ ಏಳುವ ಪ್ರಮೇಯವೇ ಉದ್ಭವವಾಗುವುದಿಲ್ಲ. ಅವರು ಬಂಡಾಯ ಎದ್ದಿದ್ದೇ ಆದರೆ ವೇದಮಾರ್ಗದ ವಿರುದ್ಧ ಏಳುತ್ತಿದ್ದರು ಎಂದು ನಿರೀಕ್ಷಿಸಬಹುದೇ ಹೊರತೂ ಭಕ್ತಿ ಮಾರ್ಗದ ವಿರುದ್ಧವಂತೂ ಅಲ್ಲ. ಈ ಹಿನ್ನೆಲೆಯಲ್ಲಿ ನಾವು ಅರಿಯಬೇಕಾದುದೆಂದರೆ ಅಷ್ಟೊಂದು ಸ್ತ್ರೀ ಶೂದ್ರರು ಭಕ್ತಿ ಮಾರ್ಗದಲ್ಲಿ ತೊಡಗಿಸಿಕೊಂಡಿದ್ದು ಭಕ್ತಿ ಮಾರ್ಗವನ್ನು ಅವರಿಗೆ ಮುಚ್ಚಿದ ಪರಿಣಾಮವಲ್ಲ, ಬದಲಾಗಿ ಭಕ್ತಿ ಮಾರ್ಗದ ಒಳಗೊಳ್ಳುವಿಕೆಯ ಪರಿಣಾಮದಿಂದ. ಕೆಳಜಾತಿಯ ಭಕ್ತರ ಕುರಿತ ಕಥೆಗಳನ್ನು ಭಾರತೀಯ ಭಕ್ತಿ ಮಾರ್ಗದ ನಿಲುವನ್ನು ದೃಷ್ಟಾಂತ ಪಡಿಸುವ ಕಥೆಗಳೆಂಬಂತೆಯೂ ನೋಡಬಹುದು. ಅಂದರೆ ಆರಾಧ್ಯ ದೇವನಿಗೆ ನಿಜವಾದ ಭಕ್ತನೇ ಪ್ರಿಯನೇ ಹೊರತೂ ಲೌಕಿಕ ಜಾತಿ ಹಾಗೂ ಆಚರಣೆಗಳಲ್ಲ. ನಿಜವಾದ ಭಕ್ತಿಯು ಯಾವುದೇ ಲೌಕಿಕ ಜಾತಿ ಲಿಂಗಗಳ, ವಿಧಿ ಆಚರಣೆಗಳ ಕಟ್ಟುನಿಟ್ಟುಗಳಿಗೆ ನಿಲುಕದಂಥದ್ದು ಎಂಬ ಸಂದೇಶವನ್ನು ಅವು ಆ ಪಂಥದ ಸಾಧಕರಿಗೆ ತಲುಪಿಸುತ್ತವೆ. ಇಂಥ ನಿರೂಪಣೆ ಮಾತ್ರವೇ ಪುರಾಣಾಗಮಗಳಿಂದ ಹಿಡಿದು, ಪ್ರಾದೇಶಿಕ ಸಾಹಿತ್ಯದವರೆಗೆ ಬರುವ ಎಲ್ಲ ಉಲ್ಲೇಖಗಳನ್ನೂ ಸಮರ್ಪಕವಾಗಿ ವಿವರಿಸಬಲ್ಲದು.

3 ಇ. ಸಂಸ್ಕೃತದ ನಿರಾಕರಣೆ?

ಭಕ್ತಿ ಚಳವಳಿ ಎಂದು ಗುರುತಿಸಿದ ಸಂಪ್ರದಾಯಗಳು ಇಂದು ನಮಗೆ ಬಿಟ್ಟುಹೋಗಿರುವ ಸಾಹಿತ್ಯದ ಭಾಷೆಯ ಕುರಿತು ಒಂದು ಸಾಧಾರಣ ಸಂಗತಿಯನ್ನು ಕಾಣುತ್ತೇವೆ. ಅವು ಭಾರತದ ವಿಭಿನ್ನ ಪ್ರಾದೇಶೀಕ ಭಾಷೆಗಳಲ್ಲಿ ಇವೆ. ಭಕ್ತಿ ಮಾರ್ಗದ ಪ್ರಾಚೀನ ಸಾಹಿತ್ಯವು ಸಂಸ್ಕೃತ ಭಾಷೆಯಲ್ಲಿ ಸಿಗುತ್ತದೆ. ಅಂಥವುಗಳಲ್ಲಿ ಇತಿಹಾಸ ಪುರಾಣಗಳು ಪ್ರಧಾನವಾಗಿ ದೇವತೆಗಳ ಕಥೆಗಳನ್ನು ನಿರೂಪಿಸಿದರೆ ಆಗಮಗಳು ಪ್ರಧಾನವಾಗಿ ಪೂಜಾ ಮಂತ್ರ ತಂತ್ರಗಳನ್ನು ಒಳಗೊಂಡಿರುತ್ತಿದ್ದವು. 11ನೆಯ ಶತಮಾನದ ನಂತರ ಕಾಣಿಸಿಕೊಂಡ ಭಕ್ತಿ ಸಂಪ್ರದಾಯಗಳು ಪ್ರಾದೇಶಿಕ ರೂಪವನ್ನು ತಳೆದು ಭಕ್ತಿ ಸಾಹಿತ್ಯವನ್ನು ಪ್ರಾದೇಶೀಕ ಭಾಷೆಗೆ ಪರಿಚಯಿಸುವ ಕೆಲಸ ನಡೆಸಿದವು. ಈ ಸಂಗತಿಯನ್ನೇ ಆಧರಿಸಿ ಅವನ್ನು ಸಂಸ್ಕೃತದ ವಿರುದ್ಧ ಪ್ರತಿಭಟನೆಗಳೆಂಬಂತೆ ಅರ್ಥೈಸುವ ಪರಿಪಾಠ ಬೆಳೆದಿದೆ. ಅಂದರೆ ಬ್ರಾಹ್ಮಣ ಪುರೋಹಿತಶಾಹಿಯು ತನ್ನ ಏಕಸ್ವಾಮ್ಯವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಸಾಮಾನ್ಯರಿಗೆ ಅರ್ಥವಾಗದ ಸಂಸ್ಕೃತ ಭಾಷೆಯಲ್ಲಿ ಪುರಾಣ, ಆಗಮ ಇತ್ಯಾದಿಗಳಲ್ಲಿ ಭಕ್ತಿಯ ಕುರಿತು ರಚಿಸಿತು. ಭಕ್ತಿ ಚಳವಳಿಯ ನೇತಾರರು ಈ ಏಕಸ್ವಾಮ್ಯವನ್ನು ಮುರಿಯುವ ನಿಟ್ಟಿನಲ್ಲಿ ಪ್ರಾದೇಶಿಕ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದರು ಎಂಬುದಾಗಿ ನಿರೂಪಿಸಲಾಗುತ್ತದೆ.

ಕ್ರೈಸ್ತ ಕ್ಲೆರ್ಜಿಗಳು ತಮ್ಮ ಅಧಿಕಾರದ ಶ್ರೇಣೀಕರಣವನ್ನು ಗಟ್ಟಿಮಾಡಿಕೊಳ್ಳಲು ಬೈಬಲ್ಲನ್ನು ಜನರಿಗೆ ಅರ್ಥವಾಗದ ಭಾಷೆಗಳಲ್ಲಿ ಉಳಿಸಿಕೊಂಡಿದ್ದಾರೆ, ಅದನ್ನು ಪ್ರಾದೇಶಿಕ ಭಾಷೆಗಳಿಗೆ ತರ್ಜುಮೆ ಮಾಡುವ ಮೂಲಕ ಎಲ್ಲರಿಗೂ ತಲುಪಿಸಲು ಸಾಧ್ಯ ಎಂಬುದು ಪ್ರೊಟೆಸ್ಟಾಂಟ್ ಪ್ರತಿಪಾದನೆಯಾಗಿತ್ತು. ಭಾರತದಲ್ಲೂ ಪ್ರೊಟೆಸ್ಟಾಂಟ್ ಚಳವಳಿಗಳು ನಡೆದಿವೆ ಎನ್ನುವವರು ಪ್ರೊಟೆಸ್ಟಾಂಟರು ಬೈಬಲ್ಲನ್ನು ಪ್ರಾದೇಶಿಕ ಭಾಷೆಗೆ ತರ್ಜುಮೆ ಮಾಡಿದ ಹೋರಾಟವನ್ನು ಇಲ್ಲೂ ಕಾಣಬಯಸುತ್ತಾರೆ. ಅವರ ಪ್ರಕಾರ ಯುರೋಪಿನಲ್ಲಿ ಅದು ಲ್ಯಾಟಿನ್ ಭಾಷೆಯ ವಿರುದ್ಧ ನಡೆದರೆ ಇಲ್ಲಿ ಅದು ಸಂಸ್ಕೃತದ ವಿರುದ್ಧ ನಡೆದಿದೆ ಎಂಬುದಷ್ಟೇ ವ್ಯತ್ಯಾಸ. ಆದರೆ ವ್ಯತ್ಯಾಸ ಇದಕ್ಕೂ ಮೂಲಭೂತವಾಗಿದೆ ಎಂಬುದನ್ನು ಅವರು ಗಮನಿಸಲು ನಿರಾಕರಿಸುತ್ತಾರೆ. ಯುರೋಪಿನಲ್ಲಿ ಪ್ರೊಟೆಸ್ಟಾಂಟರು ಲ್ಯಾಟಿನ್ನನ್ನು ನಿರಾಕರಿಸಿದ ಮೇಲೆ ಮತ್ತೆ ಲ್ಯಾಟಿನ್ ಭಾಷೆಗೆ ಹೊರಳಿಕೊಳ್ಳುವುದು ಕಾಣುವುದಿಲ್ಲ. ಆದರೆ ಭಾರತೀಯ ಸಂದರ್ಭದಲ್ಲಿ ಇಂಥ ಚಳವಳಿಗಳು ಸಂಸ್ಕೃತಕ್ಕೆ ಮರಳುವ, ಮರುಭೇಟಿನೀಡುವ ಪ್ರಕ್ರಿಯೆ ಕಂಡುಬರುತ್ತದೆ. ಬೌದ್ಧರು, ಜೈನರು ಹಾಗೂ ವೀರಶೈವರಲ್ಲಿ ಕ್ರಮೇಣ ಸಂಸ್ಕೃತ ಭಾಷೆಯ ಸಾಹಿತ್ಯವು ಪ್ರಸ್ತುತತೆ ಪಡೆಯುತ್ತದೆ. ಉಳಿದ ಭಕ್ತಿ ಸಂಪ್ರದಾಯಗಳಲ್ಲೂ ಸಂಸ್ಕೃತವು ಬಹಿಷ್ಕೃತ ಭಾಷೆಯಾಗಿದ್ದ ಲಕ್ಷಣಗಳಿಲ್ಲ. ಭಾರತದಲ್ಲಿ ಬೌದ್ಧ, ಜೈನ, ಇತ್ಯಾದಿ ಪಂಥಗಳು ಸಂಸ್ಕೃತವನ್ನು ತಿರಸ್ಕರಿಸಿದ್ದರು ಎಂದು ವಿದ್ವಾಂಸರು ವರ್ಣಿಸುವ ಪರಿಪಾಠ ಇದೆ. ಆದರೆ ಈ ಯಾವ ಪಂಥಗಳ ಸಾಹಿತ್ಯವೂ ಈ ಹೇಳಿಕೆಯನ್ನು ಧೃಡೀಕರಿಸುವುದಿಲ್ಲ. ಬೌದ್ಧರು ಸಂಸ್ಕೃತವನ್ನು ತಿರಸ್ಕರಿಸಿದ್ದರೆ ಮತ್ತೇಕೆ ಮಹಾಯಾನ, ವಜ್ರಯಾನ ಬೌದ್ಧರು ಸಂಸ್ಕೃತದಲ್ಲೇ ಕೃತಿಗಳನ್ನು ರಚನೆಮಾಡಿದರು? ಹ್ಯೂಯೆನ್ ತ್ಸಾಂಗ್‌ನು ಸಂಸ್ಕೃತವನ್ನು ಕಲಿತು ಬೌದ್ಧಗ್ರಂಥಗಳನ್ನು ಓದಲಿಕ್ಕೆಂದೇ ಭಾರತಕ್ಕೇಕೆ ಬರಬೇಕಿತ್ತು? ಜೈನರೇಕೆ ಸಂಸ್ಕೃತದಲ್ಲಿ ಕೃತಿ ರಚನೆ ಮಾಡಿದರು? ವೀರಶೈವರೇಕೆ ಸಂಸ್ಕೃತ ಆಗಮ ಗ್ರಂಥಗಳನ್ನು ನೆಚ್ಚಿಕೊಳ್ಳಬೇಕಿತ್ತು? ವಚನಗಳು ಪ್ರಾದೇಶಿಕ ಭಾಷೆಯಲ್ಲೇ ಇದ್ದರೂ ಅವುಗಳೊಳಗೆ ಮೂಲ ಆಗಮಗಳ ಸಂಸ್ಕೃತ ಸಾಲುಗಳನ್ನು ದೃಷ್ಟಾಂತವಾಗಿ ಉದ್ಧರಿಸುವುದನ್ನೂ ಕಾಣುತ್ತೇವೆ. ಸಂಸ್ಕೃತವು ಪುರೋಹಿತಶಾಹಿಯ ಅರ್ಥವಾಗದ

ಭಾಷೆಯೆಂದು ವರ್ಜ್ಯವಾಗಿದ್ದರೆ ಮತ್ತೇಕೆ ಆ ಭಾಷೆಯ ಸಾಲುಗಳನ್ನು ಉದ್ಧರಿಸಬೇಕು? ಸಂಸ್ಕೃತವನ್ನು ನಿರಾಕರಿಸಿದ ಚಳವಳಿಗಳು ಮತ್ತೆ ಅದನ್ನೇ, ಯಾವ ಇರುಸುಮುರುಸನ್ನೂ ಅನುಭವಿಸದೇ, ಸಬೂಬುಗಳನ್ನೂ ಕೊಟ್ಟುಕೊಳ್ಳದೇ ಮತ್ತೆ ಬಳಸಲಿಕ್ಕೆ ಏಕೆ ತೊಡಗಬೇಕು? ಏಕೆಂದರೆ ಅವರಿಗೆ ಅಂಥ ಇರುಸು ಮುರುಸುಗಳೇ ಆಗಲಿಲ್ಲ. ಆದರೆ ಇದು ಅವನ್ನು ಸಂಸ್ಕೃತವಿರೋಧಿ ಚಳವಳಿಗಳೆಂದು ಪ್ರತಿಪಾದಿಸುವ ಇಂದಿನ ವಿದ್ವಾಂಸರಿಗೆ ಇರುಸು ಮುರುಸನ್ನು ಹುಟ್ಟಿಸಿರುವುದಂತೂ ಸತ್ಯ. ಹಾಗಾಗಿ ಅವರು ತಮ್ಮ ಸಬೂಬುಗಳನ್ನು ಕಂಡುಹಿಡಿದುಕೊಂಡಿದ್ದಾರೆ. ಈ ಬೆಳವಣಿಗೆಯನ್ನು ಆಯಾ ಚಳವಳಿಗಳ ಅವನತಿ ಹಾಗೂ ಪುರೋಹಿತಶಾಹಿಯ ಪ್ರಾಬಲ್ಯ ಶುರುವಾದುದರ ದ್ಯೋತಕವೆಂಬಂತೆ ವಿವರಿಸುತ್ತಾರೆ.

ಆದರೆ ಭಾರತೀಯ ಸಂದರ್ಭದಲ್ಲಿ ಸಂಸ್ಕೃತವು ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಧಿಕಾರದ ಭಾಷೆ ಎಂಬ ಪರಿಕಲ್ಪನೆ ಇದ್ದುದಕ್ಕೆ ಸಮರ್ಥ ಆಧಾರಗಳಿಲ್ಲ. ಭಾರತದಲ್ಲಿ ಭಾಷಾ ವೈರತ್ವವು ಆಧುನಿಕ ಸಂಗತಿಯಾಗಿದೆ. ಆಧುನಿಕ ಕಾಲದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ನಾವು ಆಮದು ಮಾಡಿಕೊಂಡ ಮೇಲೆ ಭಾಷೆಗೂ ಪ್ರಭುತ್ವಕ್ಕೂ, ಅಧಿಕಾರಕ್ಕೂ ಸಂಬಂಧ ಬೆಳೆದಿದೆ. ಮಾತೃ ಭಾಷೆ ಎಂಬ ಕಲ್ಪನೆ ಭಾರತೀಯರಿಗೆ ಬ್ರಿಟಿಷ್ ಪೂರ್ವ ಕಾಲದಲ್ಲಿ ಅಪರಿಚಿತವಾಗಿತ್ತು. ಬಹುಭಾಷೆಯ ಕಲಿಕೆ ಹಾಗೂ ಬಹುಭಾಷೆಗಳಲ್ಲಿನ ವ್ಯವಹಾರವು ಜೀವನ ಕ್ರಮವೇ ಆಗಿರುವ ಭಾರತೀಯರಿಗೆ ಅನ್ಯ ಭಾಷೆಯ ಕುರಿತು ವೈರತ್ವ ಹುಟ್ಟುವುದಾಗಲೀ, ಅವನ್ನು ನಿರಾಕರಿಸುವ ಪ್ರಸಂಗ ಉದ್ಭವಿಸುವುದಾಗಲೀ ಅಸಂಭವ. ನಮ್ಮ ವಿದ್ವಾಂಸರು ಭಾರತೀಯ ಸಂದರ್ಭವನ್ನು ಗಣನೆಗೆ ತಾರದೇ ತಮ್ಮ ಆಧುನಿಕ ವಿಚಾರಗಳನ್ನು ಇಂಥ ಸಾಹಿತ್ಯಗಳಲ್ಲಿ ತುರುಕುತಿದ್ದಾರೆ ಅಷ್ಟೆ. ಅದೇ ರೀತಿ ಭಕ್ತಿಮಾರ್ಗದ ಸಂಸ್ಕೃತ ಸಾಹಿತ್ಯವು ಪ್ರಾದೇಶಿಕ ಸಂದರ್ಭಕ್ಕೆ ತರ್ಜುಮೆಯಾಗುವುದಕ್ಕೆ ಬ್ರಾಹ್ಮಣರ ನಿಷೇಧವಿದ್ದಲ್ಲಿ ಅವು ಪ್ರಾದೇಶಿಕ ಭಾಷೆಗೆ ಹೇಗೆ ಬಂದವು? ಅದರಲ್ಲಿ ಬ್ರಾಹ್ಮಣರ ಪಾತ್ರವೇ ಇರಲಿಲ್ಲವೆ? ಬಂದರೂ ಆ ಬರುವ ಕ್ರಿಯೆ ಯುರೋಪಿನಲ್ಲಾದಂತೆ ಸಂಘರ್ಷವನ್ನೇಕೆ ಸೃಷ್ಟಿಸಲಿಲ್ಲ? ಸಂಸ್ಕೃತದ **ರಾಮಾಯಣ, ಮಹಾಭಾರತ,** ಪುರಾಣ ಮುಂತಾದವು ಭಾಷೆಯ ಎಲ್ಲೆಯನ್ನು ಮೀರಿ ಭಾರತವ್ಯಾಪಿಯಾಗಿ ಶಾಂತಿಯುತವಾಗಿ ಹೇಗೆ ಜನಪ್ರಿಯಗೊಳ್ಳಲು ಸಾಧ್ಯ? ಸಂಸ್ಕೃತ ಆಗಮ ಸಾಹಿತ್ಯವು ಪ್ರಾದೇಶಿಕ ಭಾಷೆಯಲ್ಲಿ ಭಕ್ತಿ ಸಾಹಿತ್ಯವನ್ನು ರಚಿಸಬಾರದೆಂಬ ಕಟ್ಟು ನಿಟ್ಟುಗಳನ್ನು ವಿಧಿಸುವುದನ್ನು ಕೂಡ ನಾವು ಕಾಣುವುದಿಲ್ಲ.

ಇಂಥವಕ್ಕೆಲ್ಲ ಬ್ರಾಹ್ಮಣಶಾಹಿಯ ಕುತಂತ್ರ, ಚಳವಳಿಗಳ ಅವನತಿ ಇತ್ಯಾದಿ ಅಸಂಬದ್ಧ ವಿವರಣೆಗಳನ್ನು ನೀಡುವುದು ಬಿಟ್ಟು ವಿದ್ವಾಂಸರು ವಾಸ್ತವವನ್ನು ಗಮನಿಸುವವರೆಗೆ ಭಕ್ತಿ ಸಾಹಿತ್ಯದ ಕುರಿತ ಅಧ್ಯಯನಗಳು ಸುಳ್ಳುಗಳ ಮೇಲೆ ಕಟ್ಟಿದ ಮನೆಗಳಾಗಿರುತ್ತವೆ ಅಷ್ಟೆ. ಏಕೆಂದರೆ ಪ್ರಾದೇಶೀಕ ಭಾಷೆಯಲ್ಲಿ ಕೃತಿ ರಚನೆಯು ಸಂಸ್ಕೃತದ ವಿರುದ್ಧ ಪ್ರತಿಭಟನೆಯಾಗಿರದೇ ಭಕ್ತಿ ಮಾರ್ಗವು ಪ್ರಾದೇಶಿಕ ಸಂದರ್ಭವನ್ನು ಪ್ರವೇಶಿಸಿದ ನಂತರದ ಒಂದು ಸಹಜ ಬೆಳವಣಿಗೆಯಾಗಿದೆ ಎಂಬುದೇ ಸಂಭವನೀಯ. ಸ್ತ್ರೀ ಶೂದ್ರರು ವೇದವನ್ನು ಕಲಿಯಬಾರದೆಂಬ ಹೇಳಿಕೆಯನ್ನು ಅವರು ಸಂಸ್ಕೃತವನ್ನೇ ಕಲೆಯಬಾರದೆಂದು, ಅಕ್ಷರವನ್ನೇ ಕಲಿಯಬಾರದೆಂದು, ಅತಿಯಾಗಿ ಅರ್ಥೈಸಿ ಸಂಸ್ಕೃತದ ಕುರಿತ ಇಂಥ ತಪ್ಪು ನಿರ್ಣಯಗಳು ಆಧುನಿಕ ಬರವಣಿಗೆಗಳಲ್ಲಿ ಕಾಣಿಸಿಕೊಂಡಿವೆ. ಜೊತೆಗೆ ಭಾರತೀಯ ಸಂಪ್ರದಾಯಗಳಲ್ಲಿ ಭಾಷೆಯು ವಹಿಸುವ ನಿಜವಾದ ಪಾತ್ರದ ಕುರಿತು ಐರೋಪ್ಯ ಸಿದ್ಧಾಂತಗಳು ರೂಪಿಸಿದ ತಪ್ಪು ಕಲ್ಪನೆಗಳೂ ಇಂಥ ನಿರ್ಣಯಗಳನ್ನು ಪ್ರಭಾವಿಸಿವೆ.

ಉಪಸಂಹಾರ

ಭಕ್ತಿ ಸಂಪ್ರದಾಯಗಳ ಕುರಿತ ಪ್ರಧಾನಧಾರೆಯ ವಿಚಾರಗಳು ಅದನ್ನು ಒಂದಿಲ್ಲೊಂದು ಸಂಸ್ಥೆಗಳನ್ನು ಸುಧಾರಿಸುವ ಕಾರ್ಯಕ್ರಮ ಎಂಬಂತೆ ಗ್ರಹಿಸುತ್ತವೆ. ಅದು ಜಾತಿ ವಿರೋಧಿ ಚಳವಳಿ, ರಿಲಿಜನ್ನಿನ ಸುಧಾರಣೆ ಅಥವಾ ವರ್ಗ ಯಾ ಪುರೋಹಿತಶಾಹಿಯ ಸ್ಥಿರೀಕರಣದ ಸಾಧನ ಎಂಬೆಲ್ಲ ನಿರೂಪಣೆಗಳು ಈ ನೆಲೆಯಿಂದ ಹುಟ್ಟುತ್ತವೆ. ಪ್ರಸ್ತುತ ಲೇಖನವು ಅಂಥ ಗ್ರಹಿಕೆಗಳು ಪ್ರಭೇದ ದೋಷವನ್ನು ಹುಟ್ಟುಹಾಕಿವೆ ಎಂಬುದಾಗಿ ವಾದಿಸಿದೆ. ಅಂದರೆ ಭಾರತದಲ್ಲಿ ಹಿಂದೂಯಿಸಂ ಎಂಬ ರಿಲಿಜನ್ನಿದೆ, ಅದಕ್ಕೆ ಈ ಸಂಪ್ರದಾಯಗಳು ಪ್ರೊಟೆಸ್ಟಾಂಟ್ ಚಳವಳಿಗಳು ಎಂದು ನೋಡುವುದರಿಂದ ಈ ದೋಷಗಳು ಹುಟ್ಟಿವೆ. ಅದರ ಪರಿಣಾಮವಾಗಿ ಭಕ್ತಿ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆಯನ್ನೇ ನಾವು ಕಳೆದುಕೊಳ್ಳುತ್ತಿದ್ದೇವೆ. ಆ ಸಾಹಿತ್ಯದ ಬೆರಳೆಣಿಕೆಯಷ್ಟು ಸಾಲುಗಳನ್ನು ಹಾಗೂ ಕಥೆಗಳನ್ನು ನಮ್ಮ ವಾದಕ್ಕೆ ಸಾಕ್ಷಿಗಳೆಂಬಂತೆ ಉಪಯೋಗಿಸಿಕೊಳ್ಳುವುದನ್ನು ಬಿಟ್ಟರೆ ಉಳಿದ ಸಾಹಿತ್ಯವು ಏನನ್ನು ತಿಳಿಸುತ್ತದೆ ಎಂಬ ಕುತೂಹಲವೂ ನಮ್ಮಲ್ಲಿ ಮಾಯವಾಗುತ್ತಿದೆ ಅಥವಾ ನಮ್ಮ ಗ್ರಹಿಕೆಗಳನ್ನು ವಿರೋಧಿಸುವ ಹೇಳಿಕೆಗಳನ್ನು ಅನಪೇಕ್ಷಿತ ಎಂದು ಪರಿಗಣಿಸುವ ಅಥವಾ ನಮ್ಮ ಮೂಗಿನ ನೇರಕ್ಕೆ ಅರ್ಥೈಸುವ ಪರಿಪಾಠವೂ ಬೆಳೆಯುತ್ತಿದೆ. ಆದರೆ ವಿರುದ್ಧ ಹೇಳಿಕೆಗಳು ಭಕ್ತಿ ಸಾಹಿತ್ಯದ ಕುರಿತ ನಮ್ಮ ಗ್ರಹಿಕೆಗಳನ್ನು ಪ್ರಶ್ನಿಸುತ್ತಿವೆ ಎಂಬುದನ್ನು ನಾವು ಗಮನಿಸುವ ಅಗತ್ಯವಿದೆ. ಪ್ರಸ್ತುತ ಲೇಖನವು ಭಾರತೀಯ ಆಧ್ಯಾತ್ಮ ಮಾರ್ಗದ ನೆಲೆಯಿಂದ ಅಂಥ ಪರಸ್ಪರ ವಿರುದ್ಧ ಹೇಳಿಕೆಗಳ ಕುರಿತ ಸುಸಂಬದ್ಧ ವಿವರಣೆಗಳನ್ನು ಮಂಡಿಸುವ ಪ್ರಯತ್ನವನ್ನು ಮಾಡಿದೆ.

ಭಕ್ತಿ ಸಾಹಿತ್ಯವನ್ನು ಓದುವಾಗ ಇದುವರೆಗೆ ಎದ್ದ ಸಮಸ್ಯೆಗಳನ್ನು ಪರಿಹರಿಸುವ ಸಂಭಾವ್ಯ ಮಾರ್ಗ ಯಾವುದು ಎಂಬುದನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಒಂದು ಪ್ರಾರಂಭಿಕ ಪ್ರಯತ್ನವಷ್ಟೇ ಆಗಿದೆ. ಈ ಕ್ಷೇತ್ರದಲ್ಲಿ ಈಗಿರುವ ವಿವರಣೆಗಳ ಅಸಂಬದ್ಧತೆ ನಮಗೆ ಸ್ಪಷ್ಟವಾಗಿದೆ. ಅದನ್ನು ಸುಸಂಬದ್ಧವಾಗಿ ವಿವರಿಸುವ ನಿಟ್ಟಿನಲ್ಲಿ ಭಾರತೀಯ ಸಂಪ್ರದಾಯಗಳ ಕುರಿತು ಸೂಕ್ತ ವಿವರಣೆ ಹಾಗೂ ಸಿದ್ಧಾಂತಗಳನ್ನು ಬೆಳೆಸುವ ಅಗತ್ಯವಿದೆ ಎಂಬುದನ್ನಷ್ಟೇ ಈ ಲೇಖನವು ಓದುಗರ ಗಮನಕ್ಕೆ ತರುತ್ತದೆ. ಅದಕ್ಕಿಂತ ಮುಖ್ಯವಾಗಿ ಭಕ್ತಿಗೆ ಜನಪರ ಕಾಳಜಿಯೇ ಇರಲಿಲ್ಲ ಅಥವಾ ಭಕ್ತಿಗೆ ಜನಹಿತದ ದೃಷ್ಟಿಯೇ ಇರಲಿಲ್ಲ, ಅದಕ್ಕೆ ಪ್ರಾಪಂಚಿಕ ಜಗತ್ತಿನಲ್ಲಿ ಯಾವ ಪಾತ್ರವೂ ಇರಲಿಲ್ಲ ಎಂಬುದಂತೂ ಈ ಲೇಖನದ ಸೂಚನೆ ಅಲ್ಲವೇ ಅಲ್ಲ. ಅದು ಪ್ರಾಪಂಚಿಕ ಜೀವನಕ್ಕೆ ಪ್ರಸ್ತುತವೇ ಆಗಿರದಿದ್ದರೆ ಎಲ್ಲಾ ಹಿನ್ನೆಲೆಯ ಜನರನ್ನೂ ಅದು ಸೆಳೆದುಕೊಳ್ಳಲು ಕಾರಣವಿರಲಿಲ್ಲ. ಭಕ್ತಿ ಹಾಗೂ ಭಾರತೀಯ ಆಧ್ಯಾತ್ಮಿಕ ಸಂಪ್ರದಾಯಗಳು ಭಾರತೀಯ ಜನರ ಜೀವನವನ್ನು ಹಾಗೂ ಸಾಮಾಜಿಕ ಪ್ರಕ್ರಿಯೆಗಳನ್ನು ತೀರಾ ಆಳವಾಗಿ ಪ್ರಭಾವಿಸಿರುವುದರಲ್ಲಿಯೂ ಸಂದೇಹವಿಲ್ಲ. ಅದು ಐತಿಹಾಸಿಕವಾಗಿ ಭಾರತೀಯ ಸಮಾಜಕ್ಕೆ ಎದುರಾದ ಸವಾಲುಗಳಿಗೆ ಸ್ಪಂದಿಸಿರುವಂತೆಯೂ ಅನಿಸುತ್ತದೆ. ನಮ್ಮ ಸಮಾಜವನ್ನು ಪೋಷಿಸುವಲ್ಲಿ ಅದರ ಪಾತ್ರ ಹಿರಿದಾಗಿದೆ ಎಂಬುದಾಗಿ ನಮ್ಮ ಅಂತಃಸ್ಫೂರ್ತಿಗೆ ಅನಿಸುತ್ತದೆ. ಆದರೆ ನಮ್ಮ ಮುಂದಿರುವ ಸಮಸ್ಯೆಯೆಂದರೆ ಭಾರತೀಯ ಇತಿಹಾಸದಲ್ಲಿ ಹಾಗೂ ಸಮಾಜದಲ್ಲಿ ಅದರ ಮಹತ್ವವನ್ನು ಸುಸಂಬದ್ಧವಾಗಿ ವಿವರಿಸುವುದು ಹೇಗೆ? ಎಂಬುದು. ಅಂದರೆ ಭಕ್ತಿ ಸಂಪ್ರದಾಯದ ಸ್ವರೂಪವು ನಾವು ಈ ಲೇಖನದಲ್ಲಿ ಗುರುತಿಸಿದ ರೀತಿಯಲ್ಲಿ ಇದ್ದಿದ್ದೇ ಹೌದಾದಲ್ಲಿ ಅವುಗಳಿಗೆ ಭಾರತೀಯರ ಜನಜೀವನವನ್ನು ಇಷ್ಟು ಆಳವಾಗಿ ಪ್ರಭಾವಿಸುವುದು ಹೇಗೆ

ಸಾಧ್ಯವಾಯಿತು? ಭಾರತೀಯ ಸಂದರ್ಭದಲ್ಲಿ ಭಕ್ತಿಯ ಸಾಮಾಜಿಕ ಮಹತ್ವವನ್ನು ಅರ್ಥಮಾಡಿಕೊಳ್ಳಲು ಅದನ್ನು ತಿರುಚಿ ಪಾಶ್ಚಾತ್ಯ ರಿಲಿಜನ್ನಿನ ಚೌಕಟ್ಟಿಗೆ ಅನ್ವಯಿಸುವುದೊಂದೇ ಮಾರ್ಗವೆ? ಒಂದಂತೂ ನಿಜ. ಈ ಪ್ರಯತ್ನದಲ್ಲಿ ದಾರಿ ತಪ್ಪಿ ಅಂಡಲೆಯಬಾರದೆಂದರೆ ರಿಲಿಜನ್ನಿನ ಚೌಕಟ್ಟಿನಿಂದ ಹೊರಬರುವುದಂತೂ ಅನಿವಾರ್ಯ.

ಕೃತಜ್ಞತೆಗಳು : ಈ ಲೇಖವನ್ನು ಸಿದ್ಧಪಡಿಸುವಾಗ ಕರಡು ಪ್ರತಿಯನ್ನು ಓದಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ ಚೈತ್ರ ಎಂ., ಡಂಕಿನ್ ಜಳಕಿ, ಸದಾನಂದ ಇವರಿಗೆ ಕೃತಜ್ಞತೆಗಳು.

ಉಲ್ಲೇಖಗಳು

1. ಈಶ್ವರನ್ ಕೆ. 1980. **Bhakti tradition and modernisation: the case of Lingayatism.** J.Asian Afr. Stud. 15, 72-83.
2. ಕೊಸಾಂಬಿ ಡಿ.ಡಿ. 1962. **Myth and Reality,** Bombay : Popular Book House.
3. ಗೆಲ್ಡರ್ ರಾಫ್ ಹಾಗೂ ಬಾಲಗಂಗಾಧರ, ಎಸ್. ಎನ್. 2011. "Rethinking Orientalism: Colonialism and the Study of Indian Traditions", **History of Religions,** Vol. 51, No. 2 (November 2011), pp. 101-128.
4. ಚಕ್ರವರ್ತಿ, ಕುಣಾಲ್. 2001. **Religious Process: The Puranas and the Making of a Regional Tradition,** New Delhi : OUP.
5. ಜಳಕಿ, ಡಂಕಿನ್. 2009. **Vacanas as Caste Critiques-Orientalist Expression of Native Experience,** unpublished Ph.D. Thesis submitted to Manipal University.
6. ಜಳಕಿ, ಡಂಕಿನ್ ಹಾಗೂ ಬಾಲಗಂಗಾಧರ ಎಸ್.ಎನ್. 2012. "ವಚನಸಾಹಿತ್ಯವು ಜಾತಿ ವ್ಯವಸ್ಥೆಯ ವಿರುದ್ಧ ಮಾತನಾಡುತ್ತದೆಯೆ? ವಚನಗಳ ಆಧುನಿಕ ಅಧ್ಯಯನಗಳು, ಒಂದು ಮರುಪರಿಶೀಲನೆ", **ಚಿಂತನ ಬಯಲು, ಸಂಪುಟ 1. ಸಂಚಿಕೆ 3,** ಅಕ್ಟೋಬರ್–ನವೆಂಬರ್.
7. ಜಳಕಿ, ಡಂಕಿನ್. 2015. "Lingayat Tradition, Adhyatma and Caste How Bhakti Traditions Understand Caste" **Journal of Contemporary Thought, 41(Summer 2015)** pp.165- 190.
8. ನಂದಿ ಆರ್. ಎನ್. 1975. "Origin and Nature of the VIrasaiva Movement" **The Indian Historical Review,** Vol.2. No.1. 32-56.
9. ನಾರಾಯಣನ್ ಎಂ.ಜಿ.ಎಸ್ ಮತ್ತು ವೆಳೂಥಟ್ ಕೇಶವನ್. 2000. "Bhakti Movement in South India" in Jha D.N. (ed), **The Feudal Order, State Society and Ideology in Early Medieval India.** New Delhi: Manohar, pp. 385-411.
10. ಪ್ರವೀಣ್ ಟಿ.ಎಲ್. 2015. "ಆರು ಸ್ಥಲದಲ್ಲಿ ನಿಂದವಂಗೆ ಬೇರೊಂದು ಬ್ರಹ್ಮದ ಮಾತೇಕೆ?" ಹೆಗಡೆ ರಾಜಾರಾಮ ಹಾಗೂ ಶಣ್ಮುಖ ಎ. (ಸಂ.) **ಕೊಟ್ಟ ಕುದುರೆಯನೇರಲರಿಯದೆ,** ಬೆಂಗಳೂರು: ನಿಲುಮೆ ಪ್ರಕಾಶನ, ಪು. 249–268.
11. ಪ್ಯಾಟನ್ ಬರ್ಕೆಟ್. 2009. "Bhakti Rhetoric in the Hagiography of 'Untouchable' Saints: Discerning Bhakti's Ambivalence on Caste and Brahminhood", **International Journal of Hindu Studies,** Vol. 13, No. 2 (AUGUST 2009), pp. 115-141.

12. ಪುಣೇಕರ್, ರೋಹಿಣಿ ಮೊಕಾಶೀ. 2006. "Kanakadasa: The Philosopher-Poet of the Haridasa Tradition of Karnataka" In Monika Horstmann, (ed.), **Bhakti in Current Research, 2001-2003,** New Delhi : Manohar, 201-208.

13. ಪೀಟರ್ ವಾನ್ ದರ್ ವೀರ್. 1987. "Taming the Ascetic: Devotionalism in a Hindu Monastic Order" **Man, New Series, Vol. 22, No. 4 (Dec., 1987),** pp. 680-695.

14. ಪಿಂಚ್ ವಿಜಯ್ 2003. "Bhakti and the British Empire". **Past & Present, No. 179 (May, 2003).** pp. 159-196.

15. ಫಾರೆಕ್ ಮಾರ್ಟಿನ್. 2016. "Caste or Qualification? Chaitanya Vaishnava Discussions about Brahmanas in Colonial India" **Theatrum Historiae, 17, 2015,** University of Pardubice, pp. 91-115.

16. ಫಾರೆಕ್ ಮಾರ್ಟಿನ್. 2017. "Were Shramana and Bhakti Movements Against the Caste System?" in Farek Martin, et.al. (ed.) **Western Foundations of the Caste System,** Switzerland; Palgrave Macmillan, pp. 127-172.

17. ಬಾಲಗಂಗಾಧರ ಎಸ್. ಎನ್. 2005(ಅ). **ಸ್ಮೃತಿ ವಿಸ್ಮೃತಿ–ಭಾರತೀಯ ಸಂಸ್ಕೃತಿ,** (ಅನುವಾದ 2011) ಹೆಗ್ಗೋಡು: ಅಕ್ಷರ ಪ್ರಕಾಶನ.

18. ಬಾಲಗಂಗಾಧರ ಎಸ್. ಎನ್. 2005(ಬ). "How Speak for Indian Traditions" **Journal of the American Academy of Religion, December 2005, Vol. 73,** No. 4, pp. 987-1103.

19. ಬಾಲಗಂಗಾಧರ ಎಸ್. ಎನ್. 2010. "Orientalism, Postcolonialism and 'Construction' of Religion" in Esther Bloch et.al. (ed.) **Rethinking Religion in India The Colonial Construction of Hinduism Routledge South Asian Religion Series,** London. pp.135-164.

20. ಬಾಲಗಂಗಾಧರ ಎಸ್. ಎನ್. 2012. **Reconceptualizing India Studies,** New Delhi: Oxford Uiversity Press,

21. ಬಾಲಗಂಗಾಧರ ಎಸ್. ಎನ್. 2014. "On the Indian Notion of Enlightenment" (Unpublished essay)

22. ರಾವ್ ರಾಮ ಆರ್. 1991. "Six Poems by Kanakadasa" **Journal of South Asian Literature, Vol. 28,** No. 1/2, MISCELLANY (Winter, Spring, Summer, Fall 1991). pp. 1-10.

23. ರೂವರ್ ಜೇಕಬ್ ದ. ಹಾಗೂ ಕ್ಲಾರ್‌ಹಟ್ ಸಾರಾ. 2010. "The Colonial Construction of What?" in Esther Bloch et.al. (ed.) **Rethinking Religion in India The Colonial Construction of Hinduism** London : R

24. ರೊಂಕಿ ರಾಮ್. 2008. "Ravidass Deras and Social Protest: Making Sense of Dalit Consciousness in Punjab (India)" **The Journal of Asian Studies. Vol. 67, No. 4 (Nov), pp. 1341-1364.** Routledge South Asian Religion Series. pp.164Were -185.

25. ವೀಣಾ ಈ. 2015. "ವಚನಗಳಲ್ಲಿ ಜಾತಿ ಸೂಚಕಗಳ ಬಳಕೆ ಮತ್ತು ಅವುಗಳ ಕುರಿತ ಆಧುನಿಕ

ನಿರೂಪಣೆಗಳು" ಹೆಗಡೆ ರಾಜಾರಾಮ ಹಾಗೂ ಶಣ್ಮುಖ ಎ. (ಸಂ), 2015. **ಕೊಟ್ಟ ಕುದುರೆಯನೇರಲರಿಯದೆ,** ಬೆಂಗಳೂರು: ನಿಲುಮೆ ಪ್ರಕಾಶನ, ಪು. 351–375.

26. ವಿಜಯಾ ರಾಮಸ್ವಾಮಿ. 1992. "Rebels — Conformists? Women Saints in Medieval South India" **Anthropos, Bd. 87, H. 1./3.,** pp. 133-146.

27. ಶರ್ಮ ಆರ್. ಎಸ್. 2001. **Early Medieva Indian Society-A Study in Feudalisation,** Kolkata: Orient Longman.

28. ಶಿವಕುಮಾರ ಪಿ.ವಿ. 2015. "ನಡೆಯೊಂದು ನುಡಿಯೊಂದಾದರೆ ಶಿವಾಚಾರಕ್ಕವರು ಸಲ್ಲರಯ್ಯ. ವಚನ ಸಾಹಿತ್ಯದಲ್ಲಿ ಅನ್ಯರ ಕುರಿತ ಟೀಕೆಗಳ ಸ್ವರೂಪ" ಹೆಗಡೆ ರಾಜಾರಾಮ ಹಾಗೂ ಶಣ್ಮುಖ ಎ. (ಸಂ.), **ಕೊಟ್ಟ ಕುದುರೆಯನೇರಲರಿಯದೆ,** ಬೆಂಗಳೂರು: ನಿಲುಮೆ ಪ್ರಕಾಶನ, ಪು. 304–330.

29. ಷಣ್ಮುಖ ಎ. 2015. "ಐಡಿಯಾಲಜಿಗಳ ನಿರೂಪಣೆಯೊ ಅಥವಾ ವಚನ ಸಂಪ್ರದಾಯದ ಚರಮಗೀತೆಯೊ" ಹೆಗಡೆ ರಾಜಾರಾಮ ಹಾಗೂ ಶಣ್ಮುಖ ಎ. (ಸಂ.). **ಕೊಟ್ಟ ಕುದುರೆಯನೇರಲರಿಯದೆ,** ಬೆಂಗಳೂರು: ನಿಲುಮೆ ಪ್ರಕಾಶನ, ಪು. 131–62.

30. ಸಂತೋಷ್ ಈ. 2015, "ವಚನ ಸಾಹಿತ್ಯದಲ್ಲಿ ಲಿಂಗಾಯತ ಆಚರಣೆಗಳ ವಿಮರ್ಶೆ ಮತ್ತು ಪ್ರತಿಪಾದನೆಗಳ ಸಂದರ್ಭ" ಹೆಗಡೆ ರಾಜಾರಾಮ ಹಾಗೂ ಶಣ್ಮುಖ ಎ. (ಸಂ.) **ಕೊಟ್ಟ ಕುದುರೆಯನೇರಲರಿಯದೆ,** ಬೆಂಗಳೂರು: ನಿಲುಮೆ ಪ್ರಕಾಶನ, ಪು. 331–350.

31. ಹಜಾರಿಕಾ ಪಾಲಿ. 2013, "Reform Discourse abd Bhakti Literature", **International Joournal of Social Sciences and Humanities, Vo. 2. Issue 1,** June, pp. 50-66.

32. ಹಾವ್ಲೆ ಜಾಣ್ ಸ್ಟ್ರಾಟನ್. 2015. **A Storm of Songs India and the Idea of the Bhakti Movement.** London: Harvard University Press.

33. ಹೆಗಡೆ ರಾಜಾರಾಮ. 2013. "ಸಾಂಸ್ಕೃತಿಕ ಇತಿಹಾಸದ ಸ್ವೀಕೃತ ಮಾದರಿಗಳು". ಶಿವರಾಮ ಶೆಟ್ಟಿ(ಸಂ.), **ಕನಕನ ಸುತ್ತ ಸಂಕಥನಗಳ ಜಿಜ್ಞಾಸೆ,** ಮಂಗಳೂರು: ಕನಕದಾಸ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾಲಯ. ಪು. 30–56.

34. ಹೆಗಡೆ ರಾಜಾರಾಮ. 2014. "ಬ್ರಾಹ್ಮಣರೆಂದರೆ ಯಾರು?"" **ಚಿಂತನ ಬಯಲು, ಸಂಪುಟ 2, ಸಂಚಿಕೆ 3,** ಜನವರಿ–ಮಾರ್ಚ್, ಪು. 11–25.

35. ಹೆಗಡೆ ರಾಜಾರಾಮ ಹಾಗೂ ಶಣ್ಮುಖ ಎ. (ಸಂ.) 2015, **ಕೊಟ್ಟ ಕುದುರೆಯನೇರಲರಿಯದೆ,** ಬೆಂಗಳೂರು: ನಿಲುಮೆ ಪ್ರಕಾಶನ.

■

ಸಾದರ ಸ್ವೀಕಾರ

- **ಬೆಂಗಳೂರು ಪರಂಪರೆ: ಇತಿಹಾಸ ಸಂಶೋಧನೆಯ ಹೊಸ ನೋಟಗಳು**
  ಲೇಖಕರು: ಎಸ್.ಕೆ. ಅರುಣಿ **ಪ್ರಕಟಣ ವರ್ಷ:** 2019 **ಪುಟಗಳು:** 356 **ಬೆಲೆ:** 400/-
- **ಕರ್ನಾಟಕದ ಆದಿಮ ಚಿತ್ರಕಲೆ ಲೇಖಕರು:** ಮೋಹನ ಆರ್.
  ಪ್ರಕಟಣ ವರ್ಷ: 2019 **ಪುಟಗಳು:** 256 (ವರ್ಣಚಿತ್ರ ಪುಟಗಳು ಸೇರಿ) **ಬೆಲೆ:** 360/-
  ಮೇಲಿನ ಎರಡೂ ಕೃತಿಗಳ ಪ್ರಕಾಶಕರು: ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು-91.
  ಮೊ: 78294 04063
- **ರಾಜಧರ್ಮ ಲೇಖಕರು:** ರಹಮತ್ ತರೀಕೆರೆ
  ಪ್ರಕಟಣ ವರ್ಷ: 2019 **ಪುಟಗಳು:** 260 **ಬೆಲೆ:** 220/-
  ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ- 583276. ಮೊ: 080-22372388
- **ಪಲ್ಲವರು-ಚಾಲುಕ್ಯರು (ಇತಿಹಾಸ ಸಂಶೋಧನೆಯ ಲೇಖನಗಳು)**
  ಮೂಲ ಲೇಖಕರು: ನೇಲಟೂರು ವೆಂಕಟರಮಣಯ್ಯ **ಅನುವಾದ:** ಗುರುಮೂರ್ತಿ ಪೆಂಡಕೂರು
  ಪ್ರಕಟಣ ವರ್ಷ: 2018 **ಪುಟಗಳು:** 360 **ಬೆಲೆ:** 400/-
  ಪ್ರಕಾಶಕರು: ಪವಿತ್ರ ಸಲ್ಯೂಷನ್ಸ್, ಬೆಂಗಳೂರು-40. ಮೊ: 98800 00138.
- **ನಿಗೂಢ ಟಿಬೇಟ್ ಲೇಖಕರು:** ಯಡೂರ ಮಹಾಬಲ
  ಪ್ರಕಟಣ ವರ್ಷ: ಡಿಸೆಂಬರ್ 2018 **ಪುಟಗಳು:** 534 **ಬೆಲೆ:** 395/-
- ಅಕ್ಸಾಯ್ ಚಿನ್ ವಿವಾದದ ಇತಿಹಾಸ **ಲೇಖಕರು:** ಯಡೂರ ಮಹಾಬಲ
  ಪ್ರಕಟಣ ವರ್ಷ: 2019 **ಪುಟಗಳು:** 443 **ಬೆಲೆ:** 400/-
  ಮೇಲಿನ ಎರಡೂ ಕೃತಿಗಳ ಪ್ರಕಾಶಕರು: ಚಿಂತನ ಚಿಲುಮೆ ಪ್ರಕಾಶನ,
  ಬೆಂಗಳೂರು-18. ಮೊ: 99868 29657.
- **ದೋಕ್ಲಾಂ ಕರ್ಮಕಾಂಡ ಲೇಖಕರು:** ಯಡೂರ ಮಹಾಬಲ
  ಪ್ರಕಟಣ ವರ್ಷ: 2017 **ಪುಟಗಳು:**64 **ಬೆಲೆ:** 50/-
- **ಕ್ವಿಟ್ ಇಂಡಿಯಾ – ಚಳುವಳಿಯ ಒಳಗುಟ್ಟುಗಳು ಲೇಖಕರು:** ಯಡೂರ ಮಹಾಬಲ
  ಪ್ರಕಟಣ ವರ್ಷ: 2018 **ಪುಟಗಳು: 176 ಬೆಲೆ:** 140/-
  ಮೇಲಿನ ಎರಡೂ ಕೃತಿಗಳ ಪ್ರಕಾಶಕರು: ಲಡಾಯಿ ಪ್ರಕಾಶನ, ಗದಗ-582101.
  ಮೊ: 94802 86844.
- **ಅವಿಸ್ಮರಣೀಯ ಅರುಣಾಚಲ: ಅದರ ಚಿತ್ರ-ವಿಚಿತ್ರ ಇತಿಹಾಸ ಲೇಖಕರು:** ಯಡೂರ ಮಹಾಬಲ
  ಪ್ರಕಟಣ ವರ್ಷ: 2018 **ಪುಟಗಳು:** 320 **ಬೆಲೆ:** 240/-
  ಪ್ರಕಾಶಕರು: ಸಮ್ಯೆಕ್ಯ ಪಬ್ಲಿಕೇಷನ್ಸ್, ಮೈಸೂರು-24. ಮೊ: 98442 12240

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: Manu V. Devadevan
Title: śivaśaraṇara vacanagaḷa mūlarūpa

ಶಿವಶರಣರ ವಚನಗಳ ಮೂಲರೂಪ

ಮನು ವಿ. ದೇವದೇವನ್
School of Humanities
and Social Sciences
IIT Mandi, VPO Kamand,
Mandi District
Himachal
Pradesh 175005.
discoverie@gmail.com

ಕನ್ನಡ ವಾಙ್ಮಯದ ಇತಿಹಾಸದಲ್ಲಿ ಶಿವಶರಣರ ವಚನಗಳಿಗೆ ಬಹುಮಹತ್ವದ ಸ್ಥಾನವಿರುವುದು ಸರ್ವಸಮ್ಮತ ವಿಚಾರ. ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ಆರಂಭಗೊಂಡು ಹನ್ನೆರಡನೆಯ ಶತಮಾನದಲ್ಲಿ ಹಸನಾಗಿ ವಿಕಾಸಹೊಂದಿದ ವಚನಗಳ ಆಧುನಿಕ ಸಂಶೋಧನೆಗಳು ಪ್ರಾರಂಭವಾಗಿ ಇದೀಗ ಶತಮಾನವೇ ಕಳೆದಿದೆ. ಕಳೆದ ಶತಮಾನದ ಮೊದಲ ಪಾದದಲ್ಲಿ ಶುರುವಾದ ಈ ಶೋಧಗಳಲ್ಲಿ ಫ.ಗು. ಹಳಕಟ್ಟಿ, ಎಂ.ಆರ್. ಶ್ರೀನಿವಾಸಮೂರ್ತಿ, ಬಿ. ಶಿವಮೂರ್ತಿಶಾಸ್ತ್ರಿ, ಶಿ.ಶಿ. ಬಸವನಾಳ, ಆರ್.ಸಿ. ಹಿರೇಮಠ, ಎಂ.ಎಂ. ಸುಂಕಾಪುರ, ಎಲ್. ಬಸವರಾಜು, ಎಂ.ಎಂ. ಕಲಬುರ್ಗಿ, ಡಿ.ಆರ್. ನಾಗರಾಜ, ಮೊದಲಾದ ನಾಡಿನ ಶ್ರೇಷ್ಠ ವಿದ್ವಾಂಸರೂ ಸೇರಿದಂತೆ ನೂರಾರು ಜನ ತಜ್ಞರೂ ತಜ್ಞರಲ್ಲದವರೂ ವಚನವಾಙ್ಮಯವನ್ನು ವಿವಿಧ ಆಯಾಮಗಳಿಂದ ಒರೆಗಚ್ಚಿನೋಡಿದ್ದಾರೆ. ಅನೇಕ ವಿವಾದಗಳ ನಡುವಲ್ಲೇ ನಡೆದ ಈ ಪರಿಶೀಲನೆಗಳ ಫಲವಾಗಿ ಇಂದು ಇತಿಹಾಸಕಾರರೂ ಸಾಹಿತ್ಯ ತಜ್ಞರೂ ಚಾರಿತ್ರಿಕವೆಂದು ಒಪ್ಪಿಕೊಂಡಿರುವ ಅನೇಕ ವಿದ್ಯಮಾನಗಳಿವೆ. ಇದರಲ್ಲಿ ಪ್ರಮುಖವಾದ್ದು ಕಲ್ಯಾಣಪಟ್ಟಣ (ಬೀದರ ಜಿಲ್ಲೆಯ ಬಸವಕಲ್ಯಾಣ) ದಲ್ಲಿ ನಡೆದ “ಕ್ರಾಂತಿ”ಯ ಕಥೆ. ವಚನವಾಙ್ಮಯದ ಸಮೀಕ್ಷೆಗಳೆಲ್ಲವೂ ಈ ಕಥೆಯೊಂದಿಗೆ

ಬೆಸೆದುಕೊಂಡಿದೆ. ಕಥೆಯ ಪ್ರಕಾರ ಹನ್ನೆರಡನೆಯ ಶತಮಾನದ ಏಳನೆಯ ದಶಕದಲ್ಲಿ, ಅಂದರೆ ಕಲ್ಯಾಣಚಾಳುಕ್ಯರ ಮಾಂಡಲಿಕನಾಗಿದ್ದ ಕಳಚೂರಿ ವಂಶದ ಇಮ್ಮಡಿ ಬಿಜ್ಜಳನು ತನ್ನ ಸ್ವತಂತ್ರ ಆಳ್ವಿಕೆ ಪ್ರಾರಂಭಿಸಿದ ಬಳಿಕ, ಅವನ ಭಂಡಾರಿಯಾಗಿದ್ದ ಬಸವನ ಹುದ್ದರಿಕೆಯಲ್ಲಿ ಕಲ್ಯಾಣದಲ್ಲಿ ಹತ್ತಾರುಮಂದಿ ಶರಣಶರಣೆಯರು ಒಗ್ಗೂಡಿದರು, ಬಸವ ಕಟ್ಟಿದ ಅನುಭವಮಂಟಪ ಎಂಬ ಸಭೆಯಲ್ಲಿ ಪಾಲ್ಗೊಂಡು ಅಲ್ಲಮನ ಮೇಲ್ನೋಟದಲ್ಲಿ ಹತ್ತುಹಲವು ವಿಚಾರಗಳನ್ನು ಚರ್ಚೆಗೆತ್ತಿಕೊಂಡರು. ಮಹಾದೇವಿಯಕ್ಕ, ನೀಲಾಂಬಿಕೆ, ಚನ್ನಬಸವ, ಸಿದ್ಧರಾಮರಂಥ ಖ್ಯಾತಿವೆತ್ತ ಅನುಭಾವಿಗಳಲ್ಲದೆ ತಮ್ಮತಮ್ಮ ಕಾಯಕದಲ್ಲಿ ನಿರತರಾಗಿದ್ದುಕೊಂಡೇ ಅನುಭಾವದ ಸಾಧನೆಯಲ್ಲಿ ತೊಡಗಿದ ಶರಣರೂ ಇದ್ದರು. ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಬಹುರೂಪಿ ಚೌಡಯ್ಯ, ಮಾದಾರ ಧೂಳಯ್ಯ, ಗೊಗ್ಗವ್ವೆ, ರೆಮ್ಮವ್ವೆ, ಗಜೇಶ ಮಸಣಯ್ಯ, ತುರುಗಾಹಿ ರಾಮಣ್ಣ, ಉರಿಲಿಂಗಪೆದ್ದಿ, ಸೂಳೆ ಸಂಕವ್ವ, ರಾಯಸದ ಮಂಚಣ್ಣ, ಹೆಂಡದ ಮಾರಯ್ಯ, ನಗೆಯ ಮಾರಯ್ಯ, ಕನ್ನದ ಮಾರಯ್ಯ, ಆಯ್ದಕ್ಕಿ ಮಾರಯ್ಯ ಮುಂತಾದವರು ಈ ಸಾಲಿಗೆ ಸೇರಿದ ಶರಣರಲ್ಲಿ ಕೆಲವರು. ಅನುಭವಮಂಟಪದಲ್ಲಿ ನಡೆದ ಶರಣ ಗೋಷ್ಠಿಗಳು ಹೊಸ ದರ್ಶನವನ್ನೂ ಅನುಭಾವದ ಹೊಸ ನಿರೂಪಣೆಗಳನ್ನೂ ಮುಂದಿಡುವಲ್ಲಿ ಯಶಸ್ವಿಯಾದವು. ಈ ಗೋಷ್ಠಿಗಳ ಅಂಗವಾಗಿಯೇ ಶಿವಪೂಜೆ, ದಾಸೋಹ ಇತ್ಯಾದಿ ಕಾರ್ಯಗಳನ್ನೂ ಕೈಗೊಳ್ಳಲಾಗುತ್ತಿತ್ತು. ಶರಣರು ಪ್ರಗತಿಶೀಲ ಮನೋಭಾವವನ್ನು ಪೋಷಿಸುವಂಥವರಾಗಿದ್ದರು. ಜಾತಿಪದ್ಧತಿ, ಲಿಂಗತಾರತಮ್ಯ ಹಾಗೂ ಕಾಯಕದ ಮೂಲಕ ರೂಪುಪಡೆಯುವ ವರ್ಗಭೇದಗಳನ್ನು ಟೀಕಿಸಿ ಅಲ್ಲಗಳೆದರು. ಕಾಯಕಕ್ಕೆ ಅನಿತರ ಮಹತ್ವ ನೀಡಿದರು. ಸಮಾನತೆಗೆ ಹೊಸ ಪರಿಭಾಷೆಗಳನ್ನು ಬರೆದರು. ತಮ್ಮ ಆದರ್ಶಗಳ ಅಭಿವ್ಯಕ್ತಿಗೆಂದು ವಚನ ಎಂಬ ಆಡುಭಾಷೆಗೆ ಹತ್ತಿರವಾದ ರಚನಾಶೈಲಿಯೊಂದನ್ನು ಬಳಕೆಗೆ ತಂದುಕೊಂಡರು. ವಚನಗಳು ಅಂದು ಅಪಾರ ಮನ್ನಣೆ ಪಡೆದುಕೊಂಡಿದ್ದ ಚಂಪೂಕಾವ್ಯಕ್ಕಿಂತ ಭಿನ್ನವಾಗಿತ್ತಲ್ಲದೆ ತ್ರಿಪದಿ, ಷಟ್ಪದಿ, ರಗಳೆ ಸೇರಿದ ಇತರ ಕಾವ್ಯರೂಪಗಳಂತೆ ಛಂದೋಬದ್ಧವಲ್ಲದ ಮುಕ್ತ ಕವಿತೆಗಳಾಗಿದ್ದವು. ಅವುಗಳ ರಚನೆ ಸಂವಾದಾತ್ಮಕ ಪರಿಸರವೊಂದರಲ್ಲಿ ನಡೆಯಿತ್ತಾದ್ದರಿಂದ ಅವುಗಳಿಗೆ ಸಂವಾದಾತ್ಮಕ ಸ್ವರೂಪವೊಂದು ಒದಗಿಬಂತು. ಶರಣರಿಗೆ ತಮ್ಮ ಆದರ್ಶಗಳು ಕೇವಲ ನುಡಿಗಷ್ಟೇ ನಿಲುಕುವ ಸಿದ್ಧಾಂತಗಳಾಗಿರಲಿಲ್ಲ. ನುಡಿದಂತೆ ನಡೆಯಲಿಚ್ಛಿಸಿದ ಶರಣರು ಈ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಯತ್ನಿಸಿದರು. ಅದನ್ನು ಜಾರಿಗೆ ತರಲೆಂದೇ ಮೇಲುಕೀಳಿನ ಭೇದ ಯಾ ಅಸ್ಪೃಶ್ಯತೆಯ ಪರವೆಯಿಲ್ಲದೆ ದಾಸೋಹ ನಡೆಸಿದರು. ಬಹುಶಃ ಪ್ರತಿಲೋಮ ವಿವಾಹವೊಂದನ್ನೂ ಹಮ್ಮಿಕೊಂಡರು. ಹರಳಯ್ಯ ಎಂಬ ಅಂತ್ಯಜನ ಮಗನಿಗೆ ಮಧುವಯ್ಯ ಎಂಬ ವಿಪ್ರನ ಮಗಳೊಂದಿಗೆ ವಿವಾಹವಾಯಿತು. ಇದು ಸನಾತನಿಗಳ ತೀವ್ರ ಕೋಪಕ್ಕೆ ಗುರಿಯಾಯಿತು. ಶರಣರ ವಿರುದ್ಧ ಕ್ರಮ ತೆಗೆದುಕೊಳ್ಳಲು ಅವರು ಬಿಜ್ಜಳನನ್ನು ಆಗ್ರಹಪಡಿಸಿದರು. ಹಿಂಸೆ ತಲೆದೋರಿತು. ಹರಳಯ್ಯ ಮಧುವಯ್ಯರ ಕಣ್ಣುಗಳನ್ನು ಕಿತ್ತು ಮೆರವಣಿಗೆ ನಡೆಸಲಾಯಿತು. ಅವರನ್ನು ಕೊಂದಿರುವ ಸಾಧ್ಯತೆಯೂ ಇದೆ. ಬಸವ ಮತ್ತು ಇನ್ನಿತರ ಶರಣರು ಕಲ್ಯಾಣ ತೊರೆಯುವಂತಾಯಿತು. ಹಿಂಸಾಚಾರಗಳ ನಡುವೆ ಬಸವನ ಅನುಯಾಯಿಯಾದ ಜಗದೇವ ಎಂಬಾತ (ಬಹುಶಃ ಮಲ್ಲಿಬೊಮ್ಮ ಎಂಬುವನ – ಅಥವಾ ಮಲ್ಲ, ಬೊಮ್ಮ ಎನ್ನುವ ಇಬ್ಬರ – ನೆರವಿನೊಂದಿಗೆ) ಬಿಜ್ಜಳನನ್ನು ಕೊಂದನು.

ಈ ಕಥೆ ಸೂಕ್ಷ್ಮವಾದ ಚಾರಿತ್ರಿಕ ಪರಿಶೀಲನೆಗೆ ಯೋಗ್ಯವಾದ್ದು. ಪ್ರಸ್ತುತ ಲೇಖನದಲ್ಲಿ ಅದರ ಒಂದು ಆಯಾಮವನ್ನು ಮಾತ್ರ ಚರ್ಚಿಸುವುದು ನಮ್ಮ ಉದ್ದೇಶವಾಗಿದೆ. ಅದೆಂದರೆ ವಚನಗಳು ಛಂದೋಬದ್ಧವಲ್ಲದ, ಮುಕ್ತ ಛಂದಸ್ಸಿನಲ್ಲಿ ರಚಿಸಿದ ಕೃತಿಗಳು

ಎಂಬ ಗೃಹೀತ. ವಚನಗಳ ತಮ್ಮ ವಿಖ್ಯಾತ ಇಂಗ್ಲೀಶ್ ಅನುವಾದದಲ್ಲಿ ಎ.ಕೆ. ರಾಮಾನುಜನ್ ಅದನ್ನು "a religious lyric in Kannada free verse" ಎನ್ನುತ್ತಾರೆ (ರಾಮಾನುಜನ್ 1973: xi). ಇದು ಎಷ್ಟರ ಮಟ್ಟಿಗೆ ಸತ್ಯ? ಶರಣರು ತಮ್ಮ ರಚನೆಗಳನ್ನು ಅಂದಿನ ತ್ರಿಪದಿ, ಷಟ್ಪದಿ, ಗೀತೆಗಳೇ ಮೊದಲಾದ ವಾಙ್ಮಯಗಳಿಗಿಂತ ರಚನಾತಂತ್ರದಲ್ಲಿ ಭಿನ್ನವೆಂದು ತಿಳಿದಿದ್ದರೆ? ವಚನಗಳು ನಾವು ನಂಬಿರುವಂತೆ ಅಂದು ಪ್ರಚಲಿತವಿದ್ದ ಕಾವ್ಯತಂತ್ರಗಳಾದ ಛಂದಸ್ಸು, ಪ್ರಾಸ, ಮುಂತಾದವುಗಳನ್ನು ನಿರ್ಲಕ್ಷಿಸಿ ರಚಿಸಲಾದ ಮುಕ್ತಕವನಗಳಾಗಿದ್ದವೆ? ವಚನಗಳ ರಾಚನಿಕ ವಿಶ್ಲೇಷಣೆಯ ಮೂಲಕ ಈ ಕುರಿತು ಬೆಳಕು ಚೆಲ್ಲುವುದು ಇಲ್ಲಿನ ನಮ್ಮ ಲಕ್ಷ್ಯವಾಗಿದೆ.

ಈ ಕೆಳಗಿನದು ಮಹಾದೇವಿಯಕ್ಕನ ವಚನಗಳಲ್ಲಿ ಒಂದು.

ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪ ಬಿಟ್ಟಿತ್ತೆ
ತಂದು ಸುವರ್ಣವ ಕಡಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ
ಸಂದುಸಂದನು ಕಡಿದು ಕಬ್ಬನು ತಂದು ಗಾಣದಲಿಕ್ಕಿ ಅರೆದೊಡೆ
ಬೆಂದು ಪಾಕಗೊಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ
ನಾ ಹಿಂದೆ ಮಾಡಿದ ಹೀನಂಗಳೆಲ್ಲ ತಂದು ಮುಂದಿಳುಹಲು ನಿಮಗೆ ಹಾನಿ
ಎನ್ನ ತಂದೆ ಚನ್ನಮಲ್ಲಿಕಾರ್ಜುನ ದೇವಯ್ಯ ಕೊಂದೊಡೆ ಶರಣನೆಂಬುದು ಮಾಣೆ

(ಅಕ್ಕನ ವಚನಗಳು 58)

ಮೇಲುನೋಟಕ್ಕೆ ಇದು ಅಡಿಗಣಪ್ರಾಸಕ್ಕೆ ನಿಲುಕದ ಮುಕ್ತ ಸಾಲುಗಳು. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಅನೇಕ ಸ್ಥಳಗಳಲ್ಲಿ ಪ್ರಾಸದ ಪ್ರಯೋಗವನ್ನು ಕಾಣಬಹುದು. ಉದಾಹರಣೆಗೆ, ಚಂದನ, ನೊಂದೆ, ತಂದು, ಸಂದು, ಬೆಂದು, ಇತ್ಯಾದಿ. ಈ ಉದಾಹರಣೆಗಳಲ್ಲಿ ಸತತವಾಗಿ ಎರಡನೆಯ ಅಕ್ಷರವೇ ಪ್ರಾಸಹೊಂದಿರುವುದು ಗಮನಾರ್ಹವಾಗಿದೆ. ಆಧುನಿಕಪೂರ್ವ ಕಾಲದ ದ್ರಾವಿಡಭಾಷಾ ಕಾವ್ಯಗಳಲ್ಲಿ ಪ್ರತಿಸಾಲಿನಲ್ಲೂ ಎರಡನೆಯ ಅಕ್ಷರ ಪ್ರಾಸಹೊಂದಿರುವುದು ಸಾಮಾನ್ಯವಾಗಿತ್ತು. ಇದನ್ನು ಪಾದಾನುಪ್ರಾಸ ಅಥವಾ ದ್ವಿತೀಯಾಕ್ಷರಪ್ರಾಸ ಎನ್ನುತ್ತಾರೆ. ಇಂದು ನಮಗೆ ದೊರೆತಿರುವ ವಚನಗಳು ಮೊದಲಬಾರಿಗೆ ಹೇರಳವಾಗಿ ಕಂಡುಬರುವುದು ಹದಿನೈದನೆಯ ಶತಮಾನದಲ್ಲಿ ಆರಂಭಗೊಂಡ **ಶೂನ್ಯಸಂಪಾದನೆ, ಏಕೋತ್ತರಶತಸ್ಥಲ** ಮೊದಲಾದ ಸಂಪಾದನಾಗ್ರಂಥಗಳಲ್ಲಿ. ಅದಕ್ಕಿಂತ ಹಿಂದೆ ವಚನಗಳು ಮೌಖಿಕ ಪರಂಪರೆಗೆ ಸೇರಿತ್ತೆಂದು ಪ್ರತೀತಿ. ಲಿಖಿತರೂಪದಲ್ಲಿಯೂ ವಚನಗಳ ಪ್ರಸಾರ ನಡೆದಿರುವ ಸಾಧ್ಯತೆಯನ್ನು ಪೂರ್ಣವಾಗಿ ಅಲ್ಲಗಳೆಯುವಂತಿಲ್ಲ. ಸೋಲಾಪುರ ಸುತ್ತಮುತ್ತಲಲ್ಲಿ ದೊರೆತ ದೇವಗಿರಿಯ ಸೇವುಣರ ಕಾಲಕ್ಕೆ ಸೇರಿದ ಅನೇಕ ಶಾಸನಗಳು ಸಿದ್ಧರಾಮನ ಒಂದು ವಚನದೊಂದಿಗೆ ಆರಂಭಗೊಳ್ಳುತ್ತದೆ. ವಚನಗಳನ್ನು ಬರೆದಿಡುವ ಪದ್ಧತಿ ಇತ್ತೆಂಬುದನ್ನು ಈ ಶಾಸನಗಳ ಆಧಾರದ ಮೇಲೆ ಹೇಳಬಹುದು. ಆದಾಗ್ಯೂ ವಚನಗಳ ಚಲಾವಣೆ ಬಹುತೇಕ ಮೌಖಿಕವಾಗಿಯೇ ಜರುಗಿತ್ತು. ಮೂರು ಶತಮಾನಗಳ ಕಾಲ ಹೀಗೆ ಮೌಖಿಕವಾಗಿ ಪ್ರಸಾರಗೊಂಡ ವಾಙ್ಮಯದಲ್ಲಿ ಅನೇಕ ಪರಿವರ್ತನೆಗಳು ಉಂಟಾಗಿರುವ ಸಾಧ್ಯತೆ ಸಹಜವೇ ಆಗಿದೆ. ಲಿಖಿತ ಆಕರಗಳಲ್ಲಿಯೇ ಹತ್ತುಹಲವು ಪಾಠಭೇದಗಳಿರುವಾಗ ಮೌಖಿಕ ಮಾಧ್ಯಮದಲ್ಲಿ ಏಕರೂಪತೆಯನ್ನು ಅರಸುವುದು ಅನವಶ್ಯಕ. ಹೀಗಾಗಿ ಮೇಲೆ ಉದ್ಧರಿಸಿದ ಅಕ್ಕನ ವಚನವು ಲಿಖಿತರೂಪಕ್ಕೆ ಬರುವಮುನ್ನ ಅನೇಕ ಮಾರ್ಪಾಟುಗಳಿಗೆ ಗುರಿಯಾದುದ್ದನ್ನು ಅಲ್ಲಗಳೆಯುವಂತಿಲ್ಲ. ಈ ವಚನವು ಹೀಗೆ ಮಾರ್ಪಾಟು ಪಡೆದ ಆಕರಗಳಿಂದ ಸಂಗ್ರಹಿಸಿದ್ದು. ಇದರಲ್ಲಿ ಎರಡನೆಯ ಅಕ್ಷರದ ಪ್ರಾಸ ಬಳಕೆಯಾಗಿರುವುದನ್ನು

ಗಮನಿಸಿದರೆ ಒಂದು ವೇಳೆ ಅಕ್ಕ ಇದನ್ನು ಛಂದೋಬದ್ಧವಾದ ಕಾವ್ಯವಾಗಿಯೇ ರಚಿಸಿದ್ದಳೇ ಎಂಬ ಗುಮಾನಿ ಹುಟ್ಟುತ್ತದೆ. ವಚನವನ್ನು ಸೂಕ್ಷ್ಮವಾಗಿ ಓದಿದಾಗ ಅದರಲ್ಲಿ ಅಗತ್ಯವಿಲ್ಲದ ಹಲವು ಪದಗಳನ್ನು ಗುರುತಿಸಬಹುದು. ಅವುಗಳನ್ನು ಮೌಖಿಕ ಪ್ರಸಾರದ ಸಂದರ್ಭದಲ್ಲಿ ಸೇರಿಸಿಕೊಂಡದ್ದೆಂದು ಬಗೆಯುತ್ತ ತೆಗೆದುಹಾಕಿದರೂ ಅರ್ಥಕ್ಕೆ ಯಾವ ಭಂಗವೂ ಉಂಟಾಗದು. ಮೊದಲ ಸಾಲಿನ "ಕೊರೆದು ತೇದೊಡೆ" ಎಂಬಲ್ಲಿ ಈ ಎರಡು ಪದಗಳು ಅನವಶ್ಯಕ. "ಕೊರೆದೊಡೆ" ಅಥವಾ "ತೇದೊಡೆ" ಎಂದಿದ್ದರೆ ಸಾಕಾಗುತ್ತದೆ. ನಾಲ್ಕನೆಯ ಸಾಲಿನಲ್ಲಿ "ಪಾಕಗೊಳ" ಅಗತ್ಯವಿಲ್ಲದ ಪ್ರಯೋಗ. ಈ ರೀತಿ ವಚನದಲ್ಲಿ ಸಣ್ಣ ಕೆಲವು ಬದಲಾವಣೆಗಳನ್ನು ಅಳವಡಿಸಿಕೊಂಡು ಮರುರಚಿಸಿದರೆ ಮೊದಲ ಎರಡು ಸಾಲುಗಳಿಗೆ ಈ ಕೆಳಗಿನ ಆಕೃತಿ ಉಂಟಾಗುತ್ತದೆ.

ಚಂದನವ ಕಡಿಯುತ್ತ ತೇದೊಡೆ
ನೊಂದೆನೆನ್ನುತ ಕಂಪ ಬಿಟ್ಟಿತೆ
ತಂದು ಹೊನ್ನನು ಕಡಿದೊರೆದೊಡೆ ಕಳಂಕ ಹಿಡಿದಿತ್ತೆ

ಇದು ಭಾಮಿನಿಷಟ್ಪದಿಯ ರೂಪದಲ್ಲಿದೆ. ಕನ್ನಡದ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಾಣುವ ಪಾದಾನುಪ್ರಾಸವನ್ನು ಇಲ್ಲಿ ಕಾಣಬಹುದು. ಇದೇ ರೀತಿಯಲ್ಲಿ ವಚನದ ಮೂರನೆಯ ಹಾಗೂ ನಾಲ್ಕನೆಯ ಸಾಲುಗಳನ್ನು ಈ ಕೆಳಕಂಡಂತೆ ಪುನರ್‌ರಚಿಸಬಹುದು.

ಸಂದುಸಂದನು ಕಡಿದು ಕಬ್ಬನು
ತಂದು ಗಾಣದಲಿಕ್ಕಿ ಅರೆದೊಡೆ
ಬೆಂದು ಸಕ್ಕರೆ ನೊಂದೆನೆನ್ನುತ ಸವಿಯ ಬಿಟ್ಟಿತ್ತೆ

ಕೊನೆಯ ಎರಡು ಸಾಲುಗಳನ್ನು ಮೇಲಿನ ಎರಡು ಖಂಡಗಳಂತೆ ಪುನರ್‌ರಚಿಸಲು ಹೊರಟಾಗ "ಚನ್ನಮಲ್ಲಿಕಾರ್ಜುನ" ಎಂಬ ಅಂಕಿತವು ಅದಕ್ಕೆ ತಡೆಯೊಡ್ಡಿನಿಲ್ಲುತ್ತದೆ. ಆದರೆ "ಚನ್ನ"ವನ್ನು ಹೊರತುಪಡಿಸಿ ಕೇವಲ "ಮಲ್ಲಿಕಾರ್ಜುನ" ಎಂಬ ಪ್ರಯೋಗವನ್ನು ಮಾತ್ರ ಅಳವಡಿಸಿಕೊಂಡಲ್ಲಿ ಈ ಸಾಲುಗಳು ಈ ಕೆಳಗಿನಂತೆ ಪರಿವರ್ತನೆ ಹೊಂದಿಕೊಳ್ಳುತ್ತವೆ.

ಹಿಂದೆ ಮಾಡಿದ ಹೀನವೆಲ್ಲವ
ಮುಂದಿಳುಹಿದೊಡೆ ನಿಮಗೆ ಹಾನಿಯು
ತಂದುಕೊಂದೊಡೆ ಮಲ್ಲಿಕಾರ್ಜುನ ಮಾಣೆ ಶರಣನು

ವಚನಸಾಹಿತ್ಯ ನಮ್ಮ ಪವಿತ್ರ ವಾಙ್ಮಯದ ಸಾಲಿಗೆ ಸೇರುವ ಸಂಚಯವಾಗಿದೆ. ಅಂಕಿತಗಳಾಗಲಿ, ವಚನಗಳಿಗೆ ಹಲವು ನೆಲೆಯಲ್ಲಿ ವೈಶಿಷ್ಟ್ಯಗಳನ್ನು ಒದಗಿಸಿಕೊಡುವ ಸಂಜ್ಞೆಗಳು. ಹೀಗಿರುವಾಗ, ಅಂಕಿತವನ್ನೇ ತಿದ್ದಿ ನಡೆಸಿದ ಅಕ್ಕನ ವಚನದ ನಮ್ಮ ವಿಶ್ಲೇಷಣೆ ಸಹಜವಾಗಿಯೇ ಅಧಿಕಪ್ರಸಂಗವೆಂಬ ಆರೋಪಕ್ಕೆ ಗುರಿಯಾಗತಕ್ಕದ್ದು. ಆದ್ದರಿಂದ ನಮ್ಮ ವಾದವು ಇನ್ನಷ್ಟು ಸಮರ್ಪಕ ಉದಾಹರಣೆಗಳ ಮೂಲಕ ಮಾತ್ರ ದೃಢಗೊಂಡೀತು. ಈ ದೃಷ್ಟಿಯಿಂದ ಬಸವನ ವಚನವೊಂದನ್ನು ವಿಶ್ಲೇಷಿಸೋಣ.

ಛಲಬೇಕು ಶರಣಂಗೆ ಪರಧನವನೊಲ್ಲೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆಂಬ
ಛಲಬೇಕು ಶರಣಂಗೆ ಲಿಂಗಜಂಗಮವೊಂದೆಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ (ಬಸವಣ್ಣನವರ ವಚನಗಳು 370)

ಈ ವಚನದಲ್ಲಿ ಮೇಲೆ ವಿಶ್ಲೇಷಿಸಿದ ಅಕ್ಕನ ವಚನದಷ್ಟು ತೊಡಕುಗಳಿಲ್ಲ. ಮೊದಲ ಎರಡು ಸಾಲುಗಳು ಛಂದೋಬದ್ಧವಾಗಿಯೇ ಇವೆ. ಮೂರನೆಯ ಸಾಲಿನಲ್ಲಿ "ಪರದೈವವನೊಲ್ಲೆಂಬ" ಎಂಬಲ್ಲಿ ಒಂದು ಹ್ರಸ್ವಮಾತ್ರೆ ಅಧಿಕವಾಗಿದೆ. ಅದನ್ನು "ಪರದೈವವೊಲ್ಲೆಂಬ" ಎಂದಾಗಿಸತಕ್ಕದ್ದು. ಮುಂದಿನ ಸಾಲಿನ "ಲಿಂಗಜಂಗಮವೊಂದೆಂಬ" ಛಂದಸ್ಸಿಗೆ ನಿಲುಕದ ಪ್ರಯೋಗವಾಗಿದೆ. ಐದನೆಯ ಸಾಲಿನ "ಪ್ರಸಾದ ದಿಟವೆಂಬ" ಎನ್ನುವಲ್ಲಿ ಛಂದೋಭಂಗವಾಗಿದೆ. ಮಾತ್ರವಲ್ಲ, ಒಟ್ಟುವಚನದ ಸಂದರ್ಭದಲ್ಲಿ ಈ ಪದಗಳಿಂದ ಹೊಮ್ಮುವ ಅರ್ಥವೂ ಅಸಹಜವೆನಿಸುತ್ತದೆ. ಕೊನೆಯ ಸಾಲಿನಲ್ಲಿ ತೊಡಕಾಗಿರುವುದು ಬಸವನ ಅಂಕಿತ. ಕೂಡಲಸಂಗಮದೇವ ಎಂಬ ಪ್ರಯೋಗವನ್ನು ಛಂದಸ್ಸುಗಳಲ್ಲಿ ನಿಲ್ಲಿಸುವುದು ಕಷ್ಟಸಾಧ್ಯ. ಆದರೆ ಅಕ್ಕನ ವಚನದಂತೆ ಇಲ್ಲಿಯೂ ಅಂಕಿತವನ್ನು ತಿದ್ದಿ "ಸಂಗಮೇಶ" ಎಂದಾಗಿಸಿ, ನಾಲ್ಕನೆಯ ಮತ್ತು ಐದನೆಯ ಸಾಲುಗಳ ಉತ್ತರಪಾದದಲ್ಲಿ ಸಣ್ಣ ವ್ಯಾಪಾರಟುಗಳನ್ನು ನಡೆಸಿದರೆ ವಚನವನ್ನು ಈ ಕೆಳಕಂಡಂತೆ ಛಂದೋಬದ್ಧವಾಗಿಸಬಹುದು.

ಛಲಬೇಕು ಶರಣಂಗೆ
ಪರಧನವನೊಲ್ಲೆಂಬ
ಛಲಬೇಕು ಶರಣಂಗೆ
ಪರಸತಿಯನೊಲ್ಲೆಂಬ
ಛಲಬೇಕು ಶರಣಂಗೆ
ಪರದೈವವೊಲ್ಲೆಂಬ
ಛಲಬೇಕು ಶರಣಂಗೆ
ಲಿಂಗ ಜಂಗಮವೆಂಬ
ಛಲಬೇಕು ಶರಣಂಗೆ
ಅಂಗ ಜಂಗಮವೆಂಬ
ಛಲವಿಲ್ಲದಿರೆ ಮೆಚ್ಚ
ಸಂಗಮೇಶ

ಇಲ್ಲಿನ ವಿಶೇಷವೆಂದರೆ ಲ–ಕಾರವು ಪಾದಾನುಪ್ರಾಸವಾಗಿ ಬರುತ್ತಿರುವುದು ಮಾತ್ರವಲ್ಲ, ಪ್ರತಿ ಸಾಲಿನ ಎರಡನೆಯ ಪಾದದಲ್ಲಿಯೂ ಇಂತ ಪ್ರಾಸದ ಬಳಕೆಯಾಗಿರುವುದು ಮೊದಲ ಮೂರು ಸಾಲುಗಳಲ್ಲಿ ರ–ಕಾರವಿದ್ದರೆ ಕೊನೆಯ ಮೂರು ಸಾಲುಗಳಲ್ಲಿ ಅನುಸ್ವಾರದ ಬಳಿಕ ಗ–ಕಾರವಿದೆ. "ಸಂಗಮೇಶ"ವನ್ನು ಅಂಕಿತವಾಗಿ ಒಪ್ಪಿಕೊಳ್ಳುವುದಾದರೆ ಬಸವನ ಇನ್ನೂ ಹಲವು ವಚನಗಳಿಗೆ ಛಂದೋರೂಪ ಒದಗಿಬಂದೀತು. ಅಂತ ವಚನವೊಂದನ್ನು ಛಂದಸ್ಸಿಗೆ ತಂದಾಗ ತ್ರಿಪದಿ ಹುಟ್ಟಿಕೊಳ್ಳುವ ಉದಾಹರಣೆ ಇಂತಿದೆ.

ಕೊಲ್ಲೆನಯ್ಯ ಪ್ರಾಣಿಗಳ ಮೆಲ್ಲೆನಯ್ಯ ಬಾಯಿಚ್ಚೆಗೆ
ಒಲ್ಲೆನಯ್ಯ ಪರಸತಿಯರ ಸಂಗವ
ಬಲ್ಲೆನಯ್ಯ ಮುಂದೆ ತೊಡಕುಂಟೆಂಬುದ
ಬಳ್ಳದ ಬಾಯಂತೆ ಒಂದೇ ಮನವ ಮಾಡಿ
ನಿಲ್ಲೆಂದು ನಿಲಿಸಯ್ಯ ಕೂಡಲಸಂಗಮದೇವಾ (ಬಸವಣ್ಣನವರ ವಚನಗಳು 406)

ಇಲ್ಲಿ ಮಾಡಬೇಕಾದ್ದು ಇಷ್ಟೇ: "ಕೊಲ್ಲೆನಯ್ಯ", "ಮೆಲ್ಲೆನಯ್ಯ" ಇತ್ಯಾದಿಗಳನ್ನು "ಕೊಲ್ಲೆನೈ", "ಮೆಲ್ಲೆನೈ" ಎಂದಾಗಿಸಬೇಕು, ಮೊದಲ ಸಾಲಿನ "ಬಾಯಿಚ್ಚೆಗೆ"ಯನ್ನು "ಬಾಯ್ಸವಿಗೆ" ಎಂದಾಗಿಸಬೇಕು, ಮೂರನೆಯ ಸಾಲಿನ "ಮುಂದೆ"ಯನ್ನೂ ನಾಲ್ಕನೆಯ ಸಾಲಿನ "ಒಂದೇ ಮನವ ಮಾಡಿ"ಯನ್ನೂ ಕೈಬಿಡಬೇಕು. ಆಗ ಉಂಟಾಗುವ ತ್ರಿಪದಿ ಹೀಗಿದೆ.

ಕೊಲ್ಲೆನ್ನೈ ಪ್ರಾಣಿಗಳ
ಮೆಲ್ಲೆನ್ನೈ ಬಾಯ್ಸವಿಗೆ
ಒಲ್ಲೆನ್ನೈ ಪರಸತಿಯ ಸಂಗವನ್ನು
ಬಲ್ಲೆನ್ನೈ ತೊಡಕುಂಟು
ಬಳ್ಳ ಬಾಯ್ದೆರೆದಂತೆ
ನಿಲ್ಲೆಂದು ನಿಲಿಸಯ್ಯ ಸಂಗಮೇಶ

ಅಕ್ಕನ ಮತ್ತೊಂದು ವಚನವನ್ನು ನೋಡೋಣ.

ನಿತ್ಯವೆಂಬ ನಿಜಪದವೆನ್ನ ಹತ್ತೆ ಸಾರ್ದುದ ಕಂಡ ಬಳಿಕ
ಚಿತ್ತ ಕರಗಿ ಮನ ಕೊರಗಿ ಹೃದಯವರಳಿತು ನೋಡಯ್ಯ
ಒತ್ತಿ ಬಿಗಿದ ಸೆರೆಯೊಳಗೆ ಅತ್ತಿತ್ತಲೆಂದರಿಯದೆ
ಚನ್ನಮಲ್ಲಿಕಾರ್ಜುನನ ಪಾದದಲ್ಲಿ
ಮರೆದೊರಗಿದೆ ನೋಡಯ್ಯ (ಅಕ್ಕನ ವಚನಗಳು 233)

ಇಲ್ಲಿ ನಿತ್ಯ ಎಂಬ ನಿಜಪದವು ಹತ್ತೆ ಸಾರ್ದುದ ಕಂಡು ಚಿತ್ತವು ಕರಗಿ ಮನವು ಹೊರಗುತ್ತಿದೆ ಎನ್ನುತ್ತಾಳೆ ಅಕ್ಕ. ಹೀಗಿರುವಾಗ ಹೃದಯವರಳಿತು ಎಂಬ ಮಾತು ಇಲ್ಲಿ ಅಪ್ರಸ್ತುತವಾಗುತ್ತದೆ. ಮೂರನೆಯ ಸಾಲಿನಲ್ಲಿ ಕಾಣುವ "ಅತ್ತಿತ್ತಲೆಂದರಿಯದೆ" ಎಂಬ ಪ್ರಯೋಗವು ಅರ್ಥದ ದೃಷ್ಟಿಯಿಂದ ಸೂಕ್ತವಾಗಿಯೇ ಇದೆ. ಇದಕ್ಕೆ ಸಮನಾದ ಪ್ರಯೋಗಗಳನ್ನು ಇತರ ಶರಣರ ವಚನಗಳಲ್ಲಿಯೂ ಕಾಣಬಹುದು. "ಅತ್ತಿತ್ತ ಹೋಗಲೀಯದೆ ಎನ್ನ ಹೆಳವನ ಮಾಡಯ್ಯ ತಂದೆ" ಎಂಬ ಬಸವನ ವಚನವು ಇದಕ್ಕೆ ಉದಾಹರಣೆ. ಆದರೆ ಅಕ್ಕ ಇಲ್ಲಿ "ಅತ್ತ" ಮತ್ತು "ಇತ್ತ" ಪ್ರಯೋಗಗಳ ನಡುವಿನ ದ್ವಂದ್ವವನ್ನು ಸೂಚಿಸುತ್ತಿರಬಹುದೇ ಎಂದು ಕೇಳಬಹುದಾಗಿದೆ. ಅಲ್ಲಮನ ವಚನವೊಂದರಲ್ಲಿ "ಕತ್ತಲೆಯೆಂಬುದು ಇತ್ತಲೆಯಯ್ಯಾ, ಗುಹೇಶ್ವರನೆಂಬುದು ಅತ್ತಲೆಯಯ್ಯಾ" ಎನ್ನುತ್ತ ಈ ದ್ವಂದ್ವವು ಸೂಚಿತವಾಗಿಲ್ಲವೆ? ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮೇಲಿನಂತೆ "ಮಲ್ಲಿಕಾರ್ಜುನ" ಎಂಬ ಅಂಕಿತವನ್ನು ಸ್ವೀಕರಿಸಿದರೆ ಇಲ್ಲಿಯೂ ನಮ್ಮೆದುರು ಷಟ್ಪದಿಯೊಂದು ಅನಾವರಣಗೊಳ್ಳುವುದನ್ನು ಕಾಣಬಹುದು.

ನಿತ್ಯವೆನ್ನುವ ಪದವನೆನ್ನಯ
ಹತ್ತೆ ಸಾರ್ದುದ ಕಂಡ ಬಳಿಕಲಿ
ಚಿತ್ತ ಕರಗುತ ಮನ ಕೊರಗುತಿದ್ದಿತ್ತು ನೋಡಯ್ಯ
ಒತ್ತಿ ಬಿಗಿದಿರುತಿರ್ಪ ಸೆರೆಯೊಳು
ಅತ್ತಲರಿಯದೆ ಮಲ್ಲಿಕಾರ್ಜುನ-
ನಿತ್ತ ಪಾದದಿ ಮರೆದೊರಗಿದೆನು ಇತ್ತ ನೋಡಯ್ಯ

ಅನೇಕ ಸಂದರ್ಭಗಳಲ್ಲಿ ವಚನವನ್ನು ಪೂರ್ಣವಾಗಿ ಛಂದೋಬದ್ಧಗೊಳಿಸುವುದು ಸಾಧ್ಯವಲ್ಲ. ಅಕ್ಕನ ಈ ವಚನವನ್ನು ಅದಕ್ಕೆ ಉದಾಹರಣೆಯಾಗಿ ನೋಡಬಹುದು.

ಕಡೆಗೆ ಮಾಡಿದ ಭಕ್ತಿ ದೃಢವಿಲ್ಲದಾಳುತನ
ಮೃಡನೊಲಿಯೆ ಹೇಳಿದರೆ ಎಂತೊಲಿವನಯ್ಯ
ಮಾಡಲಾಗದಳಿಮನವ ಮಾಡಿದರೆ ಮನದೊಡೆಯ ಬಳ್ಳಾನೈಸೆ
ವಿರಳವಿಲ್ಲದ ಮಣಿಯ ಪವಣಿಸಿಹೆನೆಂದೊಡೆ
ದುರುಳ ಚನ್ನಮಲ್ಲಿಕಾರ್ಜುನನೆಂತೊಲಿವನಯ್ಯ (ಅಕ್ಕನ ವಚನಗಳು 105)

ಇಲ್ಲಿ ಮೊದಲ ಎರಡು ಸಾಲುಗಳನ್ನು ಪಾದಾನುಪ್ರಾಸದೊಂದಿಗೆ ಹೀಗೆ ಮಾರ್ಪಡಿಸಬಹುದು.

ಕಡೆಗೆ ಮಾಡಿದ ಭಕ್ತಿ
ದೃಢವಿಲ್ಲದಾಳುತನ
ಮೃಡನೊಲಿವನೆನಲು ಎಂತೊಲಿವನಯ್ಯ

ಕೊನೆಯ ಎರಡು ಸಾಲುಗಳಲ್ಲಿ "ವಿರಳ" ಮತ್ತು "ದುರುಳ" ಪ್ರಯೋಗಗಳಲ್ಲಿ ಪ್ರಾಸವಿದೆ, ಆದರೆ ಇಂಥ ಮತ್ತೊಂದು ಪ್ರಯೋಗವಿಲ್ಲದೆ ಅದು ಛಂದೋಬದ್ಧವಾಗದು. ಇಲ್ಲಿ "ಪವಣಿಸಿಹೆನೆಂದೊಡೆ" (ಅಂದರೆ ಪೋಣಿಸಿದೆ ಎಂದೊಡೆ) ಎನ್ನುವ ಬದಲು "ಕೊರಳಲಿತ್ತೊಡೆ" ಎಂದು ಹೇಳಿದರೆ ಅರ್ಥಕ್ಕೆ ಯಾವ ತೊಡಕೂ ಉಂಟಾಗದೆಯೇ ಪ್ರಾಸವನ್ನು ತಂದುಕೊಳ್ಳಬಹುದು. ಆಗ ಈ ಎರಡು ಸಾಲುಗಳು ಇಂತಾಗುತ್ತವೆ.

ವಿರಳವಲ್ಲದ ಮಣಿಯ
ಕೊರಳಲಿತ್ತೊಡೆ ನಮ್ಮ
ದುರುಳುಮನದೊಡೆಯ ಎಂತೊಲಿವನಯ್ಯಾ

ವಚನದ ಮೂರನೆಯ ಸಾಲು, "ಮಾಡಲಾಗದಳಿಮನವ ಮಾಡಿದರೆ ಮನದೊಡೆಯ ಬಳ್ಳಾನೈಸೆ", ಛಂದಸ್ಸಿಗೆ ನಿಲುಕದೆ ಕಗ್ಗಂಟಾಗಿ ಉಳಿದಿದೆ. ಮಾತ್ರವಲ್ಲ, ಅಂಕಿತವನ್ನು ಎಲ್ಲಿ ಕೂಡಿಸಬೇಕು ಎಂಬುದೂ ಸ್ಪಷ್ಟವಲ್ಲ. ಆದರೆ ಮೊದಲ ಎರಡು ಹಾಗೂ ಕೊನೆಯ ಎರಡು ಸಾಲುಗಳು ಛಂದಸ್ಸಿಗೆ ಒಗ್ಗುವಂಥದ್ದಾದ್ದರಿಂದ ಈ ವಚನದ ಕೆಲವು ಭಾಗಗಳು ಮೌಖಿಕ ಪರಂಪರೆ ಹಾದು ಲಿಖಿತ ಪರಂಪರೆ ಸೇರುವ ಹೊತ್ತಿಗೆ ಪುನರ್ರಚಿಸಲು ಸಾಧ್ಯವಾಗದಷ್ಟು ಅಸಮರ್ಪಕ ರೂಪ ಪಡೆದುಕೊಂಡಿತ್ತೆಂದು ಹೇಳಬೇಕಾದೀತು.

ನಮ್ಮಲ್ಲಿರುವ ಬಹುಪಾಲು ವಚನಗಳು ಇದೇ ರೀತಿಯ ತೊಡಕಿನಿಂದ ಕೂಡಿದ್ದಾಗಿದೆ. ಅಕ್ಕನ ಈ ವಚನವನ್ನು ಗಮನಿಸಿ:

ಅಳಿಸಂಕುಳವೇ ಮಾಮರನೇ
ಬೆಳದಿಂಗಳೇ ಕೋಗಿಲೆಯೇ
ನಿಮ್ಮೆಲ್ಲರನು ಒಂದ ಬೇಡುವೆನು
ಎನ್ನೊಡೆಯ ಚನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ

(ಅಕ್ಕನ ವಚನಗಳು 74)

ಇಲ್ಲಿ ಮೊದಲ ಎರಡು ಸಾಲುಗಳಲ್ಲಿ ಳ-ಕಾರದಿಂದ ಪಾದಾನುಪ್ರಾಸ ಉಂಟಾಗಿದೆ. ಎರಡನೆಯ ಸಾಲಿನಲ್ಲಿ ಕೋಗಿಲೆಯೇ ಶಬ್ದದ ಮುನ್ನ ಒಂದು ದೀರ್ಘಾಕ್ಷರ ಅಥವಾ ಎರಡು ಹ್ರಸ್ವಾಕ್ಷರಗಳ ಕೊರತೆಯಿದೆ. "ಓ" ಎಂಬ ಸಂಬೋಧನಾತ್ಮಕ ಶಬ್ದವನ್ನು ಸೇರಿಸಿದರೆ ಛಂದಸ್ಸು ಹೊಂದಿಕೊಳ್ಳುತ್ತದೆ. ಆದರೆ ವಚನಗಳಲ್ಲಿ ಇಂಥ ಪ್ರಯೋಗಗಳು ವಿರಳ. ಬದಲಿಗೆ "ಎಲೆ" ಎನ್ನುವುದಾದರೆ ಹೆಚ್ಚು ಸಮರ್ಪಕವಾಗುತ್ತದೆ. ಆಗ ಮೊದಲ ಎರಡು ಸಾಲುಗಳು ಛಂದಸ್ಸಿನ ದೃಷ್ಟಿಯಿಂದ ಸಮಗ್ರಗೊಳ್ಳುತ್ತದೆ.

ಅಳಿಸಂಕುಳವೇ ಮಾಮರನೇ
ಬೆಳಗಿಂಗಳೆ ಎಲೆ ಕೋಗಿಲೆಯೇ

ಆದರೆ ಮುಂದಿನ ಎರಡು ಸಾಲುಗಳ ಛಂದೋರೂಪವನ್ನು ನಿರ್ಣಯಿಸಲು ಸಾಧ್ಯವಿಲ್ಲ. ಅಕ್ಕನ ಮೂಲ ಕೃತಿಯಲ್ಲಿ ಇದು ಬಹುಶಃ ಈ ಕೆಳಗಿನ ತೃಪ್ತಿಕರವಲ್ಲದ ಸಾಲುಗಳನ್ನು ವಿದೂರವಾಗಿ ಹೋಲುತ್ತಿದ್ದಿರಲು ಸಾಧ್ಯ ಎಂದು ಮಾತ್ರ ಹೇಳಬಹುದಾಗಿದೆ.

ಎಲ್ಲರನೂ ನಾ ಬೇಡುವೆನ್ನೈ
ಮಲ್ಲಿಕಾರ್ಜುನನ ತೋರಿವಿರೇ

ಇನ್ನು ಅಕ್ಕ, ಬಸವರಲ್ಲದೆ ಇತರ ಶರಣರ ವಚನಗಳಲ್ಲಿ ಕೆಲವನ್ನು ಪರಿಶೀಲಿಸಿ ನೋಡೋಣ. ಬಸವಪೂರ್ವ ಯುಗದ ಶರಣರಲ್ಲಿ ಅಗ್ರಗಣ್ಯನಾದ ದೇವರ ದಾಸಿಮಯ್ಯನ ವಚನವೊಂದು ಇಂತಿದೆ.

ಮಡದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದಿತ್ತೆ
ಒಡೆಯನ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ
ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥ

(ದೇವರ ದಾಸಿಮಯ್ಯನ ವಚನಗಳು 81)

ಇಲ್ಲಿ ಮೊದಲ ಮೂರು ಸಾಲುಗಳ "ಮಡದಿ", "ಒಡೆಯ", "ಕಡೆಯ" ಶಬ್ದಗಳಲ್ಲಿ ಡ-ಕಾರವು ಪಾದಾನುಪ್ರಾಸವನ್ನು ಒದಗಿಸಿದೆ. ನಾಲ್ಕನೆಯ ಸಾಲಿನಲ್ಲಿ ಆರಂಭದ ನೀ-ಕಾರವನ್ನು ತೆಗೆದರೆ "ತೊಡಕು" ಶಬ್ದವು ಇದೇ ಪ್ರಾಸವನ್ನು ನೀಡುತ್ತದೆ. ಮೂರನೆಯ ಸಾಲು ಮೊದಲ ಎರಡು ಸಾಲುಗಳಿಗಿಂತ ತುಸು ದೀರ್ಘವಾದ್ದು. ಅಲ್ಲಿನ "ಪ್ರಾಣದಲ್ಲಿ" ಶಬ್ದವು ದಾಸಿಮಯ್ಯನದಾಗಿರದೆ ಮೌಖಿಕ ಪ್ರಸಾರದ ವೇಳೆಯಲ್ಲಿ ನುಸುಳಿಕೊಂಡದ್ದೆಂದು ತೋರುತ್ತದೆ. ಅದನ್ನು ಕೈಬಿಡತಕ್ಕದ್ದು. ಹಾಗೆ ಮಾಡಿದಲ್ಲಿ ಈ ಸಾಲು "ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಹಿಡಿಗೋಲ" ಎಂದಾಗುತ್ತದೆ. ಮತ್ತೊಂದು ಸಾಧ್ಯತೆಯೆಂದರೆ "ಅಂತ್ಯಜ" ಮೂಲರೂಪದಲ್ಲಿ ಇದ್ದಿರದ ಶಬ್ದ. ಮೊದಲ ಎರಡು ಸಾಲುಗಳ ಧಾಟಿಯಲ್ಲೇ ದಾಸಿಮಯ್ಯನು "ಕಡೆಯನ ಪ್ರಾಣಕ್ಕೆ ಹಿಡಿಗೋಲು ಇದ್ದಿತ್ತೆ" ಎಂದು ರಚಿಸಿರಬಹುದು. ಅಂತ್ಯಜ ಎಂಬ ಅರ್ಥದಲ್ಲಿ "ಕಡೆಯ" ಪದವು ಪರಿಗಣನೆಗೆ ಯೋಗ್ಯವಾದರೂ ಅದು ಪ್ರಯೋಗದಲ್ಲಿತ್ತೆಂದು ತೋರುವುದಿಲ್ಲ. ಅದೇ ವೇಳೆಗೆ ಶೂದ್ರ ಎಂಬ ಅರ್ಥದಲ್ಲಿ "ಕುಡಿಯ" ಶಬ್ದದ ಪ್ರಯೋಗವನ್ನು ಕನ್ನಡದ ಪ್ರಪ್ರಥಮ ಗ್ರಂಥವಾದ **ಕವಿರಾಜಮಾರ್ಗ**ದಲ್ಲಿಯೇ ಕಾಣುತ್ತೇವೆ. ಆ ಕಾಲದ ತಮಿಳು ಶಾಸನಗಳಲ್ಲಿ ನೆಲ ಉಳುವವರಿಗೆ "ಕುಡಿ", "ಕುಡಿಮಕ್ಕಳ್" ಮುಂತಾದ ಪ್ರಯೋಗಗಳು ಕಂಡುಬರುತ್ತವೆ. ದಾಸಿಮಯ್ಯನ ಪಾಠವು ಇದೇ ಆಗಿದ್ದಲ್ಲಿ ಮೊದಲ ಪಾದದ "ಕುಡಿ" ಮತ್ತು ಎರಡನೆಯ ಪಾದದ "ಹಿಡಿ" ಪ್ರಯೋಗಗಳಲ್ಲಿ ಡ-ಕಾರದ ಪ್ರಾಸ ಗುಂಟಾಗಿರುವುದು ಗಮನಾರ್ಹವಷ್ಟೇ? ಆದ್ದರಿಂದ ಉಳಿದ ಸಾಲುಗಳಲ್ಲಿಯೂ ಮೂಲತಃ ಹಾಗೆಯೇ ಇದ್ದಿರಬಹುದೇ ಎಂದು ಸಂಶಯಪಡಬಹುದು. ನಾಲ್ಕನೆಯ ಸಾಲಿನ ನಡುವಲ್ಲಿ ಬರುವ "ಜಡ" ಪ್ರಯೋಗವು ಇದನ್ನೇ ಒತ್ತಿಹೇಳುತ್ತಿರುವಂತೆ ತೋರುತ್ತದೆ. ಹಾಗಿದ್ದಲ್ಲಿ ಮೊದಲನೆಯ ಸಾಲಿನ ಉತ್ತರಪಾದದಲ್ಲಿ ಮೊದಲ ಎರಡು ಪದಗಳನ್ನು ಅದಲುಬದಲುಗೊಳಿಸಿ "ಮಡದಿಯ ಪ್ರಾಣಕ್ಕೆ ಮುಡಿಮೊಲೆ ಇದ್ದಿತ್ತೆ" ಎಂದಾಗಿಸಿದರೆ ಅಲ್ಲಿಯೂ ಎರಡೂ ಪಾದಗಳಲ್ಲಿ "ಮಡದಿ", "ಮುಡಿ" ಪ್ರಯೋಗಗಳಿಂದಾಗಿ ಡ-ಕಾರದ ಪ್ರಾಸ ಮೈಗೂಡಿಕೊಳ್ಳುತ್ತದೆ. ಉಳಿದದ್ದು ಎರಡನೆಯ ಸಾಲು. ಇದರ ಉತ್ತರಪಾದದಲ್ಲಿ ಡ-ಕಾರವಿಲ್ಲ. ಆದರೆ ಇಲ್ಲಿ ಒಡೆಯನ ಪ್ರಸ್ತಾಪವಾಗಿರುವುದರಿಂದ ಯಜ್ಞೋಪವೀತದ ಪ್ರಯೋಗವು ಅಸಹಜವಾಗಿದೆ. ಇದು ದಾಸಿಮಯ್ಯ ಬಳಸಿದ ಪ್ರಯೋಗವಲ್ಲ ಎಂದು ಬಗೆಯುತ್ತಾ ಬದಲಿಗೆ ಯಜ್ಞೋಪವೀತದಂತೆಯೇ ಮೈಮೇಲೆ ಕಟ್ಟಿಕೊಳ್ಳುವ ದಾರದಂತ ಮತ್ತೊಂದು ವಸ್ತು ಯಾವುದಿರಬಹುದು ಎಂದು ಯೋಚಿಸಿದಾಗ ತತ್ಕ್ಷಣ ಹೊಳೆಯುವ ಪದ "ಉಡಿದಾರ". ಹಾಗಿದ್ದಲ್ಲಿ ದಾಸಿಮಯ್ಯ "ಒಡೆಯನ ಪ್ರಾಣಕ್ಕೆ ಉಡಿದಾರ ಇದ್ದಿತ್ತೆ" ಎಂದು ಬರೆದಿರುವ ಸಾಧ್ಯತೆಯೇ ಹೆಚ್ಚು. ಈ ಸಲಹೆಗಳ ಬೆಳಕಲ್ಲಿ ಮೇಲಿನ ವಚನವನ್ನು ತಿದ್ದಿಕೊಳ್ಳಲು ಮುಂದಾದಾಗ ಅದರಲ್ಲಿ ಕನಿಷ್ಠ ಒಂದು

ಸಾಲು ಕಣ್ಮರೆಯಾಗಿರುವುದನ್ನು ಕಾಣಬಹುದು.

ಮಡದಿಯ ಪ್ರಾಣಕ್ಕೆ
ಮುಡಿಮೊಲೆಗಳಿದ್ದಿತ್ತೆ
ಒಡೆಯನ ಪ್ರಾಣಕ್ಕೆ
ಉಡಿದಾರವಿದ್ದಿತ್ತೆ
ಕುಡಿಯನ ಪ್ರಾಣಕ್ಕೆ
ಹಿಡಿಗೋಲು ಇದ್ದಿತ್ತೆ
x x x x x x x x
x x x x x x x x
[ಒಡಲಿಂಗೆ] **ನೀನಿತ್ತ**
ತೊಡಕನ್ನು ಈ ಜಗದ
ಜಡರೆತ್ತ ಬಲ್ಲರೈ
ರಾಮನಾಥ

ಈ ವಚನದ ಮೂರನೆಯ ಸಾಲಿನಲ್ಲಿ "ಹಿಡಿಗೋಲು" ಎನ್ನುವ ಬದಲು "ಕುಡುಗೋಲು" ಹೆಚ್ಚು ಹೊಂದಿಕೊಳ್ಳುವ ಪದ. ನಾಲ್ಕನೆಯ ಸಾಲು ಏನೆಂದು ಊಹಿಸಲು ನಮ್ಮಲ್ಲಿ ಉಪಾಧಿಗಳಿಲ್ಲವಾದರೂ "ಮಡದಿ", "ಒಡೆಯ", "ಕುಡಿಯ" ಪದಗಳನ್ನು ಅನುಸರಿಸಿ "ಬಡವ" ಎಂಬ ಶಬ್ದವನ್ನು ಅಳವಡಿಸಿಕೊಂಡರೆ "ಬಡವನ ಪ್ರಾಣಕ್ಕೆ ಹಿಡಿಗೋಲು ಇದ್ದಿತ್ತೆ" ಎಂದು ಈ ಸಾಲನ್ನು ಕಟ್ಟಿಕೊಳ್ಳಬಹುದು.

ಇತರ ಶರಣರ ಕೃತಿಗಳಿಗಿಂತ ದಾಸಿಮಯ್ಯನ ವಚನಗಳಲ್ಲಿ ತ್ರಿಪದಿಯ ಧಾಟಿಯನ್ನು ಬಹುಬೇಗ ಪತ್ತೆಹಚ್ಚಬಹುದು. ಈ ಕೆಳಗಿನ ವಚನವು ಯಾವ ಪರಿವರ್ತನೆಯೂ ಇಲ್ಲದೆಯೇ ತ್ರಿಪದಿಯ ಆಕಾರ ಹೊಂದಿದೆ.

ಇಳೆ ನಿನ್ನ ದಾನ
ಬೆಳೆ ನಿನ್ನ ದಾನ
ಸುಳಿದುಬೀಸುವ ಗಾಳಿ ನಿನ್ನ ದಾನ
ನಿನ್ನ ದಾನವನುಂಡು
ಅನ್ಯರನು ಹೊಗಳುವಾ
ಕುನ್ನಿಗಳನೇನೆಂಬೆ ರಾಮನಾಥ (ದೇವರ ದಾಸಿಮಯ್ಯನ ವಚನಗಳು 67)

ಇದೇ ರೀತಿಯ ದಾಸಿಮಯ್ಯನ ಮತ್ತೊಂದು ವಚನ ಇಂತಿದೆ:

ಎತ್ತು ನಿನ್ನ ದಾನ
ಬಿತ್ತು ನಿನ್ನ ದಾನ
ಸುತ್ತಿಹರಿವ ಸಾಗರವೆಲ್ಲ ನಿನ್ನ ದಾನ
ನಿನ್ನ ದಾನವನುಂಡು
ಅನ್ಯರನು ಹೊಗಳುವಾ
ಕುನ್ನಿಗಳನೇನೆಂಬೆ ರಾಮನಾಥ (ದೇವರ ದಾಸಿಮಯ್ಯನ ವಚನಗಳು 68)

ಇಲ್ಲಿ ಮೂರನೆಯ ಸಾಲಿನ "ಸುತ್ತಿಹರಿವ ಸಾಗರವೆಲ್ಲ" ಈ ಸಾಲನ್ನು ದೀರ್ಘಗೊಳಿಸುತ್ತಿದೆ. "ಸುತ್ತಿಹರಿವ" ಎಂಬ ಪ್ರಯೋಗವೂ ಅಷ್ಟು ಸಮಂಜಸವಾಗಿ ತೋರುತ್ತಿಲ್ಲ. ಈ ಎರಡೂ ಸಮಸ್ಯೆಗಳನ್ನು "ಸಪ್ತಸಾಗರವೆಲ್ಲ" ಎಂಬ ಪಾಠದ ಮೂಲಕ ಪ್ರಾಸಕ್ಕೆ ಲೋಪವುಂಟಾಗದೆಯೇ ಬಗೆಹರಿಸಬಹುದು. ಈ ಸಂದರ್ಭದಲ್ಲಿ ಮೇಲಿನ

ಎರಡು ವಚನಗಳು ಹಾಗೂ "ಕಾಯ ನಿನ್ನ ದಾನ ಜೀವ ನಿನ್ನ ದಾನ" ಎಂಬ ಮತ್ತೊಂದು ವಚನದ ಕುರಿತು ಎಲ್. ಬಸವರಾಜು ಅವರು ಮಾಡುವ ಈ ಪರಾಮರ್ಶೆ ಮಹತ್ವದ್ದು:

ಬಿರುದಾವಳೀ ಸ್ತೋತ್ರದ ವಚನಗಳು ಎಂಬ ವಚನ ಸಂಕಲನವೊಂದರಲ್ಲಿ ಆ ಮೂರು ವಚನಗಳು ಒಂದು ವಚನವೆಂಬಂತೆ ಉಲ್ಲಿಖಿತವಾಗಿರುವುದು. ಅಲ್ಲಿ ಆ ಮೂರನ್ನೂ ಒಂದೆಂಬಂತೆ ಸಮಾಹಾರಗೊಳಿಸುವಲ್ಲಿ "ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಹೇಳಾ ರಾಮನಾಥ" ಎಂಬ ಪಲ್ಲವಿಯಂತಹ ಮಾತನ್ನು ಮಧ್ಯೆ ಮಧ್ಯೆ ಬಿಟ್ಟು ನುಡಿಗಳನ್ನೆಲ್ಲ ಒಗ್ಗೂಡಿಸಿ ಕೊಟ್ಟಂತೆ ಕಾಣುವುದು. ದೇವರ ದಾಸಿಮಯ್ಯನಿಂದ ರಚಿತವಾದ "ಗೀತ"ವೊಂದು ಲಿಪಿಕಾರ ಮತ್ತು ಗಾಯಕರ ಗಾಯನ ರೀತಿಯನ್ನು ಅನುಸರಿಸಿ ಬರೆದ ಜನರ ಲೇಖನಸ್ಖಾಲಿತ್ಯದಿಂದಾಗಿ ಒಂದೊಂದು ನುಡಿಯೊಡನೆಯೂ ಪಲ್ಲವಿಯೂ ಸೇರಿಹೋಗಿ, ಪ್ರತ್ಯೇಕ ವಚನಗಳೆಂಬಂತೆ ಮಾರ್ಪಟ್ಟಿರಬೇಕು (ದೇವರ ದಾಸಿಮಯ್ಯನ ವಚನಗಳು, ಪುಟ 69).

ಈ ಮಾದರಿಯಲ್ಲಿಯೇ ಪರಿಷ್ಕರಿಸಿದ ಅಲ್ಲಮನ ಕೆಲವು ವಚನಗಳು ನೋಡತಕ್ಕದ್ದು.

ನಡೆವರಿಗೊಂದು ಬಟ್ಟೆ ಮನೆಯೊಡೆಯರಿಗೊಂದು ಬಟ್ಟೆ
ನಡೆಯದು ನಡೆಯದು ಹೋ ನಡೆಗೆಟ್ಟು ನಿಂದಿತ್ತಲ್ಲಾ
ಗಮನಾಗಮನದ ನುಡಿಯ ಬೆಡಗಿನ ಕೀಲ
ಮಡಗಿದಾತ ಬಲ್ಲ ಗುಹೇಶ್ವರಾ (ವ್ಯೋಮಮೂರುತಿ ಅಲ್ಲಮಪ್ರಭುದೇವರ ವಚನಗಳು 343)

ಇಲ್ಲಿ "ನಡೆಯದು ನಡೆಯದು ಹೋ" ಎನ್ನುವಲ್ಲಿ "ನಡೆಯದದು" ಎಂದು ಮತ್ತು "ಗಮನಾಗಮನದ" ಎಂಬಲ್ಲಿ "ನಡೆವ ನಡೆಯದ" ಎಂದು ಮಾರ್ಪಡಿಸಿಕೊಂಡು ಮೊದಲ ಸಾಲಿನಲ್ಲಿರುವ "ಮನೆ" ಪ್ರಯೋಗವನ್ನು ಕೈಬಿಟ್ಟರೆ ದೊರಕುವ ಪರಿಷ್ಕೃತ ರೂಪ ತ್ರಿಪದಿಯಲ್ಲಿರುತ್ತದೆ:

ನಡೆವರಿಗೊಂದು ಬಟ್ಟೆ
ಒಡೆಯರಿಗೊಂದು ಬಟ್ಟೆ
ನಡೆಯದದು ನಡೆಗೆಟ್ಟು ನಿಂದಿತಲ್ಲಾ
ನಡೆವ ನಡೆಯದ ನುಡಿಯ
ಬೆಡಗಿನಲಿ ಕೀಲನ್ನು
ಮಡಗಿದವ ತಾ ಬಲ್ಲ ಗೊಗ್ಗೇಶ್ವರಾ

ಇನ್ನೊಂದು ವಚನ ಹೀಗಿದೆ:

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತಯ್ಯಾ
ಬಯಲ ಜೀವನ ಬಯಲ ಭಾವನೆ
ಬಯಲು ಬಯಲಾಗಿ ಬಯಲಾಯಿತಯ್ಯಾ
ನಿನ್ನ ಪೂಜಿಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ (ವ್ಯೋಮಮೂರುತಿ ಅಲ್ಲಮಪ್ರಭುದೇವರ ವಚನಗಳು 639)

ಇಲ್ಲಿ ಮೂರನೆಯ ಸಾಲು "ಬಯಲ ಜೀವನ ಬಯಲ ಭಾವನೆ" ಅಪೂರ್ಣವಾಗಿದೆ. ಇದನ್ನು "ಬಯಲ ಜೀವನ ಬಯಲು ಬಯಲ ಭಾವನೆ ಬಯಲು" ಎಂದು

ಪರಿವರ್ತಿಸಿಕೊಳ್ಳುವುದು ಸಮಂಜಸ. ಉಳಿದದ್ದು ಸಣ್ಣ ಪರಿವರ್ತನೆಗಳು. ಐದನೆಯ ಸಾಲಿನ "ಮುನ್ನವೆ ಬಯಲಾದರು" ಎಂಬಲ್ಲಿ "ಮುನ್ನ ಬಯಲಾಗಿಹರು" ಎಂದು, ಆರನೆಯ ಸಾಲಿನ "ನಾ ನಿಮ್ಮ ನಂಬಿ"ಗೆ ಬದಲು "ನಿನ್ನಲ್ಲಿ" ಎಂದು ತಿದ್ದುಪಡಿ ಮಾಡಿಕೊಂಡಲ್ಲಿ ಈ ವಚನವು ಕೆಳಕಂಡಂತೆ ತ್ರಿಪದಿಯಾಗುತ್ತದೆ.

ಬಯಲು ಬಯಲನೆ ಬಿತ್ತಿ
ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತಯ್ಯಾ
ಬಯಲ ಜೀವನ ಬಯಲು
ಬಯಲ ಭಾವನೆ ಬಯಲು
ಬಯಲು ಬಯಲಾಗಿ ಬಯಲಾಯಿತಯ್ಯಾ
ನಿನ್ನ ಪೂಜಿಸಿದವರು
ಮುನ್ನ ಬಯಲಾಗಿಹರು
ನಿನ್ನಲ್ಲಿ ಬಯಲಾದೆ ಗೊಗ್ಗೇಶ್ವರಾ

ಕೊನೆಯದಾಗಿ ಈ ಅಲ್ಲಮನ ವಚನವನ್ನು ಪರಿಶೀಲಿಸತಕ್ಕದ್ದು.

ಅರಗಿನ ದೇಗುಲದಲ್ಲಿ ಒಂದು ಉರಿಯ ಲಿಂಗವ ಕಂಡೆ
ಲಿಂಗವ ಪೂಜಿಸುವ ಗೊರವನದೆತ್ತಲಾಡಹೋದನೋ
ಉತ್ತರಾಪಥದ ದರ್ಶನಾದಿಗಳಿಗೆ
ಸುತ್ತಿಮುತ್ತಿದ ಮಾಯೆ ಎತ್ತಲಿಕೆ ಹೋಯಿತ್ತು
ಮರನೊಳಗಣ ಕಿಚ್ಚು ಮರನ ಸುಟ್ಟದ ಕಂಡೆ
ಗುಹೇಶ್ವರಲಿಂಗವದೆತ್ತಲಾಡಹೋದನೋ (ವ್ಯೋಮಮೂರುತಿ ಅಲ್ಲಮಪ್ರಭುದೇವರ ವಚನಗಳು 418)

ಈ ವಚನದ ಮೂರನೆಯ ಸಾಲಿನಲ್ಲಿ "ದರ್ಶನಾದಿ" ಎಂಬ ಪ್ರಯೋಗವಿದೆ. ಪ್ರಾಸದ ಉದ್ದೇಶದಿಂದ ಅದನ್ನು "ತತ್ವಶಾಸ್ತ್ರ" ಎಂದು ಪರಿವರ್ತಿಸುವುದು ಉಪಯುಕ್ತ. ಇದರಿಂದ ಅರ್ಥದಲ್ಲಿ ಯಾವುದೇ ಲೋಪವುಂಟಾಗುವುದಿಲ್ಲ. ಅಂತೆಯೇ ಎರಡನೆಯ ಸಾಲಿನಲ್ಲಿರುವ "ಗೊರವ" ಶಬ್ದವನ್ನು ಕೊನೆಯ ಸಾಲಿನಲ್ಲಿ ಮತ್ತೊಮ್ಮೆ ಪ್ರಯೋಗಿಸತಕ್ಕದ್ದು. ಇದರೊಂದಿಗೆ ಸಣ್ಣಪುಟ್ಟ ತಿದ್ದುಪಡಿಗಳು ಸೇರಿದಾಗ ಈ ವಚನವೂ ತ್ರಿಪದಿಯಾಗುವುದನ್ನೇ ಕಾಣುತ್ತೇವೆ.

ಅರಗು ದೇಗುಲದಲ್ಲಿ
ಉರಿಯ ಲಿಂಗವ ಕಂಡೆ
ಗೊರವ ಪೂಜಿಸದೆತ್ತಲಾಡುತಿಹನೋ
ಉತ್ತರಾಪಥದಲ್ಲಿ
ತತ್ವಶಾಸ್ತ್ರಗಳನ್ನು
ಸುತ್ತಿಮುತ್ತಿದ ಮಾಯೆ ಎತ್ತಲಿಹುದೋ
ಮರನೊಳಡಗಿದ ಕಿಚ್ಚು
ಮರನ ಸುಟ್ಟುದ ಕಂಡೆ
ಗೊರವ ಗೊಗ್ಗೇಶ್ವರನೊಳಾಡುತಿಹನೋ

ಎಲ್ಲ ವಚನಗಳ ಮೂಲರೂಪವನ್ನೂ ಈ ರೀತಿ ಕಟ್ಟಿಕೊಳ್ಳಲಾಗದು. ಬಹುತೇಕ ಸಂದರ್ಭಗಳಲ್ಲಿ ಅವುಗಳು ಶತಮಾನಗಳ ಮೌಖಿಕ ಪ್ರಸಾರದಿಂದಾಗಿ ಪುನರ್ರಚಿಸಲು

ಸಾಧ್ಯವಲ್ಲದಷ್ಟು ಮಾರ್ಪಟ್ಟು ಹೋಗಿವೆ. ಕೆಲವೊಮ್ಮೆ ಇಡಿ ವಚನವೇ ಕಟ್ಟಿಕೊಳ್ಳಲಾಗದಂತೆ ಬದಲಾಗಿದ್ದರೆ, ಕೆಲವು ಸಲ ಅದನ್ನು ಭಾಗಶಃ ಮಾತ್ರ ಕಟ್ಟಿಕೊಳ್ಳುವುದು ಸಾಧ್ಯ. ವಚನ ವಾಙ್ಮಯದಲ್ಲಿ ಜನಪ್ರಿಯತೆಯಲ್ಲಿ ಮೊದಲ ಸ್ಥಾನ ಹೊಂದಿರುವ ಈ ಬಸವನ ವಚನ ಹೀಗೆ ಭಾಗಶಃ ಕಟ್ಟಿಕೊಳ್ಳಬಹುದಾದ್ದು.

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವನನೊಲಿಸುವ ಪರಿ

ಇಲ್ಲಿ ಮೊದಲ ಸಾಲು ರಗಳೆ ರೂಪದಲ್ಲಿದೆ. ಎರಡನೆಯ ಸಾಲನ್ನು ತಿದ್ದಬಹುದು. ಮೊದಲ ಸಾಲು "ಕಳಬೇಡ" ಎಂದು ಪ್ರಾರಂಭಗೊಳ್ಳುವುದರಿಂದ "ಮುನಿಯಬೇಡ" ಎಂಬ ಎರಡನೆಯ ಸಾಲಿನ ಪ್ರಯೋಗವು ಪ್ರಾಸಕ್ಕೆ ನಿಲುಕದು. ಅದನ್ನು "ಮುಳಿಬೇಡ" ಎಂದಾಗಿಸಿಕೊಳ್ಳಬಹುದು. ಅದೇ ಸಾಲಿನಲ್ಲಿ ಬರುವ "ಅಸಹ್ಯ"ವನ್ನು "ಅಸಹನೆ" ಎಂದು ತಿದ್ದಿಕೊಳ್ಳಬಹುದು. ಮೂರನೆಯ ಸಾಲು ಯಾವುದೇ ಪರಿವರ್ತನೆಯ ಅಗತ್ಯವಿಲ್ಲದ್ದು. ಹೀಗೆ ಮೂರು ಸಾಲುಗಳನ್ನು ರಗಳೆ ರೂಪಕ್ಕೆ ತಂದುಕೊಳ್ಳಬಹುದು.

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುಳಿಬೇಡ ಅನ್ಯರಿಗೆ ಅಸಹನೆಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ

ಆದರೆ ಕೊನೆಯ ಎರಡು ಸಾಲುಗಳನ್ನು ಛಂದೋಬದ್ಧವಾಗಿ ಕಟ್ಟಿಕೊಳ್ಳಲಾಗದು.

ನಮ್ಮ ಈ ಚರ್ಚೆಯನ್ನು ಇನ್ನೂ ನೂರಾರು ಉದಾಹರಣೆಗಳ ಮೂಲಕ ಮುಂದುವರಿಸುವುದು ಸಾಧ್ಯ. ಆದರೆ ಮೇಲಿನ ಚರ್ಚೆಯಿಂದಲೇ ಸ್ಪಷ್ಟವಾಗುವ ಸಂಗತಿಯೊಂದಿದೆ. ಶರಣರ ವಚನಗಳ ಮೂಲರೂಪ ಮುಕ್ತ ಛಂದಸ್ಸಿನದಾಗಿರಲಿಲ್ಲ. ಅದು ಅಂದು ಮನ್ನಣೆ ಪಡೆದಿದ್ದ ತ್ರಿಪದಿ, ಷಟ್ಪದಿ, ರಗಳೆ ಮೊದಲಾದ ಛಂದೋರೂಪಗಳಿಗೆ ಬದ್ಧವಾಗಿಯೇ ರಚಿಸಲಾದ, ಪ್ರತಿ ಸಾಲಿನ ಎರಡನೆಯ ಅಕ್ಷರ ಪ್ರಾಸಯುಕ್ತವಾಗಿರಬೇಕೆಂಬ ತತ್ವವನ್ನು ತಪ್ಪದೆ ಪಾಲಿಸಿದ ಕೃತಿಗಳು. ಹೀಗಾಗಿ ಪ್ರಸ್ತುತ ವಚನಗಳ ರಾಚನಿಕ ಸ್ವರೂಪದ ಬಗ್ಗೆ ನಮ್ಮಲ್ಲಿ ಮನೆಮಾಡಿರುವ ಗೃಹೀತವನ್ನು ಕೈಬಿಡುವುದು ಲೇಸು ಎನ್ನಿಸುತ್ತದೆ.

ಆಕರ ಸೂಚಿ

ಬಸವರಾಜು, ಎಲ್. (ಸಂ). 2017 [1952]. **ಬಸವಣ್ಣನವರ ವಚನಗಳು,** ಮೈಸೂರು: ಗೀತಾ ಬುಕ್ ಹೌಸ್.

ಬಸವರಾಜು, ಎಲ್. (ಸಂ). 2012 [1970]. **ದೇವರ ದಾಸಿಮಯ್ಯನ ವಚನಗಳು,** ಮೈಸೂರು: ಗೀತಾ ಬುಕ್ ಹೌಸ್.

ಬಸವರಾಜು, ಎಲ್. (ಸಂ). 2012 [1966]. **ಅಕ್ಕನ ವಚನಗಳು,** ಬೆಂಗಳೂರು: ಸಪ್ನ ಬುಕ್ ಹೌಸ್.

ರಾಮಾನುಜನ್, ಎ.ಕೆ. (ಅನು). 1973. **ಸ್ಪೀಕಿಂಗ್ ಆಫ್ ಶಿವ,** ನವದೆಹಲಿ: ಪೆಂಗ್ವಿನ್.

ಹಿರೇಮಠ, ಆರ್. ಸಿ. ಮತ್ತು ಎಮ್. ಎಸ್. ಸುಂಕಾಪುರ (ಸಂ). 1976. **ವ್ಯೋಮಮೂರುತಿ ಅಲ್ಲಮಪ್ರಭುದೇವರ ವಚನಗಳು,** ಧಾರವಾಡ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: Murugeshi T
Title: avalakkipāre bayalu baṇḍe citragaḷu

ಅವಲಕ್ಕಿಪಾರೆ ಬಯಲು ಬಂಡೆ ಚಿತ್ರಗಳು

ಮುರುಗೇಶಿ ಟಿ.
ಸಹಪ್ರಾಧ್ಯಾಪಕರು
ಎಂ.ಎಸ್.ಆರ್.ಎಸ್.ಕಾಲೇಜು,
ಶಿರ್ವ–574116. ಉಡುಪಿ.
murugesh.turuvekere01@gmail.com

ಭಾರತದ ಪಶ್ಚಿಮ ಕರಾವಳಿಯಲ್ಲಿ, ಕರ್ನಾಟಕ ರಾಜ್ಯದ ನೂತನ ಜಿಲ್ಲೆಯಾಗಿ 1998ರಲ್ಲಿ ಅಸ್ತಿತ್ವಕ್ಕೆ ಬಂದ ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ ಬೈಂದೂರು, ಕುಂದಾಪುರ, ಉಡುಪಿ, ಬ್ರಹ್ಮಾವರ, ಕಾಪು, ಹೆಬ್ರಿ ಮತ್ತು ಕಾರ್ಕಳ ಎಂಬ ಏಳು ತಾಲೂಕುಗಳಿವೆ. ಕುಂದಾಪುರ ತಾಲೂಕಿನ ಇಡೂರು–ಕುಂಜ್ಞಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಅವಲಕ್ಕಿಪಾರೆಯು ಕೊಲ್ಲೂರು ವನ್ಯಜೀವಿ ರಕ್ಷಿತಾರಣ್ಯದ ವಾರಾಹಿ ಬಲದಂಡೆಯ ಮೇಲಿರುವ ವಿಶಾಲವಾದ ಒಂದು ಬಯಲು. ತೀರಾ ಇತ್ತೀಚಿನವರೆಗೂ ಇದು ಸ್ಥಳೀಯ ಬೇಟೆಗಾರರ ಅಚ್ಚುಮೆಚ್ಚಿನ ಬೇಟೆಯ ತಾಣವಾಗಿತ್ತೆಂದು ಸ್ಥಳೀಯರು ತಿಳಿಸುತ್ತಾರೆ.

ಅವಲಕ್ಕಿಪಾರೆ ಸುಮಾರು 20–30 ಎಕರೆ ವಿಸ್ತಾರವಾದ ಸಮತಟ್ಟಾದ ಬಯಲು, ಸುತ್ತಲೂ ಕಾಡಿನಿಂದ ಆವೃತ್ತವಾಗಿದೆ. ಈ ಬಯಲಿನ ಪಶ್ಚಿಮಕ್ಕೆ ಕಡಿದಾದ ಕಣಿವೆಯಿದೆ. ಬಯಲಿನಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ನೀರಿನ ಹೊಂಡಗಳಿದ್ದು, ಸರಿಸುಮಾರು ನವೆಂಬರ್–ಡಿಸೆಂಬರ್ ವರೆಗೆ ಅವುಗಳಲ್ಲಿ ನೀರು ಇರುತ್ತದೆ. ಈ ಸಮತಟ್ಟಾದ ಬಯಲು ಬಂಡೆಯ ಮೇಲೆ ಕಲ್ಲಿನಿಂದ ಕುಟ್ಟಿ – ಉಜ್ಜಿ ಮಾಡಿದ ಆದಿಮ ಕಾಲದ ಮಾನವನ ಚಿತ್ರಗಳು ಹಾಗೂ ಕಲ್ಗುಳಿಗಳಿವೆ.

ಈ ನಿವೇಶನವು 13.78.702೦ ಉತ್ತರ ರೇಖಾಂಶದಲ್ಲಿ ಹಾಗೂ 74.792.17೦ ಪೂರ್ವ ಅಕ್ಷಾಂಶದಲ್ಲಿದೆ. ಸದರಿ ನಿವೇಶನವು ಸಮುದ್ರಮಟ್ಟದಿಂದ 84 ಮೀಟರ್ ಎತ್ತರವಿದೆ. ಈ ನಿವೇಶನದಿಂದ ಸುಮಾರು 13 ಕಿ.ಮೀ ದೂರದಲ್ಲಿ ಪ್ರಖ್ಯಾತ ಕೊಲ್ಲೂರು ಮೂಕಾಂಬಿಕಾ ದೇವಾಲಯವಿದೆ. ಈ ನಿವೇಶನದ ಪರಿಚಯಾತ್ಮಕ ಮಾಹಿತಿಯನ್ನು ಒದಗಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ನಿವೇಶನದ ಶೋಧ

ಪ್ರಸ್ತುತ ಲೇಖಕ ಮತ್ತು ಅವರ ತಂಡ 2009 ರಲ್ಲಿ ಸಂಶೋಧಿಸಿದ್ದ ಬುದ್ಧನ ಜೆಡ್ಡು (ಮುರುಗೇಶಿ ಮತ್ತು ಸುಂದರ 2009; MURUGESHI & PRASHANTH SHETTY, 2011:142-144; MURUGESHI, 2015:422-435) ಆದಿಮ ಚಿತ್ರಗಳನ್ನು ಕೊಲ್ಲೂರು ಸುತ್ತ-ಮುತ್ತಲಿನ ಜನರಿಗೆ ತೋರಿಸಿ ಆಗಿಂದಾಗ್ಗೆ ಮಾಹಿತಿಯನ್ನು ನೀಡಿದ್ದರ ಪರಿಣಾಮ, ಸ್ಥಳೀಯ ಸಂಜೀವ ಪಿ ಶೆಟ್ಟಿಯವರು ಕೊಲ್ಲೂರಿನ ಮುರಳೀಧರ ಹೆಗಡೆಯವರಿಗೆ, ಅವಲಕ್ಕಿ ಪಾರೆಯಲ್ಲಿ ಏನೋ ಚಿತ್ರಗಳಿವೆ ಎಂಬ ಮಾಹಿತಿಯನ್ನು ನೀಡಿದರು. ಆ ಮಾಹಿತಿಯನ್ನು ಆಧರಿಸಿ, ಪ್ರಸ್ತುತ ಲೇಖಕರು ತಮ್ಮ ವಿದ್ಯಾರ್ಥಿಗಳಾದ ಶ್ರೇಯಸ್, ನಾಗರಾಜ ಮತ್ತು ಶರ್ಮಿಳ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳಾದ ಗಂಗಾಧರ್, ಸಿದ್ದೇಶ್ವರ್, ಆನಂದ್, ಜನಾರ್ಧನ್ ಮತ್ತಿತರರೊಂದಿಗೆ ದಿನಾಂಕ: 17.02.2019ರಂದು ಸ್ಥಳಕ್ಕೆ ಭೇಟಿ ನೀಡಿದರು.

ಅಲ್ಲಿ ತೀರಾ ಅಸ್ಪಷ್ಟವಾದ ಕೆಲವು ರೇಖಾಕೃತಿಗಳು ಕಂಡು ಬಂದವು. ಈ ನಿವೇಶನವು ಮೂಕಾಂಬಿಕಾ ವನ್ಯಜೀವಿ ಸಂರಕ್ಷಿತಾರಣ್ಯದ ವ್ಯಾಪ್ತಿಯಲ್ಲಿರುವುದರಿಂದ, ಅರಣ್ಯಾಧಿಕಾರಿಗಳಾದ ಆರ್.ಎಫ್.ಓ. ಶ್ರೀ ಸರೇಶ್ ರವರ ಅನುಮತಿಯನ್ನು ಪಡೆದುಕೊಂಡು, ಅಲ್ಲಿನ ಚಿತ್ರಗಳನ್ನು ಒಂದೊಂದಾಗಿ, ಕಸ-ಕಡ್ಡಿ, ಧೂಳನ್ನು ತೆಗೆದು ಸ್ವಚ್ಛಗೊಳಿಸುತ್ತಾ ಹೋದ ಹಾಗೆ, ದ್ವಿರೇಖಾಕೃತಿಯ ಚಿತ್ರಗಳು ಮೂರ್ತರೂಪದಲ್ಲಿ ಪಡಿಮೂಡಿ ನಮ್ಮ ಉತ್ಸಾಹವನ್ನು ಸೂರ್ಮಡಿಸಿದವು. ಸುಮಾರು 19-20 ಚಿತ್ರಗಳನ್ನು ನಮ್ಮ ತಂಡ ಹೊರತೆಗೆಯಿತು.

ಹೆಸರಿನ ಸ್ವಾರಸ್ಯ

ಅವಲಕ್ಕಿಪಾರೆಯ ಆದಿಮ ಚಿತ್ರಗಳ ಸಮೀಪ ಹಾಗೂ ಸುತ್ತ-ಮುತ್ತ, ಸುಮಾರು ಎರಡು ಕಿ.ಮೀ ವ್ಯಾಪ್ತಿಯಲ್ಲಿ ಅವಲಕ್ಕಿಯನ್ನು ಎಲ್ಲೆಡೆ ಚೆಲ್ಲಿದಂತೆ ಚಿಕ್ಕ-ಚಿಕ್ಕ ಬಿಳಿಕಲ್ಲುಗಳ ರಾಶಿ ಕಂಡುಬರುತ್ತದೆ. ಆದ್ದರಿಂದ, ಈ ಪಾರೆಯನ್ನು ಅವಲಕ್ಕಿಪಾರೆ ಎಂದು ಜನ ಕರೆಯುತ್ತಾರೆ.

ತುಳುಕೋಶದಲ್ಲಿ 'ಪಾದೆ' ಎಂಬ ಶಿಲಾವಾಚಕದ ಅರ್ಥ ಕೊಟ್ಟಿದ್ದರೂ, 'ಪಾರೆ'ಯ ಅರ್ಥ ಕೊಟ್ಟಿಲ್ಲ. ಪಾರೆಗಳು ವಾರ್ಗಿಕವಾಗಿ ಹೆಚ್ಚಾಗಿ ಕಂಡು ಬರುವುದು ಮಲೆಯಾಳದ ಪ್ರಭಾವವುಳ್ಳ ಕಾಸರಗೋಡಿನಲ್ಲಿ ಎಂಬುದನ್ನು ಗಮನಿಸಬೇಕು. ಆದ್ದರಿಂದ, ತುಳುವಿನಲ್ಲಿ ಮೂಲತಃ 'ಪಾಜಿ' ಇಲ್ಲ ಎಂದು ರಘಪತಿ ಭಟ್ ಕೆಮ್ತೂರ್ ಅಭಿಪ್ರಾಯಪಡುತ್ತಾರೆ (ರಘಪತಿ 2017:199). ಆದರೆ, ಕುಂದಾಪುರ ತಾಲೂಕಿನ ಪೂರ್ವೋತ್ತರ ಭಾಗದ ಮಲೆನಾಡು ಭಾಗದಲ್ಲಿ ಬುದ್ಧನ ಜೆಡ್ಡು ಸಮೀಪ ಭೀಮನಪಾರೆ, ಅವಲಕ್ಕಿಪಾರೆ ಹತ್ತಿರ ಕೊಳತಪಾರೆ, ಮುಂತಾದ ಪಾರೆಗಳು ಕಂಡುಬರುತ್ತವೆ. ಆದ್ದರಿಂದ, ತುಳುವಿನಲ್ಲಿ 'ಪಾರೆ' ಇಲ್ಲ ಎಂಬುದನ್ನು ಮರುಪರೀಶಿಲಿಸುವ ಅಗತ್ಯವಿದೆ ಎನಿಸುತ್ತದೆ.

ಕಲೆಯ ಉಗಮ

ಕಲೆ ಮಾನವನ ಭಾವಾಭಿವ್ಯಕ್ತಿಯ ಒಂದು ಮಾಧ್ಯಮ. ಅನಕ್ಷರಸ್ತ ಸಮಾಜದ ಮಾನವನ ಮೊಟ್ಟ ಮೊದಲ ಕಲಾಭಿವ್ಯಕ್ತಿ ಆತನ ಕಲ್ಲಿನ ಆಯುಧಗಳು. ನಂತರ, ಮೂಳೆಯ ಆಯುಧೋಪಕರಣಗಳು. ಆಯುಧಗಳ ತಯಾರಿಕತೆಯೇ ಮನುಷ್ಯ ಮತ್ತು ಪ್ರಾಣಿಗಳ ನಡುವಿನ ಬಹು ದೊಡ್ಡ ಭಿನ್ನತೆ ಎಂದು ಅನೇಕ ಪುರಾತತ್ವ ವಿದ್ವಾಂಸರು ಗುರುತಿಸಿದ್ದಾರೆ. ಅಕ್ಷರಗಳ ಪರಿಚಯವೇ ಇಲ್ಲದ ಮನುಷ್ಯ, ತಾನು ನೋಡಿದ, ಅನುಭವಿಸಿದ, ಕೇಳಿದ ಹಾಗೂ ತನ್ನ ಮೇಲೆ ಗಾಢ ಪ್ರಭಾವವನ್ನುಂಟು ಮಾಡಿದ ಸಂಗತಿಗಳನ್ನು ಕಲ್ಲಿನಿಂದ ಕುಟ್ಟಿ ಮಾಡಿದ ಚಿತ್ರಗಳಿಂದ ಅಥವಾ ಗೀರು ಚಿತ್ರಗಳಿಂದ ಅಥವಾ ನೈಸರ್ಗಿಕ ಬಣ್ಣಗಳಿಂದ ಬಯಲು ಬಂಡೆಗಳ ಮೇಲೆ, ಕಲ್ಲಾಸರೆಗಳಲ್ಲಿ, ಗುಹೆಗಳಲ್ಲಿ ಚಿತ್ರಗಳನ್ನು ರಚಿಸಿದ. ಈ ಚಿತ್ರಗಳೇ ಜಗತ್ತಿನ ಅತ್ಯಂತ ಪ್ರಾಚೀನ ಚಿತ್ರಗಳು ಅಥವಾ ಮಾನವನಿಂದ ರಚಿಸಲ್ಪಟ್ಟ ಆದಿಮ ಚಿತ್ರಗಳು. ಇಂತಹ ಚಿತ್ರಗಳ ಗುಹಾಲಯಗಳು, ಸ್ಪೇನ್‌ನ ಅಲ್ಟಮೀರಾ, ಫ್ರಾನ್ಸ್ ನ ಲ್ಯಾಸ್ಕೋ ಎಂಬಲ್ಲಿ ಆಕಸ್ಮಿಕವಾಗಿ ಬೆಳಕಿಗೆ ಬಂದವು (ಸುಂದರ 1994:5–7).

ಭಾರತದಲ್ಲಿ, ಇಂತಹ ಅಧ್ಯಯನಗಳಿಗೆ ಅಸ್ತಿಭಾರ ಹಾಕಿದವರು ಯೂರೋಪಿಯನ್ನರೇ ಆದರೂ, ಅವುಗಳನ್ನು ಶಾಸ್ತ್ರೀಯವಾಗಿ, ಭಾರತೀಯ ದೃಷ್ಟಿಕೋನದಿಂದ ವ್ಯಾಪಕ ಅಧ್ಯಯನ ಕೈಗೊಂಡವರಲ್ಲಿ, ವಿ. ಎಸ್. ವಾಕಣ್‌ಕರ್ (1958), ಯಶೋಧರ ಮಠ್‌ಪಾಲ್(1984), ಪಾಂಡೆ (1971) ಹಾಗೂ ಅ. ಸುಂದರ, ರಘನಾಥ್ ಭಟ್ ಅವರು ಮೊದಲಿಗರು. ಇತ್ತೀಚೆಗೆ, ಗಿರಿರಾಜ್ ಕುಮಾರ್ (ಮಧ್ಯ ಪ್ರದೇಶ), ಸೋನಾವಾನೆ (ರಾಜಸ್ಥಾನ್), ಕಾಂತಿಪವಾರ್(ಮಹಾರಾಷ್ಟ್ರ), ಎನ್. ಚಂದ್ರಮೌಳಿ (ಅವಿಭಜಿತ ಆಂಧ್ರಪ್ರದೇಶ), ಬಿ. ವಸಂತ ಶೆಟ್ಟಿ ಮತ್ತು ಟಿ.ಮುರುಗೇಶಿ (ಕನ್ನಡ ಕರಾವಳಿ), ಶರಣಬಸಪ್ಪ ಕೋಲ್ಕಾರ್ (ಹಂಪಿ ಮತ್ತು ಕೊಪ್ಪಳ), ಮೋಹನ ಆರ್, (ಕರ್ನಾಟಕ), ಎಚ್. ಶ್ರೀಶೈಲ ಆರಾಧ್ಯ, ಲಕ್ಷ್ಮಣ್ ತೆಲಗಾವಿ (ಚಿತ್ರದುರ್ಗ), ಜೆ.ಟಿ. ಜಯರಾಮಯ್ಯ (ಮಂಡ್ಯ) ಬಿ.ಸಿ.ಪಾಟೀಲ (ಕೊಪ್ಪಳ), ಜಯದೇವಪ್ಪ ಜೈನಕೇರಿ, ಜಿ.ಕೆ. ದೇವರಾಜಸ್ವಾಮಿ (ಮಲೆನಾಡು ಪ್ರದೇಶ) ಮುಂತಾದ ಮಹನೀಯರು ಈ ಕ್ಷೇತ್ರದಲ್ಲಿ ಅಹರ್ನಿಶಿ ದುಡಿದಿದ್ದಾರೆ ಮತ್ತು ದುಡಿಯುತ್ತಿದ್ದಾರೆ.

ಕರ್ನಾಟಕದಲ್ಲಿ, ಆದಿಮ ಚಿತ್ರಕಲೆಯ ಬಗ್ಗೆ ವ್ಯವಸ್ಥಿತವಾದ ಅಧ್ಯಯನವನ್ನು ಕೈಗೊಂಡು, ಈ ಕುರಿತು ಆದ್ಯ ಗ್ರಂಥವನ್ನು ರಚಿಸಿದವರು, ಅ. ಸುಂದರ ಅವರು (1994). ಆದರೆ, ಚಿತ್ರದುರ್ಗ ಪರಿಸರಕ್ಕೆ ಸೀಮಿತಗೊಳಿಸಿ, ಮಧ್ಯಕರ್ನಾಟಕದ ಆದಿಮಕಲೆಯ ಶ್ರೀಮಂತಿಕೆಯನ್ನು, ಸುಂದರ ಅವರಿಗಿಂತ ಮೊದಲೇ ಒಂದು ಕಿರುಗ್ರಂಥವನ್ನು ಪ್ರಕಟಿಸಿ, ಪರಿಚಯಿಸಿದವರು ಎಚ್. ಶ್ರೀಶೈಲ ಆರಾಧ್ಯ ರವರು (1983). ತದನಂತರ, ಶರಣಬಸಪ್ಪ ಕೊಲ್ಕಾರ್ ರವರು, ಈ ವಿಷಯಕ್ಕೆ ಸಂಬಂಧಿಸಿ ಉನ್ನತ ಅಧ್ಯಯನವನ್ನು ಕೈಗೊಂಡು, ಒಂದು ಅತ್ಯುತ್ತಮವಾದ ಗ್ರಂಥವನ್ನು ಪ್ರಕಟಿಸಿದ್ದಾರೆ (2010). ಪ್ರಕಟಿತ ಕೃತಿಗಳನ್ನು ನೋಡಿದರೆ, ಈ ಕ್ಷೇತ್ರದಲ್ಲಿ ಆಗಿರುವ ಕೆಲಸ ತೀರಾ ಅತ್ಯಲ್ಪ ಎನ್ನುವುದು ಸ್ಪಷ್ಟವಾಗುತ್ತದೆ.

ಕನ್ನಡ ಕರಾವಳಿ

ಸುಮಾರು 160 ಮೈಲು ಉದ್ದದ, ಕನ್ನಡ ಕರಾವಳಿ ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಪೂರ್ವದಲ್ಲಿ ಕಡಿದಾದ ಸಹ್ಯಾದ್ರಿ ಬೆಟ್ಟಸಾಲುಗಳ ನಡುವೆ ಹರಡಿಕೊಂಡಿರುವ, ಒಂದು ಚಿಕ್ಕ ಭೂ ಪ್ರದೇಶ. ಚಾರಿತ್ರಿಕವಾಗಿ ತುಳುನಾಡು ಎಂದೂ, ಆಳ್ವಖೇಡ ಎಂದು ಕರೆಯಲ್ಪಟ್ಟಿರುವ ಪ್ರದೇಶ.

ಪ್ರಾಗೈತಿಹಾಸಿಕ ಯುಗದಲ್ಲಿ ಈಜಿಪ್ಟ್‌ನ ಪಿರಮಿಡ್ ಯುಗದೊಂದಿಗೆ (Nagaraja Rao 1985:141-148) ನಂತರ ಅರಬರು, ಚೀನಿಯರೂ ಹಾಗೂ ಪಾಶ್ಚಿಮಾತ್ಯ ಜಗತ್ತಿನೊಂದಿಗೆ ನಿರಂತರ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದ ಕರ್ನಾಟಕದ ಹೆಬ್ಬಾಗಿಲು ಈ ಕರಾವಳಿ (Upadhyaya & Upadhyaya 1983)

ಅವಲಕ್ಕಿಪಾರೆಯ (ರೇಖಾ)ಚಿತ್ರಗಳ ವಿವರಣಾತ್ಮಕ ಸೂಚಿ

1. ಹೆಣ್ಣಿನ ಚಿತ್ರ. ಅವಲಕ್ಕಿಪಾರೆಯ ರಾಣಿ. ಸುಮಾರು 1.80 ಮೀ. ಎತ್ತರವಿದೆ ಹಾಗೂ 1.80 ಮೀ. ಅಗಲವಿದೆ. ದ್ವಿರೇಖಾ ಚಿತ್ರ. ಹೊಟ್ಟೆಯ ಬಲಭಾಗದ ಮೇಲೆ ದುಂಡನೆಯ ಕಲ್ಕುಳಿಯಿದೆ. ತಲೆಯ ಎಡಭಾಗದಲ್ಲಿ ದೀರ್ಘ ಅಂಡಾಕೃತಿಯ ಕಲ್ಕುಳಿಯಿದೆ. ತಲೆಯನ್ನು ಪೂರ್ವಾಭಿಮುಖವಾಗಿ ತಿರುಗಿಸಲಾಗಿದೆ. ಎದೆಯ ಉಬ್ಬಿದ ಭಾಗವನ್ನು ಸಹಜವಾಗಿ ಬಿಡಿಸಲಾಗಿದೆ.

2. ದ್ವಿರೇಖಾ ಪುರುಷ ಚಿತ್ರ. ತಲೆಯನ್ನು ಪೂರ್ವಾಭಿಮುಖವಾಗಿ ತಿರುಗಿಸಲಾಗಿದೆ. ಎರಡೂ ಕೈಗಳನ್ನು ಭೂಮಿಗೆ ಸಮಾನಾಂತರವಾಗಿ ಅಗಲಿಸಿದಂತೆ ತೋರಿಸಲಾಗಿದೆ. ಚಿತ್ರದ ಎಡಕಾಲು 1.40 ಮೀ. ಉದ್ದವಿದೆ. ಬಲಗಾಲು 1.25 ಮೀ. ಉದ್ದವಿದೆ. ಈ ಅಂತರದ ಮೂಲಕ ಚಿತ್ರಿತ ಮನುಷ್ಯನ ಚಲನಾ ಸ್ಥಿತಿಯನ್ನು ಅಭಿವ್ಯಕ್ತಿಸಲಾಗಿದೆ.

3. ಕಾಡುಗೂಳಿಗಳು. ರೇಖಾ ಚಿತ್ರ-2 ರ ಎಡಭಾಗದಲ್ಲಿ, ಓಡುತ್ತಿರುವಂತೆ ಚಿತ್ರಿಸಲಾಗಿರುವ ಎರಡು ಕಾಡು ಗೂಳಿಗಳ ಚಿತ್ರಗಳಿವೆ. ಅವುಗಳ ದೈಹಿಕ ಮೈಮಾಟದ ಸಹಜ ರೂಪು-ರೇಖೆಗಳಿಂದ ಕಣ್ಮನ ಸೆಳೆಯುತ್ತವೆ. ಹರಪ್ಪಾ ಮುದ್ರೆಗಳ ಮೇಲೆ ಕಂಡು ಬರುವ ಗೂಳಿಗಳ ಚಿತ್ರಗಳಿಗಿಂತ ಪ್ರಾಚೀನತೆಯ ಲಕ್ಷಣಗಳನ್ನು ಇವು ಹೊಂದಿವೆ. ವಾಸ್ತವವಾಗಿ ಅಲ್ತಮೀರಾ ಗುಹೆಯಲ್ಲಿ ಕಂಡು ಬರುವ ಗೂಳಿಗಳ ವರ್ಣಚಿತ್ರಗಳನ್ನು ಇವು ಬಹುವಾಗಿ ಹೋಲುತ್ತವೆ. ಎರಡೂ ಗೂಳಿಗಳು ದಕ್ಷಿಣಾಭಿಮುಖವಾಗಿ ಓಡುತ್ತಿವೆ.

4. 0.5 ಮೀ. ವಿಸ್ತೀರ್ಣದ ಒಂದು ಆಕರ್ಷಕವಾದ ಸುರುಳಿಯ ಚಿತ್ರ. ಈ ಸುರುಳಿಯ ಎಡಭಾಗದಲ್ಲಿ ಓರ್ವ ಮನುಷ್ಯನ ಚಿತ್ರವಿದೆ.

5. ಪೂರ್ವಾಭಿಮುಖವಾಗಿ ತಲೆಯನ್ನು ತಿರುಗಿಸಿ ನಿಂತಿರುವ ದ್ವಿರೇಖಾ ಮನುಷ್ಯನ ರೇಖಾ ಚಿತ್ರ. 1.55 ಮೀ. ಎತ್ತರ, 1.20 ಮೀ. ಅಗಲವಿದೆ.

6. ಪೂರ್ವೋತ್ತರಕ್ಕೆ ಮುಖವನ್ನು ತಿರುಗಿಸಿ ನಿಂತಿರುವ ದ್ವಿರೇಖಾ ಮನುಷ್ಯನ ರೇಖಾ ಚಿತ್ರ. 1.73 ಮೀ. ಎತ್ತರ ಮತ್ತು 1.10 ಮೀ. ಅಗಲವಿದೆ.

7. ಪೂರ್ವಾಭಿಮುಖವಾಗಿ ತಲೆಯನ್ನು ತಿರುಗಿಸಿ ನಿಂತಿರುವ ದ್ವಿರೇಖಾ ಮನುಷ್ಯನ ರೇಖಾ ಚಿತ್ರ. 6 ಮತ್ತು 7ರ ಮನುಷ್ಯ ಚಿತ್ರಗಳ ನಡುವೆ ನಾಲ್ಕು ಸಮಭಾಗವಾಗಿಸಿದ ಒಂದು ವೃತ್ತವಿದೆ. ಇದು ಸುಮಾರು 0.30 ಮೀ. ವಿಸ್ತೀರ್ಣವನ್ನು ಹೊಂದಿದೆ.

8. ಪೂರ್ವೋತ್ತರಕ್ಕೆ ಮುಖ ಮಾಡಿ ನಿಂತಿರುವ ದ್ವಿರೇಖಾ ಮನುಷ್ಯನ ರೇಖಾ ಚಿತ್ರ. 1.85 ಮೀ. ಉದ್ದ, 1.73 ಮೀ. ಅಗಲವಿದೆ.

9. ಪೂರ್ವೋತ್ತರವಾಗಿ ಮುಖ ಮಾಡಿ ನಿಂತ ದ್ವಿರೇಖಾ ಮನುಷ್ಯನ ರೇಖಾ ಚಿತ್ರ. 1.30 ಮೀ. ಎತ್ತರ ಹಾಗೂ 1.30 ಮೀ. ಅಗಲವಿದೆ.



ಚಿತ್ರ–1 ಬೇಟೆಗಾರ ಪುರುಷನ ರೇಖಾಚಿತ್ರ

10. ಪೂರ್ವಾಭಿಮುಖವಾಗಿ ನಿಂತಿರುವ ದ್ವಿರೇಖಾ ಮನುಷ್ಯ ಚಿತ್ರ 1.85 ಮೀ. ಎತ್ತರ ಮತ್ತು 1.50 ಮೀ. ಅಗಲವಿದೆ. ರೇಖಾ ಚಿತ್ರ–9 ಮತ್ತು ರೇಖಾ ಚಿತ್ರ–10 ರ ನಡುವೆ ನಾಲ್ಕು ಸಮಭಾಗ ಮಾಡಿರುವ ಒಂದು ವೃತ್ತವಿದೆ. ಇದು ಸುಮಾರು 0.30 ಮೀ. ವಿಸ್ತೀರ್ಣವನ್ನು ಹೊಂದಿದೆ (ನೋಡಿ: ಚಿತ್ರ–1).
11. ಮರಿಯಾನೆ ಚಿತ್ರ(?) ದ್ವಿರೇಖಾ ಮರಿಯಾನೆಯ ಚಿತ್ರ, ಪೂರ್ವಾಭಿಮುಖವಾಗಿದೆ. ಎತ್ತರ 0.90 ಮೀ. ಮತ್ತು 0.55 ಮೀ. ಅಗಲವಿದೆ. ರೇಖಾ ಚಿತ್ರ ತುಂಬಾ ಆಕರ್ಷಕವಾಗಿ ಮತ್ತು ಪ್ರಮಾಣ ಬದ್ಧವಾಗಿದೆ.



ಚಿತ್ರ–2
ಜಿಂಕೆ ಮತ್ತು
ನಾಯಿಯ
ರೇಖಾಚಿತ್ರ

12. ಜಿಂಕೆಯ ರೇಖಾ ಚಿತ್ರ. ದಕ್ಷಿಣಾಭಿಮುಖವಾಗಿ ಮುಖವನ್ನು ತಿರುಗಿಸಿ ನಿಂತಿದೆ. 0.60 ಮೀ. ಎತ್ತರ ಹಾಗೂ 0.60 ಮೀ. ಅಗಲವಿದೆ. ಉದ್ದ-ಅಗಲಗಳು ಸಮಪ್ರಮಾಣದಲ್ಲಿರುವುದು ಗಮನೀಯ ಸಂಗತಿಯಾಗಿದೆ. ಬುದ್ಧನ ಜೆಡ್ಡುವಿನಲ್ಲಿರುವ ಜಿಂಕೆಯ ರೇಖಾ ಚಿತ್ರವನ್ನು ಇದು ಬಹುತೇಕ ಹೋಲುತ್ತದೆ (ನೋಡಿ: ಚಿತ್ರ–2).

13. ಎತ್ತರ 0.50 ಮೀ. ಮತ್ತು 0.70 ಮೀ. ಅಗಲವಿರುವ ನಾಯಿಯ ದ್ವಿರೇಖಾ ಚಿತ್ರ. ಉತ್ತರಕ್ಕೆ ಮುಖ ಮಾಡಿ ನಿಂತಿದೆ. ಕನ್ನಡ ಕರಾವಳಿಯಲ್ಲಿ ಇದುವರೆಗೆ ಕಂಡು ಬಂದ ಮೊಟ್ಟ ಮೊದಲ ನಾಯಿಯ ಚಿತ್ರ ಇದು.

14. ಟೊಂಗೆಯ ಮೇಲೆ ಕುಳಿತ ಹಕ್ಕಿಯ ದ್ವಿರೇಖಾ ಚಿತ್ರ (ನೋಡಿ: ಚಿತ್ರ–3).



ಚಿತ್ರ–3 ಹಕ್ಕಿಯ ರೇಖಾಚಿತ್ರ



ಚಿತ್ರ–4 ಹಂದಿಯ ರೇಖಾಚಿತ್ರ

15. ಕವಣೆಯಂತಹ ದುಂಡನೆಯ ಕಲ್ಲಿನಿಂದ ಹಕ್ಕಿಯನ್ನು ಬೇಟೆ ಆಡುತ್ತಿರುವ ಮನುಷ್ಯನ ರೇಖಾ ಚಿತ್ರ.

16. ಮಗುವಿನ ರೇಖಾ ಚಿತ್ರ. ಎತ್ತರ 0.75 ಮೀ., 0.26 ಮೀ. ಅಗಲವಿದೆ.

17. ಕಾಡು ಹಂದಿಯ ದ್ವಿರೇಖಾ ಚಿತ್ರ. ಪೂರ್ವಾಭಿಮುಖವಾಗಿ ಓಡುತ್ತಿರುವಂತಿದೆ. ಎತ್ತರ 0.65 ಮೀ. ಹಾಗೂ ಅಗಲ 0.50 ಮೀ. ಇದೆ. ಅವಲಕ್ಕಿಪಾರೆಯ ಉತ್ಕೃಷ್ಟ ರೇಖಾಕೃತಿ (ನೋಡಿ: ಚಿತ್ರ–4).

18. ಬೂಮರಾಂಗ್(?) ಅಂತ್ಯಪೂರ್ವ ಹಳೇ ಶಿಲಾಯುಗದಲ್ಲಿ ಸಂಶೋಧಿಸಲ್ಪಟ್ಟ ಒಂದು ಪರಿಣಾಮಕಾರಿ ಎಲುಬಿನ ಆಯುಧ. ಕಾಡು ಹಂದಿಯ ಮೇಲ್ಭಾಗದಲ್ಲಿ ಚಿತ್ರಿಸಲ್ಪಟ್ಟಿದೆ.

19. ದ್ವಿರೇಖಾ ಮನುಷ್ಯನ ಚಿತ್ರ. ಪೂರ್ವಾಭಿಮುಖವಾಗಿ ನಿಂತಿದೆ. ಎತ್ತರ 1.28 ಮೀ. ಮತ್ತು 1.12 ಮೀ. ಅಗಲವಿದೆ.



ಚಿತ್ರ-5 ಕಲ್ಗುಳಿಗಳು

20. ಕಲ್ಗುಳಿಗಳು, ನಿವೇಶನದ ಉತ್ತರಕ್ಕೆ ಬಿಡಿ ಬಿಡಿಯಾಗಿ ಒಂದೇ ಸಾಲಿನಲ್ಲಿ ರಚಿಸಿರುವ ಕಲ್ಗುಳಿಗಳಿವೆ. ಇವಲ್ಲದೆ, ಬಹಳ ಸುಂದರವಾಗಿ ಸಿಲಿಂಡರಿನಾಕಾರದ ಕಲ್ಲಿನ ಮೇಲೆ ದ್ವಿ ರೇಖೆಯಲ್ಲಿ, ಅಂದರೆ ಎರಡು ಸಾಲಿನಲ್ಲಿ ರಚಿಸಿದ ನಾಲ್ಕು ಕಲ್ಗುಳಿಗಳಿವೆ. ಈ ಕಲ್ಗುಳಿಗಳ ಎರಡೂ ಬದಿಯಲ್ಲಿ ಆಟದ ಕಾಯಿಗಳನ್ನು ತುಂಬಿಸಿ ಇಡಲು ರಚಿಸಿದ ಎರಡು ಗುಳಿಗಳಿವೆ (ನೋಡಿ: ಚಿತ್ರ-5).

ಈ ನಿವೇಶನದಲ್ಲಿ ಒಟ್ಟು 11 ಮಾನವ ಶಿಲ್ಪಗಳಿವೆ. ಅದರಲ್ಲಿ ಒಂದು ಹೆಣ್ಣು ಹಾಗೂ ಒಂದು ಮಗು. ಒಟ್ಟು 6 ಪ್ರಾಣಿಗಳ ಚಿತ್ರಗಳಿವೆ. ಅದರಲ್ಲಿ ಒಂದು ಹಂದಿ, ಒಂದು ಜಿಂಕೆ, ಒಂದು ನಾಯಿ, ಒಂದು ಆನೆ ಹಾಗೂ ಎರಡು ಗೂಳಿಯ ಚಿತ್ರಗಳಿವೆ. ಕೇವಲ ಒಂದು ಪಕ್ಷಿಯ ಚಿತ್ರವಿದೆ. ನಿವೇಶನದಲ್ಲಿ ಇನ್ನೂ ಚಿತ್ರಗಳು ಇರುವ ಸಾಧ್ಯತೆಯಿದ್ದು, ಮುಂದಿನ ದಿನಗಳಲ್ಲಿ ಆ ಚಿತ್ರಗಳನ್ನು ಪರಿಶೋಧಿಸುವ ಪ್ರಯತ್ನವನ್ನು ಮುಂದುವರೆಸಲಾಗುವುದು.

ಕಲ್ಲಿನ ಆಯುಧಗಳು

ಪ್ರಸ್ತುತ ನಿವೇಶನದಲ್ಲಿ, ಅವಲಕ್ಕಿಯನ್ನು ಚೆಲ್ಲಿದಂತೆ ಚಿಕ್ಕ-ಚಿಕ್ಕ ಬಿಳಿ ಬೆಣಚು ಕಲ್ಲುಗಳು ರಾಶಿ ರಾಶಿಯಾಗಿ ಕಂಡು ಬರುತ್ತವೆ. ಇವುಗಳ ಜೊತೆಯಲ್ಲಿ, ಕಂದು, ಕೆಂಪು ಬಣ್ಣದ ಕಲ್ಲುಗಳೂ ಸಹ ವಿರಳವಾಗಿ ಕಂಡು ಬರುತ್ತವೆ (ನೋಡಿ: ಚಿತ್ರ-6). ಆದರೆ, ಇದುವರೆಗೆ ನಿವೇಶನದಲ್ಲಿ ದೊರೆತ ಕಲ್ಲಿನ ಆಯುಧಗಳಲ್ಲಿ ಹೆಚ್ಚಿನ ಸಂಖ್ಯೆಯ ಆಯುಧಗಳು ಡಾಲರೈಟ್ ಶಿಲೆಯಲ್ಲಿ ಮಾಡಿದ ಆಯುಧಗಳಾಗಿವೆ. ಇವುಗಳಲ್ಲಿ ವಿವಿಧ ಗಾತ್ರದ ಹೆರೆಗತ್ತಿಗಳು, ಬಾಣದ ಮೊನೆಗಳು, ಭರ್ಜಿಯ ಮೊನೆಗಳು, ಕೊರೆಯುವ (ಬ್ಯೂರಿನ್ಸ್) ಆಯುಧಗಳು ಹಾಗೂ ವಿವಿಧ ಗಾತ್ರದ ದುಂಡನೆಯ ಕವಣೆಕಲ್ಲುಗಳು ಪ್ರಮುಖವಾಗಿವೆ.



ಚಿತ್ರ-6 ಅವಲಕ್ಕಿ ಚೆಲ್ಲಿದಂತೆ ಕಾಣುವ ಬೆಣಚುಕಲ್ಲುಗಳ ರಾಶಿ.

ಸಂಕ್ಷಿಪ್ತ ವಿಮರ್ಶೆ

ಅವಲಕ್ಕಿಪಾರೆಯ ಚಿತ್ರಗಳು ಮೂಲತಃ ಬೇಟೆಯನ್ನು ಪ್ರಾತಿನಿಧಿಕವಾಗಿ ಸಂಕೇತಿಸುವ ಶಿಲ್ಪಗಳಾಗಿವೆ. ಹಂದಿ ಬೇಟೆ, ಜಿಂಕೆ ಬೇಟೆ, ಹಕ್ಕಿ ಬೇಟೆ ಹಾಗೂ ವಿಶೇಷವಾಗಿ ಕಾಡುಗೂಳಿಗಳ ಬೇಟೆ ಇಲ್ಲಿನ ಚಿತ್ರಗಳ ಪ್ರಮುಖ ವಸ್ತುವಾಗಿದೆ. ಇಲ್ಲಿ ದೊರೆತ ಕಲ್ಲಿನ ಆಯುಧಗಳು ಸಹ ಮೂಲತಃ ಬೇಟೆಯ ಸಾಧನಗಳಾಗಿವೆ. ಆದ್ದರಿಂದ, ಕೃಷಿ ಪ್ರಧಾನ ಆರ್ಥಿಕ ಜೀವನದ ಆರಂಭದ ಮುಂಚಿನ ಕಾಲದ ಚಿತ್ರಗಳಿವು ಎಂದು ತರ್ಕಿಸಬಹುದಾಗಿದೆ. ಅಂದರೆ, ಅವಲಕ್ಕಿಪಾರೆಯ ಮಾನವ ಆಹಾರ ಸಂಗ್ರಹಣೆ ಮತ್ತು ಬೇಟೆಗಾರಿಕೆಯ ಆರ್ಥಿಕತೆಯನ್ನು ಹೊಂದಿದ್ದ ಮಾನವನೆಂದು ತರ್ಕಿಸಬಹುದಾಗಿದೆ. ಬುದ್ಧನಜೆಡ್ಡು ನಿವೇಶನದ ಚಿತ್ರಗಳು ಕೃಷಿ ಪ್ರಧಾನ ಹಾಗೂ ಸ್ಥಿರ ಜೀವನವನ್ನು ಪ್ರತಿನಿಧಿಸುವ ಚಿತ್ರಗಳಾದರೆ, ಅವಲಕ್ಕಿಪಾರೆಯ ಚಿತ್ರಗಳು ಇದಕ್ಕೆ ತದ್ವಿರುದ್ಧವಾದ ಬೇಟೆಗಾರಿಕೆ ಪ್ರಧಾನವಾದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ.

ಅವಲಕ್ಕಿಪಾರೆಯಲ್ಲಿ ಗೂಳಿಗಳು ಬೇಟೆಯ ವಸ್ತುಗಳಾದರೆ, ಬುದ್ಧನಜೆಡ್ಡುವಿನಲ್ಲಿ ಗೂಳಿಗಳು ಆರಾಧನೆಯ ವಸ್ತುಗಳಾಗಿವೆ. ಈ ಸಾಂಸ್ಕೃತಿಕ ವೈರುಧ್ಯಗಳು ಹಾಗೂ ಆಯುಧಗಳು ಮತ್ತು ಚಿತ್ರಗಳು ಅವಲಕ್ಕಿಪಾರೆ ನಿವೇಶನದ ಕಾಲಮಾನ ನಿರ್ಣಯಿಸುವ ಪ್ರಮುಖ ಅಂಶಗಳಾಗಿವೆ.

ಕಾಲಮಾನ

ಆದಿಮ ಚಿತ್ರಕಲೆಯ ಕಾಲ ನಿರ್ಣಯ ಅತ್ಯಂತ ತೊಡಕಿನ ಹಾಗೂ ಸಂಕೀರ್ಣವಾದ ಸಂಗತಿಯಾಗಿದೆ. ಅ. ಸುಂದರ ಅವರು ಕರ್ನಾಟಕದ ಆದಿಮ ಚಿತ್ರಕಲೆಯ ಕಾಲಮಾನವನ್ನು ವಿಶಾಲವಾದ ತಳಹದಿಯ ಮೇಲೆ ಸೂಕ್ಷ್ಮ ಶಿಲಾಯುಗ ಕಾಲದಿಂದ – ಬೃಹತ್ ಶಿಲಾಯುಗ ಕಾಲಕ್ಕೆ ಸೇರಿವೆಯೆಂದು ವಿವರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆ ಅಂಕೋಲ ಸಮೀಪ ಇರುವ ಬೋಳೆಯಲ್ಲಿ, ವಿಶಾಲ ಸಮತಟ್ಟಾದ ಜಂಬಿಟ್ಟಿಗೆಯ ಕಲ್ಲಿನ ಮೇಲೆ ಎರಡು ಎದುರು-ಬದುರಾಗಿ ನಿಂತಿರುವ ಗೂಳಿಗಳು ಅಥವಾ ಹಸುಗಳು,

ಸೊಂಡಿಲನ್ನು ಎತ್ತಿದ ಆನೆ, ಹಾವು, ಜಿಂಕೆ, ಮೀನು ಮತ್ತು ನಾಲ್ಕು ಭಾಗಗಳುಳ್ಳ ಒಂದು ಆಯತಾಕೃತಿ ಚಿತ್ರಗಳನ್ನು 1975ರಲ್ಲಿ ಸುಂದರ ಅವರು ಪರಿಶೀಲಿಸಿ ಅಧ್ಯಯನವನ್ನು ಮಾಡಿದರು. ಇಲ್ಲಿಂದ ಸುಮಾರು ಎರಡು-ಎರಡೂವರೆ ಕಿ.ಮೀ. ದೂರದಲ್ಲಿರುವ ಬೆಲೆಕೆರೆಯಲ್ಲಿ ಸೂಕ್ಷ್ಮ ಶಿಲಾಯುಗದ ನೆಲೆಯಿದೆ. ತುಲನಾತ್ಮಕವಾಗಿ ಇದರ ಕಾಲಮಾನ ಸುಮಾರು ಕ್ರಿ.ಪೂ. 5000 ಎಂದು ಬೋಳೆಯ ಚಿತ್ರಗಳ ಕಾಲಮಾನವನ್ನು ನಿರ್ಧರಿಸಿದ್ದಾರೆ (1994:35). ಗಾವಳಿಯ ಗೂಳಿಯ ಚಿತ್ರವನ್ನು ಹೆಸರಿಸಿ, ವಿವರಿಸುತ್ತಾ, ಇದು ಹರಪ್ಪಾ ಮುದ್ರೆಯೊಂದರ ಮೇಲೆ ಕಂಡು ಬರುವ ಗೂಳಿಯನ್ನು ಹೋಲುತ್ತದೆ, ಆದ್ದರಿಂದ ಗಾವಳಿ ಮತ್ತಿತರ ಕಡೆ ಕಂಡು ಬರುವ ಚಿತ್ರಗಳು ಅಂತ್ಯಕಾಲೀನ ಹರಪ್ಪಾ ಪರಂಪರೆಯ ಅಳಿದುಳಿದ ಅವಶೇಷಗಳೆಂದು ತಿಳಿಸುತ್ತಾರೆ. ಅಂತೆಯೇ ಅಂತ್ಯಕಾಲೀನ ಹರಪ್ಪಾದ ಕಾಲವನ್ನು ಕ್ರಿ. ಪೂ. 2000-1750 ರ ಕಾಲವೆಂದು ತರ್ಕಿಸಿದ್ದಾರೆ (Sundara, 1991:59).

ಗಾವಳಿ ಮತ್ತು ಬುದ್ಧನ ಜೆಡ್ಡುವಿನ ಆದಿಮ ಕಲೆಯಲ್ಲಿ ಗೂಳಿ ಪ್ರಧಾನವಾಗಿ ಕಂಡು ಬರುತ್ತದೆ ಹಾಗೂ ಈ ನಿವೇಶನಗಳ ಚಿತ್ರಗಳು ಅರಾಧನಾ ಪರಂಪರೆಗೆ ಸೇರಿದ ಅವಶೇಷಗಳಾಗಿವೆ. ಈ ಎರಡೂ ನೆಲೆಗಳಲ್ಲಿ ಸದರಿ ಲೇಖಕ ನೂತನ ಶಿಲಾಯುಗದ ಶಿಲಾಯುಧಗಳನ್ನು ಸಂಶೋಧಿಸಿದ್ದಾರೆ. ಆದ್ದರಿಂದ ಇವುಗಳ ಕಾಲಮಾನವನ್ನು ಸುಮಾರು ಕ್ರಿ. ಪೂ. 2000 ದಿಂದ 1750 ಎಂದು ಪರಿಗಣಿಸಬಹುದಾಗಿದೆ.

ಅವಲಕ್ಕಿ ಪಾರೆಯ ಚಿತ್ರಗಳು ಬೇಟೆಗಾರಿಕೆಯನ್ನೇ ಪ್ರಧಾನ ಆಶಯವಾಗಿ ಪ್ರತಿಬಿಂಬಿಸುವುದರಿಂದ ಮತ್ತು ಬೋಳೆಯ ಚಿತ್ರಗಳಿಗಿಂತ ಇಲ್ಲಿನ ಚಿತ್ರಗಳು ತುಂಬಾ ಪ್ರಾಚೀನತೆಯನ್ನು ಅಭಿವ್ಯಕ್ತಗೊಳಿಸುವುದರಿಂದ, ಇವುಗಳ ಕಾಲಮಾನವನ್ನು ಕ್ರಿ. ಪೂ. 7000 ದಿಂದ 6000 ಕಾಲಕ್ಕೆ ಸೇರಿದ ಚಿತ್ರಗಳೆಂದು ಸಕಾರಾತ್ಮಕವಾಗಿ ನಿರ್ಧರಿಸಬಹುದಾಗಿದೆ.

ಆಕರ ಸೂಚಿ:

ಕನ್ನಡ

1. ರಘುಪತಿ, ಕೆಮ್ತೂರು. 2017. **ತುಳುನಾಡಿನ ಸ್ಥಳನಾಮಾಧ್ಯಯನ**. ಶಿರ್ವ: ಎಂ.ಎಸ್.ಆರ್.ಎಸ್.ಕಾಲೇಜು.
2. ಶ್ರೀಶೈಲ, ಆರಾಧ್ಯ ಎಚ್. 1983. **ಸಂಶೋಧನೆಯ ಹಾದಿಯಲ್ಲಿ**. ಚಿತ್ರದುರ್ಗ: ಆರೋಹಣ ಪ್ರಕಾಶನ.
3. ಶರಣಬಸಪ್ಪ, ಕೋಲ್ಕಾರ್. 2010. **ಶಿಲಾಯುಗದ ಗವಿಚಿತ್ರಗಳು**. ಗುಲ್ಬರ್ಗಾ: ಶ್ರೀ ಬಸವ ಪ್ರಕಾಶನ.
4. ಸುಂದರ, ಅ. 1994. **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**. ಬೆಂಗಳೂರು: ಕರ್ನಾಟಕ ಲಲಿತ ಕಲಾ ಅಕಾಡೆಮಿ.

ಇಂಗ್ಲಿಷ್

1. MURUGESHI T. & PRASHANTH SHETTY. 2011. 'Discovery of rock art and associated Neolithic assemblage in the south west coast of Karnataka'. **PURAKALA: The Journal of Rock Art Society of India,** Vol. 20-21. Agra. Pp. 142-144.
2. MURUGESHI T. 2015. 'A Note on the Rock Art in Coastal Karnataka'. (Ed.) Ajit Kumar, **Rock-Art: Recent Researches and Perspectives**

(Festschrift to Padma Shri Dr. Yashodar Matpal), Vol. II. New Delhi: New Bharatiya Book Corporation. Pp. 425-432.

3. Nagaraja Rao M.S. 1985. 'Significance of Pottery Head rests from Neolithic Sites of Karnataka'. **Studies in Indian Archaeology.** New Delhi. Pp. 141-148.
4. Sundara A. 1991. 'Prehistoric and Protohistoric Cultures of Dakshinakannada'. **Perspective on Dakshinakannada and Coorg.** Mangalore: Mangalore University, Pp. 59.
5. Sundar A., & Murugeshi T. 2009. 'A Newly Discovered Rock – engraving Site in Udupi District, Karnataka'. A Paper presented in the 14th National conference of Rock Art Society of India at Rewa (M.P.) on 18th-20th December2009.
6. Upadhyaya U.P. and Susheela P. Upadhyaya. 1983. **Dravidian and Nigro-African.** Samshodhana Prakashana. Udupi.
7. Times News. 26.02.2019. 'Petro glyphs of Mesolithic age found near Kollur: a first in west coast'.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: Mohana R
Title: prāgitihāsa 'bādāmi śailiya manuśyara varṇacitragaḷu'

ಪ್ರಾಗಿತಿಹಾಸ 'ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳು'

ಮೋಹನ ಆರ್.
ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಪೋಸ್ಟ್ ಡಾಕ್ಟರಲ್ ಫೆಲೋ,
(ಯು.ಜಿ.ಸಿ)
ಡೆಕ್ಕನ್ ಕಾಲೇಜ್, ಸ್ನಾತಕೋತ್ತರ ಮತ್ತು ಸಂಶೋಧನ ಸಂಸ್ಥೆ
ಸ್ವಾಯತ್ತ ವಿಶ್ವವಿದ್ಯಾನಿಲಯ,
ಪುಣೆ – 411 006
ಮೊ: 9980774716
mohangulya@gmail.com

ಬಾದಾಮಿಯು ಭೌಗೋಳಿಕವಾಗಿ ಕಲಾದಗಿ ಶಿಲಾಶ್ರೇಣಿಯಲ್ಲಿದ್ದು, ಇದು ಎರಡು ಉಪ ಶಿಲಾಶ್ರೇಣಿಗಳನ್ನು ಹೊಂದಿದೆ. ಕ್ರಮವಾಗಿ ತೃತೀಯ ಕಂದುಬಣ್ಣದ ಅಗ್ನಿಶಿಲೆ ಮತ್ತು ಸಂಚಿತ ಶಿಲೆಗಳು ಹಾಗೂ ಬಾದಾಮಿ ಶಿಲಾವರ್ಗಗಳಾಗಿವೆ (Viswanathiah 1983). ವಿಶೇಷವೆಂದರೆ ಬಂಡೆಚಿತ್ರಗಳು ಬಾದಾಮಿ ಶಿಲಾವರ್ಗದಲ್ಲಿ ಮಾತ್ರ ಕಂಡುಬಂದಿವೆ (Wakankar & Brooks 1976; ಸುಂದರ 1978, 1994; Neumayer 1993: ಮೋಹನ 2015, 2016a–c, 2017, 2018).

ಬಾದಾಮಿ ಶಿಲಾಶ್ರೇಣಿಯಲ್ಲಿ 32 ಬಂಡೆಚಿತ್ರ ನೆಲೆಗಳಿಂದ ಒಟ್ಟು 823 ಚಿತ್ರಗಳಿದ್ದು, ಮನುಷ್ಯರ ಹಾಗೂ ಪ್ರಾಣಿಯ ಚಿತ್ರಗಳು ಅಧಿಕ ಪ್ರಮಾಣದಲ್ಲಿವೆ (Mohana 2015). ಈ ಶಿಲಾಶ್ರೇಣಿಯ ಚಿತ್ರಗಳಲ್ಲಿ 294 ಮನುಷ್ಯ (human), 295 ಪ್ರಾಣಿ (fauna), 7 ಗಿಡ ಹೂ ಬಳ್ಳಿ (flora), 156 ವಸ್ತು (objects), 63 ವಿನ್ಯಾಸಾಕೃತಿ (designs) ಮತ್ತು 7 ಧಾರ್ಮಿಕತೆಗೆ ಸಂಬಂಧಿಸಿದ ಚಿತ್ರಗಳು (deities) ಕಂಡುಬಂದಿವೆ (Mohana 2015, 2016).


ಬಂಡೆಚಿತ್ರಗಳಲ್ಲಿ ಹಲವಾರು ಮನುಷ್ಯರ ಚಿತ್ರ ಪ್ರಕಾರಗಳಿವೆ. ಉದಾಹರಣೆಗೆ 'S' ಮಾದರಿಯ ಮನುಷ್ಯರು, ಬೆತ್ತಲೆ ಮಾನವಾಕೃತಿ ಚಿತ್ರಗಳು, ಕಡ್ಡಿ

ಆಕಾರದ ಮನುಷ್ಯ ಚಿತ್ರ, ನಿಚ್ಚಣಿಕೆ ರೂಪದಲ್ಲಿರುವ ಮನುಷ್ಯ ಚಿತ್ರಗಳು, ಮಾಂತ್ರಿಕ ಮನುಷ್ಯರ ಚಿತ್ರಗಳು ಸಾಮಾನ್ಯವಾಗಿ ಎಲ್ಲ ಕಡೆ ಪ್ರಸ್ತುತವಾಗಿರುತ್ತವೆ. ಆದರೆ ಲೇಖನವು ಮುಖ್ಯವಾಗಿ 'ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳು' ಕುರಿತಾಗಿದ್ದು ಪ್ರಸ್ತುತ ಲೇಖಕರ ಜ್ಞಾನ ಪರಿಧಿಯಲ್ಲಿ ಪ್ರಪಂಚದ ಇತರೆಡೆ ಇಂತಹ ಚಿತ್ರಗಳು ಕಂಡುಬಂದಿರುವ ಪುರಾವೆಗಳಿಲ್ಲ. ಈ ಪ್ರಕಾರದ ಚಿತ್ರಗಳು ಮಲಪ್ರಭಾ ನದಿಯ ಬಾದಾಮಿ ಪರಿಸರದಲ್ಲಿ ಮಾತ್ರ ಕಂಡುಬಂದಿದ್ದು, ಶೈಲಿ ಮತ್ತು ರಚನಾ ಮಾದರಿಯನ್ನು ಗಮನಿಸಿದರೆ ಪ್ರಾಗಿತಿಹಾಸ ಕಾಲಘಟ್ಟ ಅಂದರೆ ಅಂತ್ಯ ಹಳೇ ಶಿಲಾಯುಗ-ಸೂಕ್ಷ್ಮ ಶಿಲಾಯುಗಕ್ಕೆ ಸೇರಿರುವ ಚಿತ್ರಗಳಾಗಿದ್ದರಿಂದ ಪ್ರಾಗಿತಿಹಾಸ 'ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳು' ಎಂದು ಹೆಸರಿಸಿದ್ದು ಅದರ ಒಂದು ಸಂಕ್ಷಿಪ್ತ ಮಾಹಿತಿ ಇಲ್ಲಿ ನೋಡಬಹುದು.

'ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳು' ಮುಖ್ಯವಾಗಿ ಸಣ್ಣ ಜಿಡಿ ರೇಖಾಕೃತಿಗಳಿಂದ ಅಲಂಕೃತವಾಗಿದ್ದು, ಅತಿ ನೀಳವಾದ ಕಡ್ಡಿಯಂತಹ ಮುಂಡ, ಉಬ್ಬಿದ ಕೋಲಿನಂತಹ ಕೈ, ತೊಡೆ, ಕಾಲುಗಳುಳ್ಳ ಜೊತೆಗೆ ಕೋಲಿನಂತಹ ಇಡೀ ದೇಹವಿರುವ ಮನುಷ್ಯಾಕೃತಿಯನ್ನು ಹೊಂದಿವೆ. ವಿಶೇಷವಾಗಿ ಮುಖದಲ್ಲಿ ಗಡ್ಡ, ಬಟ್ಟಲುಗಣ್ಣು, ತಲೆಯಲ್ಲಿ ಕೂದಲನ್ನು ತೋರಿಸಲಾಗಿದೆ. ಈ ಪ್ರಕಾರದ ವರ್ಣಚಿತ್ರಗಳಲ್ಲಿ ಸಾಮಾನ್ಯವಾಗಿ ಮಾನವಾಕೃತಿಗಳು ಹೆಚ್ಚು ಅಲಂಕಾರದಿಂದ ಕೂಡಿದ್ದು, ಗಂಡು-ಹೆಣ್ಣಿನ ಜೋಡಿಗಳನ್ನು ಕಾಣಬಹುದು. ಕೆಲವೊಂದರಲ್ಲಿ ಹೆಣ್ಣನ್ನು ಅತ್ಯಂತ ವೈಯ್ಯಾರವಾಗಿ ತೋರಿಸುವ ಜೊತೆಗೆ ಸ್ತನಗಳನ್ನು ಮುಖ್ಯವಾಗಿ ಬಿಂಬಿಸಲಾಗಿರುತ್ತದೆ. ಬಾದಾಮಿ ಪರಿಸರದಲ್ಲಿ ಪ್ರಸ್ತುತ ಶೈಲಿಯ ಚಿತ್ರಗಳು ರಂಗನಾಥ ಗುಡ್ಡ, ಬಾದಾಮಿ, ಹಿರೇಗುಡ್ಡ, ಹಂಸನೂರು, ತಿಮ್ಮಪ್ಪ ಗುಡ್ಡ ನೆಲೆಗಳಲ್ಲಿ ಕಂಡುಬಂದಿವೆ.

ಪ್ರಾಗಿತಿಹಾಸ "ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳು" ಕಂಡುಬಂದಿರುವ ಪ್ರಮುಖ ನೆಲೆಗಳು ಮತ್ತು ಅವುಗಳ ಮಹತ್ವವನ್ನು ಇಲ್ಲಿ ಸಂಕ್ಷಿಪ್ತವಾಗಿ ನೋಡಬಹುದು.

ರಂಗನಾಥ ಗುಡ್ಡ



ಚಿತ್ರ 1. ರಂಗನಾಥ ಗುಡ್ಡ ನೆಲೆಯ ವಿಹಂಗಮ ನೋಟ

ವರ್ಣಚಿತ್ರ ನೆಲೆಯು ಬಾದಾಮಿಯಿಂದ ಒಂದು ಕಿ.ಮೀ. ಆಗ್ನೇಯಕ್ಕಿದ್ದು, ಗುಹಾಂತರ ದೇವಾಲಯಕ್ಕೆ ಹೊಂದಿಕೊಂಡ ಗುಡ್ಡ ಶ್ರೇಣಿಯಾಗಿದೆ (ಚಿತ್ರ 1). ರಂಗನಾಥ ದೇವಾಲಯಕ್ಕೆ ಹೋಗುವ ಮೆಟ್ಟಲು ದಾರಿಯ ಬಲ ಬದಿಗೆ ಇರುವ ಒಂದು ಬೃಹತ್ ಕಲ್ಲಾಸರೆಯ ಮುಖಭಾಗದಲ್ಲಿ ವರ್ಣಚಿತ್ರಗಳನ್ನು ಕಾಣಬಹುದು. ಈ ವರ್ಣಚಿತ್ರ ದಕ್ಷಿಣ ಭಾರತದ ಸಂಸ್ಕೃತಿಯ ಅಧ್ಯಯನ ದೃಷ್ಟಿಯಿಂದ ವಿಶೇಷ ಸ್ಥಾನ ಪಡೆದುಕೊಂಡಿದೆ. ವರ್ಣಚಿತ್ರವು

ಭೂ ಮಟ್ಟದಿಂದ ಎತ್ತರದಲ್ಲಿದ್ದು ಪ್ರಸ್ತುತ ಮಾನವ ಮತ್ತು ಪ್ರಾಣಿಗಳು ಹೋಗಲು ಸಾಧ್ಯವಾಗದು. ಇತ್ತೀಚಿನ ಚಟುವಟಿಕೆಗಳಿಂದ ಹಾಳಾಗದೆ ಹಾಗೂ ಅದೃಷ್ಟವಶಾತ್ ಬಿಸಿಲು ಮತ್ತು ಮಳೆಗೆ ಹೆಚ್ಚು ಹಾನಿಯಾಗದಂತೆ ನೈಸರ್ಗಿಕ ಹಳದಿ ಪದರು ಹೊದಿಕೆ ಪೂರಕವಾಗಿದೆ. ವರ್ಣಚಿತ್ರ ಫಲಕವು 3.64 ಮೀಟರ್ ಅಗಲ ಮತ್ತು 2.46 ಮೀಟರ್ ಲಂಬವಾಗಿದ್ದು, 69 ಚಿತ್ರಗಳಿವೆ. ಪ್ರಾಣಿ, ಮನುಷ್ಯ ಮತ್ತು ಜ್ಯಾಮಿತಿ ಚಿತ್ರಗಳನ್ನೊಳಗೊಂಡಿದೆ. ಪ್ರಾಣಿಗಳಲ್ಲಿ ಕಾಡುಹಂದಿ (12), ಕಾಡೆಮ್ಮೆ (1), ಜಿಂಕೆ (3), ಆಮೆ (2) ಮತ್ತು 6 ಗುರುತಿಸಲಾಗದ ಪ್ರಾಣಿಗಳ ಜೊತೆಗೆ 31 ಮನುಷ್ಯರ ಚಿತ್ರಗಳಿದ್ದು ಒಂದೇ ಕಾಲಘಟ್ಟಕ್ಕೆ ಸೇರಿವೆ. 31 ಮನುಷ್ಯರ ಚಿತ್ರಗಳಲ್ಲಿ 20 ಬಾದಾಮಿ ಶೈಲಿಯ ಮಾನವ ವರ್ಣಚಿತ್ರಗಳಾಗಿವೆ (ಚಿತ್ರ 2). ವಿಶೇಷವಾಗಿ ಬಾದಾಮಿ ಶೈಲಿಯ ಚಿತ್ರಗಳಲ್ಲಿ ಅತ್ಯಂತ ಗಮನ ಸೆಳೆಯುವ ಚಿತ್ರಗಳೆಂದರೆ ಇದೇ ಕಲ್ಲಾಸರೆಯಲ್ಲಿರುವ ಗಂಡು–ಹೆಣ್ಣಿನ ಜೋಡಿ ಚಿತ್ರಗಳು. ಇವುಗಳ ಕೈ ರಚನೆಯಲ್ಲಿ ಹೆಚ್ಚು ವೈಶಿಷ್ಟತೆಯನ್ನು ಕಾಣಬಹುದು. ಇವುಗಳ ಕೈಗಳು ಏಡಿ ಕಾಲುಗಳಂತೆ ಜಿಂಬಿತವಾಗಿದ್ದು ಬೆರಳುಗಳನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಉಳಿದಂತೆ ಇನ್ನು ಎರಡು ಜೋಡಿಗಳಿದ್ದು ಚಿತ್ರ ರಚನೆಯಲ್ಲಿ ಸಣ್ಣ ಪ್ರಮಾಣದಲ್ಲಿವೆ. ಇಬ್ಬರ ಮನುಷ್ಯ ಚಿತ್ರಗಳು ಇದರ ಬಲಬದಿಯಲ್ಲಿರುವುದನ್ನು ಗಮನಿಸಬಹುದಾಗಿದೆ (ಚಿತ್ರ 2a). ಮತ್ತೊಂದು ಗಮನಾರ್ಹ ಚಿತ್ರವೆಂದರೆ ಮನುಷ್ಯನು ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿರುವಂತೆ ಮತ್ತು ಅವನು ಬಳಸುವ ವಸ್ತುಗಳನ್ನು ತೋರಿಸಲಾಗಿದೆ (ಚಿತ್ರ 2b). ಇದರಲ್ಲಿ ವಿಶೇಷವಾಗಿ ಎರಡು ಗುಂಪಿನ ಮನುಷ್ಯರು ನೃತ್ಯದಲ್ಲಿ ಭಾಗಿ ಅಂದರೆ 'S' ಮಾದರಿಯಲ್ಲಿ ತೋರಿಸಲಾಗಿದೆ (ಚಿತ್ರ 2c). ಇದರಲ್ಲಿ ಒಟ್ಟು ಆರು ಬಾದಾಮಿ ಶೈಲಿಯ ಚಿತ್ರಗಳಿದ್ದು, ಕಾಡುಕೋಣ ಮತ್ತು ಕಾಡುಹಂದಿಯ ಚಿತ್ರಗಳನ್ನು ಕಾಣಬಹುದು (ಚಿತ್ರ 2d). ಇದೇ ವರ್ಣಚಿತ್ರದ ಕೆಳಭಾಗದಲ್ಲಿ ಸಣ್ಣ ಪ್ರಮಾಣದ ಚಿತ್ರವಿದ್ದು ಇದರ ಬಳಿಯಲ್ಲಿ ಒಳಪಟ್ಟಿಕೆ ಜಿಂಕೆಯನ್ನು ಚಿತ್ರಿಸಲಾಗಿದೆ (ಚಿತ್ರ 2e). ಕಲ್ಲಾಸರೆಯ ಪೂರ್ವ ಬದಿಯಲ್ಲಿ ಕೆಲವು ವರ್ಣಚಿತ್ರಗಳಿದ್ದು ಅದರಲ್ಲಿನ ಮನುಷ್ಯನ ಚಿತ್ರ ಆಕರ್ಷಕವಾಗಿದೆ. ಇದರ ದೇಹದ ಭಾಗ ಬಾದಾಮಿ ಶೈಲಿಯನ್ನು ಹೋಲಿದರೆ ಮುಖಭಾಗ ವಿಭಿನ್ನವಾಗಿದೆ. ಇದರ ಬಲಗೈಯಲ್ಲಿ ಮಾತ್ರ ಬೆರಳುಗಳನ್ನು ಚಿತ್ರಿಸಲಾಗಿದೆ (ಚಿತ್ರ 3).



ಚಿತ್ರ 2. ರಂಗನಾಥ ಗುಡ್ಡ: ದಕ್ಷಿಣ ಭಾರತದಲ್ಲಿನ ಒಂದು ವಿಶಿಷ್ಟ ಪ್ರಾಗಿತಿಹಾಸ ವರ್ಣಚಿತ್ರ




ಚಿತ್ರ 2a. "ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳು"



ಚಿತ್ರ 2b. ಸೂಕ್ಷ್ಮ ಶಿಲಾಯುಗ ಕಾಲದಲ್ಲಿನ ವಸತಿ ವಿನ್ಯಾಸ ಮತ್ತು ಅದರಲ್ಲಿ ಕೆಲವು ಅವಶ್ಯ ವಸ್ತುಗಳೊಂದಿಗೆ ವಿಶ್ರಾಂತಿಸುತ್ತಿರುವ "ಬಾದಾಮಿ ಶೈಲಿ ಮನುಷ್ಯನ ವರ್ಣಚಿತ್ರ"




ಚಿತ್ರ 2c. ವಿಭಿನ್ನ ಭಂಗಿಯಲ್ಲಿರುವ "ಬಾದಾಮಿ ಶೈಲಿ ಮನುಷ್ಯರ ವರ್ಣಚಿತ್ರಗಳು"



ಚಿತ್ರ 2d. ಕಾಡುಹಂದಿ ಮತ್ತು ಕಾಡುಕೋಣದೊಂದಿಗಿನ "ಬಾದಾಮಿ ಶೈಲಿ ಮನುಷ್ಯರ ವರ್ಣಚಿತ್ರಗಳು"



ಚಿತ್ರ 2e. ಜಿಂಕೆ ಮತ್ತು "ಬಾದಾಮಿ ಶೈಲಿ ಮನುಷ್ಯ ವರ್ಣಚಿತ್ರ"



ಚಿತ್ರ 3. ರಂಗನಾಥ ಗುಡ್ಡ: ವಿಭಿನ್ನತೆಯುಳ್ಳ "ಬಾದಾಮಿ ಶೈಲಿ ಮನುಷ್ಯನ ವರ್ಣಚಿತ್ರ"

ಬಾದಾಮಿ

ಬಾದಾಮಿಯು ನಮಗೆಲ್ಲರಿಗೂ ತಿಳಿದಿರುವಂತೆ ಚಾಲುಕ್ಯರ ಕಾಲದ ಗುಹಾಂತರ ದೇವಾಲಯಗಳಿಗೆ ಪ್ರಸಿದ್ಧಿಯಾಗಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಇದೇ ಪರಿಸರದಲ್ಲಿ ಹಬ್ಬಿಕೊಂಡಿರುವ ಅಸಂಖ್ಯಾತ ಮರುಳುಗಲ್ಲಿನ ಕಲ್ಲಾಸರೆಗಳಲ್ಲಿ ಪ್ರಾಗಿತಿಹಾಸ ಕಾಲದಿಂದ ಹಿಡಿದು ಚಾಲುಕ್ಯರ ಕಾಲದವರೆಗಿನ ಬಂಡೆಚಿತ್ರಗಳನ್ನು ಕಾಣಬಹುದು.

ಶೀರ್ಷಿಕೆ ಸೂಚಿಸುವಂತೆ ಇಲ್ಲಿನ ಕೆಲವೊಂದು ಮನುಷ್ಯರ ಚಿತ್ರಗಳು ವಿಭಿನ್ನತೆಯಿಂದ ಕೂಡಿರುವುದರಿಂದ ಇದೇ ಹೆಸರಿನಿಂದ ಹೆಸರಿಸಲಾಗಿದೆ. ಬಾದಾಮಿ ನೆಲೆಯಲ್ಲಿ ಕಂಡುಬಂದಿರುವ ಈ ಕಾಡುಕೋಣದ ಬೇಟೆಗಾರಿಕೆಯ ವರ್ಣಚಿತ್ರವು ಇತಿಹಾಸ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಏಕೆಂದರೆ ಈ ಪ್ರದೇಶದಲ್ಲಿ ಇದುವರೆಗೂ ಪ್ರಸ್ತುತ ಚಿತ್ರವನ್ನು ಹೊರತು ಪಡಿಸಿದರೆ ಯಾವುದೇ ಬೇಟೆಗಾರಿಕೆಯ ಚಿತ್ರಗಳು ಕಂಡುಬಂದಿಲ್ಲ. ರುಂಡವಿಲ್ಲದ ಮನುಷ್ಯನು ಕಾಡುಕೋಣವನ್ನು ಬಹುಶಃ ಭರ್ಜಿಯಿಂದ ಬೇಟೆಯಾಡುವಂತಿದ್ದು, ಕಾಡುಕೋಣವನ್ನು ಒಳಪಟ್ಟಿಕೆ ವಿಧಾನದಿಂದ ಸುಂದರವಾಗಿ ಮೂಡಿಸಲಾಗಿದೆ. ಮನುಷ್ಯನ ವರ್ಣಚಿತ್ರವು ದೇಹ ನೀಳತೆ ಮತ್ತು ಕಾಲುಗಳ ರಚನೆಯಲ್ಲಿ ಬಾದಾಮಿ ಶೈಲಿಯ ಮನುಷ್ಯ ವರ್ಣಚಿತ್ರವನ್ನು ಹೋಲುತ್ತದೆ (ಚಿತ್ರ 4).



ಚಿತ್ರ 4. ಬಾದಾಮಿ: ಕಾಡುಕೋಣವನ್ನು ಬೇಟೆಯಾಡುತ್ತಿರುವ "ಬಾದಾಮಿ ಶೈಲಿ ಮನುಷ್ಯನ ವರ್ಣಚಿತ್ರ"

ಹಂಸನೂರು


ಹಂಸನೂರು ನೆಲೆಯು ಬಾದಾಮಿಯಿಂದ ಸುಮಾರು 14 ಕಿ. ಮೀ. ಉತ್ತರ ದಿಕ್ಕಿಗಿದೆ. ಈ ನೆಲೆಯು ಬಾದಾಮಿ–ಗುಳೇದಗುಡ್ಡಕ್ಕೆ ಹಾದು ಹೋಗುವ ರಸ್ತೆಯ ಎಡಭಾಗದಲ್ಲಿರುವ ಹಂಸನೂರು ಗ್ರಾಮದಿಂದ ಸುಮಾರು 3 ಕಿ. ಮೀ. ನೈರುತ್ಯ ದಿಕ್ಕಿಗಿದೆ. ಈ ನೆಲೆಗೆ ಅಂದರ್ ಘಡಿ/ಘಡಿಯಮ್ಮನ ಘಡಿ ಎಂಬ ಸ್ಥಳನಾಮಗಳಿವೆ. ಒಂದು ವಿಶೇಷವೆಂದರೆ ಈ ನೆಲೆಯು ಈಗಾಗಲೇ ವರ್ಣಚಿತ್ರ ನೆಲೆಯೆಂದು ಚಿರಪರಿಚಿತವಾಗಿರುವ ಅರೆಗುಡ್ಡದ ಅಂದರ್ ಘಡಿಯ ಸುಮಾರು 1.2 ಕಿ. ಮೀ. ಗುಡ್ಡದ ಮತ್ತೊಂದು ಅಂಚಿನಲ್ಲಿ ಅಂದರೆ ಆಗ್ನೇಯ ದಿಕ್ಕಿಗಿದೆ (ಚಿತ್ರ 5). ಈ ಗುಡ್ಡದ

ಅಂಚಿನಲ್ಲಿ ಹಲವಾರು ಕಲ್ಲಾಸರೆಗಳಿದ್ದು ಅದರಲ್ಲಿ ಅಂತ್ಯ ಶಿಲಾಯುಗ/ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ ವರ್ಣಚಿತ್ರಗಳ ಜೊತೆಗೆ ಕಲ್ಲುಳಿಗಳನ್ನು ಕಾಣಬಹುದು.

ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳಲ್ಲಿ ಇಲ್ಲಿನ ಚಿತ್ರಗಳು ಸ್ವಲ್ಪ ವಿಭಿನ್ನವಾಗಿದ್ದು ಬಟ್ಟಲುಗಣ್ಣಿನ ಮಾನವಾಕೃತಿಗಳಾಗಿವೆ. ದೇಹದ ರಚನೆಯಲ್ಲಿಯೂ ಸ್ವಲ್ಪ ಮಟ್ಟಿಗೆ ಭಿನ್ನತೆಯಿಂದ ಕೂಡಿದ್ದು ಗಂಡು–ಹೆಣ್ಣಿನಾಕೃತಿಯಲ್ಲಿವೆ. ಗಂಡಿನ ಚಿತ್ರವು ಹೆಚ್ಚು ನೀಳವಾಗಿದ್ದು, ಹೆಣ್ಣಿನ ಚಿತ್ರವನ್ನು ಕೆಳಭಾಗದಲ್ಲಿ ಕುಬ್ಜವಾಗಿ ತೋರಿಸಲಾಗಿದೆ. ಇವೆರಡು ಮನುಷ್ಯರ ತಲೆ ರಚನೆಯಲ್ಲೂ ವಿಭಿನ್ನತೆಯನ್ನು ಕಾಣಬಹುದು. ವಿಶೇಷವೆಂದರೆ ಕಾಡುಹಂದಿಯ ವರ್ಣಚಿತ್ರವು ಬಟ್ಟಲುಗಣ್ಣಿನ ಮಾನವಾಕೃತಿಯ ವರ್ಣಚಿತ್ರದ ನಡುವೆ ಇದೆ. ಈ ಪ್ರಾಣಿಯನ್ನು ಕ್ಷಕಿರಣ ವಿಧಾನದಲ್ಲಿ ಗರ್ಭ ಧರಿಸಿರುವಂತೆ ಬಿಂಬಿಸಲಾಗಿದೆ (ಚಿತ್ರ 6).



ಚಿತ್ರ 5. ಹಂಸನೂರು ನೆಲೆಯ ವಿಹಂಗಮ



ಚಿತ್ರ 6. ಹಂಸನೂರು: "ಬಾದಾಮಿ ಶೈಲಿ ಮನುಷ್ಯರ ವರ್ಣಚಿತ್ರ" ಮತ್ತು ಗರ್ಭ ಧರಿಸಿರುವ ಕಾಡುಹಂದಿ

ಹಿರೇ ಗುಡ್ಡ


ಹಿರೇ ಗುಡ್ಡವು ಪ್ರಾಗಿತಿಹಾಸ ಕಾಲದ ಚಿತ್ರಕಲೆಯ ನೆಲೆಯಾಗಿದ್ದು ನಂದಿಕೇಶ್ವರದಿಂದ ಸು. 3 ಕಿ.ಮೀ. ಉತ್ತರಕ್ಕೆ ಅಂದರೆ ನಂದಿಕೇಶ್ವರದಿಂದ ಗುಳೇದ ಗುಡ್ಡಕ್ಕೆ ಹಾದು ಹೋಗುವ ರಸ್ತೆಯ ಬಲ ಬದಿಯಲ್ಲಿ ಚಾಚಿಕೊಂಡಿರುವ ಗುಡ್ಡಗಾಡು ಪ್ರದೇಶದಲ್ಲಿದೆ (ಚಿತ್ರ 7). ಈ ನೆಲೆಯು ಹಿಂದಿನಿಂದಲೂ ಹಿರೇ ಗುಡ್ಡ ಹೆಸರಿನಿಂದ ಕರೆಯಲಾಗುತ್ತಿದ್ದು, ಪ್ರಸ್ತುತ ಹನುಮಂತ ದೇವರ ಗುಡಿಯು ಇಲ್ಲಿ ಹರಿಯುವ ಕೊಳ್ಳದ ನಡುವೆ ಇರುವುದರಿಂದ ಸ್ಥಳೀಯವಾಗಿ 'ಹಂಡೆ ಹನುಮಪ್ಪನ ಕೊಳ್ಳ' ವೆಂದೇ ಕರೆಯಲ್ಪಡುತ್ತಿದೆ. ಇಲ್ಲಿನ ಮೂರು ಕಲ್ಲಾಸರೆಗಳಲ್ಲಿ ವರ್ಣಚಿತ್ರಗಳ ಜೊತೆಗೆ ಕಲ್ಗುಳಿಗಳು ಕಂಡುಬಂದಿವೆ.

ಮಾನವಾಕೃತಿ ಹಾಗೂ ಕಾಡುಹಂದಿಯ ಈ ವರ್ಣಚಿತ್ರವು ಉರುಮಂಜು ಬಣ್ಣದಲ್ಲಿದ್ದು, ಮನುಷ್ಯಾಕೃತಿಯಲ್ಲಿ ಎಡ ಭಾಗದಲ್ಲಿರುವ ಮನುಷ್ಯ ತನ್ನ ಬಲಗೈಯಲ್ಲಿ ಚೆತ್ರ/ಬಾಣ ಮಾದರಿಯ ವಸ್ತು ಹಿಡಿದಿರುವಂತೆಯೂ, ಇನ್ನೊಬ್ಬ ಬರಿಕೈಯಲ್ಲಿರುವಂತೆಯೂ ಚಿತ್ರಿಸಲಾಗಿದ್ದು; ತಲೆ, ಕಣ್ಣು, ತೊಡೆ ಹಾಗೂ ಕೂದಲನ್ನು ಬಿಂಬಿಸಿರುವುದರಿಂದ ಬಾದಾಮಿ ಶೈಲಿಯ ಮನುಷ್ಯರ ವರ್ಣಚಿತ್ರಗಳ ವರ್ಗಕ್ಕೆ ಸೇರಿವೆ. ಇಲ್ಲಿನ ಕಾಡುಹಂದಿ ವರ್ಣಚಿತ್ರವು ತನ್ನದೆ ಛಾಪನ್ನು ಒಳಗೊಂಡಿದೆ. ಈ ಪ್ರಾಣಿಯನ್ನು 'ಕ್ಷ-ಕಿರಣ' ಮಾಧ್ಯಮದಲ್ಲಿ ತೋರಿಸಲಾಗಿದ್ದು, ಹಂದಿಯ ಒಳಭಾಗಗಳಾದ ಹೃದಯ, ಕರುಳು, ನರವ್ಯವಸ್ಥೆ, ಕೂದಲಿನ ವಿನ್ಯಾಸ ಹಾಗೂ ಗಂಡು ಪ್ರಾಣಿಯನ್ನು ಪ್ರತಿನಿಧಿಸುವ ಶಿಶ್ನವನ್ನು ಚಿತ್ರಿಸಲಾಗಿದೆ. ಈ ಪ್ರಾಣಿಯ ಮತ್ತೊಂದು ವಿಶೇಷವೆಂದರೆ ಅದರ ಕಾಲಿನ 'ಗೊರಸು' ಮತ್ತು ಕೋರೆ ಹಲ್ಲುಗಳ ಸೂಕ್ಷ್ಮತೆಯನ್ನು ಕಾಣಬಹುದು. ಈ ಅಂಶಗಳು ಚಿತ್ರಕಲಾಕಾರನ ನೈಪುಣ್ಯ ಮತ್ತು ಪ್ರೌಢಿಮೆಗೆ ಸಾಕ್ಷಿಯಾಗಿವೆ. ಈ ವರ್ಣಚಿತ್ರವು ಅಲಂಕಾರಿಕ ದೃಷ್ಟಿಯಿಂದ ಭಾರತ ಉಪಖಂಡದಲ್ಲಿಯೇ ಒಂದು ಉತ್ತಮ ನಿದರ್ಶನ (ಚಿತ್ರ 8).


ಇನ್ನೊಂದು ವರ್ಣಚಿತ್ರದಲ್ಲಿ "ಬಾದಾಮಿ ಶೈಲಿಯ ಮನುಷ್ಯನ ವರ್ಣಚಿತ್ರ"ಗಳಿದ್ದು ಮೊಸಳೆ, ಕತ್ತೆ(?) ಮತ್ತು ಕಾಡೆಮ್ಮೆ ಪ್ರಾಣಿಗಳಿವೆ. ಇದು ಅಂದಿನ ಕಲಾ ಪ್ರೌಢತೆಯ ಜೊತೆಗೆ ವನ್ಯಜೀವಿ ಮತ್ತು ಮನುಷ್ಯರ ನಡುವಿನ ಬಾಂಧವ್ಯವನ್ನು ಬಿಂಬಿಸುವಲ್ಲಿ ತನ್ನ ಪ್ರಾಧಾನ್ಯತೆಯನ್ನು ಮೆರೆದಿದೆ. ಇಲ್ಲಿನ ಪ್ರಾಣಿಗಳಲ್ಲಿ ಮೊಸಳೆಯು ತನ್ನ ಕಣ್ಣುಗಳನ್ನು ಬಟ್ಟಲಿನಾಕಾರದಲ್ಲಿ ತೆರೆದುಕೊಂಡಿರುವಂತೆ ಹಾಗೂ ತಲೆ ಮತ್ತು ಕುತ್ತಿಗೆ ಭಾಗವನ್ನು ಅಡ್ಡ-ಲಂಬ ಗೆರೆಗಳಿಂದ ಬಿಡಿಸಿದ್ದು ಅದರ ಕಾಲುಗಳ 'ಗೊರಸ'ನ್ನು ಬಿಂದುಗಳಿಂದ ಚಿತ್ರಿಸಲಾಗಿದೆ. ಕಾಡೆಮ್ಮೆಯ ವರ್ಣಚಿತ್ರವು ಮನೋಹರವಾಗಿದ್ದು 'ಕ್ಷ-ಕಿರಣ' ವಿಧಾನದಿಂದ ಅದರ ಒಳಾಂಗಗಳನ್ನು ಬಿಂಬಿಸುವ ಪ್ರಯತ್ನ ಆಕರ್ಷಕವಾಗಿದೆ (ಚಿತ್ರ 9). ಬಾದಾಮಿ ಶೈಲಿಯ ಮನುಷ್ಯನ ಗುಪ್ತಾಂಗವನ್ನು ತೋರಿಸಿರುವ ಈ ಚಿತ್ರದಲ್ಲಿ ದೇಹದ ಭಾಗವನ್ನು ಅಡ್ಡ ಗೆರೆಗಳಿಂದ ಚಿತ್ರಿಸಲಾಗಿದೆ. ಇದರ ಎಡ ಭಾಗದಲ್ಲಿ ಪ್ರಾಯಶಃ ಕಾಡುಬೆಕ್ಕು ಓಡುತ್ತಿರುವಂತೆ ಅಭಿವ್ಯಕ್ತಿಸಲಾಗಿದೆ. ಇದೇ ನೆಲೆಯ ಮತ್ತೊಂದು ವರ್ಣಚಿತ್ರದಲ್ಲಿ ಎರಡು ಜಿಂಕೆಗಳನ್ನು 'ಕ್ಷ-ಕಿರಣ' ವಿಧಾನದಿಂದ ಅವು ಪರಸ್ಪರ ವಿರುದ್ಧ ದಿಕ್ಕಿಗೆ ಮುಖಮಾಡಿರುವಂತೆ ಚಿತ್ರಿಸಲಾಗಿದೆ. ಮೂರು ನಗ್ನ ಮನುಷ್ಯರ ಚಿತ್ರಗಳಿದ್ದು ಇಬ್ಬರನ್ನು ಅಭಿಮುಖವಾಗಿರುವಂತೆಯೂ ಮತ್ತೊಬ್ಬನನ್ನು ಕೋಲು ಮನುಷ್ಯನಂತೆಯೂ ಚಿತ್ರಿಸಲಾಗಿದೆ.



ಚಿತ್ರ 7. ಹಿರೇ ಗುಡ್ಡ ನೆಲೆಯ ಒಂದು ಸಾಮಾನ್ಯ ನೋಟ



ಚಿತ್ರ 8. ಹಿರೇ ಗುಡ್ಡ: "ಬಾದಾಮಿ ಶೈಲಿ ಮನುಷ್ಯರ ವರ್ಣಚಿತ್ರ" ಮತ್ತು ಕ್ಷ–ಕಿರಣ ಮಾದರಿಯ ಗಂಡು ಕಾಡುಹಂದಿ



ಚಿತ್ರ 9. ಹಿರೇ ಗುಡ್ಡ: "ಬಾದಾಮಿ ಶೈಲಿ ಮನುಷ್ಯರ ವರ್ಣಚಿತ್ರ" ಮತ್ತು ಕಾಡುಕೋಣ, ಮೊಸಳೆ ಹಾಗೂ ಕತ್ತೆ?.

ಈ ನೆಲೆಯಲ್ಲಿ ಕಂಡುಬಂದಿರುವ ಇತರ ಮಹತ್ವದ ವರ್ಣಚಿತ್ರಗಳೆಂದರೆ ಏಕಕೊಂಬುಳ್ಳ ಘೇಂಡಾಮೃಗ* (ಈ ಪ್ರಾಣಿಯ ವರ್ಣಚಿತ್ರವು ವಿಶೇಷವಾಗಿದ್ದು ಇದುವರೆಗೂ ದಕ್ಷಿಣ ಭಾರತದಲ್ಲಿನ ಯಾವುದೇ ಬಂಡೆಚಿತ್ರ ನೆಲೆಗಳಲ್ಲಿ ಕಂಡುಬಂದಿರುವ ಪುರಾವೆಗಳಿಲ್ಲವಾದರಿಂದ ಅಧ್ಯಯನ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ; ಆದರೆ ಇಂತಹ ವರ್ಣಚಿತ್ರಗಳು ವಿಂಧ್ಯ ಶ್ರೇಣಿಯ ಭೀಂಬೆಟ್ಕ, ಚತುರ್ಭುಜನಾಥನಾಲ, ಕೇರ್ವ್‌ಘಾಟ್, ಮತ್ತು ಕೈಮೂರ್‌ರೇಂಜ್‌ನಲ್ಲಿ ಕಂಡು ಬಂದಿವೆ).

ನಿಚ್ಚಣಿಕೆ ರೂಪದಲ್ಲಿರುವ ಮನುಷ್ಯನ ವರ್ಣಚಿತ್ರ, ಗೂಳಿಯನ್ನು ಆಕ್ರಮಣಕಾರಿಯಾಗಿ ಚಿತ್ರಿಸಿದ್ದು, ಸ್ಪೇನ್‌ನ ಅಲ್ತಮೀರ6 ನೆಲೆಯಲ್ಲಿನ ಗೂಳಿ ಜೊತೆ ಹೆಚ್ಚು ಸಾಮ್ಯತೆವನ್ನು ಹೊಂದಿದೆ. ವಜ್ರಾಕೃತಿ ವರ್ಣಚಿತ್ರವಿದ್ದು ಗುಜರಾತ್‌ನ ಚಂದ್ರವತಿ ನೆಲೆಯಲ್ಲಿ ಸೊನವನೆ ಅವರು ಶೋಧಿಸಿದ ಹಳೇ ಅಂತಿಮ ಶಿಲಾಯುಗ ಕಾಲದ ತಿರುಳಿನ ಮೇಲೆ ವಜ್ರಾಕೃತಿ ರೇಖಾಚಿತ್ರವಿದೆ. ಇಂತಹ ಚಿತ್ರ/ಚಿಹ್ನೆಗಳು ಅಂತ್ಯಹಳೇ ಶಿಲಾಯುಗ ಘಟ್ಟಕ್ಕೆ ಸೇರಿದ್ದವೆಂಬುದ್ದು ಪ್ರಪಂಚದ ಎಲ್ಲಾ ವಿದ್ವಾಂಸರ ಒಮ್ಮತದ ಅಭಿಪ್ರಾಯ. ಆದಿ ಮಾನವರ ಇಂತಹ ಚಿಹ್ನೆಗಳು ಅವರ ಭಾವಾಭಿವ್ಯಕ್ತಿಯ ಮೊದಲ ಪ್ರಯತ್ನವೆನ್ನಬಹುದು. ಈ ನೆಲೆಯಲ್ಲಿನ ಎತ್ತಿನ ಗಾಡಿ ರೇಖಾ ಚಿತ್ರವು ಬಹುಶಃ ನವಶಿಲಾಯುಗ ಹಂತಕ್ಕೆ ಸೇರಿದ್ದು, ಮನುಕುಲದ ಇತಿಹಾಸದ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಿದೆ. ಕೃಷ್ಣಮೃಗದ ತಲೆಯನ್ನು ಹಿಮ್ಮುಖವಾಗಿ ಚಿತ್ರಿಸಲಾಗಿದೆ.

ವಿಮರ್ಶೆ : "ಬಾದಾಮಿ ಶೈಲಿಯ ಪ್ರಾಗಿತಿಹಾಸ ಮನುಷ್ಯರ ವರ್ಣಚಿತ್ರಗಳು" ವಿಶೇಷವಾಗಿ ಎಲ್ಲಿ ವಜ್ರಾಕೃತಿ ವಿನ್ಯಾಸ ಕಂಡುಬರುತ್ತವೋ ಅಲ್ಲಿಯೇ ಚಿತ್ರಿತವಾಗಿವೆ. ವಜ್ರಾಕೃತಿ ಚಿತ್ರಗಳು ಪ್ರಪಂಚದ ಎಲ್ಲಾ ಭಾಗದ ವಿದ್ವಾಂಸರು ಒಮ್ಮತವಾಗಿ ಅಭಿಪ್ರಾಯಪಟ್ಟಿರುವಂತೆ ಆದಿ ಹಂತಕ್ಕೆ ಸೇರಿವೆ. ಇಂತಹ ಚಿಹ್ನೆಗಳು ನಿಗೂಢತೆಯಿಂದ ಕೂಡಿದ್ದರೂ ಆದಿ ಮಾನವರ ಭಾವನೆಗಳ ಸಾರಾಂಶವನ್ನು ಬಿಂಬಿಸುವ ಮೊದಲ ಪ್ರಯತ್ನವೆನ್ನಬಹುದಾಗಿದೆ. ವಜ್ರಾಕೃತಿ ಚಿತ್ರಗಳು ಈ ಶ್ರೇಣಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬಂದಿದ್ದು, ಉದಾಹರಣೆಗೆ ಕೆಂದೂರು ಕೆರೆ ಗೊಂದಿ, ಹುಲಿಗೆಮ್ಮ ಕೊಳ್ಳ, ಹಿರೇ ಗುಡ್ಡ, ತಿಮ್ಮಪ್ಪ ಗುಡ್ಡ, ಅರೆ ಗುಡ್ಡ, ಹಂಸನೂರು, ಹುಲಿಘಡಿಗಳಲ್ಲಿ ವರ್ಣ ಮತ್ತು ಐಹೊಳೆಯಲ್ಲಿ ದ್ವಿವರ್ಣ ಹಾಗೂ ತಟಕೋಟಿ ನೆಲೆಯಲ್ಲಿ ಗೀರುಚಿತ್ರಗಳು ಕಂಡುಬಂದಿವೆ. ಈ ಎಲ್ಲ ವಜ್ರಾಕೃತಿ ಚಿತ್ರಗಳು ಇತಿಹಾಸದ ಮೇಲೆ ಹೊಸ ಛಾಪನ್ನು ಮೂಡಿಸಿವೆ. ವಿಶೇಷವಾಗಿ ತಟಕೋಟಿಯಲ್ಲಿ ದೊರೆತಿರುವ ಗೀರುಚಿತ್ರ ವಜ್ರಾಕೃತಿಯು ತನ್ನದೆಯಾದ ವೈಶಿಷ್ಟತೆಯನ್ನು ಹೊಂದಿದೆ. ಈ ವಜ್ರಾಕೃತಿಗಳು ಬಿಳಿ ಮತ್ತು ಉರುಮಂಜು ಬಣ್ಣದಲ್ಲಿವೆ. ಇಂತಹ ಚಿತ್ರಗಳು ಪರ್ಯಾಯ ದ್ವೀಪದ ಇತರ ನೆಲೆಗಳಲ್ಲಿ ಕಂಡುಬಂದಿರುವ ಯಾವುದೇ ಪುರಾವೆಗಳಿಲ್ಲ. ಅಷ್ಟೆಯಲ್ಲದೇ ರಾಜಸ್ತಾನದ

---

* ಬೆಳಗಾವಿ ಜಿಲ್ಲೆಯ ಚಿಕದಾಲಿ ಎಂಬ ಸಣ್ಣ ತೊರೆಯ ಅಂಚಿನಲ್ಲಿ 'ರ್ಹೀನೊಸಿರಾಸ್ ಡೆಕೊನೆಸಿಸ್'ನ ಪಳೆಯುಳಿಕೆಯನ್ನು 1874ರಲ್ಲಿ ರಾಬರ್ಟ್ ಬ್ರೂಸ್ ಫೂಟ್ ಅವರು ಶೋಧಿಸಿದ್ದಾರೆ.[ನೋಡಿ. Memoirs of the Geological Survey of India: Palaeontologia Indica, Fauna of the Indian Fluviatile Deposits Vol.I.1, Ser.X.1, (1874), Pp. 1-17]. ಅಲ್ಲದೆ ಮಲಪ್ರಭನದಿ ದಂಡೆಯ ಮೇಲಿರುವ 'ಖ್ಯಾಡ್' ನೆಲಯ ಸಮೀಪದ ನುರುಜುಗಲ್ಲಿನ ಸ್ತರಗಳಲ್ಲಿ ಖಡ್ಗಮೃಗದ ಪಳೆಯುಳಿಕೆಗಳು ಕಂಡುಬಂದಿವೆ. (ನೋಡಿ: ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್, 1999:51) – ಸಂಪಾದಕರು.

ಚಂದ್ರವತಿ ನೆಲೆಯಲ್ಲಿ ಬಿಟ್ಟರೆ ಭಾರತದಲ್ಲಿ ಬೇರೆಲ್ಲೂ ಕಂಡುಬರುವುದಿಲ್ಲ. ಈ ಮಾದರಿಯ ಚಿತ್ರಗಳ ಪ್ರವೃತ್ತಿ ಆದಿ ಮಾನವನಿಂದ ಹಿಡಿದು ಇಂದಿಗೂ ಕೆಲವು ಹಬ್ಬ, ಸಮಾರಂಭಗಳಲ್ಲಿ ರಂಗೋಲಿ, ಮನೆಯ ಬಾಗಿಲು ಹೀಗೆ ಹಲವು ರೀತಿಯಲ್ಲಿ ಜೀವಂತವಾಗಿರುವುದು ಮಾನವನ ಮನಸ್ಸಿನಾಳದಲ್ಲಿ ಉಳಿದಿರುವುದಕ್ಕೆ ಉತ್ತಮ ಉದಾಹರಣೆಗಳಾಗಿವೆ.

ಆಕಾರ ಸೂಚಿ

ಸುಂದರ, ಅ. 1978. 'ವಿಶಿಷ್ಟ ವರ್ಣ ಚಿತ್ರಕಲೆಯ ಆಗರ: ಬಾದಾಮಿ', **ಚಾಲುಕ್ಯ ಶ್ರೀ**. ಬಾದಾಮಿ: ಶ್ರೀ ಪುಲಕೇಶಿ ವಿದ್ಯಾವರ್ಧಕ ಸಂಸ್ಥೆ.

ಸುಂದರ ಅ., 1994, **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ,** ಬೆಂಗಳೂರು: ಕರ್ನಾಟಕ ಲಲಿತ ಕಲಾ ಅಕಾಡೆಮಿ.

ಮೋಹನ ಆರ್. 2015. 'ಹಂಸನೂರು: ಪ್ರಾಗೈತಿಹಾಸಿಕ ವರ್ಣಚಿತ್ರಕಲೆನೆಲೆಯ ಅನ್ವೇಷಣೆ'. **ಇತಿಹಾಸ ದರ್ಪಣ ಸಂ. 24** (ಜನವರಿ–ಮಾರ್ಚ್): 11–16.

ಮೋಹನ ಆರ್. 2016a. 'ಕನ್ನೇರ್‌ಗವಿ ಗುಡ್ಡ: ಶಿಲಾಯುಗ ಚಿತ್ರಕಲೆಯ ನೆಲೆ'. **ಇತಿಹಾಸ ದರ್ಪಣ ಸಂ. 28** (ಜನವರಿ–ಮಾರ್ಚ್): 9–20.

ಮೋಹನ ಆರ್. 2016b. 'ಹಿರೇಗುಡ್ಡ: ಮನುಕುಲ ಪೂರ್ವ ಸಂಸ್ಕೃತಿಯ ಪ್ರತಿಬಿಂಬಕ'. **ಇತಿಹಾಸ ದರ್ಪಣ ಸಂ. 29** (ಏಪ್ರಿಲ್–ಜೂನ್): 11–18.

ಮೋಹನ ಆರ್. 2016c. 'ಮಲಪ್ರಭಾ ನದಿ ತೀರದ ಪ್ರಾಗಿತಿಹಾಸ ವರ್ಣಚಿತ್ರ ನೆಲೆಯ (ಕೆಂದೂರು) ಅನ್ವೇಷಣೆ ಮತ್ತು ಅದರ ಮಹತ್ವ'. **ಇತಿಹಾಸ ದರ್ಶನ 31**: 15–18.

ಮೋಹನ, ಆರ್. 2017. 'ಗವಿ/ಕಲ್ಲಾಸರೆಯಲ್ಲಿ ಪ್ರಾಚೀನ ಕರ್ನಾಟಕ ಸಂಸ್ಕೃತಿ'. **ಇತಿಹಾಸ ದರ್ಪಣ 31–32** (ಅಕ್ಟೋಬರ್ 2016–ಮಾರ್ಚ್ 2017): 25–40.

Mohana, R. 2015. **Reading Rock Art: Interpreting Temporal and Geographic Variability in the Lower Malaprabha Basin, Karnataka.** Ph.D. Dissertation. Pune: Deccan College, Post Graduate and Research Institute.

Mohana, R. 2016. **Rock Art Exploration in the Malaprabha Basin: A Holistic Approach.** Submitted to Nehru Trust for the Indian Collection at the Victoria and Albert Museum (NTICVA), United Kingdom.

Neumayer, E. 1993. **Lines on Stone: The Prehistoric Rock Art of India.** New Delhi: Manohar Publishers and Distributors.

Viswanathiah, M.N. 1983. Lithostratigraphy and Biostratigraphy of Kaladgi and Badami Groups, in **Proceedings of the 70th Indian Science Congress (Part II: Presidential Address, Geology and Geography Section),** pp. 1-20. Calcutta.

Wakankar, V.S. and R.R.R. Brooks 1976. **Stone Age Painting in India.** U.S.A: Yale-Cambridge University.

■

ಇತಿಹಾಸ ದರ್ಪಣದ ಹಿಂದಿನ ಸಂಚಿಕೆಗಳ ದರ ಪಟ್ಟಿ					
ಸಂಚಿಕೆಗಳು	ಬೆಲೆ	√	ಸಂಚಿಕೆಗಳು	ಬೆಲೆ	√
ಇತಿಹಾಸ ದರ್ಪಣ ಪುಸ್ತಕ – 1*	10		ಇತಿಹಾಸ ದರ್ಪಣ ಪುಸ್ತಕ – 20	75	
ಇತಿಹಾಸ ದರ್ಪಣ ಪುಸ್ತಕ – 2*	10		ಇತಿಹಾಸ ದರ್ಪಣ ಪುಸ್ತಕ – 21,22	150	
ಇತಿಹಾಸ ದರ್ಪಣ ಪುಸ್ತಕ – 3*	10		ಇತಿಹಾಸ ದರ್ಪಣ ಪುಸ್ತಕ – 23	80	
ಇತಿಹಾಸ ದರ್ಪಣ ಪುಸ್ತಕ – 4 [1]	90		ಇತಿಹಾಸ ದರ್ಪಣ ಪುಸ್ತಕ – 24	90	
ಇತಿಹಾಸ ದರ್ಪಣ ಪುಸ್ತಕ – 5	10		ಇತಿಹಾಸ ದರ್ಪಣ ಪುಸ್ತಕ – 25 [4]	180	
ಇತಿಹಾಸ ದರ್ಪಣ ಪುಸ್ತಕ – 6,7*	20		ಇತಿಹಾಸ ದರ್ಪಣ ಪುಸ್ತಕ – 26	75	
ಇತಿಹಾಸ ದರ್ಪಣ ಪುಸ್ತಕ – 8 [2]	100		ಇತಿಹಾಸ ದರ್ಪಣ ಪುಸ್ತಕ – 27	100	
ಇತಿಹಾಸ ದರ್ಪಣ ಪುಸ್ತಕ – 9	20		ಇತಿಹಾಸ ದರ್ಪಣ ಪುಸ್ತಕ – 28	100	
ಇತಿಹಾಸ ದರ್ಪಣ ಪುಸ್ತಕ – 10	30		ಇತಿಹಾಸ ದರ್ಪಣ ಪುಸ್ತಕ – 29	100	
ಇತಿಹಾಸ ದರ್ಪಣ ಪುಸ್ತಕ – 11	30		ಇತಿಹಾಸ ದರ್ಪಣ ಪುಸ್ತಕ – 30	100	
ಇತಿಹಾಸ ದರ್ಪಣ ಪುಸ್ತಕ – 12,13 [3]	110		ಇತಿಹಾಸ ದರ್ಪಣ ಪುಸ್ತಕ – 31,32 [5]	160	
ಇತಿಹಾಸ ದರ್ಪಣ ಪುಸ್ತಕ – 14	30		ಇತಿಹಾಸ ದರ್ಪಣ ಪುಸ್ತಕ – 33,34	160	
ಇತಿಹಾಸ ದರ್ಪಣ ಪುಸ್ತಕ – 15	40		ಇತಿಹಾಸ ದರ್ಪಣ ಪುಸ್ತಕ – 35	90	
ಇತಿಹಾಸ ದರ್ಪಣ ಪುಸ್ತಕ – 16	40		ಇತಿಹಾಸ ದರ್ಪಣ ಪುಸ್ತಕ – 36	90	
ಇತಿಹಾಸ ದರ್ಪಣ ಪುಸ್ತಕ – 17	60		ಇತಿಹಾಸ ದರ್ಪಣ ಪುಸ್ತಕ – 37,38	200	
ಇತಿಹಾಸ ದರ್ಪಣ ಪುಸ್ತಕ – 18	70		ಇತಿಹಾಸ ದರ್ಪಣ ಪುಸ್ತಕ – 39	120	
ಇತಿಹಾಸ ದರ್ಪಣ ಪುಸ್ತಕ – 19	75		ಇತಿಹಾಸ ದರ್ಪಣ ಪುಸ್ತಕ – 40,41 [6]	250	
ಒಟ್ಟು ಮೊತ್ತ:					

ಆಸಕ್ತರು ಅವಶ್ಯವಿರುವ ಸಂಚಿಕೆಗಳನ್ನು ಗುರುತು ಮಾಡಿ, ಅವುಗಳ ಒಟ್ಟು ಮೊತ್ತವನ್ನು ರಿಯಾಯಿತಿ ದರದಲ್ಲಿ ಕಳೆಯಿರಿ. ಉಳಿಕೆ ಮೊತ್ತವನ್ನು **"ITIHASA DARPANA PRAKASHANA", Current Account No.: 15760 12430 00005, IFSC Code: VIJB0001576, ವಿಜಯ ಬ್ಯಾಂಕ್, ಚಂದ್ರ ಲೇಔಟ್ ಶಾಖೆ**. ಇಲ್ಲಿಗೆ ನೇರವಾಗಿ (NEFT / RTGS / Mobile Transfer ಮೂಲಕ) ವರ್ಗಾಯಿಸಿರಿ. ನಂತರ ನಮ್ಮ ವಾಟ್ಸಾಪ್ ಸಂಖ್ಯೆ(78294 04063)ಗೆ ತಮ್ಮ ವಿಳಾಸದ ಜೊತೆಗೆ ಮಾಹಿತಿ ನೀಡಿದಲ್ಲಿ ಅಂಚೆಯ ಮೂಲಕ ತಮಗೆ ಕಳುಹಿಸಿ ಕೊಡಲಾಗುವುದು.

ರಿಯಾಯಿತಿ: ರೂ. 500/– ಮೇಲ್ಪಟ್ಟ ಮೊತ್ತದ ಖರೀದಿಯ ಮೇಲೆ 15% ಹಾಗೂ ರೂ. 1000/– ಮೇಲ್ಪಟ್ಟ ಮೊತ್ತದ ಖರೀದಿಯ ಮೇಲೆ 25% ರಿಯಾಯಿತಿ ನೀಡಲಾಗುವುದು **(ಮೊತ್ತ 500/– ರೂ. ಮೇಲ್ಪಟ್ಟ ಖರೀದಿಗೆ ಅಂಚೆ ವೆಚ್ಚ ಉಚಿತ)**.

ನಮ್ಮ ವಿಳಾಸ: ಸಂಪಾದಕರು, ಇತಿಹಾಸ ದರ್ಪಣ, #33/ಎ, ಐ.ಟಿ.ಐ. ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ ಅಂಚೆ, ಬೆಂಗಳೂರು– 560091. ಮೊ: 78294 04063.

---

1. ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ – ವಿಶೇಷ ಸಂಚಿಕೆ
2. ನಮ್ಮ ಬೆಂಗಳೂರು – ವಿಶೇಷ ಸಂಚಿಕೆ
3. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು – ವಿಶೇಷ ಸಂಚಿಕೆ
4. ಹೈದರಾಲಿ ಮತ್ತು ಟೀಪೂ ಸುಲ್ತಾನರ ಮೂಲ ದಾಖಲೆ – ವಿಶೇಷ ಸಂಚಿಕೆ
5. ಪರಿಶೋಧ: ಕರ್ನಾಟಕದ ಕಲೆ, ವಾಸ್ತುಶಿಲ್ಪ ಮತ್ತು ಪುರಾತತ್ತ್ವ ಕುರಿತಾದ ಹೊಸ ಶೋಧನೆಗಳು
6. ಕರ್ನಾಟಕ ಇತಿಹಾಸದ ಹೊಸ ಆಯಾಮಗಳು – ದಶಮಾನೋತ್ಸವ ವಿಶೇಷ

*** ಸಂಚಿಕೆಗಳು ಲಭ್ಯವಿಲ್ಲ.**

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: Praveen Kumar K
Title: dakṣiṇa karnāṭakada kabbiṇayuga saṃkṛuti

ದಕ್ಷಿಣ ಕರ್ನಾಟಕದ ಕಬ್ಬಿಣಯುಗ ಸಂಸ್ಕೃತಿ

ಪ್ರವೀಣ್ ಕುಮಾರ್ ಕೆ.
PhD Scholar
Deccan Collage Post Graduate and Reserach Institute (Deemed), Pune Maharashtra & Young Archaeologist, ASI, New Delhi.
praveenkagh1990@gmail.com

ನವಶಿಲಾಯುಗ ಜನರಿಂದ ನಿರ್ಮಿಸಲಾದ ಬೂದಿದಿಬ್ಬ ನೆಲೆಗಳು ಹಾಗೂ ಅವರ ಜನಜೀವನ ಮತ್ತು ಸಂಸ್ಕೃತಿಯ ಮೇಲೆ ಸಾಕಷ್ಟು ಅಧ್ಯಯನಗಳು ನಡೆದಿವೆ. ನವಶಿಲಾಯುಗದ ನಂತರ ಕಂಡುಬರುವ ಬೃಹತ್ ಶಿಲಾಯುಗ ಸಂಸ್ಕೃತಿಯು ಹೆಚ್ಚು ಕುತೂಹಲಕಾರಿಯಾಗಿದೆ. ಈ ಕಾಲಘಟ್ಟವು ಪ್ರಾಚೀನ ಜಾನಪದ ಹಾಗೂ ಮಹಾಕಾವ್ಯಗಳ ಜೊತೆ ಹೆಚ್ಚು ಬೆರೆತು ಕುತೂಹಲಕ್ಕೆ ಮತ್ತು ಹೆಚ್ಚು ಅಧ್ಯಯನಕ್ಕೆ ದಾರಿಮಾಡಿಕೊಟ್ಟಿದೆ. ದಕ್ಷಿಣ ಭಾರತದ ಒಳ ಪ್ರಸ್ಥಭೂಮಿಗಳು ದಕ್ಷಿಣ ಏಷ್ಯಾದ ಸಾಕಷ್ಟು ಗುಣ ಲಕ್ಷಣಗಳನ್ನು ಹೊಂದಿದ ವಿತರಣೆಯ ಹೃದಯ ಭಾಗವೆಂದೆ ಹೇಳಬಹುದು. ಕೆಲವು ಪ್ರತ್ಯೇಕ ಉದಾಹರಣೆಗಳನ್ನು ಹೊರತುಪಡಿಸಿ, ದಕ್ಷಿಣ ಭಾರತದ ರಾಜ್ಯಗಳಲ್ಲಿ ವೈಶಿಷ್ಟತೆಯುಳ್ಳ ಹೆಚ್ಚಿನ ಸಾಂಧ್ರತೆ ಮತ್ತು ವೈವಿಧ್ಯಮಯ ಲಕ್ಷಣಗಳಿಂದ ಕೂಡಿದ ಸಾಕಷ್ಟು ನೆಲೆಗಳು ವರದಿಯಾಗಿದ್ದು, ಅಧ್ಯಯನಗಳು ಕೂಡ ನಡೆದಿವೆ ಹಾಗೂ ಇಂದಿಗೂ ನಡೆಯುತ್ತಲೇ ಇವೆ. ಪ್ರಸ್ತುತ ಸ್ವಲ್ಪಮಟ್ಟಿಗೆ ಶಾಸ್ತ್ರೀಯವಾಗಿ ಅಧ್ಯಯನಗಳಾಗಿದ್ದರೂ, ಸಾವಿರಾರು ನೆಲೆಗಳನ್ನು ಶೋಧಿಸಲಾಗಿದ್ದರೂ ಕಬ್ಬಿಣಯುಗ / ಬೃಹತ್ ಶಿಲಾಯುಗ ಸಂಸ್ಕೃತಿಯ ನಿಜವಾದ ತಾತ್ಕಾಲಿಕ ವ್ಯಾಪ್ತಿ, ಸಾಮಾಜಿಕ ಮತ್ತು ಆರ್ಥಿಕ

ಸ್ಥಿತಿಗತಿಗಳನ್ನು ಕುರಿತು ಖಚಿತತೆಗೆ ಬರಲು ಸಾಧ್ಯವಾಗದೇ ಇನ್ನೂ ಗೊಂದಲಗಳು ಉಳಿದಿವೆ.

ಭಾರತೀಯ ದಖ್ಖಿನ್ ಪ್ರಸ್ಥಭೂಮಿಯಲ್ಲಿ ಸು. 3000 ಕ್ಕಿಂತಲೂ ಹೆಚ್ಚಿನ ಬೃಹತ್ ಶಿಲಾಯುಗ ಮತ್ತು ವಸತಿ ನೆಲೆಗಳು ವರದಿಯಾಗಿವೆ. ಕ್ರಿ.ಶ. 1817 ರಲ್ಲಿ ಕರ್ನಲ್ ಕಾಲಿನ್ ಮೆಕೆಂಜಿ ಅವರಿಂದ ಬೃಹತ್ ಶಿಲಾಯುಗ ನೆಲೆಗಳ ಆಕಸ್ಮಿಕ ಶೋಧನೆಯಿಂದ ಶುರುವಾದ ಅಧ್ಯಯನವು ಇಂದಿನವರೆಗೂ ನಡೆಯುತ್ತಲೇ ಇದೆ. ಕೊಚ್ಚಿನ್, ಚಿತ್ತೂರು, ಹೈದರಾಬಾದ್ ಹಾಗೂ ಅಮರಾವತಿ ಭಾಗಗಳಲ್ಲಿ ಶೋಧಿತಗೊಂಡ ನೆಲೆಗಳು ಮೆಕೆಂಜಿಯ ಶೋಧನೆಯಿಂದ ಭಾರತದಲ್ಲಿ ಮೊದಲು ಕಂಡು ಬಂದ ನೆಲೆಗಳೆಂದು ಕೆ. ಪದ್ದಯ್ಯ ಅವರು ವರದಿಮಾಡಿರುತ್ತಾರೆ (ಪದ್ದಯ್ಯ 1997). ಮೆಕೆಂಜಿಯ ನಂತರ ಬ್ಯಾಬಿಂಗ್‌ಟನ್‌ರು 1829ರಲ್ಲಿ ನೀಲಗಿರಿಯ ಮಲಬಾರ್ ಪ್ರದೇಶದಲ್ಲಿ ಬೃಹತ್ ಶಿಲಾಯುಗ ನೆಲೆಗಳನ್ನು ಪತ್ತೆಹಚ್ಚಿದರು.

ದಕ್ಷಿಣ ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಬೃಹತ್ ಶಿಲಾಯುಗ ಸಮಾಧಿಗಳನ್ನು ಪತ್ತೆಹಚ್ಚಿ ಉತ್ಖನನ ಮಾಡಿದ ಕೀರ್ತಿ ಎಸ್.ಜೆ.ಎಸ್. ಮೆಕೆಂಜಿಯವರಿಗೆ ಸಲ್ಲುತ್ತದೆ. ಕೊಡಗಿನ ಮಡಿಕೇರಿ ತಾಲ್ಲೂಕು ಕೇಂದ್ರದಿಂದ ಸು. 32 ಕಿ.ಮೀ. ಈಶಾನ್ಯಕ್ಕೆ ವೀರಾಜಪೇಟೆ ಬಳಿ ಎಸ್.ಜೆ.ಎಸ್. ಮೆಕೆಂಜಿಯವರು 1867ರಲ್ಲಿ ಕೆಲವು ಬೃಹತ್ ಶಿಲಾ ಸಮಾಧಿಗಳನ್ನು ಪತ್ತೆ ಹಚ್ಚುತ್ತಾರೆ. ನಂತರ 1869ರಲ್ಲಿ ಕ್ಯಾಪ್ಟನ್ ಕೋಲ್‌ರವರು ಆ ಶಿಲಾ ಸಮಾಧಿಗಳನ್ನು ಉತ್ಖನನ ಮಾಡುತ್ತಾರೆ. ಈ ಉತ್ಖನನದಲ್ಲಿ ದೊರೆತ ಮೃತ್ಪಾತ್ರೆಗಳು, ಮೂರು ಕಾಲುಳ್ಳ ಶೇಖರಣ ಜಾಡಿಗಳು, ಕಬ್ಬಿಣದ ಅವಶೇಷಗಳು ಮತ್ತು ಇದ್ದಿಲಿನ ಅವಶೇಷಗಳನ್ನು ವರದಿಮಾಡುತ್ತಾರೆ. ಅದೇ ರೀತಿ ಮೈಸೂರು ನಗರದಿಂದ ಪಶ್ಚಿಮಕ್ಕೆ 87 ಕಿ.ಮೀ. ಹಾಗೂ ಪಿರಿಯಾಪಟ್ಟಣ ತಾಲ್ಲೂಕಿನಿಂದ 20 ಕಿ.ಮೀ. ದೂರದಲ್ಲಿರುವ ಕೊಪ್ಪ ನೆಲೆಯಲ್ಲಿ 100ಕ್ಕೂ ಹೆಚ್ಚು ಬೃಹತ್ ಶಿಲಾಸಮಾಧಿಗಳನ್ನು ಬೆಳಕಿಗೆ ತಂದು ಅವುಗಳಲ್ಲಿ 17 ಸಮಾಧಿಗಳನ್ನು ಉತ್ಖನನ ಮಾಡಲಾಗಿದೆ. ಈ ನೆಲೆಯು ದಕ್ಷಿಣ ಕರ್ನಾಟಕದಲ್ಲಿ ಮಾತ್ರವಲ್ಲ; ದಖ್ಖಿನ್ ಪ್ರದೇಶದಲ್ಲಿಯೇ ಬೃಹತ್ ಶಿಲಾಯುಗ ಸಂಸ್ಕೃತಿಯ ಅಧ್ಯಯನಕ್ಕೆ ಪ್ರಮುಖ ನೆಲೆಯಾಗಿದೆ (ಸುಬ್ಬಯ್ಯ 1978 ಮತ್ತು 1990; ದೇವರಾಜ 1996). ಉತ್ಖನನದಲ್ಲಿ ಕಬ್ಬಿಣದ ಅವಶೇಷಗಳಾದ ಕೊಡಲಿ, ಬಾಣಗಳು, ಚೂರಿ, ಚಾಕುಗಳು ಮತ್ತು ಉಳಿ; ಮೃತ್ಪಾತ್ರೆಗಳಾದ ನಯವಾದ ಕೆಂಪುವರ್ಣದ ಪಾತ್ರೆಗಳು, ಕಪ್ಪು ಮತ್ತು ಕೆಂಪು ವರ್ಣದ ಬಟ್ಟಲುಗಳು, ಸಣ್ಣಗಾತ್ರದ ಕುಡಿಕೆಗಳು ಮತ್ತು ಗೀರು ರೇಖೆಯುಳ್ಳ ಮೃತ್ಪಾತ್ರೆಗಳು, ಮೂರು ಕಾಲಿನ ಜಾಡಿಗಳು ದೊರೆತಿವೆ. ಬಹುಮುಖ್ಯವಾಗಿ ಮೂರು ಕಾಲಿನ ಜಾಡಿಗಳಲ್ಲಿ ಭತ್ತದ ಹೊಟ್ಟು ಮತ್ತು ರಾಗಿಯ ಅವಶೇಷಗಳು ಕಂಡುಬಂದಿರುವುದು ಮಹತ್ತರ ಶೋಧವಾಗಿವೆ. ಈ ಶೋಧವು ದಕ್ಷಿಣ ಭಾರತದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರ ಕೃಷಿ ಹಾಗೂ ಆಹಾರ ಪದ್ಧತಿಯ ಅಧ್ಯಯನಕ್ಕೆ ಮಹತ್ತರವಾದ ಕೊಡುಗೆ ನೀಡಿದೆ. ಕೋಲ್‌ನ ನಂತರ ಕೆ.ಕೆ. ಸುಬ್ಬಯ್ಯನವರು 1975–76, 1976–77 ಮತ್ತು 1983–84 ರಲ್ಲಿ ಮೂರು ಅವಧಿಗಳಲ್ಲಿ 15 ವೃತ್ತ ಸಮಾಧಿಗಳು (Stone Circles), 11 ಶಿಲಾಕೋಣೆ ವೃತ್ತಗಳು (Cist circles), ಎರಡು ಅವಳಿ ಶಿಲಾಕೋಣೆ (Twins Cist circles) ವೃತ್ತಗಳು ಹಾಗೂ ಒಂದು ಕಲ್ಲುಗುಪ್ಪೆ (Cair circle)ಸಮಾಧಿಗಳನ್ನು ಉತ್ಖನನ ಮಾಡಿದ್ದಾರೆ. ಈ ಉತ್ಖನನದಲ್ಲಿ ದೊರೆತ ಅವಶೇಷಗಳಿಗೂ ಹಾಗೂ ಈ ಹಿಂದೆ ಕೋಲ್ ನಡೆಸಿದ ಉತ್ಖನನದ ಅವಶೇಷಗಳಿಗೂ ಅಂತಹ ವ್ಯತ್ಯಾಸ ಕಂಡು ಬಂದಿಲ್ಲದಿರುವುದನ್ನು

ಗಮನಿಸಬಹುದು. ಕರ್ನಾಟಕದಲ್ಲೇ ವಿಶೇಷ ಎನ್ನಬಹುದಾದ ಸಾವನದುರ್ಗದ ಇಟ್ಟಿಗೆಬೈಲು ನೆಲೆಯಲ್ಲಿ 100ಕ್ಕೂ ಹೆಚ್ಚು ಸಮಾಧಿಗಳನ್ನು ಮದ್ರಾಸ್ ಸರ್ಕಾರದಲ್ಲಿ ಭೂವಿಜ್ಞಾನಿಯಾಗಿದ್ದ ಬ್ರಾನ್‌ಫಿಲ್ ಅವರು ಶೋಧಿಸಿ, ಕೆಲವನ್ನು ಉತ್ಖನನಕ್ಕೆ ಒಳಪಡಿಸುತ್ತಾರೆ (ಬ್ರಾನ್‌ಫಿಲ್ 1881). ಇವರ ಉತ್ಖನನದಲ್ಲಿ ವಿಶೇಷವೆನಿಸುವ ಕೊಂಬಿನಾಕಾರದ ಮಣ್ಣಿನ ವಸ್ತುಗಳು, ಸಿಲಿಂಡರ್ ಆಕಾರದ ಮೂರು ಕಾಲಿನ ಜಾಡಿಗಳು, ರಾಗಿಯ ಕುರುಹುಗಳು, ಕೋಳಿ(?)ಯ ಮೂಳೆಗಳು* ಮತ್ತು ಮಾನವನ ಮೂಳೆಗಳು ಕಂಡುಬಂದಿವೆ.

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಿಂದ 15 ಕಿ.ಮೀ. ದೂರದಲ್ಲಿರುವ ಬನವಳಿ ಎಂಬ ನೆಲೆಯಲ್ಲಿ ವೃತ್ತ ಸಮಾಧಿಗಳು ವರದಿಯಾಗಿದ್ದು, ಇವುಗಳಲ್ಲಿ ಕೆಲವನ್ನು ಕಂಡೊಜಿರಾವ್ ಸೆ. 1, 1897ರಲ್ಲಿ ಉತ್ಖನನಮಾಡಿ ಕೆಲವು ಅವಶೇಷಗಳನ್ನು ಹೊರತೆಗೆಯುತ್ತಾರೆ (Sheshadri 1957). ಮುಖ್ಯವಾಗಿ ಮೃತ್ಪಾತ್ರೆಗಳಾದ ಬಟ್ಟಲುಗಳು ಮತ್ತು ಅವುಗಳ ಮುಚ್ಚಳಗಳು, ಟೆರ್ರಕೊಟ್ಟ ಆಟಿಕೆಗಳ ತಲೆ, ಹಾಗೂ ಕಂಚಿನಿಂದ ತಯಾರಿಸಲಾದ ಮತ್ತು ವಿಶಿಷ್ಟವೆನಿಸುವ ಕಿವಿಯ ಆಭರಣಗಳು ವರದಿಯಾಗಿರುವುದು ನೆಲೆಯ ಮಹತ್ವವನ್ನು ಎತ್ತಿಹಿಡಿಯುತ್ತವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಿಂದ 9 ಕಿ.ಮೀ. ದೂರದಲ್ಲಿ ಮನಗೊಂಡನಹಳ್ಳಿಯಲ್ಲಿ ಶಿಲಾವೃತ್ತ ಮತ್ತು ನಿಲುಸು ಗಲ್ಲುಗಳ ಉತ್ಖನವಾಗಿದೆ. ಈ ನೆಲೆಯನ್ನು 1917ರಲ್ಲಿ ಆರ್. ನರಸಿಂಹಚಾರ್ ಶೋಧಿಸಿ ಎರಡು ಸಮಾಧಿಗಳನ್ನು ಉತ್ಖನನ ಮಾಡಿದ್ದಾರೆ. ಬಹಳ ವಿಶಿಷ್ಟವೆನಿಸುವ ಕಾಲುಳ್ಳ ಜಾಡಿಗಳನ್ನು ಹೊರತೆಗೆಯುತ್ತಾರೆ. ಇದೇ ಸಮಯದಲ್ಲಿ ಬೆಳ್ಳಂದೂರಿನಲ್ಲಿ ಮಿ.ಬುಷ್‌ನಿಂದ ನಡೆದ ಉತ್ಖನನವನ್ನು ಇಲ್ಲಿ ಸ್ಮರಿಸಬಹುದು.

ಹುತ್ತನಹಳ್ಳಿ ನೆಲೆಯು ಬೆಂಗಳೂರಿನಿಂದ ಸು. 20 ಕಿ.ಮೀ. ಉತ್ತರಕ್ಕೆ ಈ ನೆಲೆ ಕಂಡುಬಂದಿದ್ದು ಈ ನೆಲೆಯಲ್ಲಿ ವೃತ್ತ ಸಮಾಧಿಗಳನ್ನು ಮೇ. ವೂಚೊಸ್ ಶೋಧಿಸಿ ಕೆಲವನ್ನು ಉತ್ಖನನ ಮಾಡಿದ್ದಾರೆ. ಉತ್ಖನನದಲ್ಲಿ ವಿಶಿಷ್ಟವೆನಿಸುವ ಬಹುಶಃ ಶಸ್ತ್ರಾಸ್ತ್ರವಾಗಿ ಬಳಸಿದ್ದಿರಬಹುದಾದ ಮತ್ತು ತುದಿಯಲ್ಲಿ ಚೂಪಾದ ಹಾಗೂ ಉದ್ದವಾದ ಸಾಧನವೊಂದು ವರದಿಯಾಗಿದೆ (Sheshadri 1957). ಉತ್ಖನದಲ್ಲಿ ವಿವಿಧ ಮಾದರಿಯ ಕುಂಬಾರಿಕೆಯ ಮೃತ್ಪಾತ್ರೆಗಳು, ಲೇಪಿತ ಕೆಂಪು ವರ್ಣದ ಮಡಕೆಗಳು, ಆಳವಾದ ಹಾಗೂ ಉಬ್ಬು ಆಧಾರಿತ ಬೋಗುಣಿಗಳು ಕ್ಯಾರಿನೇಟ್ಟಡ್ ಬಟ್ಟಲುಗಳು ಮತ್ತು ಪಾತ್ರೆಗಳು ಕಂಡು ಬಂದಿವೆ. ಅಂಫೋರಾ ಅಥವಾ ಹೂದಾನಿಗಳಿಗೆ ಅನ್ವಯಿಸುವ ಶಂಖುವಿನಾಕಾರದ ಹೂದಾನಿಗಳು ಮತ್ತು ಗೋಳಾಕಾರದ ದೇಹದಂತಿರುವ ಮೃತ್ಪಾತ್ರೆಗಳನ್ನು ಶೋಧಿಸಲಾಗಿದೆ.

ಬೆಂಗಳೂರಿನ ಪೂರ್ವಕ್ಕೆ 20 ಕಿ.ಮೀ. ದೂರದಲ್ಲಿರುವ ಜಡಿಗೇನಹಳ್ಳಿ ನೆಲೆಯು (ಹೊಸಕೋಟೆ-ತಾ. ಬೆಂಗಳೂರು) ಕರ್ನಾಟಕದ ಭೌಗೋಳಿಕ ಎಲ್ಲೆಯಲ್ಲಿಯೇ ವಿಶಿಷ್ಟವಾದ ಸಮಾಧಿಗಳನ್ನು ಹೊಂದಿರುವ ಬೃಹತ್ ಶಿಲಾ ಸಮಾಧಿ ನೆಲೆ. 1956-57 ರಲ್ಲಿ

---

* ದಕ್ಷಿಣ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಶವಗಳನ್ನು ಹೂಳುವಾಗ ಜೀವಂತ ಕೋಳಿಯನ್ನು ಶವದ ಜೊತೆಯಲ್ಲಿ ಹೂಳುವ ಸಂಪ್ರದಾಯವಿದೆ. ಶವವನ್ನು ಸುಡುವ ಸಂದರ್ಭದಲ್ಲಿ ಶವದ ಚಿತೆಗೆ ಜೀವಂತ ಕೋಳಿಯನ್ನು ಎಸೆಯುವ ಪದ್ಧತಿ ಕೂಡ ಇದೆ. ಈ ಸಂಪ್ರದಾಯಗಳು ಸಾಮಾನ್ಯವಾಗಿ ಹೊಸಕೋಟೆ. ಮಾಗಡಿ. ಚನ್ನಪಟ್ಟಣ. ಕುಣಿಗಲ್ ಪರಿಸರದಲ್ಲಿ ಒಕ್ಕಲಿಗ ಸಮುದಾಯದಲ್ಲಿ ಆಚರಣೆಯಲ್ಲಿರುವುದುಂಟು. **-ಸಂಪಾದಕರು**

ಎಂ. ಶೇಷಾದ್ರಿಯವರು ಶಾಸ್ತ್ರೀಯ ಉತ್ಖನವನ್ನು ಮಾಡಲಾಗಿ ವಿಶಿಷ್ಟವಾದ ಕಾಲುಳ್ಳ ಶವಪೆಟ್ಟಿಗೆಗಳನ್ನು ಹೊರತೆಗೆಯುತ್ತಾರೆ (Sheshadri 1957). ಅಧ್ಯಯನದ ದೃಷ್ಟಿಯಿಂದ ಈ ನೆಲೆಯು ಈ ಪ್ರದೇಶದ ಸಾಂಸ್ಕೃತಿಕ ಸನ್ನಿವೇಶವನ್ನು ಅರ್ಥೈಸಿಕೊಳ್ಳಲು ಈ ನೆಲೆಯ ಕೊಡುಗೆ ಅಪಾರವೆಂದರೆ ತಪ್ಪಾಗಲಾರದು. ಪ್ರಮುಖವಾಗಿ ಬನಹಳ್ಳಿಯು ಕರ್ನಾಟಕದಲ್ಲಿಯೇ ವಿಶಾಲವಾದ ನವಶಿಲಾಯುಗ, ತಾಮ್ರಶಿಲಾಯುಗ(?), ಕಬ್ಬಿಣ ಮತ್ತು ಆರಂಭಿಕ ಇತಿಹಾಸಕಾಲದ ವಸತಿ ನೆಲೆಯಾಗಿದೆ. ಸು.300 ಮೀ. ನಷ್ಟು ವಿಸ್ತಾರವಾಗಿದ್ದು ಶಾಸ್ತ್ರೀಯ ಉತ್ಖನನವಾಗಿದೆ (*IAR*.1967-68; 1983-84 & 1986-87). ಸಾಕಷ್ಟು ಪ್ರಮಾಣದಲ್ಲಿ ಕಬ್ಬಿಣದ ಅವಶೇಷಗಳು ಶೋಧನೆಗೊಂಡಿದ್ದು ಕಬ್ಬಿಣ ಯುಗದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗೆಗಿನ ಅಧ್ಯಯನಕ್ಕೆ ಸಾಕಷ್ಟು ಪೂರಕ ಅಂಶಗಳನ್ನು ಒದಗಿಸಿವೆ. ನವಶಿಲಾಯುಗದಿಂದ ಆರಂಭಿಕ ಇತಿಹಾಸ ಕಾಲದವರೆಗಿನ ಸಂಸ್ಕೃತಿ ಕುರುಹುಗಳು ಈ ನೆಲೆಯಲ್ಲಿ ಕಂಡುಬಂದಿವೆ. ಈ ನೆಲೆಯ ಸಾಂಸ್ಕೃತಿಕ ಅನುಕ್ರಮವನ್ನು ಈ ಕೆಳಗಿನ ಪಟ್ಟಿಯಲ್ಲಿ ನೋಡಬಹುದು. ಪ್ರಮುಖವಾಗಿ ಈ ನೆಲೆಯು ನವಶಿಲಾಯುಗ ಮತ್ತು ಆದಿ ಕಬ್ಬಿಣ ಯುಗ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ ಮತ್ತು ಸಾಕಷ್ಟು ಚರ್ಚೆಗೂ ಗ್ರಾಸವಾಗಿದೆ. ಉತ್ಖನನಕಾರರ ಪ್ರಕಾರ ತಾಮ್ರಶಿಲಾಯುಗದ ಸಂಸ್ಕೃತಿಯ ಕುರುಹುಗಳು ಎನ್ನಬಹುದಾದ ಸಣ್ಣ ಪ್ರಾಮಾಣದಲ್ಲಿ ದೊರೆತ ಲಂಬವಾದ ಶವಕುಣಿಗಳು, ಹೆಚ್ಚು ಸುಟ್ಟ ಗುಲಾಬಿ ಕಂದು ಬಣ್ಣದ ಪಾತ್ರೆಗಳು ಈ ನೆಲೆಯಲ್ಲಿ ದೊರಕಿವೆ. ಆದರೆ ಕರ್ನಾಟಕದಲ್ಲಿ ತಾಮ್ರಶಿಲಾಯುಗದ ಕುರುಹುಗಳು ಸಿಕ್ಕಿರುವುದು ಅತೀ ವಿರಳ ಮತ್ತು ದಕ್ಷಿಣ ಕರ್ನಾಟದ ಭೌಗೋಳಿಕ ಭಾಗದಲ್ಲಿ ಈ ಕಾಲದ ಬಗ್ಗೆ ಕುರುಹುಗಳೇ ಇಲ್ಲದಿರುವಾಗ ಸಿಕ್ಕಕುರುಹುಗಳಿಂದ ವಲಸೆ ಅಥವಾ ಕೈಗಾರಿಕೋತ್ಪನ್ನಗಳ ತಯಾರಿಕೆಗೆ ಇಲ್ಲಿ ಬಂದು ತಾತ್ಕಾಲಿಕವಾಗಿ ನೆಲೆಸಿದ್ದರೆಂದು ಊಹಿಸಬಹುದಷ್ಟೆ, ಏಕೆಂದರೆ. ಬನಹಳ್ಳಿ ನೆಲೆಯು ಕೋಲಾರ ಭಾಗದಲ್ಲಿ ಇರುವುದರಿಂದ ಇಲ್ಲಿ ಹೇರಳವಾಗಿ ದೊರೆಯುವ ಕಬ್ಬಿಣದ ಅದಿರು ಮತ್ತು ಚಿನ್ನದ ಉತ್ಪನ್ನಗಳಿಗೆ ಹೆಸರುವಾಸಿಯಾದ ಪ್ರದೇಶವಾಗಿದ್ದರಿಂದ ತಾಮ್ರಶಿಲಾಯುಗದ ಜನರು ಇಲ್ಲಿ ನೆಲೆಸಿದ್ದರು ಎಂದಷ್ಟೆ ಊಹಿಸಬಹುದು ಮತ್ತು ಮುಖ್ಯವಾಗಿ ಈ ನೆಲೆಯಲ್ಲಿ ತಾಮ್ರಶಿಲಾಯುಗ ಮತ್ತು ಆದಿ ಕಬ್ಬಿಣಯುಗ ಸಂಸ್ಕೃತಿಗಳ ಪ್ರಭಾವಬೀರುವುದರಿಂದ (Overlap- layer 11) ಈ ಭಾಗದಲ್ಲಿ ಈ ಸಂಸ್ಕೃತಿಯ ಗುರುತಿಸುವಿಕೆ ಪ್ರಪ್ರಥಮವಾದುದ್ದಾಗಿದೆ.

ಪ್ರಮುಖವಾಗಿ ಈ ನೆಲೆಯಲ್ಲಿ ಸಿಕ್ಕಿರುವ ಕಬ್ಬಿಣ ಶಿಲಾಯುಗ ಸಮಾಧಿಗಳು ವಸತಿನೆಲೆಯಲ್ಲಿಯೇ ಸಿಕ್ಕಿರುವುದು ಇನ್ನು ಹೆಚ್ಚು ಮಹತ್ವವನ್ನು ಪಡೆಯುತ್ತವೆ. ಆದ್ದರಿಂದ ಈ ನೆಲೆಯು ನವಾಶಿಲಾಯುಗದಿಂದ ಆರಂಭಿಕ ಇತಿಹಾಸ ಕಾಲದವರೆಗೂ ಸಂಸ್ಕೃತಿಯ ಮುಂದುವರೆದ ವಿಕಸನಕ್ಕೆ ಒಂದು ಒಳ್ಳೆಯ ನಿದರ್ಶನದ ನೆಲೆಯಾಗಿ ಪರಿಣಮಿಸಿದೆ. ದಕ್ಷಿಣ ಭಾರತದಲ್ಲಿ ಕಬ್ಬಿಣ ತಯಾರಿಕೆಗೆ ಉತ್ತಮ ಸಾಕ್ಷಿಗಳನ್ನು ನೀಡಿದ ನೆಲೆಯಾಗಿದೆ. ಒಟ್ಟು 6 ಕಬ್ಬಿಣದ ಕುಲುಮೆಗಳು ಮತ್ತು ಕಿಟ್ಟದ ಕುರುಹುಗಳು ದೊರಕಿವೆ. ಮಣಿಗಳ ತಯಾರಿಕೆಯ ಕೇಂದ್ರವಾಗಿಯು ಈ ನೆಲೆ ಮಹತ್ವವನ್ನು ಪಡೆದಿದೆ. ಉತ್ಖನನಕಾರರು ನೀಡಿರುವ ವರದಿಯನ್ನು ಆಧರಿಸಿ ಈ ನೆಲೆಯು ಕರ್ನಾಟಕದಲ್ಲೇ ಬ್ರಹ್ಮಗಿರಿಯ ನಂತರ ಆದಿ ಕಬ್ಬಿಣ ಯುಗದ ದೊಡ್ಡ ನೆಲೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಕಾಲ	ಸಂಸ್ಕೃತಿ ಮತ್ತು ಸ್ತರ	ಸಾಂಸ್ಕೃತಿಕ ಅವಶೇಷಗಳು		
		ಕುಂಬಾರಿಕೆಯ ವಸ್ತುಗಳು	ಇತರೆ	
ಕಾಲ 1	ನವಶಿಲಾಯುಗ; 2 ಮೀಟರ್‌ನ ಸ್ತರ 23&15ರ ನಡುವೆ.	ಕೈಯಿಂದ ತಯಾರಿಸಿದ ಕುಂಬಾರಿಕೆ ವಸ್ತುಗಳು, ಬಟ್ಟಲು, ಸುಟ್ಟ ಮೃತ್ಪಾತ್ರೆಗಳು, ಸುಟ್ಟಿರದ ಬೂದು ಬಣ್ಣದ ಪಾತ್ರೆಗಳು, ಕೆಂಪು ಮತ್ತು ಕಂದು ಬಣ್ಣದ ಪಾತ್ರೆಗಳು, ಕೆಂಪು ಮತ್ತು ಕಂದು ಬಣ್ಣದ ಪಾತ್ರೆಗಳು ಮತ್ತು ಗಟ್ಟಿಯಿಂದ ಕೂಡಿದ ಕಾಲುಳ್ಳ ಜಾಡಿಗಳು.	ಮರದ ಗೂಟದ ರಂಧ್ರಗಳು (post holes), ನೆಲದ ಕಲ್ಲುಗಳ ತಯಾರಿಕಾ ಕೈಗಾರಿಕೆಯ ಕುರುಹು, ಕಲ್ಲಿನ ಕೊಡಲಿ, ಕೊಡಲಿಯನ್ನು ಹೋಲುವ ಕಮಾನಿನಾಕಾರದ ಬ್ಲೇಡ್‌ಗಳು, ದುಂಡಾದ ಸುತ್ತಿಗೆ, ಕಲ್ಲಿನ ಮೇಲೆ ಗುರುತುಗಳನ್ನು ಅಳಿಸಿ ಹಾಕಲು ಬಳಸುವ ಮಸೆಯುವ ಕಲ್ಲು, ಚಂದ್ರಾಕೃತಿಯ ಕಲ್ಲಿನ ಉಪಕರಣಗಳು, ಚಕ್ಕೆಗಳು, ಮತ್ತು ಬ್ಲೇಡ್‌ಗಳು.	
ಕಾಲ 1.ಬಿ	ಮೂಲಭೂತವಾಗಿ ನವಶಿಲಾಯುಗ ಆದರೆ ತಾಮ್ರಶಿಲಾಯುಗದ ಲಕ್ಷಣ: 1 ಮೀಟರ್‌ನ ಸ್ತರ 14 ರಿಂದ 12 ರ ನಡುವೆ.	ಲಂಬವಾದ ಶವಕುಣಿಗಳು, ಹೆಚ್ಚು ಸುಟ್ಟ ಗುಲಾಬಿ ಕಂದು ಬಣ್ಣದ ಪಾತ್ರೆಗಳು, ದೊಡ್ಡ ಜಾಡಿ ಮತ್ತು ಬಟ್ಟಲುಗಳು.	ಚಿಕ್ಕಮಕ್ಕಳ ಅಸ್ಥಿ ಪಂಜರ	
ಕಾಲ 2	ಪರಸ್ಪರ ಹೆಣೆದು ಕೊಂಡಿರುವ ತಾಮ್ರಶಿಲಾಯುಗ ಮತ್ತು ಆದಿ ಕಬ್ಬಿಣಯುಗಗಳ ಸಂಸ್ಕೃತಿ: 0.40 ಮೀಟರ್‌ನ ಸ್ತರ 11 ರಲ್ಲಿ.	ಶವಕುಣಿಗಳು ಹಾಗೂ ಅದರೊಳಗಿನ ಬಟ್ಟಲುಗಳು, ಕೈಯಿಂದ ತಯಾರಿಸಿದ ಮತ್ತು ಚೆನ್ನಾಗಿ ಸುಟ್ಟ ಪಾತ್ರೆಗಳು, ಬಣ್ಣ ಹಚ್ಚಿದ ಲೇಪನವುಳ್ಳ ಮೃತ್ಪಾತ್ರೆಗಳು.	**ಕಬ್ಬಿಣದ ವಸ್ತುಗಳು** ಕಬ್ಬಿಣದ ವಸ್ತುಗಳಾದ ಕೊಡಲಿ, ಉಳಿ ಇತ್ಯಾದಿ	**ಇತರೆ** ನಾಲ್ಕು ಸಮಾಧಿಗಳು: ತಾರುಣ್ಯ ವಯಸ್ಸಿನ ಮತ್ತು ವಯಸ್ಕರ ಸಮಾಧಿಗಳು ಹಾಗೂ ಗೂಡೊಲೆ ಆಕಾರಾದ ಗುಂಡಿ ಸಮಾಧಿಗಳು.
ಕಾಲ 3	ಕಬ್ಬಿಣಯುಗ	ಕಪ್ಪು ಮತ್ತು ಕೆಂಪು ವರ್ಣದ ಬಟ್ಟಲುಗಳು, ಕಪ್ಪು ವರ್ಣದ ಬಟ್ಟಲುಗಳು, ಬೋಗುಣಿಗಳು, ಲೇಪಿತ ಕೆಂಪು ವರ್ಣದ ಮೃತ್ಪಾತ್ರೆಗಳು ಇತ್ಯಾದಿ.	ಕಬ್ಬಿಣ ಕರಗಿಸುವ ಕೈಗಾರಿಕ ಸ್ಥಳದಲ್ಲಿ ಕುಲುಮೆಗಳು(6), ಕಬ್ಬಿಣದ ಕಿಟ್ಟ, ಕಬ್ಬಿಣದದಿರಿನ ಉಂಡೆಗಳು, ಬಾಣ, ಕಠಾರಿ, ಬ್ಲೇಡ್, ಗಾಳ, ಮೊಳೆ, ಭರ್ಜಿ ಮತ್ತು ಕುಡುಗೋಲು ಇತ್ಯಾದಿ.	ಮಣಿಗಳನ್ನು ತಯಾರಿಸುವ ಕೈಗಾರಿಕೆ, ಬಳಕೆ: ಗಾಜು, ಕಾರ್ನೇಲಿಯನ್, ಕೋರಲ್, ಮತ್ತು ಎಚ್ಚಣೆ ಮಾಡಿದ ಮಣಿಗಳು.
ಕಾಲ 4	ಆರಂಭಿಕ ಇತಿಹಾಸ	ಲೇಪಿತ ಕೆಂಪು ವರ್ಣದ ಮೃತ್ಪಾತ್ರೆಗಳು, ಬೋಗುಣಿಗಳು, ಬಟ್ಟಲುಗಳು, ಜಾಡಿಗಳು, ಗೋಳಾಕಾರದ ಪಾತ್ರೆಗಳು ಇತ್ಯಾದಿ.	ಬ್ಲೇಡ್, ಕಠಾರಿ ಮತ್ತು ಮೊಳೆ ಇತ್ಯಾದಿ.	ಗಾಜಿನ ಮಣಿ ಹಾಗೂ ಕಾರ್ನೇಲಿಯನ್ ಮಣಿಗಳು.

ಕಬ್ಬಿಣವನ್ನು ಕರಗಿಸಿ ಅದರ ಉತ್ಪನ್ನಗಳನ್ನು ತಯಾರಿಸಲು ಬಳಸುವ ತಂತ್ರಗಾರಿಕೆಯ ಕುರುಹುಗಳು ದಖ್ಖನ್ ವಿದರ್ಭದ ನಾಯ್ಕುಂಡ್ (Deo et.al. 1982) ನೆಲೆಯಲ್ಲಿ ದೊರೆತಿವೆ. ಈ ನೆಲೆಯಲ್ಲಿ ಕಬ್ಬಿಣವನ್ನು ಕರಗಿಸುವ ಕುಲುಮೆಗಳು, ಕೊಳವೆಗಳು, ಕಿಟ್ಟಗಳು, ಕಬ್ಬಿಣದಗಟ್ಟಿ ಉಂಡೆಗಳು ಸಾಕಷ್ಟು ಪ್ರಮಾಣದಲ್ಲಿ ದೊರಕಿದ್ದು, ಕರ್ನಾಟಕದಲ್ಲಿಯು ಯಥೇಚ್ಚವಾಗಿ ದೊರೆತಿವೆ.

ಬ್ರಹ್ಮಗಿರಿ, ಮಸ್ಕಿ, ಜೇವರ್ಗಿ, ಸಾವನದುರ್ಗ, ಜಡಿಗೇನಹಳ್ಳಿ, ಹಳ್ಳೂರು, ಕೊಮರನಹಳ್ಳಿ, ಬನಹಳ್ಳಿ, ಇತ್ಯಾದಿ ನೆಲೆಗಳಲ್ಲಿ ಸಮೃದ್ಧವಾದ ಕಬ್ಬಿಣದ ವಸ್ತುಗಳು ಉತ್ಖನನದಲ್ಲಿ ಕಂಡುಬಂದಿದ್ದು, ಅವುಗಳಲ್ಲಿ ಹೆಚ್ಚಿನವು ನೆಲಕೋಣೆ ಮತ್ತು ಪಿಟ್ ಶಿಲಾವೃತ್ತಗಳಲ್ಲಿ ದೊರೆತಿವೆ (Gururaj Rao 1972: 137-180; IAR 1980-81: 29; Moorti 1994: 22-32; Sundara 1975; IAR 1983-84: 42-46). ಕಠಾರಿಗಳು, ಬೆಣೆಯಾಕಾರದ ಬ್ಲೇಡ್‌ಗಳು, ಉಳಿಗಳು, ಕುಡುಗೋಲು, ಕತ್ತಿ, ಕುದುರೆ ಸವಾರಿಯಲ್ಲಿ ಉಪಯೋಗಿಸುವ ಉದ್ದನೆಯ ಭರ್ಜಿಯಂತಹ ಆಯುಧಗಳು ಇವೆ ಮೊದಲಾದವು. ಸಾಮಾನ್ಯವಾಗಿ ಈ ಎಲ್ಲಾ ನೆಲೆಗಳ ಅಧ್ಯಯನದಿಂದ ನಮಗೆ ತಿಳಿಯುವುದೇನೆಂದರೆ, ಸ್ಥಳೀಯವಾಗಿ ಸಿಗುವ ಕಬ್ಬಿಣದ ಅದಿರನ್ನು ಬಳಸಿ ಕಬ್ಬಿಣವನ್ನು ಶುದ್ಧೀಕರಿಸಿ ಕಬ್ಬಿಣದ ಉತ್ಪನ್ನಗಳಾದ, ಆಯುಧಗಳು, ಕೃಷಿ ಇನ್ನಿತರೆ ಉಪಕರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು.

ಜಡಿಗೇನಹಳ್ಳಿಯಲ್ಲಿ ಕುದುರೆಯ ಅಸ್ಥಿಪಂಜರದ ಅವಶೇಷಗಳಿಂದ ಕಬ್ಬಿಣ ಯುಗದ ಮಾನವರಿಗೆ ಕುದುರೆ ಸಾಕಾಣಿಕೆಯ ಬಗ್ಗೆ ತಿಳಿದಿತ್ತು ಎಂದು ಅರಿಯಬಹುದು. ಅಲ್ಲಿ ಸಿಕ್ಕಿರುವ ಕಬ್ಬಿಣದ ಉಪಕರಣಗಳಾದ ಬಾಣ, ಭರ್ಜಿ, ಕಠಾರಿಗಳಂತಹ ವಸ್ತುಗಳು ನಾಯಕತ್ವದಲ್ಲಿ ಸಮುದಾಯಗಳು ವಾಸಿಸುತ್ತಿದ್ದವು ಎಂಬುದನ್ನು ಸೂಚಿಸುತ್ತವೆ. ಸಾವನದುರ್ಗ ಮತ್ತು ಜಡಿಗೇನಹಳ್ಳಿ ನೆಲೆಗಳಲ್ಲಿ ಸಿಕ್ಕಿರುವ ಸಾಂಸ್ಕೃತಿಕ ಅವಶೇಷಗಳ ಅವಲೋಕನದಲ್ಲಿ ನಮಗೆ ಗೋಚರಿಸುವ ವಿಚಾರವೆಂದರೆ ಈ ಎರಡು ನೆಲೆಗಳು ಒಂದೇ ಭೌಗೋಳಿಕ ಚೌಕಟ್ಟಿನಲ್ಲಿದ್ದು ಎರಡು ಬೇರೆ ಬೇರೆ ನದಿಗಳ ದಂಡೆಯ ಮೇಲಿವೆ. ಆದರೆ ಇಲ್ಲಿ ಸಿಕ್ಕಂತಹ ಅವಶೇಷಗಳಿಗೆ ಸಾಮ್ಯತೆ ಇಲ್ಲದಿರುವುದನ್ನು ಗಮನಿಸಬಹುದು. ಸಾಂಸ್ಕೃತಿಕ ಅವಶೇಷಗಳಲ್ಲದೇ ಸಮಾಧಿಗಳಲ್ಲಿಯೂ ಭಿನ್ನತೆಗಳಿವೆ (ನೋಡಿ: Sheshadri 1957; ಅರುಣಿ 2013; Praveen Kumar 2016). ಉತ್ಖನನಗಳಲ್ಲಿ ಕಬ್ಬಿಣ ಯುಗ / ಬೃಹತ್ ಶಿಲಾಯುಗ ಸಂಸ್ಕೃತಿಯೊಂದಿಗೆ ಯಾವುದೇ ಕಲ್ಲಿನ ಕಟ್ಟಡ ಅಥವಾ ಇಟ್ಟಿಗೆಯ ಗೋಡೆಗಳು ಕಂಡುಬಂದಿಲ್ಲ. ಬನಹಳ್ಳಿ ನೆಲೆಯ ಉತ್ಖನನದಲ್ಲಿ ಸಂಪೂರ್ಣ ಕಬ್ಬಿಣ ಯುಗದ ಸ್ತರ (ನೋಡಿ ಕೋಷ್ಟಕ 1)ದಲ್ಲಿ ಸಾಂದರ್ಭಿಕವೆನ್ನಬಹುದಾದ ಮರದ ಗೂಟದ ರಂಧ್ರಗಳ (Post holes) ಕುರುಹುಗಳು ಸಿಕ್ಕಿವೆ. ಇದರಿಂದ ಈ ಜನರು ಸಾಮಾನ್ಯ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು ಎಂದು ಊಹಿಸಬಹುದು.

ಕರ್ನಾಟಕದಲ್ಲಿ ಕೆಲವು ತನಿಖೆಗಳ ಫಲಿತಾಂಶವು ಕಬ್ಬಿಣಯುಗದಲ್ಲಿನ ಜೀವ ವೈವಿಧ್ಯತೆಯ ಮೇಲೆ ಬೆಳಕು ಚೆಲ್ಲಿದವು. ಕೃಷಿಗಾಗಿ ಸಾಕು ಪ್ರಾಣಿಗಳು (ಪಳಗಿಸಿದ) ಮತ್ತು ಆಹಾರಕ್ಕಾಗಿ ಅಥವಾ ಇತರೆ ಉತ್ಪನ್ನಗಳ ಅವಶ್ಯಕತೆಗಳಿಗೆ ಕಾಡು ಪ್ರಾಣಿಗಳ ಮೇಲೆ ಅವಲಂಭಿತರಾಗಿದ್ದರು. ಇದುವರೆಗೆ ನಡೆದ ಸಂಶೋಧನೆಗಳನ್ನು ತುಲನೆ ಮಾಡಿದಾಗ ಕಬ್ಬಿಣಯುಗದ ಬುಡಕಟ್ಟು ಕೃಷಿಕರು ಮತ್ತು ಅವರಿಗೆ ಬೇಕಾಗುವ ಅವಶ್ಯಕತೆಗಳನ್ನು ಬೇಟೆಯಾಡುವಿಕೆ ಮತ್ತು ಪಶುಸಂಗೋಪನೆಗಳಿಂದ ಪೂರೈಸಿಕೊಳ್ಳುತ್ತಿದ್ದರೆಂದು ತಿಳಿದು

ಬಂದಿದೆ. ಆದಾಗ್ಯೂ, ಈ ಕಾಲಘಟ್ಟದ ಕೃಷಿಯ ಬಗ್ಗೆ, ಕೃಷಿಗೆ ಬಳಸುತ್ತಿದ್ದ ಭೌಗೋಳಿಕ ಮಾಹಿತಿ, ಕೃಷಿ ಕಾರ್ಮಿಕರ ಬಗ್ಗೆ, ಬೆಳೆಯುತ್ತಿದ್ದ ಬೆಳೆ, ಮಾರುಕಟ್ಟೆ ಅಂಶಗಳ ಬಗ್ಗೆ ಹೆಚ್ಚು ಚರ್ಚೆಗೆ ಒಳಪಡುತ್ತಲೇ ಇವೆ. ಈ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ.

ರಕ್ಷಣಾತ್ಮಕ ಆಯುಧಗಳು **Offence objects**	ಗೃಹ ಬಳಕೆಯ ವಸ್ತುಗಳು **Domestic objects**	ಬಡಗಿತನದ ಉಪಕರಣಗಳು **Carpentry tools**	ಕೃಷಿ ಚಟುವಟಿಕೆಯ ಉಪಕರಣಗಳು **Agricultural tools**	ಆಭರಣಗಳು ಹಾಗೂ ಪ್ರಸಾದನಗಳು **Ornaments and Toiletry**
–ಕಠಾರಿ (Dagger) –ಈಟಿ (Spears) –ತೆಳುವಾದ ಚೂಪಾದ ಆಯುಧ (Spikes) –ಭರ್ಜಿ –ಪ್ರಯಾಣದಲ್ಲಿ ಬಳಸುವ ರಕ್ಷಣ ಆಯುಧ (Tridants) –ಬಾಣ (Arrow head)	–ಸಾಂಬಾರು ಪದಾರ್ಥಗಳನ್ನು ಪೂರೈಸಲು ಬಳಸುವ ಉದ್ದನೆಯ ಚಮಚ (Ladels). –ದೀಪ (Lamp) –ಹಿಡಿ ಮತ್ತು ಮುಚ್ಚಳವುಳ್ಳ ದೊಡ್ಡಕಡಾಯಿ. –ಮೀನಿನ ಗಾ ಳ (Fish Hook)	–ಉಳಿ (Chisel) –ಕೊಡಲಿ(Axe) ಇತ್ಯಾದಿ.	–ಸಲಿಕೆ –ನೇಗಿಲು/ ಗುಳ (Plough)	ಮಣಿಗಳು, ಕೈಬ ಳೆಗಳು, ಕಿವಿಗೆ ಧರಿಸುವ ಆಭರಣಗಳು ಇತ್ಯಾದಿ.

ದಕ್ಷಿಣ ಮೈದಾನದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಶ್ರೀಮಂತಿಕೆಯು ಏಳಿಗೆಗೆ ಬಂದಿದ್ದು ವಿಶೇಷವಾಗಿ ಮೈಸೂರು, ಕೋಲಾರ ಮತ್ತು ಬೆಂಗಳೂರು ಭಾಗದಲ್ಲಿ ಎಂದು ನಿಸ್ಸಂದೇಹವಾಗಿ ಹೇಳಬಹುದು. ಈ ಸಂಸ್ಕೃತಿಯ ಪ್ರಮುಖ ಉತ್ಖನನದ ನೆಲೆಗಳು ನದಿ ದಂಡೆಗಳ ಮೇಲೆ ಹಾಗೂ ನದಿ ಜಲಾನಯನ ಪ್ರದೇಶಗಳಲ್ಲಿ ನೆಲೆಗೊಂಡಿವೆ. ಬ್ರಹ್ಮಗಿರಿ, ಚಂದ್ರವಳ್ಳಿ, ಹಳ್ಳೂರು, ಟಿ. ನರಸೀಪುರ, ಜಡಿಗೇನಹಳ್ಳಿ, ಕೊಪ್ಪ, ಹೆಮ್ಮಿಗೆ, ಸಾವನದುರ್ಗ ಇತ್ಯಾದಿ. ಇನ್ನೂ ಕೆಲವು ನೆಲೆಗಳು ಬೆಟ್ಟದ ತಪ್ಪಲಿನಲ್ಲಿ ಕಂಡು ಬಂದಿರುವುದು ವಿಶೇಷ. ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರು ಮತ್ತು ಕೋಲಾರ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೃಹತ್ ಸಮಾಧಿ ನೆಲೆಗಳು ಶೋಧಿತವಾಗಿದ್ದು, ಈ ಭಾಗದಲ್ಲಿ ದೊಡ್ಡ ಪ್ರಮಾಣದ ಕುಂಬಾರಿಕೆಯ ಚಟುವಟಿಕೆಗಳು ನಡೆದಿರುವುದಕ್ಕೆ ಸಾಕಷ್ಟು ಕುರುಹುಗಳು ದೊರೆಯುತ್ತವೆ. ಕುಂಬಾರಿಕೆಯ ತಂತ್ರಗಾರಿಕೆಯಲ್ಲಿ ಕೆಲವು ಹೊಸತನವನ್ನು ಗಮನಿಸಬಹುದು. ವಿಶೇಷವಾಗಿ ದಕ್ಷಿಣ ಕರ್ನಾಟಕದ ನೆಲೆಗಳಲ್ಲಿಯೇ ಒಂದು ನೆಲೆಯಿಂದ ಮತ್ತೊಂದು ನೆಲೆಗೆ ವಿಭಿನ್ನತೆಯನ್ನು ಗುರುತಿಸಬಹುದು. ಈ ಭಾಗದಲ್ಲಿ ಅತಿದೊಡ್ಡ ಪ್ರಮಾಣದ ಜನಸಂಖ್ಯೆಯನ್ನು ಹೊಂದಿತ್ತು ಎಂದು ನಿಸ್ಸಂದೇಹವಾಗಿ ಹೇಳಬಹುದು. ಈ ಪ್ರದೇಶವು

ಫಲವತ್ತಾದ ಮಣ್ಣು ಮತ್ತು ನದಿಗಳ ಪ್ರಯೋಜನ ಪಡೆದಿರುವುದರಿಂದ ಕೃಷಿ, ಕುಂಬಾರಿಕೆ ಹಾಗೂ ಕಲ್ಲುಗಣಿಗಾರಿಕೆ ಮಾಡಲು ಎಲ್ಲಾ ರೀತಿಯ ಅನೂಕೂಲತೆಗಳಿದ್ದವು.

ನವಶಿಲಾಯುಗದ ನಂತರ ಆರಂಭಿಕ ಕಬ್ಬಿಣಯುಗದ ಜನರು ಭೂಮಿಯ ಜೊತೆ ತೊಡಗಿಸಿಕೊಂಡ ಚಟುವಟಿಕೆಗಳಲ್ಲಿ ಕೆಲವು ಗಮನಾರ್ಹವಾದ ಬದಲಾವಣೆಗಳನ್ನು ಕಾಣಬಹುದು. ಉತ್ತರ ಭಾರತದಲ್ಲಿ ಕಬ್ಬಿಣದ ಆವಿಷ್ಕಾರದ ಜೊತೆಗೆ ನಗರಗಳು ನಿರ್ಮಾಣವಾದವು. ಅದೇ ರೀತಿ ದಕ್ಷಿಣದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರ ಕಬ್ಬಿಣದ ಗಣಿಗಾರಿಕೆಯಿಂದ ಶುರುವಾದ ಆವಿಷ್ಕಾರ ಹಾಗೂ ತದನಂತರದ ಬದಲಾವಣೆಗಳು ಇತಿಹಾಸ ಕಾಲದಲ್ಲಿ ಪಟ್ಟಣಗಳ ನಿರ್ಮಾಣಕ್ಕೆ ಅಡಿಗಲ್ಲಾಗಿ ಪರಿಣಮಿಸಿವೆ. ದ.ಕರ್ನಾಟಕದಲ್ಲಿ ಇದುವರೆಗೆ ನಡೆದ ಉತ್ಖನನಗಳು ಮತ್ತು ಅಲ್ಲಿನ ಅವಶೇಷಗಳಿಂದ ಈ ಭಾಗದ ಬೃಹತ್ ಶಿಲಾಯುಗ / ಕಬ್ಬಿಣ ಯುಗದ ಅವಧಿಯನ್ನು ಕ್ರಿ.ಪೂ. 1000 ದಿಂದ ಕ್ರಿ.ಶ.100 ರ ಅವಧಿಯಲ್ಲಿನ ಸಾಂಸ್ಕೃತಿಕ ಅಭಿವೃದ್ಧಿಯ ಘಟ್ಟ ಎಂದು ಗುರುತಿಸಬಹುದು. ಉತ್ತರ ಕರ್ನಾಟಕದಲ್ಲಿನ ಈ ಕಾಲದ ಬುಡಕಟ್ಟು ಸಮುದಾಯಗಳು ಮೌರ್ಯರ ಪ್ರಭಾವಕ್ಕೆ ಒಳಪಟ್ಟಂತೆ ದಕ್ಷಿಣದಲ್ಲಿ ಯಾವುದಾದರು ಸಾಮ್ರಾಜ್ಯಕ್ಕೆ ಒಳಪಟ್ಟಿತ್ತೆ ಎಂಬುದೇ ನಿಗೂಢವಾದ ವಿಚಾರವಾಗಿದೆ. ಇಲ್ಲಿ ಸಿಕ್ಕಿರುವ ರೋಮನ್ ನಾಣ್ಯಗಳು, ಪಂಚ್‌ಮಾರ್ಕ್ ನಾಣ್ಯಗಳು ಇದಕ್ಕೆ ಪುಷ್ಟಿಯನ್ನು ನೀಡುತ್ತವೆ. ಕೋಲಾರದ ಬನಹಳ್ಳಿಯನ್ನು ಹೊರತುಪಡಿಸಿ ಉಳಿದ ಉತ್ಖನನಗೊಂಡಿರುವ ನೆಲೆಗಳು ಸಾಮಾನ್ಯವಾಗಿ ಆದಿ ಇತಿಹಾಸ ಕಾಲಕ್ಕೆ ಸಾಮೀಪ್ಯವಿರುವುದನ್ನು, ಸಾವನದುರ್ಗ ಭಾಗದಲ್ಲಿನ ನೆಲೆಗಳ ಮತು ಜಡಿಗೇನಹಳ್ಳಿ ನೆಲೆಗಳ ಅವಶೇಷಗಳಿಂದ ಗುರುತಿಸಬಹುದು. ಇದುವರೆಗೆ ದಾಖಲಾದ ಸಮಾಧಿಗಳ ಪ್ರತಿ ನೆಲೆಯ ಒಟ್ಟು ಸಂಖ್ಯೆಯ ಆಧಾರದ ಮೇಲೆ ಈ ಕಾಲದ ಜನರು ಗಣನೀಯ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರುವ ಹಳ್ಳಿಗಳಲ್ಲಿ ವಾಸಿಸುತ್ತಿದ್ದರು ಎಂದು ಹೇಳಬಹುದು. ಇಷ್ಟೊಂದು ಹೇರಳವಾದ ನೆಲೆಗಳು ಕಂಡು ಬಂದಿದ್ದರೂ ಈ ಕಾಲದ ಸಾಮಾಜಿಕ ಮತ್ತು ಆರ್ಥಿಕ ಕಟ್ಟುಪಾಡುಗಳ ಬಗ್ಗೆ ಅಸ್ಪಷ್ಟವಾದ ನಿಲುವಿದೆ. ಬೃಹತ್ ಶಿಲಾಯುಗ ಸಂಸ್ಕೃತಿಯ ಅಧ್ಯಯನದಲ್ಲಿ ಹೆಚ್ಚು ತೊಡಗಿಸಿಕೊಂಡಿರುವ ಮೊಹಂತಿ ಮತ್ತು ಜೋಶಿ ಅವರು ಕೆಲವು ಪ್ರಶ್ನೆಗಳನ್ನು ಎತ್ತುವುದರ ಮೂಲಕ ಮುಂದಿನ ಅಧ್ಯಯನಗಳಿಗೆ ಎಡೆಮಾಡಿಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಯಾವ ಉದ್ದೇಶಕ್ಕಾಗಿ ಸಮಾಧಿಗಳನ್ನು ನಿರ್ಮಿಸುತ್ತಿದ್ದರು? ಅವುಗಳನ್ನು ಕೇವಲ ಸೀಮಿತ ವ್ಯಕ್ತಿಗಳಿಗಾಗಿ ಅಥವಾ ಎಲ್ಲ ವ್ಯಕ್ತಿಗಳಿಗೂ ನಿರ್ಮಿಸುತ್ತಿದ್ದರೇ? ಸತ್ತವರ ವಿಲೇವಾರಿಯ ವಿಧಾನವನ್ನು ಎಲ್ಲರಿಗೂ ಮಾಡಲಾಗುತ್ತಿತ್ತೇ? ಇವರ ಚಟುವಟಿಕೆಯ ಗಡಿ ಎಲ್ಲಿಯವರೆಗೆ ಹರಡಿತ್ತು?. ಈ ಸಂಸ್ಕೃತಿಯ ಜನ ಒಂದೇ ನೆಲೆಯಲ್ಲಿ ಒಂದಕ್ಕಿಂತ ಹೆಚ್ಚು ವರ್ಷಗಳ ಕಾಲ ಅಥವಾ ದೀರ್ಘಕಾಲದ ವರೆಗೂ ನಿಂತಿದೆಯಾ? ಆಳುವ ವ್ಯವಸ್ಥೆ ಇತ್ತೇ? ಕಾರ್ಮಿಕರ ಮತ್ತು ಉತ್ಪಾದನೆಯನ್ನು ಯಾವ ಗುಂಪುಗಳು ನಿರ್ವಹಿಸುತ್ತಿದ್ದವು? ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ಬೇಟೆ ಮತ್ತು ತಂತ್ರಜ್ಞಾನ ಬಗ್ಗೆ? ನೆರೆಹೊರೆಯ ಗುಂಪಿನೊಂದಿಗೆ ಸಂಬಂಧ ಹೊದಿದ್ದವೇ, ಧರ್ಮ, ವ್ಯಾಪಾರ, ಸಂಪ್ರದಾಯ ಮುಂತಾದ ರೀತಿಯ ಸಂಬಂಧಗಳಿತ್ತೇ? ಇವೇ ಮೊದಲಾದ ಪ್ರಶ್ನೆಗಳನ್ನು ಎತ್ತಿದ್ದಾರೆ (Mohanty et.al 1996: 157-69).

ದಕ್ಷಿಣ ಕರ್ನಾಟಕದಲ್ಲಿ ಕೋಲಾರದ ಬನಹಳ್ಳಿ, ಟಿ. ನರಸೀಪುರ ಮತ್ತು ಹೆಮ್ಮಿಗೆಯ ಉತ್ಖನನ ನೆಲೆಗಳನ್ನು ಹೊರತು ಪಡಿಸಿ ಕಬ್ಬಿಣಯುಗದ ಯಾವೊಂದು ಉತ್ಖನನ

ನೆಲೆಗಳಲ್ಲಿ ವಸತಿನೆಲೆಯ ಬಗ್ಗೆ ವರದಿಯಿಲ್ಲ. ಆದರೆ ಸಾಕಷ್ಟು ಸಮಾಧಿ ನೆಲೆಗಳು ಕಂಡುಬಂದಿದ್ದು ಮುಂದಿನ ದಿನಗಳಲ್ಲಿ ಸಂಶೋಧಕರು ವಸತಿನೆಲೆಗಳ ಮೇಲೆ ಬೆಳಕು ಚೆಲ್ಲುವ ಕೆಲಸ ಮಾಡಿದರೆ ಈ ಸಂಸ್ಕೃತಿಯ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ಅಧ್ಯಯನಕ್ಕೆ ಒಳ್ಳೆಯ ಸಾಕ್ಷಿಗಳನ್ನು ಒದಗಿಸಿದಂತಾಗುತ್ತದೆ. ಈಗಾಗಲೇ ಪ್ರಸ್ತುತ ಲೇಖಕರು ಈ ನಿಟ್ಟಿನಲ್ಲಿ ಸಂಶೋಧನೆಯನ್ನು ಕೈಗೊಂಡಿದ್ದು, ದಕ್ಷಿಣ ಕರ್ನಾಟಕದ ಸಂಸ್ಕೃತಿಯ ಪುನರ್ ಕಟ್ಟುವಿಕೆಯ ಪ್ರಯತ್ನದಲ್ಲಿ ತೊಡಗಿಸಿಕೊಂಡಿರುತ್ತಾರೆ.

ಆಕರಗಳು

ಅರುಣಿ, ಎಸ್.ಕೆ. 2013. 'ಬೆಂಗಳೂರು ಪರಿಸರದ ಪ್ರಾಗೈತಿಹಾಸಿಕ ಸಂಸ್ಕೃತಿ'. **ಇತಿಹಾಸ ದರ್ಪಣ. ಪುಸ್ತಕ 17.** ಪು.: 7–38

Branfill, B.R. 1881. 'On the Savanadurga Rude Stone Cemetery Central Mysore'. **Indian Antiquary 10.** Delhi: Swati Publication. Pp. 1-12.

Cole, R.A. 1868- 69. 'The megaliths', **ancient India 4,** pp. 4-13, 151-55 &243-45.

Cole, R.A. 1873. Cromlechs, **Indian Antiquary.** 86-8. Dharwar: Eastern Press. Pp. 137.

Deo, S.B. and A.P. Jamkhedkar1982, **Excavations at Naikund,** Bombay/Pune,.

Gururaja Rao, B.K. 1972. **Megalithic Culture in South India.** Mysore: University of Mysore.

Indian Archaeology- A Review. 1967-68 Pp. 37-39; 1983-84 Pp. 42-46; 1986-87 Pp. 42-45.

Mohanty R.K. and P.S.Joshi. 1996. 'The Megalithic Problem of Vidarbha:Retrospect and Prospect'. In **Spectrum of Indian Culture** (Ed.s) C. Margabandu & K.S. Ramachandran. Pp.157-69. New Delhi: Agam kala.

Moorti, U.S. 1994. **Megalithic Culture of South India: Socio-Economic Perspectives**. Ganga Kaveri publishing house.

Moorti, U.S. 1990. **Megalithic Karnataka-A Locational Analysis,** In Archaeology in Karnataka.

Praveen Kumar, K. 2016. **Archeological investigations in the middle reaches of Arkavathi Basin** (Magadi Taluk, South Karnataka), M.Phil Dissertation Submitted to Deccan College Post Graduate and Research Institute, Pune.

Poonachchha, 1990. **Archaeology of Malnad region, comprise the districts of Hassan, Chikkamagalur and Shivamogga; with special**

reference to pre and proto-history. (Unpublished thesis) Karnataka University, Dharwad.

Sheshadri, M. 1956. **The Stone Use Culture of Prehistoric and Protohistoric Mysore.** Mysore: University Of Mysore.

Sheshadri, M. 1957. **Report of the Jadigenahalli Megalithic Excavations for the Year 1960.** Mysore: Directorate of Archaeology, Government of Mysore.

Sheshadri, M. 1971. **Report on the excavation At T. Narasipura. Directorate of Archaeology,** Government of Mysore.

Shivatarak, K.B. 2001.**Karnatakada Puratattva Nelegalu (in Kannada), 2001:533- 561.**Prasaranga Kannada University Hampi.

Sundara, A. 1975. **The Early Chamber Tombs of South India,** Delhi.

Sundara, A. 1990. **Archaeology in Karnataka** (Ed. A. Sundara, 1985) directorate of archaeology and museum in Karnataka, Mysore. Pp.151-53

Suryanath, U. Kamath. 1989. **Karnataka state gazetteer Bangalore rural district.** Government of Karnataka.

Todd, K.R. U., 1948. 'A microlithic industry in eastern Mysore'. **Man vol.48:28-30**

Wheeler, R.E.M. 1948. **'Bramhagiri and Chandravalli Excavations'.** Ancient India 4:181-310.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: S.K. Aruni
Title: kalaburgi: bahamani sultānara rājadhāniya racane hāgū viślēṣaṇe

ಕಲಬುರ್ಗಿ : ಬಹಮನಿ ಸುಲ್ತಾನರ ರಾಜಧಾನಿಯ ರಚನೆ ಹಾಗೂ ವಿಶ್ಲೇಷಣೆ

ಎಸ್.ಕೆ. ಅರುಣಿ
ಪ್ರಾದೇಶಿಕ ನಿರ್ದೇಶಕರು
ಐ.ಸಿ.ಎಚ್.ಆರ್.
ದಕ್ಷಿಣ ಪ್ರಾದೇಶಿಕ ಕೇಂದ್ರ
ಮೈಸೂರು ಬ್ಯಾಂಕ್ ವೃತ್ತ
ಬೆಂಗಳೂರು–560 009
skaruni@gmail.com

ಕಲಬುರ್ಗಿ ಒಂದು ಪ್ರಾಚೀನ ನೆಲೆ. ತನ್ನ ಆಯಕಟ್ಟಿನ ಸ್ಥಳದಿಂದಾಗಿ ದಕ್ಷಿಣ ಭಾರತದ ಇತಿಹಾಸದಲ್ಲಿ ವಿಶೇಷ ಸ್ಥಾನ ಹೊಂದಿದೆ. ಮುಖ್ಯವಾಗಿ ಮಧ್ಯಕಾಲೀನ ಇತಿಹಾಸದ ಸಂದರ್ಭದಲ್ಲಿ ವಿಸ್ತಾರವಾದ ರಾಜ್ಯದ ರಾಜಧಾನಿಯಾಗಿ ಮುಕ್ಕಾಲು ಶತಮಾನ ಕಾಲ ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿ ಇದು ಬೆಳೆದಿತ್ತು. ವಿಜಯನಗರದ ಸಮಕಾಲೀನರಾಗಿದ್ದ ಬಹಮನಿ ಸುಲ್ತಾನರು (ಕ್ರಿ.ಶ. 1347–1538); ಬರೀದ್ ಶಾಹಿಗಳು (1504–1619) ಮತ್ತು ಬಿಜಾಪುರದ ಆದಿಲ್ ಶಾಹಿಗಳು (1490–1686) ನಾಡಿನ ಸಾಂಸ್ಕೃತಿಕ ರಂಗಗಳಿಗೆ ಗುರುತರ ಕೊಡುಗೆಗಳನ್ನು ನೀಡಿದ್ದಾರೆ. ಕಲೆ, ಸಾಹಿತ್ಯ ಹಾಗೂ ಭಾಷೆಗಳನ್ನು ಸಮೃದ್ಧಿಯಾಗಿ ಬೆಳೆಸಿದ್ದಾರೆ. ಮಧ್ಯಕಾಲೀನ ಸಂದರ್ಭದಲ್ಲಿ ಪರ್ಶಿಯಾ ಮತ್ತು ಮಧ್ಯ–ಏಶಿಯಾ ಜೊತೆಗೆ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದ ಈ ದಖ್ಖನಿ ಸುಲ್ತಾನರು ಕರ್ನಾಟಕದ ಸಂಸ್ಕೃತಿಗೆ ಹೊಸ ಆಯಾಮ ನೀಡಿದರು. ಅದರಲ್ಲಿಯೂ ಪ್ರಮುಖವಾಗಿ ನಗರೀಕರಣ ಪ್ರಕ್ರಿಯೆಗೆ ದಖ್ಖನಿ ಸುಲ್ತಾನರು ನೀಡಿದ ಕೊಡುಗೆ ಗುರುತರವಾದದ್ದು. ದೆಹಲಿ ಸುಲ್ತಾನರಿಗಿಂತಲೂ ಭಿನ್ನವಾಗಿ ಈ ದಖ್ಖನಿ ಸುಲ್ತಾನರು ಆಡಳಿತ ನಡೆಸಿದರಲ್ಲದೆ, ಸ್ಥಳೀಯ

ಸಂಪ್ರದಾಯಗಳಿಗೆ ಮಾನ್ಯತೆ ನೀಡಿದ್ದರು. ತುರ್ಕಿಸ್ತಾನ ಮತ್ತು ಪರ್ಶಿಯಾ ಸಂಸ್ಕೃತಿಗಳ ಜೊತೆಗೆ ಸ್ಥಳೀಯ ಸಂಸ್ಕೃತಿಯನ್ನು ಬೆಸೆದು ನೂತನ ದಖ್ಖನಿ ಸಂಸ್ಕೃತಿಯ ವಿಕಾಸಕ್ಕೆ ಕಾರಣರಾದರು. ಸುಮಾರು ಎರಡು ಶತಮಾನಗಳ ಆಳ್ವಿಕೆಯಲ್ಲಿ ಇವರು ಮೊದಲು ಕಲಬುರ್ಗಿಯನ್ನು ನಂತರ ಬೀದರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಬಹಮನಿಗಳ ಆಳ್ವಿಕೆಯು ಹಲವು ಪ್ರಥಮಗಳಿಗೆ ನಾಂದಿ ಹಾಡಿತು. ದಕ್ಷಿಣ ಭಾರತದಲ್ಲಿಯೇ ಪ್ರಪ್ರಥಮ ಸ್ವತಂತ್ರ ಮಹ್ಮದೀಯ ರಾಜ್ಯವೆಂಬ ಕೀರ್ತಿಗೆ ಪಾತ್ರವಾಗಿದೆ. ವಿಜಯನಗರದ ಅರಸರ ಸಮಕಾಲೀನರಾಗಿದ್ದ ಬಹಮನಿ ಸುಲ್ತಾನರು ನಾಡಿನ ನಗರೀಕರಣ ಪ್ರಕ್ರಿಯೆಗೆ ಹೊಸ ಆಯಾಮವನ್ನು ಕೊಟ್ಟಿದ್ದಾರೆ. ಇವರ ಕಾಲಾವಧಿಯಲ್ಲಿ ಬೆಳೆದ ನಗರಗಳು ಮತ್ತು ಅವುಗಳ ವೈಶಿಷ್ಟ್ಯತೆಗಳನ್ನು ಗುರುತಿಸುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ. ಬಹಮನಿಯರ ರಾಜಧಾನಿಯಾಗಿದ್ದ ಕಲಬುರ್ಗಿ ಬಗ್ಗೆ ಈವರೆಗೆ ನಡೆದ ಅಧ್ಯಯನಗಳು ಅಲ್ಲಿಯ ಜುಮ್ಮಾ ಮಸೀದಿ, ಕೋಟೆ, ಗೋರಿಗಳು ಮತ್ತು ದರ್ಗಾಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ ಕಲಬುರ್ಗಿಯನ್ನು ಒಂದು ರಾಜಧಾನಿ ನಗರವಾಗಿ ನಿರ್ಮಿಸಲು ರೂಪಿಸಿದ ಯೋಜನೆ ಕುರಿತಾದ ಅಧ್ಯಯನಗಳು ನಡೆದಿಲ್ಲವೆನ್ನಬಹುದು. ಪ್ರಸ್ತುತ ಲೇಖನವು ಬಹಮನಿಯವರ ರಾಜಧಾನಿ ಕಲಬುರ್ಗಿ ನಗರದ ರಚನೆ ಮತ್ತು ಅದರ ವೈಶಿಷ್ಟ್ಯತೆಗಳನ್ನು ಗುರುತಿಸುವುದಾಗಿದೆ. ಮಧ್ಯಕಾಲೀನ ಸಂದರ್ಭದಲ್ಲಿ ಹೊಸ ಆವಿಷ್ಕಾರ ಮತ್ತು ತಂತ್ರಜ್ಞಾನಗಳಿಗೆ ಅನುಗುಣವಾಗಿ ಬಹಮನಿಯರ ಕಾಲದ ನಗರಗಳ ನಿರ್ಮಾಣದಲ್ಲಿ ಕಂಡು ಬರುವ ಬದಲಾವಣೆಗಳ ಪ್ರಕ್ರಿಯೆಗಳನ್ನು ಗುರುತಿಸುವುದು ಪ್ರಸ್ತುತ ಲೇಖನದ ಮತ್ತೊಂದು ಉದ್ದೇಶವಾಗಿದೆ.

14ನೇ ಶತಮಾನ ಆರಂಭ ಕಾಲದ ಕರ್ನಾಟಕದಲ್ಲಿಯ ನಗರಗಳ ಲಕ್ಷಣಗಳು

ದಖ್ಖನ್ ಪ್ರಸ್ಥಭೂಮಿಯ ಕೇಂದ್ರ ಬಿಂದು ಎಂದು ಗುರುತಿಸಲ್ಪಡುವ ಗೋದಾವರಿ, ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಕಣಿವೆ ಪ್ರದೇಶವು ಅಪಾರ ಖನಿಜ ಸಂಪತ್ತಿನ ಪ್ರದೇಶ ಎಂದು ಗುರುತಿಸಲ್ಪಡುತ್ತದೆ. ಈ ಪ್ರದೇಶದ ಮೇಲಿನ ನಿಯಂತ್ರಣಕ್ಕಾಗಿ ನಿರಂತರವಾಗಿ ಪ್ರಾಚೀನ ಕಾಲದಿಂದಲೂ ರಾಜಕೀಯ ಶಕ್ತಿಗಳು ಹೋರಾಟಗಳನ್ನು ನಡೆಸಿವೆ. ಪ್ರಾಚೀನ ರಾಜ್ಯಗಳಾದ ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ದೋರಸಮುದ್ರದ ಹೊಯ್ಸಳರು ವಿಶಾಲವಾದ ರಾಜ್ಯಗಳನ್ನು ಆಳಿದ್ದರು. ಆದರೆ 13ನೇ ಶತಮಾನದ ಕೊನೆಯ ದಶಕಗಳಲ್ಲಿ ದೆಹಲಿಯಿಂದ ಬಂದ ಸೈನ್ಯಕ್ಕೆ ಒಂದೊಂದೇ ರಾಜ್ಯಗಳು ತಲೆಬಾಗಿದವು. ದೆಹಲಿ ಸೈನ್ಯವು ತರಬೇತಿ ಮತ್ತು ಹೊಸ ಯುದ್ಧ ತಂತ್ರಗಾರಿಕೆಗಳನ್ನು ಅಳವಡಿಸಿಕೊಂಡು ನಗರಗಳ ಮೇಲೆ ತೀವ್ರ ಸ್ವರೂಪದ ದಾಳಿಮಾಡುವ ಪ್ರವೃತ್ತಿಯನ್ನು ಹೊಂದಿದ್ದವು. ಇವುಗಳಿಂದಾಗಿ ಪ್ರಾಚೀನ ರಾಜ್ಯಗಳು ಶರಣಾದವು. ಅಂದು ದೆಹಲಿ ಸುಲ್ತಾನರ ಸೈನ್ಯದ ದಾಳಿಯನ್ನು ಸಮರ್ಥವಾಗಿ ಎದುರಿಸುವ ಸುಭದ್ರವಾದ ಕೋಟೆಯುಕ್ತ ರಾಜಧಾನಿ ನಗರಗಳ ನಿರ್ಮಾಣದ ಅವಶ್ಯಕತೆ ಇತ್ತು.

ಪ್ರಾಚೀನ ಕಾಲದ ನಗರಗಳು ದೇವಾಲಯ ಕೇಂದ್ರಿತವಾಗಿದ್ದವು. ಆದರೆ, ಬದಲಾದ ಪರಿಸ್ಥಿತಿಯಿಂದಾಗಿ ವೈರಿಗಳ ದಾಳಿಗಳನ್ನು ಎದುರಿಸಬಲ್ಲ ತಂತ್ರಗಾರಿಕೆ ಹೊಂದಿರುವ ಸುಭದ್ರ ಕೋಟೆಯುಕ್ತ ನಗರಗಳ ನಿರ್ಮಾಣದ ಸಂಪ್ರದಾಯವು 14ನೇ ಶತಮಾನದ ಆರಂಭಿಕ ದಶಕಗಳಲ್ಲಿ ಪ್ರಾರಂಭವಾಯಿತು. ದುರ್ಗಮವಾದ ಕಣಿವೆ ಬೆಟ್ಟಗಳ ಸಮೂಹಗಳಲ್ಲಿ ಗಿರಿದುರ್ಗಗಳನ್ನು ನಿರ್ಮಿಸುವ ಪ್ರಕ್ರಿಯೆಯು ಆರಂಭವಾಗಿದ್ದನ್ನು ಕಾಣುತ್ತೇವೆ. ಕುಮಾರರಾಮನ ಕಾಲದ ಕುಮ್ಮಟದುರ್ಗವು ಇದಕ್ಕೆ ಉತ್ತಮ ಉದಾಹರಣೆ. ಅದೇರೀತಿ

ವಿಜಯನಗರದ ಅರಸರು ಕೂಡ ತುಂಗಭದ್ರಾ ನದಿ ಕಣಿವೆಯ ಬೆಟ್ಟಗಳ ಆಶ್ರಯದಲ್ಲಿ ತಮ್ಮ ರಾಜಧಾನಿ ನಗರ ನಿರ್ಮಾಣ ಮಾಡಿರುವುದು ಮತ್ತೊಂದು ಉದಾಹರಣೆಯಾಗಿದೆ. ಆಳವಾದ ಕಂದಕ, ಕಲ್ಲಿನ ಕೋಟೆಗಳು, ರಕ್ಷಣಾ ಕಿಂಡಿಗಳು, ಕಾವಲು ಗೋಪುರಗಳು, ಬುರುಜುಗಳು, ಇತ್ಯಾದಿಗಳನ್ನು ಹೊಂದಿದ್ದ ಕೋಟೆಯುಕ್ತ ನಗರಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಯಿತು.

14ನೇ ಶತಮಾನದ ಆರಂಭದ ದಶಕದಿಂದಲೇ ದಖ್ಖನ್ ಒಳಗೊಂಡಂತೆ ದಕ್ಷಿಣ ಭಾರತದ ಕರಾವಳಿಯಲ್ಲಿ ವಾಣಿಜ್ಯ ಚಟುವಟಿಕೆಗಳು ಗರಿಗೆದರಿದವು. ಅರಬ್ಬರು, ಪರ್ಶಿಯನ್ ವ್ಯಾಪಾರಿಗಳು ಭಾರತದ ಕರಾವಳಿಯಲ್ಲಿ ಮಸಾಲೆ ಪದಾರ್ಥ, ಮಶ್ಲೀನ್ ಬಟ್ಟೆ, ಕುದುರೆಗಳು ಮತ್ತಿತರ ವಾಣಿಜ್ಯ ವ್ಯಾಪಾರಗಳಲ್ಲಿ ಭಾರತದೊಂದಿಗೆ ಸಂಪರ್ಕದಲ್ಲಿದ್ದರು. ವಾಣಿಜ್ಯ ಸಂಪರ್ಕಗಳು ಒಳನಾಡಿನ ಉದ್ದಗಲಕ್ಕೂ ಹರಡಿದ್ದರಿಂದ ಕರಾವಳಿಯ ಪ್ರಮುಖ ಬಂದರುಗಳ ಮೇಲೆ ಹಿಡಿತ ಸಾಧಿಸಿ ಅವುಗಳನ್ನು ನಿಯಂತ್ರಿಸುವುದಕ್ಕೆ ಹೊಸದಾಗಿ ಉದಯಿಸಿದ ದಖ್ಖನಿ ರಾಜ್ಯಗಳು ಪೈಪೋಟಿ ನಡೆಸುತ್ತಿದ್ದವು. ಆಯಕಟ್ಟಿನ ಬಂದರುಗಳಾದ ಗೋವೆ, ಚೌಲ್, ದಾಬೋಲ್, ಬಾರಕೂರ, ಮಲ್ಪೆ, ಇತ್ಯಾದಿಗಳನ್ನು ನಿಯಂತ್ರಿಸುವುದು ಬಹು ಮುಖ್ಯವಾಗಿತ್ತು. ಈ ಬಂದರುಗಳ ಮೂಲಕ ವಾಣಿಜ್ಯ ಸಂಪರ್ಕಗಳನ್ನು ನಿಯಂತ್ರಿಸುವುದಕ್ಕಾಗಿ ಒಳನಾಡಿನ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಲಾಯಿತು. ವಿಜಯನಗರ ಮತ್ತು ಬಹಮನಿ ರಾಜ್ಯಗಳು ಈ ಬಂದರುಗಳ ಮೇಲೆ ನಿಯಂತ್ರಣ ಸಾಧಿಸಲು ಸದಾ ಪೈಪೋಟಿ ನಡೆಸುತ್ತಿದ್ದವು. ಈ ದೆಸೆಯಲ್ಲಿ ಇವುಗಳಿಗೆ ಹತ್ತಿರವಿರುವ ಸ್ಥಳಗಳಲ್ಲಿ ನಗರಗಳನ್ನು ನಿರ್ಮಿಸುವ ಸಂಪ್ರದಾಯ ಆರಂಭಗೊಂಡಿತು.

ದಖ್ಖನ್ ಪ್ರದೇಶದಲ್ಲಿ ಹೊಸದಾಗಿ ರೂಪುಗೊಳ್ಳುತ್ತಿದ್ದ ರಾಜ್ಯಗಳಲ್ಲಿ ನೆಲೆಗಳನ್ನು ಹುಡುಕಿಕೊಂಡು ದೆಹಲಿ ಹಾಗೂ ಪರ್ಶಿಯಾ ಅಥವಾ ಮಧ್ಯ ಏಶಿಯಾಗಳಿಂದ ಕಲಾವಿದರು, ಕಸಬುಗಾರರು ಹಾಗೂ ಸಂತರು 14ನೇ ಶತಮಾನದ ಉತ್ತರಾರ್ಧದಲ್ಲಿ ವಲಸೆ ಬರುವುದನ್ನು ಕಾಣಬಹುದು. ದೆಹಲಿ ಸುಲ್ತಾನರ ರಾಜ್ಯಗಳಲ್ಲಿ ಸೇವೆ ಸಲ್ಲಿಸಿದ್ದ ಅನೇಕ ಕಸಬುದಾರರು, ತಂತ್ರಜ್ಞರು ದಖ್ಖನ್ನಿನಲ್ಲಿ ಉದಯಗೊಂಡ ಬಹಮನಿ ಹಾಗೂ ವಿಜಯನಗರ ರಾಜ್ಯಗಳಲ್ಲಿ ತಮ್ಮ ಕೌಶಲ್ಯಗಳಿಂದ ಪ್ರಾತಿನಿಧ್ಯ ಪಡೆಯತೊಡಗಿದರು. ಹೊಸ ಕಸಬುದಾರರು ಮತ್ತು ತಂತ್ರಜ್ಞರ ನೆರವಿನಿಂದ ರೂಪುಗೊಂಡ ನಗರಗಳು, ಹೊಸ ತಂತ್ರಜ್ಞಾನದ ಕೋಟೆಗಳು, ರಚನೆಗಳು ಹಳೆಯ ಸಂಪ್ರದಾಯಿಕ ವಿಧಾನಗಳಿಗಿಂತ ಭಿನ್ನವಾಗಿದ್ದವು. ಆ ಕಾರಣಕ್ಕೆ ವಿಜಯನಗರ ಹಾಗೂ ಬಹಮನಿ ಸುಲ್ತಾನರಿಂದ ರಚನೆಗೊಂಡ ನಗರಗಳು ಆ ಕಾಲದ ತಂತ್ರಜ್ಞಾನ ಹಾಗೂ ಶತ್ರುಗಳ ದಾಳಿಗಳನ್ನು ಎದುರಿಸಬಲ್ಲ ನಗರಗಳಾಗಿದ್ದವು. ಬಹಮನಿ ಸುಲ್ತಾನರು ನಿರ್ಮಿಸಿದ ನಗರಗಳಲ್ಲಿ ಮಧ್ಯ-ಏಶಿಯಾ, ಪರ್ಶಿಯಾ, ಹಾಗೂ ಭಾರತೀಯ ನಗರಗಳ ರಚನೆಯ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಬಹಮನಿ ಸುಲ್ತಾನರು ಕ್ರಿ.ಶ. 1351ರಲ್ಲಿ ದೇವಗಿರಿಯನ್ನು ತೊರೆದು ಖನಿಜಗಳ ನಾಡಾದ ಕಲಬುರ್ಗಿ ಸೀಮೆಯಲ್ಲಿ ತಮ್ಮ ರಾಜಧಾನಿಯನ್ನು ನಿರ್ಮಿಸಿದರು. ದಖ್ಖನ್ ಸುಲ್ತಾನರಾದ ಬಹಮನಿಯವರು ನಿರ್ಮಿಸಿದ ನಗರಗಳು ಮಹ್ಮದೀಯ ಸಂಸ್ಕೃತಿಯ ಹಿನ್ನೆಯಲ್ಲಿ ಬೆಳೆದವು. ದೇವಗಿರಿಯನ್ನು ಹೊರತುಪಡಿಸಿದರೆ ಕಲಬುರ್ಗಿ ನಗರವು 14ನೆ ಶತಮಾನದಲ್ಲಿ ರೂಪಿತಗೊಂಡ ಒಂದು ಮಹ್ಮದೀಯ ಸಂಸ್ಕೃತಿಯ ಹಿನ್ನೆಲೆಯ ರಾಜಧಾನಿ ಪಟ್ಟಣವೆಂದು ಗುರುತಿಸಬಹುದು. ಬಹಮನಿಯರು ನಿರ್ಮಿಸಿದ ಈ ನಗರ ವಿಶಾಲ ವ್ಯಾಪ್ತಿಯನ್ನು ಹೊಂದಿತ್ತು. ಇದು ಪಶ್ಚಿಮದಲ್ಲಿ ಈಗಿನ ಚೋರ್-ಗುಂಬಜ್‌ದಿಂದ ಪೂರ್ವದಲ್ಲಿ ಬಂದೇ-ನವಾಜ್ ದರ್ಗಾದವರೆಗೂ, ಸುಮಾರು 5 ಕಿ.ಮಿ. ಅಗಲ ಮತ್ತು ದಕ್ಷಿಣದಲ್ಲಿ ಇಂದಿನ ಅಪ್ಪನ

ಕೆರೆಯ ಏರಿಯಿಂದ ಉತ್ತರದಲ್ಲಿ ಸುಲ್ತಾನಪುರ ಗ್ರಾಮದವರೆಗೆ ಸುಮಾರು 5ಕಿ.ಮಿ. ಉದ್ದದ ವಿಸ್ತಾರವನ್ನು ಹೊಂದಿತ್ತು.

ಕಲಬುರ್ಗಿ ಪರಿಸರದ ವೈಶಿಷ್ಟ್ಯತೆ

ಕಲಬುರ್ಗಿ ನಗರ ಭೌಗೋಳಿಕವಾಗಿ ಅತ್ಯಂತ ಸುರಕ್ಷಿತ ಸ್ಥಳವಾಗಿದೆ. ಈ ನಗರದ ಮೂರು ದಿಕ್ಕಿನಲ್ಲಿ ಮೂರು ಪ್ರಮುಖ ನದಿಗಳು ಹರಿಯುತ್ತವೆ. ಬೆಣ್ಣೆತೋರೆ ನದಿಯು ನಗರದ ಉತ್ತರಕ್ಕೆ 8 ಕಿ.ಮೀ. ದೂರದಲ್ಲಿ ಹರಿಯುತ್ತಿದ್ದರೆ, ನಗರದ ದಕ್ಷಿಣದಲ್ಲಿ ಭೀಮಾ ನದಿ ಹಾಗೂ ಪೂರ್ವದಲ್ಲಿ ಕಾಗೀಣಾ ನದಿಗಳು ಹರಿಯುತ್ತವೆ. ಒಟ್ಟಾರೆ, ಈ ಮೂರು ನದಿಗಳು ನಗರಕ್ಕೆ ಮೂರೂ ದಿಕ್ಕುಗಳಿಂದ ರಕ್ಷಣೆ ನೀಡುತ್ತವೆ. ಬೆಣ್ಣೆತೋರೆಯು ಮುಖಖೇಡದ ಹತ್ತಿರ ಕಾಗೀಣಾ ನದಿಗೆ ಬಂದು ಸೇರುತ್ತದೆ. ಇವು ಜೊತೆಯಾಗಿ ಹುನಗುಂದಾ ಗ್ರಾಮದ ಬಳಿ ಭೀಮಾ ನದಿಯನ್ನು ಸೇರುತ್ತವೆ. ಕಲಬುರ್ಗಿಯು ಮೂರು ನದಿಗಳಿಂದ ಸುತ್ತುವರಿದ ಪ್ರದೇಶವೆಂದು ಗುರುತಿಸಬಹುದು. ಈ ನದಿಗಳು ಫಲವತ್ತಾದ ಭೂಮಿಯಾಗಿದ್ದರಿಂದ ಪ್ರಾಚೀನ ಕಾಲದಿಂದಲೂ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಂಗಮವಾಗಿತ್ತೆಂದು ಹೇಳಬಹುದು (ನಕ್ಷೆ–1).



ನಕ್ಷೆ–1 ಕಲಬುರ್ಗಿ ಪರಿಸರ (ಭೀಮಾ, ಕಾಗೀಣಾ ಮತ್ತು ಬೆಣ್ಣೆತೋರಾ ನದಿಗಳ ಸಂಗಮ]

ಭೌಗೋಳಿಕವಾಗಿ ಕಲಬುರ್ಗಿಯು ದಖ್ಖನಿನ ಕೇಂದ್ರಸ್ಥಳವೆಂದು ಕರೆಯುವ ಗೋದಾವರಿ ಮತ್ತು ಕೃಷ್ಣಾ ನದಿಗಳ ನಡುವಿನ ಪ್ರದೇಶದಲ್ಲಿದೆ. ಈ ಪ್ರದೇಶವನ್ನು

ಉತ್ತರದ ಮಹಾರಾಷ್ಟ್ರ, ಪೂರ್ವದ ತೆಲಂಗಾಣ ಮತ್ತು ದಕ್ಷಿಣದ ರಾಯಚೂರು ದೋ-ಆಬ್ ಪ್ರದೇಶಗಳಿಗೆ ಸಮಾನ ಅಂತರದಲ್ಲಿರುವ ಸ್ಥಳವೆಂದು ಗುರುತಿಸಬಹುದು. ಆದ್ದರಿಂದ ಪ್ರಾಚೀನ ಕಾಲದಿಂದಲೂ ವಾಣಿಜ್ಯ ಮಾರ್ಗಗಳು ಈ ನಗರದ ಮೂಲಕ ಹಾದು ಹೋಗುತ್ತಿದ್ದವು. ಪೂರ್ವದ ತೆಲಂಗಾಣ ಪ್ರದೇಶದಿಂದ ಕಲ್ಯಾಣದಂತಹ ಪ್ರಾಚೀನ ನಗರಗಳನ್ನು ಬಳಸಿಕೊಂಡು ಕಲಬುರ್ಗಿ ಮಾರ್ಗವಾಗಿ ಪಶ್ಚಿಮ ದಿಕ್ಕಿನಲ್ಲಿರುವ ಬಿಜಾಪುರ, ಬೆಳಗಾವಿ ಹಾಗೂ ಕರಾವಳಿಯವರೆಗೂ ವಾಣಿಜ್ಯ ಮಾರ್ಗಗಳು ವಿಸ್ತರಿಸಿದ್ದವು. ಅದರಂತೆ ಉತ್ತರದಲ್ಲಿಯ ಗೋದಾವರಿ ನದಿಯಿಂದ ದಕ್ಷಿಣದ ರಾಯಚೂರ ದೋ-ಆಬ್ ಪ್ರದೇಶದವರೆಗೂ ಸಂಚರಿಸುವ ವಾಣಿಜ್ಯ ಮಾರ್ಗಗಳು ಕೂಡ ಕಲಬುರ್ಗಿಯ ಮೂಲಕ ಸಾಗುತ್ತಿದ್ದವು. ಸೋಲ್ಲಾಪುರ, ಆಳಂದ ಮೂಲಕ ಕಲಬುರ್ಗಿ ನಗರ ಬಳಸಿಕೊಂಡು ಭೀಮಾ ನದಿ ಆಚೆಯ ಗೋಗಿ, ಸಗರ ಮೂಲಕ ಕೃಷ್ಣಾ ನದಿ ಬಳಿಯ ಜಲದುರ್ಗಕ್ಕೆ ಸಾಗಿ ಅಲ್ಲಿಂದ ವಿಜಯನಗರ ಅಥವಾ ಹಂಪೆವರೆಗೆ ವಾಣಿಜ್ಯ ಮಾರ್ಗಗಳಿದ್ದವು.

ಕಲಬುರ್ಗಿ ಪರಿಸರವು ಭೀಮಾ ಕಣಿವೆ ಅಥವಾ 'ಭೀಮಾ-ಬೆಸಿನ್' ಎಂಬ ಪುರಾತನ ಭೂ-ಪ್ರದೇಶದ ಭಾಗವೆಂದು ಭೂ-ಗರ್ಭಶಾಸ್ತ್ರಜ್ಞರು ಗುರುತಿಸುತ್ತಾರೆ. ಭೀಮಾ ಕಣಿವೆಯ ಭೂ-ಗರ್ಭದಲ್ಲಿ ಅಪಾರ ಪ್ರಮಾಣದ ಶಿಲೆಯ ಪದರುಗಳು ಇವೆ. ಇವು ಶಾಹಾಬಾದ್ ಕಲ್ಲು ಎಂದು ಪ್ರಸಿದ್ಧವಾಗಿವೆ. ಸ್ಥಳೀಯರು ಇವುಗಳನ್ನು ಮನೆ ಕಟ್ಟಲು ಮತ್ತು ಮಾಳಿಗೆಗೂ ಬಳಸುತ್ತಾರೆ. ಈ ಭೀಮಾ ಕಣಿವೆಯ ಮತ್ತೊಂದು ವಿಶೇಷತೆ ಎಂದರೆ ನೈಸರ್ಗಿಕ ನೀರಿನ ಬುಗ್ಗೆ ಅಥವಾ ನೀರಿನ ಚಿಲುಮೆಗಳು. ಭೀಮಾ ಕಣಿವೆಯ ಪರಿಸರದ ಅನೇಕ ಸ್ಥಳನಾಮಗಳು ಜಲವಾಚಕವಾಗಿವೆ. ಅವುಗಳು 'ಅರ್ಗಿ' ಎಂದು ಕೊನೆಗೊಳ್ಳುತ್ತವೆ. ಉದಾ.: ಜೇವರ್ಗಿ, ಕಲಬುರ್ಗಿ, ಉಮರ್ಗಾ, ನಿಂಬರ್ಗಾ ಇತ್ಯಾದಿ. 'ಅರ್ಘಿ' ಎಂಬುದಕ್ಕೆ ಉಕ್ಕುವುದು ಅಥವಾ ಚಿಲುಮೆ ಎಂದು ಅರ್ಥವಿದೆ (ಕನ್ನಡ-ಕನ್ನಡ ನಿಘಂಟು ಸಂ.1). ನೈಸರ್ಗಿಕ ನೀರಿನ ಚಿಲುಮೆಗಳು ಇಲ್ಲಿ ಇರುವುದರಿಂದ ಇಂತಹ ಹೆಸರು ಸಾಮಾನ್ಯವಾಗಿವೆ. ಈ ನೀರಿನ ಚಿಲುಮೆಗಳು ಭೀಮಾ ಬೆಸಿನ್ ಪ್ರದೇಶದ ಭೂ-ಗರ್ಭದಲ್ಲಿ ನಡೆಯುವ ನೈಸರ್ಗಿಕ ಕ್ರಿಯೆಯಿಂದ ಉದ್ಭವವಾಗುತ್ತವೆ. ಕಲಬುರ್ಗಿ ನಗರದ ಪೂರ್ವ ದಿಕ್ಕಿನಲ್ಲಿ ನಂದೂರು ಗ್ರಾಮದ ಬಳಿ ಸುಣ್ಣದ ಕಲ್ಲುಗಳ ಪದರುಗಳು ಭೂಮಿಯಿಂದ ಎದ್ದು ನಿಂತಂತೆ ಕಾಣುತ್ತವೆ. ಬಹು ಪ್ರಾಚೀನದಲ್ಲಿ ಈ ಭೂ-ಪದರುಗಳನ್ನು ಸೀಳಿಕೊಂಡು ಜ್ವಾಲಾಮುಖಿ ಹೊರ ಚಿಮ್ಮಿದ್ದರಿಂದ ಈ ಶಿಲೆಗಳು ಭೂಮಿಯಿಂದ ಮೇಲೆದ್ದಿವೆ. ಈ ತೆರನಾದ ಭೂ ಪ್ರಕ್ರಿಯೆಯಿಂದ ಭೂ-ತಳದಲ್ಲಿರುವ ನೀರಿನ ಸೆಲೆಗಳು ಚಿಲುಮೆಯಾಗಿ ಉದ್ಭವಗೊಳ್ಳುತ್ತವೆ. ನೈಸರ್ಗಿಕ ನೀರಿನ ಆಸರೆಗಳು ದೊರೆಯುವುದರಿಂದ ಜನವಸತಿ ನೆಲೆಯೂರಲು ಸಹಾಯಕವಾಗುತ್ತವೆ. ಕಲಬುರ್ಗಿ ಪರಿಸರದಲ್ಲಿ ನೈಸರ್ಗಿಕ ನೀರಿನ ಸೆಲೆಗಳು ಸುಲಭವಾಗಿ ದೊರೆಯುವುದರಿಂದ ಹೆಚ್ಚಿನ ಸಂಖ್ಯೆಯ ಬಾವಿಗಳನ್ನು ಕಾಣಬಹುದಾಗಿದೆ. ನಗರದ ಪೂರ್ವ ಮತ್ತು ದಕ್ಷಿಣ ದಖ್ಖನ ಪ್ರದೇಶಗಳಲ್ಲಿ ಅಸಂಖ್ಯಾತ ಬಾವಿ ಮತ್ತು ತೋಟಗಳನ್ನು ಕಾಣಬಹುದು.

ಕಲಬುರ್ಗಿ ನಗರವು ವಿಸ್ತಾರವಾಗಿದ್ದರೂ ಅದು ತಗ್ಗು-ದಿಣ್ಣೆಗಳಂತಿರುವ ಬೆಟ್ಟಗಳ ಪ್ರದೇಶವೆಂದು ಗುರುತಿಸಬಹುದು. ಇದು ಸಮುದ್ರ ಮಟ್ಟದಿಂದ 1570 ಅಡಿ ಎತ್ತರದಲ್ಲಿದೆ. ನಗರದ ಈಶಾನ್ಯ ಮತ್ತು ಪಶ್ಚಿಮ ಪ್ರದೇಶಗಳು ಎತ್ತರವಾಗಿವೆ ಹಾಗು ನಗರದ ದಕ್ಷಿಣ ಭಾಗವು ಇಳಿಜಾರಿನ ಪ್ರದೇಶವೆನಿಸಿದೆ. ಎತ್ತರದ ಪ್ರದೇಶವಾಗಿದ್ದರಿಂದ ಇಲ್ಲಿ ಚಿಕ್ಕ ಚಿಕ್ಕ ತೊರೆ ಅಥವಾ ಹಳ್ಳಗಳು ಉಗಮಗೊಂಡು ಹರಿಯುತ್ತವೆ. ಈ ತೊರೆಗಳಿಗೆ ಅಡ್ಡಲಾಗಿ

ಅಲ್ಲಲ್ಲಿ ಕೆರೆಗಳನ್ನು ಕಟ್ಟಲಾಗಿವೆ. ನಗರದ ಶಹಾಬಜಾರ ಸುತ್ತಮುತ್ತ ಕಪ್ಪು ವರ್ಣದ ಬಸಾಲ್ಟ್ ಶಿಲೆಯ ಹಾಸು ಬಂಡೆಗಳಿವೆ. ಕೋಟೆಯ ಪ್ರದೇಶವು ಕಪ್ಪು ಶಿಲೆಯ ಚಿಕ್ಕ ಬೆಟ್ಟದಂತಿದ್ದು ಅದನ್ನು ಕೋಟೆ ಕಟ್ಟಲು ಬಳಕೆ ಮಾಡಲಾಗಿದೆ. ಇಲ್ಲಿಯ ಕಪ್ಪು ಶಿಲೆಯನ್ನು ಬಳಸಿ ಕೋಟೆಯನ್ನು ನಿರ್ಮಿಸಲಾಗಿದೆ. ಅದರಂತೆ ಕೋಟೆಯ ಈಶಾನ್ಯಕ್ಕಿರುವ ಹರವಾದ ಪ್ರದೇಶವನ್ನು ಬಹಮನಿಗಳು ಶಹರ್ ಅಥವಾ ಪಟ್ಟಣವನ್ನಾಗಿ ನಿರ್ಮಿಸಿದ್ದಾರೆ.

ಕಲಬುರ್ಗಿ ನಗರದ ಕುರಿತಾದ ಅಧ್ಯಯನಗಳ ಸಮೀಕ್ಷೆ

ಕಲಬುರ್ಗಿಯ ಪ್ರಾಚೀನ ಹೆಸರಿನ ಉಲ್ಲೇಖವನ್ನು ಇದೇ ತಾಲೂಕಿನ ಸರಡಗಿ ಗ್ರಾಮದ ಕ್ರಿ.ಶ. 1110ರ ಕಲ್ಯಾಣ ಚಾಲುಕ್ಯರ ಕಾಲದ ಕನ್ನಡ ಶಾಸನದಲ್ಲಿ "...ವದೀನೀಶ್ವರ ದೇವರ್ಗ್ಗೆ ಬಿಟ್ಟ ಕ್ಷೇತ್ರ ಕಲುಂಬರಗೆ..." ಉಲ್ಲೇಖ ಬರುತ್ತದೆ (ಹನುಮಾಕ್ಷಿ ಗೋಗಿ 1996: 101). ಇಲ್ಲಿ ಉಲ್ಲೇಖಿತವಾದ 'ಕಲುಂಬರಗೆ' ಪ್ರಸ್ತುತ ಕಲಬುರ್ಗಿಯನ್ನು ಸೂಚಿಸುತ್ತದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಕ್ರಿ.ಶ. 12ನೇ ಶತಮಾನದಲ್ಲಿಯೆ ಕಲಬುರ್ಗಿಯು ಒಂದು ಪ್ರಮುಖ ಸ್ಥಳವಾಗಿತ್ತೆಂಬುದಕ್ಕೆ ಈ ಶಾಸನವೇ ಸಾಕ್ಷಿ. ಮಧ್ಯಕಾಲೀನ ಕಲಬುರ್ಗಿ ನಗರದ ಚರಿತ್ರೆ ಮತ್ತು ಐತಿಹಾಸಿಕ ಸ್ಮಾರಕಗಳ ಕುರಿತಂತೆ ಅನೇಕ ಅಧ್ಯಯನಗಳು ನಡೆದಿವೆ. ಆಯ್ದ ಕೆಲವು ಪ್ರಮುಖ ಅಧ್ಯಯನಗಳ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದೆ.

ಮಧ್ಯಕಾಲದಿಂದಲೇ ಕಲಬುರ್ಗಿಯ ಬಗ್ಗೆ ಮಾಹಿತಿಗಳು ದೊರೆಯುವುದನ್ನು ಕಾಣುತ್ತೇವೆ. ಬಹಮನಿಯ ಸಮಕಾಲೀನ ಇತಿಹಾಸಕಾರರು ಬಹಮನಿಗಳ ಮತ್ತು ಕಲಬುರ್ಗಿಯ ಬಗ್ಗೆ ಮಾಹಿತಿ ದಾಖಲಿಸಿರುವುದನ್ನು ಕಾಣುತ್ತೇವೆ. ಸುಲ್ತಾನ ಮೊಹ್ಮದ ಬಿನ್ ತುಘಲಕ್ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ಸ್ಥಳಾಂತರಿಸಿದಾಗ ವಲಸೆಬಂದ ಹಲವು ವಿದ್ವಾಂಸರು ಅಪಾರ ಹಾನಿಯನ್ನು ಅನುಭವಿಸಿದ್ದರು. ಅವರು ಮತ್ತೆ ದೆಹಲಿಗೆ ಮರಳದೆ ಬಹಮನಿ ರಾಜ್ಯದ ಸ್ಥಾಪನೆಯಲ್ಲಿ ಅಲ್ಲಾವುದ್ದೀನ್‌ನಿಗೆ ಸಹಾಯಕರಾಗಿದ್ದರು. ಅವರಲ್ಲಿ ಅಬ್ದುಲ್-ಅಲ್-ಇಸಾಮಿ ಪ್ರಮುಖನು. ದೆಹಲಿಯ ನಿವಾಸಿಯಾಗಿದ್ದ ಇಸಾಮಿಯು ರಾಜಧಾನಿ ಸ್ಥಳಾಂತರ ಘಟನೆಯಲ್ಲಿ ತನ್ನ ಅಜ್ಜ ಮತ್ತು ಮನೆಯ ಹಿರಿಯರನ್ನು ಕಳೆದುಕೊಂಡಿದ್ದನು. ತುಘಲಕ್ ಆಡಳಿತದ ವಿರುದ್ಧ ಹೊರಾಟಕ್ಕಿಳಿದಿದ್ದ ಬಹಮನಿ ಸಂಸ್ಥಾಪಕ ಅಲ್ಲಾವುದ್ದೀನ್ ಶಹಾನಿಗೆ ಬೆಂಬಲ ಸೂಚಿಸಿದ್ದನು. ಹೊಸರಾಜ್ಯ ಸ್ಥಾಪನೆಯಾದ ನಂತರ ಅಲ್ಲಾವುದ್ದೀನ್‌ನಿಗೆ ಹತ್ತಿರವಾದನು. ಭಾರತದಲ್ಲಿ ಮಹ್ಮದೀಯರ ಆಡಳಿತ ಉಗಮ ಮತ್ತು ಅದರ ಬೆಳವಣಿಗೆಯ ಬಗ್ಗೆ ಇತಿಹಾಸದ ಕೃತಿಯೊಂದನ್ನು ರಚಿಸುವುದಕ್ಕೆ ಇಸಾಮಿ ಯೋಜನೆಯೊಂದನ್ನು ರೂಪಿಸಿದ್ದನು. ಅದರ ಫಲವಾಗಿಯೇ ಚರಿತ್ರೆಕಾರ ಇಸಾಮಿ ಕ್ರಿ.ಶ. 1350ರ ಅವಧಿಯಲ್ಲಿ ಫುತುಹುಸ್-ಸಲಾತೀನ್ ಅಥವಾ ಶಾಹ ನಾಮ-ಹಿಂದ್ ಕೃತಿಯನ್ನು ರಚಿಸಿದನು (Devre 1961: 186). ಈ ಕೃತಿಯಲ್ಲಿ ತುಘಲಕ್ ಸುಲ್ತಾನ ಮುಹ್ಮದ್-ಬಿನ್-ತುಘಲಕ್‌ನ ಕ್ರೌರ್ಯ ಹಾಗೂ ರಾಜಧಾನಿ ವರ್ಗಾವಣೆಯಲ್ಲಿ ನಡೆದ ಅವಗಢಗಳನ್ನು ಕುರಿತು ವಿಮರ್ಶಾತ್ಮಕವಾಗಿ ವಿವರಿಸಿದ್ದಾನೆ. ಅಲ್ಲದೇ ಬಹಮನಿ ರಾಜ್ಯ ಸಂಸ್ಥಾಪಕ ಅಲ್ಲಾವುದ್ದೀನನ ಹೊರಾಟಗಳ ಬಗ್ಗೆ ವಿವರಣೆಗಳನ್ನು ನೀಡಿದ್ದಾನೆ. ಅಲ್ಲದೆ, ದೇವಗಿರಿ ಮತ್ತು ಕಲಬುರ್ಗಿಯಲ್ಲಿ ಆಡಳಿತ ನಡೆಸಿದ ಬಹಮನಿ ಸುಲ್ತಾನರ ಬಗ್ಗೆ ಮಾಹಿತಿಯನ್ನು ನೀಡಿದ್ದಾನೆ.

ಬಹಮನ್ ನಾಮ ಕೃತಿಯನ್ನು ರಚಿಸಿದ ಆಝಾರಿ ಎಂಬ ಇತಿಹಾಸಕಾರ ಬಹಮನಿ ರಾಜ್ಯದ ಆಶ್ರಯ ಪಡೆದಿದ್ದ ಮತ್ತೊಬ್ಬ ಪ್ರಮುಖ ವಿದ್ವಾಂಸ. ಆಝಾರಿ ಇತಿಹಾಸಕಾರನನ್ನು

ಬಹಮನಿ ಸುಲ್ತಾನ ಸ್ವತಃ ಬೀದರಿಗೆ ಬಂದು ನೆಲೆಸುವಂತೆ ಆಮಂತ್ರಣ ನೀಡಿದ್ದನು. ಸುಲ್ತಾನನ ಆಮಂತ್ರಣದ ಮೇರೆಗೆ ಬೀದರಿಗೆ ಬಂದು ನೆಲೆಸಿದ್ದನು. ರಾಜ್ಯದ ಸ್ಥಾಪನೆಯಿಂದ ಬೀದರ್ ನಗರಕ್ಕೆ ಸ್ಥಳಾಂತರವಾಗುವುರೆಗೂ ಬಹಮನಿ ಆಡಳಿತದ ಬಗ್ಗೆ ಆಝೂರಿ ತನ್ನ ಬಹಮನ್ ನಾಮಾ ಕೃತಿಯಲ್ಲಿ ದಾಖಲಿಸಿದ್ದಾನೆ. ಇದರಲ್ಲಿ ಕಲಬುರ್ಗಿಯ ಬಗ್ಗೆ ವಿವರಗಳನ್ನು ಕಾಣಬಹುದು. ಆಝೂರಿ ಒಬ್ಬ ತತ್ವಶಾಸ್ತ್ರ ಪರಿಣಿತನೂ ಆಗಿದ್ದ. ಆದ್ದರಿಂದ ಬಹಮನ್ ನಾಮಾ ಕೃತಿಯು ಕಾವ್ಯಮಯವಾಗಿ ರಚನೆಯಾಗಿದೆ. ಇನ್ನೊಬ್ಬ ಇತಿಹಾಸಕಾರ ಫೆರಿಸ್ತಾ ಉಲ್ಲೇಖಿಸುವ ಅಲ್ಲಾವುದ್ದೀನ್ ಶಹಾ ಬಗೆಗಿನ ಐತಿಹ್ಯವನ್ನು ಆಝೂರಿ ದಾಖಲಿಸಿರುವುದಿಲ್ಲ.

ಕ್ರಿ.ಶ. 1460ರ ದಶಕದಲ್ಲಿ ಬಹಮನಿ ರಾಜ್ಯಕ್ಕೆ ರಷ್ಯಾ ದೇಶದಿಂದ ಅಫನಾಸಿ ನಿಕಿಟಿನ್ ಎಂಬ ಪ್ರವಾಸಿಗ ಭೇಟಿ ಕೊಟ್ಟಿದ್ದನು. ಈತ ಒಬ್ಬ ವ್ಯಾಪಾರಿಯೂ ಆಗಿದ್ದನು. ಭಾರತದಲ್ಲಿ ಪರ್ಶಿಯಾದ ಕುದುರೆಗಳಿಗೆ ಬಾರಿ ಬೇಡಿಕೆ ಇದೆ ಎಂಬ ಮಾಹಿತಿ ಪಡೆದಿದ್ದನು. ಭಾರತದಲ್ಲಿ ಕುದುರೆಗಳನ್ನು ಮಾರಿ ಶ್ರೀಮಂತನಾಗಬೇಕೆಂಬ ಆಸೆಯಿಂದ ಹಲವು ಪರ್ಶಿಯನ್ ಕುದುರೆಗಳನ್ನು ಖರೀದಿಸಿ ಸಮುದ್ರಯಾನದ ಮೂಲಕ 1462ರಲ್ಲಿ ಭಾರತಕ್ಕೆ ಬಂದನು. ದುರಾದೃಷ್ಟವಶಾತ್ ನಿಕಿಟಿನ ಭಾರತದಲ್ಲಿ ಕುದುರೆಗಳನ್ನು ಕಳೆದುಕೊಂಡು. ನಿರಾಶ್ರಿತನಾಗಿದ್ದ ನಿಕಿಟಿನ್ ಬೀದರಕ್ಕೆ ಬಂದು ಮಹ್ಮದ್ ಗವಾನ್‌ನ ಆಶ್ರಯ ಪಡೆದು ಕೆಲ ಕಾಲ ನೆಲೆಸಿದ್ದನು. ನಿಕಿಟನ್ ಬಹಮನಿ ರಾಜ್ಯಕ್ಕೆ ಸೇರಿದ್ದ ಆಳಂದ, ಶ್ರೀಶೈಲ ಹಾಗೂ ಕಲಬುರ್ಗಿಗೂ ಭೇಟಿ ನೀಡಿದ್ದನು. ತಾನು ಕಂಡ ಸ್ಥಳಗಳ ಬಗ್ಗೆ ಹಲವು ವಿಷಯಗಳನ್ನು ಮತ್ತು ವಿವಿಧ ಘಟನೆಗಳನ್ನು ತನ್ನ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾನೆ. ರಷ್ಯಾ ದೇಶಕ್ಕೆ ವಾಪಸ್ ಹೋಗುವ ಸಂದರ್ಭದಲ್ಲಿ ಕಲಬುರ್ಗಿ ನಗರಕ್ಕೆ ಭೇಟಿ ನೀಡಿದ್ದನು. ಬೀದರ್‌ನಿಂದ ಕಲಬುರ್ಗಿ ನಗರಕ್ಕೆ ಹತ್ತು ದಿನಗಳ ಪ್ರಯಾಣವೆಂದು ನಿಕಿಟಿನ್ ದಾಖಲಿಸಿದ್ದಾನೆ (Wielhorski 2000: 19).

ಮಧ್ಯಕಾಲೀನ ದಖ್ಖನ್ ಇತಿಹಾಸ ರಚನೆಗೆ ಕಾಸೀಮ್ ಫೆರಿಸ್ತಾ ಮತ್ತು ತಬಾತಭೈ ಅವರ ಕೃತಿಗಳು ಪ್ರಮುಖ ಆಕರಗಳಾಗಿವೆ. ಇವರಿಬ್ಬರೂ ಸಮಕಾಲೀನರು. ಅಹ್ಮದನಗರದ ನಿಜಾಮಶಾಹಿ ಸುಲ್ತಾನರ ಆಶ್ರಯದಲ್ಲಿದ್ದರು. ಚರಿತ್ರೆಕಾರ ಸೈಯದ್ ಅಲಿ ಅಜಿಜುಲ್ಲಾ ತಬಾತಭೈ ಇರಾಕ್ ದೇಶದಿಂದ ದಖ್ಖನಿಗೆ ವಲಸೆ ಬಂದಿದ್ದನು. ಅಹ್ಮದ ನಗರ ರಾಜ್ಯದಲ್ಲಿ ಆಶ್ರಯ ಪಡೆದಿದ್ದನು. ಭಾರತದಲ್ಲಿ ಮಹ್ಮದೀಯರ ಆಳ್ವಿಕೆಯ ಬಗ್ಗೆ ದೀರ್ಘ ಇತಿಹಾಸವನ್ನು ಬುರ್ಹಾನ್-ಇ-ಮುಸಿರ್ ಎಂಬ ಕೃತಿಯಲ್ಲಿ ರಚಿಸಿದ್ದಾನೆ. ಇದರಲ್ಲಿ ತಬಾತಭೈ ವಿವಿಧ ಆಕರಗಳನ್ನು ಬಳಸಿ ಮತ್ತು ಜನಜನಿತವಾದ ವಿಷಯಗಳನ್ನು ದಾಖಲಿಸಿದ್ದಾನೆ. ಈ ಕೃತಿಯ ಹೆಚ್ಚಿನ ಭಾಗವು ನಿಜಾಮ್‌ಶಾಹಿ ಸುಲ್ತಾನರ ಕುರಿತಾಗಿದ್ದರೂ, ಬಹಮನಿ ಸಂಸ್ಥಾಪನೆಯಿಂದ ಅದರ ಅವನತಿಯವರೆಗೂ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತದೆ. ಇದು ಮಧ್ಯಕಾಲೀನ ದಖ್ಖನ್ ಇತಿಹಾಸ ರಚನೆಗೆ ಮೂಲ ಆಕರವೆಂದು ಪರಿಗಣಿಸಲಾಗಿದೆ. ವಿದ್ವಾಂಸರ ಪ್ರಕಾರ ಸಮಕಾಲೀನ ಇತಿಹಾಸಕಾರ ಫೆರಿಸ್ತಾನ ಬರವಣಿಗೆಗಿಂತಲೂ ತಬಾತಭೈನ ಕೃತಿಯು ಹೆಚ್ಚು ವಾಸ್ತವ ಹಾಗೂ ನಂಬಲಾರ್ಹವೆಂದು ಹೇಳಲಾಗುತ್ತದೆ. ಫೆರಿಸ್ತಾ ವಿವರಿಸುವ ಬಹಮನಿ ಸಂಸ್ಥಾಪಕ ಅಲ್ಲಾವುದ್ದೀನ್ ಹಸನ್ ಶಹಾನ ಕುರಿತಾದ ಜಾನಪದ ಐತಿಹ್ಯ ತಬಾತಭೈ ಉಲ್ಲೇಖಿಸದಿರುವುದು ಗಮನಿಸಬೇಕಾದ ಅಂಶ. ಕಲಬುರ್ಗಿಯಲ್ಲಿ ಬಹಮನಿ ಸುಲ್ತಾನರ ನಡುವಿನ ಕಲಹಗಳು ಹಾಗೂ ವಿವಿಧ ಗೊಂದಲಗಳ ಬಗ್ಗೆ ತಬಾತಭೈನ ಉಲ್ಲೇಖಗಳು ಮುಖ್ಯವೆನಿಸುತ್ತವೆ (Devre 1961: 284).

ಮಹ್ಮದ್ ಕಾಸೀಮ್ ಫೆರಿಸ್ತಾನು ಕೂಡ ತಬಾತಭೈ ಇತಿಹಾಸಕಾರನಂತೆ ಅಹ್ಮದನಗರದ ನಿಜಾಮಶಾಹಿ ಸುಲ್ತಾನರ ಆಶ್ರಯದಲ್ಲಿದ್ದು. ಆನಂತರ 1591ರಲ್ಲಿ ಬಿಜಾಪೂರದ ಆದಿಲ್ ಶಾಹಿ ಸುಲ್ತಾನರ ಆಸ್ಥಾನಕ್ಕೆ ವಲಸೆ ಹೋದನು. ಫೆರಿಸ್ತಾ ಒಬ್ಬ ಶ್ರೇಷ್ಠ ಇತಿಹಾಸಕಾರ. ಮಧ್ಯಕಾಲೀನ ದಖ್ಖನ್ನಿನ ಇತಿಹಾಸ ರಚನೆಯಲ್ಲಿ ಇವನ ಕೃತಿ ತಾರೀಕ್–ಎ–ಫೆರಿಸ್ತಾ ಬಹು ಮುಖ್ಯ ಆಕರವೆನಿಸಿದೆ. ಫೆರಿಸ್ತಾ ಇದನ್ನು ಸು. ಕ್ರಿ.ಶ. 1620ರಲ್ಲಿ ರಚಿಸಿದ್ದಾನೆ. ಇದರಲ್ಲಿ ದಖ್ಖನ್ನಿನಲ್ಲಿ ಆಳಿದ ವಿವಿಧ ಮಹ್ಮದೀಯ ಅರಸು ಮನೆತನಗಳ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾನೆ (Devre 1961: 297). ಮುಖ್ಯವಾಗಿ ಬಹಮನಿ, ನಿಜಾಮಶಾಹಿ ಮತ್ತು ಆದಿಲ್ ಶಾಹಿ ಸುಲ್ತಾನರ ಇತಿಹಾಸ ಕಾಣಬಹುದು. ಬಹಮನಿ ಸುಲ್ತಾನರ ಕುರಿತಾದ ಸ್ವಾರಸ್ಯಕರವಾದ ಐತಿಹ್ಯವನ್ನು ಫೆರಿಸ್ತಾ ನೀಡಿದ್ದಾನೆ. ಐತಿಹ್ಯದ ಪ್ರಕಾರ ಅಲ್ಲಾವುದ್ದೀನ್ ಹಸನ್ ದೆಹಲಿಯ ಸಮೀಪ ಉಳುಮೆ ಮಾಡುವ ವ್ಯಕ್ತಿಯಾಗಿದ್ದನು. ಉಳಿಮೆ ಮಾಡುವ ಭೂಮಿಯ ಒಡೆಯ ಒಬ್ಬ ಬ್ರಾಹ್ಮಣನಾಗಿದ್ದ ಅವನ ಹೆಸರು ಗಂಗು ಎಂದು. ಒಂದು ದಿನ ಅಲ್ಲಾವುದ್ದೀನ್‌ನಿಗೆ ಉಳಿಮೆ ಮಾಡುವಾಗ ಚಿನ್ನದ ನಾಣ್ಯ ತುಂಬಿದ ಕುಡಿಕೆ ಸಿಕ್ಕಿತು. ಅದನ್ನು ಅವನು ತನ್ನ ಒಡೆಯನಿಗೆ ಒಪ್ಪಿಸಿದನು. ಭೂ ಒಡೆಯ ಗಂಗು ಅವನ ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡು ದೆಹಲಿ ರಾಜ್ಯದ ಸುಲ್ತಾನನ ಬಳಿಗೆ ಕರೆದೊಯ್ದು ಅಲ್ಲಾವುದ್ದೀನ್‌ನ ಪ್ರಾಮಾಣಿಕತೆಯನ್ನು ಕೊಂಡಾಡಿದನು. ದೆಹಲಿ ಸುಲ್ತಾನನು ಅಲ್ಲಾವುದ್ದೀನ್‌ನ ಪ್ರಾಮಾಣಿಕತೆಯನ್ನು ಮೆಚ್ಚಿ ರಾಜ್ಯದ ಆಡಳಿತದಲ್ಲಿ ಉನ್ನತವಾದ ಹುದ್ದೆಯನ್ನು ನೀಡಿದನು. ಇದರಿಂದ ಸಂತೋಷಗೊಂಡ ಅಲ್ಲಾವುದ್ದೀನ್ ಈ ಅದೃಷ್ಟಕ್ಕೆ ತನ್ನ ಒಡೆಯ ಗಂಗು ಅವರೆ ಕಾರಣವೆಂದು ಮನಗಂಡು ತಾನೇನಾದರೂ ಅರಸನಾದರೆ 'ಗಂಗು' ಎಂಬ ಉಪನಾಮವನ್ನು ಧರಿಸುವುದಾಗಿ ನಿರ್ಧರಿಸಿದ. ಅಂದುಕೊಂಡಂತೆ ಅಲ್ಲಾವುದ್ದೀನ್ ಹೊಸದಾಗಿ ಬಹಮನಿ ರಾಜ್ಯವನ್ನು ಸ್ಥಾಪಿಸಿದ. ತಾನು ನಿರ್ಧಾರ ಮಾಡಿದಂತೆ ತನ್ನ ಹೆಸರಿನೊಂದಿಗೆ ತನ್ನ ಭೂ ಒಡೆಯನ ಹೆಸರನ್ನು ಸೇರಿಸಿಕೊಂಡನು. 'ಅಲ್ಲಾವುದ್ದೀನ್ ಹಸನ್ ಗಂಗು' ಎಂದು ಕರೆದುಕೊಂಡನು ಎಂದು ಫೆರಿಸ್ತಾ ಉಲ್ಲೇಖಿಸಿದ್ದಾನೆ. ಆದರೆ, ಈ ಐತಿಹ್ಯಕ್ಕೆ ಐತಿಹಾಸಿಕ ಆಧಾರಗಳಿಲ್ಲ. ಮಾಹಿತಿಗಳ ಪ್ರಕಾರ ಅಲ್ಲಾವುದ್ದೀನ್‌ನ ಪೂರ್ವಜರು ಅಂದಿನ ಇರಾಕ್ ದೇಶದಲ್ಲಿ ಒಂದು ಪ್ರಮುಖ ಸಮುದಾಯಕ್ಕೆ ಸೇರಿದವರಾಗಿದ್ದರು ಹಾಗೂ ಇವರು ರಾಜ್ಯದ ಉನ್ನತ ಹುದ್ದೆಯಲ್ಲಿದ್ದರು. ಕಾಲಾನಂತರ ಇವರು ಇರಾಕ್‌ನಿಂದ ದೆಹಲಿಗೆ ವಲಸೆ ಬಂದು ಸುಲ್ತಾನ ರಾಜ್ಯದ ಸೇನೆಯಲ್ಲಿ ಸೇವೆಗೆ ಸೇರಿದ್ದರು. ಅಲ್ಲಾವುದ್ದೀನ್ ಶಹಾ ತುಘಲಕ್ ರಾಜ್ಯದ ಸೇನೆಯಲ್ಲಿ ಸೇವೆಯಲ್ಲಿದ್ದನು. ಅಲ್ಲಾವುದ್ದೀನ್ ಶಹಾ ಒಳಗೊಂಡಂತೆ ಹಲವು ಸೇನಾ ನಾಯಕರು ರಾಜ್ಯದ ಅಮೀರ್ ಅಥವಾ ಪ್ರಾಂತ್ಯಾಧಿಕಾರಿಗಳಾಗಿ ನೇಮಕಗೊಂಡಿದ್ದರು. ಶಹಾ, ದೇವಗಿರಿಯಲ್ಲಿ ತುಘಲಕ್ ಸುಲ್ತಾನನ ವಿರುದ್ಧ ಹೋರಾಟದ ಮುಂದಾಳತ್ವ ವಹಿಸಿದ್ದನು. ಫೆರಿಸ್ತಾ ಉಲ್ಲೇಖಿಸುವ ಐತಿಹ್ಯ ಕೇವಲ ಕಾಲ್ಪನಿಕ ಅಥವಾ ಜಾನಪದ ಕತೆಯ ಆಧಾರಿತ ಐತಿಹ್ಯವೆಂದು ಹೇಳಬಹುದು.

ಮಧ್ಯಕಾಲೀನ ಚರಿತ್ರೆಕಾರರ ದಾಖಲೆಗಳು ಕಲಬುರ್ಗಿಯ ಬಗ್ಗೆ ಸಾಂದರ್ಭಿಕವಾದ ಮಾಹಿತಿಯನ್ನು ಒದಗಿಸುತ್ತವೆ. ಆದರೆ ಕಲಬುರ್ಗಿ ನಗರದ ಐತಿಹಾಸಿಕ ಕಟ್ಟಡಗಳ ಕುರಿತಾದ ಮಾಹಿತಿಗಳ ಸಂಗ್ರಹ ಮತ್ತು ಅವುಗಳ ಕುರಿತಾದ ಅಧ್ಯಯನಗಳ ಆರಂಭವನ್ನು 18ನೇ ಶತಮಾನದ ಅಂತ್ಯದಿಂದ ಗುರುತಿಸಬಹುದು. ಕಲಬುರ್ಗಿಯ ಐತಿಹಾಸಿಕ ಕಟ್ಟಡಗಳ

ದಾಖಲಿಕರಣ ಮತ್ತು ಅವುಗಳ ಅಧ್ಯಯನಗಳನ್ನು ಆರಂಭ ಮಾಡಿದ ಮೊದಲ ಚರಿತ್ರೆಕಾರನೆಂದರೆ ಕೊಲೀನ್ ಮೆಕೆಂಜಿ. ಆಧುನಿಕ ಭೂ ಸರ್ವೇಕ್ಷಣೆಯು ಪ್ರಾರಂಭವಾಗಿದ್ದು ಮೈಸೂರು ರಾಜ್ಯದಲ್ಲಿ ಎಂದು ಹೇಳುತ್ತೇವೆ. ಆದರೆ ಮೈಸೂರು ರಾಜ್ಯಕ್ಕಿಂತ ಮುಂಚೆಯೇ ಆಧುನಿಕ ಭೂ ಸರ್ವೇಕ್ಷಣೆಯ ಕಾರ್ಯ ಕೈಗೆತ್ತಿಕೊಂಡಿದ್ದು ನಿಜಾಮ ರಾಜ್ಯ. 1792ರಲ್ಲಿಯೇ ಅಂದಿನ ಆಧುನಿಕ ಭೂ ಸರ್ವೇಕ್ಷಣೆ ಕೈಕೊಳ್ಳುವಲ್ಲಿ ಹೆಸರುವಾಸಿ ಆಗಿದ್ದ ಮೆಕೆಂಜಿಯನ್ನು ನಿಜಾಮ ಸರ್ಕಾರ ನೇಮಕ ಮಾಡಿತ್ತು. ಮೆಕೆಂಜಿಯು ಒಬ್ಬ ಐತಿಹಾಸಿಕ ದೃಷ್ಟಿಕೋನದ ವಿದ್ವಾಂಸನಾಗಿದ್ದರಿಂದ ತಾನು ಕೈಕೊಂಡ ಸರ್ವೆಯ ಸಂದರ್ಭದಲ್ಲಿ ಸ್ಥಳೀಯವಾಗಿ ದೊರೆಯುವ ಐತಿಹಾಸಿಕ ಅವಶೇಷಗಳನ್ನು ಗುರುತಿಸಿ ಅವುಗಳ ಮಾಹಿತಿಗಳನ್ನು ಸಂಗ್ರಹಿಸಿ, ಪ್ರಾಚೀನ ಸ್ಮಾರಕಗಳ ದಾಖಲಿಕರಣ ಮಾಡುತ್ತಿದ್ದನು. ಈ ಹಿನ್ನೆಲೆಯಲ್ಲಿ 1797ರಲ್ಲಿ ಸರ್ವೆಕಾರ್ಯವನ್ನು ಕೈಕೊಂಡಿದ್ದ ಮೆಕೆಂಜಿ ಕಲಬುರ್ಗಿಯ ನಕ್ಷೆಯನ್ನು ತಯಾರಿಸಿದ್ದನು. ಅಲ್ಲದೆ ಬಹಮನಿ ಕಾಲದ ಕೋಟೆ, ದರ್ಗಾ, ಮಸೀದಿಗಳ ವರ್ಣಚಿತ್ರಗಳನ್ನು ರಚಿಸಿದನು. ಇವು ಇಂದು ಅತ್ಯಂತ ಮಹತ್ವದ ಪ್ರಾಥಮಿಕ ಐತಿಹಾಸಿಕ ದಾಖಲೆಗಳೆನಿಸಿವೆ (ಚಿತ್ರ–1). ಮೆಕೆಂಜಿ ಸರ್ವೆ ನಡೆಸಿ ಸಲ್ಲಿಸಿದ ವರದಿಯು ಈಗ ಇಂಗ್ಲೇಂಡಿನ ಬ್ರಿಟಿಷ್ ಲೈಬ್ರರಿಯ ಸಂಗ್ರಹದಲ್ಲಿದೆ. ಇವುಗಳ ಕುರಿತಾಗಿ ಅನೇಕ ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಆದರೆ ಕಲಬುರ್ಗಿಯ ದಾಖಲೆಗಳ ಕುರಿತಾಗಿ ಇತ್ತೀಚಿಗೆ ಜೆನ್ನಿಫರ್ ಹೊವೆಸ್ ಎಂಬವರು ವಿಶೇಷ ಅಧ್ಯಯನ ಕೈಕೊಂಡಿದ್ದಾರೆ. ಇವರು ತಮ್ಮ ಇತ್ತೀಚಿನ ಕೃತಿಯಾದ 'Illustrating India- The Early Colinial Investigations of Colin Mackenezie (1784–1821) ದಲ್ಲಿ ಮೆಕೆಂಜಿಯ ಕಲಬುರ್ಗಿ ಸರ್ವೆ ಕಾರ್ಯದ ಬಗ್ಗೆ ಮತ್ತು ಮೆಕೆಂಜಿ ರಚಿಸಿದ ನಕ್ಷೆ ಹಾಗೂ ವರ್ಣಚಿತ್ರಗಳನ್ನು ಪ್ರಕಟಿಸಿದ್ದಾರೆ (ನೋಡಿ Howes, 2010). ಇದೇ ಸಂದರ್ಭದಲ್ಲಿ ಕಲಬುರ್ಗಿಯಲ್ಲದೆ, ಫಿರೋಜಾಬಾದ, ಆಳಂದ ಮುಂತಾದ ಸ್ಥಳಗಳಿಗೂ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದಾನೆ. 1797ರಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಕಲಬುರ್ಗಿ ನಗರದ ನಕ್ಷೆಯನ್ನು ರಚಿಸಿದ್ದಾನೆ (ಚಿತ್ರ–11). ಇದು ನಗರದ ವಿಸ್ತಾರವನ್ನು ಗುರುತಿಸುವುದಕ್ಕೆ ಮಾತ್ರ ಸಹಾಯಕವಾಗುತ್ತದೆ. ಐತಿಹಾಸಿಕ ಕಟ್ಟಡಗಳಾದ ಕೋಟೆ, ದರ್ಗಾ, ಗೋರಿಗಳ ವಿವರಣೆಗಳನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ಆದರೆ ಮೆಕೆಂಜಿ ರಚಿಸಿದ ಕೋಟೆ ಒಳಗೊಂಡ ನಗರದ ಪಶ್ಚಿಮ ಭಾಗದ ಜಲವರ್ಣಚಿತ್ರ ಹಾಗೂ ಸಿರಾಜುದ್ದೀನ್ ಜುನ್ಯೆದಿ ಮತ್ತು ಹಪ್ತ–ಗುಂಬಜ್ ಸಮೇತ ಬಂದೇ ನವಾಜ್ ದರ್ಗಾದ ಜಲವರ್ಣಚಿತ್ರಗಳು 1797ರ ಕಾಲಾವಧಿಯಲ್ಲಿದ್ದ ಕಲಬುರ್ಗಿ ನಗರದ ಸ್ಥೂಲ ಚಿತ್ರಣವನ್ನು ನೀಡುತ್ತವೆ.

ಹೆಸರಾಂತ ಇತಿಹಾಸಕಾರ ಮತ್ತು ಪುರಾತತ್ವಜ್ಞ ಮೆಡೋಸ್ ಟೇಲರ್ ಕೂಡ ಕಲಬುರ್ಗಿಯ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿದ್ದನು. 1877ರಲ್ಲಿ ಪ್ರಕಟಿಸಿದ 'A Student's Manual of the History of India ಮತ್ತು ಆತ್ಮಚರಿತ್ರೆಯಾದ 'Story of My Life' ಕೃತಿಗಳಲ್ಲಿ ಕಲಬುರ್ಗಿಯ ಸ್ಮಾರಕಗಳ ಬಗ್ಗೆ ಮಾಹಿತಿಗಳನ್ನು ನೀಡಿದ್ದಾನೆ. ಕೆಲವು ಮಾಹಿತಿಗಳ ಪ್ರಕಾರ ಸ್ಪೇನ್ ದೇಶದ ಕರ್ಡೊವಾ ಮಸೀದಿಯನ್ನು ಹೋಲುತ್ತದೆ ಎಂಬ ಅಭಿಪ್ರಾಯವನ್ನು ಪ್ರಥಮ ಬಾರಿಗೆ ಟೇಲರ್ ವ್ಯಕ್ತಪಡಿಸಿದ್ದನು ಎಂದು ತಿಳಿದುಬರುತ್ತದೆ. ಇಲ್ಲಿಯ ಚೋರ್ ಗುಂಬಜ್‌ದಲ್ಲಿ ಒಂದು ರಾತಿ ತಂಗಿದ್ದನೆಂದು ತನ್ನ ಆತ್ಮ ಚರಿತ್ರೆಯಲ್ಲಿ ಹೇಳಿಕೊಂಡಿದ್ದಾನೆ.



ಚಿತ್ರ–1: 1797ರಲ್ಲಿ ಕೊಲೀನ್ ಮೆಕೆಂಜಿ ರಚಿಸಿದ ಕಲಬುರ್ಗಿ ಕೋಟೆ ಮತ್ತು ಪಶ್ಚಿಮ ದಿಕ್ಕಿನ ನಗರ (ದೂರದಲ್ಲಿ ಚೋರ್ ಗುಂಬಜ್ ಕಾಣಬಹುದು) [ಕೃಪೆ: ಜೆನ್ನಿಫರ್ ಹೊವೆಸ್]

ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್ ಹೆಚ್.ಹೆಚ್. ಕೋಲ್ ಎಂಬುವರು ಪುರಾತನ ಸ್ಮಾರಕಗಳ ವಸ್ತುಸ್ಥಿತಿ ಮತ್ತು ಅವುಗಳ ಸಂರಕ್ಷಿಸುವ ಕುರಿತಾದ ಯೋಜನೆಯ ನಿಮಿತ್ತ ನಿಯೋಜನೆಗೊಂಡಿದ್ದರು. ಇವರು 1881ರ ಅವಧಿಯಲ್ಲಿ ಕಲಬುರ್ಗಿಗೆ ಭೇಟಿ ನೀಡಿ ಒಂದು ಕಿರು ವರದಿಯನ್ನು ರಚಿಸಿ ಅಂದಿನ ಭಾರತ ಸರ್ಕಾರಕ್ಕೆ ಸಲ್ಲಿಸಿದ್ದರು. ಕಲಬುರ್ಗಿಗೆ ಎರಡು ಬಾರಿ (1878 ಮತ್ತು 1881) ಕೋಲ್ ಅವರು ಸಂದರ್ಶಿಸಿದ್ದರೆಂದು ತಿಳಿದುಬರುತ್ತದೆ. ಇವರ ವರದಿಯಲ್ಲಿ ಐತಿಹಾಸಿಕ ಕಟ್ಟಡಗಳ ಮಾಹಿತಿ ಹಾಗೂ ಅವುಗಳ ವಸ್ತುಸ್ಥಿತಿಯನ್ನು ವಿವರಿಸಲಾಗಿದೆ. ಪ್ರಾರಂಭಿಕವಾಗಿ ಕೋಟೆಗೆ ಸಂದರ್ಶಿಸಿ ಅಲ್ಲಿಯ ಜುಮ್ಮಾ ಮಸೀದಿಯ ಬಗ್ಗೆ ವಿವರಣೆಯನ್ನು ನೀಡಿದ್ದಾನೆ. ಜುಮ್ಮಾ ಮಸೀದಿಯು 216 ಅಡಿ ಉದ್ದ; 176 ಅಡಿ ಅಗಲವಾದ ಬೃಹತ್ ಮಸೀದಿ ಎಂದು ವಿವರಿಸಿದ್ದಾನೆ. ಇದರ ಅವಸ್ಥೆಯ ಬಗ್ಗೆ ವಿವರಿಸುತ್ತಾ, ನಿರ್ಜನವಾದ ಕಟ್ಟಡದಂತಿದ್ದು ಇದೊಮ್ಮೆ 1878ರ ಭೀಕರ ಕ್ಷಾಮದ ಸಮಯದಲ್ಲಿ ನಗರದ ನಿರಾಶ್ರಿತರ ವಾಸನೆಲೆಯಾಗಿ ಬಳಸಲಾಗಿತ್ತು ಎಂದು ಉಲ್ಲೇಖಿಸಿದ್ದಾನೆ. 1881ರಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಈ ಮಸೀದಿಯ ಕಂಬವೂ ಕುಸಿದು ಹೋಗಿತ್ತು ಎಂದು ವರದಿ ಮಾಡಿದ್ದಾನೆ.

ಕೋಟೆಯನ್ನು ವೀಕ್ಷಿಸಿದ ಕೋಲ್ ಇಲ್ಲಿಯ ಬಹು ಪ್ರಸಿದ್ಧವಾದ 26 ಅಡಿ ಉದ್ದನೆಯ ಫಿರಂಗಿ ಬಗ್ಗೆ ವಿಶೇಷವಾದ ಮಾಹಿತಿಯನ್ನು ನೀಡಿದ್ದಾನೆ. ಅಲ್ಲಿಂದ ಹಪ್ತಗುಂಬಜ್‌ಗೆ ಭೇಟಿ ನೀಡಿ ಇಲ್ಲಿಯ ಸುಲ್ತಾನರ ಗೋರಿಗಳ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದ್ದಾನೆ. ದೊಡ್ಡ ಗಾತ್ರದ ಗೋರಿಗಳಾಗಿದ್ದರಿಂದ ನಿಜಾಮ್ ಸರ್ಕಾರ ಇವುಗಳನ್ನು ಸಾರ್ವಜನಿಕ ಕಚೇರಿಗಳನ್ನಾಗಿ ಬಳಸುತ್ತಿದೆ ಎಂದು ತನ್ನ ವರದಿಯಲ್ಲಿ ಕೋಲ್ ನೀಡಿದ್ದಾನೆ. ಇವುಗಳಲ್ಲಿ ನ್ಯಾಯಾಲಯ; ಕಂದಾಯ ಇಲಾಖೆ; ಪೋಲಿಸ್ ಠಾಣೆ ಹಾಗೂ ಖಜಾನೆ ಇಲಾಖೆಗಳ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಉಲ್ಲೇಖಿಸಿದ್ದಾನೆ. ಬಂದೇನವಾಜ್ ದರ್ಗಾಕ್ಕೂ ಭೇಟಿ ನೀಡಿ ಅಲ್ಲಿಯ ವ್ಯವಸ್ಥೆಯ ಬಗ್ಗೆ ವಿವರಿಸಿದ್ದಾನೆ. ಇಲ್ಲಿ ಐತಿಹಾಸಿಕ ಕಟ್ಟಡಗಳಿಗೆ ಪ್ರತಿವರ್ಷ ಸುಣ್ಣವನ್ನು ಬಳಿಯಲಾಗುತ್ತಿದ್ದು, ಅವು ಐತಿಹಾಸಿಕ ಮಹತ್ವವನ್ನು ಕಳೆದುಕೊಳ್ಳುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದ್ದಾನೆ (ಹೆಚ್ಚಿನ ವಿವರಗಳಿಗಾಗಿ ನೋಡಿ Cole: 1881: ccxiii-ccxv).

1882ರ ಸುಮಾರಿಗೆ ಕಲಬುರ್ಗಿಗೆ ಫೋಟೋಗ್ರಫಿ ಪರಿಚಯವಾಯಿತು. ರಾಜಾ ದೀನ್ ದಯಾಲ್ (1844–1905) ಎಂಬ ಛಾಯಾಚಿತ್ರಗ್ರಾಹಕ ಕಲಬುರ್ಗಿಗೆ ಭೇಟಿನೀಡಿ ಇಲ್ಲಿಯ ಕೆಲವು ಐತಿಹಾಸಿಕ ಕಟ್ಟಡಗಳ ಛಾಯಾಚಿತ್ರಗಳನ್ನು ತೆಗೆದು ಪ್ರಕಟಿಸಿದನು. ರಾಜಾ ದೀನ್ ದಯಾಲ್ ಮೂಲತಃ ರಾಜಸ್ತಾನದ ಇಂದೋರ್ ಸಂಸ್ಥಾನಕ್ಕೆ ಸೇರಿದವನು. ಅಲ್ಲಿ ಕೆಲ ಕಾಲ ಸೇವೆ ಸಲ್ಲಿಸಿದ್ದನು. ಛಾಯಾಚಿತ್ರ ಕಲೆಯನ್ನು ಒಂದು ವೃತ್ತಿಯನ್ನಾಗಿಸಿಕೊಂಡಿದ್ದನು. ಇಂದೋರನಿಂದ ಹೈದರಾಬಾದ್‌ಗೆ ಬಂದನು. ನಿಜಾಮನ ಆಶ್ರಯ ಪಡೆದು ಇಲ್ಲಿಯೇ ನೆಲಸಿದನು. ಸು.1882ರ ಅವಧಿಯಲ್ಲಿ ಕಲಬುರ್ಗಿಗೆ ಭೇಟಿ ನೀಡಿ ಇಲ್ಲಿಯ ಕೋಟೆ, ಜುಮ್ಮಾ ಮಸೀದಿ, ಬಂದೇನವಾಜ ದರ್ಗಾ, ಇತ್ಯಾದಿ ಸ್ಥಳಗಳ ಛಾಯಚಿತ್ರಗಳನ್ನು ಸೆರೆಹಿಡಿದಿದ್ದಾನೆ. ದೀನ್ ದಯಾಲ್ ಅವರ ಛಾಯಾಚಿತ್ರಗಳು Views of HH the Nizam's Dominions, Hyderabad, Deccan, 1892 ಕೃತಿಯಲ್ಲಿ ಪ್ರಕಟವಾಗಿವೆ. ಇವರು ತೆಗೆದ ಅನೇಕ ಛಾಯಾಚಿತ್ರಗಳು ಈಗ ಬ್ರಿಟಿಷ ಲೈಬ್ರರಿಯ

ಸಂಗ್ರಹದಲ್ಲಿವೆ. 1882ರ ಕಾಲಾವಧಿಯಲ್ಲಿ ತೆಗೆದ ಈ ಛಾಯಾಚಿತ್ರಗಳು ಕಲಬುರ್ಗಿಯ ಇತಿಹಾಸ ರಚನೆಗೆ ಮುಖ್ಯ ಆಕರಗಳಾಗಿವೆ. ಅಸಫ್ ಗಂಜ್‌ದ ಪ್ರವೇಶ ದ್ವಾರ, ಶರಣಬಸವ ಅಪ್ಪನ ಗುಡಿ, ಕೋಟೆಯ ಜುಮ್ಮಾ ಮಸೀದಿ, ಬಂದೇ ನವಾಜ್ ದರ್ಗಾ, ಹಫ್ತ ಗುಂಬಜ್, ಕೋಟೆ ಇತ್ಯಾದಿಗಳಿಗೆ ಭೇಟಿ ನೀಡಿ ಅವುಗಳ ಛಾಯಾಚಿತ್ರಗಳನ್ನು ರಚಿಸಿದ್ದಾನೆ.

ಹೆನ್ರಿ ಕಸಿನ್ಸ್ ಅವರು 1900ರ ಅವಧಿಯಲ್ಲಿ ಭಾರತೀಯ ಪುರಾತತ್ವ ಇಲಾಖೆಗೆ 'Lists of Antiquarian Remains in His Highness the Nizam's Territories' ಕೃತಿ ರಚಿಸಿದರು. ಅದರಲ್ಲಿ ಕಲಬುರ್ಗಿಯಲ್ಲಿಯ ಕೆಲವು ಐತಿಹಾಸಿಕ ಕಟ್ಟಡಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಒದಗಿಸಿದ್ದಾರೆ. ನಗರದ ಒಟ್ಟು ಐತಿಹಾಸಿಕ ಅವಶೇಷಗಳ ಮಾಹಿತಿ ನೀಡುವ ಪ್ರಯತ್ನ ಕಸಿನ್ಸ್ ಅವರದಾಗಿದೆ. (Cousens 1900).

1910ರಲ್ಲಿ ಜೆಮ್ಸ್ ಫರ್ಗೂಸನ್ ಅವರ History of Indian and Eastern Architecture ಕೃತಿಯಲ್ಲಿ ಕಲಬುರ್ಗಿಯ ಜುಮ್ಮಾ ಮಸೀದಿ, ಬಜಾರ್ ಬೀದಿ ಮತ್ತು ದರ್ಗಾಗಳ ಬಗ್ಗೆ ಮಾಹಿತಿಯನ್ನು ನೀಡುವುದರೊಂದಿಗೆ ಕಲಬುರ್ಗಿಯ ಬಹಮನಿ ಸ್ಮಾರಕಗಳು ಭಾರತೀಯ ಮಧ್ಯಕಾಲೀನ ವಾಸ್ತುಶಿಲ್ಪ ಕಲೆಯ ಅಧ್ಯಯನದ ಭಾಗವಾಯಿತು. ಇದು ಕ್ರಮೇಣ ವಿದ್ವಾಂಸರ ಗಮನಕ್ಕೆ ಬಂದವು ಮತ್ತು ಅವರ ಅಧ್ಯಯನ ವಸ್ತುಗಳಾದವು. ಫರ್ಗೂಸನ್ ಕಲಬುರ್ಗಿಯಲ್ಲಿ ದೊರೆಯುವ ಬಹಮನಿ ಸುಲ್ತಾನರ ಕಾಲದ ಕೋಟೆ, ಬಜಾರ್, ದರ್ಗಾ ಮತ್ತು ವಿವಿಧ ಗೋರಿಗಳ ಬಗ್ಗೆ ವಿವರಿಸುತ್ತಾ ಇವು ಬಹಮನಿ ಕಾಲದ ವಾಸ್ತುಶಿಲ್ಪ ಕಲೆಯ ಅಧ್ಯಯನಕ್ಕೆ ಮಹತ್ವದ ದಾಖಲೆಗಳೆಂದು ವಿವರಿಸಿದ್ದಾರೆ. 36,720 ಚದುರ ಅಡಿಗಳಷ್ಟು ವಿಸ್ತೀರ್ಣತೆಯಿಂದ ಕೂಡಿದ ಕೋಟೆಯ ಜುಮ್ಮಾ ಮಸೀದಿಯ 216 ಅಡಿ ಉದ್ದ ಮತ್ತು 170 ಅಡಿ ಅಗಲವಾಗಿದೆ ಎಂದು ಫರ್ಗೂಸನ್ ವಿವರಿಸಿದ್ದಾರೆ. ಅದರಂತೆ ಈ ಜುಮ್ಮಾ ಮಸೀದಿಯ ರಚನೆಯ ಕುರಿತು ಬರೆಯುತ್ತಾ ಇದೊಂದು ಅಪರೂಪದ ಮತ್ತು ಭಾರತದಲ್ಲಿಯೇ ಏಕೈಕ ಉದಾಹರಣೆಯಾಗಿದೆ ಎಂದು ಹೇಳಿದ್ದಾರೆ. ಈ ಮಸೀದಿಗೆ ಸಾಂಪ್ರದಾಯಿಕವಾಗಿ ಇರಬೇಕಾದ ಒಳಾಂಗಣ ಇರುವುದಿಲ್ಲ. ಇದು ಸಂಪೂರ್ಣವಾಗಿ ಮೇಲ್ಛಾವಣಿಯಿಂದ ಕೂಡಿದ್ದು, ಸ್ಪೇನ್ ದೇಶದ ಕರ್ಡೋವಾದ ಮಸೀದಿಯನ್ನು ಅನುಸರಿಸಿದೆ ಎಂದು ಅವರು ವಿವರಿಸಿದ್ದಾರೆ (Fergusson 1910:263). ಈ ಮಸೀದಿಯ ತಲನಕ್ಷೆಯನ್ನು ಮೊದಲಬಾರಿಗೆ ರಚಿಸಿದವರು ಸರ್ ಅರ್ಥರ್ ಗೊರ್ಡನ್. ಫರ್ಗೂಸನ್ ತಮ್ಮ ಗೆಳೆಯರಾಗಿದ್ದ ಗೊರ್ಡನ್ ಅವರಿಂದ ಪಡೆದು ನಕ್ಷೆಯನ್ನು ಮೊದಲಬಾರಿಗೆ ತಮ್ಮ ಕೃತಿಯಲ್ಲಿ ಪ್ರಕಟಿಸಿದ್ದಾರೆ (ನಕ್ಷೆ-3). ಈ ಮಸೀದಿಯನ್ನು ಜೀರ್ಣೋದ್ಧಾರ ಮಾಡುವ ವೇಳೆಯಲ್ಲಿ ಪಕ್ಕದಲ್ಲಿಟ್ಟಿದ್ದ ಸಿಡಿಮದ್ದು ಸ್ಫೋಟಗೊಂಡಿತ್ತು ಎಂದು ಫರ್ಗೂಸನ್ ತನ್ನ ಕೃತಿಯಲ್ಲಿ ದಾಖಲಿಸಿದ್ದಾನೆ (Fergusson 1910:266). ಕೋಟೆಯ ಒಳಾಂಗಣದಲ್ಲಿರುವ ಬಜಾರ ಬೀದಿಯ ಬಗ್ಗೆಯೂ ಫರ್ಗೂಸನ್ ಅವರು ಮಾಹಿತಿಯನ್ನು ನೀಡಿದ್ದಾರೆ. ಇದು 570 ಅಡಿ ಉದ್ದನೆಯ ಬೀದಿಯಾಗಿದ್ದು, ದ್ವಾರದ ಇಕ್ಕೆಡೆಗಳಲ್ಲಿ ನಿರ್ಮಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ. 60 ಅಡಿ ಅಗಲವಾದ ಈ ಬಜಾರವು ಕಮಾನುಗಳಿಂದ ನಿರ್ಮಿಸಿದ 61 ಮಳಿಗೆಗಳಿವೆ ಎಂದು ಅವರು ದಾಖಲಿಸಿದ್ದಾರೆ. ಅಲ್ಲದೆ ಭಾರತದ ಬೇರೆ ಎಲ್ಲೂ ಈ ಶೈಲಿಯ ಇನ್ನೊಂದು ಬಜಾರ ಬೀದಿ ಇರುವ ಬಗ್ಗೆ ಮಾಹಿತಿ ಇಲ್ಲವೆಂದು ಅವರು ಹೇಳಿದ್ದಾರೆ (Fergusson 1910:266).

ಪಾರಸಿ ಶಾಸನ ತಜ್ಞ ಹಾಗು ಲಂಡನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಟಿ.ಡಬ್ಲು ಹೆಗ್ ಅವರು ಕಲಬುರ್ಗಿಯಲ್ಲಿಯ ಬಹಮನಿ ಮತ್ತು ಆದಿಲಶಾಹಿಗಳ ಕಾಲದ ಶಾಸನಗಳನ್ನು 1907–08 ಸಂಗ್ರಹಿಸಿ ಅವುಗಳನ್ನು ಎಫಿಗ್ರಾಫಿಯಾ ಇಂಡೋ–ಮೊಸ್ಲಾಮಿಕಾ ಶಾಸನ ಸಂಪುಟದಲ್ಲಿ Inscriptions in Gulbarga ಎಂಬ ಶೀರ್ಷಿಕೆಯಡಿ ಪ್ರಕಟಿಸಿದ್ದಾರೆ. ಪ್ರಥಮ ಬಾರಿಗೆ ನಗರದ ಮಧ್ಯಕಾಲೀನ ಶಾಸನಗಳು ಪ್ರಕಟಗೊಂಡವಲ್ಲದೆ ಇವುಗಳನ್ನು ಇತಿಹಾಸ ಮತ್ತು ವಾಸ್ತುಶಿಲ್ಪ ಕಲೆಯ ಅಧ್ಯಯನಕ್ಕೆ ಬಳಕೆ ಮಾಡಿಕೊಳ್ಳಲಾಯಿತು. ಪರ್ಶಿಯನ್ ಶಾಸನಗಳ ತಜ್ಞರಾಗಿದ್ದ ಹೆಗ್ ಅವರು ಈ ಎಲ್ಲಾ ಶಾಸನಗಳನ್ನು ಆಂಗ್ಲ ಭಾಷೆಗೆ ಭಾಷಾಂತರ ಮಾಡಿದರು. ಅಲ್ಲದೆ, ಶಾಸನಗಳ ಸರಳ ಅರ್ಥವನ್ನು ನೀಡಿದ್ದಾರೆ (ನೋಡಿ: Haig, T.W: 1907-8). ಜೊತೆಗೆ, ಇವರು ಸಂಪಾದಿಸಿದ Cambridge History of India ಸಂಪುಟ–3ರಲ್ಲಿ ಬಹಮನಿ ಇತಿಹಾಸದ ಕುರಿತು ಬರೆಯುವಲ್ಲಿ ಕಲಬುರ್ಗಿಯ ಶಾಸನಗಳ ಮತ್ತು ಅಲ್ಲಿಯ ಬಹಮನಿ ಸ್ಮಾರಕಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಅಲ್ಲದೆ ಕಲಬುರ್ಗಿಯಲ್ಲಿಯ ಕೆಲವು ಗೋರಿಗಳ ಮತ್ತು ಕೋಟೆಯ ಜುಮ್ಮಾ ಮಸೀದಿಯ ಛಾಯಾಚಿತ್ರಗಳನ್ನು ಪ್ರಕಟಿಸಿದ್ದಾರೆ. (ನೋಡಿ: Haig 1928)

ಹೈದರಾಬಾದ ನಿಜಾಮ ರಾಜ್ಯದ ಪುರಾತತ್ವ ಇಲಾಖೆಯ ಮುಖ್ಯಸ್ಥರಾಗಿ ಮತ್ತು ಕೇಂದ್ರ ಪುರಾತತ್ವದ ಪಾರಸಿ, ಅರಾಬಿಕ್ ಶಾಸನಗಳ ಸಂಪುಟಗಳ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ ಹೆಸರಾಂತ ವಿದ್ವಾಂಸ ಗುಲಾಮ್ ಯಾಜ್ದಾನಿ ಅವರು ಕೂಡ ಕಲಬುರ್ಗಿಯ ಬಗ್ಗೆ ಅಧ್ಯಯನ ಕೈಕೊಂಡವರಲ್ಲಿ ಮುಖ್ಯರು. ಬಹಮನಿ ಸುಲ್ತಾನರ ಪರಂಪರೆಯ ಬಗ್ಗೆ ಮತ್ತು ಬೀದರ ನಗರದ ಇತಿಹಾಸ ಮತ್ತು ಸ್ಮಾರಕಗಳ ಕುರಿತು ವಿಶೇಷ ಸಂಪುಟವನ್ನು ಪ್ರಕಟಿಸಿದ್ದಾರೆ. ಯಾಜ್ದಾನಿಯವರು ಇಲಾಖೆಯ ಮುಖ್ಯಸ್ಥರಾಗಿದ್ದ ಸಂದರ್ಭದಲ್ಲಿ ಕಲಬುರ್ಗಿಯಲ್ಲಿರುವ ಬಹಮನಿ ಸ್ಮಾರಕಗಳ ಜೀರ್ಣೋದ್ಧಾರ ಕೂಡ ಕೈಕೊಂಡಿದ್ದರು. ಕಲಬುರ್ಗಿಯಲ್ಲಿಯ ಬಹಮನಿ ಕಟ್ಟಡಗಳ ಕುರಿತು ಕೈಕೊಂಡ ಅನ್ವೇಷಣೆ ಮತ್ತು ಶೋಧನೆಗಳನ್ನು ಪುರಾತತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿ ನಿಯಮಿತವಾಗಿ ಪ್ರಕಟಿಸಿದ್ದಾರೆ. ಅಲ್ಲದೆ ಇವರು ಇಲ್ಲಿಯ ಕೋಟೆಯ ಜುಮ್ಮಾ ಮಸೀದಿಯ ಕುರಿತಾಗಿ ಪ್ರಕಟಿಸಿದ ಲೇಖನ ಗಮನಿಸುವಂತದ್ದು. ಇವರ ಪ್ರಕಾರ ಈ ಅಪರೂಪದ ಜುಮ್ಮಾ ಮಸೀದಿಯು ಇರಾನಿನ ತಂಪಾದ ಬೆಟ್ಟ ಪ್ರದೇಶದಿಂದ ಬಂದಿರುವ ವಾಸ್ತುತಜ್ಞ ರಫಿ (ಶಾಸನದಲ್ಲಿ ಉಲ್ಲೇಖಿಸಿದ) ಈ ಪರಿಸರದ (ಕಲಬುರ್ಗಿ) ಉಷ್ಣತೆಯನ್ನು ಪರಿಗಣಸದೆ ಬೈಜಾಂಟಿನ್ ಶೈಲಿಯ ಸಮಕಾಲೀನ ಟರ್ಕಿ ಮಸೀದಿಗಳ ವಿನ್ಯಾಸವನ್ನು ಇಲ್ಲಿ ಅನುಸರಿಸಿದ್ದಾನೆಂದು ಅಭಿಪ್ರಾಯವನ್ನು ಪಟ್ಟಿದ್ದಾರೆ (Yazdani 1928: 20).

ಫರ್ಗೂಸನ್ ನಂತರ ಇನ್ನೊಬ್ಬ ಪ್ರಸಿದ್ಧ ಕಲಾ–ಇತಿಹಾಸಕಾರ ಪರ್ಸಿಬ್ರೌನ್ ಅವರು 1956ರಲ್ಲಿ ಪ್ರಕಟಿಸಿದ Indian Architecture (Islamic Period) ಕೃತಿಯಲ್ಲಿ ಬಹಮನಿಯವರ ವಾಸ್ತುಶಿಲ್ಪದ ಕುರಿತು ವಿಶೇಷವಾದ ವಿಶ್ಲೇಣೆ ನೀಡಿದ್ದಾರೆ. ಕೋಟೆಯ ಜುಮ್ಮಾ ಮಸೀದಿಯ ವಾಸ್ತುರಚನೆಯ ಬಗ್ಗೆ ಬರೆಯುತ್ತಾ ಇದೊಂದು ಅಪರೂಪ ಹಾಗೂ ಏಕೈಕ ಉದಾಹರಣೆಯಾದ ಮಸೀದಿಯಾಗಿದ್ದು ಪ್ರಾಯಶಃ ಮುಂದೆಂದೂ ಈ ತೆರನಾದ ಅಪರೂಪದ ಮಸೀದಿಯ ನಿರ್ಮಾಣ ಭಾರತದಲ್ಲಿ ಆಗಿಲ್ಲ ಎಂದು ಹಾಗೂ ಇದು ಅದ್ವಿತೀಯ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಪ್ತ–ಗುಂಬಜ್ ಸಮೂಹದ ಗೋರಿಗಳ ವಾಸ್ತುಶಿಲ್ಪ ರಚನೆ ಬಗ್ಗೆಯೂ ಅವರು ವಿವರವಾದ ಮಾಹಿತಿಗಳನ್ನು

ನೀಡುತ್ತಾ, ಇವುಗಳಲ್ಲಿ ಬಿಂಬಿತವಾದ ಕಲೆಯ ಬೆಳವಣಿಗೆ ಬಗ್ಗೆ ವಿಶ್ಲೇಷಿಸಿದ್ದಾರೆ (Brown19561:68-69).

ನಿಜಾಮ್‌ನ ಕಾಲದ ಉರ್ದು ಸಾಹಿತ್ಯ ಮತ್ತು ಸಂಶೋಧನೆಯ ಕೃತಿಗಳಲ್ಲಿಯೂ ಕಲಬುರ್ಗಿಯ ಬಗ್ಗೆ ಮಾಹಿತಿ ಪ್ರಕಟಗೊಂಡಿವೆ. ಮುಖ್ಯವಾಗಿ 1915ರಲ್ಲಿ ಪ್ರಕಟವಾದ ವಕ್ತ್–ಇ–ಮಾಮಲಿಕ್ಕತ್–ಇ–ಬಿಜಾಪುರ ಎಂಬ ಕೃತಿಯಲ್ಲಿ ಕಲಬುರ್ಗಿಯಲ್ಲಿ ಆಳ್ವಿಕೆ ಮಾಡಿದ ಬಹಮನಿ ಮತ್ತು ಆದಿಲ್ ಶಾಹಿಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಸಿಡ್ನಿ ಟಾಯ್ ಎಂಬ ಲಂಡನ್ನಿನ ಸಂಶೋಧಕರು ಭಾರತದ ಕೋಟೆಗಳ ಕುರಿತು ಎರಡು ಸಂಪುಟಗಳನ್ನು ಪ್ರಕಟಿಸಿದ್ದಾನೆ. ಇವರ The Fortified Cities of India ಎಂಬ ಕೃತಿಯಲ್ಲಿ 'Gulbarga' ಎಂಬ ಪ್ರತ್ಯೇಕ ಅಧ್ಯಾಯವನ್ನೇ ರಚಿಸಿದ್ದಾರೆ. ಇದರಲ್ಲಿ ಕಲಬುರ್ಗಿ ಕೋಟೆಯ ರಚನೆ ಮತ್ತು ಅದರ ಸ್ವರೂಪದ ಕುರಿತು ವಿವರಣೆಗಳನ್ನು ನೀಡಿದ್ದಾನೆ. ಮಧ್ಯಕಾಲೀನ ಕೋಟೆಗಳ ರಚನೆಯ ಮತ್ತು ತಂತ್ರಗಾರಿಕೆಗಳ ಹಿನ್ನೆಲೆಯಲ್ಲಿ ಟಾಯ್ ಅವರು ನೀಡುವ ವಿವರಣೆಗಳು ಗಮನಸೆಳೆಯುತ್ತವೆ. ಕಲಬುರ್ಗಿ ಕೋಟೆಯ ನಕ್ಷೆಯನ್ನು ಇವರು ಇದರಲ್ಲಿ ಪ್ರಕಟಿಸಿದ್ದಾರೆ (Toy 1965).

ಹೆಸರಾಂತ ಇತಿಹಾಸಕಾರ ಹೆಚ್. ಕೆ. ಶೇರವಾನಿಯವರು ಕಲಬುರ್ಗಿಯಲ್ಲಿ ಆಳಿದ ಬಹಮನಿ ಸುಲ್ತಾನ ತಾಜುವುದ್ದೀನ್ ಫಿರೋಜ್ ಶಹಾನ ಕುರಿತಾಗಿ 1943–44ರಲ್ಲಿ New Indian Antiquary ನಿಯತಕಾಲಿಕೆಯಲ್ಲಿ ದೀರ್ಘವಾದ ಲೇಖನ ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಬಹಮನಿ ಸುಲ್ತಾನ ಫಿರೋಜ್ ಶಹಾನು ದಖ್ಖನ್ ಪ್ರದೇಶದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನುಸಂಧಾನಕ್ಕೆ ಪ್ರಯತ್ನಿಸಿದ ವಿಧಾನಗಳನ್ನು ವಿವಿಧ ಮಧ್ಯಕಾಲೀನ ಆಕರಗಳನ್ನಾಧರಿಸಿ ವಿಶ್ಲೇಷಿಸಿದ್ದಾರೆ. ಕಲಬುರ್ಗಿಯು ಫಿರೋಜ್ ಶಹಾನ ಕಾಲದಲ್ಲಿ ವಿವಿಧ ಕಲೆ ಮತ್ತು ಸಂಸ್ಕೃತಿಗಳ ಕೇಂದ್ರಸ್ಥಾನವಾಗಿತ್ತು ಎಂದು ಶೇರವಾನಿ ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. 1973ರಲ್ಲಿ History of Medieval Deccan ಎಂಬ ಎರಡು ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಿದ ಹೆಚ್. ಕೆ. ಶೇರವಾನಿ ಅವರು ದಖ್ಖನ್‌ದಲ್ಲಿ ಆಳ್ವಿಕೆ ಮಾಡಿದ ಬಹಮನಿ ಸುಲ್ತಾನರ ಇತಿಹಾಸದ ಕುರಿತು ಸ್ವತಃ ತಾವೇ ಅಧ್ಯಾಯವೊಂದನ್ನು ರಚಿಸಿದ್ದಾರೆ. ಅಲ್ಲದೇ 1985ರಲ್ಲಿ Bahamanis of Deccan ಎಂಬ ಕೃತಿಯಲ್ಲಿ ಬಹಮನಿ ಕುರಿತಾದ ವಿಶೇಷವಾದ ಅಧ್ಯಯನವನ್ನು ಕಾಣಬಹುದು. ಶೇರವಾನಿ ಅವರು ಬಹಮನಿ ಸುಲ್ತಾನರ ಬಗ್ಗೆ ದೊರೆಯುವ ವಿವಿಧ ಆಕರಗಳನ್ನು ಮತ್ತು ಶಾಸನಗಳನ್ನು ಆಧರಿಸಿ ಕೃತಿಯನ್ನು ರಚಿಸಿದ್ದಾರೆ.

ಎಂ. ಎಸ್. ಮಾಟೆ ಅವರು ದಖ್ಖನ್ನಿನ ಮಹ್ಮದೀಯ ವಾಸ್ತುಶಿಲ್ಪ ಕುರಿತು ದೀರ್ಘ ಲೇಖನವನ್ನು 1961–62ರಲ್ಲಿ ಪ್ರಕಟಿಸಿದರು. ಇದರಲ್ಲಿ ಬಹಮನಿ ಸುಲ್ತಾನರ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ವಿವರಿಸುವಾಗ ಕಲಬುರ್ಗಿಯ ಬಹಮನಿಗಳ ಕಾಲದ ಐತಿಹಾಸಿಕ ಕಟ್ಟಡಗಳ ಬಗ್ಗೆಯೂ ವಿವರಣೆಗಳನ್ನು ನೀಡಿದ್ದಾರೆ (Mate 1961-62).

1974ರಲ್ಲಿ ಪ್ರಕಟವಾದ History of Medieval Deccan ಕೃತಿಯ ದ್ವಿತೀಯ ಸಂಪುಟದಲ್ಲಿ ಬಹಮನಿ ಸುಲ್ತಾನರ ವಾಸ್ತುಶಿಲ್ಪ ಕಲೆಯ ಕುರಿತಾದ ಝೆಡ್.ಎ. ದೇಸಾಯಿ ಅವರ ಲೇಖನ ಗಮನಾರ್ಹವಾಗಿದೆ. ಈ ಲೇಖನದಲ್ಲಿ ಬಹಮನಿ ವಾಸ್ತುಶಿಲ್ಪಕಲೆಯನ್ನು ಎರಡು ಮುಖ್ಯ ಹಂತಗಳನ್ನಾಗಿ ವಿಂಗಡಿಸಿದ್ದಾರೆ. ಮೊದಲನೆಯದು ಕಲಬುರ್ಗಿ ಹಂತ:

ಎರಡನೆಯದು ಬೀದರ ಹಂತವೆಂದು ಗುರುತಿಸುತ್ತಾರೆ. ಮೊದಲ ಹಂತವು ದೆಹಲಿ ಸುಲ್ತಾನರ ಕಲೆಯ ಪ್ರಭಾವದೊಂದಿಗೆ ಬೆಳೆಯಿತು ಮತ್ತು ಎರಡನೆಯ ಹಂತ ಪರ್ಶಿಯನ್ ಕಲೆಯನ್ನು ಅನುಸರಿಸಿ ಸ್ವತಂತ್ರವಾದ ಕಲೆಯನ್ನು ಮೈಗೂಡಿಸಿಕೊಂಡು ಬಹಮನಿ ಕಲೆಯಾಗಿ ರೂಪುಗೊಂಡಿತು ಎಂದು ಅವರು ಇಲ್ಲಿ ವಿಶ್ಲೇಷಿಸಿದ್ದಾರೆ. ಕಲಬುರ್ಗಿಯ ಕೋಟೆಯಲ್ಲಿರುವ ಜುಮ್ಮಾ ಮಸೀದಿಯ ಬಗ್ಗೆ ದೇಸಾಯಿ ಅವರು ನೀಡುವ ಹೊಸ ಹೊಳುವುಗಳು ಗಮನಸೆಳೆಯುತ್ತವೆ. ಮೊದಲಿಗೆ ಇವರು ಈ ಜುಮ್ಮಾ ಮಸೀದಿಯ ಪ್ರವೇಶದ್ವಾರದ ಗೋಡೆಯೊಂದಿಗೆ ಕಟ್ಟಲಾದ 1367ರ ಶಾಸನದ ಕುರಿತಾಗಿಯೇ ತಮ್ಮ ಅನುಮಾನಗಳನ್ನು ವ್ಯಕ್ತಪಡಿಸುತ್ತಾರೆ. ಈ ಶಾಸನವು ಮೂಲತಃ ಕೋಟೆಯ ಕಲ್ಲು ರಾಶಿಯಲ್ಲಿತ್ತೆಂದು ಅದನ್ನು ದ್ವಾರವನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಶಾಸನವನ್ನು ಗೋಡೆಗೆ ಜೋಡಿಸಿ ಕಟ್ಟಲಾಗಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಜುಮ್ಮಾ ಮಸೀದಿಯ ರಚನೆಯಲ್ಲಿ ಪರ್ಶಿಯನ್ ಕಲೆಯ ಸ್ಪಷ್ಟ ಪ್ರಭಾವವನ್ನು ಅವರು ಗುರುತಿಸಿದ್ದಾರೆ. ಆದ್ದರಿಂದ ಈ ಮಸೀದಿಯು ಫಿರೋಜ ಶಹಾ ಸುಲ್ತಾನನ ಆಳ್ವಿಕೆಯ ಕಾಲದಲ್ಲಿ (ಸು.ಕ್ರಿ.ಶ.1420ರಲ್ಲಿ) ನಿರ್ಮಾಣವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ (Desai 1974: 234).

1966ರಲ್ಲಿ ಪ್ರಕಟಗೊಂಡ ಆಂಗ್ಲ ಆವೃತ್ತಿಯ ಗುಲಬರ್ಗಾ ಜಿಲ್ಲಾ ಗೆಜೆಟಿಯರ್‌ನಲ್ಲಿಯೂ ಕಲಬುರ್ಗಿಯಲ್ಲಿ ಆಳಿದ ಬಹಮನಿ ಸುಲ್ತಾನರ ಸಂಕ್ಷಿಪ್ತ ಇತಿಹಾಸ ಹಾಗೂ ಅವರ ಐತಿಹಾಸಿಕ ಸ್ಮಾರಕಗಳ ಕುರಿತಾಗಿ ವಿವರಿಸಲಾಗಿದೆ. ನಗರದಲ್ಲಿರುವ ಕೋಟೆ, ಜುಮ್ಮಾ ಮಸೀದಿ, ಬಂದೇ ನವಾಜ್ ದರ್ಗಾ, ಹಪ್ತ-ಗುಂಬಜ್ ಇತ್ಯಾದಿಗಳ ಕುರಿತಾದ ವಿವರಣೆಗಳನ್ನು ಇಲ್ಲಿ ಕಾಣಬಹುದು. ಈ ಗೆಜೆಟಿಯರ್‌ದಲ್ಲಿ ನಗರದ ಜನಸಂಖ್ಯೆ ಮತ್ತು ಮನೆಗಳ ಸಂಖ್ಯೆಗಳನ್ನೂ ನೀಡಿದ್ದಾರೆ. ನಗರದಲ್ಲಿ 1960ರ ದಶಕದಲ್ಲಿ ಸು.1800 ಮನೆಗಳಿದ್ದವು ಎಂದು ತಿಳಿದು ಬರುತ್ತದೆ. ಅಲ್ಲದೆ, ನಗರದ ಜನಸಂಖ್ಯೆಯು ಕೇವಲ 97,069 ಇತ್ತು. ನಗರದ ಐವಾನ್-ಶಾಹಿ ಹಾಗೂ ತಿರಂದಾಜ್-ಟಾಕೀಸ್ ಪರಿಸರದಲ್ಲಿ 1960ರ ದಶಕದಲ್ಲಿ ನಗರದ ವಿಸ್ತರಣೆಯ ಭಾಗವಾಗಿ ಹೊಸದಾದ ಬಡಾವಣೆಗಳನ್ನು ಯೋಜಿಸಲಾಗಿತ್ತು ಎಂಬ ಮಾಹಿತಿ ಈ ಗೆಜೆಟಿಯರ್‌ನಿಂದ ತಿಳಿದುಬರುತ್ತದೆ.

ದಖ್ಖನ್‌ದ ಮಹ್ಮದೀಯ ರಾಜ್ಯಗಳ ವಾಸ್ತುಶಿಲ್ಪ ಮತ್ತು ಕಲೆಯ ಬೆಳವಣಿಗೆ ಹಾಗೂ ಅದರ ವೈಶಿಷ್ಟ್ಯತೆಯ ಕುರಿತಾಗಿ ಸಂಶೋಧನೆಯ ವಿಷಯವನ್ನಾಗಿ ತೆಗೆದುಕೊಂಡು ಅಧ್ಯಯನ ಮಾಡಿದವರು ಎಲಿಜೆಬೆತ್ ಮರ್ಕಲಿಂಗರ್. ಇವರು ತಮ್ಮ ಸಂಶೋಧನೆಯ ಮಹಾಪ್ರಬಂಧವನ್ನು 1984ರಲ್ಲಿ Indian Islamic Architecture– Deccan ಶೀರ್ಷಿಕೆಯಲ್ಲಿ ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರಕಾಶನದಿಂದ ಪ್ರಕಟಿಸಿದರು. ಇದರಲ್ಲಿ ಬಹಮನಿಯವರ ವಾಸ್ತುಶಿಲ್ಪದ ಕುರಿತಾಗಿ ವಿಶೇಷ ಅಧ್ಯಯನದ ವಿವರಗಳನ್ನು ನೀಡಿದ್ದಾರೆ. ಕಲಬುರ್ಗಿಯ ಜುಮ್ಮಾ ಮಸೀದಿಯ ರಚನಾ ಶೈಲಿ ಹಾಗೂ ಅದರ ವೈಶಿಷ್ಟ್ಯತೆ ಕುರಿತಾಗಿಯೂ ಇಲ್ಲಿ ಚರ್ಚಿಸಿದ್ದಾರೆ. ಇದೇ ಲೇಖಕರು ಮುಂಬೈನ 'ಮಾರ್ಗ್' (MARG) ನಿಯತಕಾಲಿಕೆಯು (1986) ಹೊರತಂದ Islamic Heritage of Deccan ಎಂಬ ವಿಶೇಷ ಸಂಚಿಕೆಯಲ್ಲಿ ಬಹಮನಿ ಕಾಲದ ಕಲಬುರ್ಗಿಯಲ್ಲಿನ ವಾಸ್ತುಶಿಲ್ಪಕಲೆಯ ಬೆಳವಣಿಗೆಯ ಬಗ್ಗೆ ಸಂಶೋಧನಾತ್ಮಕ ಲೇಖನವನ್ನು ಪ್ರಕಟಿಸಿದ್ದಾರೆ. ಇದರಲ್ಲಿ 1797ರಲ್ಲಿ ಮೆಕೆಂಜಿ ರಚಿಸಿದ್ದ ಹಳೆಯ ವರ್ಣಚಿತ್ರಗಳನ್ನು ಹಾಗೂ ನಕ್ಷೆಗಳನ್ನು ಪ್ರಕಟಿಸಿದ್ದಾರೆ.

1985ರಲ್ಲಿ ಎಸ್.ಕೆ. ಜೋಶಿ ಅವರು ಪ್ರಕಟಿಸಿದ Defence Architecture in Early Karnataka ಕೃತಿಯಲ್ಲಿ ಬಹಮನಿ ಕಾಲದ ರಕ್ಷಣಾ ವ್ಯವಸ್ಥೆಯ ಬಗ್ಗೆ ವಿವರಿಸುತ್ತಾ ಕಲಬುರ್ಗಿಯ ಕೋಟೆಯ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ (Joshi 1985).

ಶಂಭುಲಿಂಗ ವಾಣಿ ಅವರು 1990ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಇತಿಹಾಸ ವಿಭಾಗಕ್ಕೆ Gulbarga City and Its Monuments ಎಂಬ ವಿಷಯದ ಮೇಲೆ ಎಂ.ಫಿಲ್ ಸಂಶೋಧನಾ ಪ್ರಬಂಧವನ್ನು ಸಲ್ಲಿಸಿದ್ದಾರೆ ಇದರಲ್ಲಿ ಇವರು ಕಲಬುರ್ಗಿ ನಗರದ ಬಹಮನಿ ಮತ್ತು ತದನಂತರ ಆಳಿದ ವಿವಿಧ ಶಾಹಿ ಮನೆತನಗಳ ವಾಸ್ತುಶಿಲ್ಪ ಸ್ಮಾರಕಗಳ ಕುರಿತಾಗಿ ಸಂಗ್ರಹಿಸಿ ಅವುಗಳ ಬಗ್ಗೆ ವಿಶ್ಲೇಷಣಾತ್ಮಕವಾದ ದೀರ್ಘ ಪ್ರಬಂಧವನ್ನು ರಚಿಸಿ ಸಲ್ಲಿಸಿದ್ದಾರೆ. ನಗರದಲ್ಲಿ ದೊರೆಯುವ ಐತಿಹಾಸಿಕ ಸ್ಮಾರಕಗಳನ್ನು ಅಧ್ಯಯನ ನಡೆಸಿರುವ ಅವರು ಬಹಮನಿ ಮತ್ತು ಆದಿಲ್ ಶಾಹಿ ಸುಲ್ತಾನರು ನೀಡಿದ ಕೊಡುಗೆಗಳನ್ನು ಕಟ್ಟಿಕೊಟ್ಟಿದ್ದಾರೆ (Vani 1990).

1992ರಲ್ಲಿ Firuzabad - Palace City of Deccan ಪ್ರಕಟಿಸಿದ ಜಾರ್ಜ್ ಮಿಶೆಲ್ ಅವರ ಕೃತಿಯು ಬಹಮನಿ ವಾಸ್ತುಶಿಲ್ಪ ಕಲೆಯ ಅಧ್ಯಯನಕ್ಕೆ ಮುಖ್ಯವಾದ ಆಕರವಾಗಿದೆ. ಕಲಬುರ್ಗಿಯ ಹತ್ತಿರದ ಭೀಮಾ ನದಿ ದಂಡೆಯ ಮೇಲೆ ಕ್ರಿ.ಶ. 1410ರ ದಶಕದಲ್ಲಿ ನಿರ್ಮಿಸಿದ ಫಿರೋಜಾಬಾದ ಕೋಟೆಯುಕ್ತ ನಗರದಲ್ಲಿರುವ ಅವಶೇಷಗಳ ಸಮಗ್ರ ಅಧ್ಯಯನ ಇದಾಗಿದೆ. ಬಹಮನಿ ಸುಲ್ತಾನರು ನಿರ್ಮಿಸಿದ ಕಲಬುರ್ಗಿ, ಫಿರೋಜಾಬಾದ, ಬೀದರ ನಗರಗಳ ತೌಲನಿಕ ಅಧ್ಯಯನವನ್ನು ಮಿಶೆಲ್ ಕೈಕೊಂಡಿದ್ದಾರೆ. ಕಲಬುರ್ಗಿ ನಗರದ ರಚನೆಯ ಮೇಲೆ ಪರ್ಶಿಯನ್ ಅಥವಾ ಮಧ್ಯಕಾಲೀನ ಮಧ್ಯ-ಏಶಿಯಾ ನಗರಗಳ ರಚನೆಯ ಪ್ರಭಾವವನ್ನು ಅವರು ಗುರುತಿಸಿದ್ದಾರೆ (Michell et. al. 1992).

1997ರಲ್ಲಿ ಎಂ.ಬಿ.ಪಾಟೀಲ ಅವರ ಮುಖ್ಯ ಸಂಪಾದಕತ್ವದಲ್ಲಿ ಪರಿಷ್ಕೃತ ಗುಲಬರ್ಗಾ ಜಿಲ್ಲಾ ಗೆಜೆಟಿಯರ್ ಸಂಪುಟವನ್ನು ಪ್ರಕಟಿಸಲಾಯಿತು. ಇದರಲ್ಲಿ ಈ ಹಿಂದೆ ಪ್ರಕಟಿಸಲಾಗಿದ್ದ ಕೋಟೆ, ಮಸೀದಿ, ದರ್ಗಾಗಳ ಮಾಹಿತಿಗಳಲ್ಲದೆ, ಹೊಸದಾಗಿ ಸಂಶೋಧನೆಯಾದ ಇನ್ನಿತರ ಸ್ಮಾರಕರಗಳ ಬಗ್ಗೆ ಮತ್ತು ಸಂಶೋಧನಾ ವಿಷಯಗಳನ್ನು ಆಧರಿಸಿ ವಿಸ್ತೃತವಾದ ಮಾಹಿತಿಗಳನ್ನು ನೀಡಲಾಗಿದೆ. ಮುಖ್ಯವಾಗಿ ಆದಿಲ್ ಶಾಹಿಗಳ ಕಾಲದ ಹಿರಾಪುರ ಮಸೀದಿ ಮತ್ತು ಬಾವಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇಲ್ಲಿ ನೋಡಬಹುದು (ಪಾಟೀಲ 1997: 710–715).

1997ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಕರ್ನಾಟಕದ ಸಮಗ್ರ ಇತಿಹಾಸ ರಚನಾ ಯೋಜನೆಯ ಅಂಗವಾಗಿ ಬಿ. ಷೇಕ್ ಅಲಿ ಅವರ ಪ್ರಧಾನ ಸಂಪಾದಕತ್ವದಲ್ಲಿ ರಚನೆಯಾದ ಕರ್ನಾಟಕ ಚರಿತ್ರೆ ಮಾಲೆ ಸಂಪುಟಗಳಲ್ಲಿ ಕರ್ನಾಟಕವನ್ನು ಆಳಿದ ಬಹಮನಿ ಸುಲ್ತಾನರ ಇತಿಹಾಸ ಮತ್ತು ಅವರ ಸಾಂಸ್ಕೃತಿಕ ಕೊಡುಗೆಗಳನ್ನು ಪ್ರತ್ಯೇಕ ಅಧ್ಯಾಯಗಳಲ್ಲಿ ನೀಡಿದ್ದಾರೆ. ಕರ್ನಾಟಕ ಚರಿತ್ರೆ ಮಾಲೆ-4ರಲ್ಲಿ ಬಹಮನಿ ಸುಲ್ತಾನರ ಚರಿತ್ರೆ ಮತ್ತು ಅವರ ಸಾಂಸ್ಕೃತಿಕ ಕೊಡುಗೆಗಳ ಅಧ್ಯಾಯಗಳು ಪ್ರಕಟವಾಗಿವೆ. ಈ ಸಂಪುಟದ ಲೇಖಕರೂ ಆದ ಬಿ. ಷೇಕ್ ಅಲಿ ಅವರು ಬಹಮನಿ ಸುಲ್ತಾನರ ಸುದೀರ್ಘ ಇತಿಹಾಸವನ್ನು ಇದರಲ್ಲಿ ನೀಡಿದ್ದಾರೆ. ಕಲಬುರ್ಗಿಯಲ್ಲಿ ಬಹಮನಿ ಸುಲ್ತಾನರ ಕಾಲದ ವಾಸ್ತುಶಿಲ್ಪ ಕಲೆಯ ಬೆಳವಣಿಗೆ ಮತ್ತು ಇಲ್ಲಿಯ ಸ್ಮಾರಕಗಳ ಮಹತ್ವತೆಯ ಕುರಿತು ಚರ್ಚಿಸಿದ್ದಾರೆ (ಷೇಕ್ ಅಲಿ 1997).

2000ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಕರ್ನಾಟಕದ ಕೋಟೆಗಳು ಸಂಪುಟ–1 ರಲ್ಲಿ ಚೆನ್ನಬಸಪ್ಪ ಪಾಟೀಲ ಅವರು ಕಲಬುರ್ಗಿ ಕೋಟೆಯ ಕುರಿತಾಗಿ ಒಂದು ಅಧ್ಯಾಯವನ್ನು ಮೀಸಲಿಟ್ಟಿದ್ದಾರೆ. ಇವರು ಕ್ಷೇತ್ರಕಾರ್ಯವನ್ನು ಆಧರಿಸಿ ಕೋಟೆಯ ರಚನಾ ಶೈಲಿ, ಅದರ ವಿಸ್ತಾರ ಮತ್ತು ಬಹಮನಿಗಳು ಅಳವಡಿಸಿದ ತಂತ್ರಜ್ಞಾನದ ಬಗ್ಗೆ ವಿವರಣೆ ನೀಡಿದ್ದಾರೆ. (ಪಾಟೀಲ 2000)

2002ರಲ್ಲಿ ಹೆಚ್. ಚಂದ್ರಶೇಖರ್ ಅವರು ಕಲಬುರ್ಗಿ ಕೋಟೆಯ ದಕ್ಷಿಣ ಗೋಡೆಯಲ್ಲಿ ಕಂಡು ಬರುವ ಪ್ರಾಚೀನ ಕಾಲದ ದೇವಾಲಯಗಳ ಕಂಬಗಳು, ಬೋಧಿಗೆಗಳನ್ನು ಗುರುತಿಸಿ ಅವುಗಳನ್ನು ಕುರಿತು ಲೇಖನವನ್ನು ಪ್ರಕಟಿಸಿದ್ದಾರೆ. ಕೋಟೆಯ ದಕ್ಷಿಣದ ಅಂಚಿನಲ್ಲಿ ಹಳೆಯ ದೇಗುಲದ ಅವಶೇಷಗಳಿವೆ. ಅವುಗಳನ್ನು ಆಧರಿಸಿ ಇತಿಹಾಸ ದರ್ಶನ ಸಂಪುಟ–18ರಲ್ಲಿ 'ಚಾಲುಕ್ಯರ ಕಾಲದ ತ್ರಿಕೂಟ ದೇವಾಲಯ' ಎಂಬ ಲೇಖನವನ್ನು ಅವರು ಪ್ರಕಟಿಸಿದ್ದಾರೆ. ಪ್ರಾಚೀನ ದೇಗುಲದ ಕಂಭ, ಬೋಧಿಗೆಗಳು ಮತ್ತು ಅಧಿಷ್ಠಾನದ ಅವಶೇಷಗಳು ಕೋಟೆಯ ಗೋಡೆಯಲ್ಲಿರುವುದನ್ನು ಆಧರಿಸಿ ಅವರು ಈ ನಿರ್ಣಯಕ್ಕೆ ಬಂದಿದ್ದಾರೆ. ಕಲಬುರ್ಗಿ ಪರಿಸರದ ಪ್ರಾಚೀನ ಶಿಲಾಶಾಸನದಲ್ಲಿ ಉಲ್ಲೇಖವಾಗುವ ಸ್ವಯಂಭು ತ್ರಿಕೂಟ ದೇಗುಲದ ಅವಶೇಷವೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೇ ಇದೊಂದು ಬಹಮನಿ ಪೂರ್ವದ ಕಲ್ಯಾಣ ಚಾಳುಕ್ಯರ ದೇಗುಲದ ಮೂರು ದಿಕ್ಕುಗಳಲ್ಲಿದ್ದ ನವರಂಗ ಮಂಟಪಗಳಿವು ಎಂದು ಅದರ ನಕ್ಷೆಯ ಮೂಲಕ ವಿವರಿಸಿದ್ದಾರೆ (ಚಂದ್ರಶೇಖರ 2002:225). ಆದರೆ ಇದು ದಕ್ಷಿಣ ದಿಕ್ಕಿನ ದ್ವಾರ. ಕೋಟೆಯ ಒಳಸುತ್ತಿನ ಗೋಡೆಯಲ್ಲಿ ಕಂಡು ಬರುವ ದ್ವಾರವು ಪ್ರಾಚೀನ ದೇಗುಲದ ಅವಶೇಷಗಳಾದ ಕಂಭ, ಬೋದಿಗೆ, ಮತ್ತಿತ್ತರ ಶಿಲ್ಪಗಳ ಅವಶೇಷಗಳನ್ನು ಬಳಸಿಕೊಂಡು ದ್ವಾರದ ಜಗುಲಿಗಳನ್ನು ನಿರ್ಮಿಸಲಾಗಿದೆ. ಇದೇ ತೆರನಾದ ಪುರಾತನ ದೇಗುಲದ ಕಂಬಗಳನ್ನು ಬಳಸಿಕೊಂಡು ನಿರ್ಮಿಸಿದ ಮತ್ತೊಂದು ದ್ವಾರವನ್ನು ಇದೇ ಕೋಟೆಯ ಪಶ್ಚಿಮ ದ್ವಾರದಲ್ಲಿಯೂ ಕಾಣಬಹುದು.

ಜಾರ್ಜ್ ಮಿಶೆಲ್ ಮತ್ತು ಮಾರ್ಕ ಝೆಬ್ರವಸ್ಕಿ ಜೊತೆಯಾಗಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಪ್ರಕಾಶನದಿಂದ 2004ರಲ್ಲಿ Architecture and Art of Deccan Sultanates ಕೃತಿಯನ್ನು ಪ್ರಕಟಿಸಿದರು. ಇದರಲ್ಲಿ ಕಲಬುರ್ಗಿಯ ಕೋಟೆ, ಜುಮ್ಮಾ ಮಸೀದಿ, ಶಹಾಬಜಾರ ಮಸೀದಿಗಳು, ಗೋರಿಗಳ ಮತ್ತು ದರ್ಗಾಗಳ ಕುರಿತಂತೆ ಸಂಶೋಧನಾತ್ಮಕವಾದ ವಿವರಣೆಗಳನ್ನು ನೀಡಿದ್ದಾರೆ. ಬಹಮನಿ ಸುಲ್ತಾನರ ವಾಸ್ತುಶಿಲ್ಪ ಕಲೆಯ ಹಿನ್ನಲೆಯಲ್ಲಿ ಕಲಬುರ್ಗಿಯ ಸ್ಮಾರಕಗಳನ್ನು ಗುರುತಿಸುವುದನ್ನು ಇವರು ಇಲ್ಲಿ ವೈಜ್ಞಾನಿಕವಾಗಿ ಕೈಕೊಂಡಿದ್ದಾರೆ.

2008ರಲ್ಲಿ ಕರ್ನಾಟಕ ಪುರಾತತ್ವ, ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯವರು Gulbarga ಎಂಬ ಕಿರು ಹೊತ್ತಿಗೆಯನ್ನು ಪ್ರವಾಸಿಗರ ಮಾಹಿತಿಗಾಗಿ ಪ್ರಕಟಿಸಿದ್ದಾರೆ. ಮಧ್ಯಕಾಲೀನ ಐತಿಹಾಸಿಕ ಸ್ಮಾರಕಗಳಲ್ಲದೆ ಆಧುನಿಕ ಕಾಲದ ಕಟ್ಟಡಗಳ ವಿವರಣೆಗಳನ್ನು ಇದರಲ್ಲಿ ನೀಡಿದ್ದಾರೆ. ಸುಂದರವಾದ ಛಾಯಾಚಿತ್ರಗಳೊಂದಿಗೆ ಪ್ರಕಟಿಸಿದ ಈ ಕಿರುಹೊತ್ತಗೆ ತುಂಬಾ ಆಕರ್ಷಕವಾಗಿದೆ (Machkanur et. al. 2008).

ಇತ್ತೀಚೆಗೆ ಜೆನ್ನೆಫರ್ ಹೊವೆಸ್ ಎಂಬ ವಿದ್ವಾಂಸರು (2010ರಲ್ಲಿ) Illustrating India- The Early Colonial Investigations of Colin Mackenzie (1784–1821) ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಕೊಲೀನ್ ಮೆಕೆಂಜಿ 1784 ರಿಂದ 1821ರವರೆಗೆ ದಕ್ಷಿಣ ಭಾರತದಲ್ಲಿ ಕೈಕೊಂಡಿದ್ದ ಅನ್ವೇಷಣೆ ಮತ್ತು ಐತಿಹಾಸಿಕ ಅವಶೇಷಗಳ ಕುರಿತಾಗಿ ಅಧ್ಯಯನಗಳನ್ನು ನಡೆಸಿದ್ದಾರೆ. ಇದು ಆಕ್ಸ್‌ಪರ್ಡ ಯುನಿರ್ವಸಿಟಿ ಪ್ರಕಾಶನದಿಂದ 2010ರಲ್ಲಿ ಪ್ರಕಟವಾಗಿದೆ. ಕಲಬುರ್ಗಿ ನಗರಕ್ಕೆ 1797ರಲ್ಲಿ ಕೋಲಿನ್ ಮೆಕೆಂಜಿ ಅವರು ಭೇಟಿ ನೀಡಿ ಮಧ್ಯಕಾಲೀನ ಸ್ಮಾರಕಗಳ ಅನ್ವೇಷಣೆ ಕೈಕೊಂಡಿದ್ದಾರೆ. ಅಲ್ಲದೆ ಸಂಗ್ರಹಿಸಿದ ಮಾಹಿತಿಗಳನ್ನು ಹಲವು ನಕ್ಷೆ, ವರ್ಣಚಿತ್ರಗಳ ಮೂಲಕ ವಿವರಿಸಿದ್ದಾರೆ (Howes 2010:38-45).

ಲಂಡನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಆಫ್ರಿಕನ್ ಆ್ಯಂಡ್ ಓರಿಯಂಟಲ್ ಸ್ಟಡೀಸ್ ವಿಭಾಗದಲ್ಲಿ ಇತ್ತೀಚೆಗೆ Religious and Royal Archiecture of the Early Bahamani Period (1347-1423) Deccan, India ಎಂಬ ವಿಷಯದ ಮೇಲೆ ಹೆಲೆನ್ ಫಿಲೋನ್ ಅವರು 2005ರಲ್ಲಿ ಪಿಹೆಚ್.ಡಿ.ಯನ್ನು ಮಾಡಿದ್ದಾರೆ. ಇವರ ಸಂಶೋಧನೆಯು ಕಲಬುರ್ಗಿಯಲ್ಲಿ 76 ವರ್ಷಗಳ ಕಾಲ ಆಳ್ವಿಕೆ ಮಾಡಿದ ಬಹಮನಿ ಸುಲ್ತಾನರ ಕಾಲದ ವಾಸ್ತುಶಿಲ್ಪ ಹಾಗೂ ನಗರ ರಚನೆಯ ಕುರಿತಾದ ವಿಶೇಷ ಅಧ್ಯಯನವಾಗಿದೆ (Philon 2005). ಕಲಬುರ್ಗಿಯಿಂದ ಆಳಿದ ಬಹಮನಿ ಸುಲ್ತಾನರ ಆಳ್ವಿಕೆ ಮೂಲತಃ ದೆಹಲಿಯ ತುಘಲಕ್ ವಾಸ್ತುಶಿಲ್ಪ ಕಲೆಯ ಪ್ರಭಾವ ಹೊಂದಿದ್ದರೂ, ಟರ್ಕಿಸ್ಥಾನದ ವಾಸ್ತುಶಿಲ್ಪಕಲೆಯ ಲಕ್ಷಣಗಳನ್ನು ಮೈಗೂಡಿಸಿಕೊಂಡು ಬೆಳೆದಿದೆ ಎಂದು ವಿವಿಧ ಅವಶೇಷಗಳನ್ನು ಆಧರಿಸಿ ವಿವರಿಸಿದ್ದಾರೆ. ಕಲಬುರ್ಗಿ ನಗರದ ರಚನೆಯ ಬಗ್ಗೆ ಬಹಮನಿಗಳ ಕಾಲದಲ್ಲಿ ರಚನೆಗೊಂಡ ಕೋಟೆ, ನಗರ ಹಾಗೂ ಹೊಸದಾಗಿ ನಿರ್ಮಿಸಿದ ಉಪನಗರಗಳನ್ನು ಸಮಗ್ರವಾಗಿ ಪರಿಗಣಿಸಿ ಅಧ್ಯಯನ ಮಾಡುವುದು ಅಗತ್ಯವೆಂದು ಫಿಲೋನ್ ಅವರು ತಮ್ಮ ಸಂಶೋಧನೆಯಲ್ಲಿ ವಿವರಿಸಿದ್ದಾರೆ. ಇದಲ್ಲದೆ ಇದೇ ಲೇಖಕರು ಹೈದರಾಬಾದಿನ ಡೆಕ್ಕನ್ ಹೆರಿಟೇಜ್ ಸಂಸ್ಥೆಯ ವತಿಯಿಂದ *Gulbarga, Bidar and Bijapur* ಎಂಬ ಶೀರ್ಷಿಕೆಯ ಕಿರುಹೊತ್ತಿಗೆಯನ್ನೂ ಪ್ರಕಟಿಸಿದ್ದಾರೆ. ಇದರಲ್ಲಿ ಅಪರೂಪದ ಚಿತ್ರಗಳನ್ನು ನೀಡಿದ್ದಾರೆ (ನೋಡಿ: Philon 2011).

ದೇವು ಪತ್ತಾರ ಅವರ ಬಹಮನಿ ಸಾಮ್ರಾಜ್ಯ- ಪರ್ಷಿಯಾದ ಪ್ರಭಾವ ಪ್ರೇರಣೆ ಕೃತಿಯು ಬಹಮನಿ ಆಳ್ವಿಕೆಯಲ್ಲಿ ಪರ್ಶಿಯಾದ ಕಲೆ ಮತ್ತು ಸಂಸ್ಕೃತಿಗಳು ಹೇಗೆ ಮೂಡಿಬಂದವು ಮತ್ತು ಅವು ನಾಡಿನ ಸಂಸ್ಕೃತಿಯೊಂದಿಗೆ ಹೇಗೆ ಮೈಗೂಡಿಸಿಕೊಂಡವು ಎಂಬುದನ್ನು ಐತಿಹಾಸಿಕ ಆಕರಗಳನ್ನು ಆಧರಿಸಿ ವಿವರಿಸಿದ್ದಾರೆ. ಕಲಬುರ್ಗಿಯಲ್ಲಿ ಪ್ರಾರಂಭವಾದ ಬಹಮನಿಯವರ ಆಡಳಿತ ಮತ್ತು ಕಲೆಯಲ್ಲಿ ಪರ್ಶಿಯಾ ಕಲೆಯು ಬೆಳೆದು ಬಂದ ವಿಧಾನವನ್ನು ಅವರು ಇಲ್ಲಿ ವಿವರಿಸಿದ್ದಾರೆ (ದೇವು ಪತ್ತಾರ 2015).

ಬೋಡೆ ರಿಯಾಜ್ ಅಹ್ಮದ ತಿಮ್ಮಾಪುರಿ ಅವರು ಪ್ರೇಮ ಸೂಫಿ ಬಂದೇ ನವಾಜ್ ಎಂಬ ಕೃತಿಯನ್ನು ಇತ್ತೀಚೆಗೆ ಪ್ರಕಟಿಸಿದ್ದಾರೆ. ಬಹಮನಿ ಆಳ್ವಿಕೆಯಲ್ಲಿ ಅತ್ಯಂತ ಪ್ರಭಾವಿ ಸಂತನೆಂದೇ ಗುರುತಿಸಲ್ಪಡುತ್ತಿದ್ದ ಸೈಯದ್ ಮಹ್ಮದ್ ಹುಸೇನಿ ಘೆಸುದರಾಜ್ ಅಥವಾ ಬಂದೇನವಾಜ್ ಅವರ ಜೀವನ ಮತ್ತು ಅವರ ಸಾಧನೆಯ ಕುರಿತು ಈ ಕೃತಿಯಲ್ಲಿ

ವಿವರಿಸಿದ್ದಾರೆ. ಈ ಕೃತಿಯಲ್ಲಿ ಲೇಖಕರು ಬಹಮನಿ ಕಾಲದಲ್ಲಿ ಚಿಸ್ತಿಯಾ ಸೂಫಿ ಪರಂಪರೆಯು ಬಂದೇನವಾಜ್ ಅವರ ಮಾರ್ಗದರ್ಶನದಲ್ಲಿ ಕಲಬುರ್ಗಿಯಲ್ಲಿ ಹೇಗೆ ಪಸರಿಸಿತು ಎಂಬುದನ್ನು ಮತ್ತು ಬಂದೇನವಾಜ್ ತಮ್ಮ ಬರವಣಿಗೆಗಳ ಮೂಲಕ ತಾತ್ವಿಕ ಜೀವನವನ್ನು ಹೇಗೆ ನಡೆಸಿದರು ಎಂಬುದನ್ನು ಕಟ್ಟಿಕೊಟ್ಟಿದ್ದಾರೆ. ಇದು ಸಾಹಿತ್ಯಿಕ–ಸಾಂಸ್ಕೃತಿಕ ಮಹತ್ವದ ಜೊತೆಗೆ ಐತಿಹಾಸಿಕ ಪ್ರಮುಖ್ಯತೆಯನ್ನೂ ಒಳಗೊಂಡಿದೆ (ಬೋಡೆ 2018).

ಬಹಮನಿ ಪೂರ್ವದ ಕಲಬುರ್ಗಿ

ಈ ಹಿಂದೆ ಉಲ್ಲೇಖಿಸಿದಂತೆ, ಕಲಬುರ್ಗಿಯು ಪ್ರಾಚೀನ ಕಾಲದಿಂದಲೂ ಒಂದು ಆಯಕಟ್ಟಿನ ಸ್ಥಳವಾಗಿದ್ದು ಇದನ್ನು ಕಲ್ಯಾಣ ಚಾಲುಕ್ಯರ ಸರಡಗಿಯ ಕ್ರಿ.ಶ. 1110ರ ಶಾಸನದಲ್ಲಿ ಉಲ್ಲೇಖಿಸಿದಂತೆ ಕಲಂಬುರಗೆ ಎಂದು ಕರೆಯಲಾಗುತ್ತಿತ್ತು. ಇದಕ್ಕೆ ಪೂರಕವಾದಂತೆ ಅಳಂದ ನಾಕಾದ ಬಳಿಯ ಬಲಭಾಗದಲ್ಲಿ ಹಳೆಯ ಪ್ರಾಚೀನ ದೇಗುಲವಿದೆ. ಇಂದು ರಾಮಲಿಂಗೇಶ್ವರ ದೇಗುಲವೆಂದು ಕರೆಯುವ ಈ ದೇವಸ್ಥಾನ ಕಲ್ಯಾಣ ಚಾಲುಕ್ಯರ ಶೈಲಿಯ ಕಂಬಗಳಿಂದ ಕೂಡಿದೆ. ಇದರ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಪ್ರಾಚೀನ ಊರು ಇತ್ತು ಎಂದು ಹೇಳಬಹುದು. ಆದರಂತೆ ಕೋಟೆಯ ಉತ್ತರದ ಹೊರವಲಯದಲ್ಲಿ ಶಹಾಬಜಾರದಿಂದ ಪ್ರಕಾಶ್ ಟಾಕೀಸ್‌ಗೆ ಹೋಗುವ ರಸ್ತೆಯ ಬದಿಯಲ್ಲಿ ಹನುಮಂತನ ದೇವಾಲಯವಿದೆ. ಇದರ ಒಳಾವರಣದಲ್ಲಿ ಪ್ರಾಚೀನ ಶಿಲ್ಪಗಳನ್ನು ಇರಿಸಲಾಗಿದೆ. ಇವು ಕೂಡ ಬಹಮನಿ ಪೂರ್ವದ ಶಿಲ್ಪಗಳಾಗಿವೆ. ಈ ಪರಿಸರದ ಆಸುಪಾಸಿನಲ್ಲಿದ್ದ ಪ್ರಾಚೀನ ದೇಗುಲದ ಅವಶೇಷಗಳಿವು ಎಂದು ಗುರುತಿಸಬಹುದು. ವಿಜಯನಗರ ಸಾಮ್ರಾಜ್ಯದ ಸೇನಾ ದಂಡನಾಯಕನಾಗಿದ್ದ ಲಕ್ಕಣ್ಣ ದಂಡೇಶನು ಕಲಬುರ್ಗಿ ಪಟ್ಟಣವನ್ನು ತನ್ನ ಕೃತಿಯಾದ ಶಿವತತ್ವ ಚಿಂತಾಮಣಿಯಲ್ಲಿ ಉಲ್ಲೇಖಿಸಿದ್ದಾನೆ. ಈ ಕೃತಿಯ 38ನೇ ಸಂಧಿ, 170ರ ಪದ್ಯದಲ್ಲಿ "....ಕಲುಬರಿಗೆಲಿ ಎಲೆಗಾಯಕದ ಹೆಗ್ಗಿಸೆಟ್ಟಿಯರ ಲಿಂಗಪ್ಪ ಬಲ್ಲಿಕೆಯ ಮದನವೈರಿಯ ಭಕ್ತೆ ಮಾಚಾಯಿ ತಾಯಿಗಳ ಚರಣಾಂಬುಜಕ್ಕೆ ಶರಣು" ಎಂಬ ಉಲ್ಲೇಖವಿದೆ (ಬಸಪ್ಪ 1960: 422). ಇದರಲ್ಲಿ ಹೆಗ್ಗಿಸೆಟ್ಟಿ ಎಂಬ ಉಲ್ಲೇಖವಿದ್ದು, ಸೆಟ್ಟಿ ಅಥವಾ ವರ್ತಕರು ನೆಲೆಸಿದ್ದ ಪಟ್ಟಣವಾಗಿತ್ತು ಎಂಬುದು ಇದರಿಂದ ಗೊತ್ತಾಗುತ್ತದೆ. ಅದರಂತೆ ಒಡಿಸ್ಸಾದ ಗಜಪತಿ ಅರಸ ರಘುದೇವನ ವಾರಂಗಲ್ಲಿನಲ್ಲಿ ದೊರೆತ ಶಾಸನದಲ್ಲಿ (ಕ್ರಿ.ಶ. 1460ರ) ಕಲಬುರ್ಗಿಯ ಉಲ್ಲೇಖ ಕಂಡುಬರುತ್ತದೆ. ಅದರಲ್ಲಿ ".... ಜಂಬು ದ್ವೀಪೆ ಭರತ ವರ್ಷೆ ಆಂದ್ರದೇಶಾಂತರಗ (ಪಶ್ಚಮ) ದಿಶ ಭಾಗೆ ಕಲ(ಲು)ಬರಗಾ ಸುರತಾಣ ಉಮ್ಮೆನುಷಾಹ್..." ಎಂಬ ಉಲ್ಲೇಖ ಕಾಣುತ್ತೇವೆ (Sircar 1963: 127). ಜುಂಬು ದ್ವೀಪದ ಭರತ ವರ್ಷದ ಆಂದ್ರ ದೇಶದ ಪಶ್ಚಿಮ ದಿಕ್ಕಿನಲ್ಲಿರುವ ಕಲುಬರಗಾದ ಹುಮಾಯುನ್ ಸುಲ್ತಾನ ಎಂದು ಇದರ ಅರ್ಥ. ಬಹಮನಿ ಅರಸ ಹುಮಾಯುನ್‌ನ (1458–61) ಹೆಸರನ್ನು ಇದು ಉಲ್ಲೇಖಿಸುತ್ತದೆ. ಇವರು ಬೀದರನಿಂದ ಆಳ್ವಿಕೆ ನಡೆಸಿದರೂ ಅವರ ಮೂಲ ಸ್ಥಳವಾದ ಕಲಬುರ್ಗಿಯಿಂದ ಗುರುತಿಸಲ್ಪಡುತ್ತಿದ್ದರೆಂದು ಹೇಳಬಹುದು. ಲಕ್ಕಣ್ಣ ದಂಡೇಶ ಉಲ್ಲೇಖಿಸುವ ಎಲೆಗಾಯಕದ ಹೆಗ್ಗಿಸೆಟ್ಟಿಯರ ಲಿಂಗಪ್ಪನು ವಾಸಿಸುತ್ತಿದದ ಪಟ್ಟಣವು ಇದಾಗಿತ್ತು. ಈ ಎಲ್ಲಾ ದಾಖಲೆಗಳನ್ನು ಆಧರಿಸಿ ಪ್ರಾಚೀನ ಶಾಸನಗಳಲ್ಲಿ ಮತ್ತು ಸಾಹಿತ್ಯದಲ್ಲಿ ಉಲ್ಲೇಖವಾದ ಕಲಂಬುರಗೆ ಪಟ್ಟಣವು ಪ್ರಾಯಶಃ ಶಹಾಬಜಾರದ ಆಸುಪಾಸಿನ ಸ್ಥಳದಲ್ಲಿ ಇದ್ದಿರಬಹುದೆಂದು ಊಹಿಸಬಹುದು.

ಕಲಬುರ್ಗಿ ಒಳಗೊಂಡಂತೆ ರಾಯಚೂರು, ಬೀದರ ಪ್ರದೇಶಗಳು ವಾರಂಗಲ್ಲಿನ ಕಾಕತೀಯ ಅರಸರ ಆಳ್ವಿಕೆಗೆ ಒಳಪಟ್ಟಿದ್ದವು. ಕ್ರಿ.ಶ. 12ನೇ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಕತೀಯರು ತಮ್ಮ ರಾಜ್ಯದ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದ್ದರು. ಕಲಬುರ್ಗಿಯು ಕೂಡ ಕಾಕತೀಯರ ಆಯಕಟ್ಟಿನ ಕೋಟೆಯಾಗಿತ್ತು. ಆದರೆ ಇಲ್ಲಿಯ ಕೋಟೆಯು ಮಣ್ಣಿನಿಂದ ಕಟ್ಟಲ್ಪಟ್ಟಿತ್ತು. ಈ ಕೋಟೆಯ ಬಗ್ಗೆ ವಿಶೇಷ ಅಧ್ಯಯನ ಕೈಕೊಂಡ ಫಿಲೋನ್ ಅವರು ಗುರುತಿಸಿದಂತೆ ಬಹಮನಿ ರಾಜ್ಯದ ಸಂಸ್ಥಾಪಕ ಅಲ್ಲಾವುದ್ದೀನ್ ಶಹಾ ಮೊದಲಬಾರಿಗೆ ಕಲಬುರ್ಗಿಗೆ ಬಂದಾಗ ಇಲ್ಲಿರುವ ಮಣ್ಣಿನ ಕೋಟೆಯನ್ನು ಗಮನಿಸಿದನೆಂದು ಅವರು ವಿವರಿಸಿದ್ದಾರೆ (Philon 2005). ವಾರಂಗಲ್ಲಿನ ಕಾಕತೀಯರ ಕಾಲದಲ್ಲಿ ಮಣ್ಣಿನಿಂದ ಕೋಟೆಗಳನ್ನು ನಿರ್ಮಿಸುವ ಸಂಪ್ರದಾಯ ಇರುವುದನ್ನು ಗುರುತಿಸಬಹುದಾಗಿದೆ. ಕಾಕತೀಯರ ರಾಜಧಾನಿಯಾಗಿದ್ದ ವಾರಂಗಲ್ಲಿನಲ್ಲಿಯೇ ಕೋಟೆಯ ಮೊದಲ ಸುತ್ತಿನ ಗೋಡೆಯನ್ನು ಮಣ್ಣಿನಿಂದ ನಿರ್ಮಿಸಲಾಗಿದೆ. ಅಲ್ಲದೆ ಬಹಮನಿಯರ ಕಾಲದ ಯಾದಗಿರ ಜಿಲ್ಲೆಯ ಸಗರದ ಕೋಟೆಯು ಕೂಡ ಮಣ್ಣಿನಿಂದ ನಿರ್ಮಿಸಲ್ಪಟ್ಟಿದೆ. ಕಲಬುರ್ಗಿಯಲ್ಲಿಯೂ ಪ್ರಸ್ತುತ ಕೋಟೆ ಇರುವ ಸ್ಥಳದಲ್ಲಿಯೇ ಮಣ್ಣಿನ ಕೋಟೆಯನ್ನು ನಿರ್ಮಿಸಲಾಗಿತ್ತು. ಹಳೆಯ ಮಣ್ಣಿನ ಕೋಟೆಯನ್ನು ಬಹಮನಿಯರು ಕಲ್ಲಿನಿಂದ ನಿರ್ಮಿಸಿರುವ ಸಾಧ್ಯತೆಯನ್ನು ಗುರುತಿಸಬಹುದಾಗಿದೆ. ಅದರಂತೆ ಬಹಮನಿ ಪೂರ್ವ ಕಾಲದ ಕಲಂಬುರಗೆ ಪಟ್ಟಣವು ಶಹಾಬಜಾರದ ಮಲಂಗ್ ಹೋಟೆಲ್‌ನಿಂದ ಈಗಿನ ಆಳಂದ ನಾಕಾದವರೆಗೂ ವಿಸ್ತಾರವಾಗಿ ಹರಡಿರುವ ಸಾಧ್ಯತೆಗಳಿವೆ. ನಾಕಾದ ಹತ್ತಿರದಲ್ಲಿರುವ ಪುರಾತನ ರಾಮಲಿಂಗೇಶ್ವರ ದೇಗುಲ ಹಾಗೂ ಕೆಲವು ಪ್ರಾಚೀನ ಶಿಲ್ಪಗಳನ್ನು ಮುಖ್ಯ ಆಧಾರಗಳಾಗಿ ಗುರುತಿಸಬಹುದು.

ಬಹಮನಿಗಳ ರಾಜಧಾನಿ ಕಲಬುರ್ಗಿ (ಅಸನಾಬಾದ್) [1350–1426]

ದೇವಗಿರಿಯು ಬಹಮನಿ ರಾಜ್ಯ ಸ್ಥಾಪನೆಯಾದ ಹೊಸದರಲ್ಲಿ ಮೊದಲ ರಾಜಧಾನಿಯಾಗಿತ್ತು. ಇಲ್ಲಿ ಸುಮಾರು ನಾಲ್ಕು ವರ್ಷಗಳ ಕಾಲ ರಾಜ್ಯವನ್ನು ಆಳಿದರು. ಹೊಸದಾಗಿ ಸ್ಥಾಪಿತವಾದ ರಾಜ್ಯಕ್ಕೆ ಒಳ ಮತ್ತು ಹೊರ ವೈರಿಗಳ ಕಾಟ ಕಾಡದಿರಲೆಂದು ದೇವಗಿರಿಯಿಂದ ಸುರಕ್ಷಿತ ಸ್ಥಳ ಅನ್ವೇಷಣೆಯಲ್ಲಿದ್ದ ಅಲ್ಲಾವುದ್ದೀನ್ ಹಸನ್ ಶಹಾನಿಗೆ ಕಲಬುರ್ಗಿಯು ಭೌಗೋಳಿಕವಾಗಿ ಆಯಕಟ್ಟಿನ ಸ್ಥಳವೆನಿಸಿತು. 1350ರ ಸುಮಾರಿಗೆ ದೇವಗಿರಿಯನ್ನು ತೊರೆದು ಕಲಬುರ್ಗಿಯನ್ನು ಆಯ್ಕೆ ಮಾಡಿಕೊಂಡನು. ಕಲಬುರ್ಗಿಯನ್ನು ಅಸನಾಬಾದ್ ಎಂದು ಮರುನಾಮಕರಣ ಮಾಡಿದನು. ಅಲ್ಲಾವುದ್ದೀನ್‌ನ ಈ ಆಯ್ಕೆಯ ಹಿಂದೆ ದೂರದೃಷ್ಟಿ ಇತ್ತು. ಪೂರ್ವದ ತೆಲಂಗಾಣ, ದಕ್ಷಿಣದ ರಾಯಚೂರು ದೋ-ಆಬ್ ಮತ್ತು ವಿಜಯನಗರ ಹಾಗೂ ಕೊಂಕಣ ಕರಾವಳಿ ಪ್ರದೇಶಗಳು ಕಲಬುರ್ಗಿಯಿಂದ ಸಮಾನ ದೂರದಲ್ಲಿವೆ. ಇದನ್ನರಿತ ಬಹಮನಿ ಮನೆತನದ ಸಂಸ್ಥಾಪಕ ಅಲ್ಲಾವುದ್ದೀನ ಶಹಾಗೆ ಕಲಬುರ್ಗಿಯು ತುಂಬಾ ಆಯಕಟ್ಟಿನ ಹಾಗೂ ಅತಿ ಸುರಕ್ಷಿತ ಸ್ಥಳವೆನಿಸಿತ್ತು. ರಾಜಧಾನಿ ಸ್ಥಾಪಿಸಿದ ಆರಂಭದಲ್ಲಿ ಕಲಬುರ್ಗಿಯಲ್ಲಿ ಬಹಮನಿಯರು ಮೊದಲು ರಕ್ಷಣೆಗಾಗಿ ಕೋಟೆಯನ್ನು ಶಿಲೆಯಿಂದ ಭದ್ರಗೊಳಿಸಿದರು. ಅದರ ಜೊತೆಗೆ ವಿಶಾಲವಾದ ನಗರದ ರಚನೆಗೆ ತೊಡಗಿದರು. ಮೂಲತಃ ಬಹಮನಿ ಸುಲ್ತಾನರು ಮಧ್ಯಏಶಿಯ ದೇಶದಿಂದ ಬಂದವರು. ಅಲ್ಲಿಯ ವಾಸ್ತುರಚನೆಯನ್ನು ಮತ್ತು ನಗರ ನಿರ್ಮಾಣದ ಸಂಪ್ರದಾಯಗಳನ್ನು ಅನುಸರಿಸುವ ಸಂಪ್ರದಾಯವಿದೆ. ಆದರೆ ಕಲಬುರ್ಗಿಯಲ್ಲಿ ನೆಲೆಗೊಳಿಸಿದ

ಕೋಟೆ ಮತ್ತು ನಗರ ರಚನೆಗಳು ಸ್ಥಳೀಯ ಲಕ್ಷಣಗಳೊಂದಿಗೆ ಮಧ್ಯ ಏಶಿಯಾದ ನಗರ ರಚನೆಯ ಸಂಪ್ರದಾಯಗಳನ್ನು ಒಳಗೊಂಡಂತೆ ತೋರುತ್ತದೆ. ಇದರೊಂದಿಗೆ ಬಹಮನಿ ಅರಸರ ಆಶ್ರಯದೊಂದಿಗೆ ಸೂಫಿ ಸಂತರು ಈ ನಗರದಲ್ಲಿ ನೆಲೆಸಿದ್ದರಿಂದ ಅವರ ಗಾಢ ಪ್ರಭಾವವನ್ನು ನಗರ ರಚನೆಯಲ್ಲಿ ಗುರುತಿಸಬಹುದು. ರಾಜಧಾನಿ ನಗರವಾಗಿ ಉದಯಗೊಂಡ ಕಲಬುರ್ಗಿ ನಗರವು 76 ವರ್ಷಗಳ ಕಾಲ ಬಹಮನಿ ರಾಜ್ಯದ ರಾಜಧಾನಿಯಾಗಿತ್ತು. ಈ ಚಿಕ್ಕ ಅವಧಿಯಲ್ಲಿ ದಕ್ಷಿಣ ಭಾರತದ ಮಹ್ಮದೀಯ ಸಂಸ್ಕೃತಿಯ ಲಕ್ಷಣಗಳನ್ನು ಮೈಗೂಡಿಸಿಕೊಂಡು ಬೆಳೆದ ಈ ನಗರ ಹಲವು ಪ್ರಥಮಗಳಿಗೆ ಸಾಕ್ಷಿಯಾಯಿತು.

ಕಲಬುರ್ಗಿ ನಗರದಲ್ಲಿ ಮಧ್ಯಕಾಲೀನ ಸಂದರ್ಭದ ಸುಮಾರು 170ಕ್ಕೂ ಹೆಚ್ಚು ಕಟ್ಟಡಗಳಿವೆ. ಇವು ಕೋಟೆ, ಮಸೀದಿ, ಗೋರಿ, ದರ್ಗಾ, ಭಾವಿ, ರೌಜಾ, ಬಜಾರ್, ಇತ್ಯಾದಿಗಳೆಂದು ಗುರುತಿಸಬಹುದು. ಕೋಟೆಯು ಬಹಮನಿ ನಗರ ರಚನೆಯ ಕೇಂದ್ರಬಿಂದುವಾಗಿತ್ತು ಎಂದು ಹೇಳಬಹುದು. ಸುಲ್ತಾನರ ವಾಸಸ್ಥಾನ ಕೋಟೆಯಾಗಿತ್ತು. ಇದರ ಹೊರಭಾಗದ ಉತ್ತರ ಹಾಗೂ ಪೂರ್ವ ದಿಕ್ಕುಗಳಲ್ಲಿ ಬೃಹತ್ ನಗರವನ್ನು ನೆಲೆಗೊಳಿಸಲಾಗಿತ್ತು. ಈ ನಗರವು ಎರಡು ಪ್ರತ್ಯೇಕ ವಲಯಗಳಂತೆ ನಿರ್ಮಾಣವಾಗಿದ್ದವು. ಇವುಗಳನ್ನು ಪೂರ್ವ ವಲಯ ಮತ್ತು ಉತ್ತರ ವಲಯಗಳೆಂದು ಗುರುತಿಸಬಹುದು. ಬಹಮನಿ ಕಾಲದಲ್ಲಿ ಕೋಟೆ ಮತ್ತು ಎರಡು ವಲಯಗಳನ್ನು ಒಳಗೊಂಡ ನಗರ ಬಹು ವಿಸ್ತಾರವಾಗಿತ್ತು. ಈ ಕಾಲದ ಕಲಬುರ್ಗಿ ನಗರವು ಕೋಟೆಯಿಂದ ಪೂರ್ವದಲ್ಲಿ ಹಪ್ತ ಗುಂಬಜ್‌ದವರೆಗೂ ಹಾಗೂ ಪಶ್ಚಿಮದಲ್ಲಿ ಚೋರ್ ಗುಂಬಜ್‌ವರೆಗೂ ವಿಸ್ತರಿಸಿತ್ತು. ಅದೇ ರೀತಿ ಕೋಟೆಯ ದಕ್ಷಿಣಕ್ಕೆ ಈಗಿನ ಅಪ್ಪನ ಕೆರೆಯವರೆಗೆ ಹಾಗೂ ಉತ್ತರಕ್ಕೆ ಈಗಿನ ವರ್ತುಲ ರಸ್ತೆಯ ಆಚೆಯ ತಾಜ್ ಸುಲ್ತಾನಾಪುರ ಗ್ರಾಮದವರೆಗೂ ವಿಸ್ತರಿಸಿತ್ತು ಎಂದು ಬಹಮನಿ ಕಾಲದ ವಾಸ್ತುಶಿಲ್ಪದ ಅವಶೇಷಗಳನ್ನು ಆಧರಿಸಿ ಗುರುತಿಸಬಹುದಾಗಿದೆ **(ನಕ್ಷೆ–2)**.

ಕೋಟೆ

ಇಲ್ಲಿಯ ಕೋಟೆಯು ನಗರದ ಕೇಂದ್ರ ಸ್ಥಳವಾಗಿದೆ. ಸುಲ್ತಾನರ ಅರಮನೆಗಳಿಂದ ಕೂಡಿದ ಕೋಟೆಯು ಮಧ್ಯಕಾಲೀನದ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಗಕೆಗಳ ಕೇಂದ್ರವಾಗಿತ್ತು. ಇದು ಅರ್ಧ ಅಂಡಾಕೃತಿಯಲ್ಲಿ ನಿರ್ಮಿಸಲ್ಪಟ್ಟಿದೆ. ಸು. 20 ಎಕರೆ ವಿಸ್ತೀರ್ಣವನ್ನು ಹೊಂದಿರುವ ಈ ಕೋಟೆಯು ಎರಡು ಸುತ್ತಿನ ಗೋಡೆಗಳಿಂದ ನಿರ್ಮಿತವಾಗಿದೆ. ಈ ಎರಡೂ ಸುತ್ತಿನ ಗೋಡೆಗಳ ಉದ್ದ ಸು. 3 ಕಿ.ಮಿ.ಗಳಾಗಿದೆ. ಇವುಗಳಲ್ಲಿ 76ಕ್ಕೂ ಹೆಚ್ಚು ಬುರುಜು ಮತ್ತು 26 ಫಿರಂಗಿಗಳಿವೆ. ಈ ಎರಡು ಸುತ್ತಿನ ಗೋಡೆಗಳನ್ನು ಬಹುತೇಕ ಸಮನಾಂತರವಾಗಿ ನಿರ್ಮಿಸಲಾಗಿವೆ. ಮೊದಲ ಸುತ್ತಿನ ಗೋಡೆಯನ್ನು ಹೊರಸುತ್ತಿನ ಗೋಡೆಯೆಂದು ಮತ್ತು ಎರಡನೆಯ ಸುತ್ತಿನ ಗೋಡೆಯನ್ನು ಒಳಸುತ್ತಿನ ಗೋಡೆಯೆಂದು ಕರೆಯಬಹುದು. ಒಳಸುತ್ತಿನ ಗೋಡೆಯ ರಚನಾ ಶೈಲಿಯು ಹೊರಸುತ್ತಿನ ಗೋಡೆಗಿಂತಲೂ ಭಿನ್ನವಾಗಿದೆ. ಹೊರಸುತ್ತಿನ ಗೋಡೆಯು ಗಾತ್ರದಲ್ಲಿ ಒಳಸುತ್ತಿನ ಗೋಡೆಗಿಂತಲೂ ಚಿಕ್ಕದಾಗಿದೆ. ಒಳಸುತ್ತಿನ ಗೋಡೆಯಲ್ಲಿ ಅಲ್ಲಲ್ಲಿ ಚೌಕಾಕಾರದ ಬುರುಜುಗಳು ಕಾಣಿಸಿಕೊಳ್ಳುತ್ತವೆ. ಅದೇರೀತಿ ಆಯಕಟ್ಟಿನ ಸ್ಥಳದಲ್ಲಿ ದ್ವಾರಗಳನ್ನು ಅಳವಡಿಸಲಾಗಿತ್ತೆಂಬುದನ್ನು ಸೂಕ್ಷ್ಮವಾಗಿ ಗಮನಸಿದರೆ ಅರ್ಥವಾಗುತ್ತದೆ.



ನಕ್ಷೆ–2: ಬಹಮನಿ ಕಾಲದ ಕಲಬುರ್ಗಿ (ಅಸನಾಬಾದ) ಕೋಟೆ, ನಗರ ಹಾಗೂ ಸುಲ್ತಾನಾಪುರ ಉಪನಗರ



ಚಿತ್ರ–2: ಕಂದಕದೊಂದಿಗೆ ಎರಡು ಸುತ್ತಿನ ಕೋಟೆ
[ಬಲಭಾಗದಲ್ಲಿ ಒಳಸುತ್ತಿನ ಗೋಡೆಯಲ್ಲಿ ಚೌಕಾಕಾರದ ಬುರುಜು ಕಾಣಬಹುದು]

ಒಳಸುತ್ತಿನ ಗೋಡೆಯಲ್ಲಿ ನಿರ್ಮಿಸಿದ್ದ ಕೆಲವು ದ್ವಾರಗಳು ಕೋಟೆಯನ್ನು ಮಾರ್ಪಡಿಸುವ ಸಂದರ್ಭದಲ್ಲಿ ಮುಚ್ಚಲ್ಪಟ್ಟಿವೆ. ಅದೇರೀತಿ ಒಳಸುತ್ತಿನ ಗೋಡೆಯ ನಿರ್ಮಾಣದಲ್ಲಿ ಹಲವು ವ್ಯತ್ಯಾಸಗಳನ್ನು ಗುರುತಿಸಬಹುದು. ಇದು ಹೊರಸುತ್ತಿನ ಗೋಡೆಗಿಂತಲೂ ಎತ್ತರವಾಗಿಯೂ, ದಪ್ಪವಾಗಿಯೂ ಇದೆ. ಹೊರಸುತ್ತಿನ ಗೋಡೆಯ ಕೆಲವು ಬುರುಜುಗಳಲ್ಲಿ ಬಿಜಾಪುರದ ಆದಿಲ್ ಶಾಹಿಗಳ ಕಾಲದ ಶಾಸನಗಳಿವೆ. ಆದರೆ ಒಳಸುತ್ತಿನ ಗೋಡೆಯಲ್ಲಿ ಶಾಸನಗಳು ದೊರೆತ ಮಾಹಿತಿಗಳಿಲ್ಲ. ಹೊರಸುತ್ತಿನ ಗೋಡೆಯ ಪಶ್ಚಿಮ ಭಾಗದಲ್ಲಿರುವ ಸಿಕಂದರ್ ಬುರುಜಿನ ಮೇಲೆ ಸಿಂಹ ಮತ್ತಿತ್ತರ ಶಿಲ್ಪಗಳ ಕೆತ್ತನೆಗಳಿವೆ. ಇವುಗಳ ರಚನಾ ಶೈಲಿಯು ಬಿಜಾಪುರ ಕೋಟೆಯ ಇದೇ ಮಾದರಿಯ ಶಿಲ್ಪಶೈಲಿಯನ್ನು ಹೋಲುತ್ತದೆ. ಈ ಕೋಟೆಗೆ ಸು. 30 ಅಡಿ ಆಳ ಹಾಗೂ 28 ಅಡಿ ಅಗಲವಾದ ಕಂದಕವಿದ್ದು, ಸದಾ ನೀರಿನಿಂದ ತುಂಬಿರುತ್ತದೆ. ಇದನ್ನು ಹೊರಸುತ್ತಿನ ಗೋಡೆಯ ಮುಂಭಾಗದಲ್ಲಿ ನೆಲದಡಿಯ ಕಲ್ಲು ಬಂಡೆಗಳನ್ನು ಕೊರೆದು ನಿರ್ಮಿಸಲಾಗಿದೆ. ಕೋಟೆಯ ಮುಖ್ಯ ದ್ವಾರಗಳ ಮುಂಭಾಗದಲ್ಲಿ ಕಂದಕಕ್ಕೆ ಸೇತುವೆಯನ್ನು ನಿರ್ಮಿಸಲಾಗಿತ್ತು. ಎಲ್.ಐ.ಸಿ. ಕಚೇರಿಯ ಮುಂಭಾಗದಲ್ಲಿರುವ ಕೋಟೆಯ ಪೂರ್ವ–ದ್ವಾರದ ಮುಂಭಾಗದಲ್ಲಿಯೂ ಸೇತುವೆ ನಿರ್ಮಿಸಿದ್ದನ್ನು ಗುರುತಿಸಬಹುದು. ದಾಖಲೆಗಳಲ್ಲಿ ಉಲ್ಲೇಖವಾಗಿರುವ ಬಹಮನಿ ಪೂರ್ವದ ಮಣ್ಣಿನ ಕೋಟೆ ಮತ್ತು ಅದನ್ನು ಮಾರ್ಪಡಿಸಿ ಬಹಮನಿಯರು ನಿರ್ಮಿಸಿದ ಕಲ್ಲಿನ ಕೋಟೆಯನ್ನು ಇಂದು ಗುರುತಿಸುವುದು ಕಷ್ಟದ ಕೆಲಸ. ಬಹಮನಿಯವರು ಈ ನಗರವನ್ನು 1426ರಲ್ಲಿ ತೊರೆದು ಬೀದರ್‌ಗೆ ಸ್ಥಳಾಂತರಿಸಿದ ನಂತರ ಈ ಕೋಟೆಯನ್ನು ಬಿಜಾಪುರದ ಆದಿಲ್ ಶಾಹಿ ಸುಲ್ತಾನರು, ನಂತರದ ಮೊಘಲರು, ಮತ್ತು ಹೈದರಾಬಾದ್ ನಿಜಾಮರು ಇದನ್ನು ಒಂದು ಸೇನಾ ನೆಲೆಯನ್ನಾಗಿ ಮಾಡಿಕೊಂಡರು. ಇಲ್ಲಿ ದೊರೆಯುವ ಶಾಸನಗಳು ಆದಿಲ್ ಶಾಹಿ ಮತ್ತು ನಿಜಾಮ್ ಕಾಲದವಾಗಿವೆ. ಹಲವು ಮುಖ್ಯ ಬುರುಜುಗಳನ್ನು ಆದಿಲ್ ಶಾಹಿಗಳು ನಿರ್ಮಿಸಿದರೆಂದು ಇಲ್ಲಿನ ಶಾಸನಗಳಿಂದ

ತಿಳಿದುಬರುವುದು. ಬಹಮನಿ ಸುಲ್ತಾನರ ಕಾಲದಲ್ಲಿ ನಿರ್ಮಾಣವಾಗಿದ್ದ ಕಲಬುರ್ಗಿ ಕೋಟೆಯ ಮೂಲ ಸ್ವರೂಪ ಮತ್ತು ಅದರ ವಿನ್ಯಾಸವನ್ನು ಗುರುತಿಸಬೇಕಾದರೆ, ಇತರ ಸ್ಥಳಗಳಲ್ಲಿ ಅವರೇ ನಿರ್ಮಿಸಿದ ಕೋಟೆಗಳನ್ನು ಗಮನಸಿದರೆ ಮಾತ್ರ ಅರ್ಥವಾಗುತ್ತದೆ.

ಬಹಮನಿ ಸುಲ್ತಾನರು ಕಲಬುರ್ಗಿ ಹೊರತಾಗಿ ಫಿರೋಜಾಬಾದ, ಬೀದರ್, ಸಗರ, ಮುದಗಲ್, ರಾಯಚೂರ್, ಸೊಲ್ಲಾಪುರ, ಫರೆಂದಾ ಮುಂತಾದ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದ್ದಾರೆ. ಈ ಸ್ಥಳಗಳಲ್ಲಿ ನಿರ್ಮಿಸಿದ ಕೋಟೆಗಳ ಶೈಲಿ ಮತ್ತು ಅವುಗಳ ವಿನ್ಯಾಸಗಳನ್ನು ಅವಲೋಕಿಸಿ, ಅವುಗಳಲ್ಲಿ ಕಂಡುಬರುವ ವಿವಿಧ ಶೈಲಿ ಮತ್ತು ತಂತ್ರಗಾರಿಕೆಯನ್ನು ಆಧರಿಸಿ, ಕಲಬುರ್ಗಿಯಲ್ಲಿ ಬಹಮನಿಯರಿಂದ ನಿರ್ಮಾಣವಾಗಿದ್ದ ಕೋಟೆಯ ಮೂಲ ಸ್ವರೂಪ ಮತ್ತು ಶೈಲಿಯನ್ನು ಗುರುತಿಸಲು ಪ್ರಯತ್ನಿಸಬಹುದಾಗಿದೆ. ಬಹಮನಿಯರ ಕಾಲದಲ್ಲಿ ಕೋಟೆ ನಿರ್ಮಾಣದ ವೈಶಿಷ್ಟ್ಯತೆ ಮತ್ತು ಅವುಗಳ ನಿರ್ಮಾಣ ವಿಧಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಹಲವು ಸಾಮಾನ್ಯ ಲಕ್ಷಣಗಳು ಕಂಡುಬರುತ್ತವೆ. ಬಹಮನಿಯವರ ಕೋಟೆಗಳು ಅವರ ಸಮಕಾಲೀನ ಅಥವಾ ನಂತರ ಕಾಲದ ಕೋಟೆಗಳಿಗಿಂತಲೂ ಭಿನ್ನವಾಗಿ ಕಂಡುಬರುತ್ತವೆ. ಬಹಮನಿ ಕೋಟೆಗಳ ಕೆಲವು ಪ್ರಮುಖ ಲಕ್ಷಣಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು.

(1) ಬಹಮನಿಯವರು ನೆಲದುರ್ಗ ಕೋಟೆಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಇವರು ನಿರ್ಮಿಸಿದ ಬಹುತೇಕ ಕೋಟೆಗಳು ನೆಲದುರ್ಗ ಕೋಟೆಗಳಾಗಿವೆ. ಕಲಬುರ್ಗಿ ಒಳಗೊಂಡಂತೆ ಫಿರೋಜಾಬಾದ್, ಬೀದರ್, ಸಗರ, ಮುದ್ಗಲ್, ಸೊಲ್ಲಾಪುರ, ನಳದುರ್ಗ, ಫರೆಂದಾ ಕೋಟೆಗಳು ಇದಕ್ಕೆ ಉತ್ತಮ ಉದಾಹರಣೆ.

(2) ಇವರು ಕೋಟೆ ನಿರ್ಮಿಸಲು ಎತ್ತರವಾದ ದಿಣ್ಣೆಯಂತಹ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅದರಂತೆ ಇವರ ಕೋಟೆಗಳು ಊರಿನಿಂದ ದೂರದಲ್ಲಿ ನಿರ್ಮಿತವಾಗಿವೆ.

(3) ಸ್ಥಳೀಯವಾಗಿ ಲಭ್ಯವಾಗುವ ದೊಡ್ಡ ಗಾತ್ರದ ಕಲ್ಲುಗಳನ್ನು ಬಳಸಿಕೊಂಡು ಕೋಟೆ ಗೋಡೆಗಳನ್ನು ಸಾಮಾನ್ಯವಾಗಿ 30 ಅಡಿ ಎತ್ತರ ಮತ್ತು 12 ಅಡಿ ಅಗಲವಾಗಿ ನಿರ್ಮಿಸಲಾಗುತ್ತಿತ್ತು.

(4) ನೆಲದುರ್ಗವಾಗಿದ್ದರಿಂದ ಕೋಟೆಗಳ ಸುತ್ತಲೂ ಆಳವಾದ ಕಂದಕವನ್ನು ನಿರ್ಮಿಸಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ನದಿಯ ದಂಡೆಯನ್ನು ಕೋಟೆ ನಿರ್ಮಾಣಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ವೈರಿಗಳ ಆಕ್ರಮಣಗಳಿಂದ ರಕ್ಷಣೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತಿತ್ತು. ಕಲಬುರ್ಗಿಯ ಕೋಟೆಯ ಸುತ್ತಲಿನ ಕಂದಕವು ಸುಮಾರು 30 ಅಡಿಗಳಷ್ಟು ಆಳವಾಗಿದೆ. ಕಂದಕಕ್ಕೆ ಪಕ್ಕದಲ್ಲಿ ಹರಿಯುವ ಚಿಕ್ಕ ತೊರೆಯಿಂದ ನೀರನ್ನು ಸರಬರಾಜು ಮಾಡಲಾಗುತ್ತಿತ್ತು.

(5) ದೆಹಲಿಯ ತುಘಲಕ್ ಸುಲ್ತಾನರು ನಿರ್ಮಿಸಿದ ತುಘಲಕಾಬಾದ್ ಮತ್ತು ಫಿರೋಜಾಬಾದ್ (ದೆಹಲಿ ಕೆಂಪುಕೋಟೆ ಪಕ್ಕದಲ್ಲಿದೆ) ಕೋಟೆಗಳ ನಿರ್ಮಾಣದಲ್ಲಿ ಅಳವಡಿಸಿದ ತಂತ್ರಗಾರಿಕೆ ಮತ್ತು ಅವುಗಳ ಲಕ್ಷಣಗಳನ್ನು ಯಥಾವತ್ತಾಗಿ ಬಹಮನಿಯವರು ಇಲ್ಲಿಯ ಕೋಟೆಗಳ ನಿರ್ಮಾಣದಲ್ಲಿ ಅನುಸರಿಸಿದ್ದಾರೆಂದು ಗುರುತಿಸಬಹುದು. ಆದರೆ ಬಹಮನಿಯರ ಕೋಟೆಗಳ ವಿನ್ಯಾಸಗಳು ಸ್ಥಳೀಯ

ಕೋಟೆಗಳ ಮಾದರಿಗಳಲ್ಲಿವೆ. ಅದೇರೀತಿ ಸ್ಥಳೀಯ ಕೋಟೆ ನಿರ್ಮಾಣದಲ್ಲಿ ಪ್ರಚಲಿತದಲ್ಲಿದ್ದ ಚೌಕಾಕಾರದ ಕೊತ್ತಳ ಅಥವಾ ಬುರುಜುಗಳ ನಿರ್ಮಾಣವನ್ನು ಬಹಮನಿಯರು ಆರಂಭ ಕಾಲದ ಕೋಟೆಗಳ ನಿರ್ಮಾಣದಲ್ಲಿ ಮುಂದುವರೆಸಿದರು. ತದನಂತರ 15ನೇ ಶತಮಾನ ಪ್ರಾರಂಭವಾಗುತ್ತಿದ್ದಂತೆಯೇ ಕೋಟೆ ನಿರ್ಮಾಣದಲ್ಲಿ ಗುರುತರ ಬದಲಾವಣೆಗಳನ್ನು ತಂದರು. ಚೌಕಾಕಾರದ ಬುರುಜುಗಳ ಬದಲಾಗಿ ಷಟ್ಕೋನಾಕೃತಿ ಹಾಗೂ ಅಷ್ಟಕೋನಾಕಾರದ ವಿನ್ಯಾಸದ ಬುರುಜುಗಳನ್ನು ಅಳವಡಿಸುವ ಕ್ರಮವನ್ನು ಆರಂಭವಾಯಿತು. ಬೀದರ್ ಮತ್ತು ಫಿರೋಜಾಬಾದ್ ಕೋಟೆಯಲ್ಲಿ ಷಟ್ಕೋನ ಹಾಗೂ ಅಷ್ಟಕೋನಾಕಾರದ ಬುರುಜುಗಳನ್ನು ಕಾಣಬಹುದು. ಬಹಮನಿಯರ ಕಾಲದವರೆಗೂ ವರ್ತುಲಾಕಾರದ ಬುರುಜುಗಳನ್ನು ನಿರ್ಮಿಸುವ ಸಂಪ್ರದಾಯ ಪ್ರಾರಂಭವಾಗಿರಲಿಲ್ಲ. ಕಾರಣವೆಂದರೆ ಆಗ ಇನ್ನೂ ಅಪಾರ ಪ್ರಮಾಣದ ಫಿರಂಗಿಗಳ ಬಳಕೆ ಪ್ರಾರಂಭವಾಗಿರಲಿಲ್ಲ. ಅಲ್ಲದೆ, ಅವುಗಳನ್ನು ಕೋಟೆಯ ಬುರುಜುಗಳಲ್ಲಿ ಇರಿಸಿ, ಶತ್ರುಗಳ ಮೇಲೆ ಪ್ರಯೋಗಿಸುವ ತಂತ್ರಗಾರಿಕೆ ಪ್ರಾರಂಭಿಕ ಹಂತದಲ್ಲಿತ್ತು. ಆದ್ದರಿಂದ ವೃತ್ತಾಕಾರದ ಕೊತ್ತಳಗಳು ನಿಧಾನವಾಗಿ ಪರಿಚಯಗೊಳ್ಳತೊಡಗಿದವು. ಕಲಬುರ್ಗಿಯ ಕೋಟೆಯ ಹೊರಸುತ್ತಿನ ಗೋಡೆಯಲ್ಲಿನ ಎಲ್ಲಾ ಬುರುಜುಗಳು ವೃತ್ತಾಕಾರ ಅಥವಾ ಅರ್ಧವೃತ್ತಾಕಾರದ ವಿನ್ಯಾಸದಲ್ಲಿವೆ. ಫಿರಂಗಿಗಳನ್ನು ಸುಲಭವಾಗಿ ಇರಿಸಿ ಅವುಗಳನ್ನು ಎಲ್ಲಾ ದಿಕ್ಕುಗಳಿಗೆ ತಿರುಗಿಸಲು ಅರ್ಧವೃತ್ತಾಕಾರ / ವೃತ್ತಾಕಾರದ ಬುರುಜುಗಳು ಅನುಕೂಲಕರವಾಗಿದ್ದವು. ಬಿಜಾಪುರ ಒಳಗೊಂಡಂತೆ ಆದಿಲ್ ಶಾಹಿಗಳ ಬಹುತೇಕ ಕೋಟೆಗಳಲ್ಲಿ ಅರ್ಧವೃತ್ತಾಕಾರ / ವೃತ್ತಾಕಾರದ ಬುರುಜುಗಳ ನಿರ್ಮಾಣವನ್ನು ಕಾಣುತ್ತೇವೆ. ಅದೇರೀತಿ ಕಲಬುರ್ಗಿಯ ಕೋಟೆಯ ಹೊರಸುತ್ತಿನ ಗೋಡೆ ಮತ್ತು ಬುರುಜುಗಳು ಶಾಸನಗಳೇ ಉಲ್ಲೇಖಿಸುವಂತೆ 16ನೇ ಶತಮಾನದಲ್ಲಿ ನಿರ್ಮಾಣವಾಗಿವೆ ಎಂದು ಸ್ಪಷ್ಟವಾಗಿ ಹೇಳಬಹುದು.

(6) ಕೋಟೆ ಗೋಡೆ ಮತ್ತು ಬುರುಜುಗಳನ್ನು ಒಳಗೊಂಡಂತೆ ಕೋಟೆಯ ಸುತ್ತಲೂ ಅಗಲವಾದ 'ಪಹರೆ ಕಟ್ಟೆ' [wall-walk] ನಿರ್ಮಿಸುವುದು ಬಹಮನಿ ಕಾಲದಲ್ಲಿ ಪ್ರಾರಂಭಗೊಂಡಿತು. ವಾರಂಗಲ್ಲಿನ ಕೋಟೆಯಲ್ಲಿ ಪಹರೆ-ಕಟ್ಟೆ ನಿರ್ಮಾಣ ಸ್ಪಷ್ಟವಾಗಿ ಕಾಣುವುದಿಲ್ಲ. ಆದರೆ ಬಹಮನಿಯರ ಕೋಟೆಗಳಾದ ಕಲಬುರ್ಗಿ, ಬೀದರ್, ಮತ್ತು ಫಿರೋಜಾಬಾದ್ ಕೋಟೆಗಳಲ್ಲಿ ಪಹರೆ-ಕಟ್ಟೆ ನಿರ್ಮಾಣ ಮಾಡಿರುವುದನ್ನು ಕಾಣಬಹುದು. ಪಹರೆ-ಕಟ್ಟೆಯ ತಂತ್ರಗಾರಿಕೆ ಅಳವಡಿಕೆ ಬಹಮನಿ ಕಾಲದಲ್ಲಿ ಆರಂಭವಾಯಿತು ಎಂದು ಹೇಳಬಹುದು. ಕಲಬುರ್ಗಿ ಕೋಟೆಯ ಒಳಸುತ್ತಿನ ಗೋಡೆಗಳಲ್ಲಿ ಅಗಲವಾದ ಪಹರೆ-ಕಟ್ಟೆಯನ್ನು ಕಾಣಬಹುದು. ಇದನ್ನು ಕೋಟೆ ಗೋಡೆಯ ಕುಂಜಿಗೆ ಹೊಂದಿಕೊಂಡಂತೆ ನಿರ್ಮಿಸಲಾಗಿದ್ದು, ಸೈನಿಕರು ಪಹರೆ ಮಾಡಲು ಅನುಕೂಲವಾಗಿದೆ. ಅಲ್ಲದೆ ಕೋಟೆ ಮೇಲಿನ ಶತ್ರುಗಳ ದಾಳಿಯ ಸಂದರ್ಭದಲ್ಲಿ ಸೈನಿಕರಿಗೆ ಆಯುಧಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ತ್ವರಿತವಾಗಿ ಸಾಗಿಸಲು ಈ ಪಹರೆ-ಕಟ್ಟೆಗಳನ್ನು ಬಳಸಲಾಗುತ್ತಿತ್ತು. ಇವುಗಳನ್ನು ಏರಲು ಅಲ್ಲಲ್ಲಿ ಮೆಟ್ಟಲುಗಳನ್ನು ನಿರ್ಮಿಸಲಾಗಿದೆ.

(7) ಬಾಣದಂತಹ ಆಯುಧಗಳು ಕೋಟೆಯ ಪಹರೆ-ಕಟ್ಟೆಯ ಮೇಲೆ ನಿಂತಿರುವ ಸೈನಿಕರಿಗೆ ನೇರವಾಗಿ ತಾಗದಂತೆ ಕೋಟೆಯ ಕುಂಜಿಯಲ್ಲಿ ತೆನೆಗಳಂತೆ ಸಾಲಾಗಿ ನಿಟುಗಳನ್ನು[battlements] ನಿರ್ಮಿಸಲಾಗುತಿತ್ತು. ಬಹಮನಿ ಪೂರ್ವದ ಕಾಕತೀಯ ಮತ್ತು ಹೊಯ್ಸಳರ ಕಾಲದ ಕೋಟೆಗಳ ನಿರ್ಮಾಣದಲ್ಲಿ ಸಾಲಾಗಿ ನಿಟುಗಳನ್ನು ನಿರ್ಮಿಸುವ ಪದ್ಧತಿ ಇತ್ತು. ಆದರೆ ಇವು ಕುಂಜಿಯ ಕಲ್ಲಿನಲ್ಲಿ ವೃತ್ತಾಕಾರವಾಗಿ ಕೊರೆದು ಇರಿಸಲಾಗುತ್ತಿದ್ದವು. ಇವು ರಕ್ಷಣೆಗಿಂತ ಹೆಚ್ಚಾಗಿ ಸಾಂಕೇತಿಕವಾಗಿದ್ದವು. ಆದರೆ ಬಹಮನಿ ಕಾಲದಲ್ಲಿ ನಿಟುಗಳ ನಿರ್ಮಾಣ ಮಾಡುವ ಉದ್ದೇಶ ಭಿನ್ನವಾಗಿತ್ತು. ಶತ್ರುಗಳು ಹೊರಗಿನಿಂದ ಕೋಟೆಗೆ ಲಗ್ಗೆ ಹಾಕಿದ ಸಂದರ್ಭದಲ್ಲಿ ರಕ್ಷಣೆ ಪಡೆಯಲು ಹಾಗೂ ನಿಟುಗಳ ಮರೆಯಲ್ಲಿ ನಿಂತುಕೊಂಡು ವೈರಿಗಳ ಮೇಲೆ ಪ್ರತಿ ಆಕ್ರಮಣ ಮಾಡಲು ಬಳಸುತಿದ್ದರು. ಈ ನಿಟುಗಳಲ್ಲಿ ಚಿಕ್ಕ ಚಿಕ್ಕ ಕಿಂಡಿಗಳನ್ನು ಮಾಡಲಾಗುತ್ತಿತ್ತು. ಈ ಕಿಂಡಿಗಳ ಮೂಲಕ ಕೋಟೆಯ ಹೊರಗೆ ಶತ್ರುಗಳ ಚಲನವಲನಗಳನ್ನು ಗಮನಿಸುವುದಕ್ಕೆ ಹಾಗೂ ಕೋಟೆಗೆ ಹತ್ತಿರ ಬರುವ ಶತ್ರುಗಳ ಮೇಲೆ ಪ್ರತಿದಾಳಿ ಮಾಡುವುದಕ್ಕೆ ಉಪಯೋಗಿಸುತ್ತಿದ್ದರು.

(8) ಬಹಮನಿಯರ ಕಾಲದಲ್ಲಿ ದ್ವಾರಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಎತ್ತರದ ಕಾಮಾನಿನ ಪ್ರವೇಶ ದ್ವಾರ; ಅದರ ಇಕ್ಕೆಡೆಗಳಲ್ಲಿ ಚೌಕಾಕಾರದ ಅಥವಾ ಷಟ್‌ಕೋನಾಕಾರದ ಬುರುಜುಗಳನ್ನು ಕಟ್ಟಲಾಗುತ್ತಿತ್ತು. ದ್ವಾರದ ಗೋಡೆಗಳು ದಪ್ಪವಾಗಿದ್ದು ಮೇಲ್ಮೈಯಲ್ಲಿ ಗಾರೆಯಿಂದ ಪ್ಲಾಸ್ಟರ್ ಮಾಡಲಾಗುತ್ತಿತ್ತು. ಎತ್ತರದ ಕಮಾನಿನ ಎರಡು ಬದಿಗಳಲ್ಲಿ ಗಾರೆಯಲ್ಲಿ ಲಾಂಛನವಾದ ಉದಯಿಸುತ್ತಿರುವ ಸೂರ್ಯ ಮತ್ತು ಸಿಂಹದ ಶಿಲ್ಪವನ್ನು ರಚಿಸಲಾಗಿದೆ. ಬೀದರ ಮತ್ತು ಫಿರೋಜಾಬಾದ ಕೋಟೆಗಳ ಮುಖ್ಯ ದ್ವಾರಗಳ ಮೇಲೆ ಈ ಶಿಲ್ಪಗಳನ್ನು ಕಾಣಬಹುದು.

(9) ಸಾಮಾನ್ಯವಾಗಿ ದ್ವಾರಗಳು ಎತ್ತರದ ಕಮಾನುಗಳಿಂದ ನಿರ್ಮಿತವಾಗಿದ್ದು, ಒಳಭಾಗದ ಇಕ್ಕೆಡೆಗಳಲ್ಲಿ ಎತ್ತರದ ಜಗುಲಿಗಳನ್ನು ನಿರ್ಮಿಸಲಾಗುತ್ತಿತ್ತು. ಇವು ಆರು ಅಂಕಣಗಳ ಜಗುಲಿಗಳಾಗಿದ್ದು ಕಮಾನುಗಳನ್ನು ಅಳವಡಿಸಿ ನಿರ್ಮಿಸಲಾಗುತ್ತಿದ್ದವು. ಇವುಗಳ ಒಳಭಾವಣಿಯಲ್ಲಿ ವಿವಿಧ ಜ್ಯಾಮಿತಿಯಾಕಾರದ ವಿನ್ಯಾಸಗಳನ್ನು ಗಾರೆಯಲ್ಲಿ ಮಾಡಲಾಗಿದೆ. ಈ ಗಾರೆಯ ವಿನ್ಯಾಸಗಳು ವಿಜಯನಗರದ ಗಜಶಾಲೆ ಅಥವಾ ರಾಣಿಯರ ಸ್ನಾನಗೃಹದಲ್ಲಿ ಕಾಣುವ ಗಾರೆ ವಿನ್ಯಾಸ ರಚನೆಯನ್ನು ಹೋಲುತ್ತವೆ. ಬಹಮನಿಯ ಕೆಲವು ದ್ವಾರಗಳು ವಿಶೇಷ ಅಲಂಕಾರ ಮತ್ತು ದೊಡ್ಡ ಒಳಾಂಗಣಗಳನ್ನು ಹೊಂದಿದ್ದವು. ನಗರಕ್ಕೆ ಆಗಮಿಸುವ ವಿಶೇಷ ಗಣ್ಯರು ಅಥವಾ ಸೂಫಿ ಸಂತರು ಪ್ರವೇಶಿಸುವ ವೇಳೆಯಲ್ಲಿ ಸುಲ್ತಾನರು ನಗರದ ದ್ವಾರದವರೆಗೂ ಬಂದು ಅವರನ್ನು ಸ್ವಾಗತಿಸುವ ಸಂಪ್ರದಾಯವನ್ನು ಬಹಮನಿಯರು ರೂಢಿಸಿಕೊಂಡಿದ್ದರು. ವಿಶೇಷ ಸಂದರ್ಭದಲ್ಲಿ ದ್ವಾರಗಳನ್ನು ಅಂದಗೊಳಿಸಿ ಶಾಮಿಯಾನದಂತಹ ಅಲಂಕಾರಗಳನ್ನು ಏರ್ಪಡಿಸಿ ಗಣ್ಯರನ್ನು ಸ್ವಾಗತಿಸಲಾಗುತ್ತಿತ್ತು. ಕಲಬುರ್ಗಿಯ ಪೂರ್ವ ದ್ವಾರದ ಒಳಭಾಗದಲ್ಲಿ ಏಂಬತ್ತು ಅಂಕಣದ ಜಗಲಿಗಳಿದ್ದು ಇವು ಎರಡು ಅಂತಸ್ತುಗಳಿಂದ ಕೂಡಿವೆ. ದ್ವಾರವನ್ನು ಪ್ರವೇಶಿಸುತ್ತಿದ್ದಂತೆ ಒಳಾಂಗಣ ವಿಶಾಲವಾದ ಅಂಗಳದಂತೆ ಗೋಚರಿಸುತ್ತದೆ. ಇಲ್ಲಿ ಗಣ್ಯರನ್ನು ಬರಮಾಡಿಕೊಂಡು ಗೌರವ ಅರ್ಪಿಸಲಾಗುತ್ತಿತ್ತು.



ಚಿತ್ರ–3: ಕೋಟೆಯ ಪೂರ್ವ ದ್ವಾರದ ಒಳಭಾಗ
[ಎರಡು ಅಂತಸ್ತಿನ ಕಮಾನುಗಳ ಅಂಕಣದ ಅವಶೇಷ]

(10) ಬಹಮನಿ ಕೋಟೆಗಳ ಮತ್ತೊಂದು ವಿಶೇಷತೆಯೆಂದರೆ ಸಾಲಾಗಿ ನಿರ್ಮಿಸಿದ ಬಜಾರ ಬೀದಿ ಅಥವಾ ವ್ಯಾಪಾರ ಮಳಿಗೆಗಳು. ಬಹಮನಿ ಸುಲ್ತಾನರು ಮೂಲತಃ ಹೊರದೇಶದಿಂದ ಬಂದವರಾಗಿದ್ದು, ಅವರು ಸ್ಥಳೀಯ ವ್ಯಾಪಾರ ವಾಣಿಜ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ನಗರದ ಪ್ರವೇಶದ್ವಾರ ಅಥವಾ ಕೋಟೆಯ ದ್ವಾರಗಳಿಗೆ ಹೊಂದಿಕೊಂಡಂತೆ ರಸ್ತೆಯ ಎರಡೂ ಬದಿಗಳಲ್ಲಿ ಸಾಲಾಗಿ ಎತ್ತರವಾದ ಕಟ್ಟೆಯ ಮೇಲೆ ಚೌಕಾಕಾರದ ಮಳಿಗೆಗಳನ್ನು ನಿರ್ಮಿಸುತ್ತಿದ್ದರು. ಇವುಗಳ ಮೇಲ್ಛಾವಣಿಯನ್ನು ಇಳಿಜಾರು ಅಥವಾ ಪಿರಾಮಿಡ್ ಆಕಾರದಲ್ಲಿ ನಿರ್ಮಿಸುತ್ತಿದ್ದರು. ಕಲಬುರ್ಗಿ ಕೋಟೆಯ ಪಶ್ಚಿಮ ದ್ವಾರದ ಒಳಗಡೆಯಲ್ಲಿ ಸಾಲಾಗಿ ನಿರ್ಮಿಸಿದ ಬಜಾರ ಬೀದಿಯನ್ನು ಕಾಣಬಹುದು. ಅದರಂತೆ ಫಿರೋಜಾಬಾದ್ ಕೋಟೆಯಲ್ಲಿಯೂ ಬಜಾರ ಬೀದಿಯನ್ನು ಕಾಣಬಹುದು.

(11) ಕೋಟೆಯ ಒಳಾಂಗಣದಲ್ಲಿ ಮಸೀದಿ, ಅರಮನೆಗಳು, ಉಗ್ರಾಣಗಳು, ಲಾಯಗಳು, ನೀರಿನ ಬಾವಿಗಳು, ಉದ್ಯಾನಗಳು ಸಾಮಾನ್ಯವಾಗಿ ಇರುತ್ತವೆ. ಬಹಮನಿ ಅರಸರು ಎತ್ತರದ ಕಮಾನುಗಳುಳ್ಳ ಎರಡು ಅಂತಸ್ತಿನ ಸಭಾಂಗಣಗಳನ್ನು ನಿರ್ಮಿಸುವ ಸಂಪ್ರದಾಯವನ್ನು ಅನುಸರಿಸಿದ್ದಾರೆ. ಫಿರೋಜಾಬಾದ್ ಕೋಟೆಯ ಒಳಾಂಗಣದಲ್ಲಿ ಎತ್ತರದ ಕಟ್ಟಡವಿದ್ದು; ಇದೊಂದು ಸಭಾಂಗಣವಿರಬಹುದೆಂದು ವಿದ್ವಾಂಸರು ಗುರುತಿಸಿದ್ದಾರೆ. ಅದರಂತೆ ಬೀದರ್ ಕೋಟೆಯಲ್ಲಿ ಹಲವು ಭವ್ಯ ಅರಮನೆ ಕಟ್ಟಡಗಳಿವೆ. ಕಲಬುರ್ಗಿ ಕೋಟೆಯಲ್ಲಿಯೂ ಎತ್ತರದ ಕಮಾನುಗಳ ಎರಡು ಅಂತಸ್ತಿನ ಸಭಾಂಗಣವಿರಬಹುದೆಂದು ವಿದ್ವಾಂಸರು ಇಲ್ಲಿ ಬಾಳ–ಹಿಸಾರ ಅಥವಾ ರಣ–ಮಂಡಲ ಎಂದು ಕರೆಯುವ ಎತ್ತರದ ಕಟ್ಟಡವನ್ನು ಗುರುತಿಸುತ್ತಾರೆ. ಅದೇರೀತಿ ಬಹಮನಿಯರ ರಾಜಧಾನಿಯ ಕೋಟೆಯಲ್ಲಿರುವ ಎತ್ತರದ ಕಟ್ಟಡವು ಮೂಲತಃ ಸಭಾಂಗಣವಾಗಿತ್ತೆಂದು ಇತ್ತೀಚಿನ ಸಂಶೋಧಕರು ಗುರುತಿಸಿದ್ದಾರೆ (Philon; 2005:70).

(12) ಬಹಮನಿ ಸುಲ್ತಾನರು ನಿರ್ಮಿಸಿದ ಕೋಟೆಗಳು ನಗರೀಕರಣ ಪ್ರಕ್ರಿಯೆಯ ಅಂಗವಾಗಿಯೇ ಗುರುತಿಸಲ್ಪಡುತ್ತವೆ. ಮಧ್ಯಏಶಿಯಾದ ನಗರಗಳ ಲಕ್ಷಣಗಳಂತೆ ಇವರು ನಿರ್ಮಿಸಿದ ಮುಖ್ಯವಾದ ಕೋಟೆ–ನಗರಗಳಲ್ಲಿ ಹಬೆ–ಸ್ನಾನಗೃಹಗಳು ಅಥವಾ 'ಹಮಾಮ್'ಗಳನ್ನು ಕಾಣುತ್ತೇವೆ. ಬಿಸಿ ನೀರಿನ ಸ್ನಾನಕ್ಕಾಗಿ ಹಮಾಮ್‌ಗಳನ್ನು ಕೋಟೆಯ ಅರಮನೆ ಒಳಾಂಗಣದಲ್ಲಿ ನಿರ್ಮಿಸುವುದನ್ನು ಬಹಮನಿಯರ ಕಾಲದಲ್ಲಿ ಕಾಣುತ್ತೇವೆ. ಇದಕ್ಕೆ ಫಿರೋಜಾಬಾದ್ ಕೋಟೆಯನ್ನು ಉದಾಹರಿಸಬಹುದು. ಜೊತೆಗೆ ದೇವಗಿರಿ ಕೋಟೆಯಲ್ಲಿಯೂ ಇಂತಹ ಹಮಾಮ್ ನಿರ್ಮಿಸಿರುವ ವರದಿ ಇದೆ (Mate: 1990).

ಬಹಮನಿಯರು ನಿರ್ಮಿಸಿದ ಕೋಟೆ ರಚನೆ

ಈ ಮೇಲೆ ಗುರುತಿಸಿದ ಮುಖ್ಯ ಲಕ್ಷಣಗಳನ್ನು ಆಧರಿಸಿ ಕಲಬುರ್ಗಿಯಲ್ಲಿ ಬಹಮನಿಯರು ನಿರ್ಮಿಸಿದ ಕೋಟೆಯ ವಿಸ್ತಾರ ಮತ್ತು ಅದರ ವಿನ್ಯಾಸವನ್ನು ಗುರುತಿಸಬಹುದಾಗಿದೆ. ಇಲ್ಲಿನ ಒಳಸುತ್ತಿನ ಕೋಟೆಯಲ್ಲಿ ಅಲ್ಲಲ್ಲಿ ಚೌಕಾಕಾರದ ಬುರುಜುಗಳು ಕಂಡುಬರುತ್ತವೆ. ಅಲ್ಲದೇ ಈ ಗೋಡೆಗೆ ಮಾತ್ರ ಹಳೆಯ ದ್ವಾರಗಳನ್ನು ಅಳವಡಿಸಲಾಗಿವೆ. ಬಹಮನಿ ಕಾಲದ ಕೋಟೆಯು ಆಯತಾಕಾರದ ವಿನ್ಯಾಸದಲ್ಲಿದ್ದು ದಕ್ಷಿಣ ಭಾಗದಲ್ಲಿ ಮುಂಚಾಚಿದಂತೆ ನಿರ್ಮಿಸಲಾಗಿದೆ. ಈ ಕೋಟೆಯ ಗೋಡೆಗಳು 30 ಅಡಿಗಳಷ್ಟು ಎತ್ತರ ಮತ್ತು ಸುಮಾರು ಅಗಲವಾಗಿದ್ದವು. ಇವುಗಳಿಗೆ ಪಹರೆಕಟ್ಟೆ ನಿರ್ಮಿಸಲಾಗಿತ್ತು. ಬುರುಜುಗಳು ಚೌಕಾಕಾರದಲ್ಲಿದ್ದು ಗೋಡೆಯಿಂದ ಮುಂಚಾಚಿಕೊಂಡಿದ್ದವು. ಗೋಡೆಯ ಕುಂಬಿಗಳಲ್ಲಿ ತೆನೆಯಂತೆ ಬಿಡಿ ಬಿಡಿಯಾಗಿ ನಿಟುಗಳನ್ನು ನಿರ್ಮಿಸಲಾಗಿದ್ದವು. ಕುಂಬಿಗೋಡೆಗಳಲ್ಲಿ ಶತೃಗಳ ಚಲನವಲನಗಳನ್ನು ವೀಕ್ಷಿಸಲು ರಂಧ್ರಗಳಂತೆ ಚಿಕ್ಕ ಕಿಂಡಿಗಳನ್ನು ಮಾಡಲಾಗಿತ್ತು. ಶತೃಗಳು ಕೋಟೆಗೆ ಲಗ್ಗೆ ಹಾಕಿದ ಸಂದರ್ಭಗಳಲ್ಲಿ ಅವರ ಮೇಲೆ ಪ್ರತಿದಾಳಿ ಮಾಡಲು ಮತ್ತು ಶತ್ರುಗಳನ್ನು ಘಾಸಿಗೊಳಿಸಲು ಹಲವು ತಂತ್ರಗಾರಿಕೆಗಳನ್ನು ಕೈಕೊಳಲಾಗಿತ್ತು. ಕೋಟೆಗೋಡೆಗಳಿಗೆ ಹೊಂದಿಕೊಂಡಂತೆ ಒಳಭಾಗದಲ್ಲಿ ದೊಡ್ಡ ಗಾತ್ರದ ಒಲೆಗಳನ್ನು ನಿರ್ಮಿಸಲಾಗಿದೆ. ಈ ಒಲೆಗಳ ಮೇಲೆ ದೊಡ್ಡ ಗಾತ್ರದ ಬಾಣಲೆಗಳನ್ನು ಇಟ್ಟು ನೀರನ್ನು ಕಾಯಿಸಿ ಆಕ್ರಮಣವೆಸಗುವ ಶತ್ರುಪಡೆಗಳ ಮೇಲೆ ಎರಚುತ್ತಿದ್ದರು. ಇದರಿಂದ ಘಾಸಿಗೊಂಡ ಶತ್ರುಗಳು ಪಲಾಯನ ಮಾಡಬೇಕಾಗುತ್ತಿತ್ತು. ದೊಡ್ಡ ಗಾತ್ರದ ಹಳೆಯ ಒಲೆಗಳನ್ನು ಈಗಲೂ ಕೋಟೆಯ ಆಗ್ನೇಯ ದಿಕ್ಕಿನಲ್ಲಿ ಕಾಣಬಹುದು.



ಚಿತ್ರ–4: ಬಹಮನಿ ಕಾಲದ ಒಳಸುತ್ತಿನ ಕೋಟೆಯ ಒಳಭಾಗ [ಒಲೆಯಾಕಾರದ ಕಟ್ಟಡ]

ದ್ವಾರಗಳು

ಪ್ರಸ್ತುತ ಕೋಟೆಯನ್ನು ಪ್ರವೇಶಿಸಲು ಪೂರ್ವ ಮತ್ತು ವಾಯವ್ಯ ದಿಕ್ಕಿನಲ್ಲಿ ದ್ವಾರಗಳಿವೆ. ಆದರೆ ಬಹಮನಿ ಕಾಲದ ಈ ಕೋಟೆಯ ಪ್ರವೇಶಕ್ಕಾಗಿ ಪೂರ್ವ ದಿಕ್ಕಿನಲ್ಲಿ ಎರಡು, ಪಶ್ಚಿಮ ದಿಕ್ಕಿನಲ್ಲಿ ಎರಡು ಮತ್ತು ದಕ್ಷಿಣ ದಿಕ್ಕಿನಲ್ಲಿ ಒಂದು ದ್ವಾರಗಳನ್ನು ನಿರ್ಮಿಸಲಾಗಿತ್ತು. ಇವುಗಳಲ್ಲಿ ಪೂರ್ವ, ಪಶ್ಚಿಮ ಮತ್ತು ದಕ್ಷಿಣದ ತಲಾ ಒಂದೊಂದು ದ್ವಾರಗಳನ್ನು ಆದಿಲ್ ಶಾಹಿಗಳ ಕಾಲದಲ್ಲಿ ಕೋಟೆಯ ಭದ್ರತೆಯ ದೃಷ್ಟಿಯಿಂದ ಮುಚ್ಚಲಾಯಿತು. ದಕ್ಷಿಣದಿಂದ ಕೋಟೆಯನ್ನು ಪ್ರವೇಶಿಸುವುದಕ್ಕಾಗಿ ನಿರ್ಮಾಣವಾಗಿದ್ದ ಈ ದ್ವಾರವನ್ನು ಇಂದಿಗೂ ಗುರುತಿಸಬಹುದಾಗಿದೆ. ಈ ದ್ವಾರದ ನಿರ್ಮಾಣದಿಂದ ದಕ್ಷಿಣದಲ್ಲಿ ಕೋಟೆಯು ಮುಂಚಾಚಿಕೊಂಡಂತಿದ್ದು, ಗೋಡೆಯ ವಿನ್ಯಾಸದಲ್ಲಿನ ವ್ಯತ್ಯಾಸವನ್ನು ಗಮನಿಸಬಹುದು. ಈ ದ್ವಾರವನ್ನು ನಿರ್ಮಿಸಲು ಹಳೆಯ ದೇಗುಲದ ಕಂಬ, ಬೋಧಿಗೆಗಳನ್ನು ಮರುಬಳಕೆ ಮಾಡಲಾಗಿದೆ. ಹೆಚ್. ಚಂದ್ರಶೇಖರ್ ಅವರು ಇಲ್ಲಿಯ ಹಳೆಯ ಕಂಬಗಳನ್ನು ಗಮನಿಸಿ ಇದು ಕಲ್ಯಾಣ ಚಾಲುಕ್ಯರ ಕಾಲದ ತ್ರಿಕೂಟ ದೇಗುಲವಾಗಿತ್ತೆಂದು ಅಭಿಪ್ರಾಯ ಪಟ್ಟಿದ್ದಾರೆ (ಚಂದ್ರಶೇಖರ 2002: 226). ಆದರೆ ಇದು ಕೋಟೆಗೆ ನಿರ್ಮಿಸಿದ ದ್ವಾರ. ದ್ವಾರದ ಇಕ್ಕೆಡೆಗಳಲ್ಲಿ ನಿರ್ಮಿಸಿದ ಜಗುಲಿಗಳನ್ನು ಪರಿಸರದಲ್ಲಿ ದೊರೆಯುತ್ತಿದ್ದ ಬಹಮನಿ–ಪೂರ್ವದ ಹಳೆಯ ದೇಗುಲ(ಗಳ) ಕೆಲವು ಅವಶೇಷಗಳನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ಎರಡೂ ಜಗುಲಿಗಳನ್ನು ದಾಟಿ ಮುಂದೆ ಹೋದರೆ ಕಮಾನಿನಾಕಾರದ ದ್ವಾರವಿದೆ. ಈ ದ್ವಾರವನ್ನು ಬಹಮನಿಗಳ ನಂತರ ಶಾಶ್ವತವಾಗಿ ಮುಚ್ಚಲಾಗಿದೆ. ಅದಕ್ಕಾಗಿ ಕಮಾನಿನ ದ್ವಾರವನ್ನು ಹೊಸ ಗೋಡೆಯಿಂದ ಮುಚ್ಚಲಾಗಿದೆ. ಅಲ್ಲದೇ, ಕೋಟೆಯ ಆಚೆಯಿಂದ ಇಲ್ಲಿರುವ ಹಳೆಯ ದ್ವಾರವು ಕಾಣದಂತೆ ತೋರಲು ಈ ದ್ವಾರದ ಮುಂಭಾಗದಲ್ಲಿ ಬೃಹತ್ ಬುರುಜನ್ನು ನಿರ್ಮಿಸಿದ್ದಾರೆ. ಇದರಿಂದಾಗಿ ಇಲ್ಲೊಂದು ದ್ವಾರವಿತ್ತೆಂಬುವ ಸುಳಿವೂ ದೊರಕುವುದಿಲ್ಲ. ಇದೇರೀತಿ ಕೋಟೆಯ ಒಳಸುತ್ತಿನ ಗೋಡೆಯಲ್ಲಿ ಇನ್ನು ಎರಡು ಬಹಮನಿ ಕಾಲದ ದ್ವಾರಗಳಿದ್ದವು. ಕೋಟೆಯ ಪಶ್ಚಿಮ ಗೋಡೆಯ ಸಿಕಂದರ್ ಬುರುಜು ಬಳಿ ಒಂದು ದ್ವಾರವಿತ್ತು. ಇದನ್ನೂ ಕೂಡ ಶಾಶ್ವತವಾಗಿ ಮುಚ್ಚಲಾಗಿದೆ. ಇದೇರೀತಿ ಕೋಟೆಯ ಪೂರ್ವದ ಒಳಸುತ್ತಿನ ಗೋಡೆಯಲ್ಲಿಯೂ ಬಹಮನಿ ಕಾಲದ ದ್ವಾರವಿತ್ತು.

ಪೂರ್ವದ ದ್ವಾರ

ಈಗಿನ ಎಲ್.ಐ.ಸಿ ಕಚೇರಿಯ ಎದುರುಗಡೆ ಇರುವ ಕೋಟೆಯ ಪ್ರವೇಶ ದ್ವಾರವು ಪೂರ್ವದ ದ್ವಾರವಾಗಿದೆ. ಬಹಮನಿ ಶೈಲಿಯ ದ್ವಾರ ಇದಾಗಿದ್ದು, ಇಂದಿಗೂ ತನ್ನ ಮೂಲ ರೂಪವನ್ನು ಉಳಿಸಿ ಕೊಂಡಿದೆ. ಬಹಮನಿ ದ್ವಾರದ ಲಕ್ಷಣಗಳಾದ ಚೌಕಾಕಾರದ ಬುರುಜುಗಳು ಮತ್ತು ಎತ್ತರದ ಕಮಾನು ಹಾಗೂ ಒಂಬತ್ತು ಅಂಕಣದ ಜಗುಲಿಗಳನ್ನು ಈ ದ್ವಾರದ ರಚನೆಯಲ್ಲಿ ಕಾಣಬಹುದು. ಬಹಮನಿ ಶೈಲಿಯ ಎತ್ತರದ ಕಮಾನಿನ ಪ್ರವೇಶ ದ್ವಾರವನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಅದರಂತೆ ಇಲ್ಲಿಯ ಒಂಬತ್ತು ಅಂಕಣದ ಜಗುಲಿಗಳು ಎರಡು ಅಂತಸ್ತಿನಿಂದ ನಿರ್ಮಾಣವಾಗಿವೆ. ಜಗುಲಿಗಳು ಜೀರ್ಣಾವಸ್ಥೆಯಲ್ಲಿವೆ. ಆದ್ದರಿಂದ ಬಹಮನಿ ಕಾಲದ ವಾಸ್ತುರಚನೆ ಗುರುತಿಸಲು ಸಾಧ್ಯವಾಗುತ್ತಿಲ್ಲ. ಆದರೆ ಇದರ ಕಮಾನುಗಳ ವಿನ್ಯಾಸಗಳು ಬಹಮನಿ ಕಲಾಶೈಲಿಯಲ್ಲಿವೆ. ಜಗುಲಿಗಳ ಮೇಲಂತಸ್ತಿನ ಗ್ಯಾಲರಿಗಳಿಗೆ ತಲುಪಲು ದ್ವಾರದ ಬಲಬದಿಯ ಮೆಟ್ಟಲುಗಳನ್ನು ಮಾಡಲಾಗಿದೆ. ದ್ವಾರವನ್ನು ಪ್ರವೇಶಿಸುತ್ತಿದ್ದಂತೆ ವಿಶಾಲವಾದ ಅಂಗಳವಿದೆ. ಬಹಮನಿ

ಇತಿಹಾಸದಲ್ಲಿ ಉಲ್ಲೇಖವಾದಂತೆ ನಗರಕ್ಕೆ ಸೂಫಿ ಸಂತರನ್ನು ಮತ್ತು ರಾಜತಾಂತ್ರಿಕರನ್ನು ಬಹಳ ವಿಜೃಂಭಣೆಯಿಂದ ಅಲಂಕಾರ ಮಾಡಿದ ದ್ವಾರದ ಮೂಲಕ ಸುಲ್ತಾನರು ಬರಮಾಡಿಕೊಳ್ಳುತ್ತಿದ್ದರು. ಗಣ್ಯರ ಆಗಮನವನ್ನು ದ್ವಾರದ ಸುತ್ತಲೂ ಮತ್ತು ಉಪ್ಪರಿಗೆ ಅಥವಾ ಗ್ಯಾಲರಿಗಳಲ್ಲಿ ಮಹಿಳೆಯರು, ಅಧಿಕಾರಿ ವರ್ಗದವರು ಕುಳಿತು ವೀಕ್ಷಿಸುತ್ತಿದ್ದರು. ಇಲ್ಲಿಯ ದ್ವಾರದ ಅಂಗಳ ಬಹಳ ವಿಶಾಲವಾಗಿದ್ದು, ಕೋಟೆಗೆ ಆಗಮಿಸುವ ಗಣ್ಯರನ್ನು ಈ ದ್ವಾರದ ಮೂಲಕ ಬರಮಾಡಿಕೊಳ್ಳುತ್ತಿದ್ದರು ಎಂದು ಗುರುತಿಸಬಹುದು.



ಚಿತ್ರ–5: ಪೂರ್ವದ ದ್ವಾರ [ಚೌಕಾಕಾರದ ಬುರುಜುಗಳನ್ನು ಕಾಣಬಹುದು]

ಪಶ್ಚಿಮ ದ್ವಾರ

ಈ ದ್ವಾರವನ್ನು ಕೋಟೆಯ ಒಳಸುತ್ತಿನ ಗೋಡೆಯಲ್ಲಿ ನಿರ್ಮಿಸಲಾಗಿದೆ. ಜಂಜಿರಾ ದರವಾಜದಿಂದ ಕೋಟೆಯೊಳಗೆ ಪ್ರವೇಶಿಸಿದ ನಂತರ ಇದು ಸಿಗುತ್ತದೆ. ಈ ದ್ವಾರವೂ ಮೂಲತಃ ಬಹಮನಿ ಕಾಲದ ದ್ವಾರವಾಗಿದ್ದು ಇದು ಪಶ್ಚಿಮ ಮುಖಿಯಾಗಿ ನಿರ್ಮಾಣವಾಗಿತ್ತು. ಈ ಹಿಂದೆ ಹೇಳಿದ ದಕ್ಷಿಣ ದಿಕ್ಕಿನ ದ್ವಾರದಂತೆ ಇದನ್ನೂ ಕೂಡ ಹಳೆಯ ದೇಗುಲಗಳ ಅವಶೇಷಗಳನ್ನು ಬಳಸಿ ನಿರ್ಮಿಸಲಾಗಿದೆ. ಈ ದ್ವಾರವು ಅಧಿಷ್ಠಾನದಂತಹ ಎತ್ತರದ ಪೀಠದಿಂದ ನಿರ್ಮಿಸಲಾಗಿದೆ. ಆರು ಅಂಕಣಗಳಂತೆ ಎರಡು ಜಗುಲಿಗಳನ್ನು ಪ್ರವೇಶದ ಇಕ್ಕೆಡೆಗಳಲ್ಲಿ ನಿರ್ಮಿಸಲಾಗಿದ್ದು ಇದರ ನಿರ್ಮಾಣಕ್ಕೆ ಹಳೆಯ ದೇಗುಲ ಕಂಬಗಳನ್ನು ಬಳಸಲಾಗಿದೆ. ಪಕ್ಕದ ಜಂಜಿರಾ ದರವಾಜಾಕ್ಕಿಂತಲೂ ಭಿನ್ನವಾಗಿರುವ ಈ ದ್ವಾರವೂ ಬಹಮನಿಯರ ರಚನಾ ಶೈಲಿಯನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಜಂಜಿರಾ ದರವಾಜವನ್ನು ಅಲ್ಲಿಯ ಪಾರಸಿ ಶಾಸನವೇ ಉಲ್ಲೇಖಿಸುವಂತೆ, ಕ್ರಿ.ಶ. 1635ರಲ್ಲಿ ನಿರ್ಮಿಸಲಾಗಿದೆ. ಈ ಮೊದಲು ಇದ್ದ ಬಹಮನಿ ಕಾಲದ ದ್ವಾರವನ್ನು ವಿಸ್ತರಿಸಿ ಉದ್ದ ಮತ್ತು ಇಕ್ಕಟ್ಟಾದ ದಾರಿಯನ್ನು ಮಾಡಿ ಕೋಟೆಯ ವಾಯವ್ಯ ಮೂಲೆಯಲ್ಲಿ ಆದಿಲ್ ಶಾಹಿ ಕಾಲದಲ್ಲಿ ಹೊಸದಾಗಿ ದ್ವಾರವನ್ನು ಅಳವಡಿಸಿ ಈ ಎರಡೂ ದ್ವಾರಗಳನ್ನು ಜೋಡಿಸಲಾಗಿದೆ.



ಚಿತ್ರ–6: ಬಹಮನಿ ಕಾಲದ ಪಶ್ಚಿಮದ ದ್ವಾರ

ಕೋಟೆ ಒಳಾಂಗಣ

ಅರ್ಧ ಅಂಡಾಕಾರದಲ್ಲಿರುವ ಈ ಕೋಟೆಯು ಸುಮಾರು 20 ಎಕರೆ ವಿಸ್ತೀರ್ಣದಿಂದ ಕೂಡಿದೆ. ಬಹಮನಿಯವರ ಕಾಲದಲ್ಲಿ ಒಳಾಂಗಣವು ಸುಲ್ತಾನರ ವಾಸದ ನೆಲೆಯಾಗಿದ್ದು, ಅರಮನೆಗಳು, ಒಡ್ಡೋಲಗಗಳು, ಸಭಾಂಗಣಗಳು, ಉದ್ಯಾನಗಳು, ಬಜಾರ, ಲಾಯಗಳು ಮತ್ತು ಮಸೀದಿಗಳು ಇಲ್ಲಿದ್ದವು. ರಾಜಧಾನಿಯನ್ನು ಬೀದರಿಗೆ ಸ್ಥಳಾಂತರಿಸಿದ ನಂತರ ಈ ಕೋಟೆಯನ್ನು ಕೇವಲ ಸೇನಾ ನೆಲೆಯನ್ನಾಗಿ ಮಾಡಿಕೊಂಡಿದ್ದರಿಂದ ಬಹಮನಿ ಕಾಲದ ಅರಮನೆ, ಉದ್ಯಾನಗಳು ಮತ್ತಿತರ ಕಟ್ಟಡಗಳನ್ನು ಸೈನ್ಯದ ಉಪಯೋಗಕ್ಕಾಗಿ ಮಾರ್ಪಡಿಸಲಾಗಿದೆ. ಆದ್ದರಿಂದ ಅವುಗಳ ಮೂಲ ಸ್ವರೂಪದ ಕಟ್ಟಡಗಳು ಇಲ್ಲಿ ಕಾಣುವುದಿಲ್ಲ. ಸೂಕ್ಷ್ಮವಾಗಿ ಇವುಗಳನ್ನು ಅವಲೋಕಿಸಿದರೆ ಬಹಮನಿ ಕಾಲದಲ್ಲಿ ನಿರ್ಮಾಣವಾಗಿದ್ದ ಕಟ್ಟಡಗಳನ್ನು ಗುರುತಿಸಬಹುದು. ದಾಖಲೆಗಳ ಪ್ರಕಾರ ಈ ಕೋಟೆಯಲ್ಲಿ ಸುಲ್ತಾನರು ಹಾಗೂ ರಾಜಪರಿವಾರದವರು ಇಲ್ಲಿ ನೆಲೆಸಿದ್ದರೆಂದು ತಿಳಿದುಬರುತ್ತದೆ. ಆಳ್ವಿಕೆ ರಾಜಕೀಯ ಮೇಲಾಟಗಳಿಗೆ ಈ ಕೋಟೆ ಸಾಕ್ಷಿಯಾಗಿತ್ತು.

ಜುಮ್ಮಾ ಮಸೀದಿ

ಕಲಬುರ್ಗಿಯ ಐತಿಹಾಸಿಕ ವಿಸ್ಮಯ ಸ್ಮಾರಕವೆಂದರೆ ಕೋಟೆಯ ಒಳಗಡೆ ಇರುವ ಜುಮ್ಮಾ ಮಸೀದಿ. ಜಗತ್ತಿನಲ್ಲಿಯೇ ದ್ವಿತೀಯ ಉದಾಹರಣೆಯೆಂತಲೂ ಹಾಗೂ ದೇಶದಲ್ಲಿಯೇ ಏಕೈಕ ಉದಾಹರಣೆಯೆಂತಲೂ ಈ ಜುಮ್ಮಾ ಮಸೀದಿಯನ್ನು ಗುರುತಿಸುತ್ತಾರೆ. ಇಸ್ಲಾಂ ಧರ್ಮದ ಸಾಂಪ್ರದಾಯಿಕ ವಿನ್ಯಾಸವಾದ ಮಸೀದಿಯ ಒಳಾಂಗಣದಲ್ಲಿ 'ತೆರೆದ ಅಂಗಳ' ಹಾಗೂ ಪ್ರಾರ್ಥನೆ ಪೂರ್ವದಲ್ಲಿ 'ಓಜು' ಕೈಕೊಳ್ಳಲು




ಚಿತ್ರ–7: ಕೋಟೆಯ ವೈಮಾನಿಕ ಚಿತ್ರ [ಕೃಪೆ : ಗೂಗಲ್]
1) ದಕ್ಷಿಣದ ದ್ವಾರ 2) ಜುಮ್ಮಾ ಮಸೀದಿ 3) ರಣಮಂಡಲ 4) ಬಜಾರ
5) ಪೂರ್ವದ ದ್ವಾರ 6) ಜುಂಜಿರಾ ದ್ವಾರ

ಬೇಕಾಗುವ 'ನೀರಿನ ತೊಟ್ಟಿ' ಈ ಮಸೀದಿಯಲ್ಲಿಲ್ಲ. ಅಲ್ಲದೇ, ಮಸೀದಿಯ ನಾಲ್ಕು ಕಡೆಗಳು ಗೋಡೆಗಳಿಂದ ಆವೃತ್ತವಾಗಿದೆ. ಆದ್ದರಿಂದ ಸ್ಪೇನ್ ದೇಶದ 'ಕಾರ್ಡೋವಾ' ಊರಿನಲ್ಲಿರುವ ಬೃಹತ್ ಮಸೀದಿಯ ಅನುಕರಣೆಯೆಂದು ವಿದ್ವಾಂಸರು ಗುರುತಿಸಿದ್ದಾರೆ. ಕಲಬುರ್ಗಿ ನಗರದ ಒಂದು ಹೆಮ್ಮೆಯ ಐತಿಹಾಸಿಕ ಸ್ಮಾರಕವೆಂಬ ಖ್ಯಾತಿಯನ್ನು ಇದು ಗಳಿಸಿದೆ.

ರಚನೆ: ಆಯುತಾಕಾರದ ಈ ಮಸೀದಿಯನ್ನು 'ಕಿಲ್ಲಾ ಜುಮ್ಮಾ ಮಸೀದಿ' ಎಂದು ಸ್ಥಳೀಯವಾಗಿ ಕರೆಯುತ್ತಾರೆ. ಇದು 216 ಅಡಿ ಉದ್ದ ಹಾಗೂ 176 ಅಡಿ ಅಗಲ ವಿಸ್ತಾರವುಳ್ಳ ಮಸೀದಿಯಾಗಿದೆ. ಒಟ್ಟು 140 ಕಂಬಗಳನ್ನು ಬಳಸಿ 250 ಕಮಾನುಗಳಿಂದ ನಿರ್ಮಿಸಿ ಈ ಮಸೀದಿಯನ್ನು ನಿರ್ಮಿಸಲಾಗಿದೆ. ಈ ಮಸೀದಿ ಪ್ರವೇಶಕ್ಕೆ ದಕ್ಷಿಣ ಮತ್ತು ಉತ್ತರ ದಿಕ್ಕಿನ ಗೋಡೆಗಳಲ್ಲಿ ದ್ವಾರಗಳನ್ನು ಅಳವಡಿಸಲಾಗಿದೆ. ಇವುಗಳಲ್ಲಿ ಉತ್ತರ ಗೋಡೆಯ ದ್ವಾರವು ಅತ್ಯಂತ ಸುಂದರ ಹಾಗೂ ಎತ್ತರವಾದ ಕಮಾನಿನಿಂದ ಕೂಡಿದೆ. ಮಸೀದಿಯ ಹೊರಗೋಡೆಗಳನ್ನು ಗಾರೆಯಿಂದ ನಯಗೊಳಿಸಲಾಗಿದೆ. ಮಸೀದಿಯ ಒಳಾಂಗಣದ ಕಮಾನುಗಳು ಎರಡು ವಿಧವಾಗಿವೆ. 'ಅಗಲ' ಹಾಗೂ 'ಎತ್ತರ' ಶೈಲಿಯ ಕಮಾನುಗಳ ಬಳಕೆ ಇಲ್ಲಿದೆ. ಪ್ರಾರ್ಥನೆ ಮಾಡುವ 'ಮಿರ್ಹಾಬ್' ಸುಂದರವಾದ ವಿನ್ಯಾಸಗಳಿಂದ ಕೂಡಿದ ಕಮಾನು ಹಾಗೂ ವಿವಿಧ ಅಲಂಕಾರಗಳಿಂದ ಕೂಡಿದೆ. ಆದರೆ ಮಿರ್ಹಾಬ್ ಗೋಡೆಗಳು ಮಸೀದಿಯ 'ಖಿಬ್ಲಾ' ಗೋಡೆಯಲ್ಲಿ ವಿಲೀನವಾಗಿದ್ದು ಹೊರಗಡೆ ಮುಂಚಾಚಿಕೊಂಡಿಲ್ಲ. ಇದು ಒಂದು ವಿಶಿಷ್ಟ ಲಕ್ಷಣವೆಂದು ಗುರುತಿಸಲ್ಪಡುತ್ತದೆ. ಸಾಮಾನ್ಯವಾಗಿ ಮಸೀದಿಯ 'ಮಿರ್ಹಾಬ್' ಗೋಡೆಗಳು 'ಖಿಬ್ಲಾ' ಗೋಡೆಗಳಿಂದ ಮುಂಚಾಚಿಕೊಂಡಂತೆ ನಿರ್ಮಿಸುವ ಸಂಪ್ರದಾಯವನ್ನು ಕಾಣುತ್ತೇವೆ. ಆದರೆ ಇಲ್ಲಿ

ಅದರ ಅನುಪಸ್ಥಿತಿಯನ್ನು ಕಾಣುತ್ತೇವೆ. ಜುಮ್ಮಾ ಮಸೀದಿಗಳಲ್ಲಿ 'ಇಮಾಮ್'ರು ನಿಲ್ಲುವುದಕ್ಕೆ 'ಮಿನ್ಬಾರ್' (ಅಟ್ಟಣಿಗೆ) ನಿರ್ಮಿಸುವುದು ಸರ್ವೇಸಾಮಾನ್ಯ. ಆದರೆ ಅದು ಇಲ್ಲಿಲ್ಲ. ಇದರ ಮಾಳಿಗೆಯಲ್ಲಿ 63 ಅಡಿ ವ್ಯಾಸದ ದೊಡ್ಡ ಗುಮ್ಮಟ ಹಾಗು ಪಕ್ಕದಲ್ಲಿ ನಾಲ್ಕು ದೊಡ್ಡ ಮತ್ತು 63 ಕಿರು ಗಾತ್ರದ ಗುಮ್ಮಟಗಳಿವೆ. ಮೇಲ್ಛಾವಣಿ, ಗುಮ್ಮಟಗಳ ಹಾಸಿಗೆಯಂತೆ ಕಾಣುತ್ತದೆ.



ನಕ್ಷೆ-3 : ಜುಮ್ಮಾ ಮಸೀದಿಯ ತಲನಕ್ಷೆ [ಕೃಪೆ : ಜೇಮ್ಸ್ ಫರ್ಗೂಸನ್ 1910]

ರಚನೆ ಕಾಲ: ಈ ಮಸೀದಿಯ ನಿರ್ಮಾಣ ಕಾಲದ ಕುರಿತು ವಿದ್ವಾಂಸರಲ್ಲಿ ಜಿಜ್ಞಾಸೆಗಳಿವೆ. ದ್ವಾರದ ಬಲಗೋಡೆಯಲ್ಲಿರುವ 'ಅರಾಬಿಕ್' ಭಾಷೆಯ ಒಂದು ಶಿಲಾಶಾಸನ ಪ್ರಕಾರ, ಟರ್ಕಿ ದೇಶದ 'ಕ್ವಾಜ್ವಿನ್' ಪ್ರಾಂತ್ಯದ ವಾಸ್ತುಶಿಲ್ಪಿ 'ರಫಿ' ಎಂಬುವರು ಮಸೀದಿಯನ್ನು ಕ್ರಿ.ಶ. 1367 ರಲ್ಲಿ ನಿರ್ಮಿಸಿದರು ಎಂಬ ವಿಷಯ ತಿಳಿದು ಬರುತ್ತದೆ. ಆದರೆ ಕೆಲವು ಮಾಹಿತಿಗಳ ಪ್ರಕಾರ ಈ ಶಿಲಾಶಾಸನವು ಮೂಲತಃ ಈ ಮಸೀದಿಯ ಗೋಡೆಯ ಮೇಲೆ ಇರಲಿಲ್ಲ. ಈ ಮಸೀದಿಯ ಎಡಗಡೆಯ ಕಲ್ಲಿನ ರಾಶಿಗಳಲ್ಲಿ ಸಿಕ್ಕಿತ್ತು. ಅದನ್ನು ಮಸೀದಿಯ ದ್ವಾರದ ಜೀರ್ಣೋದ್ಧಾರ ಕೈಕೊಳ್ಳುವ ಸಂದರ್ಭದಲ್ಲಿ ಗೋಡೆಯಲ್ಲಿ ಸೇರಿಸಿ ಕಟ್ಟಲಾಗಿದೆ ಎಂಬ ವಾದವಿದೆ. ಇದಕ್ಕೆ ಕಾರಣವು ಇದೆ. ಈ ಮಸೀದಿಯು ಟರ್ಕಿಸ್ತಾನ್ ಅಥವಾ ದೆಹಲಿಯ ತೊಘಲಕ್ ಶೈಲಿಯಲ್ಲಿರದೇ, 'ಪರ್ಶಿಯಾ ದೇಶದ ವಾಸ್ತುಶಿಲ್ಪ ಶೈಲಿ'ಯಲ್ಲಿದೆ. ಪರ್ಶಿಯಾ ಶೈಲಿಯ ವಾಸ್ತುಶಿಲ್ಪವು ಸುಮಾರು 1400ರ ಕಾಲದಲ್ಲಿ ಗುಲಬರ್ಗಾದಲ್ಲಿ ಪರಿಚಯವಾಯಿತು. ಆ ಕಾರಣಕ್ಕಾಗಿ ಈ ಮಸೀದಿಯ ನಿರ್ಮಾಣ ಕಾಲವನ್ನು ಸುಮಾರು ಕ್ರಿ.ಶ. 1400ವೆಂದು ಹೇಳಲಾಗುತ್ತದೆ. ಇದನ್ನು ಫಿರೋಜ ಶಹಾ ನಿರ್ಮಿಸಿರುವುದಾಗಿ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. (Desai 1974:234)



ಚಿತ್ರ–8: ಜುಮ್ಮಾ ಮಸೀದಿಯ 1910ರ ಅವಧಿಯ ಹಳೆಯ ಚಿತ್ರ [ಕೃಪೆ : ಜೇಮ್ಸ್ ಫರ್ಗೂಸನ್]

ಶೈಲಿಯ ಕುರಿತಾದ ವಿದ್ವಾಂಸರ ವಾದಗಳು: ಈ ಮಸೀದಿಯ ಕುರಿತು ಮೊಟ್ಟಮೊದಲು ದಾಖಲಿಸಿದವರು ಕಾಲಿನ್ ಮೆಕೆಂಜಿ. ಕ್ರಿ.ಶ. 1797ರಲ್ಲಿ ಕೋಟೆಯ ನಕ್ಷೆ ರಚನೆಯಲ್ಲಿ ಈ ಮಸೀದಿಯ ವಿನ್ಯಾಸವನ್ನು ಹಾಗೂ ಜಲವರ್ಣ ಚಿತ್ರವನ್ನು ತಯಾರಿಸಿದ್ದಾನೆ. ಆ ಕಾಲದಲ್ಲಿ ಈ ಮಸೀದಿಯ ವಿಶೇಷತೆ ಗೊತ್ತಿರಲಿಲ್ಲ. ಸುಮಾರು ಒಂದು ಶತಮಾನದ ನಂತರ ಹೆಸರಾಂತ ವಿದ್ವಾಂಸ ಮೆಡೋಸ್ ಟೇಲರ್ 1897ರಲ್ಲಿ ಈ ಮಸೀದಿಯ ಕುರಿತು ಹೇಳುತ್ತಾ ಇದು 'ಸ್ಪೇನ್ ದೇಶದ ಕಾರ್ಡೋವಾ'ದ ಬೃಹತ್ ಮಸೀದಿಯ ಅನುಕರಣೆ ಎಂಬ ವಾದವನ್ನು ಮೊಟ್ಟಮೊದಲಿಗೆ ಮಂಡಿಸಿದನು. ಇದು ಈ ಮಸೀದಿಯ ಬಗ್ಗೆ ಹೆಚ್ಚು ಕುತೂಹಲ ಉಂಟಾಗಲು ಕಾರಣವಾಯಿತು. ಕ್ರಿ.ಶ. 1910ರಲ್ಲಿ ಜೇಮ್ಸ್ ಫರ್ಗೂಸನ್ ಕೂಡ ಈ ಮಸೀದಿಯ ವಾಸ್ತು ರಚನೆ ಕುರಿತು ಮಾಹಿತಿ ನೀಡಿದ್ದಾರೆ. ಪರ್ಸಿ ಬ್ರೌನ್ ಅವರು ಈ ಮಸೀದಿಯ ಶೈಲಿಯ ಬಗ್ಗೆ ಗುಣಗಾನ ಮಾಡಿದ್ದಾನೆ. ಅವನ ಅಭಿಪ್ರಾಯದಂತೆ ದಕ್ಷಿಣ ಭಾರತದಲ್ಲಿಯೇ ಮುಸ್ಲಿಂ ವಾಸ್ತುಶಿಲ್ಪದ ಅತ್ಯಂತ ಮಹತ್ವದ ಮತ್ತು ಆರಂಭಕಾಲದ ಸ್ಮಾರಕಗಳಲ್ಲಿ ಒಂದಾಗಿದೆ. ಹೆಸರಾಂತ ಚರಿತ್ರೆಕಾರ ಯಾಜ್ದಾನಿ ಅವರು ಈ ಮಸೀದಿಯ ವಿನ್ಯಾಸ ಕುರಿತು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಈ ಮಸೀದಿಯ ಶೈಲಿ ಕುರಿತು ನಿಖರವಾಗಿ ಹೇಳಿದವರು ಹೆಸರಾಂತ ವಿದ್ವಾಂಸ ಜೆಡ್.ಎ. ದೇಸಾಯಿ. 1974ರಲ್ಲಿ ಅವರು ತಮ್ಮ ಲೇಖನದಲ್ಲಿ ಈ ಮಸೀದಿಯ ರಚನೆಯು ಪರ್ಷಿಯಾ ಶೈಲಿಯಲ್ಲಿರುವುದಾಗಿ ಗುರುತಿಸುತ್ತಾ, ಇದರ ನಿರ್ಮಾಣವು ಫಿರೋಜ್ ಶಹಾ ಆಳ್ವಿಕೆಯ ಕಾಲಾವಧಿಯಲ್ಲಿ ಅಂದರೆ ಸು.1400ರ ಅವಧಿಯಲ್ಲಿ ಎಂದು ಹೇಳಿದ್ದಾರೆ. ಈ ದ್ವಾರದ ಮೇಲಿನ ಅರಾಬಿಕ್ ಶಿಲಾಶಾಸನದಲ್ಲಿ ಉಲ್ಲೇಖವಾಗಿರುವ 'ರಫಿ' ಎಂಬ ವಾಸ್ತುಶಿಲ್ಪಿಯು ಕ್ರಿ.ಶ. 1347ರಲ್ಲಿ ನಿರ್ಮಿಸಿದ ಮಸೀದಿ ಬೇರೆಯದೇ ಆಗಿರುವ ಸಾಧ್ಯತೆಯನ್ನು ವಿದ್ವಾಂಸ ದೇಸಾಯಿ ಅವರು ವ್ಯಕ್ತಪಡಿಸಿದ್ದಾರೆ. ಈ ವಾದವನ್ನು

ತದನಂತರ ಬಂದ ವಿದ್ವಾಂಸರಾದ ಜಾರ್ಜ್ ಮಿಶೆಲ್, ಎಲಿಜಬೆತ್ ಮರ್ಕಲಿಂಗರ್ ಹಾಗೂ ಹೆಲೆನ್ ಫಿಲೋನ್ ಅನುಮೋದಿಸಿದ್ದಾರೆ. ಇತ್ತೀಚೆಗೆ ಸಂಶೋಧಕಿ ಹೆಲೆನ್ ಫಿಲೋನ್ ಅವರು ಈ ಮಸೀದಿಯ ಕುರಿತಾಗಿ ಹೆಚ್ಚಿನ ಅಧ್ಯಯನ ಕೈಕೊಂಡಿದ್ದಾರೆ. ಅವರು ಈ ಮಸೀದಿಯು ಫಿರೋಜ್ ಶಹಾನ ಕಾಲದಲ್ಲಿ ದರ್ಬಾರ್ ನಡೆಸುವ 'ಒಡ್ಡೋಲಗ'ವಾಗಿತ್ತೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೇ ರಾಜ್ಯದ ಬಹುತೇಕ ರಾಜ ದರ್ಬಾರಿನ ಕಾರ್ಯಗಳು ಇಲ್ಲಿ ನಡೆಯುತ್ತಿದ್ದವೆಂದು ಹೇಳಿದ್ದಾರೆ. ಬಹಮನಿ ಸುಲ್ತಾನರು ಗುಲಬರ್ಗಾದಲ್ಲಿ ತಮ್ಮ ಆಳ್ವಿಕೆ ಆರಂಭಿಸಿದ ಕಾಲಾವಧಿಯಲ್ಲಿ ರಾಜ್ಯದ ದೈನಂದಿನ ದರ್ಬಾರುಗಳನ್ನು ನಡೆಸುವುದಕ್ಕೆ ಈ ತೆರನಾದ ಬೃಹತ್ ಕಟ್ಟಡಗಳನ್ನು ನಿರ್ಮಿಸಿದ್ದರೆಂಬ ವಾದ ಮಂಡಿಸಿದ್ದಾರೆ. ಆ ಕಾರಣಕ್ಕಾಗಿ ಈ ಮಸೀದಿಯನ್ನು ನಾಲ್ಕು ದಿಕ್ಕುಗಳಲ್ಲಿ ಕಮಾನಿನ ಗೋಡೆಗಳಿಂದ ಮುಚ್ಚಲಾಗಿದೆ. ಸಾಂಪ್ರದಾಯಿಕ ಮಸೀದಿಗಳ ನಿರ್ಮಾಣದ ಲಕ್ಷಣಗಳು ಇಲ್ಲಿ ಕಣ್ಮರೆಯಾಗಿರುವುದಕ್ಕೆ ಇದೊಂದು ದರ್ಬಾರ್ ಕಟ್ಟಡವಾಗಿರುವುದೇ ಮುಖ್ಯ ಕಾರಣವೆಂದು ಫಿಲೋನ್ ಅವರು ಅಭಿಪ್ರಾಯ ಪಟ್ಟಿದ್ದಾರೆ (Philon 2005: 77).

ಬಹಮನಿಯರ ಅರಮನೆಗಳು

ಸುಮಾರು ಮುಕ್ಕಾಲು ಶತಮಾನ ಕಾಲ ಬಹಮನಿ ರಾಜ್ಯದ ರಾಜಧಾನಿ ನಗರವಾಗಿದ್ದ ಈ ಕೋಟೆಯಲ್ಲಿ ಬಹಮನಿಯರು ಅರಮನೆ ಮತ್ತು ದರ್ಬಾರ್‌ಗಳನ್ನು ನಿರ್ಮಿಸಿದ್ದರೆ ಎಂಬ ಪ್ರಶ್ನೆ ಮೂಡುತ್ತದೆ. ಮುಖ್ಯವಾಗಿ ಒಂದನೇ ಮುಹಮ್ಮದ್ (1358–1375) ನಂತರ ಆಳ್ವಿಕೆಗೆ ಬಂದ ಐವರು ಸುಲ್ತಾನರ ಕಾಲಾವಧಿಯಲ್ಲಿ ನಡೆದ ಅನೇಕ ಫಿತೂರಿ ಮತ್ತು ಕಾದಾಟಗಳಿಂದ ಬಹಮನಿ ರಾಜ್ಯದ ಚರಿತ್ರೆಯು ಕೂಡಿದೆ. ಈ ರಾಜಕೀಯ ಚಟುವಟಿಕೆಗಳು ಕೋಟೆಯ ವಿವಿಧ ಅರಮನೆ, ದರ್ಬಾರಗಳಲ್ಲಿ ನಡೆದಿದ್ದವು ಎಂದು ದಾಖಲೆಗಳು ತಿಳಿಸುತ್ತವೆ. ಈ ಕೋಟೆಯ ಬಗ್ಗೆ ವಿಶೇಷ ಅಧ್ಯಯನ ಮಾಡಿರುವ ಫಿಲೋನ್ ಅವರು ಇಲ್ಲಿಯ ಬಾಳ-ಹಿಸಾರ್ [ರಣಮಂಡಲ] ಎಂದು ಕರೆಯುವ ಎತ್ತರದ ಕಟ್ಟಡ ಮತ್ತು ಇತರ ಅವಶೇಷಗಳನ್ನು ಪುನರ್ ಅವಲೋಕಿಸುವ ಬಹಮನಿ ಕಾಲದ ಅರಮನೆಗಳ ಹುಡುಕಾಟ ನಡೆಸಿದ್ದಾರೆ. ಇದು ಸುಮಾರು 40 ಅಡಿ ಎತ್ತರದ ಆಯತಾಕಾರದ ಕಟ್ಟಡವಾಗಿದೆ. ಇದರ ಪ್ರವೇಶಕ್ಕಾಗಿ ಉತ್ತರ ದಿಕ್ಕಿನಲ್ಲಿ ಮೆಟ್ಟಿಲುಗಳನ್ನು ಮಾಡಲಾಗಿದೆ. ಮೇಲ್ಭಾಗದಲ್ಲಿ ಆದಿಲ್ ಶಾಹಿಗಳ ಕಾಲದ ಉದ್ದನೆಯ ಕಬ್ಬಿಣದ ಫಿರಂಗಿಯನ್ನು ಇರಿಸಲಾಗಿದೆ. ಇದರ ನಿರ್ಮಾಣದ ಸ್ವರೂಪ ಗಮನಿಸಿದರೆ ಇದೊಂದು ಬತೇರಿಯಾಗಿ ಮಾರ್ಪಟ್ಟ ಕಟ್ಟಡವೆಂದು ಹೇಳಬಹುದು. ಮೂಲತಃ ಇದು ಎತ್ತರವಾದ ಆಯತಾಕಾರದ ಅಧಿಷ್ಠಾನ ಅಥವಾ ಬುನಾದಿ ಕಟ್ಟೆಯ ಮೇಲೆ ನಿರ್ಮಿಸಲಾಗಿದ್ದು 70 ಅಡಿ ಉದ್ದ ಹಾಗೂ 55 ಅಡಿ ಅಗಲವಾಗಿದೆ. ಇದಕ್ಕೆ ಉತ್ತರ ದಿಕ್ಕಿನಿಂದ ದ್ವಾರವನ್ನು ಮಾಡಲಾಗಿದ್ದು, ಒಳಗಡೆಯಿಂದ ಮೆಟ್ಟಿಲುಗಳನ್ನು ಮಾಡಲಾಗಿದೆ. ಎರಡು ಅಂತಸ್ತಿನ ಕಟ್ಟಡವೆನಿಸುವ ಈ ಬಾಳ-ಹಿಸಾರ್‌ನ ಮೇಲ್ಭಾಗದಲ್ಲಿ ಚಿಕ್ಕ ಕಟ್ಟೆಯನ್ನು ನಿರ್ಮಿಸಿ ಅದರ ಮೇಲೆ ಉದ್ದನೆಯ ಫಿರಂಗಿಯನ್ನು ಇರಿಸಲಾಗಿದೆ.

ಕೋಟೆಯ ಮಧ್ಯಭಾಗದಲ್ಲಿ ಇರುವ ಈ ಕಟ್ಟಡವು ಹಲವು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ. ಮೊದಲನೆಯದಾಗಿ ಸ್ಥಳದ ಆಯ್ಕೆ. ಕೋಟೆಯ ಒಳಾಂಗಣದ ಕೇಂದ್ರಸ್ಥಳವೆಂದು ಗುರುತಿಸಲ್ಪಡುವ ಸ್ಥಳದಲ್ಲಿ ಈ ಬತೇರಿಯನ್ನು ನಿರ್ಮಿಸಿ ಫಿರಂಗಿಯನ್ನು



ಚಿತ್ರ–9: ರಣಮಂಡಲ (ಬಾಳ ಹಿಸಾರ್) (ಬಹಮನಿ ಕಾಲದ ಸಭಾಂಗಣ?)

ಅಳವಡಿಸಿರುವುದು ಒಂದು ಅವೈಜ್ಞಾನಿಕ ಎನಿಸುತ್ತದೆ. ಸುಲ್ತಾನರು ಮತ್ತು ಅವರ ಪರಿವಾರದವರು ನೆಲೆಸಿರುವ ಸ್ಥಳದಲ್ಲಿಯೇ ಇದನ್ನು ನಿರ್ಮಿಸಿ ಅದರಿಂದ ಹೊರಡುವ ಫಿರಂಗಿಯ ಸಿಡಿಮದ್ದಿನ ಕರ್ಕಶ ಶಬ್ಧ ಮತ್ತು ಹೊರಹೊಮ್ಮುವ ಜ್ವಾಲೆ ನೆಲೆಸಿದವರ ಜೀವನವನ್ನೆ ಘಾಸಿಗೊಳಿಸುತ್ತದೆ. ಅಲ್ಲದೇ ಇದರ ಗೋಡೆಯ ರಚನೆಯೂ ಕೂಡ ವೈಶಿಷ್ಟ್ಯತೆಯಿಂದ ಕೂಡಿದೆ. ದಪ್ಪವಾದ ಗೋಡೆಯಾಗಿದ್ದರೂ, ಜೋಡಿ ಗೋಡೆಗಳಂತೆ ಎರಡು ಗೋಡೆಗಳಿಂದ ಕೂಡಿದೆ. ಪ್ರಾಯಶಃ ಎರಡು ಅಂತಸ್ತಿನ ಈ ಹಳೆಯ ಕಟ್ಟಡಕ್ಕೆ ನಂತರ ಹೊಸದಾಗಿ ಮತ್ತೊಂದು ಗೋಡೆಯನ್ನು ನಿರ್ಮಿಸಿ ಬತೇರಿಯನ್ನಾಗಿ ಪರಿವರ್ತಿಸಿದಂತಿದೆ. ಈ ಕಟ್ಟಡದ ಕುರಿತು ವಿಶೇಷ ಅಧ್ಯಯನ ಮಾಡಿದ ಫಿಲೋನ್ ಅವರು ಇದೊಂದು ಬಹಮನಿ ಕಾಲದ ಕಟ್ಟಡವಾಗಿದೆ ಎಂಬ ಅನುಮಾನವನ್ನು ಅವರು ವ್ಯಕ್ತಪಡಿಸಿದ್ದಾರೆ. ಬಹಮನಿಯರು ನಿರ್ಮಿಸಿದ ಫಿರೋಜಾಬಾದ್ ನಗರದಲ್ಲಿರುವ ಎರಡು ಅಂತಸ್ತಿನ ಕಟ್ಟಡದ ಸ್ವರೂಪಕ್ಕೆ ಹೋಲುವ ಈ ಕಟ್ಟಡ ಕೂಡ ಬಹಮನಿ ಕಾಲದ ದೊಡ್ಡ ಕಮಾನು ದ್ವಾರದ ಎರಡು ಅಂತಸ್ತಿನ ಸಭಾಂಗಣವಾಗಿದೆ ಎಂದು ಅವರು ವಿವರಿಸಿದ್ದಾರೆ. ಸುಲ್ತಾನರು ವಿವಿಧ ವರ್ಗದ ಗಣ್ಯರನ್ನು ಭೇಟಿ ಮಾಡುವ ಮತ್ತು ಸಭೆ ನಡೆಸುವದಕ್ಕಾಗಿ ನಿರ್ಮಿಸಲಾಗಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ [Philon 2005: 231]. ಇದೇ ಮಾದರಿಯ ಸಭಾಂಗಣವನ್ನು ವಾರಂಗಲ್ ಮತ್ತು ಫಿರೋಜಾಬಾದ್‌ಗಳಲ್ಲಿ ಕಾಣಬಹುದು. 14ನೇ ಶತಮಾನದ ಆರಂಭ ಕಾಲದಲ್ಲಿ ಸಿತಾಬ್ ಖಾನ್ ಎಂಬ ಸೇನಾಧಿಕಾರಿಯು ವಾರಂಗಲ್ಲಿನಲ್ಲಿ ನಿರ್ಮಿಸಿದ ಸಿತಾಬಖಾನ್ ಮಹಲ್ ಜೊತೆಗೆ ಹೋಲುತ್ತದೆ. ಬಹಮನಿಯರ ನಂತರ ಆದಿಲ್ ಶಾಹಿಗಳ ಆಳ್ವಿಕೆಗೆ ಒಳಪಟ್ಟನಂತರ ಈ ಕೋಟೆಯನ್ನು ಒಂದು ಸೇನಾ ನೆಲೆಯಾಗಿ ಮಾಡಿಕೊಂಡರು. ಆ ಸಂದರ್ಭದಲ್ಲಿ ಬಳಕೆಯಾಗದೆ ಇದ್ದ ದೊಡ್ಡ ಕಮಾನಿನ ಎತ್ತರದ ಸಭಾಂಗಣವನ್ನು ಒಂದು ಬತೇರಿಯನ್ನಾಗಿ ಮಾರ್ಪಡಿಸಿರಬಹುದೆಂದು ಊಹಿಸಬಹುದಾಗಿದೆ. ಇದಕ್ಕೆ ಪೂರಕವೆಂಬಂತೆ ಆದಿಲ್ ಶಾಹಿ ಕಾಲದ ಪರ್ಶಿಯನ್ ಭಾಷೆಯಲ್ಲಿ 'ಜಾಹಾರ್‌ಮಣಿ ಆದಿಲ್‌ಶಾಹಿ' ಎಂದು ಇಲ್ಲಿಯ ಲೋಹದ ಫಿರಂಗಿಯ ಮೇಲೆ ಬರೆಯಲಾಗಿದೆ (EIM 1981-82). ಈ ಶಾಸನವನ್ನು ಆಧರಿಸಿ ಬತೇರಿ ನಿರ್ಮಾಣದ ಬಗ್ಗೆ ತಿಳಿಯಬಹುದಾಗಿದೆ.

ಮಹಿಳೆಯರಿಗಾಗಿ ವಿಶೇಷ ಮಸೀದಿ

ಈ ಜುಮ್ಮಾ ಮಸೀದಿಯ ಮುಂಭಾಗದಲ್ಲಿ ಎತ್ತರದ ದಿಣ್ಣೆಯ ಮೇಲೆ ಮೂರು ಕಮಾನುಗಳ ಮಸೀದಿ ಇದೆ. ಸ್ಥಳೀಯವಾಗಿ ಇದನ್ನು ಮಹಿಳೆಯರ ಮಸೀದಿಯೆಂದು ಕರೆಯುತ್ತಾರೆ. ಈ ಮಸೀದಿಯೂ ಕೂಡ ಬಹಮನಿ ಕಾಲದ ವಾಸ್ತುಶೈಲಿಯಲ್ಲಿ ನಿರ್ಮಾಣವಾಗಿದೆ. ತೆರೆದ ಮೂರು ಕಮಾನುಗಳಿಂದ ಕೂಡಿದ ಈ ಮಸೀದಿಯನ್ನು ಕೋಟೆಯ ಮುಖ್ಯ ಭಾಗದಲ್ಲಿ ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿ ಬಾಳಹಿಸಾರ್ ಕಟ್ಟಡವಿದೆ. ಬಾಳಹಿಸಾರ್‌ದಿಂದ ಈ ಮಸೀದಿಯವರೆಗೆ ತಗ್ಗು ಪ್ರದೇಶವಿದೆ. ಇಲ್ಲಿ ಒಂದು ಚಿಕ್ಕ ಕೋಳವಿದ್ದಿರಬಹುದಾದ ಸಾಧ್ಯತೆ ಇದೆ.

ಬಜಾರಗಳು

ಬಹಮನಿ ಕೋಟೆಯ ವಿಶೇಷತೆಯೆಂದರೆ ಬಜಾರಗಳು. ಕೋಟೆಯ ಒಳಸುತ್ತಿನ ಗೋಡೆಯಲ್ಲಿರುವ ಪಶ್ಚಿಮ ದ್ವಾರಕ್ಕೆ ಹೊಂದಿಕೊಂಡಂತೆ ಎರಡು ಸಾಲುಗಳಂತೆ ಮಳಿಗೆಗಳನ್ನು ನಿರ್ಮಿಸಲಾಗಿದೆ. 570 ಅಡಿ ಉದ್ದ ಹಾಗೂ 60ಅಡಿ ಅಗಲವಾದ ಈ ಬಜಾರ್ ಬೀದಿ. ಒಟ್ಟು 90 ಮಳಿಗೆಗಳನ್ನು ಈ ಎರಡೂ ಸಾಲುಗಳ ಬಜಾರಿನಲ್ಲಿ ನಿರ್ಮಿಸಲಾಗಿದೆ. ಪ್ರತಿ ಮಳಿಗೆಗಳೂ ಕಮಾನಿಕಾರದ ದ್ವಾರ ಮತ್ತು ಪಿರಾಮಿಡ್ ವಿನ್ಯಾಸದ ಮೇಲ್ಛಾವಣಿಗಳಿಂದ ಕೂಡಿವೆ. ಇವುಗಳ ರಚನೆಯ ಶೈಲಿಯನ್ನು ಬಹಮನಿ ಕಾಲದ ವಾಸ್ತು ಶೈಲಿಯೆಂದು ಗುರುತಿಸಬಹುದು. ಬಜಾರದ ಬಲಬದಿಯ ಸಾಲಿನ ಪಕ್ಕದಲ್ಲಿ ಚಿಕ್ಕ ಮಸೀದಿಯನ್ನು ನಿರ್ಮಿಸಲಾಗಿದೆ. ಬಜಾರದ ವರ್ತಕರ ಪ್ರಾರ್ಥನೆಗೆ ಅನುಕೂಲವಾಗಲೆಂದು ಈ ಮಸೀದಿಯನ್ನು ನಿರ್ಮಿಸಲಾಗಿತ್ತು. ದ್ವಾರಕ್ಕೆ ಹೊಂದಿಕೊಂಡಂತೆ ಕೋಟೆಯ ಒಳಾಂಗಣಕ್ಕೆ ಪ್ರವೇಶಿಸುವಂತೆ ನಿರ್ಮಿಸಲಾದ ಈ ಬಜಾರವು ಪ್ರಾಯಶಃ ದಖ್ಖನ್ ಪ್ರದೇಶದಲ್ಲಿಯೇ ಪ್ರಥಮ ಸುಸಜ್ಜಿತ ಬಜಾರ ಆಗಿತ್ತು ಎಂದು ಹೇಳಲಾಗುತ್ತದೆ. ಈ ಬಜಾರವು ಕೋಟೆಯ ಒಳಗೆ ನೆಲೆಸಿದ್ದ ಸುಲ್ತಾನರು ಮತ್ತು ಅವರ ಪರಿವಾರದವರಿಗೆ ಮತ್ತು ಆಡಳಿತಾಧಿಕಾರಿಗಳಿಗೆ, ಸೇನೆಗೆ ಮತ್ತು ಪರಿಚಾರಕರಿಗೆ ಮೀಸಲಾಗಿತ್ತು ಎಂದು ತೋರುತ್ತದೆ. ಕೋಟೆಯ ನಿವಾಸಿಗಳಿಗೆ ಅನುಗುಣವಾಗಿ ಆಭರಣಗಳು, ಬೆಲೆಬಾಳುವ ವಸ್ತುಗಳು, ಸುಗಂಧ ದ್ರವ್ಯಗಳು, ಟರ್ಕಿಸ್ಥಾನ, ಪರ್ಶಿಯಾ ದೇಶಗಳ ಉಡುಪುಗಳು, ಆಯುಧಗಳು, ಇತ್ಯಾದಿಗಳನ್ನು ಈ ಬಜಾರದಲ್ಲಿ ಮಾರಲಾಗುತ್ತಿತ್ತು. ಬಹಮನಿಯವರ ಇನ್ನೊಂದು ನಗರವಾದ ಫಿರೋಜಾಬಾದಿನ ಬಜಾರಗಳನ್ನು ಇದು ಹೋಲುತ್ತಿದ್ದು, ಬಹಮನಿಯರ ನಿರ್ಮಾಣವೆಂದು ಗುರುತಿಸಬಹುದು.

ನೀರಿನ ವ್ಯವಸ್ಥೆ: ಕೋಟೆಯ ನಿವಾಸಿಗಳಿಗಾಗಿ ಸುವ್ಯವಸ್ಥಿತವಾದ ನೀರಿನ ಸೌಲಭ್ಯವನ್ನು ಮಾಡಲಾಗಿತ್ತು. ಕೋಟೆಯು ಸುತ್ತಲಿನ ಪ್ರದೇಶಕ್ಕಿಂತ ತಗ್ಗು ಪ್ರದೇಶದಲ್ಲಿದ್ದರಿಂದ ಹಾಗೂ ಆಳವಾದ ನೀರಿನ ಕಂದಕವಿರುವುದರಿಂದ ಕೋಟೆಯೊಳಗೆ ನೀರಿನ ಸೆಲೆಗಳಿವೆ. ಇವುಗಳನ್ನು ಬಳಸಿಕೊಂಡು ಕೆಲವು ಬಾವಿಗಳನ್ನು ನಿರ್ಮಿಸಲಾಗಿದೆ. ಕೋಟೆಯ ದಕ್ಷಿಣ ದ್ವಾರದ ಬಳಿಯಲ್ಲಿ ಮೆಟ್ಟಿಲುಗಳಿಂದ ಕೂಡಿದ ಬಾವಿಯನ್ನು ಈಗಲೂ ಕಾಣಬಹುದು. ಕೋಟೆಯ ಉತ್ತರದ ಒಳಾಂಗಣ ಪ್ರದೇಶವು ಎತ್ತರವಾಗಿದ್ದು ಇದು ದಕ್ಷಿಣಕ್ಕೆ ಇಳಿಜಾರಾದ ಪ್ರದೇಶದಂತಿದೆ. ಕೋಟೆಯಲ್ಲಿ ಬಿದ್ದ ಮಳೆನೀರು ದಕ್ಷಿಣಾಭಿಮುಖಿಯಾಗಿ ಹರಿಯುತ್ತದೆ. ಈ ಮಳೆನೀರನ್ನು ಶೇಖರಿಸುವ ವಿಧಾನವನ್ನು ಬಹಮನಿ ಕಾಲದಲ್ಲಿ ಮಾಡಲಾಗಿತ್ತು. ಅಲ್ಲಲ್ಲಿ ಬಾವಿಗಳನ್ನು ಮತ್ತು ಚಿಕ್ಕ ಕೊಳಗಳನ್ನು ನಿರ್ಮಿಸಲಾಗಿತ್ತು. ಈಗಲೂ ಚಿಕ್ಕ ಡ್ಯಾಮ್‌ಗಳಂತಹ ಮಣ್ಣಿನ

ದಿಣ್ಣೆಗಳನ್ನು ಕೋಟೆಯಲ್ಲಿ ಕಾಣಬಹುದು. ಬಹಮನಿಯವರ ಇನ್ನೊಂದು ರಾಜಧಾನಿಯಾದ ಬೀದರ್‌ನಲ್ಲಿ 'ಖರೇಝು' ಎಂದು ಕರೆಯಲ್ಪಡುವ ನೀರಿನ ಕಾಲುವೆಗಳು ನಿರ್ಮಿಸಿದ ಉದಾಹರಣೆಗಳಿವೆ. ಖರೇಝು ತಂತ್ರಜ್ಞಾನವು ಮೂಲತಃ ಮಧ್ಯ ಏಶಿಯಾ ದೇಶದಲ್ಲಿ ಪ್ರಚಲಿತದಲ್ಲಿತ್ತು. ಈ ತಂತ್ರಜ್ಞಾನವನ್ನು ಬಳಸಿ ಕಲಬುರ್ಗಿಯಲ್ಲಿ ನೀರಿನ ಕಾಲುವೆಗಳನ್ನು ನಿರ್ಮಿಸಿದ ವಿವರಗಳು ಇಲ್ಲಿಯವರೆಗೂ ದೊರೆತಿಲ್ಲ. ಪ್ರಾಯಶಃ ಭೂ-ಗರ್ಭದಲ್ಲಿ ನೈಸರ್ಗಿಕವಾಗಿ ದೊರೆಯುತ್ತಿದ್ದ ನೀರಿನ ಸಲೆಗಳು ಮಧ್ಯಕಾಲೀನ ನಗರ ಕಲಬುರ್ಗಿಗೆ ಸಾಕಾಗುತ್ತಿತ್ತು ಎಂದು ತೋರುತ್ತದೆ.

ಉದ್ಯಾನಗಳು : ಮಹ್ಮದೀಯ ನಗರಗಳ ನಿರ್ಮಾಣದಲ್ಲಿ ಉದ್ಯಾನಗಳು ಪ್ರಧಾನ ಪಾತ್ರ ವಹಿಸುತ್ತವೆ. ಮುಖ್ಯವಾಗಿ ಸುಲ್ತಾನರ ಅರಮನೆಯ ಭಾಗವಾಗಿ ಇವುಗಳನ್ನು ನಿರ್ಮಿಸುವ ಪರಿಪಾಠವಿತ್ತು. ಕೋಟೆಯ ಒಳಾಂಗಣದಲ್ಲಿ ಉದ್ಯಾನಗಳನ್ನು ನಿರ್ಮಿಸಿದ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಇಲ್ಲ. ಆದರೆ ಕೋಟೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕೆಲವು ಕಡೆಗಳಲ್ಲಿ ಉದ್ಯಾನಗಳನ್ನು ನಿರ್ಮಿಸಿದ ಸೂಚನೆಗಳು ಸಿಗುತ್ತವೆ. ಇಲ್ಲಿಯ ಮಹಿಳೆಯರಿಗಾಗಿ ಮಸೀದಿಯ ಮುಂಭಾಗದಲ್ಲಿ ಚಿಕ್ಕ ಕೊಳ ಸಮೇತ ಉದ್ಯಾನ ನಿರ್ಮಿಸಿರುವ ಸಾಧ್ಯತೆಗಳಿವೆ. ಅದರಂತೆ ಕೋಟೆಯ ಆಗ್ನೇಯ ದಿಕ್ಕಿನ ಇಳಿಜಾರು ಪ್ರದೇಶದಲ್ಲಿಯೂ ಉದ್ಯಾನಗಳನ್ನು ನಿರ್ಮಿಸಿರುವ ಸಾಧ್ಯತೆಗಳನ್ನು ಕಾಣಬಹುದು.

ಬಹಮನಿ ಕಾಲದ ನಗರದ ವಿನ್ಯಾಸ

ಬಹಮನಿ ಸುಲ್ತಾನರ ಆಳ್ವಿಕೆಯೊಂದಿಗೆ ದಖ್ಖನ್ನಿನ ಮಧ್ಯಕಾಲೀನ ನಗರೀಕರಣ ಪ್ರಕ್ರಿಯೆಯಲ್ಲಿ ಹೊಸ ಮಜಲು ಆರಂಭಗೊಂಡಿತು. ಮಹ್ಮದೀಯ ಸಮಾಜವು ನಗರ ಕೇಂದ್ರಿತವಾಗಿತ್ತು. ಕೃಷಿಯೇತರ ಜೀವನ ಶೈಲಿ ಈ ಸಂಸ್ಕೃತಿಯ ಪ್ರಮುಖ ಲಕ್ಷಣವಾಗಿತ್ತು. ಸುಲ್ತಾನರು, ಸೇನಾಧಿಕಾರಿಗಳು, ವಿವಿಧ ಹುದ್ದೆಯ ಆಡಳಿತಾಧಿಕಾರಿಗಳು, ಸೈನಿಕರು, ಪರಿಚಾರಕರು, ವರ್ತಕರು, ಇತ್ಯಾದಿಗಳಿಂದ ಕೂಡಿದ ಸಮಾಜ ಅದಾಗಿತ್ತು. ಮಧ್ಯಕಾಲೀನ ಮಹ್ಮದೀಯ ಸಂಸ್ಕೃತಿಗಳ ಹಿನ್ನೆಲೆಯ ನಗರಗಳಾಗಿದ್ದ ಬಹಮನಿ ನಗರಗಳು ಕೆಲವು ಮುಖ್ಯ ಲಕ್ಷಣಗಳಿಂದ ಕೂಡಿದ್ದವು. ಅವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

- ಮಧ್ಯ ಏಶಿಯಾ ಮೂಲದ ಬಹಮನಿ ಸುಲ್ತಾನರು ನಗರಗಳನ್ನು ನಿರ್ಮಿಸಲು ಮೈದಾನದಂತಹ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳುವ ಹಿನ್ನಲೆಯಾಗಿತ್ತು. ರಕ್ಷಣೆಗೆ ಆಧ್ಯತೆ ಇದ್ದರೂ ಹಲವು ನಾಗರಿಕ ಸೌಲಭ್ಯಗಳನ್ನು ಒದಗಿಸುವ ನಗರಗಳನ್ನು ನಿರ್ಮಿಸುವ ಸಂಪ್ರದಾಯವನ್ನು ಬಹಮನಿ ಕಾಲದ ನಗರಗಳ ನಿರ್ಮಾಣಗಳಲ್ಲಿ ಕಾಣುತ್ತೇವೆ. ಇವು ವಿಶಾಲವಾಗಿ ಹರಡಿಕೊಂಡಿದ್ದವು. ನಗರವನ್ನು ಮುಖ್ಯ ಮತ್ತು ಅಡ್ಡ ರಸ್ತೆಗಳಿಂದ ವಿಭಜಿಸಲಾಗುತ್ತಿತ್ತು. ಸಮಾಜದ ವಿವಿಧ ವರ್ಗದ ಸಮುದಾಯಗಳು ಇಲ್ಲಿ ನೆಲೆಯೂರಲು ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿತ್ತು. ಕಲಬುರ್ಗಿ ನಗರವು ಇದಕ್ಕೆ ಉತ್ತಮ ಉದಾಹರಣೆ.
- ಸಾಮಾನ್ಯವಾಗಿ ಇವರ ನಗರಗಳು ಭದ್ರವಾದ ಕೋಟೆಗಳಿಂದ ಕೂಡಿರುತ್ತಿದ್ದವು. ಆಳುವ ವರ್ಗದ ಸುಲ್ತಾನರು ಮತ್ತು ನೆಲೆಸಿದ ನಿವಾಸಿಗಳ ನಡುವಿನ ಸಂಬಂಧಗಳನ್ನು ಆಧರಿಸಿ ನಗರಗಳನ್ನು ಯೋಜಿಸಲಾಗುತ್ತಿತ್ತು. ಸುಲ್ತಾನರ ರಕ್ಷಣೆಗಾಗಿ ಪ್ರತ್ಯೇಕ ಕೋಟೆ ನಿರ್ಮಿಸುವದು ಅಥವಾ ಸುಲ್ತಾನರು ಮತ್ತು ಅಧಿಕಾರಿ ವರ್ಗ ಹಾಗೂ ನಾಗರಿಕರು ಒಟ್ಟಿಗೆ ಒಂದೇ ಕೋಟೆಯೊಳಗೆ ವಾಸಿಸುವ ಸಂಪ್ರದಾಯ ಇದ್ದವು.

ಕಲಬುರ್ಗಿ ಮತ್ತು ಬೀದರ್ ನಗರಗಳಲ್ಲಿ ಸುಲ್ತಾನರಿಗೆ ಪ್ರತ್ಯೇಕ ಕೋಟೆಯನ್ನು ನಿರ್ಮಿಸಿದ್ದರೆ; ಫಿರೋಜಾಬಾದ್, ಸಗರ, ಬಿಜಾಪುರ ನಗರಗಳು ಕೋಟೆಯುಕ್ತ ನಗರಗಳಾಗಿದ್ದವು.

- ನಗರದ ಕೇಂದ್ರ ಸ್ಥಾನದಲ್ಲಿದ್ದ ಜುಮ್ಮಾ ಮಸೀದಿಯು ಬಹುಮುಖ್ಯ ಲಕ್ಷಣವಾಗಿತ್ತು. ಬಡವ ಮತ್ತು ಬಲ್ಲಿದರೆಲ್ಲರೂ ಸರಿಸಮಾನವಾಗಿ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುವುದು ಧರ್ಮದ ಕರ್ತವ್ಯವಾಗಿತ್ತು. ಪ್ರತಿ ಶುಕ್ರವಾರದ ಪ್ರಾರ್ಥನೆಗೆ ಸುಲ್ತಾನರು ಅಥವಾ ಗಣ್ಯರು ಕೂಡ ನಗರವಾಸಿಗಳೊಂದಿಗೆ ಒಟ್ಟಿಗೆ ಪಾಲ್ಗೊಳ್ಳುವುದು ಸಂಪ್ರದಾಯವಾಗಿತ್ತು.

- ಜುಮ್ಮಾ ಮಸೀದಿಗಳಲ್ಲದೆ ದಿನನಿತ್ಯದ ಪ್ರಾರ್ಥನೆಗಳಿಗೆ ಪ್ರತಿ ಬಡಾವಣೆಯಲ್ಲಿಯೂ ಪ್ರತ್ಯೇಕವಾದ ಮಸೀದಿಗಳನ್ನೂ ನಿರ್ಮಿಸಲಾಗುತ್ತಿತ್ತು. ಇವುಗಳ ವಿಸ್ತಾರಗಳು ಆಯಾ ಬಡಾವಣೆಯ ವಿಸ್ತಾರಕ್ಕೆ ಅನುಗುಣವಾಗಿರುತ್ತಿದ್ದವು.

- ಮಸೀದಿಯ ಮುಂಭಾಗ ಅಥವಾ ಪ್ರವೇಶದ್ವಾರಕ್ಕೆ ಹೊಂದಿಕೊಂಡಂತೆ ಎರಡು ಸಾಲುಗಳ ಮಳಿಗೆಗಳಿಂದ ಕೂಡಿದ ಬಜಾರ ನಿರ್ಮಿಸಲಾಗುತ್ತಿತ್ತು. ಮಹ್ಮದೀಯ ನಗರಗಳು ಮೂಲತಃ ವಾಣಿಜ್ಯ ನಗರಗಳಾಗಿರುತ್ತಿದ್ದವು (Urban Centres). ದೇಶ ವಿದೇಶಗಳ ವಸ್ತುಗಳು, ಆಭರಣಗಳು, ಸುಗಂಧ ದ್ರವ್ಯಗಳು, ಹಾಸುಗಂಬಳಿಗಳು, ಕಲಾ ಸಾಮಗ್ರಿಗಳು, ಲೋಹದ ಆಯುಧಗಳು, ಇತ್ಯಾದಿಗಳು ಈ ಬಜಾರದಲ್ಲಿ ಮಾರಾಟವಾಗುತ್ತಿದ್ದವು.

- ಹಮಾಮ್‌ಗಳು ಅಥವಾ ಹಬೆ ಸ್ನಾನಗೃಹಗಳು ಮಹ್ಮದೀಯ ನಗರಗಳ ನಿರ್ಮಾಣಗಳಲ್ಲಿ ಕಂಡು ಬರುವ ಮತ್ತೊಂದು ಪ್ರಮುಖ ಲಕ್ಷಣ. ಫಿರೋಜಾಬಾದ್ ನಗರದಲ್ಲಿ ಹಮಾಮ್‌ಗಳನ್ನು ನಿರ್ಮಿಸಲಾಗಿದೆ. ಆದರೆ ಇದು ಕಲಬುರ್ಗಿಯ ಕೋಟೆಯಲ್ಲಿ ದೊರೆತಿರುವ ಮಾಹಿತಿ ಇಲ್ಲ.

- ಮಹ್ಮದೀಯರ ನಗರಗಳ ನಿರ್ಮಾಣಗಳಲ್ಲಿ ಧಾರ್ಮಿಕ ಮುಖಂಡರು ಅಥವಾ ಸೂಫಿ ಸಂತರ ಗಾಢ ಪ್ರಭಾವವನ್ನು ಕಾಣುತ್ತೇವೆ. ಪವಿತ್ರ ಕ್ಷೇತ್ರಗಳೆಂದು ದರ್ಗಾಗಳನ್ನು ಪರಿಗಣಿಸಲಾಗುತ್ತಿತ್ತು. ದರ್ಗಾಗಳನ್ನು ಕೇಂದ್ರವಾಗಿ ಮಾಡಿಕೊಂಡು ನಗರಗಳು ನಿರ್ಮಾಣವಾಗುತ್ತಿದ್ದವು. ಸೂಫಿ ಸಂತರ ದರ್ಗಾಗಳ ಪರಿಧಿಯಲ್ಲಿ ಅವರ ಅನುಯಾಯಿಗಳ ಗೋರಿಗಳನ್ನು ನಿರ್ಮಿಸುವುದು ಸಂಪ್ರದಾಯವಾಗಿತ್ತು. ಕಲಬುರ್ಗಿ ನಗರದ ರಚನೆಯಲ್ಲಿ ಸೂಫಿ ಸಂತರ ಪಾತ್ರ ಮತ್ತು ಅವರ ಪ್ರಭಾವವನ್ನು ಗುರುತಿಸಬಹುದು. ಅಸಂಖ್ಯಾತ ಗೋರಿಗಳನ್ನು ಊರಿನೆಲ್ಲೆಡೆ ಕಾಣಬಹುದು.

- ಕೆಲವು ನಗರಗಳನ್ನು ದರ್ಗಾಗಳು ಇರುವ ಸ್ಥಳದಲ್ಲಿಯೇ ನಿರ್ಮಿಸಿರುವುದುನ್ನು ಕಾಣುತ್ತೇವೆ. ಬಹಮನಿಯರು ನಿರ್ಮಿಸಿದ ಫಿರೋಜಾಬಾದ್ ನಗರ ರಚನೆಗೂ ಮೊದಲೇ ಅಲ್ಲಿ ನೆಲೆಸಿದ್ದ ಸೂಫಿ ಸಂತನ ದರ್ಗಾ ಇತ್ತು. ದರ್ಗಾದ ದ್ವಾರಕ್ಕೆ ಎದುರಾಗಿ ಫಿರೋಜಾಬಾದ್ ನಗರ ನಿರ್ಮಿಸಿರುವುದನ್ನು ಕಾಣಬಹುದು.

ಒಂದು ನಗರ ಎರಡು ಪಟ್ಟಣಗಳು

ಬಹಮನಿ ಕಾಲದಲ್ಲಿ ಬೆಳೆದ ಕಲಬುರ್ಗಿ ನಗರವು ಹಲವು ವೈಶಿಷ್ಟ್ಯತೆಗಳಿಂದ ಕೂಡಿತ್ತು. ಸುಲ್ತಾನರಿಗಾಗಿ ಕೋಟೆ ನಿರ್ಮಿಸಲಾಗಿತ್ತಾದರೂ ನಾಗರಿಕರಿಗೆ ಕೋಟೆಯ

ಹೊರಭಾಗದ ಮೈದಾನದಂತಹ ಪ್ರದೇಶದಲ್ಲಿ ನಗರವನ್ನು ನೆಲೆಗೊಳಿಸಲಾಗಿತ್ತು. ಈ ನಗರವು ಎರಡು ಭಾಗಗಳಾಗಿ ಕೋಟೆಯ ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿ ಪ್ರತ್ಯೇಕವಾಗಿ ನಿರ್ಮಾಣಗೊಂಡಿದ್ದವು. ಈ ಎರಡು ಪ್ರತ್ಯೇಕ ಭಾಗಗಳು ವಲಯ ಅಥವಾ ಉಪನಗರಗಳಂತೆ ಬಹಮನಿಯರ ಕಾಲದಲ್ಲಿ ನಿರ್ಮಾಣಗೊಂಡವು (**ನಕ್ಷೆ–2**). ಇವುಗಳನ್ನು ಹೀಗೆ ಗುರುತಿಸಬಹುದು:

- ಉತ್ತರ ವಲಯ ಅಥವಾ ಶಹಾಬಜಾರ್ ಪಟ್ಟಣ
- ಪೂರ್ವ ವಲಯ ಪಟ್ಟಣ

ಉತ್ತರ ವಲಯ ಅಥವಾ ಶಹಾಬಜಾರ ಪಟ್ಟಣ

ಬಹಮನಿ ರಾಜ್ಯ ಸ್ಥಾಪನೆಗೆ ಮುಂಚೆ ಇದ್ದ ಕಲಂಬುರಗೆ ಪಟ್ಟಣವು ಈಗಿನ ಆಳಂದ ನಾಕಾದಿಂದ ಶಹಾಬಜಾರದ ಮಲಂಗ್ ಹೋಟೆಲ್ ವರೆಗೆ ಹರಡಿಕೊಂಡಿತ್ತು. ಹಳೆಯ ಈ ಪಟ್ಟಣವು ಕೋಟೆಯ ಉತ್ತರದ ದಿಕ್ಕಿಗೆ ಇದ್ದ ಹಳೆಯ ಪಟ್ಟಣವಾಗಿತ್ತು ಹಾಗೂ ಅತಿ ಹತ್ತಿರದ ಪಟ್ಟಣವೆನಿಸಿತ್ತು. ಬಹಮನಿ ಸುಲ್ತಾನರು ಈ ಪಟ್ಟಣವನ್ನು ವಿಸ್ತರಿಸಿ ದೊಡ್ಡ ಪಟ್ಟಣವನ್ನಾಗಿಸಿದರು. ಶಹಾಬಜಾರ್ ಎಂದು ಕರೆಯುವ ಪ್ರದೇಶವು ಬಹಮನಿ ಸುಲ್ತಾನರು ನಿರ್ಮಿಸಿದ ಪಟ್ಟಣವಾಗಿತ್ತು. ಇದು ಆಯತಾಕಾರದ ವಿನ್ಯಾಸವನ್ನು ಹೊಂದಿತ್ತು. ಸುಮಾರು 1360ರ ಅವಧಿಯಲ್ಲಿ ಬಹಮನಿಯರು ಇಲ್ಲಿಯ ಹಳೆಯ ಊರನ್ನು ಒಂದು ವಿಸ್ತಾರವಾದ (ಶಹಾಬಜಾರ) ಪಟ್ಟಣವನ್ನಾಗಿ ವಿಸ್ತರಿಸಲು ಪ್ರಾರಂಭಿಸಿದರೆಂದು ವಿದ್ವಾಂಸರು ಗುರುತಿಸಿದ್ದಾರೆ (Philon 2005: 72). ಶಹಾಬಜಾರ ಪಟ್ಟಣವು ಸುಲ್ತಾನರ ವಿಶೇಷ ಮತ್ತು ಆತ್ಮೀಯ ಪಟ್ಟಣವಾಗಿತ್ತು. ಬಹಮನಿ ರಾಜ್ಯ ಸ್ಥಾಪನೆಯಲ್ಲಿ ಬಹಳ ಮಹತ್ವದ ಪಾತ್ರವಹಿಸಿದ್ದ ಸೂಫಿ ಸಂತ ಸಿರಾಜುದ್ದೀನ್ ಜುನೈದಿ ಮಿರಜ್ ನಗರವನ್ನು ತೊರೆದು ಇಲ್ಲಿಗೆ ಬಂದು ನೆಲೆಸಿದ್ದನು. ಜುನೈದಿ ಅವರ ದರ್ಗಾ ಶಹಾಬಜಾರ್ ಹತ್ತಿರದಲ್ಲಿಯೇ ನಿರ್ಮಾಣವಾಗಿತ್ತು. ಈ ಎಲ್ಲಾ ಕಾರಣಗಳಿಂದ ಶಹಾಬಜಾರ್ ಪಟ್ಟಣದಲ್ಲಿ ರಾಜ್ಯದ ಗಣ್ಯ ವರ್ಗದ ನಾಗರಿಕರು ನೆಲೆಸಿದ್ದರೆಂದು ಇದರ ವಿನ್ಯಾಸದಿಂದ ಗುರುತಿಸಬಹುದಾಗಿದೆ. ಆಯತಾಕಾರ ವಿನ್ಯಾಸದಲ್ಲಿ ನಿರ್ಮಾಣವಾಗಿದ್ದ ಈ ಪಟ್ಟಣವನ್ನು ಒಂದು ಮುಖ್ಯ ರಸ್ತೆಯು ಎರಡು ಭಾಗಗಳನ್ನಾಗಿ ವಿಂಗಡಿಸುತ್ತಿತ್ತು. ಈ ರಸ್ತೆಯು ಆಳಂದ ನಾಕಾದಿಂದ ಪ್ರಾರಂಭಗೊಂಡು ಮಲಂಗ್ ಹೋಟೆಲ್ ಮೂಲಕ ಉತ್ತರ ದಿಕ್ಕಿನಲ್ಲಿರುವ ಶಹಾಬಜಾರದ ಜುಮ್ಮಾ ಮಸೀದಿಯ ಪೂರ್ವದ ದ್ವಾರದವರೆಗೆ ವಿಸ್ತರಿಸಿತ್ತು.

ಶಹಾಬಜಾರ ಜುಮ್ಮಾ ಮಸೀದಿ (ಕ್ರಿ.ಶ.1370) : ರಾಜಧಾನಿಯ ಪ್ರಥಮ ಜುಮ್ಮಾ ಮಸೀದಿ ಇದಾಗಿದೆ. ಇದನ್ನು ಬಹಮನಿ ಸುಲ್ತಾನ ಮೊದಲನೆಯ ಮುಹ್ಮದ ಶಹಾ ಕ್ರಿ.ಶ. 1370ರಲ್ಲಿ ನಿರ್ಮಿಸಿದ್ದಾನೆ. ಇದು ಕೋಟೆಯ ಒಳಾಂಗಣದಲ್ಲಿರುವ ಜುಮ್ಮಾ ಮಸೀದಿಗಿಂತಲೂ ಮೊದಲೇ ನಿರ್ಮಾಣವಾಗಿತ್ತು. ಮಹ್ಮದೀಯ ಸಂಸ್ಕೃತಿಯ ನಗರಗಳ ರಚನೆಯಲ್ಲಿ ಪ್ರಮುಖ ಪಾತ್ರವಹಿಸುವ ಜುಮ್ಮಾ ಮಸೀದಿಯನ್ನು ಊರಿನ ನಡುವೆ ನಿರ್ಮಾಣ ಮಾಡುವ ಸಂಪ್ರದಾಯವಿದೆ. ಅದರಂತೆ ಶಹಾಬಜಾರಿನ ಜುಮ್ಮಾ ಮಸೀದಿಯು ಕೋಟೆ ಆಚೆಯ ಊರಿನಲ್ಲಿ ನಿರ್ಮಿಸಿರುವುದನ್ನು ಇಲ್ಲಿ ಗಮನಿಸುವಂತದ್ದು. ಈ ಮಸೀದಿಯು ಬಹಮನಿಯವರ ಆರಂಭಿಕ ವಾಸ್ತುಶಿಲ್ಪ ಕಲೆಯ ಎಲ್ಲಾ ಲಕ್ಷಣಗಳನ್ನು ಹಾಗೂ ದೆಹಲಿಯ ತುಘಲಕ್ ಕಲೆಯ ಪ್ರಭಾವವನ್ನು ಒಳಗೊಂಡಿದೆ. ಈ ಮಸೀದಿಯು

ಶಹಾಬಜಾರಿನ ಉತ್ತರದ ಅಂಚಿನಲ್ಲಿ ರಸ್ತೆಯ ಬಲ ಭಾಗಕ್ಕೆ ನಿರ್ಮಾಣವಾಗಿದೆ. ಆಯತಾಕಾರದ ವಿನ್ಯಾಸವುಳ್ಳ ಈ ಮಸೀದಿಯ ಪೂರ್ವದ ಗೋಡೆಯಲ್ಲಿ ಗುಮ್ಮಟವುಳ್ಳ ಪ್ರವೇಶ ದ್ವಾರವಿದೆ. ಇಂತಹ ದ್ವಾರ ನಿರ್ಮಿಸುವ ಸಂಪ್ರದಾಯವನ್ನು ಬಹಮನಿ ವಾಸ್ತುಶಿಲ್ಪ ಕಲೆಯ ಆರಂಭಿಕ ಹಂತದಲ್ಲಿ ಕಾಣುತ್ತೇವೆ. ಫಿರೋಜಾಬಾದ್ ಹಾಗೂ ಪಕ್ಕದ ಸುಲ್ತಾನಾಪುರಗಳಲ್ಲಿ ಗುಮ್ಮಟವುಳ್ಳ ಪ್ರವೇಶ ದ್ವಾರಗಳನ್ನು ಕಾಣುತ್ತೇವೆ. 1370ರಲ್ಲಿ ನಿರ್ಮಿಸಿದ ಈ ಜುಮ್ಮಾ ಮಸೀದಿಯ ಮತ್ತೊಂದು ವಿಶೇಷವೆಂದರೆ ಇದರ ಪ್ರಾರ್ಥನಾ ಸ್ಥಳ. ಇದು 60 ಅಡಿ ಉದ್ದ ಹಾಗೂ 150 ಅಡಿ ಅಗಲವಾಗಿದ್ದು, 36 ಕಂಬಗಳಿಂದ ನಿರ್ಮಿಸಿದ ಕಮಾನುಗಳನ್ನುಳ್ಳ ಅಂಕಣಗಳನ್ನು ಒಳಗೊಂಡಿದೆ. ಇದರ ಖಿಬ್ಲಾ ಗೋಡೆಯಲ್ಲಿ ಒಂದು ಚಿಕ್ಕ ದಿಡ್ಡಿ ಬಾಗಿಲನ್ನು ಮಾಡಲಾಗಿದೆ. ಇದರ ಮೂಲಕ ರಾಜ್ಯದ ಗಣ್ಯರು ಅಥವಾ ಸುಲ್ತಾನರು ಜುಮ್ಮಾ ಮಸೀದಿಗೆ ಶುಕ್ರವಾರದ ಪ್ರಾರ್ಥನೆಗೆ ನೇರವಾಗಿ ಒಳಪ್ರವೇಶಿಸಬಹುದಾಗಿತ್ತು. ಈ ತೆರನಾದ ದಿಡ್ಡಿ ಬಾಗಿಲುಗಳಿರುವ ಬಹಮನಿಯರ ಕಾಲದ ಇನ್ನೆರಡು ಜುಮ್ಮಾ ಮಸೀದಿಗಳನ್ನು ಫಿರೋಜಾಬಾದ್ ಮತ್ತು ಯಾದಗಿರ ಜಿಲ್ಲೆಯ ಸಗರದಲ್ಲಿ ಕಾಣಬಹುದು. ಕಲಬುರ್ಗಿಯ ಮಸೀದಿ ಹಿಂಭಾಗದಲ್ಲಿ ಧಾರ್ಮಿಕ ಗುರು ಸೀರಾಜುದ್ದೀನ್ ಜುನ್ಯೆದಿ ಅವರ ದರ್ಗಾ ಇದೆ.

ಜುನ್ಯೆದಿ ದರ್ಗಾ : ಬಹಮನಿ ಸಂಸ್ಥಾಪಕ ಅಲ್ಲಾವುದ್ದೀನ್ ಹಸನ್ ಶಹಾ ಸುಲ್ತಾನನ ಧಾರ್ಮಿಕ ಗುರು ಆಗಿದ್ದ ಸೂಫಿ ಸಂತ ಸಿರಾಜುದ್ದೀನ್ ಜುನ್ಯೆದಿ ದೇವಗಿರಿಯಲ್ಲಿ ನೆಲೆಸಿದ್ದನು. ಅಲ್ಲಿಂದ ಕೆಲ ಕಾಲ ಮೀರಜ್ ನಗರದಲ್ಲಿ ನೆಲೆಸಿದ್ದನೆಂದು ತಿಳಿದುಬರುತ್ತದೆ. ಬಹಮನಿ ಸುಲ್ತಾನ ಮೊದಲ ಮುಹ್ಮದ ಶಹಾ ಹೊಸದಾಗಿ ನಿರ್ಮಿಸಿದ ರಾಜ್ಯದ ರಾಜಧಾನಿಗೆ ಬಂದು ನೆಲೆಸುವಂತೆ ಜುನ್ಯೆದಿಗೆ ಆಹ್ವಾನವನ್ನು ನೀಡುತ್ತಾನೆ. 1368ರಲ್ಲಿ ಸಿರಾಜುದ್ದೀನ್ ಜುನ್ಯೆದಿ ತನ್ನ ಅಪಾರ ಅನುಯಾಯಿಗಳೊಂದಿಗೆ ಕಲಬುರ್ಗಿಗೆ ಆಗಮಿಸುತ್ತಾನೆ. ಬಹಮನಿ ಸುಲ್ತಾನ ಮುಹ್ಮದ ಶಹಾ ಸ್ವತಃ ನಗರದ ಪ್ರವೇಶ ದ್ವಾರದಲ್ಲಿ ಬಹಳ ಸಂಭ್ರಮದಿಂದ ಸಂತನನ್ನು ಸ್ವಾಗತಿಸಿದನೆಂದು ಫೆರಿಸ್ತಾ ಉಲ್ಲೇಖಿಸಿದ್ದಾನೆ. ಇದಕ್ಕೂ ಮೊದಲು ಸಂತನು ನೆಲೆಸುವ ಸ್ಥಳವನ್ನು ಗುರುತುಮಾಡಿ ಅಲ್ಲೊಂದು ಬಾವಿಯನ್ನು ನಿರ್ಮಿಸಿದನೆಂದು ಈ ದರ್ಗಾದ ಬಳಿಯ ಬಾವಿಯ ಗೋಡೆಯಲ್ಲಿರುವ 1367ರ ಪರ್ಶಿಯನ್ ಶಾಸನದಿಂದ ತಿಳಿದುಬರುತ್ತದೆ (Haig 1907). ಸಂತನು ನೆಲೆಸಿದ ಸ್ಥಳವು ಹಲವು ಸಾಂಸ್ಕೃತಿಕ ಚಟುವಟಿಕೆಗಳಿಗೆ ಕೇಂದ್ರವಾಗಿತ್ತು. ಸುಲ್ತಾನರಲ್ಲದೆ, ಊರಿನ ಗಣ್ಯರು ಮತ್ತು ನೆರೆಯ ರಾಜ್ಯಗಳ ಪ್ರಜೆಗಳು ಈ ಸೂಫಿ ಸಂತರ ಅನುಯಾಯಿಗಳಾಗಿದ್ದರು. ಈ ದರ್ಗಾದ ಹತ್ತಿರದಲ್ಲಿಯೇ ಅನೇಕ ಗಣ್ಯರ ಗೋರಿಗಳು ನಿರ್ಮಾಣವಾಗಿರುವುದನ್ನು ಇಂದಿಗೂ ಕಾಣಬಹುದು. ಈ ದರ್ಗಾದ ದಕ್ಷಿಣಕ್ಕೆ ಹಾಗೂ ಕೋಟೆಯ ಪಶ್ಚಿಮಕ್ಕೆ ಬಹಮನಿ ಸಂಸ್ಥಾಪಕ ಅಲ್ಲಾವುದ್ದೀನ್ ಶಹಾ ಮತ್ತು ಆರಂಭಿಕ ಸುಲ್ತಾನರ ಗೋರಿಗಳಿವೆ. ಇವುಗಳಿಗೆ ಹತ್ತಿರದಲ್ಲಿಯೇ ಹಳೆಯ ಈದ್ಗಾ ಮಸೀದಿ ಇತ್ತು. ಇದಕ್ಕೆ ಹೊಂದಿಕೊಂಡಂತೆ ಬೃಹತ್ ಗುಮ್ಮಟದ ಗೋರಿ ಇರುವುದು. ಇದನ್ನು ಚೋರ್–ಗುಂಬಜ್ ಎಂದು ಕರೆಯುತ್ತಾರೆ.

ಚೋರ್–ಗುಂಬಜ್: ಈ ಗುಂಬಜನ್ನು ಸುಲ್ತಾನ ಮೊದಲ ಅಹ್ಮದ ಶಹಾ 1420ರ ದಶಕದಲ್ಲಿ ನಿರ್ಮಿಸಿದನೆಂದು ತಿಳಿದುಬರುತ್ತದೆ. ದಾಯಾದಿಗಳ ಕಲಹಗಳಲ್ಲಿ ಸುಲ್ತಾನ ಫಿರೋಜ್ ಶಹಾನ ವಿರುದ್ಧ ಜಯಶಾಲಿಯಾದ ನೆನಪಿಗೆ ಹಾಗೂ ಇದಕ್ಕೆ ನೈತಿಕ

ಬೆಂಬಲ ನೀಡಿದ್ದ ಸಂತ ಬಂದೇ ನವಾಜ್ ಅವರಿಗೆ ಅರ್ಪಣೆಯ ರೂಪದಲ್ಲಿ ಸುಲ್ತಾನ ನಿರ್ಮಿಸಿದನೆಂದು ಫಿಲೋನ್ ಅವರು ಆಭಿಪ್ರಾಯ ಪಟ್ಟಿದ್ದಾರೆ (Philon 2005: 245). ಇದರ ಗುಮ್ಮಟವು ನಗರದಲ್ಲಿಯೇ ಅತಿ ದೊಡ್ಡ ಗುಮ್ಮಟವೆನಿಸಿದೆ. ಗುಮ್ಮಟದ ನಾಲ್ಕು ಮೂಲೆಗಳ ಕುಂಬಿಗಳಲ್ಲಿ ಗುಂಬಜ್ ಪ್ರತಿಕೃತಿಯಂತೆ ಚಿಕ್ಕ ಗುಮ್ಮಟಗಳನ್ನು ರಚಿಸಲಾಗಿದೆ. ಇವು ಮೊಘಲ್ ವಾಸ್ತುಶಿಲ್ಪ ಕಲೆಯಲ್ಲಿ ಕಾಣಬರುವ 'ಛತ್ರಿ' ಅಥವಾ ಗೋಪುರಗಳಂತೆ ಕಾಣುತ್ತವೆ. ಗುಂಬಜ್ ಎತ್ತರವಾಗಿದ್ದರಿಂದ ಎರಡು ಅಂತಸ್ತಿನ ಮಾದರಿಯಲ್ಲಿ ನಿರ್ಮಾಣವಾಗಿದೆ. ಇದರ ಒಳಭಾಗದಲ್ಲಿ ಅಟ್ಟಣಿಗೆ ಅಥವಾ ಬಾಲ್ಕನಿ ಗ್ಯಾಲರಿ ಮಾಡಲಾಗಿದೆ. ಮಹಿಳೆಯರು ಈ ಗ್ಯಾಲರಿಯಲ್ಲಿ ಕುಳಿತು ಗುಂಬಜ್‌ದಲ್ಲಿ ನಡೆಯುವ ವಿವಿಧ ಧಾರ್ಮಿಕ ಆಚರಣೆಗಳನ್ನು ವೀಕ್ಷಿಸುತ್ತಿದ್ದರೆಂದು ಫಿಲೋನ್ ಅವರು ಅಭಿಪ್ರಾಯ ಪಟ್ಟಿದ್ದಾರೆ (Philon 2005: 245).

ಪೂರ್ವ ವಲಯ ಪಟ್ಟಣ : ಕೋಟೆಯ ಪೂರ್ವ ದಿಕ್ಕಿಗೆ ವಿಶಾಲವಾಗಿ ಹರಡಿಕೊಂಡಿದ್ದ ಪೂರ್ವ ವಲಯ ಪಟ್ಟಣವು ಬಹಮನಿಯರು ನಿರ್ಮಿಸಿದ ಸುವ್ಯವಸ್ಥಿತ ನಗರವೆನಿಸಿತ್ತು. ಇದು ಈ ಹಿಂದೆ ಹೇಳಿದಂತೆ ಪಶ್ಚಿಮದಲ್ಲಿ ಪ್ರಕಾಶ ಟಾಕೀಸ್‌ನಿಂದ ಪ್ರಾರಂಭಗೊಂಡು ಪೂರ್ವ ದಿಕ್ಕಿನಲ್ಲಿ ಹಪ್ತ ಗುಂಬಜ್ ವರೆಗೂ ಹಾಗೂ ಉತ್ತರ ದಿಕ್ಕಿನಲ್ಲಿ ಈಗೀನ ಬಂಬೂ ಬಜಾರದಿಂದ ಪ್ರಾರಂಭವಾಗಿ ದಕ್ಷಿಣ ದಿಕ್ಕಿನಲ್ಲಿ ಈಗಿನ ಸೂಪರ್ ಮಾರ್ಕೆಟ್ ಪೋಲಿಸ್ ಠಾಣೆಯವರೆಗೂ ವಿಸ್ತರಿಸಿತ್ತು. ಈ ವಿಶಾಲವಾದ ನಗರಕ್ಕೆ ಕೋಟೆ ಅಥವಾ ರಕ್ಷಣಾ ಗೋಡೆಯನ್ನು ನಿರ್ಮಿಸಿರಲಿಲ್ಲ. ಮೈದಾನದಂತಹ ಬಯಲಿನಲ್ಲಿ ಊರನ್ನು ನೆಲೆಗೊಳಿಸಲಾಗಿತ್ತು. ಶಹಾಬಜಾರದಲ್ಲಿರುವಂತೆ ಜುಮ್ಮಾ ಮಸೀದಿಯು ಈ ಪೂರ್ವ ವಲಯದ ಪಟ್ಟಣದಲ್ಲಿ ನಿರ್ಮಿಸಿರುವುದನ್ನು ಗಮನಿಬೇಕು. ಬಂದೇ ನವಾಜ್ ದರ್ಗಾ ಮತ್ತು ಮುಜಾಹಿದ ದರ್ಗಾಗಳು ಈ ವಲಯದಲ್ಲಿರುವ ಪ್ರಮುಖ ಪವಿತ್ರ ಸ್ಥಳಗಳಾಗಿದ್ದವು. ಈ ವಲಯದ ಪಟ್ಟಣವನ್ನು ನಾಲ್ಕು ವಿಭಾಗಗಳನ್ನಾಗಿ ನಾಲ್ಕು ಮುಖ್ಯ ರಸ್ತೆಗಳಿಂದ ವಿಂಗಡಿಸಲಾಗಿತ್ತು. ಈ ನಾಲ್ಕು ರಸ್ತೆಗಳು ನಗರದ ಮಧ್ಯಭಾಗವೆಸಿದ ಈಗಿನ ಗೀತಾ ಚೌಕ್ ಬಳಿ ಬಂದು ಸೇರುತ್ತಿದ್ದವು. ಗೀತಾ ಚೌಕನ್ನು ಈ ಹಿಂದೆ ಗುಲ್ಜಾರ್ ಹೌಝ್ ಎಂದು ಕರೆಯಲಾಗುತ್ತಿತ್ತು. ಈಗಿನ ಕಿರಾಣಾ ಬಜಾರ್, ಫೋರ್ಟ್ ರೋಡ್ ಮತ್ತು ಬಾಂಡೆ ಬಜಾರ್ ರಸ್ತೆಗಳು ಈ ಚೌಕದಲ್ಲಿ ಸೇರುತ್ತವೆ. ಬಹಮನಿ ಕಾಲದಲ್ಲಿಯೂ ಈ ರಸ್ತೆಗಳ ಎರಡು ಬದಿಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗಿತ್ತೆಂದು ಫಿಲೋನ್ ಅವರ ಅಭಿಪ್ರಾಯ. ಗೀತಾ ಚೌಕ್ ಎಂದು ಕರೆಯುವ ಈ ವೃತ್ತವು ಬಹಮನಿಯವರ ಕಾಲದಲ್ಲಿ ನಗರದ ಚೌಬಾರಾ ಅಥವಾ ನಾಲ್ಕು ರಸ್ತೆಗಳು ಸಂಧಿಸುವ ಸ್ಥಳವಾಗಿತ್ತು. ಈ ಸ್ಥಳದಲ್ಲಿ ಎರಡು ಅಂತಸ್ತಿನ ಕಮಾನುಗಳಿಂದ ಕೂಡದ ಕಟ್ಟಡವಿತ್ತು. ಇದು ಕೋಟೆಯ ಆಚೆಗೆ ಮತ್ತು ನಗರದ ಮಧ್ಯಭಾಗದಲ್ಲಿರುವ ನಾಲ್ಕು ದಿಕ್ಕುಗಳಲ್ಲಿ ಗೋಚರಿಸುವ ಬೃಹತ್ ಕಟ್ಟಡವಾಗಿತ್ತು. ಇದು ಬಹಮನಿಯರ ನಂತರ ಆಡಳಿತ ಮಾಡಿದ ಕುತುಬ್ ಶಾಹಿಗಳು ನಿರ್ಮಿಸಿದ ಹೈದರಾಬಾದ್ ನಗರದ ಚಾರ್‌ಮಿನಾರ್ ನಿರ್ಮಾಣಕ್ಕೆ ಮಾದರಿಯಾಗಿತ್ತು ಎಂದು ಫಿಲೋನ್ ಅವರು ಅಭಿಪ್ರಾಯ ಪಟ್ಟಿದ್ದಾರೆ (Philon 2005: 77). ಈ ಪೂರ್ವದ ಪಟ್ಟಣವು ಭೀಮಾ ನದಿ ಕಣಿವೆಗೆ ಒಳಪಡುತ್ತಿದ್ದರಿಂದ ನೀರಿನ ಸೆಲೆಗಳು ಹೇರಳವಾಗಿ ದೊರೆಯುತ್ತವೆ. ಅಲ್ಲದೆ ಚಿಕ್ಕ ಕೆರೆಗಳು ಈ ವಲಯದಲ್ಲಿವೆ. ಹಪ್ತ ಗುಂಬಜ್ ಮತ್ತು ಬಂದೇ ನವಾಜ್ ದರ್ಗಾದ ನಡುವೆ ಒಂದು ದೊಡ್ಡ ಕೆರೆ ಇತ್ತು.



ಚಿತ್ರ–10: ದೀನ ದಯಾಳರು ತೆಗೆದ 1880ರ ಅವಧಿಯ ಬಂದೇ ನವಾಜ್ ದರ್ಗಾ ಮತ್ತು ಕೆರೆಯ ಚಿತ್ರ [ಕೃಪೆ :ಬ್ರಿಟಿಷ ಲೈಬ್ರರಿ]

ಈ ಭಾಗದಲ್ಲಿ ರೌಜಾ ಎಂದು ಕರೆಯುವ ಚಿಕ್ಕ ಕೈತೋಟಗಳಿಂದ ಕೂಡಿದ ಗೋರಿಗಳು ಇಲ್ಲಿವೆ. ಒಟ್ಟಿನಲ್ಲಿ ಪೂರ್ವ ವಲಯದ ಪಟ್ಟಣದಲ್ಲಿ ನೀರಿನ ಸೌಕರ್ಯ ದೊರೆಯುತ್ತಿದ್ದರಿಂದ ಪಟ್ಟಣವು ವಿಶಾಲವಾಗಿ ಬೆಳೆಯಲು ಸಾಧ್ಯವಾಯಿತು. ಬಹಮನಿ ರಾಜ್ಯದ ಪ್ರಮುಖ ದೊರೆಗಳ ಸಮಾಧಿಗಳು ಹಪ್ತ ಗುಂಬಜ್ ಎಂದು ಕರೆಯುವ ವಿಶೇಷ ವೇದಿಕೆಯಲ್ಲಿ ನಿರ್ಮಿಸಿದ ಗೋರಿಗಳಾಗಿದ್ದವು. ಇಲ್ಲಿ ಸುಲ್ತಾನರಾದ ಅಲ್ಲಾವುದ್ದೀನ್ ಮುಜಾಹೀದ್ (1375–1378), ಘೀಯಾಸುದ್ದೀನ್ (1397), ಇಮ್ಮಡಿ ದಾವುದ್ ಶಹಾ (1397), ಯುವರಾಜ ಸಂಜಾರ್ ಹಾಗೂ ಹೆಸರಾಂತ ಸುಲ್ತಾನ ಫಿರೋಜ್ ಶಹಾ (1397–1422) ಅವರ ಗೋರಿಗಳಿವೆ.

ಉಪನಗರ : (ತಾಜ್)ಸುಲ್ತಾನಾಪುರ

ಬಹಮನಿ ಸುಲ್ತಾನರ ಕಾಲದಲ್ಲಿ ರಾಜಧಾನಿ ನಗರಕ್ಕೆ ಹೊಂದಿಕೊಂಡಂತೆ ಒಂದು ಉಪನಗರವನ್ನು ಬೆಳೆಸಿದ್ದರು. ಸ್ಥಳಿಯವಾಗಿ ತಾಜ್ ಸುಲ್ತಾನಾಪುರ ಎಂದು ಕರೆಯುವ ಈ ಸ್ಥಳವು ಕಲಬುರ್ಗಿ ಕೋಟೆಯ ಉತ್ತರ ದಿಕ್ಕಿಗೆ 5 ಕಿ.ಮಿ. ದೂರದಲ್ಲಿದೆ. ಈ ಸ್ಥಳದ ಬಗ್ಗೆ ಸಮಕಾಲೀನ ಇತಿಹಾಸಕಾರರು ಹಾಗೂ ಆಕರಗಳು ದಾಖಲಿಸಿದ ಮಾಹಿತಿಗಳಿಲ್ಲ. ಮಧ್ಯಕಾಲೀನ ಇತಿಹಾಸಕಾರ ಫೆರಿಸ್ತಾ ಮಾತ್ರ ಇದರ ಬಗ್ಗೆ ಉಲ್ಲೇಖಿಸಿದ್ದಾನೆ. ನಗರದ ಉತ್ತರ ದಿಕ್ಕಿನಲ್ಲಿ ನಿರ್ಮಿಸಿದ್ದ ದೊಡ್ಡ ಸೇನಾ ನೆಲೆಗೆ ಸುಲ್ತಾನ ಭೇಟಿ ನೀಡಿದ್ದನೆಂದು ದಾಖಲಿಸಿದ್ದಾನೆ. ಬಹಮನಿ ರಾಜ್ಯದ ಪೂರ್ವಕ್ಕೆ ಇರುವ ತೆಲಂಗಾಣದ ವಿರುದ್ಧ ನಡೆಯುವ ಯುದ್ಧಗಳ ಸಂದರ್ಭಗಳಲ್ಲಿ ಸುಲ್ತಾನರು ಈ ನೆಲೆಯಲ್ಲಿ ತಮ್ಮ ಸೈನ್ಯವನ್ನು ಜಮಾವಣೆ ಮಾಡುತ್ತಿದ್ದರು. ಅಲ್ಲದೆ ಸೈನ್ಯಕ್ಕೆ ತರಬೇತಿಯನ್ನು ನೀಡಲಾಗುತ್ತಿತ್ತು ಎಂದು ಫೆರಿಸ್ತಾ ದಾಖಲಿಸಿದ್ದಾನೆ. ಸ್ಥಳಿಯ ಐತಿಹ್ಯದ ಪ್ರಕಾರ ಬಹಮನಿ ಅರಸ ಫಿರೋಜ್ ಶಹಾನು

ಹೊಸದಾಗಿ ಊರನ್ನು ನಿರ್ಮಿಸಿ ತನ್ನ ರಾಣಿಗೆ ಕಾಣಿಕೆಯಾಗಿ ನೀಡಿದ್ದರಿಂದ ಇದಕ್ಕೆ ತಾಜ್–ಸುಲ್ತಾನಾಪುರ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ. ಬಹಮನಿಯವರ ಕಾಲದಲ್ಲಿ ನಗರದ ಹೊರವಲಯದ ಸೇನಾ ನೆಲೆ ಮತ್ತು ಸುಲ್ತಾನರ ವಿಶ್ರಾಂತಿಧಾಮವಾಗಿಯೂ ಇದನ್ನು ನಿರ್ಮಿಸಿದ್ದರೆಂದು ಬಹಮನಿ ವಾಸ್ತುಶಿಲ್ಪ ಕಲೆಯ ಸಂಶೋಧಕಿ ಫಿಲೋನ್ ಅವರು ಗುರುತಿಸಿದ್ದಾರೆ. ಬಹಮನಿ ಕಾಲದ ಜುಮ್ಮಾ ಮಸೀದಿ, ಗೋರಿಗಳು, ದ್ವಾರ (ಅಗಸಿ) ಹಲವು ಕಿರು–ಮಸೀದಿಗಳು, ಬಾವಿ ಮತ್ತು ಅರಮನೆಗಳ ಅವಶೇಷಗಳು ಈ ಗ್ರಾಮದಲ್ಲಿವೆ.



ಚಿತ್ರ–11: 1797ರಲ್ಲಿ ಕೊಲೀನ್ ಮೆಕೆಂಜಿ ರಚಿಸಿದ ಕಲಬುರ್ಗಿ ಪರಿಸರದ ನಕ್ಷೆ.
(ಸುಲ್ತಾನಾಪುರ ಗ್ರಾಮವನ್ನು ಕೂಡ ಕಾಣಬಹುದು) [ಕೃಪೆ : ಜೆನ್ನಿಫರ್ ಹೊವೆಸ್]

ದ್ವಾರ ಅಥವಾ ಅಗಸಿ: ಕಲಬುರ್ಗಿಯಿಂದ ಸುಲ್ತಾನಾಪುರಕ್ಕೆ ತಲುಪುವ ರಸ್ತೆಯಲ್ಲಿರುವ ಈ ಪ್ರವೇಶ ದ್ವಾರವನ್ನು ಸ್ಥಳಿಯರು ಅಗಸಿ ಎಂದು ಕರೆಯುತ್ತಾರೆ. ಇದು ಎತ್ತರವಾದ ಕಮಾನಿನಿಂದ ಕೂಡಿದ್ದು, ಗ್ರಾಮದ ದಕ್ಷಿಣದ ಅಂಚಿನಲ್ಲಿ ನಿರ್ಮಿಸಲ್ಪಟ್ಟಿದೆ. ಈ ದ್ವಾರವು ಮೂಲತಃ ಗ್ರಾಮಕ್ಕೆ ದಕ್ಷಿಣ ದಿಕ್ಕಿನಲ್ಲಿದ್ದ ಪ್ರವೇಶದ್ವಾರವಾಗಿತ್ತು. ಕಲಬುರ್ಗಿಯಿಂದ ಸುಲ್ತಾನಾಪುರವನ್ನು ಪ್ರವೇಶಿಸಲು ಈ ದ್ವಾರ ಬಳಸುತ್ತಿದ್ದರು. ಗ್ರಾಮಕ್ಕೆ ನಿರ್ಮಿಸಿದ್ದ ಕೋಟೆಯು ಈಗ ನಾಶವಾಗಿದ್ದು, ಅದರ ಅವಶೇಷವಾಗಿ ಈ ಅಗಸಿ ಮಾತ್ರ ಉಳಿದುಕೊಂಡಿದೆ. ಈ ದ್ವಾರವನ್ನು ಪ್ರವೇಶಿಸುತ್ತಿದ್ದಂತೆಯೆ ಎಡಕ್ಕೆ ಚಿಕ್ಕ ದ್ವಾರದಿಂದ ಕೂಡಿದ ಮಸೀದಿ ಇದೆ. ಈ ಮಸೀದಿಯು ಮೂಲತಃ ಬಹಮನಿ ಕಾಲದ ರಚನೆಯಾಗಿದ್ದು ಮೂರು ಅಂಕಣದಿಂದ ಕೂಡಿದೆ. ಮುಂಭಾಗದಲ್ಲಿ ಮೂರು ಕಮಾನುಗಳಿದ್ದು, ಅವುಗಳನ್ನು ಮುಚ್ಚಿ ದ್ವಾರವನ್ನು ಅಳವಡಿಸಲಾಗಿದೆ. ಆದರೆ ಮೂಲತಃ ಬಹಮನಿ ಕಾಲದ ಮಸೀದಿಗಳ ವಾಸ್ತುರಚನೆಯಲ್ಲಿ ನಿರ್ಮಾಣವಾಗಿದೆ. ಇದರ ಮಿರಾಬ್, ಕಮಾನುಗಳು, ಕುಂಬಿಯ

ಅಲಂಕಾರಗಳು ಬಹಮನಿ ಕಲೆಯ ಪ್ರಭಾವದಿಂದ ನಿರ್ಮಿತವಾಗಿವೆ ಎಂದು ಸ್ಪಷ್ಟವಾಗಿ ಗುರುತಿಸಬಹುದು.



ಚಿತ್ರ-12: ಸುಲ್ತಾನಾಪುರ ಗ್ರಾಮಕ್ಕೆ ನಿರ್ಮಿಸಿದ ದ್ವಾರ

ಜುಮ್ಮಾ ಮಸೀದಿ: ಸುಲ್ತಾನಾಪುರದಿಂದ ಚಿಂಚನಸೂರ ಗ್ರಾಮಕ್ಕೆ ಇರುವ ರಸ್ತೆಯ ಪಕ್ಕದಲ್ಲಿ ನಿರ್ಮಿಸಲಾದ ಇಲ್ಲಿಯ ಜುಮ್ಮಾ ಮಸೀದಿಯ ಅವಶೇಷವು ಕಾಣಬರುತ್ತದೆ. ಇದು ಮೂಲತಃ ಶಹಾಬಜಾರದ ಜುಮ್ಮಾ ಮಸೀದಿಯ ಮಾದರಿಯಲ್ಲಿ ನಿರ್ಮಿತವಾಗಿದೆ. ಇದು ವಿಸ್ತಾರ ಮತ್ತು ರಚನೆಯ ಸ್ವರೂಪದಲ್ಲಿ ಶಹಾಬಜಾರದ ಜುಮ್ಮಾ ಮಸೀದಿಯನ್ನು ಹೋಲುತ್ತದೆ. ವಿಶಾಲವಾದ ಅಂಗಳ, ಕಮಾನುಗಳಿಂದ ಪ್ರಾರ್ಥನಾ ಅಂಕಣ, ಗುಮ್ಮಟದ ದ್ವಾರ ಈ ಮಸೀದಿಯ ವಿಶೇಷತೆಯಾಗಿತ್ತು. ದುರಾದೃಷ್ಟವಶಾತ್ ಈ ಮಸೀದಿಯು ಸಂಪೂರ್ಣವಾಗಿ ನಾಶವಾಗಿದ್ದು ಇತ್ತೀಚೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಗುಮ್ಮಟದ ದ್ವಾರ ಮತ್ತು ಪ್ರಾರ್ಥನಾ ಅಂಕಣದ ಖಿಬ್ಲಾ ಗೋಡೆ ಮಾತ್ರ ಉಳಿದುಕೊಂಡಿದ್ದವು. ಗುಮ್ಮಟದ್ವಾರದ ಆಧಾರದ ಮೇಲೆ ಈ ಜುಮ್ಮಾ ಮಸೀದಿಯ ರಚನಾ ಶೈಲಿಯನ್ನು ಗುರುತಿಸಬಹುದಾಗಿದೆ. ಈ ಮಸೀದಿಯ ಕುರಿತಾಗಿ ಅಧ್ಯಯನ ನಡೆಸಿದ ಫಿಲೋನ್ ಅವರ ಅಭಿಪ್ರಾಯದ ಪ್ರಕಾರ ಫಿರೋಜಾಬಾದಿನ ಜುಮ್ಮಾ ಮಸೀದಿಯ ಮಾದರಿಯಲ್ಲಿಯೇ ಕ್ರಿ.ಶ. 1420ರ ದಶಕದಲ್ಲಿ ಬಹಮನಿ ಸುಲ್ತಾನ ಫಿರೋಜ್ ಶಹಾ ಸುಲ್ತಾನಾಪುರದ ಮಸೀದಿಯನ್ನು ನಿರ್ಮಿಸಿದ್ದಾನೆ.

ಅರಮನೆ: ಜುಮ್ಮಾ ಮಸೀದಿಯ ಹಿಂಭಾಗಕ್ಕೆ ಸ್ವಲ್ಪ ದೂರದಲ್ಲಿ ಹಳೆಯ ಕಟ್ಟಡಗಳ ಅವಶೇಷಗಳಿವೆ. ಇದರ ಪಕ್ಕದಲ್ಲಿ ಒಂದು ಪುರಾತನ ಬಾವಿ ಇದೆ. ಎತ್ತರದ ವೇದಿಕೆಯ ಮೇಲೆ ಭದ್ರ ಗೋಡೆಗಳಿಂದ ಚಿಕ್ಕ ಅರಮನೆಯನ್ನು ನಿರ್ಮಿಸಲಾಗಿದೆ. ಇದು ಪೂರ್ವಾಭಿಮುಖವಾಗಿ ನಿರ್ಮಾಣವಾದ ಅರಮನೆಯಾಗಿದ್ದು, ಚಿಕ್ಕ ಅಂಗಳ, ಹಲವು ಕೋಣೆಗಳಿಂದ ಕೂಡಿದೆ. ಎತ್ತರದ ಕಮಾನುಗಳ ದ್ವಾರಗಳನ್ನು ಮುಂಭಾಗದಲ್ಲಿ ನಿರ್ಮಿಸಲಾಗಿದ್ದು. ನಡುಮನೆ, ಜಗುಲಿಗಳು ಮತ್ತು ಕೋಣೆಗಳನ್ನು ಹೊಂದಿದೆ. ಇದರ ಬಲಬದಿಯ ಗೋಡೆಯಲ್ಲಿ ಮೆಟ್ಟಲುಗಳನ್ನು ನಿರ್ಮಿಸಲಾಗಿದ್ದು, ಇದೊಂದು ಉಪ್ಪರಿಗೆಯುಳ್ಳ ಅರಮನೆಯಾಗಿತ್ತೆಂಬುದನ್ನು ಸೂಚಿಸುತ್ತದೆ. ಈ ಅರಮನೆ ಕಟ್ಟಡದ



ಚಿತ್ರ–13: ಗುಮ್ಮಟದಿಂದ ನಿರ್ಮಿಸಿದ್ದ ಸುಲ್ತಾನಾಪುರದ ಜುಮ್ಮಾ ಮಸೀದಿಯ ದ್ವಾರ

ಮುಂಭಾಗದಲ್ಲಿ ಸ್ವಲ್ಪ ದೂರದಲ್ಲಿ ಪುರಾತನ ಬಾವಿ ಇದೆ. ಅರಮನೆಯ ಪಕ್ಕದಲ್ಲಿಯೇ ನೀರಿನ ತೊರೆ ಹರಿಯುತ್ತದೆ. ಅರಮನೆಯ ಸುತ್ತಲೂ ಬಯಲಿರುವುದನ್ನು ಗಮನಿಸಿದರೆ ತೊರೆಯ ಪಕ್ಕದಲ್ಲಿ ಪ್ರಶಾಂತವಾದ ಸ್ಥಳದಲ್ಲಿ ಉದ್ಯಾನದಿಂದ ಕೂಡಿದ ಚಿಕ್ಕ ಅರಮನೆಯೊಂದನ್ನು ಕಟ್ಟಲಾಗಿತ್ತೆಂದು ತೋರುತ್ತದೆ. ಇದು ಸುಲ್ತಾನರ ವಿಶ್ರಾಂತಿಧಾಮವಾಗಿತ್ತೆಂದೂ, ಇದನ್ನು ಫಿರೋಜ್ ಶಹಾ ಸುಲ್ತಾನ ನಿರ್ಮಿಸಿದ್ದನೆಂದೂ ಫಿಲೋನ್ ಅವರು ಅಭಿಪ್ರಾಯ ಪಟ್ಟಿದ್ದಾರೆ.



ಚಿತ್ರ–14: ಸುಲ್ತಾನಾಪುರದಲ್ಲಿರುವ ಬಹಮನಿ ಕಾಲದ ಅರಮನೆ ಅವಶೇಷ

ವಿಶ್ಲೇಷಣೆ: "ಮುಕ್ಕಾಲು ಶತಮಾನ ಕಾಲ ಬಹಮನಿ ರಾಜ್ಯದ ರಾಜಧಾನಿ ನಗರವಾಗಿದ್ದ ಕಲಬುರ್ಗಿ ನಗರ ಸುಲ್ತಾನರ ಆಶಯದಂತೆ ಬೆಳೆದ ಮಧ್ಯಕಾಲೀನ ನಗರವಾಗಿತ್ತು. ಕೋಟೆ, ದರ್ಗಾಗಳು ಮತ್ತು ಎರಡು ಪ್ರತ್ಯೇಕ ವಲಯಗಳಾಗಿ ಪಟ್ಟಣಗಳು, ಬಜಾರಗಳು ಮತ್ತು ಉಪ–ನಗರ ಇಲ್ಲಿಯ ಮಧ್ಯಕಾಲೀನ ನಗರದ ಪ್ರಮುಖ ಅಂಗಗಳಾಗಿದ್ದವು. ಮೂರು ನದಿಗಳ ನಡುವಿನ ಆಯಕಟ್ಟಿನ ಸ್ಥಳವಾಗಿದ್ದ ಕಲಬುರ್ಗಿಯು ಬಹಮನಿ ಕಾಲದಲ್ಲಿ ರಾಜಕೀಯ, ವಾಣಿಜ್ಯ ಮತ್ತು ಧಾರ್ಮಿಕ ನಗರವಾಗಿ ಬೆಳೆಯಿತು. ದೇಶ ಮತ್ತು ವಿದೇಶಗಳ ಸೂಫಿ ಸಂತರು ಈ ನಗರವನ್ನು ಅರಸುತ್ತಾ ಬಂದರು. ಅವರೊಂದಿಗೆ ಬಹು ದೊಡ್ಡ ಪ್ರಮಾಣದ ಅವರ ಅನುಯಾಯಿಗಳು ಕೂಡ ಕಲಬುರ್ಗಿಗೆ ಬಂದು ನೆಲೆಸಿದರು. ಇದರಿಂದ ಕಲಬುರ್ಗಿ ದಕ್ಷಿಣ ಏಶಿಯಾದ ಪ್ರಮುಖ ನಗರವಾಗಿ ಗುರುತಿಸಲ್ಪಟ್ಟಿತ್ತು.

ದೇವಗಿರಿಯಿಂದ ಕಲಬುರ್ಗಿಗೆ ಬಹಮನಿಯರು ತಮ್ಮ ರಾಜಧಾನಿಯನ್ನು ವರ್ಗಾಯಿಸಿದ ಸಂದರ್ಭದಲ್ಲಿ ಕಲಬುರ್ಗಿಯು ಚಿಕ್ಕ ಪಟ್ಟಣವಾಗಿತ್ತು. ಇದನ್ನು ವಿಸ್ತರಿಸಿ ಬೃಹತ್ ನಗರವನ್ನಾಗಿ ಬೆಳೆಸಿದರು. ಮಣ್ಣಿನ ಕೋಟೆಯನ್ನು ಕಲ್ಲಿನಿಂದ ಭದ್ರಪಡಿಸಿದರು. ದೆಹಲಿ ಸುಲ್ತಾನರು, ಟರ್ಕಿಸ್ಥಾನ ಮತ್ತು ಪರ್ಶಿಯಾ ದೇಶಗಳ ಕಲೆಗಳ ಪ್ರಭಾವದೊಂದಿಗೆ ಬೆಳೆದ ಬಹಮನಿಯರ ಕಲೆ ಮತ್ತು ವಾಸ್ತುಶಿಲ್ಪವು ಕಲಬುರ್ಗಿಯಲ್ಲಿಯೇ ಒಂದು ಸ್ವತಂತ್ರ ಕಲೆಯಾಗಿ ಉದಯಗೊಂಡಿತು. ಬಹಮನಿ ಸುಲ್ತಾನರ ಕಾಲದಲ್ಲಿ ಬೆಳೆದ ಕಲೆಯು ದಖ್ಖನಿ ಕಲೆ ಎಂದು ನಾಡಿನ ಕಲಾ ಶೈಲಿಗಳಲ್ಲಿ ಗುರುತಿಸಿಕೊಂಡಿತು. ಈ ದಖ್ಖನಿ ಕಲೆಯು ದೆಹಲಿಯ ಸಾಮ್ರಾಜ್ಯಶಾಹಿ ಕಲೆಗಿಂತ ಭಿನ್ನವಾಗಿ ರೂಪಗೊಂಡಿತು.

ಬಹಮನಿ ಸುಲ್ತಾನರು ದೇವಗಿರಿಯಲ್ಲಿ ಆಡಳಿತ ಪ್ರಾರಂಭಿಸಿದರೂ ದೇವಗಿರಿಯಂತಹ ಗಿರಿದುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳಲಿಲ್ಲ. ಆಯಕಟ್ಟಿನ ಪುರಾತನ ಪಟ್ಟಣವನ್ನು ಆಯ್ಕೆ ಮಾಡಿಕೊಂಡು ಅದನ್ನು ಒಂದು ಬೃಹತ್ ನಗರವನ್ನಾಗಿ ಮಾಡಿದರು. ಕೋಟೆಯ ಹೊರಭಾಗದಲ್ಲಿ ಎರಡು ಪ್ರತ್ಯೇಕ ಪಟ್ಟಣಗಳನ್ನು ನೆಲೆಗೊಳಿಸಿ ನಗರ ಪ್ರಕ್ರಿಯೆಯಲ್ಲಿ ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡಿದರು. ಕೋಟೆಯ ಉತ್ತರ ದಿಕ್ಕಿನಲ್ಲಿ ಈಗಾಗಲೇ ಇದ್ದ ಪ್ರಾಚೀನ ಪಟ್ಟಣವನ್ನು ಶಹಾಬಜಾರ ಪಟ್ಟಣವನ್ನಾಗಿ ವಿಸ್ತರಿಸಿ ಅಲ್ಲಿ ಜುಮ್ಮಾ ಮಸೀದಿ, ಸೂಫಿ ಸಂತರ ದರ್ಗಾಗಳನ್ನು ನಿರ್ಮಿಸಿ ಊರಿನಲ್ಲಿ ರಾಜ್ಯದ ಗಣ್ಯವರ್ಗದವರನ್ನು ನೆಲೆಗೊಳಿಸಿ ಅದನ್ನು ಸುಲ್ತಾನರ ಆಪ್ತ ವಲಯವನ್ನಾಗಿ ಮಾಡಿದರು. ಅದರಂತೆ ಕೋಟೆಯ ಪೂರ್ವ ದಿಕ್ಕಿನಲ್ಲಿ ಪ್ರತ್ಯೇಕ ಪಟ್ಟಣವನ್ನು ಯೋಜಿಸಿ, ಅಲ್ಲಿ ವಿವಿಧ ವರ್ಗದ ಜನರನ್ನು ನೆಲೆಗೊಳಿಸಿದರು. ಈ ಪಟ್ಟಣವನ್ನು ನಾಲ್ಕು ಮುಖ್ಯ ರಸ್ತೆಗಳಿಂದ ವಿಭಾಗಿಸಿ ಮಧ್ಯಭಾಗದಲ್ಲಿ (ಈಗೀನ ಗೀತಾ ಸರ್ಕಲ್‌ದಲ್ಲಿ) ನಾಲ್ಕು ದಿಕ್ಕುಗಳಿಗೂ ಕಾಣುವ ಕಮಾನುಗಳ ಎತ್ತರದ ಚೌಬಾರಾ ಕಟ್ಟಡವನ್ನು ನಿರ್ಮಿಸಲಾಗಿತ್ತು. ಈ ಹೊಸ ಮಾದರಿಯು ಕುತುಬ್‌ಶಾಹಿ ಸುಲ್ತಾನರು ನಿರ್ಮಿಸಿದ ಹೈದರಾಬಾದಿನ ಚಾರ್‌ಮಿನಾರ್ ಕಟ್ಟಡಕ್ಕೆ ಮಾದರಿಯಾಯಿತು. ಅದರಂತೆ ರಾಜಧಾನಿಯ ಪಕ್ಕದಲ್ಲಿ ಅರಮನೆ ಮತ್ತು ಸೇನಾ ವ್ಯವಸ್ಥೆಗಳಿಂದ ಕೂಡಿದ ಉಪ–ನಗರ ನಿರ್ಮಾಣ ಬಹಮನಿಯರ ಹೊಸ ಸಂಪ್ರದಾಯವಾಗಿದೆ. ಕಲಬುರ್ಗಿ ನಗರದ ಉಪನಗರವಾಗಿ ತಾಜ್ ಸುಲ್ತಾನಾಪುರ ನಿರ್ಮಾಣ ಬಹಮನಿ ಸುಲ್ತಾನರ ಮಧ್ಯಕಾಲೀನ ನಗರ ವ್ಯವಸ್ಥೆಗೆ ನೀಡಿದ ಹೊಸ ಆಯಾಮವೆಂದು ಗುರುತಿಸಬಹುದು. ಇದು ಆದಿಲ್‌ಶಾಹಿ ಸುಲ್ತಾನರು ನಿರ್ಮಿಸಿದ ಬಿಜಾಪುರ ನಗರದ ನಿರ್ಮಾಣಕ್ಕೆ ಮಾದರಿಯಾಯಿತು ಎಂದು ಹೇಳಬಹುದು. ಬಿಜಾಪುರ ನಗರಕ್ಕೆ ಹೊಂದಿಕೊಂಡು

ನಿರ್ಮಾಣವಾದ ನವರಸಪುರ ಉಪ-ನಗರಕ್ಕೆ ತಾಜ್-ಸುಲ್ತಾನಾಪುರ ಮಾದರಿಯಾಗಿತ್ತು ಎಂದು ಗುರುತಿಸಬಹುದು. ಇದು ಸುಲ್ತಾನರ ವಿಶ್ರಾಂತಿ ಧಾಮವಾಗಿತ್ತು. ನಗರದ ಕೋಟೆಯಿಂದ ಶಹಾಬಜಾರ ಪಟ್ಟಣದ ಮೂಲಕ ಈ ಉಪನಗರಕ್ಕೆ ಸಂಪರ್ಕ ರಸ್ತೆಯನ್ನು ನಿರ್ಮಿಸಲಾಗಿತ್ತು. ಮೆಕೆಂಜಿ ರಚಿಸಿದ ನಕ್ಷೆಯಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಕೇವಲ ಮುಕ್ಕಾಲು ಶತಮಾನ ಕಾಲ ರಾಜ್ಯದ ರಾಜಧಾನಿಯಾಗಿದ್ದ ಕಲಬುರ್ಗಿಯು ಪ್ರಾಯಶಃ ರಾಜಧಾನಿಯಾಗಿಯೇ ಮುಂದುವರೆದಿದ್ದರೆ ದಖ್ಖನ್‌ದಲ್ಲಿಯೇ ಒಂದು ಮಾದರಿ ನಗರವಾಗಿ ಇದು ಬೆಳೆಯುತ್ತಿತ್ತು.

ಕೃತಜ್ಞತೆಗಳು : ಲೇಖನ ಸಿದ್ಧಪಡಿಸಲು ನೆರವಾದ ಎಸ್. ಕಾರ್ತಿಕ್; ಹಂ.ಗು. ರಾಜೇಶ್, ರವಿಶಂಕರ ಜಮದ್ರಖಾನಿ ಹಾಗೂ ಪರಿಮಳ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆಕರಗಳು

ಚಂದ್ರಶೇಖರ ಹೆಚ್. 2002. "ಕಲಬುರ್ಗಿ ಕೋಟೆಯ ನಿವೇಶನ- ಒಂದು ಅಧ್ಯಯನ" **ಇತಿಹಾಸ ದರ್ಶನ**. ಸಂಪುಟ-17. ಪು. 223-227

ಬಸಪ್ಪ ಎಸ್. (ಸಂ.) 1960. **ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ**. ಮೈಸೂರು: ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

ಬೋಡೆ, ರಿಯಾಜ್ ಅಹ್ಮದ್ ತಿಮ್ಮಾಪುರ 2018. **ಪ್ರೇಮ, ಸೂಫಿ ಬಂದೇ ನವಾಜ್**. ಬೆಂಗಳೂರು: ನ್ಯೂಸ್ ಪಸ್ಟ್ ಕಮ್ಯುನಿಕೇಷನ್ಸ್.

ದೇವು ಪತ್ತಾರ 2015. **ಬಹಮನಿ ಸಾಮ್ರಾಜ್ಯ-ಪರ್ಷಿಯಾದ ಪ್ರಭಾವ ಪ್ರೇರಣೆ**. ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

ಪಾಟೀಲ; ಚೆನ್ನಬಸಪ್ಪ 2000. **ಕರ್ನಾಟಕ ಕೋಟೆಗಳು ಸಂಪುಟ-1,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಾಟೀಲ, ಎಂ. ಬಿ. (ಮುಖ್ಯ ಸಂಪಾದಕರು), 1997. **ಕರ್ನಾಟಕದ ರಾಜ್ಯ ಗೆಜೆಟಿಯರ್-ಗುಲಬರ್ಗಾ ಜಿಲ್ಲೆ (ಕಲಬುರಗಿ ಜಿಲ್ಲೆ)** [ಪರಿಷ್ಕೃತ ಆವೃತ್ತಿ]. ಬೆಂಗಳೂರು: ಕರ್ನಾಟಕ ಸರಕಾರ.

ಷೇಕ್ ಅಲಿ. ಬಿ. 1997. **ಕರ್ನಾಟಕ ಚರಿತ್ರೆ (ಕ್ರಿ.ಶ.1347-1760) ಸಂಪುಟ-4**. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹನುಮಾಕ್ಷಿ ಗೋಗಿ (ಸಂ.) 1996. **ಕಲಬುರ್ಗಿ ಜಿಲ್ಲೆಯ ಶಾಸನಗಳು**. ಹುಬ್ಬಳ್ಳಿ: ಶಿವಚಂದ್ರ ಪ್ರಕಾಶನ.

Brown, Percy. 1956. **Indian Architecture (Islamic Period).** Bombay: Taraporevala Sons & Co. [Fifth Edition 1968].

Cole, H.H. 1881-82. "Note on Kalburgah Dated 25th June 1881 [Report on Monuments in the Territory of H.H. Nizam of Haiderabad, together with a Note on Works undertaken]" **First Report of the Curator of Ancient Monuments in India for the Year 1881-82.** Shimla: Government Central Branch Press. Pp. ccxiii-ccxv.

Cousens, H. 1900. **Lists of Antiquarian Remains in His Highness the Nizam 's Territories,** Calcutta : Archaeological Survey of India: 29-38.

Desai, Z.A. 1959-60. **"Inscriptions from the State Museum Hyderabad"** Epigraphia Indica- Arabic and Persian Suppliment. Pp.27-37.

Desai, Z.A. 1974. "Architecture- (i)The Bahamanis" in Sherwani, H.K. & P.M. Joshi (Eds.) **Medieval History of Deccan** (1295-1724). Vol.2. Hyderabad: Govt. of Andhra Pradesh. Pp. 229-252.

Devre, T.N. 1961. **A Short History of Persian Literature at the Bahamani, The Adhilshahi and the Qutubshahi Courts- Deccan.** Bombay.

Epigraphia Indo-Moslemica (EIM) for the year 1982-83.

Fergusson, James 1910. **History of Indian and Eastern Architecture** Vol-1. Reprint:1997. Delhi: Low Price Publications.

Haig, T.W. 1907-12. "Inscriptions in Gulbarga" **Epigrapgia Indo-Moslemica** 1907-12. Pp. 1-10.

Haig, W., (Ed.) 1928. **The Cambridge History of India,** [Turks and Afghans] Vol. III, Cambridge University Press.

Howes, Jennifer 2010. **Illustrating India- The Early Colonial Investigantions of Colin Mackenzie** (1784-1821). New York: Oxford University Press.

Joshi, S.K. 1985. **Defence Architecture in Early Karnataka.** Delhi: Sandeep Prakashana.

Kadiri, A.A. 1964. "Inscriptions of the Bahamanis of Deccan" **Epigraphia Indica- Arabic and Persian Suppliment.** Pp.21-44.

King, J. S. 1899. `History of the Bahmani Dynasty. (Founded on the Burhän-I Ma, äsir)'. **The Indian Antiquary,** XXVIII. Pp.119-38; 141-155; 180-192; 209-219; 235-247; 277-292 & 305-323.

Klaus, Rotzer 2011; "Fortifications and Gunpoweder in the Deccan 1368 1687" in **Sultans of South- Arts of India's Deccan Courts,** 1323-1687 (Eds. Navina Najat Haidar & Marika Sardar); [The Metropolitian Museum of Art Symposia], New York: Metropolitian Museum of Art. Pp. 204-217.

Machakanur, Venkatesh & J.V. Gayatri (Eds). 2008. **Gulbarga [Heritage Series].** Bangalore: Dept. of Archaeology, Museums & Heritage, Govt. of Karnataka,

Mate, M. S. 1961-62. "Islamic Architecture of the Deccan", **Bulletin of the Deccan College PG & RI.** Vol. 22, Pp. 1-91.

Mate, M.S. & Pathy, T.V. 1992. **Daulatabad- A Report on the Archaeological Investigations.** Pune: Deccan College.

Merklinger, E.S. 1981. **Indian Islamic Architecture- The Deccan 1347-1686.** New Delhi: Oxford University Press.

Merklinger, E.S. 1986. 'Gulbarga' **MARG Vol. XXXVII** No.3. Islamic Heritage of Deccan.[Ed. by George Michell], Pp. 26-41.

Michell, George and Eaton Richard 1992. **Firuzabad- Palace City of the Deccan.** New Delhi: Oxford University Press.

Michell, George and Mark Zebrowski 1999. **Architecture and Art of the Deccan Sultanates** [The New Cambridge History of India. I:7], Cambridge.

Philon, Helen 2005. "Religious and Royal Architecture of the Early Bahamani Period (1347-1423)." Un-Published Ph.D. Thesis, School of Oriental and African Studies, Lond University.

Philon, Helen 2011. **Gulabarga, Bidar and Bijapur.** Hydrabad : Deccan Heritage Foundation.

Sri Sathyan; B.N. (Ch.Ed.) 1966. **Mysore State Gazetteer – Gulbarga District.** Bangalore: Govt. Press,

Sherwani, H.K. & P.M. Joshi (Eds.) 1973-74. **Medieval History of Deccan (1295-1724).** 2 Vols. Hyderabad: Govt. of Andra Pradesh.

Sircar, D.C. 1963 (Reprint 1987). "Warangal Inscription of Raghudeva, Kali Year 4561" **Epigraphia Indica Vol. 33 [1959-1960].** New Delhi: ASI. Pp. 125-130.

Taylor Meadows. 1877. **A Students's Manual of the History of India.** London.

Toy, Sidney 1965. **The Fortified Cities of India.** London.

Vani Shambulinga 1990. "Gulbarga-City and Its Monuments" (Unpublished Mphil. thesis) Gulbarga University.

Wielhorski, Count (Translation) 2000. **Athanasius Nikitin of Twer Voyage to India.** Medieval Russian Series Cambridge.

Yazdani, G. 1928. "The Great Mosque of Gulbarga" **Islamic Culture Vol.2.** Pp. 14-21.

Yazdani, G. 1925 to 1938. **Annual Report of the Archaeological Department of His Exalted Highnesss the Nizam's Dominions.** Volumes. Hyderabad.

■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: Jagadish
Title: kadamba mṛugēśavarmana āḷvikeya modala varṣa kri.śa. 465 – kacita hejje

ಕದಂಬ ಮೃಗೇಶವರ್ಮನ ಆಳ್ವಿಕೆಯ ಮೊದಲ ವರ್ಷ ಕ್ರಿಶ ೪೬೫ – ಖಚಿತ ಹೆಜ್ಜೆ

ಬನವಾಸಿ ಕದಂಬರು ಕನ್ನಡದ ಪ್ರಥಮ ರಾಜ ಮನೆತನ. ಇವರ ಆಳ್ವಿಕೆಯ ಸುಮಾರು 53 ಶಾಸನಗಳು ಪ್ರಕಟವಾಗಿವೆ. ಕೆಲವು ಶಾಸನಗಳು ಆಯಾ ರಾಜನ ಆಳ್ವಿಕೆ ಪ್ರಾರಂಭದ ವರ್ಷಗಣನೆಯನ್ನು ಉಲ್ಲೇಖಿಸುತ್ತವೆ. ಈ ರೀತಿಯ ವರ್ಷಗಣನೆಯನ್ನು ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಕಾಣಬಹುದು. ಆತನ ಶಾಸನಗಳಲ್ಲಿ ವಿಕ್ರಮ ಶಕೆ ಎಂಬ ಉಲ್ಲೇಖ ಬರುತ್ತದೆ. ಆರನೆಯ ವಿಕ್ರಮಾದಿತ್ಯನ ಪಟ್ಟಾಭಿಷೇಕದ ದಿನವನ್ನು ಅನಲ ಸಂವತ್ಸರದ ಚೈತ್ರ ಶುದ್ಧ 1 ಎಂದು ಪರಿಗಣಿಸಲಾಗಿದೆ ಮತ್ತು ಇದು 8–3–1076ಕ್ಕೆ ಸರಿಹೊಂದುತ್ತದೆ (ನಾಗಯ್ಯ, 1992:387). ಸೇವುಣ ರಾಜಮನೆತನಕ್ಕೆ ಸಂಬಂಧಿಸಿದಂತೆ ಕೂಡಾ ರಾಜ್ಯೋದಯದ ವರ್ಷ ಶಾಸನಗಳಲ್ಲಿ ಉಲ್ಲೇಖವಾಗಿದೆ. ಸೇವುಣ ಎರಡನೆಯ ಸಿಂಘಣನ ಎರಡು ರಾಜ್ಯೋದಯ ವರ್ಷಗಳ ಗಣನೆ ಇರುವುದನ್ನು ಶ್ರೀನಿವಾಸ ರಿತ್ತಿಯವರು ಗುರ್ತಿಸಿದ್ದಾರೆ. ತನ್ನ ತಂದೆಯಿಂದ ಪಡೆದ ಮಲಪ್ರಭಾ ನದಿಯ ಮೇಲಿನ ಭಾಗದಲ್ಲಿ ಕ್ರಿ.ಶ. 1200 ಪರಿಗಣನೆಯಲ್ಲಿದ್ದರೆ, ನಂತರ ತನ್ನ ಆಡಳಿತಕ್ಕೆ ಸೇರಿದ ಮಲಪ್ರಭಾ ನದಿಯ ಕೆಳಗಿನ ಭಾಗವನ್ನು ಕ್ರಿ.ಶ. 1210 ಎಂದು ಪರಿಗಣಿಸಿದ್ದಾರೆ. (Srinivas

ಜಗದೀಶ
#66, ಮೊದಲ ಅಡ್ಡ ರಸ್ತೆ
ಹೊಸಮನೆ ಬಡಾವಣೆ
ಶಿವಮೊಗ್ಗ 577201
ಮೊ 94494 00525
asamuha@gmail.com

Ritti, 1973:102-113). ಆರನೆಯ ವಿಕ್ರಮಾದಿತ್ಯ ಮತ್ತು ಎರಡನೆಯ ಸಿಂಘಣನ ಶಾಸನಗಳಲ್ಲಿ ರಾಜ್ಯೋದಯ ವರ್ಷ ಮತ್ತು ಕೆಲವು ಕಡೆ ಸಮಾನಾಂತರ ಸಂವತ್ಸರದ ಉಲ್ಲೇಖ ಇರುವುದರಿಂದ ಇವರ ಆಳ್ವಿಕೆಯ ವರ್ಷಗಳನ್ನು ಖಚಿತವಾಗಿ ಗುರ್ತಿಸಲಾಗಿದೆ.

ಈಗಾಗಲೆ ದೊರೆತಿರುವ ಕೆಲವು ಕದಂಬ ಅರಸರ ಶಾಸನಗಳಲ್ಲಿ ಉಲ್ಲೇಖವಾಗಿರುವ ಸಂಬಂಧ ಮತ್ತು ಆಳ್ವಿಕೆಯ ವರ್ಷದ ಆಧಾರದ ಮೇಲೆ ಅರಸರ ವಂಶಾವಳಿಯನ್ನು ರಚಿಸಲಾಗಿತ್ತು. ಫ್ಲೀಟ್, ಮೊರೇಸ್, ಗೋವಿಂದ ಪೈ, ಲಕ್ಷ್ಮೀನಾರಾಯಣ, ಪಿ.ಬಿ. ದೇಸಾಯಿ ಮತ್ತಿತರರು ಕದಂಬ ಅರಸರ ವಂಶಾವಳಿಯನ್ನು ನೀಡಿದ್ದಾರೆ. ಪ್ರತಿಯೊಬ್ಬರ ವಿವರದಲ್ಲೂ ಕದಂಬ ರಾಜರ ಆಳ್ವಿಕೆಯ ಅವಧಿಯಲ್ಲಿ ಒಮ್ಮತವಿಲ್ಲ.

ಕದಂಬ ಅರಸರ ಆಳ್ವಿಕೆಯ ಅವಧಿಯನ್ನು ನಿಗಧಿ ಪಡಿಸಲು ಇರುವ ತೊಡಕು ಎಂದರೆ ಸಮಾನಾಂತರ ಶಕ ವರ್ಷದ ಉಲ್ಲೇಖ ಇಲ್ಲದೇ ಇರುವುದು. ಬಾ.ರಾ. ಗೋಪಾಲ ಅವರು ಕದಂಬರ ಶಾಸನಗಳಲ್ಲಿ ಅರಸನ ಆಳ್ವಿಕೆಯ ವರ್ಷ, ಋತು, ಪಕ್ಷ ತಿಥಿಗಳಷ್ಟೇ ನಮೂದಾಗಿರುವುದರಿಂದ ಆ ವಿವರಗಳು ಖಚಿತವಾಗಿ ಕಾಲನಿರ್ಣಯಕ್ಕೆ ಸಹಾಯಕವಾಗುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕದಂಬರ ಆಳ್ವಿಕೆಯ ಕಾಲದಲ್ಲಿ ವಾರಗಳ ಉಲ್ಲೇಖ ಬರುವುದಿಲ್ಲ. ಆಗ ಇನ್ನೂ ವಾರದ ಲೆಕ್ಕದಲ್ಲಿ ದಿನಗಳನ್ನು ಪರಿಗಣಿಸುತ್ತಿದ್ದಿಲ್ಲ. ಚಂದ್ರನ ಚಲನೆ ಅನುಸರಿಸಿ ಹುಣ್ಣಿಮೆ ಮತ್ತು ಅಮವಾಸೆ ಇವುಗಳ ಮಧ್ಯದ ಅವಧಿಯನ್ನು ಲೆಕ್ಕ ಹಾಕುತ್ತಿದ್ದರು. ಅವು ಶುಕ್ಲ ಪಕ್ಷ ಮತ್ತು ಕೃಷ್ಣ ಪಕ್ಷ ಆಗಿದ್ದವು. ಹುಣ್ಣಿಮೆಯಿಂದ ಅಮವಾಸೆಯ ಅವಧಿ ಬಹುಳ (ಕೃಷ್ಣ ಪಕ್ಷ) ಮತ್ತು ಅಮವಾಸ್ಯೆಯಿಂದ ಹುಣ್ಣಿಮೆ ಅವಧಿ ಶುದ್ಧ (ಶುಕ್ಲ ಪಕ್ಷ) ಆಗಿತ್ತು.

ಕದಂಬ ಹರಿವರ್ಮನ ಆಳ್ವಿಕೆಯ ಎಂಟನೆಯ ವರ್ಷದ ಸಂಗೊಳ್ಳಿ ತಾಮ್ರ ಶಾಸನವು ಆಶ್ವಯುಜ ಮಾಸ ಅಮವಾಸ್ಯೆಯ ವಿಷುಪದಂದು ಹೊರಡಿಸಲಾಗಿದ್ದು ಇಂದಿನ ಕಾಲಮಾನಕ್ಕೆ ಸರಿದೂಗಿಸಲು ಮಾಹಿತಿಯನ್ನು ನೀಡುತ್ತದೆ. ಆರನೆಯ ಶತಮಾನದಲ್ಲಿ ತುಲಾ ಸಂಕ್ರಮಣವು ಆಶ್ವಯುಜ ಮಾಸದಲ್ಲಿ ಕ್ರಿ.ಶ. 507, 526 ಮತ್ತು 545 ರಲ್ಲಿ ಮಾತ್ರ ಬರುತ್ತದೆ. ಕೆ.ಎನ್. ದೀಕ್ಷಿತ ಅವರು ಈ ಶಾಸನವನ್ನು ಪ್ರಕಟಿಸುವಾಗ ವಿವರಗಳು 22–09–526 ಅಥವಾ 21–09–545 ಕ್ಕೆ ಸಮನಾಗುತ್ತದೆಂದೂ, ಶಾಸನವು ಎರಡನೆಯ ತೇದಿಯಂದು (ಕ್ರಿ.ಶ. 526) ಹುಟ್ಟಿರಬಹುದಾದ ಸಾಧ್ಯತೆಯನ್ನು ಸೂಚಿಸಿದ್ದಾರೆ. ಬಿ.ಆರ್. ಗೋಪಾಲ ಅವರು ಬನವಾಸಿ ಕದಂಬರು ಪುಸ್ತಕದ ಪೀಠಿಕೆಯಲ್ಲಿ ಕ್ರಿ.ಶ. 543 ರಲ್ಲಾಗಲೇ ಬಾದಾಮಿ ಚಾಲುಕ್ಯರ ಆಳ್ವಿಕೆ ಪ್ರಾರಂಭವಾಗಿರುವುದರಿಂದ ಕ್ರಿ.ಶ. 526 ಹರಿವರ್ಮನ ಆಳ್ವಿಕೆಯ ಎಂಟನೆಯ ವರ್ಷವೆಂದು ತಿಳಿಯಬಹುದಾಗಿದೆ. ಗಣಿತ ಮತ್ತು ಖಗೋಳ ಶಾಸ್ತ್ರಜ್ಞ ಬಿ. ಬಾಲಚಂದ್ರ ರಾವ್ ರವರು ಮೇಲೆ ತಿಳಿಸಿದ ತುಲಾ ಸಂಕ್ರಮಣದ ದಿನಗಳನ್ನು ಪರಿಶೀಲಿಸಿದ್ದಾರೆ. ಅವುಗಳ ವಿವರ ಹೀಗಿದೆ

ದಿನಾಂಕ	ವಾರ	ಸಂಕ್ರಮಣ	ಗ್ರಹಣ ಮುಗಿದ ಕಾಲ
23–09–526	ಗುರುವಾರ	ತುಲಾ	16–45
23–09–545	ಶುಕ್ರವಾರ	ತುಲಾ	7–41

ಎರಡೂ ದಿನಗಳಂದು ಸೂರ್ಯಗ್ರಹಣ ಆಗಿದ್ದು ಕ್ರಿ.ಶ. 545 ರ ಗ್ರಹಣವು ಬೆಳಿಗ್ಗೆ 7–41 ಕ್ಕೆ ಮುಕ್ತಾಯ ಆಗಿರುವುದರಿಂದ ಗೋಚರಿಸುವ ಸಾಧ್ಯತೆ ಕಡಿಮೆ ಇದೆ. ಕ್ರಿ.ಶ

526 ರ ಗ್ರಹಣವು ಸಂಜೆ 4.45 ಕ್ಕೆ ಮುಕ್ತಾಯವಾಗುವುದರಿಂದ ಗೋಚರಿಸುವ ಸಾಧ್ಯತೆ ಹೆಚ್ಚು ಇದ್ದು, ಹರಿವರ್ಮನ ಆಳ್ವಿಕೆಯ ಎಂಟನೆಯ ವರ್ಷದ ಶಾಸನದ ಕಾಲವನ್ನು ಕ್ರಿ.ಶ. 526 ಎಂದು ಪರಿಗಣಿಸಬಹುದಾಗಿದೆ, ಇದರಂತೆ ಹರಿವರ್ಮನ ಆಳ್ವಿಕೆಯ ಮೊದಲ ವರ್ಷ 526 – 8 = ಕ್ರಿ.ಶ. 519 ಆಗುತ್ತದೆ. ಇದು ಕದಂಬರ ಕಾಲಗಣನೆಯಲ್ಲಿ ಖಚಿತವಾದ ಮೊದಲ ಹೆಜ್ಜೆಯೆಂದು ಗುರ್ತಿಸಲಾಗುತ್ತದೆ. ಬಾ.ರಾ. ಗೋಪಾಲ ಅವರು ಇಲ್ಲಿಂದ ಹಿಂದಕ್ಕೆ ಪರಿಗಣಿಸುತ್ತಾ ಹೋಗಬೇಕು, ಯಾವೊಬ್ಬ ಅರಸರ ಆಳ್ವಿಕೆಯ ಕಾಲವು ಖಚಿತವಾಗಿ ತಿಳಿಯದ ಪ್ರಸಂಗಗಳಲ್ಲಿ ಸುಮಾರು 25 ವರ್ಷಗಳನ್ನು ಆಳ್ವಿಕೆಯ ಕಾಲವೆಂದು ಪರಿಗಣಿಸುವುದೊಂದು ಪರಿಪಾಠ, ಅದರಂತೆ ಹರಿವರ್ಮನ ಪೂರ್ವಜರಿಗೂ ಕ್ರಮವಾಗಿ 25 ವರ್ಷಗಳನ್ನು ಅನ್ವಯಿಸುತ್ತಾ ಹೋಗಿದೆ ಎಂದು ತಿಳಿಸುತ್ತಾರೆ.

ಹರಿವರ್ಮನ ತಂದೆ ರವಿವರ್ಮ. ಈತನು 35 ವರ್ಷ ಆಳಿದ ವಿವರ ಶಿರಸಿ ತಾಮ್ರ ಶಾಸನದಲ್ಲಿ ಬರುವುದರಿಂದ ರವಿವರ್ಮನ ಆಳ್ವಿಕೆಯ ಮೊದಲ ವರ್ಷವು 519 – 35 = 485 ಆಗುತ್ತದೆ. ಮೃಗೇಶವರ್ಮನ 8 ನೆಯ ವರ್ಷದ ಆಳ್ವಿಕೆ ಶಾಸನ ದೊರಕಿದೆ. ಈತನಿಗೆ 25 ವರ್ಷ ಆಳ್ವಿಕೆ ಇರಬಹುದೆಂದು ತಿಳಿಯಲಾಗಿದೆ, ಆತನ ಮೊದಲ ವರ್ಷ ಕ್ರಿ.ಶ 485–25 = ಕ್ರಿ.ಶ 460 ಆಗಿರಬೇಕು ಎಂದು ಊಹಿಸಲಾಗಿದೆ.

ಎರಡು ರೀತಿಯ ವರ್ಷಗಳ ಗಣನೆ ಮಾಡಲಾಗುತ್ತದೆ. 60 ವರ್ಷಗಳ ಸಂವತ್ಸರ ಕಲ್ಪನೆ ಮತ್ತು 12 ವರ್ಷಗಳ ಬೃಹಸ್ಪತ್ಯ ಮಾನ ಕಲ್ಪನೆ. 12 ವರ್ಷಗಳ ಲೆಕ್ಕದಲ್ಲಿ ಗುರು(ಬೃಹಸ್ಪತಿ) ಚಲನೆಯನ್ನು 12 ರಾಶಿಗಳಲ್ಲಿ ಪರಿಗಣಿಸಲಾಗುತ್ತದೆ. ಬೃಹಸ್ಪತ್ಯ ಮಾನವನ್ನು ಉತ್ತರ ಭಾರತದಲ್ಲಿ ಹೆಚ್ಚು ಉಪಯೋಗಿಸಲಾಗುತ್ತಿತ್ತು. ಇಂದಿಗೂ ಕೆಲವು ಪಂಚಾಂಗಗಳಲ್ಲಿ ಬೃಹಸ್ಪತ್ಯ ಮಾನವನ್ನು ಉಲ್ಲೇಖಿಸಲಾಗುತ್ತದೆ.

ಕೆಳದಿ ಅರಸ ಬಸವರಾಜ (ಕ್ರಿ.ಶ 1694–1714) ರಚಿಸಿರುವ ಶಿವತತ್ವರತ್ನಾಕರ ದಲ್ಲಿ ಈ ಮಾನದ ಉಲ್ಲೇಖ ಹೀಗಿದೆ,

ತಸ್ಮಾತ್ಸಂವತ್ಸರೋ ಮಾಸಾದ್ ಬಾರ್ಹಸ್ಪತ್ಯಃ ಪ್ರಗಣ್ಯತೇ ।
ಕಾರ್ತಿಕಾದಿಸಮಾ ಜ್ಞೇಯಾ ದ್ವಿದ್ವಿನಕ್ಷತ್ರಚಾರಿಣಃ ॥
ತ್ರಿಭಿರ್ಭಾದ್ರಪದಂ ಜ್ಞೇಯಾ ಫಾಲ್ಗುನಾಶ್ವಯುಜಾ ತಥಾ ।

(ನಾಲ್ಕನೆಯ ಕಲ್ಲೋಲ, ಮೂರನೆಯ ತರಂಗ 21–22)

ಯಾವ ನಕ್ಷತ್ರದಲ್ಲಿ ಗುರು ಉದಯಿಸುತ್ತಾನೋ ಆ ನಕ್ಷತ್ರಕ್ಕೆ ಸಂಬಂಧಿಸಿ ಬಾರ್ಹಸ್ಪತ್ಯ ಸಂವತ್ಸರವನ್ನು ಗಣಿಸುತ್ತಾರೆ. ಕಾರ್ತಿಕ ಮೊದಲಾದ ಈ ಸಂವತ್ಸರಗಳು ಎರಡೆರಡು ನಕ್ಷತ್ರ ಸಂಚಾರವುಳ್ಳವಾಗಿರುತ್ತವೆ. ಭಾದ್ರಪದ, ಫಾಲ್ಗುಣ ಮತ್ತು ಅಶ್ವಯುಜ ಇವು ಮೂರು ನಕ್ಷತ್ರ ಸಂಚಾರದ ಅವಧಿಯನ್ನು ಹೊಂದಿರುತ್ತವೆ (ಪುಟ 157).

ಇಂದಿನ ಗುರು ಉದಯ ವರ್ಷಗಳು ಹೀಗಿವೆ:

ಬಾರ್ಹಸ್ಪತ್ಯ	**ಶಾಲಿವಾಹನ**	**ಕ್ರಿ.ಶ**
ಚೈತ್ರ	ವ್ಯಯ	2005
ವೈಶಾಖ	ಸರ್ವಜಿತು	2006
ಜ್ಯೇಷ್ಠ	ಸರ್ವಧಾರಿ	2007
ಆಷಾಡ	ವಿರೋಧಿ	2008

ಶ್ರಾವಣ	ವಿಕೃತ	2009
ಭಾದ್ರಪದ	ಖರ	2010
ಅಶ್ವೀಜ	ನಂದನ	2011
ಕಾರ್ತಿಕ	ವಿಜಯ	2012
ಮಾರ್ಗಶಿರ	ಜಯ	2013
ಪುಷ್ಯ	ಮನ್ಮಥ	2014
ಮಾಘ	ದುರ್ಮುಖ	2015
ಫಾಲ್ಗುಣ	ಹೇವಿಳಂಬಿ	2016
ಚೈತ್ರ	ವಿಳಂಬಿ	2017
ವೈಶಾಖ	ವಿಕಾರಿ	2018
ಜ್ಯೇಷ್ಠ	ಸರ್ವಧಾರಿ	2019

ಮೃಗೇಶವರ್ಮನ ಆಳ್ವಿಕೆಯ 3 ನೆಯ ವರ್ಷದ ದೇವಗಿರಿ ಮತ್ತು 8 ನೆಯ ವರ್ಷದ ಹಲಸಿ ತಾಮ್ರ ಶಾಸನಗಳು ತೇದಿಯನ್ನು ಪತ್ತೆ ಮಾಡುವಲ್ಲಿ ವಿವರ ಒದಗಿಸುತ್ತವೆ. ಇಲ್ಲಿ ವರ್ಷವನ್ನು ಬೃಹಸ್ಪತ್ಯ ಮಾನದಲ್ಲಿ ಹೇಳಲಾಗಿದೆ.

(1) ತೃತೀಯ ವರ್ಷೇ ಪೌಷೇ ಸಂವತ್ಸರೇ ಕಾರ್ತೀಕ ಮಾಸ ಬಹುಳ ಪಕ್ಷ ದಶಮ್ಯಾಮ್ ತಿಥೌ ಉತ್ತರಭಾದ್ರಪದೇ ನಕ್ಷತ್ರೇ

(2) ಅಷ್ಟಮ ವೈಶಾಖೇ ಸಂವತ್ಸರೇ ಕಾರ್ತೀಕ ಪೌರ್ಣಮಾಸ್ಯಾಂ.

ಗುರು ಪ್ರತಿ ವರ್ಷ ಒಂದು ರಾಶಿಯಲ್ಲಿರುತ್ತಾನೆ. ಮತ್ತೆ ಅದೇ ರಾಶಿಗೆ ಬರಲು 12 ವರ್ಷ ಆಗುತ್ತದೆಂದು ತಿಳಿಯಲಾಗಿದೆ. ಮೃಗೇಶವರ್ಮನ ಆಳ್ವಿಕೆಯ ಮೂರನೆಯ ವರ್ಷದ ಶಾಸನ ಪುಷ್ಯ ಸಂವತ್ಸರ ಉಲ್ಲೇಖಿಸುತ್ತದೆ. ಪುಷ್ಯ ಮಾಸವು ಮಕರ ರಾಶಿಯಲ್ಲಿ ಬರುತ್ತದೆ. ಆ ವರ್ಷ ಗುರು ಈ ರಾಶಿಯಲ್ಲಿರಬೇಕು. ಮೃಗೇಶವರ್ಮನ ಆಳ್ವಿಕೆ ಕ್ರಿ.ಶ. 460 ರಲ್ಲಿ ಪ್ರಾರಂಭ ಆಗಿರಬೇಕು ಎಂದು ಮೇಲೆ ತಿಳಿಸಿದಂತೆ ಊಹಿಸಲಾಗಿದೆ.

ಕರ್ನಾಟಕದ (ಅಕ್ಷಾಂಶ 14 ರೇಖಾಂಶ 75) ಕ್ಕೆ ಸಂಬಂಧಿಸಿದಂತೆ ಖಗೋಳಶಾಸ್ತ್ರದ ಆಧಾರವ ಮೇಲೆ ದೊರಕುವ ಮಾಹಿತಿಯಂತೆ ಗುರು ಮಕರ ರಾಶಿಯಲ್ಲಿ ಉದಯವಾದ ವರ್ಷಗಳು ಕ್ರಿ.ಶ. 456, 468, 480 ಮತ್ತು 492 ಆಗಿವೆ. ಇವುಗಳಲ್ಲಿ ಮೃಗೇಶವರ್ಮನ ಆಳ್ವಿಕೆಯ ಪ್ರಾರಂಭದ ಕಾಲಕ್ಕೆ ಹತ್ತಿರವಿರು ವರ್ಷಗಳು ಕ್ರಿ.ಶ. 468 ಮತ್ತು 480. ಶಾಸನದ ಮಾಹಿತಿಯಂತೆ ಈ ವರ್ಷಗಳಲ್ಲಿ ಬರುವ ಕಾರ್ತೀಕ ಮಾಸ ಮತ್ತು ದಶಮಿಯಂದು ಉತ್ತರಭಾದ್ರಪದ ನಕ್ಷತ್ರ ಇರುವ ದಿನಗಳನ್ನು ನೋಡೋಣ.

ಕ್ರಿ.ಶ. 480

ದಿನಾಂಕ	ಪಕ್ಷ	ಚಂದ್ರ %	ತಿಥಿ	ನಕ್ಷತ್ರ
4–10–480		99.20	ಹುಣ್ಣಿಮೆ	
3–11–480	ಶುಕ್ಲ ಪಕ್ಷ (ಶುದ್ಧ)	99.80	ಹುಣ್ಣಿಮೆ	
13–11–480		25.80	ದಶಮಿ	ಉತ್ತರ ಭಾದ್ರಪದ
18–11–480		00.60	ಅಮವಾಸ್ಯೆ	

ಕ್ರಿ.ಶ 468

ದಿನಾಂಕ	ಪಕ್ಷ	ಚಂದ್ರ %	ತಿಥಿ	ನಕ್ಷತ್ರ
18-10-468		98.00	ಹುಣ್ಣಿಮೆ	
1-11-468	ಕೃಷ್ಣ ಪಕ್ಷ (ಬಹುಳ)	00.20	ಅಮವಾಸ್ಯೆ	
13-11-468		91.00	ದಶಮಿ	ಉತ್ತರ ಭಾದ್ರಪದ
16-11-468		99.50	ಹುಣ್ಣಿಮೆ	

13-11-468 ರಂದು ಬರುವ ದಶಮಿಯಲ್ಲಿ ಕೃಷ್ಣ ಪಕ್ಷ (ಬಹುಳ) ದಲ್ಲಿ ಉತ್ತರಭಾದ್ರಪದ ನಕ್ಷತ್ರ ಇದೆ. ತೃತೀಯ ವರ್ಷೇ ಪೌಷೇ ಸಂವತ್ಸರೇ ಕಾರ್ತೀಕ ಮಾಸ ಬಹುಳ ಪಕ್ಷ ದಶಮ್ಯಾಮ್ ತಿಥೌ ಉತ್ತರಭಾದ್ರಪದೇ ನಕ್ಷತ್ರೇ ವಿವರ ಪ್ರಾಯಶಃ 13 ನವೆಂಬರ್ 468 (ಚಂದ್ರ 91.00%) ದಶಮಿ ತಿಥಿ ಆಗುವ ಕಾರಣ ಹೊಂದಬಹುದು. ಆದ್ದರಿಂದ ಆತನ ಆಳ್ವಿಕೆಯ ಪ್ರಾರಂಭಿಕ ಕಾಲವನ್ನು ಮೂರು ವರ್ಷ ಹಿಂದಕ್ಕೆ ಸರಿಸಿ ಕ್ರಿ.ಶ. 465 ಎಂದು ಪರಿಗಣಿಸಬಹುದು.

ಮೇಲಿನ ಚರ್ಚೆಯಿಂದ ಹರಿವರ್ಮನ ಆಳ್ವಿಕೆಯ ಪ್ರಾರಂಭಿಕ ಕಾಲ ಕ್ರಿ.ಶ. 519 ಮತ್ತು ಮೃಗೇಶವರ್ಮನ ಆಳ್ವಿಕೆಯ ಪ್ರಾರಂಭಿಕ ಕಾಲ ಕ್ರಿ.ಶ. 465 ಆಗಿದೆ. ಹರಿವರ್ಮ ಮತ್ತು ಮೃಗೇಶವರ್ಮ ಮಧ್ಯೆ ರವಿವರ್ಮ ಇದ್ದಾನೆ ಮತ್ತು ಇವರ ಮಧ್ಯೆ 54 ವರ್ಷಗಳ ಅಂತರವಿದೆ. ರವಿವರ್ಮನ ಆಳ್ವಿಕೆ 35 ನೆಯ ವರ್ಷದ ಉಲ್ಲೇಖ ಇರುವುದರಿಂದ ಇದು ರಾಜನೊಬ್ಬನ ಅಳ್ವಿಕೆಯ ಸರಾಸರಿ ಅವಧಿಗಿಂತ ಹೆಚ್ಚು ಇರುವುದರಿಂದ ಇದು ಸರಿ ಇದೆ ಎಂದು ತಿಳಿಯಬಹುದು. ಆಗ ರವಿವರ್ಮ ಆಳ್ವಿಕೆಯ ಪ್ರಾರಂಭದ ಕಾಲ 519 – 35 = 484 ಎಂದು ಪರಿಗಣಿಸಬಹುದು. ಇದರಿಂದ ಮೃಗೇಶವರ್ಮ ಆಡಳಿತದ ಅವಧಿಯು 19 ವರ್ಷ ಎಂದು ಪರಿಗಣಿಸುತ್ತಾ ಸಧ್ಯಕ್ಕೆ ಆಳ್ವಿಕೆಯ ಕಾಲವನ್ನು ಕ್ರಿ.ಶ. 465 – 484 ಎಂದು ತಿಳಿಯಬಹುದಾಗಿದೆ. ಮೃಗೇಶವರ್ಮನ ಆಳ್ವಿಕೆಯ ಕಾಲ ಕ್ರಿ.ಶ 465 ರಿಂದ ಪ್ರಾರಂಭ ಆಗುತ್ತದೆ. ಕದಂಬರ ಆಳ್ವಿಕೆಯ ಕಾಲಗಣನೆಯಲ್ಲಿ ಎರಡನೆಯ ಖಚಿತ ಹೆಜ್ಜೆಯಾಗಿ ಮೃಗೇಶವರ್ಮನ ಆಳ್ವಿಕೆಯ ಪ್ರಾರಂಭಿಕ ಕಾಲ ಕ್ರಿ.ಶ. 465 ಎಂದು ಪರಿಗಣಿಸಬಹುದಾಗಿದೆ.

ಆಕರ ಸೂಚಿ:

1. ನಾಗಯ್ಯ ಜೆ.ಎಂ. 1992. **ಆರನೆಯ ವಿಕ್ರಮಾದಿತ್ಯನ ಶಾಸಸನಗಳು** (ಆಡಳಿತಕ್ಕೆ ಸಂಬಂಧಿಸಿದಂತೆ). ಬೆಳಗಾವಿ: ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ.
2. Srinivas Ritti. 1973. **The Sevunas.** Dharwar: Karntaka University.

‘ಇತಿಹಾಸ ದರ್ಪಣ’ಕ್ಕೆ ಪ್ರಬಂಧ ಕಳುಹಿಸುವ ಮುನ್ನ...

‘ಇತಿಹಾಸ ದರ್ಪಣ’ಕ್ಕೆ ಪ್ರಬಂಧ ಕಳುಹಿಸುವವರು ಮೊದಲು ಈ ಕೆಳಕಂಡ ಅಂಶಗಳನ್ನು ಗಮನಿಸಬೇಕಾಗಿ ವಿನಂತಿ.

- ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಇತಿಹಾಸ ಹಾಗೂ ಪುರಾತತ್ವ ಅಧ್ಯಯನಗಳ ಮೇಲೆ ಹೊಸ ಬೆಳಕು ಚೆಲ್ಲುವಂತಹ ಪ್ರಬಂಧವಾಗಿರಬೇಕು.
- ಪ್ರಬಂಧವನ್ನು ‘ನುಡಿ’ ತಂತ್ರಾಂಶದಲ್ಲಿ ಟೈಪಿಸಿ itihasadarpana@gmail.com ಗೆ ಇ-ಮೇಲ್ ಮಾಡುವುದು.
- ಉಲ್ಲೇಖಗಳನ್ನು ಪ್ರಬಂಧದ ಪಠ್ಯದ ನಡುವೆ ಆವರಣದಲ್ಲಿ (ಲೇಖಕ ವರ್ಷ:ಪುಟ) ಸಂಕ್ಷಿಪ್ತವಾಗಿ ನೀಡುವುದು.
- ಸಾಂದರ್ಭಿಕವಾಗಿ ಹೆಚ್ಚಿನ ಪೂರಕ ವಿವರಗಳನ್ನು ನೀಡಬೇಕಾಗಿದ್ದಲ್ಲಿ, ಅವುಗಳನ್ನು ಕೊನೆ ಟಿಪ್ಪಣಿಯಲ್ಲಿ ನೀಡುವುದು. ಅವುಗಳಿಗೆ ಸೂಕ್ತಸ್ಥಳಗಳಲ್ಲಿ ಅನುಕ್ರಮವಾಗಿ ಸಂಖ್ಯೆಗಳನ್ನು ನೀಡುವುದು.
- ಕೊನೆ ಟಿಪ್ಪಣಿಯ ಅಂತ್ಯದಲ್ಲಿ ಲೇಖನದ ಪರಾಮರ್ಶನ ಕೃತಿಗಳನ್ನು ‘ಆಕರ ಸೂಚಿ’ ವಿಭಾಗದಡಿ ನೀಡುವುದು. ‘ಆಕರ ಸೂಚಿ’ಯಲ್ಲಿ ಲೇಖನದ ಒಳಗೆ ನೀಡಿರುವ ಉಲ್ಲೇಖಗಳ ವಿವರಗಳನ್ನು ಕಡ್ಡಾಯವಾಗಿ ನೀಡವುದು.
- ‘ಆಕರ ಸೂಚಿ’ ಪಟ್ಟಿ ಮಾಡುವಾಗ- ಲೇಖಕರ ಹೆಸರು. ಅನುವಾದವಾಗಿದ್ದಲ್ಲಿ (ಅನು: ಹೆಸರು). ಪ್ರಕಟಣಾ ವರ್ಷ. **ಕೃತಿಯ ಶೀರ್ಷಿಕೆ** (ಬೋಲ್ಡ್ ಮಾಡಿ). ಪ್ರಕಟಣಾ ಸ್ಥಳ: ಪ್ರಕಾಶನ.
  ಉದಾ.: ಅರುಣಿ ಎಸ್.ಕೆ. 2019. **ಬೆಂಗಳೂರು ಪರಂಪರೆ: ಇತಿಹಾಸ ಸಂಶೋಧನೆಯ ಹೊಸ ನೋಟಗಳು**. ಬೆಂಗಳೂರು: ಇತಿಹಾಸ ದರ್ಪಣ ಪ್ರಕಾಶನ.
- ಆಕರ ಸೂಚಿಯಲ್ಲಿ ಲೇಖನಗಳನ್ನು ನೀಡುವಾಗ- ಲೇಖಕರ ಹೆಸರು. ಪ್ರಕಟಣ ವರ್ಷ. ‘ಲೇಖನದ ಶೀರ್ಷಿಕೆ’ (‘ ’). ಸಂಪಾದಕರ (ಸಂ.)ಹೆಸರು. **ಕೃತಿ / ನಿಯತಕಾಲಿಕೆಯ ಶೀರ್ಷಿಕೆ** (ಬೋಲ್ಡ್ ಮಾಡಿ). ಪ್ರಕಟಣ ಸ್ಥಳ: ಪ್ರಕಾಶನ.
- ಪ್ರಬಂಧಕ್ಕೆ ಪೂರಕ ಚಿತ್ರಗಳನ್ನು ಕಳುಹಿಸಿಕೊಡವುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆ ನೀಡುವುದು. ಚಿತ್ರದ ಹಕ್ಕು ಇದ್ದಲ್ಲಿ ಅವರ ಹೆಸರನ್ನು (ಕೃಪೆ:...) ಎಂದು ಉಲ್ಲೇಖಿಸುವುದು.
- ‘ಇತಿಹಾಸ ದರ್ಪಣ’ದ ಚಂದಾದಾರರಾದವರಿಗೆ ಮೊದಲ ಆದ್ಯತೆ.
- ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.
- ಲೇಖನ ಪ್ರಕಟಣೆಗೆ ಯಾವುದೇ ರೀತಿಯ ಶುಲ್ಕಗಳನ್ನು ನೀಡವಂತಿಲ್ಲ. ಅದೇ ರೀತಿ ಪ್ರಕಟವಾಗುವ ಲೇಖನಗಳಿಗೂ ಯಾವುದೇ ರೀತಿಯ ಸಂಭಾವನೆ ನೀಡುವುದಿಲ್ಲ.

– ಸಂಪಾದಕರು.

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: Gangambike S.
Title: hoysaḷara pramukha daṇḍanāyaka gangarāja mattu avana vaṃśīyaru

ಹೊಯ್ಸಳರ ಪ್ರಮುಖ ದಂಡನಾಯಕ ಗಂಗರಾಜ ಮತ್ತು ಅವನ ವಂಶೀಯರು

ಗಂಗಾಂಬಿಕೆ ಎಸ್.
ಕಾಮಧೇನು, 473/ಎ,
ಕಾಡುಗೊಂಡನಹಳ್ಳಿ,
2ನೇ ಅಡ್ಡರಸ್ತೆ, ಅರ್‍ಯಾಬಿಕ್
ಕಾಲೇಜ್ ಪೋಸ್ಟ್
ಬೆಂಗಳೂರು 560045.
gangasgovardhan@gmail.com

– 1 –

ನಾಡಿನ ಚರಿತ್ರೆಯೆಂದರೆ ಕೇವಲ ಚಕ್ರವರ್ತಿಗಳ ರಾಜಕೀಯ ಮೇಲಾಟಗಳಾಗಲಿ, ಅವರು ನಿರ್ಮಿಸಿದ ದೇವಾಲಯಗಳು ಮತ್ತು ಅದರ ಭವ್ಯ ಕಲಾಸೌಂದರ್ಯಗಳಾಗಲೀ, ಅವರ ವೈಭೋಗದ ಜೀವನಕ್ರಮವಾಗಲೀ, ಯುದ್ಧಚಿತ್ರಣಗಳಲ್ಲಿ ಕಂಡುಬರುವ ಶೌರ್ಯ ಸಾಹಸಗಳಾಗಲೀ ಅಷ್ಟೇ ಅಲ್ಲ. ಇದರೊಂದಿಗೆ ಒಂದು ಕಾಲಘಟ್ಟದಲ್ಲಿ ಆ ನಾಡಿನ ಸಾಮಾನ್ಯ ಜನರ ಬದುಕಿನಲ್ಲಿ ಆದ ತಲ್ಲಣಗಳೇನು? ಅವರಲ್ಲಿ ಇದ್ದ ತವಕಗಳೇನು? ಅಧಿಕಾರದ ಯಾವ ಪರಿಕ್ರಮಗಳಿಂದ ಅವರ ಬದುಕಿನಲ್ಲಿ ಹಸನು ಮೂಡಿತು? ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳಾರು? ಅವರ ರಾಜಕೀಯ ನಡೆಗಳಿಗೆ ಹೊಂದಿಕೊಳ್ಳುವ ವಾತಾವರಣ ಅಂದಿನ ಸಮಾಜದಲ್ಲಿ ಇತ್ತೇ? ಮುಂತಾಗಿ ಕೇಳಿಕೊಳ್ಳಬೇಕಾಗುತ್ತದೆ. ಕೇವಲ ರಾಜಕೀಯ ಸಂಗತಿಗಳು ಆಂಶಿಕ ಬದುಕನ್ನು ಮಾತ್ರ ಪ್ರತಿಫಲಿಸುತ್ತದೆ. ಇದರೊಂದಿಗೆ ಸಮಕಾಲೀನ ಸಮಾಜದ ಆಗುಹೋಗುಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಮಗೆ ಮುಖ್ಯವಾಗಿ ಬೇಕಾಗಿದ್ದು ಸಾಮಾನ್ಯ ಜನರೊಂದಿಗೆ ಬೆರೆತು ಅವರ ಬೇಕು ಬೇಡಗಳನ್ನೆಲ್ಲಾ ಅರಿತು ಆಡಳಿತದ ಯಂತ್ರಕ್ಕೆ ಸಮವರ್ತಿಯಾಗಿ ಸಾಗುತ್ತಿದ್ದ ಎರಡನೆಯ ಹಂತದ

ಅಧಿಕಾರಿಗಳನ್ನು ಅರ್ಥ ಮಾಡಿಕೊಳ್ಳುವುದರಿಂದ ಮಾತ್ರ ಅವರು ಹುಟ್ಟುಹಾಕಿದ ಆರ್ಥಿಕ ಹಾಗೂ ಸಾಮಾಜಿಕ ವಿಷಯಗಳು ನಾಡಿನ ಸ್ಥಳಿಯ ಸಾಂಸ್ಕೃತಿಕ ಚರಿತ್ರೆಯ ಆಯಾಮಗಳನ್ನು ಪ್ರತಿಬಿಂಬಿಸುತ್ತದೆ ಎಂದರೆ ತಪ್ಪಲ್ಲ.

ಈ ನೆಲೆಗಟ್ಟಿನಿಂದ ಯೋಚಿಸಿದರೆ, ಅರಸರಿಗಿಂತ ಅವರ ಅಧೀನತೆಯಲ್ಲಿರುವ ಆಡಳಿತಗಾರರೇ ನಾಡಿನ ಇತಿಹಾಸವನ್ನು ನೇರವಾಗಿ ಪ್ರಭಾವಿಸಿದವರು. ಕಾರಣ ಇವರಿಗೆ ಸಮಕಾಲೀನ ಘಟ್ಟದ ಸಮಾಜದಲ್ಲಿ ಅವಶ್ಯವಿರುವ ಸಂಗತಿಗಳು ಯಾವುವು ಎಂಬುದರ ಅರಿವು ಸಮಗ್ರವಾಗಿತ್ತು. ವಿವಿಧ ಮಜಲುಗಳಲ್ಲಿ, ಪದವಿಗಳಲ್ಲಿ, ಸ್ಥಾನಮಾನಗಳಲ್ಲಿ ನಿಯುಕ್ತರಾಗಿದ್ದ ಆಡಳಿತಾಧಿಕಾರಿಗಳು ನಿಜವಾದ ಕಾರ್ಯಾಂಗವಾಗಿ ಮಾನ್ಯರಾಗಿದ್ದಾರೆ.

ಇಂತಹ ಒಬ್ಬ ಅಗ್ರಮಾನ್ಯನೂ ವಿಶಿಷ್ಟನೂ ಆದ ಅಧಿಕಾರಿಯಾಗಿ ಸಮಕಾಲೀನ ಕನ್ನಡ ನಾಡನ್ನು ಪ್ರಭಾವಿಸಿದ ವ್ಯಕ್ತಿಯೇ ಗಂಗರಾಜ ದಂಡನಾಯಕ. ಈ ಸೇನಾಧಿಪತಿಯು ಹೊಯ್ಸಳ ವಿಷ್ಣುವರ್ಧನನ ಆಡಳಿತಾವಧಿಯಲ್ಲಿ ನಿರ್ವಹಿಸಿದ ಬಹಳ ಪ್ರಮುಖವಾದ ರಾಜತಾಂತ್ರಿಕ ಜಾಣ್ಮೆ, ಶೌರ್ಯ, ಪರಾಕ್ರಮಗಳ ಅತಿಶಯತೆಯನ್ನು ಮತ್ತು ಅದರ ಜೊತೆಜೊತೆಗೆ ರೂಪುಗೊಳಿಸಿದ ಸಾಂಸ್ಕೃತಿಕ ಅನನ್ಯತೆಯನ್ನು ಪ್ರತಿಬಿಂಬಿಸುವುದು ಪ್ರಕೃತ ಲೇಖನದ ಆಶಯವಾಗಿದೆ. ಇದಕ್ಕೆ ಹಿನ್ನೆಲೆಯಾಗಿ ಹೊಯ್ಸಳವಂಶದ ಅಪೇಕ್ಷೆಗಳಾದರೂ ಏನಿತ್ತು! ಹೊಯ್ಸಳರಿಗೆ ಗಂಗರಾಜನಂತಹ ಪ್ರಮುಖನಾದ ದಂಡನಾಯಕನ ಅವಶ್ಯಕತೆಯಾದರೂ ಏನಿತ್ತು? ಅದನ್ನು ಗಂಗರಾಜನು ಹೇಗೆ ಪೂರ್ಣಗೊಳಿಸಿದನು? ರಾಜಕೀಯ ನಡೆಗಳೊಂದಿಗೆ ಗಂಗರಾಜನು ಧಾರ್ಮಿಕವಾಗಿ ನಾಡಿಗೆ ನೀಡಿದ ಕೊಡುಗೆಗಳೇನು? ಮುಂತಾದ ಈವರೆಗೂ ಚರಿತ್ರೆಯ ಪುಟಗಳಲ್ಲಿ ದಾಖಲಾಗದಿರುವ ಸಂಗತಿಗಳನ್ನು ಈ ಲೇಖನವು ಮುನ್ನೆಲೆಗೆ ತಂದು ಚರ್ಚಿಸುತ್ತದೆ. ಇದರೊಂದಿಗೆ ಗಂಗರಾಜನ ಪೂರ್ವಿಕರು ಹಾಗೂ ಗಂಗರಾಜೋತ್ತರ ಅವನ ವಂಶದ ಇನ್ನಿತರರನ್ನು ಈ ಲೇಖನವು ದೀರ್ಘವಾಗಿ ಪರಿಚಯಿಸುತ್ತದೆ.

ಹೊಯ್ಸಳವಂಶದ ಅಪೇಕ್ಷೆಗಳು ಮತ್ತು ರಾಜಕೀಯ ಹಿನ್ನೆಲೆ

ಗಂಗರಾಜನ ಸೈನಿಕ ಹಾಗೂ ಧಾರ್ಮಿಕ ಸಾಧನೆಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಾದರೆ ಹೊಯ್ಸಳ ವಿಷ್ಣುವರ್ಧನನ ರಾಜಕೀಯ ಆಕಾಂಕ್ಷೆಗಳು ಏನಿದ್ದವು ಎಂದು ಅರ್ಥ ಮಾಡಿಕೊಳ್ಳಬೇಕು. ಅದನ್ನು ತಿಳಿಯಬೇಕಾದರೆ ವಿಷ್ಣುವರ್ಧನನಿಗಿಂತಲೂ ಪೂರ್ವದ ಹೊಯ್ಸಳ ಅರಸರು ನಡೆಸಿದ ರಾಜಕೀಯ ಸಂಘರ್ಷಗಳು ಮತ್ತು ಅವರ ಜಯಾಪಜಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಹಾಗೂ ಹೊಯ್ಸಳ ದೊರೆಗಳು ನಿಜವಾಗಿಯೂ ಬಯಸಿದ್ದೇನು? ಅವರ ಮಹತ್ವಾಕಾಂಕ್ಷೆಗಳಾದರೂ ಏನಾಗಿತ್ತು ಎಂಬುದನ್ನು ವಿಷ್ಣುವರ್ಧನನ ದಿಗ್ವಿಜಯ ಯಾತ್ರೆಗಳ ಜೊತೆಜೊತೆಗೆ ಗಮನಿಸಿ ವಿವರಿಸಬಯಸುತ್ತೇನೆ. ಆಗ ಮಾತ್ರ ಹೊಯ್ಸಳ ವಂಶದಲ್ಲಿ ವಿಷ್ಣುವರ್ಧನನ ಮತ್ತು ಅವನ ಬಲಭುಜದಂತಿದ್ದ ಗಂಗರಾಜನ ಸಾಧನೆಯ ಪೂರ್ಣ ಚಿತ್ರಣ ದೊರೆಯುತ್ತದೆ ಎಂಬುದು ನನ್ನ ನಂಬಿಕೆ.

ಹೊಯ್ಸಳ ರಾಜವಂಶದಲ್ಲಿ ಪ್ರಾರಂಭ ಕಾಲದಲ್ಲಿ ಕಂಡುಬರುವ ಮುಖ್ಯವ್ಯಕ್ತಿಯಾದ ನೃಪಕಾಮನು ಅನೇಕ ಆಶೋತ್ತರಗಳಿದ್ದಂತಹ ನಾಯಕನಾಗಿದ್ದನು. ಗಣನೀಯ ರಾಜನೀತಿಜ್ಞನೂ ಆಗಿದ್ದ ನೃಪಕಾಮನು ಗಂಗ ಮತ್ತು ಕದಂಬರೊಂದಿಗೆ ಮೈತ್ರಿ ಬೆಳೆಸಿಕೊಳ್ಳುವ ಅಗತ್ಯವನ್ನು ಮನಗಂಡಿದ್ದನು. ಕದಂಬರಿಗೂ ಈ ಮೈತ್ರಿ ಅಷ್ಟೇ ಅಗತ್ಯವಾಗಿತ್ತು. ಏಕೆಂದರೆ ಹೊಯ್ಸಳರು ಕೊಂಗಾಳ್ವರನ್ನು ಸೋಲಿಸಿ ತಮ್ಮ ರಾಜ್ಯಕ್ಕೆ ಪ್ರವೇಶಿಸಬಹುದೆಂಬ ಆತಂಕ ಅವರಿಗಿತ್ತು. ಅಷ್ಟರಲ್ಲಿ ನೃಪಕಾಮನು ಕೊಂಗಾಳ್ವರನ್ನು ಅಡಗಿಸಿ ಗಂಗವಾಡಿಯ ಮೇಲೆ ದಂಡೆತ್ತಿ ಹೋದನು. ಆಗ ಅದು ಚೋಳರ ವಶದಲ್ಲಿತ್ತು. 1006ರಲ್ಲಿ ನಡೆದ ಕಲವೂರು ಅಥವಾ ಕಲಿಯೂರು ಎಂಬಲ್ಲಿ ಹೊಯ್ಸಳರಿಗೂ ಚೋಳರಿಗೂ ಯುದ್ಧ ನಡೆಯಿತು. ಈ

ಯುದ್ಧದಲ್ಲಿ ಹೊಯ್ಸಳರು ಚೋಳ ಸಾಮಂತ ಅಪ್ರಮೇಯನಿಂದ ಪರಾಭವವನ್ನು ಅನುಭವಿಸಬೇಕಾಯಿತು. ಇದೇ ಕದನದಲ್ಲಿ ನೃಪಕಾಮನು ತನ್ನ ಸೇನಾಧಿಪತಿ ನಾಗಣ್ಣ ಅಥವಾ ನಾಗವರ್ಮನನ್ನು ಮತ್ತಿತರ ಸೈನ್ಯಾಧಿಕಾರಿಗಳನ್ನು ಕಳೆದುಕೊಂಡನು. ಆದರೆ ಗಂಗವಾಡಿಯನ್ನು ಚೋಳರಿಂದ ವಿಮುಕ್ತಿ ಗೊಳಿಸಲೇಬೇಕೆಂಬ ಹೊಯ್ಸಳರ ನಿರ್ಧಾರ ಮಾತ್ರ ಅಚಲವಾಯಿತು. ನೃಪಕಾಮನ ಸೇನಾಧಿಪತಿಯಾದ ನಾಗವರ್ಮನೇ, ಬಹುಶಃ ಗಂಗರಾಜನ ವಂಶದಲ್ಲಿ ನಾವೀಗ ಗುರುತಿಸಿರುವ ಅತ್ಯಂತ ಪ್ರಾಚೀನ ವ್ಯಕ್ತಿಯಾದ ನಾಗವರ್ಮನಿರಬಹುದು.

ಮುಂದೆ ವಿನಯಾದಿತ್ಯನ ಕಾಲದಲ್ಲಿ ಗಂಗರು ಸಹ ಇವರ ಅಧೀನರಾದರು. ಜೊತೆಗೆ ಗಂಗರೊಡನೆ ವಿವಾಹ ಸಂಬಂಧವು ಬೆಳೆದಿತ್ತು. ಆಸಂದಿಯ ಗಂಗ ದೊರೆ ವೈಜರಸನ ಸಂಬಂಧಿಯಾದ ಹೆರ್ಮಾಡಿ ಗಂಗನು ಹೊಯ್ಸಳ ರಾಜಕುಮಾರ ಎರೆಯಂಗನ ಮಗಳನ್ನು ಮದುವೆ ಮಾಡಿಕೊಂಡಿದ್ದನು. ಇದಾದ ಮೇಲೆ ಗಂಗರ ಮೇಲಿನ ತನ್ನ ಅಧಿಪತ್ಯದ ಸ್ಮರಣೆಗಾಗಿ ವಿನಯಾದಿತ್ಯನು ವಿಕ್ರಮಗಂಗ ಎಂಬ ಬಿರುದನ್ನು ಧರಿಸಿದನು. ಇದರೊಂದಿಗೆ ಗಂಗವಂಶವು ಹೊಯ್ಸಳ ರಾಜ್ಯದಲ್ಲಿ ಅಂತರ್ಗತವಾಯಿತು.

ವಿನಯಾದಿತ್ಯನು ಚಾಲುಕ್ಯ ಚಕ್ರವರ್ತಿಗಳ ಬಗೆಗೆ ಹೊಂದಿದ್ದ ನಿಷ್ಠೆಯ ಫಲವಾಗಿ ಕಲ್ಯಾಣದ ಚಾಲುಕ್ಯ ದೊರೆ 2ನೆಯ ಸೋಮೇಶ್ವರನು ಅವನನ್ನು ಗಂಗವಾಡಿ 96000ದ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದನು. ಆದರೆ ಇದು ಕೇವಲ ಸಾಂಕೇತಿಕವೆಂಬಂತಿತ್ತು. ಏಕೆಂದರೆ ಸಮಸ್ತ ಗಂಗವಾಡಿಯು ನಿಜವಾಗಿ ಚಾಲುಕ್ಯರ ವಶದಲ್ಲಿರಲಿಲ್ಲ. ಡೆರೆಟ್ ಸೂಚಿಸುವಂತೆ "ಇದರಲ್ಲಿ ಅಪಾಯಗಳಿಗಿಂತಲೂ ಲಾಭದ ಅವಕಾಶಗಳೆ ಹೆಚ್ಚು ಎಂದು ಹೊಯ್ಸಳರು ಭಾವಿಸಿರಬಹುದು. ಅಥವಾ ಚಾಲುಕ್ಯರ ಸೇನಾ ದಂಡನಾಯಕರಲ್ಲಿ ಒಬ್ಬನಾಗಿ, ರಾಜ್ಯವಿಸ್ತರಣದ ವಿಜ್ಞಾನದಲ್ಲಿ ಪಾಠಗಳನ್ನು ಕಲಿಯುತ್ತಾ ಇದ್ದುಬಿಡುವುದರಲ್ಲಿ ಅವನು ತೃಪ್ತನಾಗಿರಬಹುದು, ಯುದ್ಧತಂತ್ರವೊಂದರ ಹೊರತು ಬೇರೆ ಯಾವ ಜವಾಬ್ದಾರಿಯೂ ಇಲ್ಲದೆ ಅಧಿಕಾರ ಮತ್ತು ಪ್ರಭಾವಗಳ ಅನುಕೂಲಗಳನ್ನು ಸವಿಯಬಹುದಾಗಿತ್ತು"

ಮುಂದೆ ವಿನಯಾದಿತ್ಯನು ತಲಕಾಡು ಪ್ರಾಂತ್ಯವನ್ನು ಗೆಲ್ಲಲು ಹವಣಿಸಿದನು. ಈ ಸಾಹಸದಲ್ಲಿ ಅವನು ಮೊದಲು ಚಂಗಾಳ್ವ ಮತ್ತು ಕೊಂಗಾಳ್ವರ ವಿರೋಧವನ್ನು ಎದುರಿಸಿದನು. ಅವರನ್ನು ಗೆದ್ದು ಯಾವ ಭೀತಿಯೂ ಇಲ್ಲದ ಹಾಗೆ ಮಾಡಿಕೊಂಡನು. ಅನಂತರ ಅವನು ತಲಕಾಡು ಪ್ರದೇಶವನ್ನು ಹೊಕ್ಕು ಚೋಳ ಪ್ರಭಾವದಿಂದ ಹೊರತಾಗಿದ್ದ ಕೆಲವು ಪ್ರದೇಶಗಳನ್ನು ಗೆದ್ದನು.

ಕಲ್ಯಾಣದ ಚಾಲುಕ್ಯರಲ್ಲಿ ಸಿಂಹಾಸನಕ್ಕಾಗಿ ಸೋದರರು ಕಚ್ಚಾಡುತ್ತಿದ್ದ ಸಂದರ್ಭವನ್ನು ವಿನಯಾದಿತ್ಯನು ಉಪಯೋಗಿಸಿಕೊಂಡನು. ಹೊಯ್ಸಳ ವಿನಯಾದಿತ್ಯನು ಕಲ್ಯಾಣದ ಚಾಲುಕ್ಯ ದೊರೆ 6ನೆಯ ವಿಕ್ರಮಾದಿತ್ಯನ ವಿರುದ್ಧ ಮಾಡುತ್ತಿದ್ದ ಯುದ್ಧಗಳಲ್ಲಿ ಅವನ ಅಣ್ಣನಾದ ಎರಡನೆಯ ಸೋಮೇಶ್ವರನ ಪರವಾಗಿಯೇ ಇದ್ದನು. ಆದರೆ ಹೊಯ್ಸಳರ ವೈರಿ 1ನೆಯ ಕುಲೋತ್ತುಂಗ ಚೋಳನು ಮುಖ್ಯ ಭೂಮಿಕೆಯಲ್ಲಿ ಕಾಲಿರಿಸಿ ಸೋಮೇಶ್ವರನನ್ನು ಬೆಂಬಲಿಸತೊಡಗಿದಾಗ ವಿನಯಾದಿತ್ಯನು ವಿಕ್ರಮಾದಿತ್ಯನ ಪಕ್ಷಕ್ಕೆ ಸೇರಿದನು. ಆದರೆ ವಿಕ್ರಮಾದಿತ್ಯನಿಗೆ ವಿನಯಾದಿತ್ಯನ ಬಗ್ಗೆ ಏನೋ ಸಂದೇಹವೇ ಮನೆಮಾಡಿತ್ತು. ವಿನಯಾದಿತ್ಯನ ಜನೋಪಯೋಗಿ ಕಾರ್ಯಗಳು ಮತ್ತು ಆ ಮೂಲಕ ಅವನ ಕೀರ್ತಿವಂತನಾಗಿದ್ದುದು ವಿಕ್ರಮಾದಿತ್ಯನಿಗೆ ಸಹಿಸಲಸಾಧ್ಯವಾಯಿತು. ಹೊಯ್ಸಳರ ನಿಷ್ಠೆಯು ತನ್ನಲ್ಲಿ ಚೋಳರ ವೈರವಿರುವವರೆಗೆ ಮಾತ್ರ ಎಂಬುದನ್ನು ಅವನು ಬೇಗ ಅರಿತನು. ಆದ್ದರಿಂದ ಅವನು ಹೊಯ್ಸಳರನ್ನು ಹೇಗಾದರೂ ನಿಯಂತ್ರಣದಲ್ಲಿಟ್ಟುಕೊಳ್ಳಲು

ಮಾಳವದ ರಾಜ ಜಗದ್ದೇವನನ್ನು ಹೊಯ್ಸಳರ ಮೇಲೆ ಎತ್ತಿಕಟ್ಟಿದನು. ಕ್ರಿ.ಶ. 1093ರಲ್ಲಿ ದೋರಸಮುದ್ರದ ಮೇಲೆ ಜಗದ್ದೇವನು ಆಕ್ರಮಣ ಮಾಡಿದನು. ಹಿಂದೊಮ್ಮೆ ಧಾರಾನಗರದ ಮೇಲೆ ವಿನಯಾದಿತ್ಯನ ಮಗ ಎರೆಯಂಗ ದಾಳಿ ಮಾಡಿ ಧ್ವಂಸ ಮಾಡಿದುದಕ್ಕೆ ಈಗ ಸೇಡು ತೀರಿಸಿಕೊಳ್ಳಬಯಸಿದ್ದನು. ಆದರೆ ಈ ಕಾದಾಟದಲ್ಲಿ 1ನೆಯ ಬಲ್ಲಾಳ, ವಿಷ್ಣುವರ್ಧನ ಇನ್ನು ಹಲವರು ಸೇರಿ ಸಿಡಿದೆದ್ದು ಜಗದ್ದೇವನನ್ನು ಸೋಲಿಸಿ ಅವನು ಪಲಾಯನವಾಗುವಂತೆ ಮಾಡಿದರು.

ಆದರೆ ವಿಕ್ರಮಾದಿತ್ಯನ ಈ ಕುಯುಕ್ತಿಯನ್ನು ಹೊಯ್ಸಳರು ಸಹಿಸದಾದರು. ನಿಷ್ಠಾವಂತ ಮಾಂಡಲಿಕರಾಗಿದ್ದ ತಮ್ಮ ಮೇಲೆ ಇನ್ನೊಬ್ಬ ಮಾಂಡಲಿಕನಾದ ಜಗದ್ದೇವನನ್ನು ಎತ್ತಿಕಟ್ಟುವ ಅವನ ದುರುದ್ದೇಶವು ಹೊಯ್ಸಳರ ಮನಸ್ಸಿಗೆ ಬಹಳ ನೋವಿನ ಗಾಯವನ್ನೇ ಮಾಡಿಬಿಟ್ಟಿತು. ಇದರ ಪರಿಣಾಮವಾಗಿ ಹೊಯ್ಸಳರು ತಮ್ಮ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ಕವಲುದಾರಿಗಳನ್ನು ಹುಡುಕಲು ತೀವ್ರವಾಗಿ ಪ್ರಯತ್ನಿಸತೊಡಗಿದರು. ಈ ಪ್ರಗತಿಯುಕ್ತ ಅವರ ಹೊಸ ರಾಜನೀತಿಯಲ್ಲಿ ಚಾಲುಕ್ಯರ ಬಗ್ಗೆ ನಿಷ್ಠೆ ಇರದಾಯಿತು. ಈ ರೋಚಕ ತೀರ್ಮಾನದ ತರುವಾಯದಲ್ಲಿ ನಡೆದ ಚಾಲುಕ್ಯ–ಮಾಳವ ಸಂಘರ್ಷದಲ್ಲಿ ವಿನಯಾದಿತ್ಯನು ಭಾಗವಹಿಸದೇ ಇದ್ದುದನ್ನು ಸೂಕ್ಷ್ಮವಾಗಿ ಲಕ್ಷಿಸಬಹುದು.

ಕೆಲಕಾಲದಲ್ಲಿಯೇ ಅಂದರೆ ಸುಮಾರು ಕ್ರಿ.ಶ. 1098 ರಲ್ಲಿ ವಿನಯಾದಿತ್ಯನು ಮೃತನಾಗುತ್ತಾನೆ. ಅವನ ಮರಣದ ಕೆಲವು ವರ್ಷಗಳಲ್ಲಿ ಎರೆಯಂಗನು (1102) ಸಾವನ್ನಪ್ಪುತ್ತಾನೆ. ಈಗ ಒಂದನೆಯ ಬಲ್ಲಾಳ ಮತ್ತು ವಿಷ್ಣುವರ್ಧನರು ಪರಾಧೀನತೆಯ ನೊಗವನ್ನು ಸಂಪೂರ್ಣವಾಗಿ ಹೆಗಲಿನಿಂದ ತೆಗೆದು ಹಾಕಲು ಬಹಿರಂಗವಾಗಿ ನಿರ್ಧರಿಸಿರುತ್ತಾರೆ. ಇದಕ್ಕೆ ಒಂದು ಜ್ವಲಂತ ಉದಾಹರಣೆಯಾಗಿ ನಮಗೆ ಕಂಡುಬರುವ ಘಟನೆಯೆಂದರೆ ಚಾಲುಕ್ಯರ ಅತ್ಯಂತ ವಿಶ್ವಾಸದ ಸಾಮಂತರಲ್ಲಿ ಒಬ್ಬರಾದ ಉಚ್ಚಂಗಿಯ ಪಾಂಡ್ಯರ ಮೇಲೆ ಬಲ್ಲಾಳ ಮತ್ತು ವಿಷ್ಣುವರ್ಧನ ಹೊಯ್ಸಳರು ಮೇಲೇರಿ ಹೋಗುತ್ತಾರೆ. ಪಾಂಡ್ಯ ರಾಜನು ಚಾಲುಕ್ಯರ ನಿಷ್ಠೆಯನ್ನು ತೊರೆಯುವ ಹಾಗೆ ಮಾಡುತ್ತಾರೆ. ಇದಾದ ನಂತರ ಬಲ್ಲಾಳನು ಚಂಗಾಳ್ವರ ವಿರುದ್ಧ ದಂಡೆತ್ತಿ ಹೋಗಿ ಅವರನ್ನು ಸೋಲಿಸುತ್ತಾನೆ.

ವಿಷ್ಣುವರ್ಧನನು ಉತ್ತರ ದಿಕ್ಕಿಗೆ ನಡೆದು ತುಂಗಭದ್ರಾ ನದಿಯನ್ನು ದಾಟಿ ನದಿಯ ಆಸುಪಾಸಿನ ಕೆಲವು ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಾನೆ. ಸ್ವಲ್ಪ ಕಾಲ ನೆಮ್ಮದಿಯ ನಿಟ್ಟುಸಿರು ಬಿಡುವಷ್ಟರಲ್ಲಿಯೇ ದಿಢೀರನೇ ಚಾಲುಕ್ಯ ಸಾಮಂತನಾದ 2ನೆಯ ಆಚುಗಿಯೂ ಅವನ ಮಗ ಪೆರ್ಮಾಡಿದೇವನೂ ಹೊಯ್ಸಳರ ಮೇಲೆ ಆಕ್ರಮಣ ಮಾಡುತ್ತಾನೆ. ಈ ಸಂದರ್ಭದಲ್ಲಿ ದುರದೃಷ್ಟವಶಾತ್ ಹೊಯ್ಸಳರು ಸೋತು ತಣ್ಣಗಾಗಬೇಕಾಗುತ್ತದೆ. ಚಾಲುಕ್ಯರ ವಿರುದ್ಧ ನಡೆಸಿದ ಹೊಯ್ಸಳರ ಈ ಮೊದಲನೆಯ ದಂಗೆಯು ವಿಫಲವಾಯಿತಾದರೂ ಚಾಲುಕ್ಯ–ಹೊಯ್ಸಳ ಮನೆತನಗಳ ನಡುವಿನ ವೈಮನಸ್ಯ ಮತ್ತು ವೈರತ್ವಗಳ ಕಾರ್ಮೋಡವನ್ನು ಸ್ಪಷ್ಟವಾಗಿ ಜಗಜ್ಜಾಹಿರುಗೊಳಿಸಿತು. ಹೊಯ್ಸಳರು ಚಾಲುಕ್ಯ ಪ್ರಭುತ್ವದಿಂದ ಬಿಡುಗಡೆ ಹೊಂದಲು ಇನ್ನು ಕೆಲಕಾಲ ಕಾಯಬೇಕಾಗಿದ್ದಂತೆ ಇದು ರುಜುವಾತುಗೊಳಿಸುತ್ತದೆ.

ಮುಂದೆ ಒಂದನೆಯ ಬಲ್ಲಾಳನು ಕ್ರಿ.ಶ. 1108ರಲ್ಲಿ ಮೃತನಾಗುತ್ತಾನೆ. ಬಲ್ಲಾಳನಿಗೆ ಮಕ್ಕಳಿರಲಿಲ್ಲ; ಹಾಗಾಗಿ ಅವನ ತಮ್ಮನಾದ ವಿಷ್ಣುವರ್ಧನನು ಅಧಿಕಾರಸ್ಥನಾದನು. ವಿಷ್ಣುವರ್ಧನನು ಹೊಯ್ಸಳರ ಅತ್ಯಂತ ಅಗ್ರಮಾನ್ಯನಾದ ಅರಸ ಎಂಬುದರಲ್ಲಿ ಎರಡು ಮಾತಿಲ್ಲ. ಸಿಂಹಾಸನಾರೋಹಿಯಾದ ತತ್ಕ್ಷಣದಲ್ಲಿ ಅವನು ತಾನು ಹಿಂದೆ ತನ್ನ ಅಣ್ಣನೊಡಗೂಡಿ ರೂಪಿಸಿದ ಪ್ರಗತಿಯುಕ್ತ ರಾಜನೀತಿಗೆ ಅನುಸಾರವಾಗಿ ಎಲ್ಲ ದಿಕ್ಕುಗಳಲ್ಲೂ

ತನ್ನ ಅಧಿಪತ್ಯವನ್ನು ವಿಸ್ತರಿಸಲು ಉತ್ಸುಕನಾದ ಗುರಿಕಾರ. ಇವನ ಆರಂಭದ ಆಳ್ವಿಕೆಯ ಅವಧಿಯಲ್ಲಿ ಚಾಳುಕ್ಯರ ವಿರುಧ್ಧದ ದಂಗೆಯು ಹೆಚ್ಚು ಸ್ಪಷ್ಟವಾಗಿತ್ತು.

ವಿಷ್ಣುವರ್ಧನನು ಅಧಿಕಾರಕ್ಕೆ ಬರುವ ಮುನ್ನವೇ ತನ್ನ ಅಣ್ಣನ ವಿಜಯಯಾತ್ರೆಗಳಲ್ಲಿ ಭಾಗವಹಿಸಿ ಅನುಭವಸ್ಥನಾಗಿದ್ದರಿಂದ ತನ್ನ ದಂಡಯಾತ್ರೆಗಳ ಸಂದರ್ಭಗಳಲ್ಲಿ ಮೊದಲ ಮಜಲಿನಲ್ಲಿ ಬಹು ಸಲೀಸಾಗಿ ಪೂರ್ವದಲ್ಲಿ ಕೊಂಗು, ನಂಗಲಿ, ಕೊಯಮತ್ತೂರುಗಳನ್ನು ತನ್ನ ಸುಪರ್ದಿಗೆ ತಂದುಕೊಂಡನು. ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಉಚ್ಚಂಗಿಯ ಪಾಂಡ್ಯರನ್ನು ಸೋಲಿಸಿದನು. ಉತ್ತರದ ಸಂಪದ್ಭರಿತ ಪ್ರದೇಶಗಳ ಮೇಲೆ ದಾಳಿ ಮಾಡಲು ಉಚ್ಚಂಗಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡನು. ಬಳ್ಳಾರಿ, ಧಾರವಾಡ, ಬಂಕಾಪುರಗಳನ್ನು ಗೆದ್ದು ಪಶ್ಚಿಮಕ್ಕೆ ಧಾವಿಸಿದನು. ಅಲ್ಲಿ ಕರಾವಳಿ ಕಡೆಗೆ ನಡೆದು ಬನವಾಸಿ, ಬೆಳ್ವೊಲ, ಹಲಸಿಗೆ, ಹಾನಗಲ್, ಆಳ್ವಖೇಡಗಳನ್ನು ವಶಪಡಿಸಿಕೊಂಡನು. ಚಂಗಾಳ್ವ, ಕೊಂಗಾಳ್ವ ಮನೆತನಗಳು ಹೊಯ್ಸಳರಿಗೆ ಮಣಿದವು.

ವಿಷ್ಣುವರ್ಧನನ ಈ ಜೈತ್ರಯಾತ್ರೆಗಳನ್ನು ಸ್ವಲ್ಪ ಸೂಕ್ಷ್ಮವಾಗಿ ಅವಲೋಕಿಸಿದರೆ ಒಂದು ಅಂಶವು ಸ್ಪಷ್ಟವಾಗಿ ಗೋಚರವಾಗುತ್ತದೆ. ಅದೆಂದರೆ, ವಿಷ್ಣುವರ್ಧನನು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯುತ್ತಿದ್ದಾನೆ ಎಂಬುದು. ಹೇಗೆಂದರೆ ಮೇಲ್ನೋಟಕ್ಕೆ ಒಂದು ಕಡೆಯಿಂದ ಚಾಲುಕ್ಯ ಸಾಮಂತರನ್ನೆಲ್ಲ ತನಗೆ ತಲೆಬಾಗುವಂತೆ ಮಾಡುವ ಮೂಲಕ ಚಾಲುಕ್ಯರಿಗೆ ಬೆಳೆಯುತ್ತಿರುವ ತನ್ನ ಅಗಾಧ ಆಡಳಿತಾತ್ಮಕ ಶಕ್ತಿ ಸಂವರ್ಧನೆಯನ್ನು ತೋರಿಸುವುದು. ಆದರೆ ರಾಜತಾಂತ್ರಿಕವಾಗಿ ಅವನ ಅಂತರಂಗದಲ್ಲಿ ಇದ್ದುದು ಈ ಎಲ್ಲ ಯುದ್ಧಾದಿ ವಿಜಯಗಳಲ್ಲಿ ಅವನು ಹೇರಳವಾಗಿ ಸಂಪತ್ತನ್ನು ಸಂಗ್ರಹಿಸಿ ಹೊಯ್ಸಳ ಭಂಡಾರವನ್ನು ತುಂಬಿಸುವುದು; ಜೊತೆಗೆ ಅಪಾರ ಸೈನ್ಯ ಶಕ್ತಿಯ ಜಮಾವಣೆ; ನೂತನವಾಗಿ ಗೆದ್ದ ರಾಜರ ಬೆಂಬಲ ಮತ್ತು ಅವರ ನಿಷ್ಠೆ. ಈ ಬಗೆಯ ಧನ, ಜನಬಲಗಳೊಂದಿಗೆ ರಾಜರ ಬೆಂಬಲಗಳನ್ನು ಮೇಳೈಸಿಕೊಂಡು ಗಂಗವಾಡಿ ಪ್ರದೇಶವನ್ನು ಹೇಗಾದರೂ ಮಾಡಿ ಚೋಳರಿಂದ ಮುಕ್ತಗೊಳಿಸಿ ತನ್ನ ವಶವರ್ತಿ ಮಾಡಿಕೊಳ್ಳುವುದೇ ಆಗಿತ್ತು. ಗಂಗವಾಡಿಯನ್ನು ಗೆಲ್ಲುವುದು ಅವನ ಜೈತ್ರಯಾತ್ರೆಯ ಶಿಖರತಮ ಗುರಿಯಾಗಿದ್ದಂತೆ ತೋರುತ್ತದೆ. ಇಂತಹ ವಿಷ್ಣುವರ್ಧನನ ಹಲವು ಬಯಕೆಗಳನ್ನು ಪೂರ್ಣಗೊಳಿಸಿದವನು ಗಂಗರಾಜನೆಂಬ ದಂಡನಾಯಕ ಎಂಬುದು ವಿಶೇಷವಾದ ಸಂಗತಿಯಾಗಿದೆ.

ಹೊಯ್ಸಳ ರಾಜ್ಯಕ್ಕೆ ಗಂಗರಾಜ ದಂಡಾಧಿಪನ ಅವಶ್ಯಕತೆ

ಹೊಯ್ಸಳ ಸೈನ್ಯವು ಅವಿರತವಾಗಿ ಹೋರಾಡುತ್ತಿರಬೇಕಾದ ಅವಶ್ಯಕತೆ ಹಿಂದೆಂದಿಗಿಂತಲೂ ವಿಷ್ಣುವರ್ಧನನ ಕಾಲದಲ್ಲಿ ಹೆಚ್ಚಾಗಿತ್ತು. ಹೆಚ್ಚುಕಡಿಮೆ ವರ್ಷೊಂಬತ್ತು ಕಾಲವೂ ವಿವಿಧೆಡೆಗಳಲ್ಲಿ ಹೊಯ್ಸಳ ಸೈನ್ಯವು ತನ್ನ ಅಸ್ತಿತ್ವವನ್ನು ಸಾಧಿಸಲೇ ಬೇಕಾಗಿತ್ತು. ವಿಷ್ಣುವರ್ಧನನ ರಾಜ್ಯವಿಸ್ತರಣೆಯ ಮಹತ್ವಾಕಾಂಕ್ಷೆಯೂ ಈ ಹಿಂದಿನ ಅವರ ಮನೆತನದ ಎಲ್ಲರಿಗಿಂತಲೂ ಮಿಗಿಲಾಗಿದ್ದವು. ಅವನ ಕಾಲದ ರಾಜಕೀಯ ನಡೆಯೂ ಕೂಡ ಅತ್ಯಂತ ಸಂಕೀರ್ಣವಾಗಿತ್ತು. ಒಂದೆಡೆ ಚಕ್ರವರ್ತಿಗಳೊಡನೆ ನಡೆಯುವ ಹೋರಾಟವಾದರೆ ಇನ್ನೊಂದೆಡೆ ತನ್ನಂತೆಯೇ ಇದ್ದು ಯಾವಾಗ ಬೇಕಾದರೂ ತನ್ನ ಮೇಲೆಯೇ ಬೀಳಬಹುದಾಗಿದ್ದ ಸಹವರ್ತಿ ಸಾಮಂತರ ಮೇಲಿನ ಆಕ್ರಮಣಗಳು ತಲೆ ಕೆಡಿಸಿದ್ದವು. ಆಡಳಿತದಲ್ಲಿ ವಿಷ್ಣುವರ್ಧನನಿಗೆ ಸಹಕರಿಸಲು ರಾಜ್ಯವನ್ನು ಹಲವು ಭಾಗಗಳಾಗಿ ವಿಂಗಡಿಸಲಾಗಿತ್ತು. ವಿವಿಧ ಮಂಡಲಗಳಿಗೆ ಅಧಿಪತಿಗಳಾಗಿ ಮಹಾಮಂಡಲೇಶ್ವರರು ಕಾರ್ಯ ನಿರ್ವಹಿಸುತ್ತಿದ್ದರು.

ಇದರೊಂದಿಗೆ ವಿಷ್ಣುವರ್ಧನನ ಧಾರ್ಮಿಕ ನೀತಿಯಿಂದ ನಾಡಿನೆಲ್ಲೆಡೆ ನಿರಂತರವಾಗಿ

ಸಾಗುತ್ತಿದ್ದ ಧಾರ್ಮಿಕ ಕಾರ್ಯಗಳು, ಇದರೊಟ್ಟಿಗೆ ನಿರ್ಮಾಣದಲ್ಲಿ ತೊಡಗಿರುತ್ತಿದ್ದ ಅಸಂಖ್ಯ ಭವನಗಳು, ಈ ಭವನಗಳ ನಿರ್ಮಾಣದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದ ಹೊಯ್ಸಳ ಶಿಲ್ಪಿಗಳು, ಇವೆಲ್ಲದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಅನೇಕಾನೇಕ ಸ್ಥಾನಪತಿಗಳು, ದೇಗುಲಗಳ ನಿರ್ವಹಣೆಯಲ್ಲಿ ತಮ್ಮನ್ನು ತಾವು ವಿನಿಯೋಗಿಸಿಕೊಳ್ಳುತ್ತಿದ್ದ ಮಹಾಜನರು, ನಾಡಿನ ಸಾಂಸ್ಕೃತಿಕ ಅಭ್ಯುದಯಕ್ಕೆ ಪಣ ತೊಟ್ಟಿದ್ದರು.

ವ್ಯಾಪಾರ ವಹಿವಾಟುಗಳಲ್ಲಿ ಯಾವಾಗ ಬೇಕಾದರೂ ಏರುಪೇರುಗಳಾಗಬಹುದಾಗಿತ್ತು. ನಾಡಿನ ಆಂತರಿಕ ವ್ಯಾಪಾರವು ಪರರ ಪಾಲಾಗದಂತೆ ನೋಡಿಕೊಳ್ಳಬೇಕಾಗಿದ್ದ ಎಚ್ಚರ ವಿಷ್ಣುವರ್ಧನನ ಕಾಲದಲ್ಲಿಯೇ ಹೆಚ್ಚಾಯಿತು. ಬಹುಶಃ ಹೊಯ್ಸಳ ವಿಷ್ಣುವರ್ಧನನಿಗಿಂತ ಮುಂಚೆ ಅವನಷ್ಟು ಮಹಾವಡ್ಡವ್ಯವಹಾರಿಗಳನ್ನು ನಾಡಿನ ವಿವಿಧೆಡೆ ನೆಲೆಗೊಳ್ಳುವಂತೆ ಮಾಡಿ ಸಂತೆಗಳನ್ನು ಸ್ಥಳೀಯ ಮಾರುಕಟ್ಟೆಗಳನ್ನು ನಿರ್ಮಿಸಿ ವ್ಯಾಪಾರಕ್ಕೆ ವಿಶೇಷವಾದ ಸ್ಥಾನಮಾನಗಳನ್ನು ನೀಡಿದ ಇನ್ನೊಬ್ಬ ದೊರೆ ಕನ್ನಡನಾಡಿನಲ್ಲಿ ಇರಲಿಲ್ಲ. ಇವನ ಕಾಲದಲ್ಲಿ ನಿರ್ಮಾಣವಾದ ಅನೇಕಾನೇಕ ಕೆರೆಗಳು ಹೊಯ್ಸಳ ಕೃಷಿಮಾರುಕಟ್ಟೆ ವಸ್ತುಗಳನ್ನು ಅಂತರರಾಜ್ಯಗಳಿಗೆ ಮುಟ್ಟಿಸಿದ ಸಂಗತಿ ಏನೂ ಕಡಿಮೆಯಾದ ಸಾಧನೆಯಲ್ಲ.

ಆರ್ಥಿಕ ಸ್ವಾವಲಂಬನೆಯನ್ನು ವಿಷ್ಣುವರ್ಧನನ ಕಾಲದಲ್ಲಿ ವಿಶೇಷವಾಗಿ ವರ್ಧಿಸಲಾಯಿತು. ನಿರಂತರವಾಗಿ ನಾಡಿನ ಎಲ್ಲಾ ಪ್ರಮುಖರಿಗೆ ತಮ್ಮ ತಮ್ಮ ವೃತ್ತಿಗಳಲ್ಲಿ ಅಸಾಧಾರಣವಾದ ಬದಲಾವಣೆಗಳನ್ನು ತಂದುಕೊಳ್ಳಲು ಒಳನಾಡಿನಲ್ಲಿ ಹೇಗೆ ಪ್ರೇರಣೆಯಾಯಿತೋ ಹಾಗೆಯೇ ಹೊರನಾಡಿನವರಿಗೆ ಈ ಬೆಳವಣಿಗೆಯು ಕಣ್ಣು ಕೋರೈಸುವಂತಿದ್ದು ಹೊಯ್ಸಳ ರಾಜ್ಯದ ಮೇಲೆ ನಿಗಧಿತವಾಗಿ ದಾಳಿಗಳನ್ನು ಮಾಡಲು ಸಹಕಾರಿಯಾಗಿತ್ತು.

ಹಾಗಾಗಿ ಮಹಾಸಂಧಿವಿಗ್ರಹಿಗಳು, ಸಂಧಿವಿಗ್ರಹಿಗಳು ಸದಾ ವಿದೇಶಾಂಗ ವಿಚಾರಗಳನ್ನು ಗಮನಿಸುತ್ತಲೇ ಇರಬೇಕಾಗಿತ್ತು. ಯಾವಾಗ ಬೇಕಾದರೂ ಹೊಯ್ಸಳರ ಮೇಲೆ ಯಾರು ಬೇಕಾದರೂ ದಾಳಿ ಮಾಡಬಹುದಾಗಿತ್ತು. ಕನ್ನಡ ನಾಡು ವಿಸ್ತೃತವಾಗಿದ್ದುದರಿಂದಲೂ ಸುತ್ತಲೂ ಹಲವು ಭಾಷಿಕರು ನೆಲೆಸಿದ್ದರಿಂದಲೂ, ಸುತ್ತಲೂ ಸಾರ್ವಭೌಮರೆಂದು ಬೀಗುತ್ತಿದ್ದವರು ಸದಾ ಈ ಪುಟ್ಟ ರಾಜ್ಯದ ವಿರುದ್ದ ದಂಗೆಯೇಳಲು ಪ್ರಯತ್ನಶೀಲರಾಗಿದ್ದರು ಎಂದರೆ ಈ ಕಾಲದ ಮಹಾಕ್ಷೋಭೆಯನ್ನು ಅರ್ಥ ಮಾಡಿಕೊಳ್ಳಬಹುದು.

ಇಂತಹ ವಿಷಮ ಸಂದರ್ಭದಲ್ಲಿ ಹೊಯ್ಸಳ ರಾಜ್ಯವನ್ನು ವಿಷ್ಣುವರ್ಧನನಿಗೆ ಸಹವರ್ತಿಯಾಗಿ ಕಾಪಾಡಬೇಕಾದ ಮಹಾಮುತ್ಸದ್ದಿಯೊಬ್ಬನ ಅವಶ್ಯಕತೆ ಇತ್ತು. ಸೈನ್ಯವನ್ನು ನೋಡಿಕೊಂಡು ಸರಿಯಾದ ದಾರಿಯಲ್ಲಿ ಮುನ್ನಡೆಸಬಲ್ಲ ಸಮರ್ಥ ದಂಡನಾಯಕನ ಅಗತ್ಯತೆಯ ಬಗ್ಗೆ ಹೇಳಲೇಬೇಕಾಗಿಲ್ಲ. ವಿಷ್ಣುವರ್ಧನನ ಇಂತಹ ಪರಿಸ್ಥಿತಿಯಲ್ಲಿ ಅವನೊಂದಿಗೆ ಸಮಸಮವಾಗಿ ದುಡಿದ ಮಹಾಸಾಹಸಿ ಎಂದರೆ ಗಂಗರಾಜ. ಇವನು ಪ್ರಮುಖವಾಗಿ ಹೊಯ್ಸಳ ಸೇನೆಯನ್ನು ಸಮರ್ಥವಾಗಿ ಮುನ್ನಡೆಸಿದ ಸೇನಾಧಿಪತಿ. ಇವನ ಸೈನ್ಯದಲ್ಲಿ ಚತುರಂಗ ಬಲಗಳೂ ಇದ್ದವು ಎಂದು ಹೇಳಲಾಗುತ್ತದೆ. ಕಾಲುದಳ, ರಥದಳ, ಅಶ್ವದಳ, ಗಜದಳಗಳು ಇರುತ್ತಿದ್ದ ವಿಷಯವನ್ನು ನಾವು ತಿಳಿಯಬಹುದಾಗಿದೆ. ಇವರ ಸೈನ್ಯಕ್ಕೆ ಯುದ್ಧದ ಕುದುರೆಗಳನ್ನು ಸಿಂಧ್, ಅರೇಬಿಯಾ, ಕಾಂಭೋಜಗಳಿಂದ ಆಮದು ಮಾಡಿಕೊಳ್ಳುತ್ತಿದ್ದುದರ ಹಿಂದೆ ಗಂಗರಾಜನ ಬಹಳ ಮುಖ್ಯವಾದ ಯುದ್ಧತಂತ್ರಗಳೇ ಕಾರಣವಾಗಿರಬೇಕು.

[ಸಂಕ್ಷೇಪಗಳು: ಎಕ – ಎಪಿಗ್ರಾಫಿಯಾ ಕರ್ನಾಟಿಕ; ಚಪ – ಚನ್ನರಾಯಪಟ್ಟಣ; ನಾಮಂ – ನಾಗಮಂಗಲ; ಮದ್ದೂ– ಮದ್ದೂರು; ಶ್ರಬೆ – ಶ್ರವಣಬೆಳಗೊಳ; (ಪ) – ಎ.ಕ. ಪರಿಷ್ಕೃತ ಸಂಪುಟ; ಮೈ– ಮೈಸೂರು.]

– 2 –

ಗಂಗರಾಜನ ಪೂರ್ವಿಕರು:

ನಾವು ಗಂಗರಾಜನನ್ನು ಹಾಗೂ ಆತನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಾಧನೆಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅವನ ಕುಟುಂಬದ ಪೂರ್ವಿಕ ಸದಸ್ಯರನ್ನು ಅವರು ಗಂಗರಾಜನ ವಂಶೀಯರಾಗಿ ಸಮಾಜಕ್ಕೆ ಕೊಟ್ಟ ಕೊಡುಗೆಗಳನ್ನು ತಿಳಿಯಬೇಕು. ಮೊದಲು ಅವನ ಪೂರ್ವಿಕರ ಬಗ್ಗೆ ತಿಳಿದುಕೊಳ್ಳುವುದರಿಂದ ಗಂಗರಾಜನು ಸಾಂಸ್ಕೃತಿಕವಾಗಿ ರೂಪುಗೊಂಡ ಬಗೆಯನ್ನು ಅವನ ಪೂರ್ವಿಕರಿಂದ ಆರ್ಜಿಸಿಕೊಂಡ ಗುಣಗಳನ್ನು ನಾವು ಗುರುತಿಸಬಹುದು. ನಂತರ ಅವನ ವೈಯಕ್ತಿಕ ವಿಷಯಗಳತ್ತಲೂ ಮತ್ತು ಅವನ ನಂತರದ ಇನ್ನಿತರ ಆ ವಂಶೀಯರ ಬಗ್ಗೆ ತಿಳಿದುಕೊಳ್ಳುವುದರಿಂದ ಗಂಗರಾಜನ ರಾಜಕೀಯ ನಡೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು ಎಂದು ಬಗೆದಿದ್ದೇನೆ.

ಗಂಗರಾಜನ ವಂಶದಲ್ಲಿ ಶಾಸನಾಧಾರಗಳಿಂದ ಸದ್ಯಕ್ಕೆ ನನಗೆ ಗುರುತಿಸಲು ಸಾಧ್ಯವಾಗಿರುವ ಅತ್ಯಂತ ಪ್ರಾಚೀನ ವ್ಯಕ್ತಿ ಎಂದರೆ ನಾಗವರ್ಮ್ಮ. 1006ರಲ್ಲಿ ಹೊಯ್ಸಳರಿಗೂ ಚೋಳರಿಗೂ ನಡೆದ ಕಲಿಯೂರಿನ ಯುದ್ಧದಲ್ಲಿ ಹೊಯ್ಸಳರಿಗೆ ಹಿನ್ನಡೆಯಾಯಿತು. ಆಗಿನ್ನೂ ಹೊಯ್ಸಳ ವಂಶವು ನಾಡಿನ ಇತಿಹಾಸದಲ್ಲಿ ತಮ್ಮದೇ ಛಾಪನ್ನು ರೂಪಿಸಿಕೊಳ್ಳಲು ಹವಣಿಸುತ್ತಿದ್ದ ಕಾಲವದು. ನೃಪಕಾಮನು ಹೊಯ್ಸಳರಲ್ಲಿ ಮೊದಲನೆಯ ಮುಖ್ಯ ಅರಸನಾಗಿ ರೂಪುಗೊಳ್ಳುತ್ತಿದ್ದ ಕಾಲವದು. ಚೋಳರಂತಹ ಪ್ರಬಲ ದೊರೆಗಳ ಮೇಲೆ ಯುದ್ಧಕ್ಕೆ ನಿಂತದ್ದೇ ಬಹುದೊಡ್ಡ ಸಾಧನೆಯಾಗಿತ್ತು. ಹಾಗಾಗಿ ಈ ಕದನಕ್ಕೆ ವಿಶೇಷವಾದ ಐತಿಹಾಸಿಕ ಪ್ರಾಮುಖ್ಯತೆ ಇದ್ದೇ ಇದೆ. ಇದೇ ಕದನದಲ್ಲಿ ನೃಪಕಾಮನು ತನ್ನ ಸೇನಾಧಿಪತಿ ನಾಗಣ್ಣ ಅಥವಾ ನಾಗವರ್ಮನನ್ನು ಮತ್ತಿತರ ಸೈನ್ಯಾಧಿಕಾರಿಗಳನ್ನು ಕಳೆದುಕೊಂಡನು ಎಂಬ ಉಲ್ಲೇಖಗಳಿವೆ (ಎಕ 2(ಪ): ಶ್ರಬೆ 532). ಹಾಗಾಗಿ ಗಂಗರಾಜನ ವಂಶದಲ್ಲಿ ನಾವೀಗ ಗುರುತಿಸಿರುವ ಅತ್ಯಂತ ಪ್ರಾಚೀನ ವ್ಯಕ್ತಿಯಾದ ಈ ನಾಗವರ್ಮನು ಬಹುಶಃ ಕಲಿಯೂರಿನ ಯುದ್ಧದಲ್ಲಿ ಮಡಿದ ನಾಗಣ್ಣನೇ ಇರಬಹುದು.

ನಾಗವರ್ಮ್ಮನ ಮಗ ಮಾರಮಯ್ಯ; ಮಾರಮ್ಮಯ್ಯನ ಬಗ್ಗೆ ಹೆಚ್ಚಿನ ಮಾಹಿತಿಯ ಲಭ್ಯವಿಲ್ಲ. ಆತನೂ ಕೂಡ ಸಹ ಸೈನ್ಯದಲ್ಲಿದ್ದನು ಎಂದು ತಿಳಿಯಬಹುದು. ಆದರೆ ಆತನು ಯಾವ ಪದವಿಯಲ್ಲಿ ಇದ್ದನೆಂಬ ವಿಷಯವನ್ನು ನಮಗೆ ಸಮಕಾಲೀನ ಶಾಸನಗಳು ತಿಳಿಸುವುದಿಲ್ಲ. ಮಾರಮಯ್ಯನ ವಧು ಮಾಕಣಬ್ಬೆ. ಈ ದಂಪತಿಗಳ ಸುತನೇ ಒಂದನೆಯ ಏಚ ಅಥವಾ ಏಚಿರಾಜ. ಏಚಿರಾಜ ಮತ್ತು ಪೋಚಿಕಬ್ಬೆ ದಂಪತಿಗಳಿಗೆ ಇಬ್ಬರು ಪುತ್ರರು. ಅವರಲ್ಲಿ ಮೊದಲನೆಯಾತ ಬರ್ಮ್ಮಚಮೂಪ, ಎರಡನೆಯಾತ ಗಂಗರಾಜ. ಗಂಗರಾಜನ ವಂಶೀಯರು ಕೌಂಡಿಲ್ಯಶ ಗೋತ್ರದವರಾಗಿದ್ದರು. ಜೈನಧರ್ಮದ ಅನುಯಾಯಿಗಳಾಗಿದ್ದರು. ಇದನ್ನು ಸ್ಪಷ್ಟವಾಗಿ ತಿಳಿಸುವ ಶಾಸನೋಕ್ತ ಸಾಲುಗಳು (ಎಕ 10(ಪ): ಚಪ 98) ಹೀಗಿವೆ–

> **ಜಿನಧರ್ಮಾಗ್ರಣಿ ನಾಗವರ್ಮ್ಮನ ಸುತಂ ಮಾರಯ್ಯಂ ಜಗ**
> **ದ್ವಿನುತಂ ತತ್ಸುತನೇಚಿರಾಜನಮಳಂ ಕೌಂಡಿಲ್ಯಶದ್ಗೋತ್ರನಾ**
> **ತನಚಿತ್ತೋತ್ಸವೆ ಪೋಚಿಕಬ್ಬೆ ಅವರ್ಗ್ಗತ್ಯುತ್ಸಾಹದಿಂ ಪುಟ್ಟಿದಂ**
> **ಜನಜೇಯೆಂಬಿನ ಬಮ್ಮದೇವನನುಜಂ ಗಂಗದಂಡಾಧಿಪಂ**

ಒಂದನೆಯ ಏಚ

ಏಚನು ಗಂಗರಾಜನ ತಂದೆ. ಗಂಗರಾಜನ ವಂಶೀಯರಲ್ಲಿ ಒಟ್ಟು ಮೂರು ಜನ ಏಚರನ್ನು ಶಾಸನಾಧಾರಗಳಿಂದ ಗುರುತಿಸಿದ್ದೇನೆ. ಆದ್ದರಿಂದ ಅಧ್ಯಯನದ ಸುಭಗತೆಗಾಗಿ ಗಂಗರಾಜನ ತಂದೆಯಾದ ಏಚನನ್ನು ಒಂದನೆಯ ಏಚ ಎಂದು ಉಲ್ಲೇಖಿಸಬಯಸುತ್ತೇನೆ. ಏಚನು ಹಾಗೂ ಅವನ ತಂದೆಯೂ ತಮ್ಮ ಕಾಲಕ್ಕೆ ಅತ್ಯಂತ ಪ್ರಸಿದ್ಧರಾಗಿದ್ದಂತೆ ತೋರುತ್ತದೆ ಶಾಸನಗಳ (ಎಕ 2(ಪ): ಶ್ರಬೆ 82). ಈ ಮುಂದಿನ ಸಾಲುಗಳು ಇದನ್ನು ಸಾರಿ ಹೇಳುತ್ತಿವೆ:

ಜನತಾಧಾರನುದಾನನ್ಯವನಿತಾದೂರಂ ವಚಸ್ಸುಂದರೀ
ಘನವೃತ್ತಸ್ತನಹಾರನುಗ್ರರಣಧೀರಂ ಮಾರನೇನೆಂದಪೈ
ಜನಕಂ ತಾನೆನೆ ಮಾಕಣಬ್ಬೆ ವಿಬುಧಪ್ರಖ್ಯಾತಧರ್ಮ್ಮ ಪ್ರಯು
ಕ್ತನಿಕಾಮಾತ್ತಚರಿತ್ರೆ ತಾಯೆನಲಿದೇನೇಚಂ ಮಹಾಧನ್ಯನೋ

ಪ್ರಜಾನುರಾಗಿಯೂ, ಉದಾರಿಯೂ ಪರಸ್ತ್ರೀವ್ಯಾಮೋಹ ಇಲ್ಲದಂತಹ ಶೀಲವಂತನೂ ಪಂಡಿತನೂ ಶೌರ್ಯವಂತನೂ ಆದ ಮಾರನು ತನ್ನ ತಂದೆಯಾಗಿರುವಾಗ ಧರ್ಮಕಾರ್ಯನಿರತಳಾದ ಮಾಕಣಬ್ಬೆಯು ತಾಯಿಯಾಗಿರುವಾಗ ಏಚನ ಪುಣ್ಯವೇ ಪುಣ್ಯ! ಎಂದು ಶಾಸನಗಳು ಕೊಂಡಾಡುವುದರಿಂದ ನಾವು ಗಂಗರಾಜನ ವಂಶೀಯರು ಮೊದಲಿನಿಂದಲೂ ಧರ್ಮಕಾರ್ಯಗಳಲ್ಲಿ ನಿರತರಾಗಿದ್ದರು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು.

ವ್ರಿತ್ತಸ್ತಮಳಂ ಬುಧಜನ
ಮಿತ್ರಂ ದ್ವಿಜಕುಳ ಪವಿತ್ರನೇಚಂ ಜಗದೊಳು
ಪಾತ್ರಂ ರಿಪುಕುಳ ಕಂದಘ
ನಿತ್ರಂ ಕೌಂಡಿನ್ಯಗೋತ್ರನಮಳ ಚರಿತ್ರಂ

ಗಂಗರಾಜನ ತಂದೆಯಾದ ಏಚನು ಪರಿಶುದ್ಧ ಚಾರಿತ್ರ್ಯವುಳ್ಳವನೂ, ಪಂಡಿತಸ್ನೇಹಿಯೂ, ಪವಿತ್ರವಾದ ಕೌಂಡಿನ್ಯಗೋತ್ರದಲ್ಲಿ ಜನಿಸಿದವನೂ ಶತ್ರುಗಳ ವಂಶವನ್ನೇ ನಿರ್ನಾಮ ಮಾಡಬಲ್ಲ ಧೀರನೂ ಆಗಿ ಲೋಕದಲ್ಲಿ ಗೌರವಾನ್ವಿತನಾಗಿದ್ದನು ಎಂದು ಶಾಸನವೊಂದು ಈತನನ್ನು ಸ್ತುತಿಸಿದೆ. ಬಹುಶಃ ಗಂಗರಾಜನು ಅತ್ಯಂತ ಧಾರ್ಮಿಕನಾಗಿಯೂ ಹಾಗೂ ಅತ್ಯಂತ ಪರಾಕ್ರಮಿಯೂ ಆಗಿ ರೂಪುಗೊಳ್ಳಲು ಅವನ ಮನೆತನದ ಪ್ರತಿಯೊಬ್ಬರೂ ಕಾರಣಕರ್ತರಾಗಿದ್ದಾರೆ ಎಂದು ಅನ್ನಿಸುತ್ತದೆ (ಅದೇ.: ಶ್ರಬೆ 136.).

ಮನುಚರಿತನೇಚಿಗಾಂಕನ
ಮನೆಯೊಳ್ಮನಿಜನಸಮೂಹಮುಂ ಬುಧಜನಮುಂ
ಜಿನಪೂಜನೆ ಜಿನವಂದನೆ
ಜಿನಮಹಿಮೆಗಳಾವಕಾಲಮುಂ ಶೋಭಿಸುಗುಂ

ಗಂಗರಾಜನ ಜೈನನಿಷ್ಠೆಯನ್ನು ನಾವು ಅರಿಯಬೇಕಾದರೆ ಅವನ ತಂದೆಯ ಬದುಕಿನ ಗತಿಯನ್ನು ಅರ್ಥ ಮಾಡಿಕೊಳ್ಳಬೇಕು. ಗಂಗರಾಜನ ತಂದೆಯಾದ ಏಚನ ಮನೆಯಲ್ಲಿ ಸದಾಕಾಲ ಮುನಿಗಳೂ ವಿದ್ವಾಂಸರು ತುಂಬಿರುತ್ತಿದ್ದರು; ಜಿನಪೂಜೆ, ಜಿನವಂದನೆ ಜಿನಮಹಿಮೆಗಳು ಯಾವಾಗಲೂ ನಡೆಯುತ್ತಿದ್ದವು. ಹಾಗಾಗಿಯೇ ಗಂಗರಾಜನು ಹೊಯ್ಸಳರಲ್ಲಿ ರಾಜಸೇವೆಯಲ್ಲಿ ನಿರತನಾದಾಗ ಅವನ ಮನೆಯವರೆಲ್ಲರೂ ಜೈನಕಾಶಿಯಾಗಿದ್ದ ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದರು ಎಂದೆನಿಸುತ್ತದೆ. ಯಾಕೆಂದರೆ ಇಡೀ ಶ್ರವಣಬೆಳಗೊಳದಲ್ಲಿ ಸಮಕಾಲೀನ ಸಂದರ್ಭದಲ್ಲಿ ನಿಜವಾದ ಧರ್ಮವಂತರೆಂದರೆ

ಗಂಗರಾಜನ ವಂಶೀಯರೇ ಆಗಿದ್ದರು ಎಂಬುದು ಅತಿಶಯೋಕ್ತಿಯಲ್ಲ. ಆ ಹೊತ್ತಿನ ಶ್ರವಣಬೆಳಗೊಳದ ವಾಸ್ತು ನಿರ್ಮಿತಿಗಳಿಗೆ ಶೇಖಡಾ 100ರಷ್ಟನ್ನು ಸೇರಿಸಿದ ಹಿರಿಮೆಯೂ ಇವನ ವಂಶೀಯರಿಗೇ ಸಲ್ಲುತ್ತದೆ. ಅದನ್ನು ಮುಂದೆ ವಿವರವಾಗಿ ನೋಡಬಹುದಾಗಿದೆ.

ಪೋಚಿಕಬ್ಬೆ

ಗಂಗರಾಜನು ಎಷ್ಟರ ಮಟ್ಟಿಗೆ ಜೈನಭಕ್ತನಾಗಿದ್ದನು ಎಂಬುದನ್ನು ನಾವು ತಿಳಿಯಲು ಮುಖ್ಯಪ್ರೇರಣೆಯೆಂದರೆ ಅವನ ತಾಯಿ ಪೋಚಿಕಬ್ಬೆ. ಈಕೆ ಪರಮಜಿನ ಭಕ್ತೆಯಾಗಿದ್ದಳು. ಗಂಗರಾಜನಲ್ಲಿ ಧಾರ್ಮಿಕ ಶ್ರದ್ಧೆಯನ್ನು ಒದಗಿಸುವುದೇ ಅಲ್ಲದೇ ಅವನಲ್ಲಿ ರಕ್ತಗತವಾಗಿ ಬಂದಿದ್ದ ನಿರ್ಮಾಣ ಕೌಶಲವನ್ನು ಬಹುಶಃ ಈಕೆಯೇ ತುಂಬಿದ್ದಳು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಇವಳ ಹಿರಿಮೆಯನ್ನು ಬಿಂಬಿಸುವ ಶಾಸನೋಕ್ತ (ಮೇಲಿನದೇ.) ಪಂಕ್ತಿಗಳು ಇಂತಿವೆ:

ಉತ್ತಮ ಗುಣತತಿ ವನಿತಾ
ವೃತ್ತಿಯನೊಳಕೊಣ್ದುದೆಂದು ಜಗಮೆಲ್ಲಂ ಕ
ಯ್ಯೆತ್ತುವಿನಮಮಳಗುಣಸಂ
ಪತ್ತಿಗೆ ಜಗದೊಳಗೆ ಪೋಚಿಕಬ್ಬೆಯೆನೋನ್ತಳು

ಏಚನ ಮನೆಯಲ್ಲಿ ಸದ್ಗುಣಗಳ ಸಾಕಾರಮೂರ್ತಿಯಾಗಿ ಪೋಚಿಕಬ್ಬೆಯು ಶೋಭಾಯಮಾನವಾಗಿ ರಾರಾಜಿಸಿದ್ದಳು. ಸಮಕಾಲೀನ ಹೆಂಗಸರಲ್ಲಿ ಈಕೆಗೆ ವಿಶೇಷವಾದ ಸ್ಥಾನಮಾನವಿತ್ತು.

ತನುವಂ ಜಿನಪತಿ ನುತಿಯಿಂ
ಧನಮಂ ಮುನಿಜನದ ತೃಪ್ತಿಯಿಂ ಸಫಳಮಿದಿಂ
ನೆನಗೆಂಬೀ ನಂಬುಗೆಯೊ
ಳ್ಮನಮಂ ಜಗದೊಳಗೆ ಪೋಚಿಕಬ್ಬೆಯೆ ನಿಜಿಪಳು

ಗಂಗರಾಜನ ತಾಯಿಯಾದ ಪೋಚಿಕಬ್ಬೆಯು ತನುವನ್ನು ಜಿನಸ್ತೋತ್ರಕ್ಕೂ, ಧನವನ್ನು ಮುನಿಗಳ ಸಂತೃಪ್ತಿಗೂ ಮೀಸಲಾಗಿರಿಸಿದ್ದಳು. ಈಕೆಗೆ ಅತ್ಯಂತ ಪ್ರೀತಿಯ ತಾಣವಾಗಿ ಶ್ರವಣಬೆಳಗೊಳದ ಚಂದ್ರಗಿರಿಯೆಂಬ ಚಿಕ್ಕಬೆಟ್ಟವು ಕಂಗೊಳಿಸಿದ ಸಂಗತಿಯನ್ನು ನಾವು ಅರಿಯಬೇಕಾಗಿದೆ. ಗಂಗರಾಜನ ಜನನಿಯಾದ ಪೋಚಿಕಬ್ಬೆಯು ಪರಿಜನರನ್ನು ಬುಧಜನರನ್ನು ಮನತಣಿಯುವ ಹಾಗೆ ಸತ್ಕರಿಸಿ ಹಾರೈಸಿ ಸೇವಿಸುತ್ತಿದ್ದಳು. ಇದರಿಂದ ಆಕೆಯ ಪ್ರಖ್ಯಾತಿ ಕೀರ್ತಿ ಯಶಸ್ಸು ಜಗದಲ್ಲಿ ವಿಸ್ತರಿಸುತ್ತಿತ್ತು. ಇಂತಹ ಪೋಚಾಂಬಿಕೆಯು ಬೆಳ್ಗೊಳದ ತೀರ್ಥವೇ ಮೊದಲಾದ ಹಲವು ತೀರ್ಥಗಳಲ್ಲಿ ಹಲವು ಚೈತ್ಯಾಲಯಗಳನ್ನು ಮಾಡಿಸಿ ಮಹಾದಾನಗಳನ್ನು ಮಾಡುತ್ತಿದ್ದಳು. ಹಾಗಾಗಿಯೇ ಈಕೆಯು ತೀರಿಕೊಂಡಾಗ ಆಕೆಯ ಸ್ಮರಣೆಗಾಗಿ ಈ ಚಂದ್ರಗಿರಿ ಪರಿಸರದಲ್ಲೇ ಈಕೆಯ ಹೆಸರು ಶಾಶ್ವತವಾಗಿರುವಂತೆ ಏರ್ಪಾಡನ್ನು ಮಾಡಲಾಯಿತು (ಮೇಲಿನದೇ.). ಈಕೆಯು ಸುರಪದಕ್ಕೆ ಹೋದುದನ್ನು ತಿಳಿಸುವ ಪದ್ಯ ಹೀಗಿದೆ–

ಅದನಿನ್ನೇನೆಂಬೆ ನಾನೊಂದಮಟ್ಟಿ ಸುಕ್ರಿತಮಂನೋಡರೋಮಾಂಚಮಾದ
ಪ್ಪುದು ಪೇಳ್ವುದ್ಯೋಗದಿಂದಂ ಸ್ಮರಿಯಿಪದೆ ನಮೋ ವೀತರಾಗಾಯ ಗಾರ್ಹ
ಸ್ಥ್ಯದಯೋಸೀದ್ಧಾವದೀ ಕಾಲದ ಪರಿಣತಿಯಿಂ ಗೆಲ್ದು ಸಲ್ಲೇಖನಾಸಂ
ಪದದಿಂದಂ ದೇವಿ ಪೋಚಾಂಬಿಕೆ ಸುರಪದಮಂ ಲೀಲೆಯಿಂಸೂಱೆಗೊಂಡಳ್

ಇಷ್ಟೆಲ್ಲಾ ಧಾರ್ಮಿಕ ಕಾರ್ಯಗಳಲ್ಲಿ ನಿರತಳಾಗಿದ್ದ ಪೋಚಲೆಯ ಪತಿಯು ಪ್ರಸಿದ್ಧನಾದ ಏಚ ಹಾಗೂ ಸುತರಾದ ಬಮ್ಮದೇವ ಹಾಗೂ ಗಂಗರಾಜರು ಸಾರ್ವಜನಿಕ

ಆಡಳಿತದಲ್ಲಿರಬೇಕಾದರೆ ಪೋಚಲೆಯು ಸಲ್ಲೇಖನ ವ್ರತವನ್ನಾದರೂ ಸ್ವೀಕರಿಸಿ ಮಡಿದಿದ್ದಾದರೂ ಏಕೆ ಎಂಬ ಪ್ರಶ್ನೆಯೇಳುತ್ತದೆ. ಗಂಗರಾಜನು ದಂಡಾಧೀಶನಾದ ಮೇಲೆಯೇ ಈಕೆಯು ಮಡಿದಿದ್ದು. ಆದರೆ ಎಲ್ಲಿ ಎಂಬ ಪ್ರಶ್ನೆಯನ್ನೂ ಸಹ ಕೇಳಿಕೊಳ್ಳಬೇಕಾಗಿದೆ. ಗಂಗರಾಜನು ತನ್ನ ಆತ್ಮಾಂಬಿಕೆ ಪೋಚಲದೇವಿಯು ಸ್ವರ್ಗಕ್ಕೆ ಹೋದಾಗ ಪರೋಕ್ಷವಿನಯವಾಗಿ ನಿಶಿದಿಗೆಯನ್ನು ನಿಲಿಸಿ ಪ್ರತಿಷ್ಠಾಪನೆಯನ್ನು ಮಾಡಿ ಮಹಾದಾನ, ಪೂಜೆ, ಅರ್ಚನೆ ಅಭಿಷೇಕಗಳನ್ನು ಮಾಡಿದನು. ಇಲ್ಲಿರುವ ಪರೋಕ್ಷವಿನಯ ಎನ್ನುವ ಮಾತಿಗೆ ಕೇವಲ ಆಕೆಯು ಬಹುಶಃ ಶ್ರವಣಬೆಳಗೊಳದಲ್ಲಿ ಅಲ್ಲದೇ ಬೇರೆಲ್ಲಿಯಾದರೂ ಮುಡಿಪಿದಳೇ ಎಂಬ ಅನುಮಾನವನ್ನೂ ಕೂಡ ಉಂಟುಮಾಡುತ್ತದೆ. ಆದರೆ ಆಕೆ ತನ್ನ ಜೀವನದಲ್ಲಿ ಬಹಳ ಪ್ರೀತಿಯಿಂದ ಇಷ್ಟಪಟ್ಟ ತಾಣವಾಗಿ ಬೆಳಗೊಳದಲ್ಲಿ ಇದ್ದುದಕ್ಕೆ ಶಾಸನಾಧಾರಗಳಿವೆ (ಮೇಲಿನದೇ.). ಹಾಗೂ ಗಂಗರಾಜನು ತನ್ನ ತಾಯಿ ಪೋಚಿಕಬ್ಬೆಯ ಸ್ಮರಣೆಗಾಗಿ ಬಸದಿಯೊಂದನ್ನು ನಿರ್ಮಿಸಿದನು. ಇದು ಈಗಿನ ಚಿಕ್ಕಬೆಟ್ಟದಲ್ಲಿರುವ ಕತ್ತಲೆಯ ಬಸದಿಯಾಗಿದೆ. ಕತ್ತಲೆ ಬಸದಿಯು ಬೆಳಗೊಳದಲ್ಲಿ ಅತೀ ವಿಶೇಷ ಬಸದಿಗಳಲ್ಲಿ ಒಂದಾಗಿರುವುದು ನಮಗೆ ತಿಳಿದೇ ಇದೆ. ಇಲ್ಲಿರುವ 14 ಬಸದಿಗಳಲ್ಲಿ ಮುನ್ನಲೆಯಲ್ಲಿಯೇ ಈ ಬಸದಿಯಿರುವುದು ಕೂಡ ಅತ್ಯಂತ ಮುಖ್ಯವಾದ ಸಂಗತಿಯಾಗಿದೆ (ಎಕ 2(ಪ): ಶ್ರಬೆ 80). ಗಂಗರಾಜನ ತಾಯಿ ತೀರಿಕೊಳ್ಳುವುದರ ಮೂಲಕ ಗಂಗರಾಜನ ಹಿರಿಯ ವಂಶೀಯರ ಬಗೆಗಿನ ಮಾಹಿತಿಗಳು ಸಂಪೂರ್ಣವಾಗುತ್ತವೆ. ಇನ್ನು ಮುಂದೆ ಗಂಗರಾಜನ ವೈಯಕ್ತಿಕ ವಿಷಯಗಳನ್ನು ತಿಳಿಯಬಹುದಾಗಿದೆ.

–3–

ಗಂಗರಾಜನು ಗಂಗ ವಂಶೀಯನೇ?

ಗಂಗರಾಜನು ಯಾವ ವಂಶದಲ್ಲಿ ಜನಿಸಿದನು ಎಂಬ ಕುತೂಹಲ ಮೂಡುವುದು ಸಹಜವಾಗಿದೆ. ಈತನಿಗೂ ಪ್ರಾಚೀನ ಗಂಗ ಮನೆತನಕ್ಕೂ ಸಂಬಂಧವಿದೆಯೇ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಕೆಲವು ಮುಖ್ಯವಾದ ಸಂಗತಿಗಳ ಮೂಲಕ ನಾವಿದನ್ನು ಕಂಡುಕೊಳ್ಳಬಹುದು. ಈತನ ಹೆಸರು 'ಗಂಗ'ರಾಜ. ಈ ಹೆಸರು ಬಹುಶಃ ಈತನಿಗೂ ಗಂಗವಂಶಕ್ಕೂ ಸಂಬಂಧವಿರುವುದನ್ನು ಸೂಚಿಸುತ್ತಿರಬಹುದೆಂದು ಊಹಿಸಬಹುದು. ಈತನ ವಂಶೀಯರಲ್ಲಿ ಹಲವು ಹೆಸರುಗಳು ಅದು ಪುರುಷರದ್ದಿರಲೀ ಅಥವಾ ಸ್ತ್ರೀಯರದ್ದೇ ಇರಲೀ ಪ್ರಾಚೀನ ಶುದ್ಧ ಕನ್ನಡ ಪರಿಸರದಿಂದ ಬಂದಂತಹ ಹೆಸರುಗಳಾಗಿವೆ. ಇದರ ಬಲದಿಂದಲೂ ನಾವು ಗಂಗರಾಜನ ಮೂಲವನ್ನು ಗಂಗವಂಶದಲ್ಲಿಯೇ ಹುಡುಕಬಹುದು. ಎರಡನೆಯದಾಗಿ, ಈತನ ಜೈನಧರ್ಮ ನಿಷ್ಠೆ. ಗಂಗರಲ್ಲಿ ಹಲವು ಅರಸರು ಜೈನನಿಷ್ಠೆಯನ್ನು ಹೊಂದಿದ್ದವರಾದ್ದರಿಂದಲೂ ಈತನು ಗಂಗವಂಶದಲ್ಲಿ ಜನಿಸಿರಬಹುದೆಂದು ತೋರುತ್ತದೆ. ಗಂಗರಾಜನನ್ನು ಪರಿಚಯಿಸುವ ಅತ್ಯಂತ ಜನಪ್ರಿಯವಾದ ಪದ್ಯವೊಂದಿದೆ (ಎಕ 2(ಪ): ಶ್ರಬೆ 82). ಅದು ಈ ಕೆಳಗಿನಂತಿದೆ.

ಗಂಗವಾಡಿಯ ಬಸದಿಗಳೆನಿತೊಳವನಿತಂ ತಾನೆಯ್ದೆ ಪೊಸಯಿಸಿದಂ
ಗಂಗವಾಡಿಯ ಗೊಮ್ಮಟದೇವರ್ಗ್ಗ ಸುತ್ತಾಲಯಮನೆಯ್ದೆ ಮಾಡಿಸಿದಂ
ಗಂಗವಾಡಿಯ ತಿಗುಳರಂ ಬೆಂಕೊಣ್ಡು ವೀರಗಂಗಂಗೆ ನಿಮಿರ್ಚ್ಚಿಕೊಟ್ಟಂ
ಗಂಗರಾಜನಾ ಮುನ್ನಿನ ಗಂಗರ ರಾಯಂಗಂ ನೂರ್ಮ್ಮಡಿ ಧನ್ಯನಲ್ತೆ

ಇದರಲ್ಲಿ ನಾಲ್ಕನೆಯ ಸಾಲಿನಲ್ಲಿ ಹೇಳಲಾಗಿರುವ ವಿಷಯಕ್ಕೆ ನಾವು ವಿಶೇಷವಾದ ಗಮನವನ್ನು ನೀಡಬೇಕು. ಗಂಗರಾಜನಿಗಿಂತ ಹಿಂದೆ ಇದ್ದ ಗಂಗದೊರೆಗಳ ಸಾಹಸಗಳಿಗಿಂತ ಗಂಗರಾಜನ ಸಾಹಸವು ನೂರುಪಟ್ಟು ಹಿರಿದಾದುದಾಗಿತ್ತು. ಈ ಮಾತಿನ ಬಲದಿಂದ

ನಾವು ಗಂಗರಾಜನು ಗಂಗದೊರೆಗಳ ಸಂಬಂಧಿ ಆಗಿದ್ದಿರಬಹುದು ಎಂದು ಊಹಿಸಬಹುದಾಗಿದೆ. ಕೆಲವರು ಮುನ್ನಿನ ಗಂಗರ ರಾಯ ಎಂದರೆ ಚಾವುಂಡರಾಯ ಎಂದು ಹೇಳುತ್ತಾರೆ. ಆದರೆ, ಮುನ್ನಿನ ಗಂಗರ ರಾಯ ಎಂದರೆ ಹಿಂದೆ ಇದ್ದ ಗಂಗದೊರೆಗಳು ಎಂದು ಪರಿಭಾವಿಸುವುದು ಸೂಕ್ತವಾಗಿದೆ.

ಇನ್ನೊಂದು ಊಹೆಯನ್ನು ಮಾಡುವುದಾದರೆ ಚಾವುಂಡರಾಯನು ಗಂಗವಂಶದ ಸಾಮಂತನಾಗಿದ್ದನು. ಈತನು ಬೆಳಗೊಳದಲ್ಲಿ ನಿರ್ಮಿಸಿದ ವಿಶ್ವಪ್ರಸಿದ್ಧ ಗೊಮ್ಮಟ ಮೂರ್ತಿಯು ಗಂಗವಂಶದ ಶಿಲ್ಪಕಲೆಯನ್ನು ಜಗತ್ತಿಗೆ ಪರಿಚಯಿಸಿದೆ. ಇಂತಹ ಗೊಮ್ಮಟ ಮೂರ್ತಿಯನ್ನು ಶ್ರವಣಬೆಳಗೊಳದಲ್ಲಿ ಚಾಮುಂಡರಾಯನು ನಿರ್ಮಿಸಿದ ಮೇಲೂ ಈ ಕ್ಷೇತ್ರವು ಜನಪ್ರಿಯವಾಗಲಿಲ್ಲ. ಈ ಮೂರ್ತಿಯ ನಂತರ ಒಂದು ಶತಮಾನಗಳ ಕಾಲ ಬೆಳಗೊಳದ ಯಾವ ಚಾರಿತ್ರಿಕ ದಾಖಲೆಗಳೂ ಲಭ್ಯವಿಲ್ಲ. ಇಂತಹ ಪರಿಸರವನ್ನು ಬೆಳಗಿಸಿದ ಕೀರ್ತಿ ಗಂಗರಾಜನಿಗೆ ಸಲ್ಲುತ್ತದೆ. ಬೆಳಗೊಳಕ್ಕೆ ಗಂಗರಾಜನು ಬರಲು ಮುಖ್ಯಕಾರಣ ತನ್ನ ಗಂಗ ವಂಶದ ಕೀರ್ತಿಕಳಶವಾದ ಈ ಕ್ಷೇತ್ರವನ್ನು ಊರ್ಜಿತಗೊಳಿಸುವುದೇ ಆಗಿದೆ.

ಇದಕ್ಕಿಂತ ಮಿಗಿಲಾಗಿ ಮೇಲೆ ಹೇಳಿದ ಪದ್ಯದ ಮೊದಲನೆಯ ಸಾಲು ತಿಳಿಸುವಂತೆ ಗಂಗದೊರೆಗಳ ಸಾಂಪ್ರದಾಯಿಕ ವೈರಿಗಳಾದ ಚೋಳರನ್ನು ಕರ್ನಾಟಕದಿಂದ ಓಡಿಸಲು ಈತನ ಪಾತ್ರ ಹಿರಿದಾದುದಾಗಿದೆ. ಹೊಯ್ಸಳ ದೊರೆ ವಿಷ್ಣುವರ್ಧನನ ಜೊತೆ ನಿಂತು ಚೋಳರನ್ನು ಕನ್ನಡ ನಾಡಿನಿಂದ ಪಲಾಯನ ಮಾಡಿಸಿದ ಅಪ್ರತಿಮ ಸೇನಾನಿ ಈತನೇ ಆಗಿರುವುದರಿಂದ ಈತನು ಗಂಗವಂಶದವನಿರಬೇಕು ಎಂಬ ಊಹೆಗೆ ವಿಶೇಷವಾದ ಬಲವಿದೆ. ತಾನು ಗೆದ್ದ ಪ್ರದೇಶವು ಹೊಯ್ಸಳರದ್ದು ಅನ್ನುವುದಕ್ಕಿಂತ ಗಂಗರಾಜನು ಗಂಗವಾಡಿ ಎಂದಿರುವುದನ್ನು ನಾವು ಗಮನಿಸಬೇಕು. ಪ್ರಾಚೀನ ಗಂಗವಂಶಕ್ಕೆ ಒಂದು ವೇಳೆ ಗಂಗರಾಜನು ಸೇರದೇ ಹೋದರೂ ಖಂಡಿತವಾಗಿಯೂ ಆಸಂದಿಯ ಗಂಗರೊಡನೆ ಈತನ ಸಂಬಂಧದ ಸಾಧ್ಯತೆಯು ಹೆಚ್ಚಾಗಿದೆ. ಆದರೆ ನಮಗೆ ಶಾಸನಗಳಲ್ಲಿ ಇದಕ್ಕೆ ಹೊಂದಿಕೊಳ್ಳುವ ಯಾವ ಆಧಾರಗಳೂ ಸಿಗುವುದಿಲ್ಲ. ಹಾಗಾಗಿ ಆ ವಿಷಯವನ್ನು ಸದ್ಯದ ಮಟ್ಟಿಗೆ ಮುಂದಿನ ಚರ್ಚೆಗಳಿಗೆ ಮೀಸಲಿರಿಸುವುದು ಕ್ಷೇಮಕರ.

ಗಂಗರಾಜನಿಗೆ ಹೊಯ್ಸಳದೊರೆಗಳ ಸಾಂಗತ್ಯ

ಗಂಗರಾಜನಿಗೆ ಹೊಯ್ಸಳದೊರೆಗಳ ಸಾಂಗತ್ಯ ದೊರೆತದ್ದು ಯಾವಾಗ ಎಂಬುದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಗಂಗರಾಜನ ತಂದೆಯಾದ ಏಚನು ಹೊಯ್ಸಳ ಸೇನೆಯಲ್ಲಿಯೇ ಇದ್ದಿರಬೇಕು. ಏಚನ ಶೌರ್ಯ ಸಾಹಸಗಳನ್ನು ಅವನ ಪೂರ್ವಿಕರ ಬಗ್ಗೆ ಹೇಳುವಾಗ ಶಾಸನಗಳು ವರ್ಣಿಸಿವೆ. ಏಚನ ತಂದೆಯಾದ ಮಾರಮ್ಮಯ್ಯನು ಕೂಡ ಬಹುಶಃ ಹೊಯ್ಸಳ ಸೇನೆಯಲ್ಲಿಯೇ ಕಾರ್ಯನಿರ್ವಹಿಸಿರಬಹುದು. ಅವನ ತಂದೆಯಾದ ನಾಗವರ್ಮನು ಕಲಿಯೂರಿನ ಯುದ್ಧದಲ್ಲಿ ಅಸುನೀಗಿದ್ದನ್ನು ಹೊಯ್ಸಳ ಶಾಸನವೊಂದು ಅತ್ಯಂತ ನೋವಿನಿಂದ ಪ್ರಸ್ತಾಪಿಸುವುದನ್ನು ನಾವು ಈಗಾಗಲೇ ಗುರುತಿಸಿದ್ದೇವೆ. ಆದರೆ ಅವರುಗಳು ಯಾವ ಘನತರವಾದ ಹುದ್ದೆಗಳನ್ನು ನಿರ್ವಹಿಸಿದ್ದರು ಎಂಬ ಅಂಶ ಮಾತ್ರ ತಿಳಿಯದಾಗಿದೆ.

ಹಾಗಾಗಿ ಆರಂಭದಿಂದಲೂ ಹೊಯ್ಸಳ ಸೇನೆಯೊಂದಿಗೆ ನಂಟಿದ್ದ ಗಂಗರಾಜನ ಕುಟುಂಬದಲ್ಲಿ ಆ ಕಾಲದ ಇನ್ನೊಬ್ಬ ಪ್ರಮುಖ ದಂಡನಾಯಕನಾದ ಮರಿಯಾನೆ ದಂಡನಾಯಕನ ಪ್ರಭಾವವೂ ಹೊಯ್ಸಳ ದೊರೆಗಳಲ್ಲಿ ಹೆಚ್ಚಿತ್ತು. ಹಾಗಾಗಿ ಬಂಧುವಾಗಿದ್ದ ಮರಿಯಾನೆ ದಂಡನಾಯಕನಿಂದಲೂ ಗಂಗರಾಜನು ಹೊಯ್ಸಳ ಸೇನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಲು ಕಾರಣವಾಯಿತು ಎನ್ನಬಹುದು. ಈಗಾಗಲೇ ಮರಿಯಾನೆ

ದಂಡನಾಯಕನು ಹೊಯ್ಸಳರಲ್ಲಿ ಅತ್ಯಂತ ಬೇಡಿಕೆಯ ದಂಡನಾಯಕನಾಗಿದ್ದನು. ಹೊಯ್ಸಳ ದೊರೆಗಳಿಗೆ ಮನೆಮಗನಂತಿದ್ದ ಮರಿಯಾನೆಯು ಬಹುಶಃ ಗಂಗರಾಜನ ಸಾಹಸಗಳನ್ನು ಹೊಯ್ಸಳದೊರೆಗಳ ಮುಂದೆ ಹೊಗಳಿ ಅವರನ್ನು ಪ್ರಭಾವಿಸಿರಲೂಬಹುದು.

ಗಂಗರಾಜದಂಡಾಧಿಪನು ಹೊಯ್ಸಳರ ಪ್ರಸಿದ್ಧ ದಂಡನಾಯಕನಾದ ಮರಿಯಾನೆ ದಂಡನಾಯಕನ ಸಂಬಂಧಿಯೂ ಆಗಿದ್ದ ವಿವರವನ್ನು ನಮಗೆ ನಾಗಮಂಗಲದ ಶಾಸನವು ಅರುಹುತ್ತದೆ; ಜೊತೆಗೆ ಈ ಶಾಸನವು ಪ್ರಸಿದ್ಧನಾದ ಮರಿಯಾನೆ ದಂಡನಾಯಕನ ವಂಶದ ವಿವರಗಳನ್ನು ಕೊಡುತ್ತದೆ. ಇದು ಕ್ರಿ.ಶ. 1183ಕ್ಕೆ ಸೇರಿದ ಸಂಕೀರ್ಣ ಶಾಸನ. ಇದರಲ್ಲಿ ಕ್ರಮವಾಗಿ ಕ್ರಿ.ಶ. 1048, 1103, 1182–83ರಲ್ಲಿ ಕೊಟ್ಟಂತ ದತ್ತಿಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಹಲವಾರು ಪ್ರಮುಖ ರಾಜಕೀಯ ಸಂಗತಿಗಳನ್ನು ನಮಗೆ ತಿಳಿಸುತ್ತದೆ.

ಈ ಶಾಸನವು 135 ವರ್ಷಗಳ ಹಿಂದೆ ಹೊಯ್ಸಳ ದೊರೆ ವಿನಯಾದಿತ್ಯನ ಆಳ್ವಿಕೆಯ ಕಾಲದಲ್ಲಿ ನಡೆದ ಸಂಗತಿಯೊಂದನ್ನು ತಿಳಿಸಿ ಆನಂತರ ಒಂದನೆಯ ನರಸಿಂಹನ ಕಾಲದಲ್ಲಿ ಘಟಿಸಿದ ವಿವರಗಳನ್ನು ತಿಳಿಸುತ್ತದೆ. ಹಿರಿಯ ಮರಿಯಾನೆಯನ್ನು ವಿನಯಾದಿತ್ಯನ ಪತ್ನಿ ಕೆಳೆಯಬ್ಬರಸಿಯು ತನ್ನ ಸ್ವಂತ ತಮ್ಮನಂತೆಯೇ ನೋಡಿಕೊಂಡಿದ್ದಳಂತೆ. ಆಗ ರಾಜನು ಸೊಸೆಯೂರಿನಿಂದ ಆಳುತ್ತಿದ್ದನು. ಆಕೆಯೂ ದೊರೆಯೂ ಮರಿಯಾನೆಗೆ ಕ್ರಿ.ಶ. 1048 ಫೆಬ್ರವರಿ 19 ರಂದು ದೇಕವ್ವೆಯನ್ನು ಕನ್ಯಾದಾನ ಮಾಡಿ ಆ ಸಂದರ್ಭದಲ್ಲಿ ಆಸಂದಿನಾಡಿನ ಸಿಂದಗೆರೆಯ ಪ್ರಭುತ್ವವನ್ನು ಕೊಟ್ಟರು. ಮರಿಯಾನೆಗೆ ಚಾಮವ್ವೆ ಎಂಬ ಮತ್ತೊಬ್ಬ ಪತ್ನಿಯಿದ್ದಳು. ಆಕೆಯಲ್ಲಿ ಅವನಿಗೆ ಪದುಮಲದೇವಿ, ಚಾಮಲದೇವಿ, ಬೊಪ್ಪದೇವಿ ಎಂಬ ಮೂವರು ಹೆಣ್ಣುಮಕ್ಕಳು ಜನಿಸಿದರು. ಈ ಮೂವರನ್ನು ಎರೆಯಂಗನ ಮಗ ಒಂದನೆಯ ಬಲ್ಲಾಳನು ಒಂದೇ ಹಸೆಯ ಮೇಲೆ ಮದುವೆಯಾದನೆಂಬ ಕುತೂಹಲದ ವಿಷಯ ಈ ಶಾಸನದಲ್ಲಿದೆ. ಈ ಸಂದರ್ಭದಲ್ಲಿ ಬಲ್ಲಾಳನು ಹಿಂದೆ ಮರಿಯಾನೆಗೆ ಕೊಟ್ಟಂತಹ(ಮೊಲೆವಾಲರಿಣಕ್ಕೆ) ದತ್ತಿಯನ್ನು ಪುನರ್ದತ್ತಿಯಾಗಿ ನೀಡಿದನು. ಈ ಹಿರಿಯ ಮರಿಯಾನೆಯ ಮೈದುನ (ಹೆಂಡತಿಯ ತಮ್ಮ) ಗಂಗರಾಜದಂಡನಾಯಕ. ಅಂದರೆ ಗಂಗರಾಜನ ಒಡಹುಟ್ಟಿದ ಸೋದರಿಯ ಗಂಡನೇ ಹಿರಿಯ ಮರಿಯಾನೆ ದಂಡನಾಯಕ (ಎಕ 7(ಪ): ನಾಮಂ 72).

–4–

ಗಂಗರಾಜನ ರಾಜಕೀಯ ಸಾಧನೆಗಳು

ಗಂಗರಾಜನ ಹೆಸರು ಶಾಸನಗಳಲ್ಲಿ ಗಂಗಪ್ಪಯ್ಯದಂಡನಾಯಕ, ಗಂಗಿಪ್ಪಯ್ಯದಂಡನಾಯಕ, ಗಂಗಚಮೂಪ, ಗಂಗರಾಜ ದಂಡಾಧಿಪ, ಗಂಗರಾಜ ದಂಡನಾಯಕ ಎಂದು ಮುಂತಾಗಿ ಉಲ್ಲೇಖಿತಗೊಂಡಿದೆ. ಇವನು ವಿಷ್ಣುವರ್ಧನನ ಪ್ರಮುಖ ಸೇನಾನಿಯಾಗಿದ್ದನು ಎಂಬುದು ಆತನಿಗೇ ಹೆಮ್ಮೆಯ ಸಂಗತಿಯಾಗಿತ್ತು.

ಗಂಗರಾಜನ ಬಹಳ ಮುಖ್ಯ ಸಾಧನೆಗಳನ್ನು ನಾವು ಅವನು ವಿಷ್ಣುವರ್ಧನನಿಗಾಗಿ ದೊರಕಿಸಿಕೊಟ್ಟ ಮಹಾ ದಿಗ್ವಿಜಯವಾದ ಚೋಳರ ಮೇಲಿನ ಗೆಲುವಿನಿಂದ ಆರಂಭಿಸಬಹುದು. ನಾವು ಈಗಾಗಲೇ ವಿಷ್ಣುವರ್ಧನನಿಗೆ ಚೋಳರ ಮೇಲಿನ ದಿಗ್ವಿಜಯ ಎಷ್ಟು ಪ್ರಮುಖವಾಗಿತ್ತು ಎಂಬುದನ್ನು ಚರ್ಚಿಸಿದ್ದೇವೆ. ಗಂಗರಾಜನು ತನ್ನ ಮುಂದಾಳತ್ವದಲ್ಲಿ ಸೈನ್ಯವನ್ನು ಸಜ್ಜುಗೊಳಿಸಿಕೊಂಡು ಗಂಗವಾಡಿಯ ಕಡೆಗೆ ಮುನ್ನುಗ್ಗುತ್ತಾನೆ. ಅದರ ಕೇಂದ್ರಭಾಗವಾದ ತಲಕಾಡನ್ನು ಮುತ್ತುತ್ತಾನೆ. ಆಗ ಚೋಳರಿಂದ ಆಕ್ರಮಿತವಾಗಿದ್ದ ಗಂಗವಾಡಿಯ ಪ್ರಾಂತ್ಯಾಧಿಕಾರಿಯಾಗಿದ್ದ ಆದಿಯಮನು ಕಾವೇರಿಯ ದಡದ ಮೇಲೆ

ಹೊಯ್ಸಳ ಸೇನೆಯನ್ನು ಎದುರಿಸುತ್ತಾನೆ. ಆದರೆ ಗಂಗರಾಜನ ಅತ್ಯುಗ್ರ ದಾಳಿಯ ಎದುರು ನಿಲ್ಲಲಾರದೆ ಚೋಳ ಸೈನ್ಯವು ದಿಕ್ಕಾಪಾಲಾಗಿ ಓಡುತ್ತದೆ. ಯುದ್ಧದಲ್ಲಿ ಅದಿಯಮನು ಸಾಯುತ್ತಾನೆ. ಅವನಿಗೆ ಸಹಾಯ ಮಾಡಲು ಬಂದಿದ್ದಂತಹ ಇನ್ನಿಬ್ಬರು ಚೋಳ ಅಧಿಕಾರಿಗಳಾದ ದಾಮೋದರ ಮತ್ತು ನರಸಿಂಗವರ್ಮರು ರಣರಂಗದಿಂದ ಪಲಾಯನಗೈಯುತ್ತಾರೆ. ನರಸಿಂಗವರ್ಮನನ್ನು ಕೊಲ್ಲಲಾಗುತ್ತದೆ. ದಾಮೋದರನು ಕಂಚಿಯ ಕಡೆಗೆ ಓಡಿಹೋಗುತ್ತಾನೆ. ಹೀಗೆ ಗಂಗರಾಜನ ಅತೀವ ಶೌರ್ಯ ಪರಾಕ್ರಮ ಚಾಣಾಕ್ಷತೆಗಳಿಂದ ತಲಕಾಡು ಕ್ರಿ.ಶ. 1117ರಲ್ಲಿ ಹೊಯ್ಸಳರ ಮಡಿಲಿಗೆ ಸೇರುತ್ತದೆ. ಪರಾಕ್ರಮದಿಂದ ಹೋರಾಡಿ ಜಯವನ್ನು ತಂದವನು ಗಂಗರಾಜನಾದರೂ ತಲಕಾಡುಗೊಂಡ ಎಂಬ ಬಿರುದನ್ನು ಧರಿಸಿದವನು ಮಾತ್ರ ವಿಷ್ಣುವರ್ಧನನಾಗಿದ್ದನು.

ಈ ವಿಜಯದ ದ್ಯೋತಕವಾಗಿ ವಿಷ್ಣುವರ್ಧನನು ವೀರಗಂಗ ತಲಕಾಡುಗೊಂಡ ಎಂಬ ಬಿರುದುಗಳನ್ನು ಧರಿಸಿದನು. ಹೊಯ್ಸಳರ ಈ ಚಾರಿತ್ರಿಕ ವಿಜಯಪತಾಕೆಯ ಉತ್ತುಂಗತೆಗೆ ಗಂಗರಾಜನೇ ಅಧ್ವರ್ಯು. ಅಚ್ಚ ಕನ್ನಡ ಪ್ರದೇಶದಿಂದ ತಮಿಳರನ್ನು ಅಟ್ಟಿದ ವಿಷ್ಣುವರ್ಧನನ ಯಶೋಕಿರೀಟಕ್ಕೆ ಗಂಗರಾಜನು ವಜ್ರಮಣಿಯೇ ಸರಿ. ಕಾವೇರಿ ಕಣಿವೆಯ ಅತ್ಯಂತ ಸಂಪದ್ಭರಿತವಾದ ಪ್ರದೇಶವು ಇದರಿಂದ ಮತ್ತೆ ಹೊಯ್ಸಳರಿಗೆ ಸಲ್ಲುವಂತಾಯಿತು. ಚೋಳರಿಂದ ಆಕ್ರಮಿತವಾದ ಈ ಪ್ರಾಂತ್ಯವು ಕೃಷಿಯ ಮೇಲಿನ ಹಾಗೂ ಹೆದ್ದಾರಿ ಸುಂಕಗಳಿಂದ ಹೇರಳವಾದ ಲಾಭವನ್ನು ತರುವ ಪ್ರದೇಶವಾಗಿತ್ತು. ಇಲ್ಲಿ ಆ ಕಾಲದಲ್ಲಿಯೇ ಗುಡಿಕೈಗಾರಿಕೆಗಳು ಹೆಚ್ಚು ಹೆಚ್ಚು ಪ್ರವರ್ಧಮಾನವಾಗಿದ್ದವು. ಮಾರುಕಟ್ಟೆಗಳು ಕೂಡ ಒಳನಾಡಿನ ಹಾಗೂ ಹೊರನಾಡಿನ ವ್ಯಾಪಾರದಲ್ಲಿ ಅಸದೃಶವಾದ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಹಾಗಾಗಿಯೇ ಈ ಕಾವೇರಿ ಜಲಾನಯನ ಪ್ರದೇಶದ ಒಡೆತನಕ್ಕೆ ನಿರಂತರವಾದ ಸಂಘರ್ಷಗಳು ನಡೆಯುತ್ತಲೇ ಇದ್ದವು. ತಲಕಾಡನ್ನು ವಶಪಡಿಸಿಕೊಳ್ಳುವ ಮೂಲಕ ಇದನ್ನು ಶಾಶ್ವತವಾಗಿ ಪರಿಹರಿಸಿದ ಕೀರ್ತಿ ಮಾತ್ರ ಗಂಗರಾಜನದ್ದೇ ಆಗಿತ್ತು.

ಈ ಕದನವೈಖರಿಯನ್ನು ಶಾಸನಗಳು ಬಹಳ ಅಪೂರ್ವವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿವೆ. ಈ ಪದ್ಯಗಳಂತೂ ಸಾಹಿತ್ಯಿಕವಾಗಿ ವೀರರಸಪೂರಿತವಾಗಿಯೂ ಜೊತೆಗೆ ಪುಟ್ಟ ಕಾವ್ಯಪ್ರತಿಮೆಗಳಾಗಿಯೂ ಸಹೃದಯರಿಗೆ ಆಹ್ಲಾದಕರವಾಗಿವೆ.

ಇತ್ತಣ ಭೂಮಿಭಾಗದೊಳಧನ್ಯರದೇಕೆ ಭವತ್ಪ್ರತಾಪಸಂ
ಪತ್ತಿಯ ವರ್ಣ್ನನಾವಿಧಿಗೆ ಗಂಗಚಮೂಪ ಜಿಗೀಷುವೃತ್ತಿಯಿಂ
ದೆತ್ತಿದ ನಿನ್ನ ಕಯ್ಯ ನಿಶಿತಾಸಿಯ ತೌಮೊನೆ ಬೆನ್ನಬಾರನೆ
ತ್ತುತ್ತಿರೆ ಪೋಗಿ ಕಂಚಿ ಗುಜಿಯಪ್ಪಿನಮೋಡಿದ ದಾಮನೆಯ್ದನೇ

ಗಂಗರಾಜನ ಖಡ್ಗದ ಹೊಡೆತವನ್ನು ತಾಳಲಾರದೆ ದಾಮೋದರನು ಕಂಚಿಯ ಕಡೆಗೆ ಓಡಿದನಂತೆ. ಬೆನ್ನಟ್ಟಿ ಬಂದ ಸೇನೆಯಿಂದ ತಪ್ಪಿಸಿಕೊಳ್ಳಲು ದಾಮೋದರನು ಅರಣ್ಯದಲ್ಲಿ ತಲೆಮರೆಸಿಕೊಂಡನಂತೆ (ಎಕ 2(ಪ): ಶ್ರಬೆ 342).

ಎನಿತಾನುಂ ಬವರಂಗಳೊಳ್ಪಲಬರಂ ಬೆಂಕೊಂಡ ಗಂಡಿಂದಮೋ
ವೆನಿಸುತ್ತಂ ತಳಕಾಡೊಳಿನ್ನೆವರಮಿರ್ದ್ದಿರ್ಗಳ್ಕರಂ ಗಂಗರಾ
ಜನ ಖಳ್ಗಾಹತಿಗಳ್ಕಿ ಯುದ್ಧವಿಧಿಯೊಳ್ಬೆನ್ನಿತ್ತು ನಾಯುಂಣದೋ
ಡಿನಲುಂಡಿರ್ದ್ದಪಸತ್ತ ಶೈವಶಮಿವೊಲ್ಸಾಮಂನ್ತದಾಮೋದರಂ

ತನ್ನ ಪರಾಕ್ರಮದಿಂದ ಜನತೆಯನ್ನು ಅಚ್ಚರಿಗೊಳಿಸಿದ್ದ ದಾಮೋದರನು ಈಗ ಗಂಗರಾಜನ ಹೊಡೆತವನ್ನು ತಾಳಲಾರದೆ ಭಯಗೊಂಡು ಪಲಾಯನಮಾಡಿ ನಾಯಿಯೂ

ಹೇಸುವ ನರಕಪಾಲದಲ್ಲಿ ಶೈವಮುನಿಯಂತೆ ಉಣ್ಣುತ್ತಿರುವನಲ್ಲ ಎಂದು ಶಾಸನವು ಆಶ್ಚರ್ಯವನ್ನು ವ್ಯಕ್ತಪಡಿಸುತ್ತದೆ.

ಗಂಗರಾಜನು ಹೊಯ್ಸಳ ಸೇನೆಯನ್ನು ನಿರ್ವಹಿಸಿದ ರೀತಿ ಅಸಾಧಾರಣವಾದುದು. ಮತ್ತೆ ಮತ್ತೆ ತೊಂದರೆಯನ್ನು ನೀಡುತ್ತಿದ್ದ ಚೋಳರನ್ನು ಸದೆಬಡಿಯಲು ಈವರೆಗೆ ನಡೆಸಿದ ಅನೇಕ ವಿಫಲ ಕಾರ್ಯಗಳನ್ನು ನೆನಪಿಸಿಕೊಂಡರೆ ನಮಗೆ ಈ ಯುದ್ಧದ ಗೆಲುವು ಅರ್ಥವಾಗುತ್ತದೆ. ನರಸಿಂಗವರ್ಮ್ಮನೇ ಮೊದಲಾದ ಘಟ್ಟದ ಮೇಲಿನ ಚೋಳನ ಸಾಮನ್ತರೆಲ್ಲರನ್ನು ಸದೆಬಡಿದು ಆ ನಾಡನ್ನೆಲ್ಲ ಏಕಚಕ್ರದ ಅಡಿಯಲ್ಲಿ ವಿಷ್ಣುವರ್ಧನನಿಗೆ ಸಾಧಿಸಿಕೊಟ್ಟನು. ಇದನ್ನು ಮೆಚ್ಚಿ ವಿಷ್ಣುವರ್ಧನನು ಏನನ್ನಾದರು ಬೇಡಿಕೋ ಎಂದು ಕೇಳಿದ ಸಂದರ್ಭವನ್ನು ಬಹಳ ಎಚ್ಚರಿಕೆಯಿಂದ ನಾವು ನೋಡಬಹುದಾಗಿದೆ. ಇಲ್ಲಿ ನಮಗೆ ಗಂಗರಾಜನು ಒಬ್ಬ ಅಪರಿಮಿತನಾದ ಮಹಾಸಾಹಿಸಿ ಆಗಿದ್ದರೂ ಅವನೊಳಗೊಬ್ಬ ಅವ್ಯಕ್ತವಾಗಿ ಧಾರ್ಮಿಕ ಪುರುಷನೇ ಇದ್ದನು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಆಗ "ಅವರಿವರಂತೆ ಏನೇನನ್ನೋ ಬೇಡದೆ ಭೂಭುವನವು ಬಣ್ಣಿಸುವಂತೆ ಗೋವಿಂದವಾಡಿಯನ್ನು ಬೇಡಿದನು".

ಗೊಂಮಟಮೆನೆ ಮುನಿಸಮುದಾ
ಯಂಮನದೊಳ್ಮೆಚ್ಚಿ ಮೆಚ್ಚಿ ಬಿಚ್ಚಳಿಸುತ್ತುಂ
ಗೊಮ್ಮಟದೇವರ ಪೂಜೆಗ
ದಂಮುದದಿಂ ಬಿಟ್ಟನಲ್ತೆ ಧೀರೋದಾತ್ತಂ

ಗಂಗರಾಜನು ತಾನು ಹೊಯ್ಸಳ ದೊರೆಯಿಂದ ಪಡೆದ ಗೋವಿಂದವಾಡಿಯನ್ನು ಗೊಮ್ಮಟದೇವರ ಪೂಜೆಗಾಗಿ ಸಂತೋಷವಾಗಿ ದತ್ತಿಬಿಟ್ಟನು. ಆಗ ಮುನಿಗಳು ಮನಸಾರೆ ಗೊಮ್ಮಟನೆಂದು ಚಾಮುಂಡರಾಯನೆಂದು ಇವನನ್ನು ಹೊಗಳಿದರು.

ಈ ಯುದ್ಧದ ಸಂದರ್ಭದಲ್ಲಿ ಬಾಸೆಯನೆಂಬ ವೀರನು ಹೋರಾಡಿ ಮಡಿದ ವಿಚಾರ ಶಾಸನೋಕ್ತವಾಗಿದೆ. ಹೊಯ್ಸಳ ರಾಜನು ಗಂಗರಾಜನ ಮೂಲಕ ತನ್ನ ಗಜಸಾಹಣಿ ಬಾಸಯನಿಗೆ ಆನೆಗಳನ್ನು ಶತ್ರುಗಳಿಂದ ರಕ್ಷಿಸಲು ಆಜ್ಞಾಪಿಸಿದನು. ಬಾಸಯನು ಈ ಕೆಲಸವನ್ನು ಸುಲಭವಾಗಿ ಮಾಡಿ ಜಯಶಾಲಿಯಾಗಿ ಅನೇಕ ಶತ್ರು ಸೈನಿಕರನ್ನು ಕೊಂದನು. ಆದರೆ ಈ ಕಾಳಗದಲ್ಲಿ ಅವನೇ ಹತನಾದನು. ಅವನ ಜ್ಞಾಪಕಾರ್ಥವಾಗಿ ವೀರಗಲ್ಲೊಂದನ್ನು ಸ್ಥಾಪಿಸಲಾಯಿತು (ಎಕ 11(ಪ): ಮೂಗೆ 29).

ವಿಷ್ಣುವರ್ಧನನ ಈ ಅಗಾಧವಾದ ರಾಜಕೀಯ ಪರಮಾಧಿಕಾರಾಕಾಂಕ್ಷಿಯ ರಾಜತಾಂತ್ರಿಕ ನಡೆಗಳನ್ನು ನೋಡುತ್ತ ಚಾಳುಕ್ಯ ಚಕ್ರವರ್ತಿ ಸುಮ್ಮನೆ ಕುಳಿತಿರಲಿಲ್ಲ. ಗಂಗವಾಡಿಯ ವಿಜಯದ ಮರುವರ್ಷದಲ್ಲಿಯೇ ಅಂದರೆ 1118ರಲ್ಲಿ ವಿಕ್ರಮಾದಿತ್ಯನು ಜಗದ್ದೇವ ಹಾಗೂ ಅನೇಕ ಜನ ತನ್ನ ಮಹಾಮಂಡಳೇಶ್ವರರು ಮತ್ತು 12 ಜನ ಸಾಮಂತರೊಂದಿಗೆ ಹೊಯ್ಸಳರ ಮೇಲೆ ದಂಡೆತ್ತಿ ಬಂದನು. ಹಾಸನ ಸಮೀಪದ ಕಣ್ಣೇಗಾಲದಲ್ಲಿ ಈ ಚಾಳುಕ್ಯ – ಹೊಯ್ಸಳ ಕಾದಾಟ ನಡೆಯಿತು. ವೀರಗಂಗ ಹೊಯ್ಸಳನೂ ತನ್ನ ದಳಪತಿಯಾದ ಗಂಗರಾಜನೂ ರಾತ್ರಿಯವೇಳೆಯಲ್ಲಿ ಚಾಳುಕ್ಯ ಸೈನ್ಯವನ್ನು ಎದುರಿಸಿದರು (ಎಕ 2(ಪ): ಶ್ರಬೆ 82 ಮತ್ತು 154).

ತೆಗೆವಾರುವಮಂ ಹಾರುವ
ಬಗೆಯಂ ತನಗಿರುಳ ಬವರಮೆನುತಸವಂಗಂ
ಬುಗುವ ಕಟಕಿಗರನಳಿಬಿಂ
ಪುಗಿಸಿದುದು ಭೂಜಾಸಿ ಗಂಗದಂಡಾಧಿಪನ

ಗಂಗರಾಜನು ಕುದುರೆಯೇರಿ ರಾತ್ರಿವೇಳೆಯಲ್ಲಿ ಬಂದು ಚಾಲುಕ್ಯ ಚಕ್ರವರ್ತಿಯ ಮೇಲೆ ಆಕ್ರಮಣ ಮಾಡಿದನು. ಈ ಇರುಳಯುದ್ಧದಲ್ಲಿ ನಿರಾಯಾಸವಾಗಿ ಗೆದ್ದು ಅಲ್ಲಿದ್ದ ಸಕಲ ವಸ್ತುವಾಹನಗಳನ್ನು (ರಥ) ತಂದು (ದೋಚಿ) ವಿಷ್ಣುವರ್ಧನನಿಗೆ ಅರ್ಪಿಸಿದನು.

ಆಗಿನ ಕಾಲದಲ್ಲಿ ಹಲವು ರೀತಿಯ ಯುದ್ಧ ತಂತ್ರಗಳನ್ನು ಜನಪ್ರಿಯಗೊಳಸಿದ ಕೀರ್ತಿಯೂ ಗಂಗರಾಜನಿಗೆ ಸಲ್ಲಬೇಕು. ಆತನ ಸೈನ್ಯದಲ್ಲಿ ಹಲವು ಪ್ರಾಂತ್ಯಗಳಿಂದ ಸಂಗ್ರಹಿಸಿದ್ದ ಕುದುರೆಗಳ ವಿಷಯವನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಗಂಗರಾಜನೊಂದಿಗೆ ಹೆಗಲು ಕೊಟ್ಟು ದುಡಿದ ಅಸಂಖ್ಯಾತ ಸೈನಿಕರಿದ್ದರು. ಇವರೆಲ್ಲರನ್ನೂ ಗಂಗರಾಜನು ಅತ್ಯಂತ ಚೆನ್ನಾಗಿ ನೋಡಿಕೊಳ್ಳುತ್ತಿದ್ದನು. ಯುದ್ಧದಲ್ಲಿ ಮಡಿದ ವೀರರಿಗೆ ತಕ್ಷಣ ಸ್ಮಾರಕಗಳನ್ನು ನಿರ್ಮಿಸುವಂತಹ ವ್ಯವಸ್ಥೆಯನ್ನು ಅವನು ನೋಡಿಕೊಳ್ಳುತ್ತಿದ್ದನು. ಎಂದರೆ ತಕ್ಷಣ ಅವರ ಮನೆಯವರಿಗೆ ಸೂಕ್ತವಾದ ಪರಿಹಾರವು ದೊರಕುತ್ತಿತ್ತು.

ಅರಸನ ಅತಿ ಮುಖ್ಯವಾದ ಈ ಯುದ್ಧದಲ್ಲಿ ಗಂಗರಾಜನು ತೋರಿದ ಧೀರತನವು ಮತ್ತೊಂದು ಸೂಕ್ಷ್ಮವಾದ ನೆಲೆಗಟ್ಟನ್ನು ಖಚಿತಗೊಳಿಸುತ್ತದೆ. ಅದೇನೆಂದರೆ ಹೊಯ್ಸಳರ ಆಕ್ರಮಣಗಳಲ್ಲಿ ಅದ್ಭುತವಾದ ಸೈನ್ಯ ಶ್ರೀಮಂತಿಕೆಯನ್ನು ಒದಗಿಸಿ ವಿಷ್ಣುವರ್ಧನನ ರಾಜ್ಯ ವಿಸ್ತರಣ ನೀತಿಯ ಮುಖ್ಯ ಭುಜಬಲವಾಗಿ ವಿಜಯಕ್ಕೆ ಕಾರಣಕರ್ತನಾಗಿದ್ದನು ಎಂಬುದು (ಮೇಲಿನದೇ.). ಈ ಸಂದರ್ಭದಲ್ಲಿ ತೋರಿದ ಗಂಗರಾಜನ ಅಪರಿಮಿತ ಪರಾಕ್ರಮವನ್ನು ಅದ್ಭುತವಾಗಿ ವರ್ಣಿಸಿರುವ ಶಾಸನದ ಸಾಲುಗಳು ಇಂತಿವೆ:

> **ವಜ್ರಂವಜ್ರಭೃತೋ ಹಳಂ ಹಳಭೃತಶ್ಚಕ್ರಂ ತಥಾ ಚಕ್ರಿಣ**
> **ಶ್ಶಕ್ತಿಶ್ಶಕ್ತಿಧರಸ್ಯ ಗಾಂಡಿವಧನುರ್ಗ್ಗಾಂಢಿವಕೋದಂಡಿನಃ**
> **ಯಸ್ತದ್ವತ್ತಿತನೋತಿ ವಿಷ್ಣುನೃಪತೇಃಕ್ಕಾರ್ಯ್ಯಂ ಕಥಂ ಮಾದೃಶೈ**
> **ರ್ಗ್ಗಂಗೋಗಾಂಗ ತರಂಗ ರಂಜಿತಯಶೋ ರಾಶಿಸ್ಸವರ್ಣ್ಯೋರ್ ಭವೇತು**

ವಜ್ರಧರನಿಗೆ ವಜ್ರಾಯುಧವಾಗಿ, ಹಲಾಯುಧನಿಗೆ(ಬಲರಾಮ) ಹಲಾಯುಧವಾಗಿ, ಚಕ್ರಧರನಿಗೆ ಚಕ್ರಾಯುಧವಾಗಿ ಶಕ್ತಿಧರನಿಗೆ(ಸ್ಕಂಧ) ಶಕ್ತಿಯಾಗಿ, ಗಾಂಡೀವಿಗೆ ಗಾಂಡೀವವಾಗಿ ಕಂಗೊಳಿಸುತ್ತಿದ್ದ ಗಂಗರಾಜನು ವಿಷ್ಣುವರ್ಧನನ ರಾಜಕಾರ್ಯ ದುರಂಧರನಾಗಿದ್ದನು. ಈ ಸಾಲುಗಳು ಗಂಗರಾಜನು ರಾಜಕಾರ್ಯದಲ್ಲಿ ಹೇಗೆ ತಾನೇ ತಾನಾಗಿದ್ದು ಕರ್ತವ್ಯನಿಷ್ಠೆಯನ್ನು ಹೊಂದಿದ್ದನು ಎಂದು ತಿಳಿಸುತ್ತದೆ.

ಕಲ್ಯಾಣದ ಚಾಲುಕ್ಯರನ್ನು ಗೆದ್ದು ಸುಮ್ಮನೇ ಕೂರುವ ಜಾಯಮಾನ ವಿಷ್ಣುವರ್ಧನದ್ದಾಗಲೀ, ಗಂಗರಾಜನದ್ದಾಗಲೀ ಆಗಿರಲಿಲ್ಲ. ಕಣ್ಣೇಗಾಲ ಯುದ್ಧದ ಯಶಸ್ಸಿನಿಂದ ಸಂತುಷ್ಟನಾದ ಗಂಗರಾಜನು ನಂತರ ಹಾನಗಲ್ಲಿನ ಕದಂಬರನ್ನೂ ಸೋಲಿಸಿ ಅಲ್ಲಿಂದ ಮುಂದುವರೆದು ತುಂಗಭದ್ರಾ ನದಿಯನ್ನೂ ದಾಟಿ ಕುಮ್ಮಟದ ಕೋಟೆಯನ್ನೂ ಸಹ ವಶಪಡಿಸಿಕೊಂಡನು.

ಈ ವಿಜಯದಿಂದ ಸಂತುಷ್ಟನಾದ ಅರಸನು ಗಂಗರಾಜನ ಭುಜಬಲಪರಾಕ್ರಮಕ್ಕೆ ಮೆಚ್ಚಿ ಏನಾದರೂ ಕೇಳಿಕೊಳ್ಳುವಂತೆ ಮತ್ತೆ ಕೇಳುತ್ತಾನೆ ಆಗ ಗಂಗರಾಜನು ನಶ್ವರವಾದ ರಾಜ್ಯಕೋಶಾದಿಗಳನ್ನು ಬೇಡದೆ ಜಿನಪೂಜೆಗಾಗಿ ಪರಮ ಎಂಬ ಗ್ರಾಮವನ್ನು ಬೇಡಿದನು. ತನ್ನ ತಾಯಿ ಪೋಚಲದೇವಿಯು ಮಾಡಿಸಿದ ಜಿನಾಲಯಕ್ಕೂ (ಶಾಸನ ಬಸದಿ) ಮತ್ತು ತನ್ನ ಪ್ರಿಯತಮೆ ಲಕ್ಷ್ಮಿದೇವಿ ಮಾಡಿಸಿದ ಜಿನಾಲಯಕ್ಕೂ (ಎರಡುಕಟ್ಟೆ ಬಸದಿ) ಈ ಪರಮ ಗ್ರಾಮವನ್ನು ದತ್ತಿಯಾಗಿ ನೀಡಿದನು. ಇವನು ಎಂತಹ ಉದಾರಿಯಲ್ಲವೇ ಎಂದು ಶಾಸನವು ಕೊಂಡಾಡಿರುವುದನ್ನು ನಾವು ಗಮನಿಸಬೇಕು (ಎಕ 2(ಪ): ಶ್ರಬೆ 82).

ಪಸರಿಸೆ ಕೀರ್ತ್ತನಂ ಜನನಿ ಪೋಚಲೆದೇವಿಯರರ್ತ್ಥಿವಟ್ಟುಮಾ
ಡಿಸಿದ ಜಿನಾಲಯಕ್ಕಮೊಸೆದಾತ್ಮಮನೋರಮೆ ಲಕ್ಷ್ಮೀದೇವಿ ಮಾ
ಡಿಸಿದ ಜಿನಾಲಯಕ್ಕಮಿದು ಪೂಜನಯೋಜಿತಮೆಂದು ಕೊಟ್ಟು ಸ
ನ್ತೊಸಮನಜಸ್ರಮಾಂಪನೆನೆ ಗಂಗಚಮೂಪನಿದೇನುದಾತ್ತನೋ

ವಿಷ್ಣುನೃಪನ ಮಂತ್ರಿ ಧವಳಕೀರ್ತಿ ಪ್ರಭೆಯನ್ನು ಹೊಂದಿದ್ದಂತಹವನು ಗಂಗರಾಜ ದಂಡಾಧೀಶನು. ಇವನು ವಿಭು ಎನಿಸಿಕೊಂಡಿದ್ದನು.

ತಂನ ಪತಿಗೆ ರಿಪುಮಂಡಲವಂ ಮೂವಿಟ್ಟಿಗೆಯ್ಸಿ ತೋಳಲುದಾವಣೆಗಟ್ಟಿ
ದನೂರ್ಜಿತಜಯ
ಕಾನ್ತೆಯರಂ ಜಗಮಂ ರಕ್ಷಿಸುವಾರ್ಪ್ಪುದಕ್ಕರಟಿಯೊಳ್ಮ ಜೌನ್ತು ಕಯ್ಯಿಕ್ಕು ವುಜ್ಜೋಗಮೌ
ರ್ವ್ವಾನಳ ತೇಜದೊಳಸೆಣಸುವುದು ತೇಜವಿಂದ್ರಾದ್ರಿಯಂ ನೆಗಪಲ್ತಾನಿದೆ ಸಾಲ್ಗುವೆಂ
ಬಂದದಿ [ತೋರದಂದು]ದೀವಿಗೆಯಂ ಮಾಟ್ಪೆ ಸಮಗ್ರ ಸ . ಮೆಸೆಯೆ ಶ್ರೀಗಂಗದಣ್ಡೇಶನ

ಗಂಗರಾಜನು ತನ್ನ ರಾಜ ವಿಷ್ಣುವರ್ಧನನಿಗೆ ಶತ್ರುರಾಜ್ಯಗಳನ್ನು ಗೆದ್ದುಕೊಟ್ಟನು. ಗಂಗದಂಡಾಧೀಶನ ಶೌರ್ಯವನ್ನಾಗಲೀ ಜಗತ್ತನ್ನು ರಕ್ಷಿಸಬಲ್ಲ ಮಹಾಪ್ರತಾಪಿಯನ್ನು ಎದುರಿಸಲು ಸಾಧ್ಯವೇ? ಅವನ ತೇಜಸ್ಸಿನೊಂದಿಗೆ ತಾನಾಗಿ ಬಂದು ಯಾರು ತಾನೇ ಕೈಯಿಕ್ಕಿ ಸೆಣಸುವರು?! (ಎಕ 2(ಪ): ಶ್ರಬೆ 69).

ಅದಟಾರ್ಪ್ಪುಂನತಿ ಸತ್ಯಮಣ್ಮುಚಲಮಂ ಧೈರ್ಯಮ ಶೌಚ
ಮೌದಾರ್ಯಮಣ್ಮುದಿಟಂ ತನ್ನಲಿವಿಂದುವೆಂಬ ಗುಣಸಂಘಾತಗಳಂ
ತಾಟಿದ್ದಿಲೋಕದ ವಂದಿಪ್ರಕರಂಗಳಂ ತಣಿಪಿ ಕಃಕೇನಾರ್ತ್ಥಿ
ಯೆಂದಿತ್ತು ಚಾಗದ ಪೆಂಪಿಂದಮೆ ಗಂಗರಾಜನೆಸೆದಂ ವಿಶ್ವಂಬರಾಭಾಗದೊಳ್

ಸಾಹಸ, ಧೈರ್ಯ, ಹಿರಿಮೆ, ಸತ್ಯ, ಪೌರುಷ, ಸ್ಥೈರ್ಯ, ಶೌಚ, ಔದಾರ್ಯ, ಪರಾಕ್ರಮ ಇವುಗಳೆಲ್ಲವು ತನ್ನಲ್ಲೆ ಬಂದು ಸೇರಿದಂತೆ ರಾರಾಜಿಸಿದ ಗಂಗರಾಜನು ಔದಾರ್ಯಮೂರ್ತಿಯಾಗಿದ್ದನು (ಎಕ 2(ಪ): ಶ್ರಬೆ 532).

ತಳಕಾಡಂ ಸೆಳೆದಂತೆ ಕೊಂಗನೊಳಕೊಂಡಾ ಬಂಕಿಯಂ ತೊಳ್ದು ದೋ
ರ್ಬ್ಬಲದಿಂ ಬೆಂಗಿಲಿಯಂ ಕಳಲ್ಚಿ ನರಸಿಂಗಂಗಂತಕಾವಾಸಮಂ
ನಿಳಯಂ ಮಾಡಿ ನಿಮಿರ್ಚ್ಚಿ ವಿಷ್ಣುನೃಪನ ನ್ಯಾಯಮಾರ್ಗದಿಂ ಗಂಗಮಂ
ಡಳಮಂ ಕೊಂಡನರಾತಿಯೂಥ ಮೃಗಸಿಂಗಂ ಗಂಗದಣ್ಡಾಧಿಪಂ

ತಳಕಾಡನ್ನು ವಶಪಡಿಸಿಕೊಂಡನು; ಕೊಂಗುನಾಡನ್ನು ಆಕ್ರಮಿಸಿದ್ದನು; ಬಾಹುಬಲದಿಂದ ಬೆಂಗಿಲಿಯನ್ನು ಗೆದ್ದಿದ್ದನು; ನರಸಿಂಗನನ್ನು ಯಮಪುರಿಗೆ ಕಳುಹಿಸಿದ್ದನು. ಇಂತಹ ಗಂಗದಂಡಾಧಿಪತಿಯು ಅರಿರಾಜರೆಂಬ ಜಿಂಕೆವಿಂಡಿಗೆ ಸಿಂಹಪ್ರಾಯನೆನಿಸಿ ಗಂಗಮಂಡಳವನ್ನು ವಿಷ್ಣವರ್ಧನನ ಆಳ್ವಿಕೆಗೆ ಒಳಪಡಿಸಿದ್ದನು (ಎಕ 9(ಪ): ಬೇ 397).

ಚೋಳರ ಮೇಲಿನ ವಿಜಯ ಹಾಗೂ ಕಲ್ಯಾಣದ ಚಾಳುಕ್ಯರ ಮೇಲಿನ ವಿಜಯಗಳು ಹೊಯ್ಸಳ ವಿಷ್ಣುವರ್ಧನನ ಎರಡು ಪ್ರಮುಖ ಜಯಗಳು. ಇದರಿಂದ ವಿಷ್ಣುವರ್ಧನನು ತಾನೇ ಚಕ್ರವರ್ತಿಯಂತೆ ಮೆರೆಯುವಂತಾಯಿತು. ಇವೆರಡೂ ದಿಗ್ವಿಜಯಗಳಿಂದ ಹೊಯ್ಸಳ ಸಂಪತ್ತು ನೂರ್ಮಡಿಯಾಯಿತು. ಇವೆರಡು ವಿಜಯದುಂಧುಬಿಗಳು ಗಂಗರಾಜನು ಪ್ರಬಲ ಸೇನಾನಿ ಎಂಬುದನ್ನು ಸ್ಪಷ್ಟವಾಗಿ ದಾಖಲುಗೊಳಿಸುತ್ತವೆಯೇನೋ ನಿಜ. ಆದರೆ ಇನ್ನೊಂದು ಮಗ್ಗಲಿನಿಂದ ಕೊಂಚ ಆಳವಾಗಿ ಯೋಚಿಸುತ್ತಾ ಹೋದರೆ ಪ್ರಾಯಶಃ ಗಂಗರಾಜನು ಇದಕ್ಕಿಂತ ಮೊದಲು ಸಹ ಅಂದರೆ ವಿಷ್ಣುವರ್ಧನನಿಗಿಂತ ಹಿಂದಿನ

ಎರೆಯಂಗ, ಒಂದನೆಯ ಬಲ್ಲಾಳ ಹೊಯ್ಸಳ ದೊರೆಗಳ ಪರ ಹಲವು ಕಾದಾಟಗಳಲ್ಲಿ ವೈರಿಗಳ ವಿರುದ್ಧ ಅತ್ಯಂತ ಜಾಣತನದಿಂದಲೂ ಚತುರತೆಯಿಂದಲೂ ಅಪ್ರತಿಮ ತೋಳ್ಬಲದಿಂದಲೂ ದಕ್ಷತೆಯಿಂದಲೂ ಸಕ್ರಿಯವಾಗಿ ಪಾಲ್ಗೊಂಡಿದ್ದಿರಬಹುದು ಎಂದೆನಿಸುತ್ತದೆ. ಆ ಶೌರ್ಯಾತಿಶಯವನ್ನು ಬಿಂಬಿಸುವ ಆಕರಗಳು ಯಾವ ಕಾಲಗರ್ಭದಲ್ಲಿ ಹೂತುಹೋಗಿವೆಯೊ!!

ವಿಷ್ಣುವರ್ಧನನ ಅತ್ಯುಚ್ಚ ಗುರಿಯಾದ ಚಕ್ರವರ್ತಿ ಸ್ಥಾನಮಾನ ಗ್ರಹಣದ ಬಯಕೆಯ ಅಥವಾ ಕನಸಿನ ಕಸುವುಳ್ಳ ನನಸುಗಾರನಾಗಿ ಗಂಗರಾಜನು ಚರಿತ್ರೆಯಲ್ಲಿ ಮುಖ್ಯ ಸ್ಥಾನಮಾನವನ್ನು ಗ್ರಹಿಸಿಬಿಟ್ಟಿದ್ದಾನೆ. ಇದನ್ನು ಗಂಗರಾಜನ ಬಿರುದುಗಳಲ್ಲಿ ಮುಖ್ಯವಾಗಿ ತೋರಿರುವ 'ವಿಷ್ಣುವರ್ಧನ ಭೂಪಾಳ ಹೊಯ್ಸಳ ಮಹಾರಾಜ ರಾಜ್ಯಾಭಿಷೇಕ ಪೂರ್ಣ್ಣಕುಂಭ ಧರ್ಮ್ಮಹರ್ಮ್ಯೋದ್ಧರಣ ಮೂಳಸ್ತಂಭ' ಎಂಬ ಬಿರುದು ಮತ್ತಷ್ಟು ನನ್ನ ಈ ವಾದಕ್ಕೆ ಪುಷ್ಟಿಯೊದಗಿಸುತ್ತದೆ.

"ಪ್ರಾಚೀನ ಭಾರತದ ದಂಡನೀತಿಶಾಸ್ತ್ರದಲ್ಲಿ ಸಾಹಿತ್ಯದಲ್ಲಿ ಹೇಳಿರುವ ಆರು ಬಗೆಯ ವಿದೇಶಾಂಗ ನೀತಿಯನ್ನು ಅಳವಡಿಸಿಕೊಂಡಂತೆ ತೋರುತ್ತದೆ. ಅವು 1. ಶಾಂತಿ, 2. ಆಶ್ರಯ ಪಡೆಯುವುದು, 3. ಕಾಳವನ್ನು ಗುರುತಿಸುವುದು, 4. ಯುದ್ಧ, 5. ಆಕ್ರಮಣ, 6. ವಂಚನೆ. ಇದಕ್ಕನುಗುಣವಾಗಿ ಹೊಯ್ಸಳರು ದುರ್ಬಲರಾಗಿದ್ದಾಗ ಸಾಧ್ಯವಿದ್ದರೆ ಸಂಧಿ ಮಾಡಿಕೊಂಡರು ಇಲ್ಲವಾದಾಗ ಆಶ್ರಯವನ್ನು ಕೋರಿದರು. ಉದಾಹರಣೆಗೆ ಕಲ್ಯಾಣದ ಚಾಳುಕ್ಯರ ಸಾಮಂತರಾಗಿಯೇ ಉಳಿದರು, ಅವರಿಗೆ ನಿಷ್ಠೆಯನ್ನು ತೋರಿಸಿದರು, ಕಪ್ಪಕಾಣಿಕೆ ಕೊಟ್ಟು ಅವರ ಸೇವೆ ಮಾಡಿದರು. ಚಾಲುಕ್ಯರ ಅವನತಿಯ ನಂತರ ತಾವು ಸ್ವತಂತ್ರರೆಂದು ಘೋಷಿಸಿಕೊಂಡರು ಹಾಗೆಯೇ ನೆರೆಯವರಿಗಿಂತ ತಾವು ಬಲವಾಗಿದ್ದಾಗ ನೇರವಾಗಿ ಯುದ್ಧಮಾಡಿದರು; ಸಮಸಮವಾಗಿದ್ದಾಗ ಕಾಲಕ್ಕಾಗಿ ಕಾದರು; ಅಪಾರವಾದ ಸಾಮರ್ಥ್ಯ ಬಂದಾಗ ಶತ್ರುವಿನ ಮೇಲೆ ಆಕ್ರಮಣ ಮಾಡಿದರು. ವಿಷ್ಣುವರ್ಧನನು ಚೋಳರನ್ನು ಗಂಗವಾಡಿ ಪ್ರದೇಶದಿಂದ ಅಳಿಸಿಹಾಕಿದ ಹಾಗೆ. ಯಶಸ್ಸಿಗೆ ಮಿತ್ರನೊಬ್ಬರ ನೆರವು ಬೇಕಾಗಿದ್ದಾಗ ಚೋಳರಿಗೆದುರಾಗಿ ಗಂಗ-ಹೊಯ್ಸಳ ಮೈತ್ರಿಯಂತೆ ಅವರು ವಂಚನೆಯ ದಾರಿ ಹಿಡಿದರು" (ಷೇಕ್ ಅಲಿ 1997: 134).

ಪ್ರಾಯಶಃ ಗಂಗರಾಜನು ಹೊಯ್ಸಳ ದೊರೆಗಳ ಈ 6 ಬಗೆಯ ವಿದೇಶಾಂಗ ನೀತಿಯ ಅನುಷ್ಠಾನದ ಪ್ರಯತ್ನಗಳು ಮತ್ತು ಆ ಸಂಬಂಧದ ಪ್ರಕಿಯೆಗಳಲ್ಲಿ ಸಕ್ರಿಯವಾಗಿ ನಿರತನಾಗಿ ಹೊಯ್ಸಳರ ಅಧಿಪತ್ಯಕ್ಕೆ ಸಹಕಾರಿಯಾಗಿದ್ದನೆಂದು ತೋರುತ್ತದೆ. ಈ ರಾಜಕೀಯ ಮೇಲಾಟಗಳಲ್ಲಿ ಅವನು ನೀಡಿದ ಅದ್ಭುತ ಸಹಕಾರದಿಂದಲೋ ಏನೋ ಗಂಗರಾಜನನ್ನು ಶಾಸನಗಳು ಅಪೂರ್ವ ಉಪಮೆ ರೂಪಕಾಲಂಕಾರಗಳಿಂದ ಕೀರ್ತಿಸುವ ಮೂಲಕ ಅವನ ಪ್ರಸಿದ್ಧಿಯನ್ನು ಬಣ್ಣಮಯಗೊಳಿಸಿವೆ.

ಗಂಗರಾಜನ ಬಿರುದುಗಳು

ಯಾವನೇ ಒಬ್ಬ ವ್ಯಕ್ತಿಯು ರಾಜಸ್ವದ ಕಣ್ಣಿಗೆ ಬಿದ್ದು ಅವನು ಸಾಧಕನಾಗಿದ್ದರೆ ಅವನನ್ನು ಬಿರುದು ಬಾವಲಿಗಳಿಂದ ಗೌರವಿಸಲಾಗುತ್ತಿತ್ತು. ಇಂತಹ ಬಿರುದುಗಳು ಅನೇಕ ಬಾರಿ ಆಯಾ ವ್ಯಕ್ತಿಗಳ ಬದುಕಿನ ಹಲವು ವಿಷಯಗಳನ್ನು ಪರಿಚಯಿಸುತ್ತವೆ. ಗಂಗರಾಜನು ತನ್ನ ಸ್ವಶಕ್ತಿಯಿಂದ ಗಳಿಸಿದ ಪದವಿಗಳು, ಗೌರವಗಳು, ಅಧಿಕಾರಗಳು ಅವನ ಬಿರುದುಗಳಲ್ಲಿ ನಿಚ್ಚಳವಾಗಿ ಬಿಂಬಿತವಾಗಿವೆ. ಅರಸನಿಗೆ ಸರಿಸಮಾನವಾದ ಸಮಧಿಗತ ಪಂಚಮಹಾಶಬ್ದ ಎಂಬ ಬಿರುದಂತೂ ಗಂಗರಾಜನಿಗೆ ಒದಗಿದ್ದಂತಹ ಅತ್ಯುಚ್ಚ ಅಧಿಕಾರವನ್ನು ಖಚಿತಗೊಳಿಸುತ್ತದೆ.

ಇನ್ನುಳಿದಂತೆ 'ಮಹಾಸಾಮನ್ತಾದಿಪತಿ', 'ಮಹಾಪ್ರಚಂಡದಂಡನಾಯಕಂ', 'ನುಡಿದನ್ತೆಗಣ್ಡಪಗೆವರಂ ಬೆಂಕೊಂಡಂ ದ್ರೋಹಘರಟ್ಟ' 'ವೈರಿಭಯದಾಯಕಂ', ಎಂಬ ಬಿರುದುಗಳು ಅವನು ರಾಜಕೀಯ ಹಾಗೂ ಹೋರಾಟಗಳಲ್ಲಿ ನಡೆದುಕೊಳ್ಳುತ್ತಿದ್ದ ರೀತಿಯನ್ನು ನಮಗೆ ತಿಳಿಸಿಕೊಡುತ್ತದೆ. ಇನ್ನುಳಿದಂತೆ 'ಗೋತ್ರಪವಿತ್ರಂ', 'ಬುಧಜನಮಿತ್ರ' 'ಶ್ರೀಜೈನಧರ್ಮಾಮೃತಾಂಬುಧಿ ಪ್ರವರ್ಧನಸುಧಾಕರಂ', 'ಸಮ್ಯಕ್ತ್ವರತ್ನಾಕರಂ', 'ಆಹಾರಾಭಯ ಭೈಶಜ್ಯಶಾಸ್ತ್ರದಾನವಿನೋದಂ', 'ಭವ್ಯಜನಹೃದಯ ಪ್ರಮೋದಂ', ಎಂಬೀ ಬಿರುದುಗಳು ಗಂಗರಾಜನ ಧಾರ್ಮಿಕ ಶ್ರದ್ಧೆಯನ್ನು ನಮಗೆ ಅರಹುತ್ತದೆ.

ಗಂಗರಾಜನು ಹಂತಹಂತವಾಗಿ ಆಡಳಿತದಲ್ಲಿ ಪ್ರಬಲನಾಗಿ ರೂಪುಗೊಂಡ ಬಗೆಯನ್ನು ಕೂಡ ಈ ಬಿರುದುಗಳು ನಮಗೆ ತಿಳಿಸುತ್ತವೆ. ಕ್ರಮೇಣ ದಂಡನಾಯಕನಾಗಿದ್ದವನು ಮಹಾಪ್ರಚಂಡ ದಂಡನಾಯಕನಾಗಿ, ಮಹಾಸಾಮಂತಾಧಿಪತಿಯಾಗಿ ಕಂಗೊಳಿಸಿದುದನ್ನು ತಿಳಿಸುತ್ತವೆ. ಇದು ಗಂಗರಾಜನ ರಾಜಕೀಯ ಸಾಧನೆಗಳನ್ನು ತಿಳಿಸುವುದರ ಜೊತೆಗೆ ಅವನ ಜೈನಧರ್ಮ ನಿಷ್ಠೆಯನ್ನು ಅಪ್ರತಿಮವಾಗಿ ತೋರಿಸುತ್ತದೆ. ಆಹಾರ, ಅಭಯ, ಭೈಷಜ್ಯ, ಶಾಸ್ತ್ರ ದಾನಗಳನ್ನು ವಿನೋದದಿಂದ ಇವನು ಆಚರಿಸುತ್ತಿದ್ದನು ಎಂಬುದನ್ನು ಆತನು ಶ್ರವಣಬೆಳಗೊಳವನ್ನು ಅಭಿವೃದ್ಧಿಗೊಳಿಸಿದ ರೀತಿಯಿಂದ ನಾವು ತಿಳಿದುಕೊಳ್ಳಬಹುದು. ಗಂಗರಾಜನೇ ಹಾಕಿಸಿರುವ ಶಾಸನಗಳಲ್ಲಿ ರಾಜಕೀಯ ಪ್ರಾತಿನಿಧ್ಯಕ್ಕಿಂತ ಅವನ ಧಾರ್ಮಿಕ ಪ್ರಭಾವಗಳೇ ಹೆಚ್ಚು ವರ್ಣಿತವಾಗಿವೆ. ಇದು ಅವನ ಧಾರ್ಮಿಕ ಪ್ರಜ್ಞೆಯ ಮಹಾನ್ ದ್ಯೋತಕವಾಗಿವೆ.

ಕರ್ನಾಟಕದ ಜೈನಧರ್ಮಕ್ಕೆ ಗಂಗರಾಜನ ಕೊಡುಗೆ

ಗಂಗರಾಜನು ಪರಮಜಿನಭಕ್ತನಾಗಿದ್ದನು. ಇವನ ಕಾಲದಲ್ಲಿ ಜೈನಧರ್ಮವು ಅತ್ಯಂತ ಉಚ್ಛ್ರಾಯ ಹಂತವನ್ನು ತಲುಪಲು ಇವನು ಮುಖ್ಯ ಕಾರಣಕರ್ತನಾದನು. ವಿಷ್ಣುವರ್ಧನನು ಜೈನಧರ್ಮದಿಂದ ವೈಷ್ಣವ ಧರ್ಮದತ್ತ ಆಕರ್ಷಿತನಾಗಿದ್ದರೂ ಜೈನಧರ್ಮವನ್ನು ಗೌರವಿಸಲು ಗಂಗರಾಜನೂ ಕಾರಣನೆಂದರೆ ತಪ್ಪಲ್ಲ. ಅನೇಕ ವೈಷ್ಣವ ದೇವಾಲಯಗಳು ಈ ಕಾಲದಲ್ಲಿ ನಿರ್ಮಾಣವಾಗುತ್ತಿದ್ದಾಗ ಜೈನಧರ್ಮವನ್ನು ಈ ಪರಿಸರದಲ್ಲಿ ಪಸರಿಸಿದವನು ಗಂಗರಾಜನೇ. ನಾಡಿನೆಲ್ಲಡೆ ಇದ್ದ ಬಸದಿಗಳನ್ನು ಜೀರ್ಣೋದ್ಧಾರಗೊಳಿಸುವುದರ ಮೂಲಕ ಹಾಗೂ ಹೊಸದಾದ ಬಸದಿಗಳನ್ನು ನಿರ್ಮಿಸುವುದರ ಮೂಲಕ, ಬೆಳಗೊಳದ ಗೊಮ್ಮಟನ ಮೂರ್ತಿಗೆ ಸುತ್ತಾಲಯವನ್ನು ಮಾಡಿಸುವ ಮೂಲಕ, ಬೆಳಗೊಳ ಗ್ರಾಮವನ್ನು ಹಾಗೂ ಬೆಳಗೊಳದ ಸುತ್ತಲೂ ಅನೇಕ ಗ್ರಾಮಗಳನ್ನು ನೆಲೆಗೊಳಿಸಿ ಇಲ್ಲೆಲ್ಲಾ ಬಸದಿಗಳನ್ನು ನೆಲೆಗೊಳಿಸುವುದರ ಮೂಲಕ ಇವನು ಜೈನಧರ್ಮ, ಮತ, ವಾಸ್ತುಶಿಲ್ಪಕ್ಕೆ ಗುರುತರವಾದ ಕೊಡುಗೆಗಳನ್ನು ನೀಡಿದನು.

ಇಂದಿಗೆ ನಾವು ಶ್ರವಣಬೆಳಗೊಳದಲ್ಲಿ ಕಾಣುವ ಹಲವು ರಚನೆಗಳು ಗಂಗರಾಜನ ಕಾಲದಲ್ಲಿ ಅಸ್ತಿತ್ವದಲ್ಲಿಯೇ ಇರಲಿಲ್ಲ. ಇಡೀ ಬೆಳಗೊಳ ಪರಿಸರವನ್ನು ಒಮ್ಮೆ ಶುದ್ಧವಾಗಿ ಪ್ರಾಕೃತಿಕವಾಗಿ ಕಲ್ಪಿಸಿಕೊಳ್ಳೋಣ. ಎರಡು ನೈಸರ್ಗಿಕ ಬೆಟ್ಟಗಳ ನಡುವೆ ಒಂದು ಪರಿಶುದ್ಧವಾದ ಕೊಳವಿತ್ತು. ಇದಕ್ಕೆ ಯಾವುದೇ ಆವರಣವಿರಲಿಲ್ಲ. ಚಿಕ್ಕಬೆಟ್ಟವಾದ ಚಂದ್ರಗಿರಿಗೆ ಹಲವು ಶತಮಾನಗಳ ಧಾರ್ಮಿಕ ಇತಿಹಾಸದೊಂದಿಗೆ ರಾಜಕೀಯ ಇತಿಹಾಸವೂ ಇತ್ತು. ಅಲ್ಲಿ ಕೆಲವೇ ಕೆಲವು ಸ್ಮಾರಕಗಳು ಇದ್ದವು. ದೊಡ್ಡಬೆಟ್ಟವು ಏಕಶಿಲಾಬೆಟ್ಟವಾಗಿ ಅತ್ಯಂತ ಕಡಿದಾದುದಾಗಿದ್ದರಿಂದ ಅದಕ್ಕೆ ಯಾವುದೇ ವಿಶೇಷವಾದ ಸ್ಥಾನಮಾನಗಳು ಇರಲಿಲ್ಲವಾಗಿತ್ತು. ದೊಡ್ಡಬೆಟ್ಟಕ್ಕೆ ಪ್ರಾಶಸ್ತ್ಯ ಬಂದದ್ದೇ ಚಾವುಂಡರಾಯನು ಗೊಮ್ಮಟ ಮೂರ್ತಿಯನ್ನು ಮಾಡಿಸಿದ ಮೇಲೆ. ಚಾವುಂಡರಾಯನು ಇಂತಹ ಅದ್ಭುತವಾದ ಶಿಲ್ಪವನ್ನು ಮಾಡಿಸಿದ

ಮೇಲೆಯೂ ಸುಮಾರು ಶತಮಾನದವರೆಗೆ ಬೆಳಗೊಳಕ್ಕೆ ಅಂತಹ ಪ್ರಸಿದ್ಧಿಯೇನೂ ಬರಲಿಲ್ಲ. ಇದನ್ನು ಮನಗಂಡು ಗಂಗರಾಜನು ಈ ಪರಿಸರವನ್ನು ಜನಪ್ರಿಯಗೊಳಿಸಿದನು. ತನ್ನ ಇಡೀ ಕುಟುಂಬವೇ ಬೆಳಗೊಳದ ಅಭ್ಯುದಯಕ್ಕೆ ದುಡಿಯಲು ಗಂಗರಾಜನೇ ಮುಖ್ಯಕಾರಣಕರ್ತನಾಗಿದ್ದಾನೆ. ಬಹುಶಃ ಗಂಗರಾಜನ ಕುಟುಂಬವು ಬೆಳಗೊಳದಲ್ಲಿಯೇ ವಾಸಿಸುತ್ತಿದ್ದಿತು ಎಂದು ಊಹಿಸಲೂ ಬಹುದು.

ಕೇವಲ ಇಷ್ಟೇ ಅಲ್ಲದೇ ತನ್ನ ಪ್ರಭಾವದಿಂದ ಹಲವಾರು ಜೈನಯತಿಗಳನ್ನೂ ಇಲ್ಲಿಗೆ ಕರೆತರೆಸಿ ಅವರೆಲ್ಲರಿಗೂ ದಾನಗಳನ್ನು ತಾನೇ ನೀಡಿ, ತನ್ನ ಬಂಧುಗಳಿಂದ ನೀಡಿಸಿ, ತನ್ನ ಸಹಚರರಾದ ಇನ್ನಿತರ ದಂಡನಾಯಕರಿಂದಲೂ, ಪಟ್ಟದ ರಾಣಿ ಶಾಂತಲೆ ಹಾಗೂ ವಿಷ್ಣುವರ್ಧನ ಮಹಾರಾಜನಿಂದಲೂ ಕೊಡಿಸಿ ಅವರನ್ನು ಇಲ್ಲಿ ನೆಲೆಗೊಳಿಸಿದನು. ಜೊತೆಗೆ ಅನೇಕ ವರ್ತಕರು, ಶ್ರೀಮಂತರನ್ನು ಒಡಂಬಡಿಸಿ ಇಲ್ಲಿನ ಮುನಿಶ್ರೇಷ್ಠರ ಜೀವನ ನಿರ್ವಹಣೆಯನ್ನು ಸುಗಮಗೊಳಿಸಿದನು. ಮುನಿಗಳಿಗೆ ಮಠಗಳನ್ನು ಕಟ್ಟಿಸಿಕೊಡುವುದರ ಜೊತೆಗೆ ಹಲವಾರು ಗ್ರಾಮಗಳನ್ನು ನಿರ್ಮಿಸಿ, ಜೈನ ಮತೀಯರನ್ನು ನೆಲೆಗೊಳಿಸಿ ಅವರೆಲ್ಲರ ಎಲ್ಲಾ ರೀತಿಯ ರಾಜಸ್ವಕ್ಕೆ ಕಟ್ಟಬೇಕಾಗಿದ್ದ ತೆರಿಗೆಗಳನ್ನು ಮಠಕ್ಕೆ ಕಟ್ಟುವಂತಹ ವ್ಯವಸ್ಥೆಯನ್ನು ಕೂಡ ಮಾಡಿದನು. ಇದರಿಂದ ಜೈನಮಠಕ್ಕೆ ಬಲ ಬಂದಂತಾಯಿತು. ನಾಡಿನ ಶ್ರೀಮಂತ ಮಠಗಳಲ್ಲಿ ಬೆಳಗೊಳದಮಠವೂ ಕೂಡ ಒಂದಾಗಲು ಗಂಗರಾಜನು ನೀಡಿದ ಒತ್ತಾಸೆಯೇ ಬಹುದೊಡ್ಡ ಕಾರಣವಾಗಿದೆ.

ಚಂದ್ರಗಿರಿ ಎಂಬ ಚಿಕ್ಕಬೆಟ್ಟದಲ್ಲಿ ಈಗಾಗಲೇ ಅನೇಕ ಮಹಾಮಹಿಮರು ಸಲ್ಲೇಖನವ್ರತವನ್ನು ತೆಗೆದುಕೊಂಡು ಮುಡಿಪಿದ್ದರು. ಕಟವಪ್ರ ಹಾಗೂ ಕಳ್ವಪ್ಪು ಬೆಟ್ಟವೆಂದು ಇದು ಪ್ರಸಿದ್ಧವಾಗಿತ್ತು. ಭದ್ರಬಾಹು ಮತ್ತು ಚಂದ್ರಗುಪ್ತರು ಬೆಳಗೊಳಕ್ಕೆ ಬಂದಿದ್ದ ಐತಿಹ್ಯವು ಆಗಾಗಲೇ ನೆಲೆಗೊಂಡಿತ್ತು. ಚಾವುಂಡರಾಜ ಬಸದಿ ಹಾಗೂ ಚಂದ್ರಗುಪ್ತ ಬಸದಿಗಳು ಚಿಕ್ಕಬೆಟ್ಟದಲ್ಲಿ ಅಸ್ತಿತ್ವದಲ್ಲಿದ್ದವು. ಇಂದಿಗೆ ಹಲವು ಜೀರ್ಣೋದ್ಧಾರಗಳನ್ನು ಕಂಡಿರುವ ಚಂದ್ರಪ್ರಭ ಬಸದಿಯು ಅಂದಿಗೆ ತನ್ನ ಮೂಲಸ್ವರೂಪದಲ್ಲಿ ಇದ್ದಿರಬಹುದು. ಇದನ್ನು ಗಂಗದೊರೆ ಶಿವಮಾರನು ಸುಮಾರು ಕ್ರಿ.ಶ. 780ರಲ್ಲಿ ನಿರ್ಮಿಸಿದ್ದನು. ಇದನ್ನು ಅಂದಿಗೆ ವಕ್ರಗಚ್ಚದ ಬಸದಿ ಎಂದು ಕರೆಯಲಾಗುತ್ತಿತ್ತು.

ಇಂದಿಗೆ ಎರಡುಕಟ್ಟೆ ಬಸದಿಯೆಂದು ಕರೆಯಲಾಗುವ ಬಸದಿಯು ಈಗಾಗಲೇ 8ನೆಯ ಶತಮಾನದಲ್ಲಿಯೇ ನಿರ್ಮಾಣಗೊಂಡಿತ್ತು. ಇದೇ ಸಮಯದಲ್ಲಿ ಆಜಿಗಣದವರು ನಿರ್ಮಿಸಿದ ಮಜ್ಜಿಗಣ್ಣ ಬಸದಿಯು ಕಂಗೊಳಿಸುತ್ತಿತ್ತು. ಇದರೊಂದಿಗೆ ಸುಪಾರ್ಶ್ವನಾಥ ಬಸದಿ, ತೇರಿನ ಬಸದಿಗಳಷ್ಟೇ ಅಂದಿನ ಧಾರ್ಮಿಕ ತಾಣಗಳಾಗಿದ್ದವು. ಇದರೊಂದಿಗೆ ರಾಷ್ಟ್ರಕೂಟ ದೊರೆ ನಾಲ್ಕನೆಯ ಇಂದ್ರನ ಸ್ಮಾರಕ ಹಾಗೂ ಕೂಗೆ ಬ್ರಹ್ಮದೇವರ ಸ್ತಂಭ ಎಂದು ಕರೆಯಲಾಗುವ ಮಾರಸಿಂಹನ ಮಾನಸ್ತಂಭಗಳು ರಾಜಕೀಯವಾಗಿ ತನ್ನನ್ನು ತಾನು ವಿಸ್ತರಿಸಿಕೊಳ್ಳುವುದರ ಜೊತೆಗೆ ಇಲ್ಲಿನ ಆಸ್ತಿಕ ಬಂಧುಗಳಿಗೆ ಇಂಬು ನೀಡುತ್ತಿತ್ತು.

ದೊಡ್ಡಬೆಟ್ಟದಲ್ಲಿ ಗೊಮ್ಮಟ ಮೂರ್ತಿ ಹಾಗೂ ಅಖಂಡ ಬಾಗಿಲುಗಳನ್ನು ಹೊರತುಪಡಿಸಿ ಯಾವುದೇ ಸ್ಮಾರಕಗಳು ಅಸ್ತಿತ್ವದಲ್ಲಿ ಇರಲಿಲ್ಲ. ಇದನ್ನು ಮನಗಂಡ ಗಂಗರಾಜನು ಬಹುಶಃ ತನ್ನ ಜಾಗದಿಂದ ಬೆಳಗೊಳ ಪರಿಸರಕ್ಕೆ ಬಂದು ಇಲ್ಲೊಂದು ಸುಸಜ್ಜಿತವಾದ ಗ್ರಾಮವನ್ನು ರೂಪಿಸಿದನು. ಬಹುಶಃ ಇದೇ ಸಂದರ್ಭದಲ್ಲಿ ತನ್ನ ಪರಿವಾರವನ್ನು ಕೂಡ ಬೆಳಗೊಳದಲ್ಲಿ ನೆಲೆಗೊಳಿಸಿರಬೇಕು. ಅವರೆಲ್ಲರಿಂದಲೂ ಚಿಕ್ಕಬೆಟ್ಟದ ಮೇಲೆ ಹಲವಾರು ನಿರ್ಮಾಣಗಳು ಗಂಗರಾಜನ ಪ್ರೋತ್ಸಾಹದಿಂದ ನಿರ್ಮಾಣಗೊಂಡವು. ಗಂಗರಾಜನ ಸಾಧನೆಗಳಲ್ಲಿ ಅತ್ಯಂತ ಪ್ರಮುಖವಾದ ಸಂಗತಿಯನ್ನು ಭಾಗ–3ರಲ್ಲಿ

ಉಲ್ಲೇಖಿಸಿದ ಶಾಸನ (ಎಕ 2(ಪ): ಶ್ರಬೆ 82) ತಿಳಿಸುವಂತೆ ಗಂಗವಾಡಿಯಲ್ಲಿ ಎಷ್ಟು ಜಿನಾಲಯಗಳಿವೆಯೋ ಅಷ್ಟನ್ನೂ ಈ ಗಂಗರಾಜನು ಜೀರ್ಣೋದ್ಧಾರ ಮಾಡಿಸಿದ್ದನು. ಗೊಮ್ಮಟಮೂರ್ತಿಗೆ ಸುತ್ತಾಲಯವನ್ನು ಮಾಡಿಸಿದನು. ಮತ್ತೊಂದು ಶಾಸನದಲ್ಲಿ ಹೀಗೆ ಹೇಳಿದೆ.

ಎತ್ತಿದನೆಲ್ಲಿಗಲ್ಲಿ ನೆಲೆವೀಡನೆ ಮಾಡಿದನೆಲ್ಲಿಗಲ್ಲಿ ಕ
ಣ್ಪತ್ತಿದುದೆಲ್ಲಿಗಲ್ಲಿ ಮನಮಾವೆಡೆಯೆಯ್ದಿದುದೆಲ್ಲಿಗಲ್ಲಿ
ಪತ್ತಿನ ಜೈನಗೇಹಮನೆ ಮಾಡಿಸೆ ದೇಶದೊಳಲ್ಲಿಗಲ್ಲಿಗೆ
ತ್ತೆತ್ತಲು ಮಾವಗಂ ಪಳೆಯ ಮಾಳ್ಕೆವೊಲಾದುದು ಗಂಗರಾಜನಿಂ

ಗಂಗರಾಜನು ಹೋದ ಕಡೆಯಲೆಲ್ಲ, ತಂಗಿದ್ದ ಕಡೆಯಲ್ಲೆಲ್ಲ, ದೃಷ್ಟಿಬಿದ್ದ ಕಡೆಯಲ್ಲೆಲ್ಲ, ಇವನ ಮನಸ್ಸು ಹರಿದ ಕಡೆಯಲ್ಲೆಲ್ಲ ಜಿನಾಲಯಗಳು ಉದ್ಭವಿಸಿದವು. ಇವರಿಂದ ಮತ್ತೆ ಜೈನಧರ್ಮದ ಗತವೈಭವವು ಮರುಕಳಿಸಿತು (ಮೇಲಿನದೇ.).

ಜಿನಧರ್ಮಾಗ್ರಣಿಯತ್ತಿಮಬ್ಬರಸಿಯಂ ಲೋಕಂಗುಣಂಗೊಳ್ವುದೇ
ಕೆನೆ ಗೋದಾವರಿ ನಿಂದ ಕಾರಣದಿನೀಗಳ್ ಗಂಗದಂಡಾಧಿನಾ
ಥನುಮಂ ಕಾವೇರಿ ಪೆರ್ಚಿ ಸುತ್ತಿ ಪಿರಿದುಂ ನೀರೊತ್ತಿಯುಂ ಮಟ್ಟಿತಿ
ಲ್ಲೆನೆ ಸಂಮ್ಯಕ್ತ್ವದ ಪೆಂಪನೇಂ ನೆಱೆಯೆ ಬಂಣಿಪ್ಪಂಣನೇವಂಣಿಪಂ

ಗಂಗಾದೇವಿಯು ಇಬ್ಭಾಗವಾಗಿ ದಾರಿ ಬಿಟ್ಟುದರಿಂದ ಅತ್ತಿಮಬ್ಬೆಯನ್ನು ಲೋಕ ಕೊಂಡಾಡುವುದು. ಅಂತೆಯೇ ಗಂಗರಾಜನನ್ನು ಕಂಡ ತುಂಬು ಪ್ರವಾಹದ ಕಾವೇರಿಯು ಅವನು ನದಿಯನ್ನು ದಾಟುವ ಸಂದರ್ಭದಲ್ಲಿ ಅವನನ್ನು ಸೋಕಲಿಲ್ಲ. ಈ ಸನ್ನಿವೇಶವು ಗಂಗರಾಜನ ಸಮ್ಯಕ್ತ್ವದ ಮಹತ್ವವಾಗಿದೆ ಎಂದು ಶಾಸನವೊಂದು ಆತನನ್ನು ಹೊಗಳಿದೆ. ಇದು ಗಂಗರಾಜನಿಗೆ ಅತ್ತಿಮಬ್ಬೆಯ ಜಿನಧರ್ಮ ಸೇವೆಯ ಪರಿಚಯವಿದ್ದ ಸಂಗತಿಯನ್ನು ತಿಳಿಸುತ್ತದೆ. ಬಹುಶಃ ಗಂಗರಾಜನು ಅತ್ತಿಮಬ್ಬೆಯ ಪ್ರಭಾವಕ್ಕೆ ಒಳಗಾಗಿರಬಹುದು.

ಗಂಗರಾಜನ ಪ್ರೋತ್ಸಾಹದಿಂದ ಕ್ರಿ.ಶ. 1117ರಲ್ಲಿ ಬೆಳಗೊಳದ ಚಿಕ್ಕಬೆಟ್ಟದಲ್ಲಿ ರಾಜಶ್ರೇಷ್ಠಿಗಳಾದ ಪೊಯ್ಸಳಸೆಟ್ಟಿ, ನೇಮಿಸೆಟ್ಟಿಯರ ತಾಯಿಯರಾದ ಮಾಚಿಕಬ್ಬೆ ಹಾಗೂ ಶಾಂತಿಕಬ್ಬೆಯರು ತೇರಿನ ಬಸದಿಯನ್ನು ನಿರ್ಮಿಸಿದರು (ಎಕ 2(ಪ): ಶ್ರಬೆ 170). ಗಂಗರಾಜನ ಸಹಾಯವಿಲ್ಲದಿದ್ದರೆ ಬಹುಶಃ ಈ ಬಸದಿಯ ನಿರ್ಮಾಣವಾಗುವುದು ಕಷ್ಟಕರವಾಗಿದ್ದಿತು. ಅತ್ಯಂತ ವಿಶೇಷವೆಂದರೆ ಕರ್ನಾಟಕದಲ್ಲಿ ಬಾಹುಬಲಿಗೆಂದು ನಿರ್ಮಿಸಿದ ಕೆಲವೇ ದೇವಾಲಯಗಳಲ್ಲಿ ಇದಕ್ಕೆ ವಿಶೇಷವಾದ ಸ್ಥಾನವಿದೆ. ಗಂಗರಾಜನು ತನ್ನ ತಾಯಿಯಾದ ಪೋಚಿಕಬ್ಬೆಯ ಸ್ಮಾರಕವಾಗಿ ಬೆಳಗೊಳದ ಚಿಕ್ಕಬೆಟ್ಟದಲ್ಲಿ ಕ್ರಿ.ಶ. 1118ರಲ್ಲಿ ಕತ್ತಲೆ ಬಸದಿಯನ್ನು ನಿರ್ಮಿಸಿದನು (ಎಕ 2(ಪ): ಶ್ರಬೆ 69). ಇದೇ ಪೋಚಿಕಬ್ಬೆಯ ಸ್ಮೃತಿಗಾಗಿ 1120–23ರ ನಡುವೆ ಇಂದಿಗೆ ಗಂಗರಾಜ ಮಂಟಪವೆಂದು ಕರೆಯಲಾಗುವ ಮಂಟಪವನ್ನೂ ಕೂಡ ನಿರ್ಮಿಸಿದನು (ಎಕ 2(ಪ): ಶ್ರಬೆ 136). ಇಂತಹ ಗಂಗರಾಜನು ತನ್ನ ಗುರು ಶುಭಚಂದ್ರಸಿದ್ಧಾಂತದೇವರ ಕಾಲ್ತೊಳೆದು ಪರಮ ಗ್ರಾಮವನ್ನು 28.01.1118ರಲ್ಲಿ ದಾನವಿತ್ತನು (ಎಕ 2(ಪ): ಶ್ರಬೆ 182).

ಪರಮ ಗ್ರಾಮವು ಮೂಡಣದಲ್ಲಿ ಕಲ್ಲಹಳ್ಳ, ಪಡುವಲಿನಲ್ಲಿ ಬೆಕ್ಕ ಮತ್ತು ಬೆಳಗೊಳವನ್ನು ಹೋಗುವ ದಾರಿವರೆಗೆ, ಬಡಗಣದಲ್ಲಿ ನೇಜಿಲಕೆರೆ, ತೆಂಕಣದಲ್ಲಿ ಹೊಸಗೆರೆ ಮತ್ತು ಅಯ್ಯನಕಟ್ಟದ ತಾಇವಳ್ಳದವರೆಗೂ ವಿಸ್ತರಿಸಿತ್ತು. ಇದು ಗಂಗರಾಜನು ನಗರೀಕರಣ ಪ್ರಕ್ರಿಯೆಗೆ ಹೇಗೆ ಇಂಬುಕೊಟ್ಟನು ಎಂಬುದನ್ನು ಕೂಡ ತಿಳಿಸುತ್ತದೆ. ಗಂಗರಾಜನ ಮಡದಿಯಾದ ಲಕ್ಷ್ಮೀಮತಿ ಹಾಗೂ ತಾಯಿಯಾದ ಪೋಚಿಕಬ್ಬೆಯರು ಅಪರಿಮಿತ

ಭಕ್ತಿಯಿಂದ ಕ್ರಿ.ಶ. 1118ರಲ್ಲಿ ಇಂದಿರಾಕುಲವೆಂಬ ಜಿನಾಲಯವನ್ನು ನಿರ್ಮಿಸಿದರು. ಇದು ಈಗಿನ ಚಿಕ್ಕಬೆಟ್ಟದಲ್ಲಿರುವ ಶಾಸನ ಬಸದಿಯಾಗಿದೆ (ಎಕ 2(ಪ): ಶ್ರಬೆ 84).

ಗಂಗರಾಜನು ಅರಸನಿಂದ ಗೋವಿಂದವಾಡಿಯನ್ನು ದಾನವಾಗಿ ಪಡೆದು ಅದನ್ನು ಗೊಮ್ಮಟದೇವರಿಗೆ ಮತ್ತು ಪಾರ್ಶ್ವದೇವರಿಗೆಂದು ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛದ ಶುಭಚಂದ್ರಸಿದ್ಧಾಂತದೇವರಿಗೆ ದಾನವಾಗಿ ನೀಡಿದನು. ಗೊಮ್ಮಟಪುರದ ಪಟ್ಟಣಸ್ವಾಮಿಯಾದ ಮಲ್ಲಿಸೆಟ್ಟಿ, ಗಂಡನಾರಾಯಣಸೆಟ್ಟಿ ಮತ್ತು ಉಳಿದ ವ್ಯಾಪಾರಿಗಳೆಲ್ಲ ಸೇರಿ ಈ ಕರಾರನ್ನು ಮಾಡಿದರು (ಎಕ 2(ಪ): ಶ್ರಬೆ 547). ಕೇವಲ ಬೆಳಗೊಳದಲ್ಲಿ ಮಾತ್ರವಲ್ಲದೇ ತನಗೆ ಸೇರಿದ್ದ ಅನೇಕ ತಾಣಗಳಲ್ಲಿ ಜೈನಧರ್ಮವನ್ನು ಉಳಿಸಿ ಬೆಳೆಸಿದ ಕೀರ್ತಿಯೂ ಗಂಗರಾಜನದ್ದೇ ಆಗಿದೆ. ತನಗೆ ಅರಸನು ನೀಡಿದ್ದ ಬಿಂಡಿಗನವಿಲೆ ವೃತ್ತಿಯನ್ನು ತನ್ನ ಗುರು ಮೂಲಸಂಘ ಪುಸ್ತಕ ಗಚ್ಛದ ಕೊಂಡಾಕುಂದಾನ್ವಯದ ಶುಭಚಂದ್ರ ಸಿದ್ಧಾಂತ ದೇವರಿಗೆ ದಾನವಿತ್ತನು (ಎಕ 7(ಪ): ನಾಮಂ 33).

ಗಂಗರಾಜನು ವಿಷ್ಣುವರ್ಧನನಿಂದ ಪಡೆದ ಗಾಜಲೂರು ನಾಡುಂಗೆಱೆಯೊಳಗಾದ ತಿಪ್ಪೂರ ವೃತ್ತಿಯನ್ನು ಗುರು ಮೂಲಸಂಘ ಕಾಣೂರ್ಗಣ ಮತ್ತು ತಿಂತ್ರಿಣಿ ಗಚ್ಛದ ಮೇಘಚಂದ್ರ ಸಿದ್ಧಾಂತ ದೇವರಿಗೆ ದಾನವಿತ್ತನು (ಎಕ 7(ಪ): ಮದ್ದೂ 54).

ಮತ್ತಿನ ಮಾತವಂತಿರಲಿ ಜೀರ್ನ್ನ ಜಿನಾಶ್ರಯಕೋಟಿಯಂಕ್ರಮಂ
ಚೆತ್ತಿರೆ ಮುನ್ನಿನಂತಿರನಿತೂರ್ಗ್ಗಳೊಳಂ ನಱೆಮಾಡಿಸುತ್ತಮ
ತ್ಯುತ್ತಮಪಾತ್ರದಾನದೊದವಂ ಮೆಱೆವುತ್ತಿರೆ ಗಂಗವಾಡಿತೊಂ
ಬತ್ತಱುಸಾಸಿರಂ ಕೊಪಣಮಾದುದು ಗಂಗಣದಂಡನಾಥನಿಂ

ಕೋಟಿಗಟ್ಟಲೆ ಜಿನಾಲಯಗಳನ್ನು ಗಂಗರಾಜನು ಜೀರ್ಣೋದ್ಧಾರ ಮಾಡುತ್ತಿರಲು ಮತ್ತು ಅತ್ಯುತ್ತಮ ಪಾತ್ರದಾನವನ್ನು ಇವನು ಮಾಡುತ್ತಿರಲು ಗಂಗವಾಡಿ ತೊಂಬತ್ತಾರುಸಾವಿರವೆಲ್ಲ ಕೊಪಣಾಚಲವಾಗಿ ಹೋಯಿತಲ್ಲ! ಎಂದು ಶಾಸನವೊಂದು ಮನದುಂಬಿ ಹೊಗಳುತ್ತದೆ (ಎಕ 2(ಪ): ಶ್ರಬೆ 156).

ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛದ ಶುಭಚಂದ್ರಸಿದ್ಧಾಂತದೇವರ ಶಿಷ್ಯನಾದ ಗಂಗರಾಜನ ಅಣ್ಣ ಹೆಗ್ಗಡೆ ಬಮ್ಮಣಯ್ಯನ ಮಗ ಹಿರಿಯ ಏಚಿಮಯ್ಯನು ಶ್ರವಣಬೆಳಗೊಳದಲ್ಲಿ ಶಾಂತಿನಾಥ ದೇವರನ್ನು ಕ್ರಿ.ಶ. 1117ರಲ್ಲಿ ಪ್ರತಿಷ್ಠಾಪಿಸಿದನು ಮತ್ತು ಬಸದಿಯನ್ನು ನಿರ್ಮಿಸಿದನು (ಎಕ 2(ಪ): ಶ್ರಬೆ 179). ಗಂಗರಾಜನು ಪರಮ ಗ್ರಾಮದಲ್ಲಿ ಗಂಗಸಮುದ್ರವೆಂಬ ಕೆರೆಯನ್ನು ಕಟ್ಟಿಸಿ ಅದನ್ನು ದೇವರಿಗೆ ದಾನವಿತ್ತನು (ಎಕ 2(ಪ): ಶ್ರಬೆ 558).

ತನ್ನ ಗುರುವಿನ ಮೇಲೆ ಅಪರಿಮಿತವಾದ ಗೌರವವಿದ್ದ ಹಿರಿಯ ದಂಡನಾಯಕನಾದ ಗಂಗರಾಜನು ತನ್ನ ಗುರುಗಳಾದ ಮೂಲಸಂಘದ ಪುಸ್ತಕ ಗಚ್ಛದ ಕೊಂಡಾಕುಂದಾನ್ವಯದ ಶುಭಚಂದ್ರ ಸಿದ್ಧಾಂತ ದೇವರಿಗಾಗಿ ಚಿಕ್ಕಬೆಟ್ಟದಲ್ಲಿ ಪಾರ್ಶ್ವನಾಥನ ದೇವಾಲಯವನ್ನು ನಿರ್ಮಿಸಿ ಪಾರ್ಶ್ವದೇವನ ಮೂರ್ತಿಯನ್ನು ಪ್ರತಿಷ್ಠಾಪಿಸಿದನು (ಎಕ 9(ಪ): 397).

ಗಂಗರಾಜನು ಜಯಗೊಂಡೆಶ್ವರ ದೇಗುಲಕ್ಕೆ ನೀಡಿದ ಭೂಮಿದಾನವನ್ನು ಶಾಸನವೊಂದು ದಾಖಲಿಸುತ್ತದೆ. ಇದು ಚೋಳರು ನಿರ್ಮಿಸಿದ ದೇಗುಲ. ಛತ್ರವೊಂದಕ್ಕೆ 30 ಪಣಗಳ ದಾನವೊಂದನ್ನು ಸಹ ಇದು ತಿಳಿಸುತ್ತದೆ. ಈ ಕಾಲದಲ್ಲಿ ಪಣವೆಂಬುದ ಒಂದು ಚಿನ್ನದ ನಾಣ್ಯವಾಗಿದ್ದು ಗದ್ಯಾಣದ 10ನೆಯ 1 ಭಾಗ ಮತ್ತು 4 ಹಾಗಗಳಿಗೆ ಸಮವಾಗಿತ್ತು. ರಾಜಾದಿತ್ಯನ ವ್ಯವಹಾರಗಣಿತದಲ್ಲಿ ಈ ನಾಣ್ಯದ ಉಲ್ಲೇಖವಿದೆ. ಹೊಯ್ಸಳ

ಕಾಲದಲ್ಲಿ ಪಣದ ತೂಕವು 6.2 ಗ್ರೇನಗಳಾಗಿದ್ದವು. ಅರಸಿ ಶಾಂತಲದೇವಿ ಮತ್ತು ಹಿರಿಯ ದಂಡನಾಯಕ ಗಂಗಿಪಯ್ಯರ ಉಪಸ್ಥಿತಿಯಲ್ಲಿ ವಿಷ್ಣುವರ್ಧನನು ನೀಡಿದ ದಾನವನ್ನು ಇದು ತಿಳಿಸುತ್ತದೆ. ಅಂದರೆ ಚೋಳರಿಂದ ಗಂಗವಾಡಿಯನ್ನು ವಶಪಡಿಸಿಕೊಂಡ ನಂತರ ಅಲ್ಲಿನ ಆಸ್ತಿಕರನ್ನು ಅನಾಥರನ್ನಾಗಿಸದೇ ಅವರೆಲ್ಲರಿಗೂ ತಮ್ಮ ಧಾರ್ಮಿಕತೆಯನ್ನು ಮೆರೆಯಲು ಗಂಗರಾಜನು ಅವಕಾಶವನ್ನು ಮಾಡಿಕೊಟ್ಟನು (ಎಕ 10(ಪ): ಚಪ 99).

ವಿಷ್ಣುವರ್ಧನನು ಆಳುತ್ತಿದ್ದ ಕಾಲದಲ್ಲಿ ಮಹಾಪ್ರಧಾನಿ ಹಿರಿಯ ಮರಿಯಾನೆ ದಂಡನಾಯಕನ ಮಗ ಡಾಕರಸ ದಂಡನಾಯಕನ ಮಗನೂ, ದ್ರೋಹಘರಟ್ಟ ಗಂಗಪ್ಪಯ್ಯ ದಂಡನಾಯಕನೂ, ಬಾಚರಸ ದಂಡನಾಯಕನೂ, ಸೋವರಸ ದಂಡನಾಯಕನ ಅಳಿಯ ಮಹಾಪ್ರಧಾನ ಹಿರಿಯ ಭಂಡಾರಿ ಮರಿಯಾನೆ ದಂಡನಾಯಕನೂ, ಭರತಮಯ್ಯ ದಂಡನಾಯಕನೂ ತುಳಾಪುರುಷ ಮಹಾದಾನವನ್ನು ಮಾಡಿದುದಕ್ಕಾಗಿ ಸವಗೋನಹಳ್ಳಿಯನ್ನು ಅರಸನಿಂದ ಪಡೆದುಕೊಂಡರು, ಇವರು ತನ್ನ ಸ್ವಗ್ರಾಮವಾದ ಸಿಂದಗೆರೆಯಲ್ಲಿ ನಿರ್ಮಿಸಲಾಗಿದ್ದ ಜಿನಾಲಯಕ್ಕೆ ಈ ಗ್ರಾಮವನ್ನು ದಾನವಿತ್ತರು. ಇದಕ್ಕೆ ಮುಖ್ಯಕಾರಣವೆಂದರೆ ಗಂಗರಾಜನು ಬಹುತೇಕ ಜೈನ ಅಧಿಕಾರಿಗಳನ್ನು ಒಂದು ಮಾಡಿದ ವ್ಯಕ್ತಿ. ತಾನು ಬೆಳಗೊಳದಲ್ಲಿ ಕಾರ್ಯನಿರತನಾಗಿದ್ದ ಸಂದರ್ಭದಲ್ಲಿಯೇ ಇನ್ನಿತರ ಅಧಿಕಾರಿಗಳನ್ನು ಬೆಳಗೊಳಕ್ಕೆ ಕರೆಸಿ ಅವರಿಂದ ಕೆಲವು ದಾನಗಳು ಶ್ರೀಕ್ಷೇತ್ರಕ್ಕೆ ಸಂದಾಯವಾಗುವಂತೆ ಮಾಡಿದ್ದು ಇವನ ಜನಾನುರಾಗಿ ಧೋರಣೆಯ ಜೊತೆಗೆ ಇವನು ಎಷ್ಟು ಮಿತ್ರಪ್ರೇಮಿಯಾಗಿದ್ದನು ಎಂದು ನಮಗೆ ತಿಳಿಸುತ್ತದೆ.

ಗಂಗರಾಜನ ಸುತ್ತಾಲಯ

ಗಂಗರಾಜನ ಸಾಧನೆಗಳಲ್ಲಿ ಒಂದೆಂದು ಬಿಂಬಿತವಾಗಿರುವ ಸುತ್ತಾಲಯವನ್ನು ನಿರ್ಮಿಸಿದ ಸಂಗತಿಯನ್ನು ನಾವು ಸಮಾಜೋ ಸಾಂಸ್ಕೃತಿಕ ಹಿನ್ನೆಲೆಯಿಂದ ಗಮನಿಸೋಣ. ಚಾವುಂಡರಾಯನು ನಿರ್ಮಿಸಿದ ಗೊಮ್ಮಟನ ಪ್ರತಿಮೆಯು ಬಯಲಿನಲ್ಲಿ ವಿರಾಜಮಾನವಾಗಿತ್ತು. ಚಿಕ್ಕಬೆಟ್ಟದ ಮೇಲೆ ನಿಂತರೆ ಗೊಮ್ಮಟನ ಮೂರ್ತಿಯು ಇಡಿಯಾಗಿ ಕಾಣುತ್ತಿತ್ತು. ಇದಕ್ಕೆ ಗಂಗರಾಜನು ಗೊಮ್ಮಟನ ವಿಗ್ರಹದ ಸುತ್ತಲೂ ಸುತ್ತಾಲಯವನ್ನು ನಿರ್ಮಿಸಿದನು (ಎಕ 2(ಪ): ಶ್ರಬೆ 274). ಈ ಸುತ್ತಾಲಯದಲ್ಲಿ ಚತುರ್ವಿಂಶತಿ ತೀರ್ಥಂಕರರ ಶಿಲ್ಪಗಳನ್ನು ಅಳವಡಿಸಲಾಯಿತು. ಈ ಸುತ್ತಾಲಯದ ಪ್ರವೇಶ ದ್ವಾರದಲ್ಲಿ ಇಂದಿಗೆ ಅಷ್ಟದಿಕ್ಪಾಲಕರ ಮಂಟಪ ಎಂದು ಕರೆಯಲಾಗುವ ಮಂಟಪವನ್ನು ನಿರ್ಮಿಸಿ ಇದಕ್ಕೆ ದ್ವಾರಬಂಧವನ್ನು ನಿರ್ಮಿಸಲಾಯಿತು. ಹಾಗಾಗಿ ಈ ಸುತ್ತಾಲಯದ ಮೂಲಕ ಬಯಲಿನಲ್ಲಿದ್ದ ಬಾಹುಬಲಿಗೆ ದೇವಾಲಯವೊಂದನ್ನು ನಿರ್ಮಿಸಿದಂತಾಯಿತು.

ಎಸ್. ಶ್ರೀಕಂಠಶಾಸ್ತ್ರಿಗಳು ತಮ್ಮ ಹೊಯ್ಸಳ ವಾಸ್ತುಶಿಲ್ಪದಲ್ಲಿ ಬರೆಯುತ್ತಾ ಗಂಗರಾಜನು ಕ್ರಿ.ಶ. 1115ರ ಮೇಲೆ 1118ರ ಒಳಗೆ ಗೊಮ್ಮಟೇಶನ ಸುತ್ತಲೂ ಮಂಟಪವನ್ನು ಕಟ್ಟಿಸಿದ ವಿಷಯವನ್ನು ಪ್ರಸ್ತಾಪಿಸಿ "ಈ ಸುತ್ತಾಲಯದಲ್ಲಿ 43 ವಿಗ್ರಹಗಳಿವೆ. ಎರಡು ಕೂಷ್ಮಾಂಡಿನಿ ಮತ್ತು ಒಂದು ಬಾಹುಬಲಿ ವಿಗ್ರಹಗಳನ್ನು ಬಿಟ್ಟರೆ ಮಿಕ್ಕವೆಲ್ಲವೂ ತೀರ್ಥಂಕರರ ವಿಗ್ರಹಗಳಾಗಿವೆ" ಎಂದು ಹೇಳುತ್ತಾ ಕೆಲವು ತೀರ್ಥಂಕರರ ವಿಗ್ರಹಗಳು ಎರಡೆರಡು ಇರುವುದರ ಕಡೆ ನಮ್ಮ ಗಮನ ಸೆಳೆಯುತ್ತಾರೆ.

ಈ ಸಂಗತಿಯನ್ನು ನಾನು ವಿಶೇಷವಾಗಿ ಬಗೆಯುತ್ತೇನೆ. ಈ ಎಲ್ಲಾ ಇಪ್ಪತ್ನಾಲ್ಕು ತೀರ್ಥಂಕರರ ಮೂರ್ತಿಗಳನ್ನು ಗಂಗರಾಜನು ತಾನೇ ನಿರ್ಮಿಸಿಲ್ಲ. ಬದಲಿಗೆ ತನ್ನ ಅಧೀನವಾಗಿದ್ದ ಅನೇಕ ಶ್ರೀಮಂತರಿಂದ ನಿರ್ಮಿಸಿದನು. ಹೊಯ್ಸಳರ ಕಾಲದ ಅತ್ಯುತ್ತಮ

ಶಿಲ್ಪಲಕ್ಷಣಗಳನ್ನು ಹೊಂದಿರುವ ಈ ಇಪ್ಪತ್ನಾಲ್ಕು ತೀರ್ಥಂಕರರ ಪ್ರತಿಮೆಗಳನ್ನು ನಿರ್ಮಿಸಲು ಅಪಾರ ಮೊತ್ತದ ಹಣದ ಅವಶ್ಯಕತೆಯೂ ಇತ್ತು. ಇದಕ್ಕಾಗಿ ಗಂಗರಾಜನು ವಿಷ್ಣುವರ್ಧನನನ್ನು ಆಶ್ರಯಿಸಲಿಲ್ಲ. ಬದಲಿಗೆ ಜೈನನಿಷ್ಠೆಯಿರಬಹುದಾದ ಹಲವು ವರ್ತಕರನ್ನು ಗುರುತಿಸಿದ. ಅವರೆಲ್ಲರಿಗೂ ಒಂದೊಂದು ಮೂರ್ತಿಗಳನ್ನು ನಿರ್ಮಿಸಲು ಅವಕಾಶವೊಂದನ್ನು ನೀಡಿದ. ರಾಜಸ್ವದ ಮೂಲಕ ಹಲವು ಅವಕಾಶಗಳನ್ನು ರಿಯಾಯಿತಿಗಳನ್ನು ಪಡೆಯುತ್ತಿದ್ದ ವರ್ತಕ ಶ್ರೇಷ್ಠರು ತಮ್ಮ ಲಾಭದ ಒಂದಂಶವನ್ನು ಜೈನಮೂರ್ತಿಗಳ ನಿರ್ಮಾಣಕ್ಕೆ ಉದಾರವಾದ ದೇಣಿಗೆಯನ್ನು ನೀಡಿದರೆಂಬುದನ್ನು ನಾವು ಗಮನಿಸಬೇಕು. ಬಹುಶಃ ಕೆಲವರ ಒತ್ತಾಯದಿಂದಲೂ ಒತ್ತಾಸೆಯಿಂದಲೂ ಕೆಲವು ತೀರ್ಥಂಕರರ ಪ್ರತಿಮೆಗಳು ಎರಡೆರಡಾಗಿವೆ. ಕೆಲವೊಂದನ್ನು ನಿರ್ಮಿಸಲು ಗಂಗರಾಜನೇ ತಿಳಿಸಿದ್ದರೂ ಗಂಗರಾಜನ ನಂತರವೂ ಕೆಲವು ಪ್ರತಿಮೆಗಳು ಸ್ಥಾಪನೆಗೊಂಡಿರುವುದಕ್ಕೆ ಶಾಸನಾಧಾರಗಳಿವೆ.

ಇವರೆಲ್ಲರೂ ಜೈನರೇ ಆಗಿದ್ದರು. ಇವರಲ್ಲಿ ಕೆಲವರು ನಯಕೀರ್ತಿ ಸಿದ್ಧಾಂತ ದೇವರ ಶಿಷ್ಯರಾಗಿದ್ದರೆ ಕೆಲವರು ಅವರ ಶಿಷ್ಯರಾಗಿದ್ದ ಬಾಳಚಂದ್ರ ಸಿದ್ಧಾಂತ ದೇವರ ಶಿಷ್ಯರಾಗಿದ್ದರು. ಎಲ್ಲಾ ಪಂಥೀಯರು ಇದರಲ್ಲಿ ಇದ್ದರು. ಅಂದರೆ ರಾಜಶ್ರೇಷ್ಠಿಗಳನ್ನು ಸರಿಯಾಗಿ ಉಪಯೋಗಿಸಿಕೊಂಡ ವಿಶ್ವಸನೀಯ ವ್ಯಕ್ತಿಯಾಗಿಯೂ ಗಂಗರಾಜನು ಕಂಡುಬರುತ್ತಾನೆ. ಬಸವಿಸೆಟ್ಟಿಯು ಸುತ್ತಾಲಯಕ್ಕೆ ಭಿತ್ತಿಯನ್ನು ನಿರ್ಮಿಸಿಕೊಟ್ಟನು. ಇವನ ಮಕ್ಕಳಾದ ನಂಬಿದೇವಸೆಟ್ಟಿ, ಬೋಕಿಸೆಟ್ಟಿ, ಜಿನ್ನಿಸೆಟ್ಟಿ, ಬಾಹುಬಲಿಸೆಟ್ಟಿಯರು ತಮ್ಮ ತಂದೆ ಮಾಡಿಸಿದ ತೀರ್ಥಂಕರರ ಶಿಲ್ಪಗಳ ಮುಂದೆ ಇರುವ ಜಾಲಂಧ್ರವನ್ನು ಮಾಡಿಸಿದರು. ಬಲ್ಲೆಯ ದಂಡನಾಯಕ, ಗುಮ್ಮಟಸೆಟ್ಟಿ, ಅಂಕಿಸೆಟ್ಟಿ, ಕಮ್ಮಟದ ರಾಮಿಸೆಟ್ಟಿ, ಸುಂಕದ ಭಾನುದೇವ ಹೆಗ್ಗಡೆ, ಬಿದಿಯಮ ಸೆಟ್ಟಿ, ಬಸವಿಸೆಟ್ಟಿ, ಕಳಲೆಯ ಮಹದೇವ ಸೆಟ್ಟಿ ಮುಂತಾದವರು ಈ ಚತುರ್ವಿಂಶತಿ ಮೂರ್ತಿಗಳನ್ನು ಮಾಡಿಸಿಕೊಟ್ಟರು. ಕೆಲವು ಸಣ್ಣಪುಟ್ಟ ವರ್ತಕರು, ಪ್ರವಾಸಿಗಳು ಕೂಡ ಕೆಲವು ಶಿಲ್ಪಗಳನ್ನು ಮಾಡಿಸಿಕೊಟ್ಟಿದ್ದಾರೆ. ಆದರೆ ಅವರುಗಳು ತಮ್ಮ ಹೆಸರುಗಳನ್ನು ಹೇಳಿಕೊಂಡಿಲ್ಲ. ಹಲವು ಪ್ರದೇಶದ ಅಧಿಕಾರಸ್ಥರನ್ನು ಉಪಯೋಗಿಸಿಕೊಂಡು ಈ ಚತುರ್ವಿಂಶತಿ ಮೂರ್ತಿಗಳನ್ನು ಸ್ಥಾಪಿಸುವುದರ ಜೊತೆಗೆ ಅವರಲ್ಲಿ ಕೆಲವರಿಗೆ ನೂತನವಾಗಿ ನಿರ್ಮಿಸಿದ ಬೆಳಗೊಳ ಗ್ರಾಮದ ಆಯಕಟ್ಟಿನ ಅಧಿಕಾರವನ್ನು ಕೂಡ ನೀಡಿದನು ಎಂದು ಊಹಿಸುವುದು ತಪ್ಪಾಗಲಿಕ್ಕಿಲ್ಲ.

ಇದರಿಂದ ಗಂಗರಾಜನಿಗೆ ವ್ಯಾಪಾರೋದ್ಯಮದಲ್ಲಿ ಅಪಾರವಾದ ಆಸಕ್ತಿಯಿದ್ದುದು ಕೂಡ ತಿಳಿಯುತ್ತದೆ. ಅಂತಹ ವರ್ತಕರನ್ನು ಗುರುತಿಸುವ ಚಾಕಚಕ್ಯತೆಯೂ ಇವನದ್ದಾಗಿತ್ತು ಎಂದು ಕೂಡ ಅರಿವಾಗುತ್ತದೆ. ಈ ಇಪ್ಪತ್ನಾಲ್ಕು ತೀರ್ಥಂಕರರ ಮೂರ್ತಿಗಳು ಪ್ರಮಾಣದಲ್ಲಿ ಸರಿಸಮಾನವಾಗಿಲ್ಲ. ಇದು ಶಿಲ್ಪಿಗಳು ಒಂದೇ ಜಾಗದಿಂದ ಈ ಮೂರ್ತಿಗಳನ್ನು ಮಾಡಿರಲಿಕ್ಕಿಲ್ಲ. ಈ ಶಿಲ್ಪಿಗಳು ಒಂದೇ ಶಾಲೆಯವರಲ್ಲದೇ ವಿವಿಧೆಡೆಗಳಿಂದ ಈ ಮೂರ್ತಿಗಳನ್ನು ಮಾಡಿಸಿ ಇಲ್ಲಿಗೆ ಸಾಗಿಸಿರಬಹುದು ಎಂದು ಕೂಡ ಅನ್ನಿಸುತ್ತದೆ. ಬಹುಶಃ ಇದೇ ಸಂಗತಿಯು ಶ್ರವಣಬೆಳಗೊಳವನ್ನು ಬಹಳ ಪ್ರಮುಖವಾದ ಪ್ರವಾಸಿ ತಾಣವನ್ನಾಗಿಸಿರಬಹುದು.

ಈ ವಿಷಯದ ಜೊತೆಗೆ ಇನ್ನೊಂದು ವಿಷಯವನ್ನು ಪ್ರಸ್ತಾಪಿಸಲೇಬೇಕು. ಬಯಲಿನಲ್ಲಿ ವಿರಾಗಿಯಾಗಿ ನಿಂತಿದ್ದ ಬಾಹುಬಲಿಗೆ ಆಲಯವೊಂದರ ಅವಶ್ಯಕತೆಯಾದರೂ ಏನಿತ್ತು? ಧಾರ್ಮಿಕ ಶ್ರದ್ಧೆಯೊಂದಿಗೆ ಪ್ರಮುಖ ರಾಜಕೀಯ ನಾಯಕನಾದ ಗಂಗರಾಜನು ಬಹುಶಃ ತಾನು ಪ್ರೀತಿಯಿಂದ ಕಟ್ಟಿಬೆಳೆಸಿದ ಬೆಳಗೊಳ ಕ್ಷೇತ್ರವನ್ನು ತನ್ನ ಏಕಸ್ವಾಮ್ಯಕ್ಕೆ

ಒಳಗುಮಾಡಿಕೊಳ್ಳುವ ಗುರುತರವಾದ ಉದ್ದೇಶದಿಂದಲೇ ಈ ಸುತ್ತಾಲಯವನ್ನು ನಿರ್ಮಿಸಿದನು ಎಂದು ತೋರುತ್ತದೆ. ಇದರಿಂದಾಗಿ ಬೆಳಗೊಳವು ಪ್ರಮುಖ ಧಾರ್ಮಿಕ ಪ್ರವಾಸಿ ತಾಣವಾಗಿಯೂ ಮುಂದುವರೆಯಲು ಅವಕಾಶವನ್ನು ಕಲ್ಪಿಸಿಕೊಟ್ಟಂತಾಯಿತು. ಹೇಗೂ ಬೆಳಗೊಳವು ಗೊಮ್ಮಟಪುರವೆಂಬ ನಗರವಾಗಿ ರೂಪುಗೊಳ್ಳುತ್ತಿತ್ತು. ಅದನ್ನು ನಿರ್ಮಿಸಿದ ಮಹಾಶಿಲ್ಪಿಯೇ ಗಂಗರಾಜನಾದುದರಿಂದಲೂ ಈ ಸುತ್ತಾಲಯವನ್ನು ನಿರ್ಮಿಸುವ ಮೂಲಕ ಈ ಕ್ಷೇತ್ರದ ಸಮಗ್ರ ಹಿಡಿತವನ್ನೂ ಕೂಡ ಗಂಗರಾಜನು ಸ್ಥಾಪಿಸಿಕೊಂಡ ಸಂಗತಿಯನ್ನು ನಾವು ಅರಿಯಬಹುದು.

ನಗರೀಕರಣಕ್ಕೆ ಇಂಬುನೀಡಿದ ಗಂಗರಾಜ

ಬೆಳಗೊಳವನ್ನು ಪ್ರಮುಖ ನಗರವಾಗಿ ರೂಪಿಸಿದ ಗಂಗರಾಜನು ಇಡೀ ಬೆಳಗೊಳ ಪರಿಸರದಲ್ಲಿ ಯಾವುದೇ ಜನವಸತಿಯುಳ್ಳ ನಗರ ಕೇಂದ್ರಗಳು ಅಸ್ತಿತ್ವದಲ್ಲಿ ಇರದೇ ಇದ್ದುದನ್ನು ಗಮನಿಸಿ ಮುಂದೆ ಆ ಕಡೆ ಗಮನ ಹರಿಸಿದನು. ಇದರ ಪರಿಣಾಮವಾಗಿ ಅದುವರೆಗೂ ಅಜ್ಞಾತವಾಗಿದ್ದ ಬಸ್ತಿಹಳ್ಳಿ, ರಾಚೇನಹಳ್ಳಿ, ಜಿನ್ನೇನಹಳ್ಳಿ, ಸವಣೇರು, ಬಸರಾಳು, ಬೆಕ್ಕ, ಪರಮ, ಹಳೇಬೆಳಗೊಳ, ಕಂಠೀರಾಯಪುರ, ಸಾಣೇನಹಳ್ಳಿ, ಕಗ್ಗೆರೆ, ಕಾಂತರಾಜಪುರ, ಮೊಟ್ಟನವಿಲೆ ಮುಂತಾದ ಗ್ರಾಮಗಳು ಮುನ್ನೆಲೆಗೆ ಬರಲು ಸಹಕಾರಿಯಾಯಿತು. ಬೆಳಗೊಳದಲ್ಲಿ ಜೈನಮುನಿಗಳನ್ನು ನೆಲೆಗೊಳಿಸಿ ಅವರಿಗೆ ಮಠವನ್ನು ನಿರ್ಮಿಸಿಕೊಟ್ಟು ಅವರೆಲ್ಲರಿಗೂ ವಸತಿಗಾಗಿ ಮತ್ತು ನಿರ್ವಹಣೆಗಾಗಿ ಕೆಲವು ಗ್ರಾಮಗಳನ್ನು ರಚಿಸಿದನು. ಇಂತಹ ಸನ್ನಿವೇಶದಲ್ಲಿ ಶ್ರವಣಬೆಳಗೊಳ ಗ್ರಾಮವನ್ನು ವಿಶೇಷವಾಗಿ ಅಸ್ತಿತ್ವಕ್ಕೆ ತರುವಲ್ಲಿ ಗಂಗರಾಜನ ಪಾತ್ರ ಹಿರಿದಾದುದಾಗಿದೆ.

ಕೆಲವು ಶಾಸನಗಳಿಂದ ಅತ್ಯಂತ ಮಹತ್ವದ ಸಂಗತಿಗಳನ್ನು ನಾವು ಅರಿಯಬಹುದಾಗಿದೆ. ಅದೆಂದರೆ ಬೆಳಗೊಳಕ್ಕೆ ಗೊಮ್ಮಟಪುರ ಎಂಬ ಹೆಸರು ಬಂದಿತ್ತು. ಇಲ್ಲಿ ಪಟ್ಟಣಸ್ವಾಮಿಯರು ಸೆಟ್ಟಿ ವರ್ತಕರೆಲ್ಲರೂ ಇದ್ದರು. ಪಟ್ಟಣಸ್ವಾಮಿಯೂ ಕೂಡ ಶೆಟ್ಟಿವರ್ತಕನೇ ಇರಬೇಕು. ಇವರನ್ನೆಲ್ಲಾ ಇಲ್ಲಿ ನೆಲೆಗೊಳಿಸಿದವನೇ ಗಂಗರಾಜ ಎಂಬುದನ್ನು ತಿಳಿಯಬೇಕು. ಇದರಿಂದ ಬೆಳಗೊಳ ಗ್ರಾಮವು ಅತ್ಯಂತ ಶೀಘ್ರಗತಿಯಲ್ಲಿ ಬೆಳವಣಿಗೆಯಾಗುವುದರ ಮತ್ತು ಸುಸಜ್ಜಿತವಾದ ನಗರವಾಗಿ ರೂಪುಗೊಳ್ಳುವುದರ ಹಿಂದೆ ಗಂಗರಾಜನ ಪರಿಶ್ರಮವು ಎದ್ದುಕಾಣುತ್ತದೆ.

ಗಂಗರಾಜನ ಇನ್ನೊಂದು ಸಾಧನೆಯೆಂದರೆ ಬೆಳಗೊಳದ ಪಕ್ಕದಲ್ಲಿ ಒಂದು ನೂತನ ಗ್ರಾಮವನ್ನು ನಿರ್ಮಿಸಿದನು. ಗಂಗರಾಜನು ಬೆಳಗುಳ ತೀರ್ಥದಲ್ಲಿ ನಿರ್ಮಿಸಿದ ಗ್ರಾಮಕ್ಕೆ ಜಿನನಾಥಪುರವೆಂದು ಹೆಸರಿಟ್ಟನು. ಇದೊಂದು ಜೈನ ಮತೀಯರಿಗಾಗಿಯೇ ನಿರ್ಮಿಸಿದ ಅಗ್ರಹಾರವಾಗಿತ್ತು. ಇಲ್ಲಿ ಇಂದಿಗೂ ಎರಡು ಪ್ರಮುಖವಾದ ಜೈನ ಕೇಂದ್ರಗಳಿವೆ. ಇದರಲ್ಲಿ ಮೊದಲನೆಯದು ಅರೆಗಲ್ಲು ಬಸದಿ. ಬಂಡೆಯ ಮೇಲಿರುವ ಬಸದಿ ಎಂಬ ಅರ್ಥದಲ್ಲಿ ಇದನ್ನು ಅರೆಗಲ್ಲು ಬಸದಿ ಎಂದು ಕರೆಯಲಾಗಿದೆ. ಈ ಬಸದಿಯನ್ನು ಬೊಪ್ಪದೇವನು ತನ್ನ ಸೋದರನಾದ ಏಚಿಮಯ್ಯನ ಪರೋಕ್ಷ ವಿನಯಕ್ಕಾಗಿ ರೂಪಿಸಿದನು. ಎಂದರೆ ಗಂಗರಾಜನಿಂದ ನಿರ್ಮಿತವಾದ ಈ ಗ್ರಾಮದ ನಿರ್ವಹಣೆಯನ್ನು ಗಂಗರಾಜನು ತನ್ನ ಮಗನಾದ ಬೊಪ್ಪದೇವನಿಗೆ ನೀಡಿದ್ದನು ಎಂದು ತಿಳಿದುಬರುತ್ತದೆ. ಇಲ್ಲಿ ನಾವು ಒಂದು ಮಾತನ್ನು ಗಮನಿಸಬೇಕು. ಗಂಗರಾಜನಿಗೆ ಬೊಪ್ಪನೆಂಬ ಮಗನೊಬ್ಬನೇ ಇರುವುದು ಸರಿಯಷ್ಟೇ. ಪ್ರಸ್ತುತ ಶಾಸನದಲ್ಲೂ ಗಂಗರಾಜನ ಅಗ್ರತನಯ ಎಂಬ ಮಾತೇ ಇದೆ. ಆದರೆ ತನ್ನಣ್ಣ ನಾದ ಏಚಿರಾಜನಿಗಾಗಿ ಬಸದಿಯೊಂದನ್ನು ನಿರ್ಮಿಸಿದನು ಎಂದು ಶಾಸನವೂ ತಿಳಿಸುತ್ತದೆ. ಈ ಮಾತಿನ ಅರ್ಥವನ್ನು ನಾವು ಸರಿಯಾಗಿ ಗ್ರಹಿಸಬೇಕು. ಇಲ್ಲಿ ಬಸದಿಯನ್ನು ನಿರ್ಮಿಸಿದವನು ಗಂಗರಾಜನ ಮಗನಾದ ಬೊಪ್ಪ. ಇವನಿಗೂ ಏಚ

ಅಥವಾ ಏಚಿರಾಜನೆಂಬ ಹೆಸರೇ ಇರುವುದು. ಬಸದಿಯನ್ನು ನಿರ್ಮಿಸಿದ್ದು ತನ್ನ ಅಣ್ಣನಾದ ಏಚಿರಾಜನ ಪರೋಕ್ಷವಿನಯಕ್ಕಾಗಿ ಅಂದರೆ ತನ್ನ ದೊಡ್ಡಪ್ಪನಾದ ಬೊಮ್ಮಚಮೂಪನ ಮಗನಾದ ಏಚಿರಾಜನಿಗಾಗಿ. ಇಲ್ಲಿ ನಾವು ಇದನ್ನು ಯಾವ ರೀತಿಯಲ್ಲೂ ಗೊಂದಲವನ್ನು ಮಾಡಿಕೊಳ್ಳದೇ ನೋಡಬೇಕಾಗಿದೆ.

ಇನ್ನೊಂದು ಜಿನನಾಥಪುರದಲ್ಲೇ ಏಕೆ ಇಡೀ ಕನ್ನಡ ನಾಡಿನಲ್ಲಿಯೇ ಅಪರೂಪದ ಬಸದಿಯಾಗಿರುವ ಶಾಂತೀಶ್ವರ ಬಸದಿ. ಏಕೆಂದರೆ ಹೊಯ್ಸಳ ಶೈಲಿಯ ಅನೇಕ ಬಸದಿಗಳು ಇರುವುದಾದರೂ ಭಿತ್ತಿಯ ಮೇಲೆ ಜೈನಶಿಲ್ಪಗಳನ್ನು ಉಳ್ಳ ಬಸದಿಯು ಅನನ್ಯವಾಗಿದೆ. ಇದನ್ನು ಗಂಗರಾಜನ ತರುವಾಯ ಕ್ರಿ.ಶ. 1200ರಲ್ಲಿ ರೇಚಿಮಯ್ಯ ದಂಡನಾಯಕನು ನಿರ್ಮಿಸಿದನು.

ಗಂಗರಾಜನು ಜನಾನುರಾಗಿಯಾಗಿದ್ದನು. ಅವನು ಬೆಳಗೊಳವನ್ನು ಅಭಿವೃದ್ಧಿಗೊಳಿಸಿದ ರೀತಿ ಅನ್ಯಾದೃಶವಾದುದು. ಸ್ವತಃ ತಾನೇ ಹಲವಾರು ದಾನಗಳನ್ನು ನೀಡಿ ಬೆಳಗೊಳವನ್ನು ಬೆಳಗಿಸುವುದರ ಜೊತೆಗೆ ತನ್ನ ಸಮಕಾಲೀನರಾದ ಹಲವರನ್ನು ಬೆಳಗೊಳಕ್ಕೆ ಕರೆಸಿ ಅವರಿಂದಲೂ ಅನೇಕ ದಾನಗಳನ್ನು ಪಡೆಯುವುದರಲ್ಲಿಯೂ ಇವನು ಸಫಲನಾದನು. ತನ್ನ ಪ್ರೀತಿಪಾತ್ರನಾದ ಹೊಯ್ಸಳ ವಿಷ್ಣುವರ್ಧನನು ಅನೇಕ ಬಾರಿ ಬೆಳಗೊಳ ಪರಿಸರದ ಅನೇಕ ಗ್ರಾಮಗಳನ್ನು ಗಂಗರಾಜನ ಕೋರಿಕೆಯಿಂದ ದಾನಮಾಡಿದನು. ಪಟ್ಟದರಸಿ ಶಾಂತಲೆಯು ಕೂಡ ಗಂಗರಾಜನ ಪ್ರಭಾವಕ್ಕೆ ಒಳಗಾಗಿ ಬೆಳಗೊಳದಲ್ಲಿ ಹಲವು ದಾನಗಳನ್ನು ಮಾಡುವುದರ ಜೊತೆಗೆ ತನ್ನ ಹೆಸರಿನಲ್ಲಿ ಸವತಿಗಂಧವಾರಣ ಬಸದಿಯನ್ನೂ ಬೆಳಗೊಳದ ಚಿಕ್ಕಬೆಟ್ಟದಲ್ಲಿ ಕ್ರಿ.ಶ. 1123ರಲ್ಲಿ ನಿರ್ಮಿಸಿದಳು (ಎಕ 2(ಪ): ಶ್ರಬೆ 162). ಹೇಗೂ ಶಾಂತಲೆಯು ಜೈನಳಾಗಿದ್ದ ತಾಯಿ ಮಾಚಿಕಬ್ಬೆಗೂ ಶೈವನಾಗಿದ್ದ ಮಾರಸಿಂಗನಿಗೂ ಹುಟ್ಟಿದವಳಲ್ಲವೇ. ಬೇಲೂರಿನಲ್ಲಿದ್ದ ಅವಳಿಗೂ ಬೆಳಗೊಳ ಕ್ಷೇತ್ರದಲ್ಲಿ ಜಿನಸೇವೆಯನ್ನು ಮಾಡುವ ಭಾಗ್ಯವು ನಮ್ಮ ಗಂಗರಾಜನಿಂದ ಲಭಿಸಿತು.

ಇದರೊಂದಿಗೆ ತನ್ನ ಸಮಕಾಲೀನನಾಗಿದ್ದ ಹಿರಿಯ ಅಧಿಕಾರಿ ದಂಡನಾಯಕ ಹುಳ್ಳರಸ, ಇನ್ನೊಬ್ಬ ಶೈವನಾದ ಚಂದ್ರಮೌಳಿ ದಂಡನಾಯಕ ಇಬ್ಬರಿಂದಲೂ ಬೆಳಗೊಳ ಕ್ಷೇತ್ರಕ್ಕೆ ಅನೇಕಾನೇಕ ದಾನದತ್ತಿಗಳು ಸಂದಾಯವಾಗಿರುವುದಕ್ಕೆ ಗಂಗರಾಜನೇ ಮೂಲಕಾರಣ. ಅಸಂಖ್ಯಾತವಾದ ವಣಿಕರು ಬೆಳಗೊಳದ ತೀರ್ಥದಲ್ಲಿ ಹಲವಾರು ದಾನಧರ್ಮಗಳನ್ನು ಮಾಡಲು ಗಂಗರಾಜನು ಪ್ರೇರೇಪಿಸಿದನು. ಇದರಿಂದ ನಾಡಿನೆಲ್ಲೆಡೆ ಇರುವ ಜೈನಧರ್ಮೀಯರೆಲ್ಲರೂ ಬೆಳಗೊಳಕ್ಕೆ ಬಂದು ತಮ್ಮಿಂದ ಕಿಂಚಿತ್ತಾದರೂ ಸೇವೆ ಸಲ್ಲಲೇಬೇಕು ಎಂದು ಮುಂದಿನ ಶತಮಾನಗಳಲ್ಲಿ ಅನ್ನಿಸುವಂತೆ ಇವನು ತನ್ನ ಕಾಲದ ಜನರ ಮನದಲ್ಲಿ ತುಂಬಿದನು.

–5–

ಗಂಗರಾಜನ ಇನ್ನಿತರ ಬಂಧುಗಳನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಅವನ ರಾಜಗುರುಗಳು, ಅವನ ಹೆಂಡತಿ ಮತ್ತು ಮಕ್ಕಳು ಅವರಿಂದ ಜೈನಧರ್ಮದ ಅಭಿವೃದ್ಧಿಯಾದುದು ಈ ಎಲ್ಲಾ ಅಂಶಗಳನ್ನು ಇನ್ನು ಮುಂದೆ ತಿಳಿಯಬಹುದಾಗಿದೆ.

ಸೋವಣದಂಡನಾಯಕ

ಗಂಗರಾಜನ ಹಲವು ಶಾಸನಗಳು ಬೊಪ್ಪದೇವ ಹಾಗೂ ಗಂಗರಾಜನ ಸೋದರತ್ವವನ್ನು ಕೊಂಡಾಡುವುದಾದರೂ, ಗಂಗರಾಜನಿಗೆ ಸೋವಣದಂಡನಾಯಕ ಎಂಬ ಹೆಸರಿನ ತಮ್ಮನಿದ್ದನೆಂಬ ಅಂಶವನ್ನು ಮೊದಲ ಬಾರಿಗೆ ಮೈಸೂರಿನ

ಕುಮಾರಬೀಡಿನಲ್ಲಿರುವ ಶಾಸನ ತಿಳಿಸುತ್ತದೆ. ಕೇವಲ ಬಮ್ಮದೇವ ಹಾಗೂ ಗಂಗರಾಜನನ್ನು ಹೆಸರಿಸುವ ಈ ಹಿಂದಿನ ಶಾಸನಗಳು ಸೋವಣನನ್ನು ಯಾಕೆ ಹೆಸರಿಸುವುದಿಲ್ಲ ಎಂದು ಕೂಡ ಸೋಜಿಗವಾಗುತ್ತದೆ. ದುರದೃಷ್ಟದ ಸಂಗತಿಯೆಂದರೆ ಗಂಗರಾಜನು ತಾನು ಬದುಕಿರಬೇಕಾದರೆ ತನ್ನ ಹಿರಿಯರಲ್ಲೇನಕರ ಸಾವನ್ನು ಸಾಲುಸಾಲಾಗಿ ಕಂಡವನು. ಇದರೊಟ್ಟಿಗೆ ತನ್ನ ತಮ್ಮನ ಸಾವನ್ನೂ ಕೂಡ ಈತ ನೋಡಬೇಕಾಯಿತು. ಬಹುಶಃ ತಂಬಾ ಮುಂಚೆಯೇ ಸೋವಣ್ಣನು ಮಡಿದಿರುವುದರಿಂದ ಗಂಗರಾಜನ ಇನ್ನಿತರ ಶಾಸನಗಳಲ್ಲಿ ಇವನ ಉಲ್ಲೇಖವು ಕಂಡುಬರುವುದಿಲ್ಲ ಎಂದೆನಿಸುತ್ತದೆ. ಅಥವಾ ಇವನು ಬೆಳಗೊಳದಿಂದ ದೂರವಾಗಿ ಇದ್ದುದರಿಂದ ಹಲವರಿಗೆ ಇವನ ಪರಿಚಯವು ಇದ್ದಿರಲಿಕ್ಕಿಲ್ಲ ಎಂದು ಕೂಡ ಊಹಿಸಬಹುದು. ಈ ಸೋವಣದಂಡನಾಯಕನು ತೀರಿಕೊಂಡಾಗ ಗಂಗರಾಜನು ಅವನಿಗೆ ಪರೋಕ್ಷವಿನಯವಾಗಿ ಹಾದರಿವಾಗಿಲ ಬೀಡಿನಲ್ಲಿ ಬಸದಿಯನ್ನು ನಿರ್ಮಿಸಿ ಅದಕ್ಕೆ ಮೈಸೆನಾಡ ಚಂದವನಹಳ್ಳಿಯನ್ನು ಮತ್ತು 30 ಸಲಗೆ ಗದ್ದೆ 1 ಹೊಲ 500 ಗುಳಿ ತೋಟ 2 ಎಣ್ಣೆಯ ಗಾಣಗಳನ್ನು ದತ್ತಿನೀಡಿದನು. ಇದರಿಂದ ಸೋವಣನನ್ನು ನಂಬಿಕೊಂಡಿದ್ದವರು ಇನ್ನೂ ಹಾದರಿಬಾಗಿಲಿನಲ್ಲಿ ಇದ್ದರು ಎಂದು ನಾವು ತಿಳಿಯಬಹುದಾಗಿದೆ (ಎಕ 5(ಪ): ಮೈ 207). ಇದರ ಹೊರತಾಗಿ ಸದ್ಯಕ್ಕೆ ಇವನ ಬಗ್ಗೆ ಬೇರೆ ಮಾಹಿತಿಗಳು ತಿಳಿದುಬಂದಿಲ್ಲ.

ಗಂಗರಾಜನ ಗುರುಗಳು

ಗಂಗರಾಜನಿಗೆ ಮೂಲಸಂಘ ಕೊಂಡಕುಂದಾನ್ವಯದ ದೇಸಿಗಗಣದ ಪುಸ್ತಕ ಗಚ್ಛದ ಶುಭಚಂದ್ರ ಸಿದ್ಧಾಂತ ದೇವರು ಗುರುಗಳಾಗಿದ್ದರು. ಪಾಪವಿದೂರನೂ ಕ್ಷೀರಸಾಗರದಂತೆ ಮುತ್ತಿನ ಹಾರದಂತೆ ವ್ಯಾಪಕ ಯಶೋವಂತನೂ ಸದ್ಗುಣಸಾಗರನೂ ಶಿಷ್ಯಲೋಕೈಕಬಂಧುವೂ ವಿದ್ವಾಂಸರೆಂಬ ದುಂಬಿವಿಂಡಿಗೆ ಸುಮವಾಗಿರುವವನೂ ಎಂದು ಶುಭೇಂದು ಮುನಿಯು ಕೀರ್ತಿತನಾಗಿದ್ದಾನೆ (ಎಕ 2(ಪ): ಶ್ರಬೆ 82 & 342).

ಆದಿಯಾಗಿರ್ಪ್ಪುದಾರ್ಹತಸಮಯಕ್ಕೆ ಮೂಲಸಂಘ ಕೊಂಡಕುಂದಾನ್ವಯಂ
ಬಾದುವೆಡದಂ ಬಳಯಿಪುದಲ್ಲಿಯ ದೇಸಿಗಗಣದ ಪುಸ್ತಕಗಚ್ಛದ
ಬೋಧವಿಭವದ ಕುಕ್ಕುಟಾಸನ ಮಲಧಾರಿದೇವರ ಶಿಷ್ಯರೆನಿಪ ಪೆಂಪಿಂ
ಗಾದಮೆಸೆದಿರ್ಪ್ಪ ಶುಭಚಂದ್ರಸಿದ್ಧಾಂತದೇವರ ಗುಡ್ಡಂ ಗಂಗಚಮೂಪತಿ

ಶುಭಚಂದ್ರಸಿದ್ಧಾಂತದೇವರ ಶ್ರಾವಕ ಶಿಷ್ಯನಾದ ಗಂಗರಾಜನು ಈ ಗುರುಪರಂಪರೆಯ ಏಳಿಗೆಗೆ ಕಾರಣನಾದನು. ಮಹಾಪ್ರಧಾನ ದಂಡನಾಯಕ ಗಂಗರಾಜನು ಸಮ್ಯಕ್ತ್ವರತ್ನಾಕರನೆನಿಸಿದ್ದನು. ಇವನು ತನ್ನ ಗುರುಗಳಾದ ಶುಭಚಂದ್ರ ಸಿದ್ಧಾಂತದೇವರಿಗೆ ಪರೋಕ್ಷವಿನಯವಾಗಿ ನಿಶಿಧಿಗೆಯನ್ನು ನಿಲ್ಲಿಸಿದನು. ಈ ಸಂದರ್ಭದಲ್ಲಿ ಮಹಾಪೂಜೆ, ಮಹಾದಾನಗಳನ್ನು ಮಾಡಿಸಿದನು. ಶುಭಚಂದ್ರ ಸಿದ್ಧಾಂತದೇವರ ಶಿಷ್ಯಳಾಗಿದ್ದ ಗಂಗರಾಜನ ಅತ್ತಿಗೆ ಜಕ್ಕಣಬ್ಬೆಯು ಜಿನಪೂಜೆಯನ್ನು ಮಾಡಿಸಿದಳು (ಎಕ 2(ಪ): ಶ್ರಬೆ 135).

ಲಕ್ಷ್ಮಿಮತಿ

ಈಕೆಯು ಗಂಗರಾಜನ ಮಡದಿ. ಲಕ್ಷ್ಮೀಮತಿಯು ಲಕ್ಕಲೆ, ಲಕ್ಕವ್ವೆ, ಲಕ್ಕವ್ವೆ ದಂಡನಾಯಕಿತಿ, ಲಕ್ಷ್ಮಲೆ, ಲಕ್ಷ್ಮಂಬಿಕೆ ಎಂದು ಶಾಸನೋಕ್ತಳಾಗಿದ್ದಾಳೆ. ದಂಡನಾಯಿಕಿತಿ ಎಂಬ ಉಲ್ಲೇಖವು ಅವಳು ದಂಡನಾಯಕನ ಮಡದಿ ಎಂಬ ಕಾರಣಕ್ಕಾಗಿ ಅವಳ ಹೆಸರಿನೊಂದಿಗೆ ಸೇರಿದೆ ಎನಿಸುತ್ತದೆ. ಏಕೆಂದರೆ ಆಕೆ ದಂಡನಾಯಕಿತಿ ಪದವಿಯಿಂದ ಆಳಿದ ಖಚಿತ ಆಧಾರಗಳು ಸದ್ಯದವರೆಗೂ ದೊರೆತಿಲ್ಲ.

ಸಿದ್ಧಾಂತದಲ್ಲಿ ಸಿದ್ಧನಂದಿಗಳಂತಿರುವ ಶುಭಚಂದ್ರರ ಪಾದಾರವಿಂದದಲ್ಲಿ ಭಾಗ್ಯಲಕ್ಷ್ಮಿಯಾಗಿ ಲಕ್ಷ್ಮಿಮತಿ ರಾರಾಜಿಸಿದಳು (ಈಕೆ ಶುಭೇಂದು ಮುನೀಶ್ವರರ ಶಿಷ್ಯೆ). ಸದ್ಗುಣಗಳ ಸದನೆಯಾದ ಈ ಲಕ್ಷ್ಮಿಯು ಪತಿಭಕ್ತಿಯಲ್ಲಿ ಸೀತೆಯೂ, ಕ್ಷಮೆಯಲ್ಲಿ ಭೂದೇವಿಯೂ ವಾಕ್ಶಕ್ತಿಯಲ್ಲಿ ಸರಸ್ವತಿಯೂ ಜಿನಪೂಜೆಯಲ್ಲಿ ಚೇಳಿನಿಯೂ ಆಗಿ ವಿರಾಜಿಸಿದಳು. ಗಂಗರಾಜನ ಕಾರ್ಯದಲ್ಲಿ ನೀತಿವಧುವಾಗಿ ರಣದಲ್ಲಿ ಜಯವಧುವಾಗಿ ಕಂಗೊಳಿಸುವ ಲಕ್ಷ್ಮಿಯು ಹೊಸದಾಗಿ ಜಿನಾಲಯವನ್ನು ನಿರ್ಮಿಸಿದಳು. ಈಗಿನ ಚಿಕ್ಕಬೆಟ್ಟದಲ್ಲಿರುವ ಎರಡು ಕಟ್ಟೆ ಬಸದಿಯು ಈ ಹಿಂದೆ 8ನೆಯ ಶತಮಾನದಲ್ಲಿಯೇ ಇತ್ತು. ಇದನ್ನು ಈಕೆ ಕ್ರಿ.ಶ. 1118ರಲ್ಲಿ ಜೀರ್ಣೋದ್ಧಾರಗೊಳಿಸಿದಳು. ನಂತರ ಈ ಜಿನಾಲಯವು ಮೂಲಸಂಘದ ದೇಶಿಯಗಣದ ಪುಸ್ತಕಗಣದ ಆಡಳಿತಕ್ಕೆ ಸೇರಿಕೊಳ್ಳುವಂತೆ ಗಂಗರಾಜನು ವ್ಯವಸ್ಥೆಯನ್ನು ಮಾಡಿಕೊಟ್ಟನು (ಎಕ 2(ಪ): ಶ್ರಬೆ 160).

ಸೌಭಾಗ್ಯದ ಗಣಿಯಾದ ಲಕ್ಷ್ಮಿಮತಿಯು ಲೋಕದಲ್ಲಿ ಆಹಾರ ಅಭಯ ಭೈಶಜ ಶಾಸ್ತ್ರದಾನಗಳನ್ನು ಮಾಡುತ್ತ ಶೋಭಿಸಿದಳು !

ಸೋ[ಶೋ]ಭಯನೇಂ ಕೈಕೊಂಡುದೊ
ಸೌಭಾಗ್ಯದ ಕಣಿಯೆನಿಪ್ಪ ಲಕ್ಷ್ಮೀಮತಿಯಿಂ
ದೀ ಭುವನತಳ ದೊಳಾಹಾ
ರಾಭಯಭೈಸಜ್ಯಶಾಸ್ತ್ರದಾನವಿಧಾನ [45]

ಪರಮಪದಾರ್ತ್ಥನಿರ್ನ್ನಯಮನಾಂತ ವಿದಗ್ಧದುರ್ನ್ನಯಂಗಳೊ
ಳ್ಪರಿಚಯಮೆಂದು ಮಿಲ್ಲದತಿಮುಗ್ಧತೆತನ್ನಿನಿಯಂಗೆ ಚಿತ್ತದೊ
ಳ್ಪರಿದನುರಾಗಮಂ ಪಡೆವ ರೂಪುವಿನೇಯಜನಾಂತ ರಂಗದೊ
ಳ್ನಿರುಪಮಭಕ್ತಿಯಂ ಪಡೆವ ಪೆಂಪಿವುಲಕ್ಷ್ಮಲೆಗೆಂದು ಮನ್ನಿತಂ. [46]

ವಿವೇಕಚಿಂತಾಮಣಿಯೂ ದುರಾಚಾರಗಳನ್ನು ಎಂದೂ ಕಂಡರಿಯದ ಮುಗ್ಧೆಯೂ ಇನಿಯನ ಚಿತ್ತಾಪಹಾರಿಯಾದ ರೂಪಸಿಯೂ ಆಶ್ರಿತ ಜನರಲ್ಲಿ ಪರಮ ಭಕ್ತಿಯನ್ನು ಮೂಡಿಸುವ ಮಹಿಮಾವಂತೆಯೂ ಆಗಿದ್ದಳು (ಎಕ 2(ಪ): ಶ್ರಬೆ 82 & 342).

ಚತುರತೆಯೊಳ್ ಲಾವಣ್ಯದೊಳ
ತಿಶಯಮೆನೆ ನೆಗಳ್ದ ದೇವಭಕ್ತಿಯೊಳಿಂತೀ
ಕ್ಷಿತಿಯೊಳಗೆ ಗಂಗರಾಜನ
ಸತಿ ಲಕ್ಷ್ಮ್ಯಂಬಿಕೆಯೊಳಿತರಸತಿಯದ್ದೊರೆಯೇ

ಲಕ್ಷ್ಮಲೆಯು ಚತುರೆಯೂ ಲಾವಣ್ಯಮಯಿಯೂ ಪರಮಜಿನಭಕ್ತೆಯೂ ಆಗಿದ್ದಳು. ಗಂಗರಾಜನ ಮಡದಿಯಾದ ಈಕೆಗೆ ಉಳಿದ ಸತಿಯರು ಸಮನಾಗುವರೇ! ಎಂದು ಶಾಸನವೊಂದು ಕೇಳುವಷ್ಟು ಈಕೆ ಸಮಕಾಲೀನ ಕಾಲಿಘಟ್ಟದಲ್ಲಿ ಜನಪ್ರಿಯಳಾಗಿದ್ದಳು.

ಸೌಭಾಗ್ಯದೊಳಮರ್ದ್ದಾದಂ
ಸೋಭಾಸ್ಪದಮಾದರೂಪಿನೊಳ್ಪಿಂ ಪ್ರತ್ಯ
ಲಕ್ಷ್ಮೀಭೂತಲಕ್ಷ್ಮಿ ಯೆಂದಪು
ದೀ ಭೂತಳಮಿನಿತು ಮೆಯ್ಚಿ ಲಕ್ಷ್ಮಿಮತಿಯಂ

ಇವಳ ಸೌಭಾಗ್ಯವನ್ನೂ ಲಾವಣ್ಯವನ್ನೂ ಕಂಡರೆ, ಲಕ್ಷ್ಮಿಯೇ ಸಾಕಾರಗೊಂಡು ಬಂದಿರುವಳೆಂದು ಲೋಕವು ಕೊಂಡಾಡುವುದು (ಎಕ 2(ಪ): ಶ್ರಬೆ 157).

ವಿತರಣಗುಣಮದೆವನಿತಾ
ಕ್ರಿತಿಯಂ ಕೈಕೊಂಡುದೆನಿಪ ಮಹಿಮೆಯ ಲಕ್ಷ್ಮೀ
ಮತಿಯೆಲವೊನದೇವತಾಧಿ
ಕ್ಷಿತೆಯಲ್ಲದೆ ಕೇವಳಂ ಮನಿಷ್ಯಾಂಗನಯೇ

ವಿತರಣಗುಣವೆ ಸ್ತ್ರೀ ರೂಪವನ್ನು ಧರಿಸಿದಂತಿರುವ ಲಕ್ಷ್ಮಿಮತಿಯು ಸುರಾಂಗನೆಯೇ ಹೊರತು ಮನುಷ್ಯ ಕನ್ಯೆಯಲ್ಲ ಎಂದು ಕೂಡ ಶಾಸನ ಕವಿಯು ಕೊಂಡಾಡಿದ್ದಾನೆ (ಮೇಲಿನದೇ.).

ಇಭಗಮನೆ ಹರಿಣಲೋಚನೆ
ಶುಭಲಕ್ಷಣೆಗಂಗರಾಜನರ್ದ್ಧಾಂಗನೆ ತಾ
ನಭಿನವರುಕ್ಮಿಣಿಯೆನಲೀ
ತ್ರಿಭುವನದೊಳ್ ಪೋಲ್ವರೊಳರೆ ಲಕ್ಷ್ಮಿಮತಿಯಂ

ಗಂಭೀರವಾದ ನಡೆಯುಳ್ಳವಳೂ ಜಿಂಕೆಯಂತಹ ಕಣ್ಣುಳ್ಳವಳೂ ಸುಂದರಿಯೂ ಆದ ಗಂಗರಾಜನ ಮಡದಿ ಲಕ್ಷ್ಮಿಮತಿಯು ಅಭಿನವ ರುಕ್ಮಿಣಿ ಎಂದೆನಿಸಿದ್ದಳು. ಇವಳಿಗೆ ಸರಿಸಮಾನನಾದವಳು ಈ ಲೋಕದಲ್ಲಿ ಯಾರಿದ್ದಾರೆ!! (ಮೇಲಿನದೇ.).

ದಂಡನಾಯಕಿತಿ ಲಕ್ಕವೆಯು ಸಲ್ಲೇಖನ ವ್ರತವನ್ನು ಕೈಗೊಂಡು ಸಮಾಧಿಮರಣವನ್ನು ಪಡೆದು ಸ್ವರ್ಗಸ್ಥವಾದಳು. ಮಹಾದಂಡನಾಯಕ ಗಂಗರಾಜನು ಈಕೆಗೆ ಪರೋಕ್ಷವಿನಯವಾಗಿ ಈ ನಿಸಿದಿಗೆಯನ್ನು ಮಾಡಿಸಿ ಪ್ರತಿಷ್ಠಾಪಿಸಿ ಮಹಾದಾನ ಮತ್ತು ಮಹಾಪೂಜೆಗಳನ್ನು ನೆರವೇರಿಸಿದನು. ಗಂಗರಾಜನಂತಹ ಅಧಿಕಾರಿಯ ಹೆಂಡತಿಯಾಗಿದ್ದು ಭೋಗಜೀವನವನ್ನು ನಡೆಸುವುದನ್ನು ಬಿಟ್ಟು ತ್ಯಾಗಜೀವನವನ್ನು ನಡೆಸಿದ ಕಾರಣಕ್ಕೇ ಅವಳ ಕಾಲದಲ್ಲಿ ಅಷ್ಟೊಂದು ಜನಪ್ರಿಯತೆಗೆ ಕಾರಣಕರ್ತಳಾಗಿದ್ದಳು. ಬಹುಶಃ ಈಕೆಯ ತ್ಯಾಗ ಜೀವನಕ್ಕೆ ಬಹಳ ಮುಖ್ಯವಾದ ಕಾರಣವೆಂದರೆ ಬಹುಶಃ ಆಕೆಗೆ ಸಂತಾನವಿಲ್ಲದೇ ಇದ್ದಿರಬಹುದು ಎಂದೆನಿಸುತ್ತದೆ (ಮೇಲಿನದೇ.).

ಬೆಳಗೊಳದ ಚಿಕ್ಕಬೆಟ್ಟದಲ್ಲಿ ಇಂದ್ರನ ಮಂಟಪದಿಂದ ದಕ್ಷಿಣಕ್ಕಿರುವ ಅವಳಿ ಮಂಟಪಗಳನ್ನು ಲಕ್ಷ್ಮೀದೇವಿಯ ಕುಟುಂಬದವರ ಸ್ಮಾರಕವೆಂದರೆ ಸರಿಯಾದೀತು. ಈ ಎರಡು ಮಂಟಪಗಳಲ್ಲಿ ಮೊದಲನೆಯ ಮಂಟಪದಲ್ಲಿ ಒಂದೇ ಒಂದು ನಿಷದಿಗೆಯಿದ್ದು ಇದು ಲಕ್ಷ್ಮೀಮತಿಯ ಸೋದರನಾದ ಬೂಚಣ್ಣನ ಸ್ಮಾರಕವಾಗಿದೆ (ಎಕ 2(ಪ): ಶ್ರಬೆ 155). ಈತನು ಕ್ರಿ.ಶ. 1123ರಲ್ಲಿ ಮರಣ ಹೊಂದಿದನು. ಇನ್ನೊಂದು ಮಂಟಪದಲ್ಲಿ ಮೂರು ನಿಷಧಿಗೆಗಳಿವೆ. ಇದರಲ್ಲಿ ಮೊದಲನೆಯದು 1115ರಲ್ಲಿ ಮರಣ ಹೊಂದಿದ ಲಕ್ಷ್ಮೀಮತಿಯ ಗುರುಗಳಾಗಿದ್ದ ಮೇಘಚಂದ್ರ ತ್ರೈವಿದ್ಯ ದೇವರ ಸ್ಮಾರಕವಾದರೆ (ಎಕ 2(ಪ): ಶ್ರಬೆ 156) ಇನ್ನೆರಡು ಇವರ ಶಿಷ್ಯರಾದ ಸ್ವತಃ ಲಕ್ಷ್ಮೀಮತಿ (ಎಕ 2(ಪ): ಶ್ರಬೆ 157) ಹಾಗೂ ಅವಳ ಸೋದರಿ ದೇಮತಿಯ ನಿಷದಿಗೆಗಳು (ಎಕ 2(ಪ): ಶ್ರಬೆ 158). ವಿಚಿತ್ರವೆಂದರೆ ಇವರಿಬ್ಬರೂ ಒಂದೇ ವರ್ಷ 1120–21ರಲ್ಲಿ ಅಸುನೀಗಿದ್ದಾರೆ.

ಎರಡನೆಯ ಏಚ

ಈ ಏಚನು ಗಂಗರಾಜ ಮತ್ತು ನಾಗಲದೇವಿಯರ ಮಗ. ನಾಗಲದೇವಿಯು ಗಂಗರಾಜನ ಇನ್ನೊಬ್ಬ ಮಡದಿ. ಈಕೆ ಕಿರಿಯ ಮಡದಿಯಾಗಿದ್ದಿರಬಹುದು. ಬಹುಶಃ ಅವನ ಮೊದಲ ಸತಿಯಾದ ಲಕ್ಕಲೆಗೆ ಮಕ್ಕಳಿರಲಿಲ್ಲವೆಂದು ತೋರುತ್ತದೆ. ಹಾಗಾಗಿ ನಾಗಲೆಯನ್ನು ವರಿಸಿ ಈ ಏಚನನ್ನು ಮಗನಾಗಿ ಪಡೆದಿದ್ದಿರಬಹುದು. ಶಾಸನಗಳಲ್ಲಿ ಇವನ ಹೆಸರು ಏಚ, ಏಚಿರಾಜ, ದೇಚಿರಾಜ, ಬೊಪ್ಪ ಎಂದು ಉಲ್ಲೇಖಿತವಾಗಿದೆ.

ಬೊಪ್ಪ ಎಂಬ ಅಭಿದಾನವು ಮೇಲ್ನೋಟಕ್ಕೆ ಇವನ ಹೆಸರಲ್ಲವೇನೋ ಎಂದೆನಿಸಿದರೂ ಸಹ ಅದು ಅವನನ್ನು ಗೌರವಯುತವಾದ ಸಂಭೋದನೆಯಾಗಿ ಶಾಸನಗಳಲ್ಲಿ ಗೋಚರಿಸಿದೆಯಷ್ಟೆ. ಇವನು ಕೂಡ ತಂದೆಯಂತೆಯೇ ಅಪೂರ್ವ ಪರಾಕ್ರಮಿಯಾಗಿದ್ದನು.

ಕದನದೊಳಾಂತರಂ ಗೆಲುವದೇಂಗಳ ನಿಂನ ಪೆಸರ್ಜ್ಜಿತಾರಿ
ಯೆಂಬುದೆ ಬುಧಬಂಧುವೆಂಬುದೆ ಜನಾಗ್ರಣಿಎಂಬುದೆ ಬೊಪ್ಪದೇವನೆ
ಂಬುದೆ ಕಲಿಯೇಚಿರಾಜವಿಭುವೆಂಬುದೆ ಗಂಗನ ಗಂಧಹಸ್ತಿಯೆಂ
ಬುದೆ ರಣರಂಗಪಾಂಡುಸುತನೆಂಬುದೆ ವಯರಿಘರಟ್ಟನೆಂಬುದೆ

ಹಾಗೂ

ಮಲವತ್ಯುದ್ಧತದೇಶಕಂಠಕೆನಾಟಂದೊತ್ತಿ ಬೆಂಕೊಂಡು ದೋ
ರ್ವ್ವಲದಿಂ ಕೊಂಗರನೊತ್ತಿ ವೈರಿನೃಪರಂ ಬೆನ್ನಟ್ಟಿ ತೂಳ್ದೋಡಿಸುತ್ತನ್ಯಮಂ
ಡಲವಂ ತತ್ಪತಿಗೆಯ್ದೆ ಮಾಡಿ ಜಗದೊಳು ಬೀರಕ್ಕೆ ತಾನಿಂತಗುಂ
ದಲೆಯಾದಂ ಕಲಿಗಂಗನಗ್ರತನಯಂ ಶ್ರೀ ಬೊಪ್ಪದೇವದಂಡಾಧಿಪ

ಈ ಶಾಸನೋಕ್ತ ಸಾಲುಗಳು (ಮೇಲಿನದೆ.) ಏಚನು ಅಪ್ರತಿಮ ವೀರನಾಗಿದ್ದನೆಂಬದನ್ನು ನಮಗೆ ಅರಹುತ್ತವೆ. ಗಂಗರಾಜನ ಮಗನೂ ವಿದ್ವಾಂಸನೂ ಆಗಿದ್ದ ಏಚಣನು ತ್ರೈಲೋಕ್ಯರಂಜನವೆಂಬ ಜಿನಾಲಯವನ್ನು ನಿರ್ಮಿಸಿದನು. ಈತನಿಗೆ ಬೊಪ್ಪಣ ಎಂಬ ಮತ್ತೊಂದು ಹೆಸರೂ ಇತ್ತು. ಸಜ್ಜನ ಬಂಧು ಬುಧಬಂಧು ಎಂದು ಕೀರ್ತಿತನಾಗಿದ್ದನು (ಎಕ 2(ಪ) ಶ್ರಬೆ 149).

ಈ ಏಚಣ್ಣನ ಬಹಳ ಮುಖ್ಯವಾದ ಕೊಡುಗೆಯೊಂದನ್ನು ನಾವು ನೆನಯಲೇಬೇಕು. ಬಹುಶಃ ಅದೇನು ಕಾರಣವೋ ತಿಳಿಯದು. ಬೆಳಗೊಳದ ಚಿಕ್ಕಬೆಟ್ಟದ ಅತ್ಯಂತ ಪ್ರಮುಖ ವಾಸ್ತುನಿರ್ಮಿತಿಯಾದ ಚಾವುಂಡರಾಯನ ಬಸದಿಯು ಆ ಕಾಲಕ್ಕಾಗಲೇ ಮಿಂಚುತ್ತಿತ್ತು. ಗಂಗರಾಜನನ್ನು ಕೆಲವು ಶಾಸನಗಳು ಚಾವುಂಡರಾಯನೆಂದೂ ಗೌರವಿಸುತ್ತವೆ. ಆದರೆ ಈ ಬಸದಿಯಲ್ಲಿರುವ ಮೂಲ ಮೂರ್ತಿಯನ್ನು ಮಾಡಿಸಿದವನು ಗಂಗರಾಜನ ಮಗನಾದ ಇದೇ ಏಚಣ್ಣ. ಮುಖ್ಯ ಗರ್ಭಗುಡಿಯಲ್ಲಿರುವ ಜಿನಬಿಂಬವನ್ನೂ ಹಾಗೂ ಅರ್ಧಮಂಟಪದಲ್ಲಿರುವ ಯಕ್ಷ ಹಾಗೂ ಯಕ್ಷಿಯರ ಶಿಲ್ಪಗಳನ್ನು ಏಚಣ್ಣನು ನಿರ್ಮಿಸಿದನು. ಹಾಗಾಗಿಯೇ ಈ ಬಸದಿಯನ್ನು ಬೊಪ್ಪ ಜಿನಾಲಯ ಎಂದೂ, ತ್ರೈಲೋಕ್ಯ ರಂಜನ ಬಸದಿ ಎಂದು ಕೂಡ ಶಾಸನಗಳು ತಿಳಿಸುತ್ತವೆ (ಮೇಲಿನದೇ.).

ನರಸಿಂಹ ಹೊಯ್ಸಳ ದೇವನಿಗೆ ಮೊದಲು ಹಿರಿಯದೇವನು (ವಿಷ್ಣುವರ್ಧನನು) ಕಂಬದಹಳ್ಳಿ ದೇವತಾಪೂಜೆಗೆ ಆಹಾರದಾನಕ್ಕೆಂದು ಬಿಟ್ಟ ದತ್ತಿಯು ಸಾಕಾಗದಿರಲು ನರಸಿಂಹನು ಶಾಂತಿನಾಥದೇವರ ಪೂಜೆಗೆ ದಾನಗಳಿಗೆಂದು ಗಂಡವಿಮುಕ್ತಸಿದ್ಧಾಂತದೇವರ ಶಿಷ್ಯರಾದ ಮರಿಯಾನೆ ದಂಡನಾಯಕರಿಗೆ ಮತ್ತು ಭರತಿಮಯ್ಯದಂಡನಾಯಕರಿಗೆ ಮೊದಲಿಯಹಳ್ಳಿಯನ್ನು ದತ್ತಿಯಾಗಿ ನೀಡಿದರು (ಎಕ 7 (ಪ): ನಾಮಂ 30). ಬಹುಶಃ ಈ ಶಾಂತಿನಾಥನ ಬಸದಿಯು ಗಂಗರಾಜನ ಮಗ ಬೊಪ್ಪನು ಕಟ್ಟಿಸಿದ್ದಿರಬೇಕು (ಎಕ 7 (ಪ): ನಾಮಂ 32) ಗಂಗರಾಜನ ಮಗ ಬೊಪ್ಪದೇವನು ಕನ್ನೆಬಸದಿಯನ್ನು ಸಹ ಮಾಡಿಸಿದ್ದನು.

ಗಂಗರಾಜನ ಮರಣದ ವಿಚಾರ

ಗಂಗರಾಜನ ಮಗ ಏಚನು ತನ್ನ ತಂದೆಗೆ ಪರೋಕ್ಷವಿನಯವಾಗಿ ದ್ರೋಹಘರಟ್ಟ ಜಿನಾಲಯವನ್ನು ನಿರ್ಮಿಸಿದ್ದನು (ಎಕ 9(ಪ): ಬೇ 389). ಎಂದು ಹಳೇಬೀಡಿನ ಬಳಿಯ ಬಸ್ತಿಹಳ್ಳಿಯ ಶಾಸನವು ತಿಳಿಸುತ್ತದೆ. ಕ್ರಿಶ 1133ರ ವೇಳೆಗೆ ಗಂಗರಾಜನು

ಮಡಿದಿದ್ದನ್ನು ಈ ಶಾಸನ ಖಚಿತಗೊಳಿಸುತ್ತದೆ. ಗಂಗರಾಜನ ವಂಶೀಯರೆಲ್ಲರ ಸ್ಮಾರಕಗಳು ಶ್ರವಣಬೆಳಗೊಳದಲ್ಲಿಯೇ ಇದ್ದರೂ, ಬೆಳಗೊಳವು ಗಂಗರಾಜನ ಪ್ರಮುಖ ಕಾರ್ಯಕ್ಷೇತ್ರವಾಗಿದ್ದರೂ ಅವನ ಸ್ಮಾರಕವಾಗಿ ಬಸದಿಯೊಂದನ್ನು ನಿರ್ಮಿಸಿದ್ದು ಮಾತ್ರ ರಾಜಧಾನಿ ಹಳೇಬೀಡಿಗೆ ಪಕ್ಕದ ಬಸ್ತಿಹಳ್ಳಿಯಲ್ಲಿ ಎಂಬುದು ವಿಶೇಷವಾದ ಸಂಗತಿಯಾಗಿದೆ. ಇದರೊಂದಿಗೆ ಕಂಬದ ಹಳ್ಳಿಯಲ್ಲೂ ಗಂಗರಾಜನ ಸ್ಮಾರಕವಾಗಿ ಬಸದಿಯೊಂದನ್ನು ನಿರ್ಮಿಸಿದನು.

ಒಟ್ಟಿನಲ್ಲಿ ಗಂಗರಾಜನು "ಅಖಿಳತೀರ್ಥಕರ ಪರಮದೇವ ಪರಮಚರಿತಾ ಕರ್ಣ್ನಾನೋದೀರ್ಣ್ನವಿಪುಳ ಪುಳಕ ಪರಿಕಳಿತ ವಾರಬಾಣನುವಸಮಸಮರರಸ ರಸಿಕನೃಪ ರಿಪುನೃಪಕಳಾಪಾವಲೇಪಲೋಪಲೋಲುಪ ಕ್ರಿಪಾಣನುಂ ವಾಹಾರಾಭಯಭೈಶಜ್ಯ ಶಾಸ್ತ್ರದಾನವಿನೋದನುಂ ಸಕಳ ಲೋಕಶೋಕಾಪನೋದನುಂ" ಆಗಿದ್ದನು. ಎಂದರೆ ತೀರ್ಥಂಕರರ ಚರಿತೆಗಳನ್ನು ಆಲಿಸಲು ತನ್ನ ಕಿವಿಗಳನ್ನು ಮೀಸಲಾಗಿಟ್ಟಿದ್ದನು. ಸಮರದಾಹದಿಂದ ಕೂಡಿದ ಅರಿರಾಜರ ಧ್ವಂಸಕ್ಕೆ ಇವನ ಖಡ್ಗವು ಹಾತೊರೆಯುತ್ತಿತ್ತು. ಆಹಾರಾ ಮೊದಲಾದ ದಾನಗಳಲ್ಲಿ ಈತನದು ಎತ್ತಿದ ಕೈ. ಲೋಕದ ದುಃಖನಿವಾರಕನಾಗಿ ಶೂರವಂತನಾಗಿ ವಿರಾಜಿಸಿದ್ದನು.

ಆಧಾರ ಸೂಚಿ

01. **ಎಪಿಗ್ರಾಫಿಯಾ ಕರ್ನಾಟಿಕಾ** : ಸಂಪುಟ 2: ಶ್ರವಣಬೆಳಗೊಳ: ಮೈಸೂರು ವಿವಿ: ಮೈಸೂರು
02. **ಎಪಿಗ್ರಾಫಿಯಾ ಕರ್ನಾಟಿಕಾ** : ಸಂಪುಟ 5: ಮೈಸೂರು ಜಿಲ್ಲೆ: ಮೈಸೂರು ವಿವಿ: ಮೈಸೂರು
03. **ಎಪಿಗ್ರಾಫಿಯಾ ಕರ್ನಾಟಿಕಾ** : ಸಂಪುಟ 7: ಮಂಡ್ಯ ಜಿಲ್ಲೆ: ಮೈಸೂರು ವಿವಿ: ಮೈಸೂರು
04. **ಎಪಿಗ್ರಾಫಿಯಾ ಕರ್ನಾಟಿಕಾ** : ಸಂಪುಟ 9: ಹಾಸನ ಜಿಲ್ಲೆ: ಮೈಸೂರು ವಿವಿ: ಮೈಸೂರು
05. **ಎಪಿಗ್ರಾಫಿಯಾ ಕರ್ನಾಟಿಕಾ** : ಸಂಪುಟ 10: ಹಾಸನ ಜಿಲ್ಲೆ: ಮೈಸೂರು ವಿವಿ: ಮೈಸೂರು
06. ಕಾಮತ್ ಸೂರ್ಯನಾಥ್. 1999. **ಕರ್ನಾಟಕದ ಸಂಕ್ಷಿಪ್ತ ಇತಿಹಾಸ**. ಬೆಂಗಳೂರು: ಜೂಪಿಟರ್ ಬುಕ್ಸ್
07. ಗೋಪಾಲ್ ಬಾ.ರಾ. (ಪ್ರಸಂ). 1973. **ಎಪಿಗ್ರಾಫಿಯಾ ಕರ್ನಾಟಿಕಾ**– ಸಂಪುಟ 2, ಮೈಸೂರು: ಮೈಸೂರು ವಿವಿ.
08. ದೇವರಕೊಂಡಾರೆಡ್ಡಿ ?. **ಶ್ರವಣಬೆಳಗೊಳದ ಬಸದಿಗಳ ವಾಸ್ತುಶಿಲ್ಪ**. ಶ್ರವಣಬೆಳಗೊಳ: ಚಂದ್ರಗುಪ್ತ ಗ್ರಂಥಮಾಲೆ.
09. ದೇವರಕೊಂಡಾರೆಡ್ಡಿ (ಮು.ಸಂ.). 2018. **ಕರ್ನಾಟಕದ ಜೈನಶಾಸನಗಳು**: ಸಂ. 1, ಹಂಪಿ: ಕನ್ನಡ ವಿಶ್ವವಿದ್ಯಾಲಯ.
10. ಬ್ರಹ್ಮಪ್ಪ ಜಿ. 1988. **ಶ್ರವಣಬೆಳಗೊಳದ ಶಾಸನಗಳು**. ಶ್ರವಣಬೆಳಗೊಳ : ಚಂದ್ರಗುಪ್ತ ಗ್ರಂಥಮಾಲೆ.
11. ವಸಂತಲಕ್ಷ್ಮಿ ಕೆ. 2006. **ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು**. ಬೆಂಗಳೂರು: ಸುಮುಖ ಪ್ರಕಾಶನ.
12. ಶ್ರೀಕಂಠಶಾಸ್ತ್ರಿ. 1965. **ಹೊಯ್ಸಳ ವಾಸ್ತುಶಿಲ್ಪ**. ಮೈಸೂರು: ಮೈಸೂರು ವಿಶ್ವವಿದ್ಯಾಲಯ.
13. ಷ.ಶೆಟ್ಟರ್. 1981. **ಶ್ರವಣಬೆಳಗೊಳ**. ರೂವಾರಿ ಪ್ರಕಾಶನ.
14. ಷೇಕ್ ಅಲಿ ಬಿ. (ಪ್ರಸಂ). 1997. **ಕರ್ನಾಟಕ ಚರಿತ್ರೆ,** ಚರಿತ್ರೆ ಮಾಲೆ 2, ಸಂಪುಟ 2 (ಕ್ರಿ.ಶ. 640–1336) ಪ್ರಸಾರಾಂಗ ಕನ್ನಡ ವಿ.ವಿ ಹಂಪಿ, ವಿದ್ಯಾರಣ್ಯ, ಪು 134.

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: D.N. Yogeeswarappa
Title: giḍaganahaḷḷi gauḍaru

ಗಿಡಗನಹಳ್ಳಿ ಗೌಡರು

ವಿಜಯನಗರ ಸಾಮ್ರಾಜ್ಯ ಪತನ ಹೊಂದಿದ ನಂತರ ಇಡೀ ದಕ್ಷಿಣ ಭಾರತದಲ್ಲಿ ರಾಜಕೀಯ ಅಸ್ಥಿರತೆ, ಗೊಂದಲ ನಿರ್ಮಾಣವಾಯಿತು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಆಡಳಿತಾಧಿಕಾರಿಗಳಾಗಿದ್ದವರು ಈ ಅವಕಾಶವನ್ನು ಉಪಯೋಗಿಸಿಕೊಂಡು ತಮ್ಮ ತಮ್ಮ ಪ್ರದೇಶಗಳಲ್ಲಿ ಇಲ್ಲವೆ ಬೇರೆ ಭೂ ಪ್ರದೇಶಗಳನ್ನು ಅತಿಕ್ರಮಣ ಮಾಡಿಕೊಂಡು ತಮ್ಮ ಬಳಿ ಇದ್ದ ಸಂಪತ್ತು ಮತ್ತು ಸೇನಾ ಸಹಾಯದಿಂದ ಆಳ್ವಿಕೆ ಮಾಡತೊಡಗಿದರು. ಇಂಥಹವರ ಸಾಲಿಗೆ ಗಿಡಗನಹಳ್ಳಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನು ನಿಯಂತ್ರಣದಲ್ಲಿಟ್ಟುಕೊಂಡು ಹಲವು ವರ್ಷಗಳ ಕಾಲ ಆಳ್ವಿಕೆ ಮಾಡಿದವರಲ್ಲಿ ಗಿಡಗನಹಳ್ಳಿ ಗೌಡರೂ ಸೇರುತ್ತಾರೆ.

ಗಿಡಗನಹಳ್ಳಿ ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಒಂದು ಕುಗ್ರಾಮವಾಗಿದೆ. ವಿಜಯನಗರೋತ್ತರ ಕಾಲದಲ್ಲಿ ರತ್ನಗಿರಿ ನಾಯಕರ ಮತ್ತು ಸಿರಾ ನವಾಬರ ಅಧೀನದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸಿದ್ದಾರೆ. ಈ ಗ್ರಾಮವು ಸಿರಾದಿಂದ ಸುಮಾರು 14 ಕಿ.ಮೀ.ಗಳ ಅಂತರದಲ್ಲಿ ಮದಲೂರು–ಅಗಳಿ ಮಾರ್ಗದಲ್ಲಿದೆ. ಈ ಗ್ರಾಮಕ್ಕೆ ರತ್ನಗಿರಿ ಕೇವಲ 6 ಕಿ.ಮೀ.ಗಳ ದೂರದಲ್ಲಿದೆ. ಈಗ ಈ ಊರಿನಲ್ಲಿ ರಂಗನಾಥಸ್ವಾಮಿ ದೇವಾಲಯದ ಜೊತೆಗೆ ಮಹಾಸತಿಕಲ್ಲು ಮತ್ತು

ಡಿ.ಎನ್. ಯೋಗೀಶ್ವರಪ್ಪ
ಸಂಶೋಧಕರು
ಚಿತ್ಕಲಾ, 8ನೇ ಕ್ರಾಸ್
4ನೇ ಮೇನ್
ಸೋಮೇಶ್ವರಪುರಂ
ತುಮಕೂರು.
dnyogeesh@gmail.com

ವೀರಗಲ್ಲು ಇದ್ದು ಈ ಗ್ರಾಮದ ಪ್ರಾಚೀನತೆಗೆ ಸಾಕ್ಷಿಯಾಗಿದೆ. ಇಂದು ಸು. 1000 ಜನಸಂಖ್ಯೆ ಇರುವ ಈ ಹಳ್ಳಿಯಲ್ಲಿ ಕುಂಚಿಟಿಗರು ಮತ್ತು ಆದಿದ್ರಾವಿಡ ಜನಾಂಗದವರೇ ಬಹುಸಂಖ್ಯಾತರಾಗಿದ್ದಾರೆ.

ಅಧ್ಯಯನ

ಇದುವರೆಗೂ ಈ ಗ್ರಾಮದ ಬಗ್ಗೆ ವ್ಯವಸ್ಥಿತವಾದ ಸಂಶೋಧನಾತ್ಮಕ ಅಧ್ಯಯನಗಳು ನಡೆದಿಲ್ಲ. ಆದರೂ ಈ ಊರನ್ನು ಕುರಿತು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ಜನರ ಹೇಳಿಕೆಗಳನ್ನಾಧರಿಸಿ ಟಿಪ್ಪಣಿ ರೂಪದ ಅಧ್ಯಯನವನ್ನು ಮಾಡಲಾಗಿದೆ (ನಂದೀಶ್ವರ 2008ಎ: 218–219 ಮತ್ತು 2008ಬಿ: 27–28). ಕರ್ನಾಟಕ ಜಾನಪದ ವಿಶ್ವವಿದ್ಯಾಲಯದವರು ತಯಾರಿಸಿರುವ ಗ್ರಾಮಚರಿತ್ರೆ ಕೋಶದಲ್ಲಿ ಅಲ್ಪ ಮಾಹಿತಿ ನೀಡಲಾಗಿದೆ. ಇವುಗಳನ್ನು ಹೊರತುಪಡಿಸಿದರೆ ಯಾವ ಲೇಖನಗಳಾಗಲೀ ಇದುವರೆಗೂ ಪ್ರಕಟವಾಗಿಲ್ಲ.

ಆಕರಗಳು

1) ಚರಿತ್ರೆಯ ಪುಟಗಳಲ್ಲಿ ಇದುವರೆಗೂ ಸ್ಥಾನ ಪಡೆಯದೆ ಅಜ್ಞಾತವಾಗಿ ಉಳಿದುಹೋಗಿರುವ ಈ ಗ್ರಾಮದ ಅಧ್ಯಯನಕ್ಕೆ ಅಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳು ಪ್ರಮುಖವಾಗಿವೆ.

2) ಕರ್ನಲ್ ಮೆಕಂಜಿಯ ದಾಖಲೆ : ಕರ್ನಲ್ ಮೆಕಂಜಿಯು ಕ್ರಿ.ಶ. 1754ರಲ್ಲಿ ಸ್ಕಾಟ್‌ಲೆಂಡಿನಲ್ಲಿ ಜನಿಸಿ 1783ರಲ್ಲಿ ಭಾರತಕ್ಕೆ ಬಂದು ಈಸ್ಟ್ ಇಂಡಿಯಾ ಕಂಪನಿಯಲ್ಲಿ ನೌಕರನಾದನು. ಕ್ರಮೇಣ ಕರ್ನಲ್ ಹುದ್ದೆಯವರೆಗೂ ಬಡ್ತಿ ಪಡೆದು ಕ್ರಿ.ಶ. 1821 ಮೇ 8ರವರೆಗೂ ಬದುಕಿದ್ದು ಕಲ್ಕತ್ತಾದಲ್ಲಿ ಮರಣ ಹೊಂದಿದನು. ಈ ಅವಧಿಯಲ್ಲಿ ಅವನು ಸೈನ್ಯ ಕೆಲಸದ ಜೊತೆಗೆ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ತನ್ನ ಆಸಕ್ತಿಯ ಮೇರೆಗೆ ಸಂಗ್ರಹಿಸಿದನು. ಈ ಕೆಲಸದಲ್ಲಿ ಆತನಿಗೆ ಕಾವಲಿಬೋರಯ್ಯ, ಆತನ ತಮ್ಮ ಲಕ್ಷ್ಮಯ್ಯ ಮತ್ತು ಪುಲಿಗುಡ್ಡಮಲ್ಲಯ್ಯ ಅಲ್ಲದೆ ಅನೇಕ ಸ್ಥಳೀಯರು ನೆರವಾದರು. ಮೆಕಂಜಿ ಮರಣ ಹೊಂದಿದ ನಂತರ ಅವನು ಸಂಗ್ರಹಿಸಿದ್ದ ದಾಖಲೆಗಳನ್ನೆಲ್ಲಾ ಬ್ರಿಟೀಷ್ ಸರ್ಕಾರ ಅವನ ಪತ್ನಿಯಿಂದ 10 ಸಾವಿರ ಪೌಂಡ್‌ಗಳಿಗೆ ಖರೀದಿಸಿ 1825ರಲ್ಲಿ ಇಂಗ್ಲೆಂಡಿಗೆ ಕಳುಹಿಸಿತು. ಆ ದಾಖಲೆಗಳು ಈಗ ವಿಕ್ಟೋರಿಯಾ ವಸ್ತು ಸಂಗ್ರಹಾಲಯ ಮತ್ತು ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ಇವೆ.

ಆ ಸಂಗ್ರಹಾಲಯದಲ್ಲಿ ಗಿಡಗನಹಳ್ಳಿಗೆ ಸಂಬಂಧಿಸಿದ ಎರಡು ಪುಟದ ದಾಖಲೆಯಿದೆ. ಮೆಕಂಜಿಯು ಆ ಊರಿಗೆ ನವೆಂಬರ್ 1801ರಲ್ಲಿ ಭೇಟಿ ನೀಡಿ ಅಲ್ಲಿನ ಸ್ಥಳೀಯರಿಂದ ಮಾಹಿತಿ ಪಡೆದುಕೊಂಡಿದ್ದೇನೆ ಎಂದು ಹೇಳಿದ್ದಾನೆ. ಅದನ್ನು ಅವನು "N7 Account of Giddaganahully A subordinate Taraff of serah November 1801" ಶೀರ್ಷಿಕೆಯಡಿ ದಾಖಲಿಸಿದ್ದಾನೆ.

ಈ ದಾಖಲೆಯು "Dahazada of the Serah District for the Rowdree year on AD 1799-1800 communicated by the amuldar at Serah in 1801" ಎಂಬ ದಾಖಲೆಯ ಉಪ ವಿಭಾಗದಲ್ಲಿ ಬರೆಯಲಾಗಿದೆ. ಇದನ್ನು ಗಮನಿಸಿದರೆ ಸಿರಾ ಅಂದು ಜಿಲ್ಲೆಯಾಗಿತ್ತೆಂದು ಹೇಳಬಹುದು. ಈ ಜಿಲ್ಲೆಯನ್ನು ಅಂದು ಒಟ್ಟು ಹನ್ನೊಂದು ತರಫ್‌ಗಳಾಗಿ ವಿಭಜಿಸಲಾಗಿತ್ತು ಎಂದು ಈ ದಾಖಲೆಯ ಆಧಾರದ ಮೇಲೆ ಹೇಳಬಹುದು.

ಈ ದಾಖಲೆಯನ್ನು ಮೆಕಂಜಿಯು ಕ್ರಿ.ಶ. 1801ರಲ್ಲಿ ಸಿರಾ ತರಫ್‌ನಲ್ಲಿ ಬ್ರಿಟಿಷ್ ಸರ್ಕಾರದ ಅಧಿಕಾರಿ ಅಮಲ್ದಾರ್‌ನಿಂದ ಸಂಗ್ರಹಿಸಿದನೆಂದು, ಆದ್ದರಿಂದ ಇದೊಂದು ಅಧಿಕೃತ ಸರ್ಕಾರ ದಾಖಲೆ ಎಂದು ಸ್ಪಷ್ಟಪಡಿಸಬಹುದು. ಹನ್ನೊಂದು ತರಫ್‌ಗಳನ್ನು ಒಳಗೊಂಡಿದ್ದ ಸಿರಾ ಜಿಲ್ಲೆಯ ಸಿರಾ ತರಫ್‌ಗೆ ಗಿಡಗನಹಳ್ಳಿ ಒಳಗೊಂಡಿತ್ತು. ಆ ತರಫ್‌ನ ಪ್ರಮುಖ ಭಾಗವಾಗಿದ್ದ ಆ ಗ್ರಾಮಕ್ಕೆ ಮೆಕಂಜಿಯು ನವೆಂಬರ್ 1801ರಲ್ಲಿ ಸ್ಥಳೀಯರಿಂದ ಸಂಗ್ರಹಿಸಿದ್ದಾನೆ. ಆ ದಾಖಲೆಯ ಕೊನೆಯಲ್ಲಿ ಅವನು ಹೀಗೆ ಹೇಳಿದ್ದಾನೆ.

"N.B. : This account of a very interior district is Given by way of spearmen of hat are prescribed in the hands of the native" ಅಂದರೆ ಸ್ಥಳೀಯರು ನೀಡಿದ ಮಾಹಿತಿಯ ಆಧಾರದ ಮೇಲೆ ಇದನ್ನು ಸಂಗ್ರಹಿಸಿದ್ದನೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಇದನ್ನು ವಿಶ್ವಾಸಾರ್ಹ ದಾಖಲೆಯೆನ್ನಬಹುದು. ಇದನ್ನೇ ಪ್ರಮುಖ ಆಧಾರವಾಗಿಟ್ಟುಕೊಂಡು ಇತ್ತೀಚೆಗೆ ಪ್ರಕಟಗೊಂಡಿರುವ ಅಲ್ಪಸ್ವಲ್ಪ ಮಾಹಿತಿಯ ಜೊತೆಗೆ ವಿಶ್ಲೇಷಣೆ ಮಾಡುತ್ತಾ ಗಿಡಗನಹಳ್ಳಿ ಗೌಡ ಮನೆತನದ ಬಗ್ಗೆ ಪ್ರಬಂಧವನ್ನು ರಚಿಸುವ ಪ್ರಯತ್ನ ಮಾಡಲಾಗಿದೆ. ಇವರು ಅಂದಿನ ರಾಜಕೀಯ ಚರಿತ್ರೆಯಲ್ಲಿ ಸ್ವತಂತ್ರ ಪಾತ್ರ ವಹಿಸದೆ ಇದ್ದರೂ ಕೂಡಾ ಮುಖ್ಯವಾಹಿನಿಯಲ್ಲಿದ್ದ ರಾಜಕೀಯ ಶಕ್ತಿಗಳ ಜೊತೆ ಹೇಗೆ ಹೊಂದಾಣಿಕೆ ಮಾಡಿಕೊಂಡಿದ್ದರು ಎಂಬುದನ್ನು ತಿಳಿಸುವ ಪ್ರಯತ್ನ ಇದರ ಉದ್ದೇಶವಾಗಿದೆ.

ನಾಮ ನಿಷ್ಪತ್ತಿ

ಒಬ್ಬ ವ್ಯಕ್ತಿಯ ಹೆಸರಾಗಲೀ ಅಥವಾ ಒಂದು ಊರಿನ ಹೆಸರಾಗಲೀ ಮಾನವನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವ್ಯಕ್ತಿಗಳಿಗಾಗಲೀ ಅಥವಾ ಗ್ರಾಮಗಳಿಗಾಗಲೀ ಹೆಸರಿರುವ ಪದ್ಧತಿ ಇಲ್ಲದೆಹೋಗಿದ್ದರೆ ಮನುಷ್ಯರ ನಡುವಣ ಆಲೋಚನಾ ಸಂಪರ್ಕಕ್ಕೆ ತೊಂದರೆಯಾಗುತ್ತಿತ್ತು. ಹೆಸರುಗಳಿರುವುದರಿಂದ ವ್ಯಕ್ತಿಗಳನ್ನು, ಸ್ಥಳಗಳನ್ನು ಖಚಿತವಾಗಿ ಗುರ್ತಿಸಬಹುದು. ಹೆಸರುಗಳ ವ್ಯಾವಹಾರಿಕ ಉಪಯೋಗ ಇಷ್ಟೆಲ್ಲಾ ಇದ್ದರೂ ಅವುಗಳ ಮೂಲ ಬದಲಾವಣೆ, ವಿಷಯಗಳ ಬಗ್ಗೆ ಸಾಮಾನ್ಯವಾಗಿ ಜನರು ವಿಚಾರಣೆ ಮಾಡಲು ಹೋಗುವುದಿಲ್ಲ. ಆದರೆ ಈ ರೀತಿಯ ಅಧ್ಯಯನ ಭಾಷೆ, ಸಂಸ್ಕೃತಿಯಂತಹ ವಿಷಯಗಳನ್ನು ತಿಳಿಯಲು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಗಿಡಗನಹಳ್ಳಿಯ ಹೆಸರಿನ ಮೂಲವನ್ನು ಕೆದಕುತ್ತಾ ಹೋದಂತೆ ಇದರ ಹೆಸರಿನ ಸುತ್ತ ಅನೇಕ ದಂತಕಥೆಗಳು, ಐತಿಹ್ಯಗಳನ್ನು ಹೆಣೆಯಲಾಗಿದೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು (ನಂದೀಶ್ವರ್ 2008ಎ).

1. ಮದಲೂರಿನ ಉಪಗ್ರಾಮವಾಗಿರುವ ಗಿಡಗನಹಳ್ಳಿ ಹೆಸರಿನ ಬಗೆಗೆ ಅದೇ ಊರಿನ ಹಿರಿಯರು ಹೇಳುವಂತೆ "ಹಿಂದೆ ಈ ಸ್ಥಳ ದಟ್ಟವಾದ ಕಾಡಿನಿಂದ ಕೂಡಿತ್ತು. ಆ ಕಾಡಿನಲ್ಲಿ ಹುಲಿಗಳಿದ್ದವು. ಆ ಹುಲಿಯನ್ನು ಗಿಡಗನಹಕ್ಕಿ ಕೊಂದುಹಾಕಿತು. ಆ ಸ್ಥಳದಲ್ಲಿ ಈ ಊರು ಕಟ್ಟಿದ್ದರಿಂದ ಗಿಡಗನಹಳ್ಳಿ ಎಂಬ ಹೆಸರು ಬಂತು". ಆದರೆ ಈ ಐತಿಹ್ಯ ವಾಸ್ತವಕ್ಕೆ ದೂರವಾದ ಸಂಗತಿಯಾಗಿದೆ ಏಕೆಂದರೆ ಒಂದು ಪಕ್ಷಿಯೊಂದು ಹುಲಿಯಂತಹ ಬಲಾಢ್ಯವಾದ ಪ್ರಾಣಿಯನ್ನು ಕೊಲ್ಲಲು ಸಾಧ್ಯವೇ? ಎಂಬ ಪ್ರಶ್ನೆ ಮೂಡುವುದು ಸಹಜ. ಇಂತಹ ಘಟನೆಗಳು ಬೇರೆಲ್ಲಿಯೂ ಜರುಗದೆ ಇರುವುದರಿಂದ ಇದೊಂದು ಮಿಥ್ಯೆ ಎಂದು ಸ್ಪಷ್ಟಪಡಿಸಬಹುದು.

2. ಗಿಡಗ ಎಂಬ ವ್ಯಕ್ತಿಯು ಈ ಸ್ಥಳದಲ್ಲಿ ಬಂದು ನೆಲಸಿದ್ದರಿಂದ ಆ ಹಳ್ಳಿಗೆ ಗಿಡಗನಹಳ್ಳಿ ಎಂಬ ಹೆಸರು ಬಂತೆಂದು ಮತ್ತೊಂದು ಐತಿಹ್ಯದಲ್ಲಿ ಹೇಳಲಾಗಿದೆ.

ವ್ಯಕ್ತಿನಾಮಗಳನ್ನು ಪರಿಶೀಲಿಸಿದಾಗ ಸಾಮಾನ್ಯವಾಗಿ ಗಿಡ್ಡ, ಗಿಡ್ಡಗೌಡ, ಗಿಡ್ಡೇಗೌಡ ಎಂಬ ಹೆಸರುಗಳು ಚಾಲ್ತಿಯಲ್ಲಿವೆ. ಆದರೆ ವ್ಯಕ್ತಿಯೊಬ್ಬನಿಗೆ ಗಿಡಗ ಎಂಬ ಹೆಸರು ಎಲ್ಲಿಯೂ ದಾಖಲಾಗಿಲ್ಲ. ಆದ್ದರಿಂದ ಇದೂ ಕೂಡಾ ಸತ್ಯಕ್ಕೆ ದೂರವಾದ ಸಂಗತಿ ಎನ್ನಬಹುದು.

3. ಇನ್ನೊಂದು ಐತಿಹ್ಯದಂತೆ "ಪ್ರಸ್ತುತ ಇರುವ ಗ್ರಾಮದ ಪಕ್ಕ ಇನ್ನೊಂದು ಹಳೆ ಊರು ಇತ್ತು. ಅದು ದಿಣ್ಣೆಯಿಂದ ಸ್ವಲ್ಪದೂರದ ಗಿಡ(ಕಾಡು)ದಲ್ಲಿ ಹಳ್ಳಿ ನಿರ್ಮಿಸಿಕೊಂಡಿದ್ದರಿಂದ ಅದಕ್ಕೆ ಗಿಡಗನಹಳ್ಳಿ ಎಂದು ಕರೆಯಲಾಯಿತೆಂದು ಹೇಳುವರು.

4. ಮೆಕಂಜಿಯವರ ಅಪ್ರಕಟಿತ ಇಂಗ್ಲಿಷ್ ದಾಖಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಮೂರು ಜನ ಸಹೋದರರು ಉತ್ತರದಿಂದ ಕುಟುಂಬ ಸಮೇತರಾಗಿ ವಲಸೆ ಬಂದು ಮದಲೂರು ಕಸಬಾ ಬಳಿಯ ದಟ್ಟವಾದ ಕುರುಚಲು ಕಾಡಿನ ಗಿಡಗಳ ಮಧ್ಯೆ ರೊಪ್ಪವನ್ನು ಹಾಕಿಕೊಂಡು ರತ್ನಗಿರಿ ಪಾಳೇಗಾರರ ಅನುಮತಿ ಪಡೆದುಕೊಂಡು ಕೋಟೆ ಕಟ್ಟಿ ಆ ಕೋಟೆಗೆ ಗಿಡಗನಹಳ್ಳಿ ಎಂದು ಹೆಸರಿಟ್ಟರು ಎಂದು ಹೇಳಲಾಗಿದೆ.

ಈ ಘಟನೆಯಿಂದ ಸ್ಪಷ್ಟಪಡಿಸುವುದೇನೆಂದರೆ ಆರಂಭದಲ್ಲಿ ಈ ಸೋದರರು ಮದಲೂರು ಕಸಬಾ ಬಳಿಯ ದಟ್ಟವಾದ ಕುರುಚಲು ಗಿಡಗಳ ಮಧ್ಯೆ ಇವರು ರೊಪ್ಪವನ್ನು ಹಾಕಿಕೊಂಡು ನೆಲಸಿದ್ದರಿಂದ ಅದರ ವಸತಿ ಪ್ರದೇಶಕ್ಕೆ ಗಿಡದ ಮನೆಯವರು ಎಂದು ಕರೆದಿರಬಹುದು. ಉದಾ : ಊರಿನಿಂದ ಹೊರಭಾಗದಲ್ಲಿನ ತೋಟದ ಒಳಗೆ ಒಂದೆರಡು ಕುಟುಂಬಗಳು ವಾಸವಿದ್ದರೆ ಅವರನ್ನು ತೋಟದ ಮನೆಯವರು ಎಂದು ಈಗಲೂ ಕರೆಯುತ್ತಿರುವುದನ್ನು ನೋಡಬಹುದು. ಅದೇ ರೀತಿ ಆರಂಭದಲ್ಲಿ ಆ ಸೋದರರು ಗಿಡಗಳ ಮಧ್ಯೆ ಅವರು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದುದರಿಂದ ಅವರಿಗೆ ಗಿಡದ ಮನೆಯವರು ಎಂದಿರಬಹುದು. ಕ್ರಮೇಣ ಅವರು ಕೋಟೆ ಕಟ್ಟಿ ಆ ಕೋಟೆಯೊಳಗೆ ಹಲವಾರು ಕುಟುಂಬಗಳು ನೆಲಸಿ ಊರಾಗಿದ್ದುದರಿಂದ ಅದಕ್ಕೆ ಗಿಡದಳ್ಳಿ ಎಂದು ಹೆಸರಾಗಿರಬಹುದು. ಕ್ರಮೇಣ ಅದು ಜನ ಜನರ ನಾಲಗೆಯಲ್ಲಿ ಗಿಡಗನಹಳ್ಳಿ ಆಗಿ ಅದೇ ಮುಂದುವರೆದಿರಬಹುದು ಎಂದು ಊಹಿಸಬಹುದು. ಆದ್ದರಿಂದ ಅದು ಗಿಡದ ಮನೆಯವರು > ಗಿಡದಹಳ್ಳಿ > ಗಿಡಗನಹಳ್ಳಿ ಆಗಿ ರೂಪಾಂತರಗೊಂಡಿರಬಹುದು. ಒಟ್ಟಾರೆ ಇದೊಂದು ಸಸ್ಯವಾಚಿ ಗ್ರಾಮವಾಗಿದೆ ಎನ್ನಬಹುದು.

ಮೂಲ

ಇದರ ಮೂಲವನ್ನು ಕುರಿತು ಹೇಳುವುದಾದರೆ, ಮೆಕಂಜಿಯ ಅಪ್ರಕಟಿತ ದಾಖಲೆಯನ್ನೇ ಅವಲಂಬಿಸಬೇಕಾಗುತ್ತದೆ. ಅದರ ಪ್ರಕಾರ, "Chikka Timmaiah, Nindasai and Thimma three brothers natives of Bejanagar. When the Moghals besieged that country fled with their families and cattle's towards Ruttangerry" ಇದನ್ನು ಪರಿಶೀಲಿಸಿದಾಗ ಅವರನ್ನು ವಿಜಯನಗರದ ನಿವಾಸಿಗಳು ಎಂದು ಹೇಳಲಾಗಿದೆ. ಆದರೆ ಆ ಪ್ರದೇಶವನ್ನು ಮೊಗಲರು ಆಕ್ರಮಿಸಿದಾಗ ಅವರು ತಮ್ಮ ಕುಟುಂಬಗಳ ಮತ್ತು ದನಕರುಗಳ ಜೊತೆ ರತ್ನಗಿರಿ ಪ್ರದೇಶಕ್ಕೆ ವಲಸೆ ಬಂದರೆಂದು ಹೇಳಲಾಗಿದೆ. ಕ್ರಿ.ಶ. 1565ರ ತಾಳಿಕೋಟೆ ಕದನದ ನಂತರ ಇಂತಹ ವಲಸೆಗಳು ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದ ಕಡೆಗೆ ಸಾಮಾನ್ಯವಾಗಿ ಸಂಭವಿಸಿವೆ. ಈ ದಾಖಲೆಯಲ್ಲಿ ಮೊಗಲರು ವಿಜಯನಗರವನ್ನು ಮುತ್ತಿಗೆ ಹಾಕಿದರೆಂದು ಹೇಳಿರುವುದು ಸತ್ಯಕ್ಕೆ ದೂರವಾದ ಸಂಗತಿ. ಏಕೆಂದರೆ ತಾಳಿಕೋಟೆ ಯುದ್ಧದ ಕಾಲದಲ್ಲಿ ಮೊಗಲರು

ಇನ್ನೂ ದಕ್ಷಿಣ ಭಾರತದ ಕಡೆ ತಮ್ಮ ರಾಜ್ಯ ವಿಸ್ತರಣೆ ಮಾಡಿರಲಿಲ್ಲ. ಅಲ್ಲದೆ ಆಗ ಡೆಕ್ಕನ್‌ನಲ್ಲಿ ಷಾಹಿಸುಲ್ತಾನರು ಆಳ್ವಿಕೆ ಮಾಡುತ್ತಿದ್ದರು. ವಿಜಯನಗರದ ಅಳಿಯ ರಾಮರಾಯನ ರಾಜಕೀಯ ಕುತಂತ್ರಗಳು ಷಾಹಿ ಸುಲ್ತಾನರ ಏಕತೆಗೆ ಕಾರಣವಾಗಿ ಅವರು ವಿಜಯನಗರದ ಮೇಲೆ ದಾಳಿ ಮಾಡಿದರು. ಇದನ್ನು ಸ್ಥಳೀಯರು ತಪ್ಪಾಗಿ ಅರ್ಥೈಸಿಕೊಂಡು ಮೆಕಂಜಿಗೆ ಮೊಗಲರು ಎಂದು ಹೇಳಿದ್ದಾರೆ. ಅದನ್ನೇ ಮೆಕಂಜಿಯು ವಿಚಾರ ಮಾಡದೆ ದಾಖಲಿಸಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ಒಟ್ಟಾರೆ ಹೇಳುವುದಾದರೆ ಸಹೋದರರಾದ ಚಿಕ್ಕತಿಮ್ಮಯ್ಯ, ನಿಂದಾಸಯ್ಯ ಮತ್ತು ತಿಮ್ಮ ಉತ್ತರ ಕರ್ನಾಟಕದ ಕಡೆಯಿಂದ ಬಂದವರು. ಅವರ ಊರು ವಿಜಯನಗರವಾಗಿತ್ತು ಎಂದು ಈ ದಾಖಲೆಯ ಮೂಲಕ ಸ್ಪಷ್ಟಪಡಿಸಬಹುದು. ಅಲ್ಲಿ ಅವರು ಯಾವ ವೃತ್ತಿ ಮಾಡುತ್ತಿದ್ದರು ಎಂಬ ಪ್ರಶ್ನೆ ಸಂಶೋಧಕರನ್ನು ಕಾಡುತ್ತದೆ. ಪ್ರಾಯಶಃ ಅವರು ವಿಜಯನಗರದ ಸೈನ್ಯದಲ್ಲಿ ಸೈನಿಕರಾಗಿ ಅಥವಾ ಚಿಕ್ಕ ಅಧಿಕಾರಿಗಳಾಗಿದ್ದಿರಬಹುದು. ಅವರು ಅಧಿಕಾರಿಗಳಾಗಿದ್ದರೆ ವಿಜಯನಗರದಲ್ಲಿ ನೆಲಸಿ ಅಲ್ಲಿಯೇ ಕಛೇರಿಯನ್ನು ಹೊಂದಿರುತ್ತಿದ್ದರು. ಆದರೆ ಅವರು ಗೋವುಗಳನ್ನು ಸಾಕುವ ವೃತ್ತಿಯನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಈ ದೃಷ್ಟಿಯಿಂದ ಹೇಳುವುದಾದರೆ ಅವರು ವಿಜಯನಗರದ ಸಮೀಪದಲ್ಲಿ ನೆಲಸಿದ್ದು ಕೃಷಿ ವೃತ್ತಿ ಮಾಡುತ್ತಾ ಗೋವುಗಳನ್ನು ಪಾಲಿಸುತ್ತಿದ್ದಿರಬಹುದು. 1565ರ ತಾಳಿಕೋಟೆ ಕಾಳಗದಲ್ಲಿ ಇವರು ವಿಜಯನಗರದ ಪರವಾಗಿ ಭಾಗವಹಿಸಿ, ಷಾಹಿ ಸುಲ್ತಾನರ ಸೈನ್ಯ ವಿಜಯನಗರಕ್ಕೆ ನುಗ್ಗಿದಾಗ ಅವರು ಹೆದರಿ ತಮ್ಮ ಕುಟುಂಬ ಮತ್ತು ಗೋವುಗಳ ಸಮೇತ ಈ ಪ್ರದೇಶಕ್ಕೆ ಬಂದಿದ್ದಾರೆ ಎಂದು ಹೇಳಬಹುದು.

ಒಟ್ಟಾರೆ ಹೇಳುವುದಾದರೆ ವಿಜಯನಗರದ ಸಮೀಪದಲ್ಲಿ ಕೃಷಿಯನ್ನೇ ಉದ್ಯೋಗ ಮಾಡಿಕೊಂಡಿದ್ದ ಮೂರುಜನ ಸಹೋದರರಾದ ಚಿಕ್ಕತಿಮ್ಮಯ್ಯ, ನಿಂದಾಸಯ್ಯ ಮತ್ತು ತಿಮ್ಮ ವಿಜಯನಗರವನ್ನು ಷಾಹಿ ಸುಲ್ತಾನರು ಆಕ್ರಮಿಸಿಕೊಂಡಾಗ ಅವರಿಗೆ ಹೆದರಿ ತಮ್ಮ ಕುಟುಂಬ ಮತ್ತು ಗೋವುಗಳ ಸಮೇತ ತಮ್ಮ ರಕ್ಷಣೆಗೋಸ್ಕರ ಸುರಕ್ಷಿತ ಸ್ಥಳವನ್ನು ಹುಡುಕಿಕೊಂಡು ರತ್ನಗಿರಿಯ ಬಳಿಗೆ ವಲಸೆ ಬಂದರೆಂದು ಸ್ಪಷ್ಟಪಡಿಸಬಹುದು. ಆನಂತರ ಅವರು ಈ ಸ್ಥಳದಲ್ಲಿ ಏನು ಮಾಡಿದರೆಂಬುದನ್ನು ಈ ಇಂಗ್ಲಿಷ್ ದಾಖಲೆಯಿಂದ ಈ ರೀತಿ ಸಂಗ್ರಹಿಸಿ ವಿಶ್ಲೇಷಣೆ ನೀಡಲಾಗಿದೆ.

"ರತ್ನಗಿರಿಯಲ್ಲಿ ಪಾಳೆಯಗಾರರು ಆಳ್ವಿಕೆ ನಡೆಸುತ್ತಿದ್ದರು. ಅವರಿಗೆ ಸೇರಿದ್ದ ಮದಲೂರು ಸ್ಥಳದ ಪಶ್ಚಿಮ ಭಾಗಕ್ಕೆ ಆ ಸಹೋದರರು ಬಂದು ನೀರಿನ ಸೌಕರ್ಯ ಇದ್ದ ಸ್ಥಳಕ್ಕಾಗಿ ಹುಡುಕಾಟ ನಡೆಸಿ ಅಂತಿಮವಾಗಿ ಪ್ರಸ್ತುತ ಗಿಡಗನಹಳ್ಳಿ ಪ್ರದೇಶ ಅಂದು ದಟ್ಟವಾದ ಅರಣ್ಯದಿಂದ ಕೂಡಿದ್ದು ತಮಗೂ ಮತ್ತು ತಮ್ಮ ಗೋವುಗಳಿಗೂ ಸುರಕ್ಷಿತವಾದ ಪ್ರದೇಶವೆಂದು ಭಾವಿಸಿ, ಅಲ್ಲಿನ ಕಾಡನ್ನು ಕಡಿದು ಅಲ್ಲಿಯೇ ವಾಸಕ್ಕೆ ಯೊಗ್ಯವಾದ ರೊಪ್ಪವನ್ನು ನಿರ್ಮಿಸಿ ತಾತ್ಕಾಲಿಕವಾಗಿ ನೆಲೆಸಿದರು. ಅವರಿಗೆ ಆ ಸ್ಥಳ ಸೂಕ್ತವೆನಿಸಿದ್ದರಿಂದ ನಿಧಾನವಾಗಿ ತಮ್ಮ ರೊಪ್ಪದ ಸುತ್ತಲಿನ ಪ್ರದೇಶದಲ್ಲಿದ್ದ ಮರಗಳನ್ನೆಲ್ಲಾ ಕಡಿದು ಆ ಭೂಮಿಯನ್ನು ಕೃಷಿಯೋಗ್ಯವಾದ ಭೂಮಿಯನ್ನಾಗಿ ಪರಿವರ್ತಿಸಿ ಅಲ್ಲಿಯೇ ಕೃಷಿ ಮಾಡುತ್ತಾ ಖಾಯಂ ಆಗಿ ನೆಲೆಸಿದರು".

ಇದೇ ಸಮಯದಲ್ಲಿ ರತ್ನಗಿರಿಯಲ್ಲಿ ಸರ್ಜಾ ರಂಗಪ್ಪನಾಯಕನು ಆಳ್ವಿಕೆ ಮಾಡುತ್ತಿದ್ದನು. ಅವನು ಅವನ ಪೂರ್ವಿಕರು ನಿರ್ಮಿಸಿದ್ದ ಸಿರಾ ಕೋಟೆಯನ್ನು ತನ್ನ ವಶದಲ್ಲಿಟ್ಟುಕೊಂಡು ಆಳ್ವಿಕೆ ನಡೆಸುತ್ತಿದ್ದನು. ರತ್ನಗಿರಿ ಅವನ ಆಡಳಿತ ಕೇಂದ್ರವಾಗಿದ್ದರೂ,

ಸಿರಾವನ್ನು ತನ್ನ ಉಪರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಇವನನ್ನು ಮೆಕಂಜಿಯ ಇಂಗ್ಲಿಷ್ ದಾಖಲೆಯು "ಖಚಿಡಿರಿಚಿ ಖಚಿರಿಚಿ ಖಚಿಟಿರಚಿರಿರಿಚಿ ಓಚಿಥಿಚಿಞ ಠಜಿ ಊಚಿಡಿಣಜಜ ಠಜಿ ಣಟಜ ಖಚಿಟಿಣಚಿಟಿ ಠಜಿ ಣಟಜ ಖಚಿಣಣಚಿಟಿರಚಿಡಿಡಿಥಿ" ಅಂದರೆ ಇವನು ರತ್ನಗಿರಿ ಸಂಸ್ಥಾನದಲ್ಲಿ ಹರತಿಯ ಸರ್ಜಾ ರಾಜ ರಂಗಪ್ಪ ನಾಯಕನ ಆಳ್ವಿಕೆ ಇತ್ತೆನ್ನಬಹುದು. ಇವನ ಕಾಲವು ಮೂಲಗಳ ಪ್ರಕಾರ (ವಸು 2001: 265).

ರತ್ನಗಿರಿ ರಂಗಪ್ಪನಾಯಕ (1520–1542)

|

ದೊಡ್ಡ ಕಸ್ತೂರಿ ರಂಗಪ್ಪನಾಯಕ (1542–1585)

|

ಸರ್ಜಾ ರಂಗಪ್ಪನಾಯಕ (1585–1638)

ಇವನ ಆಳ್ವಿಕೆಯ ಕಾಲದಲ್ಲಿ ವಲಸೆ ಬಂದು ಮದಲೂರು ಬಳಿ ವಾಸ್ತವ್ಯ ಹೂಡಿದ್ದ ಸಹೋದರರ ಮೇಲೆ ಅಲ್ಲಿನ ಸ್ಥಳೀಯರು ರತ್ನಗಿರಿ ಪಾಳೆಯಗಾರರಿಗೆ ದೂರೊಂದನ್ನು ನೀಡಿದರೆಂದು ಮೆಕಂಜಿಯ ದಾಖಲೆಯು ಉಲ್ಲೇಖಿಸಿದೆ.

ಯಾರೋ ಕೆಲ ಅಪರಿಚಿತ ವ್ಯಕ್ತಿಗಳು ತಮ್ಮ ಅನುಮತಿ ಇಲ್ಲದೆ ತಮಗೆ ಸೇರಿದ ಪ್ರದೇಶದಲ್ಲಿ ರೊಪ್ಪವನ್ನು ಹಾಕಿಕೊಂಡು ಸುತ್ತಲಿನ ಪ್ರದೇಶದಲ್ಲಿ ವ್ಯವಸಾಯ ಮಾಡಿಕೊಂಡು ವಾಸಿಸುತ್ತಿದ್ದಾರೆ. ಇದರಿಂದ ರಾಜನು ಅಸಂತುಷ್ಟಗೊಂಡು ಆ ಮೂರು ಜನ ಸೋದರರನ್ನು ತಮ್ಮ ಬಳಿಗೆ ಕರೆತರುವಂತೆ ಆದೇಶಿಸಿದನು. ಈ ಸಂದರ್ಭದಲ್ಲಿ ಮಂತ್ರಿಯು ಮದಲೂರು ಕಸಬಾದಲ್ಲಿದ್ದ ಅಮಲ್ದಾರರಿಗೆ ಇದರ ಬಗ್ಗೆ ವಿಚಾರಿಸಿ ಅವರನ್ನು ರತ್ನಗಿರಿಗೆ ಕರೆತರುವಂತೆ ಹೇಳಿದನು. ಆದ್ದರಿಂದ ಅಮಲ್ದಾರನು ಮೂರೂ ಜನ ಸೋದರರನ್ನು ಸೆರೆಹಿಡಿದು ರತ್ನಗಿರಿಗೆ ಕಳುಹಿಸಿದನು.

ಹೀಗೆ ಸೆರೆಹಿಡಿಯಲ್ಪಟ್ಟ ಆ ಸೋದರರನ್ನು ರತ್ನಗಿರಿಗೆ ಕರೆದೊಯ್ದು ಅಲ್ಲಿ ಪಾಳೇಗಾರನ ಸಮ್ಮುಖದಲ್ಲಿ ವಿಚಾರಣೆ ನಡೆದದ್ದನ್ನು ಮೆಕಂಜಿಯ ಅದೇ ಇಂಗ್ಲಿಷ್ ದಾಖಲೆಯಿಂದ ಹೀಗೆ ಸಂಗ್ರಹಿಸಬಹುದು. "ಪಾಳೇಗಾರ ರಾಜಾ ಸರ್ಜಪ್ಪನಾಯಕ ಆ ಸೋದರರನ್ನು ತಮ್ಮ ಬಳಿಗೆ ಕರೆದು ತಾವು ಯಾರು? ಎಲ್ಲಿಂಗ ಯಾವಾಗ ಬಂದಿರಿ? ಎಲ್ಲಿ ವಾಸವಾಗಿದ್ದೀರಿ? ಎಂದು ಕೇಳಿದಾಗ ಅವರು ಅದಕ್ಕೆ ಷಾಹಿ ಸುಲ್ತಾನರು ವಿಜಯನಗರದ ಮೇಲೆ ಆಕ್ರಮಣ ಮಾಡಿದಾಗ ನಾವು ಅಲ್ಲಿಂದ ತಪ್ಪಿಸಿಕೊಂಡು ಕುಟುಂಬ ಪರಿವಾರ ಸಮೇತ ದಾನ ಧರ್ಮಕ್ಕೆ ಹೆಸರುವಾಸಿಯಾಗಿದ್ದ ರತ್ನಗಿರಿ ಸಂಸ್ಥಾನದ ಕಡೆ ಬಂದು ತಾವಿರುವ ಈಗಿನ ಸ್ಥಳದಲ್ಲಿ ನೀರಿನ ವಸತಿ ಇದ್ದುದರಿಂದ ಕಾಡನ್ನು ಕಡಿದು ರೊಪ್ಪವನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದೇವೆ ಎಂದು ಹೇಳಿದರು. ಅವರ ಈ ಉತ್ತರದಿಂದ ಸಂತೋಷಗೊಂಡ ಪಾಳೆಯಗಾರನು ಆ ಸಹೋದರರಿಗೆ ಅಲ್ಲಿ ಕೋಟೆಯನ್ನು ಕಟ್ಟಿ ಎಷ್ಟು ಸಾಧ್ಯವೋ ಅಷ್ಟು ಭೂಮಿಯನ್ನು ಉಳುಮೆ ಮಾಡುವಂತೆ ಆದೇಶಿಸಿದನು. ಇದಕ್ಕೆ ಆ ಸಹೋದರರು ಯಾವುದೇ ಸಹಾಯವಿಲ್ಲದೆ ಕೋಟೆಯನ್ನು ಕಟ್ಟಲು ಹೇಗೆ ಸಾಧ್ಯ ಎಂದು ಉತ್ತರಿಸಿದಾಗ, ಪಾಳೇಗಾರನು ಅವರಿಗೆ ಮತ್ತಷ್ಟು ಕೃಷಿಭೂಮಿಯನ್ನು ದತ್ತಿಯಾಗಿ ನೀಡಿ ಉತ್ತೇಜಿಸಿದನು."

ಒಟ್ಟಾರೆ ಹೇಳುವುದಾದರೆ ವಿಜಯನಗರದ ಕಡೆಯಿಂದ ಆಗಮಿಸಿದ್ದ ಈ ಸಹೋದರರ ಪ್ರಾಮಾಣಿಕತೆಯನ್ನು ಮೆಚ್ಚಿದ್ದೇ ಅಲ್ಲದೆ ಅವರು ತಮ್ಮ ಸಂಸ್ಥಾನದ ಬಗ್ಗೆ ಇಟ್ಟುಕೊಂಡಿದ್ದ ಭಾವನೆಗಳಿಗೆ ಮಾರುಹೋಗಿ ಅವರಿಗೆ ಭೂದಾನವನ್ನು ನಾಯಕತನಕ್ಕೆ ನೀಡುವುದರ

ಮೂಲಕ ನೆಲೆಯನ್ನು ಕಲ್ಪಿಸಿ ಅವರನ್ನು ತನ್ನ ಸಂಸ್ಥಾನದ ಅಧಿಕಾರಿ ವರ್ಗವನ್ನಾಗಿ ಮಾಡಿಕೊಂಡನೆಂದು ತೀರ್ಮಾನಿಸಬಹುದು.

ಹೀಗೆ ರತ್ನಗಿರಿಯಿಂದ ತಮ್ಮ ನಿವಾಸ ಪ್ರದೇಶಕ್ಕೆ ಆಗಮಿಸಿದ ಆ ಸೋದರರು ಅಲ್ಲಿ ಕೋಟೆಯನ್ನು ಕಟ್ಟಿ ಅದಕ್ಕೆ ಗಿಡಗನಹಳ್ಳಿ ಎಂದು ಹೆಸರಿಟ್ಟರೆಂದು ಮೆಕಂಜಿಯ ದಾಖಲೆಯು ತಿಳಿಸುತ್ತದೆ. ಅದೇ ದಾಖಲೆಯಿಂದ ಮುಂದಿನ ವಿವರಗಳನ್ನು ಸಂಗ್ರಹಿಸಬಹುದು. ಕೋಟೆ ನಿರ್ಮಾಣವಾದ ನಂತರ ಅಲ್ಲಿಗೆ ಜನರು ನೆಲಸುವಂತೆ ಪ್ರೇರೇಪಿಸಿದರು. ಈ ಸೋದರರಲ್ಲಿ ಒಬ್ಬನಾದ ಚಿಕ್ಕತಿಮ್ಮಯ್ಯನು ರತ್ನಗಿರಿಗೆ ಅಧೀನರಾಗಿ ನಡೆದುಕೊಳ್ಳುತ್ತಾ ಅವರೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡನು. ಅಂತಿಮವಾಗಿ ಗಿಡಗನಹಳ್ಳಿಗೆ ಕೆಲವು ಪ್ರದೇಶಗಳನ್ನು ಜೋಡಿಸಿ, ಅಲ್ಲಿಂದ ಕಂದಾಯ ವಸೂಲಿ ಮಾಡುವ ಮತ್ತು ಚಿಕ್ಕ ಸೇನೆಯನ್ನಿಟ್ಟುಕೊಳ್ಳುವ ಅವಕಾಶ ಮಾಡಿಕೊಟ್ಟನು. ಇದರಿಂದ ಗಿಡಗನಹಳ್ಳಿ ಗೌಡರು ರತ್ನಗಿರಿಯುವರಿಗೆ ವಾರ್ಷಿಕವಾಗಿ 60 ಪಗೋಡಾಗಳನ್ನು ಪೊಗದಿಯಾಗಿ ನೀಡಲಾರಂಭಿಸಿದರು. ಹೀಗೆ ಚಿಕ್ಕತಿಮ್ಮಯ್ಯನ ಕಾಲದಲ್ಲಿ ಗಿಡಗನಹಳ್ಳಿ ರತ್ನಗಿರಿಯವರಿಂದ ಆಡಳಿತ ಕೇಂದ್ರದ ಮಾನ್ಯತೆ ಪಡೆದುಕೊಂಡಿತು. ಇಂತಹ ಪ್ರದೇಶವನ್ನು ಸು. 70 ವರ್ಷಗಳ ಕಾಲ ಅವನು ಗೌಡನಾಗಿ ಆಳ್ವಿಕೆ ನಡೆಸಿ ಕ್ರಿ.ಶ. 1635ರಲ್ಲಿ ಮರಣ ಹೊಂದಿದನು. ನಂತರ ಆತನ ಮಗ ಕರಿಯಣ್ಣನು ಗೌಡನಾಗಿ ಆಳ್ವಿಕೆ ಆರಂಭಿಸಿದನು.

ಕರಿಯಣ್ಣ

ಇದೇ ಸಂದರ್ಭದಲ್ಲಿ ಸರ್ಜಾ ರಂಗಪ್ಪರಾಜನ ರತ್ನಗಿರಿ ಸಂಸ್ಥಾನಕ್ಕೆ ಸಿರಾ ಕೂಡ ಸೇರಿತ್ತು. ಸಿರಾ ಆಯಕಟ್ಟಿನ ಸ್ಥಳವಾಗಿದ್ದು ಅಂದು ಬಿಜಾಪುರ ಮತ್ತು ಬೆಂಗಳೂರಿನ ನಡುವಿನ ಹೆದ್ದಾರಿ ಬಳಿ ಇದ್ದ ಪಟ್ಟಣವಾಗಿತ್ತು. ರತ್ನಗಿರಿ ಕೋಟೆಯನ್ನು ಅವರು ಹೇಗೆ ಅಭಿವೃದ್ಧಿಪಡಿಸಿದ್ದರೋ ಅದೇ ರೀತಿಯಲ್ಲಿ ರಂಗಪ್ಪರಾಜನು ಅಭಿವೃದ್ಧಿಪಡಿಸಲು ಪ್ರಯತ್ನಿಸಿದನು. ಇವರು ಸಂತೆಬೆನ್ನೂರು, ಹರತಿ, ದೊಡ್ಡೇರಿ, ನಿಡುಗಲ್ ಪಾಳೇಗಾರರ ಸಂಬಂಧಿಕರಾಗಿದ್ದರು. ಆದರೆ ಸಂತೆಬೆನ್ನೂರಿನ ಕೆಂಗಾಹನುಮಪ್ಪ ನಾಯಕನಿಗೂ ಮತ್ತು ರತ್ನಗಿರಿ–ಸಿರಾದ ನಾಯಕನಾದ ರಂಗಪ್ಪರಾಜನಿಗೂ ಕ್ರಮೇಣ ವೈಷಮ್ಯ ಬೆಳೆಯಿತು. ಈ ಸಮಯದಲ್ಲಿ ಆದಿಲ್‌ಶಾಹಿ ದಂಡನಾಯಕನಾದ ರಣದುಲ್ಲಾಖಾನನು ಮೈಸೂರು ಅರಸರ ಮೇಲೆ ದಾಳಿ ಮಾಡಲು ಸಿದ್ಧತೆ ನಡೆಸಿಕೊಂಡಿದ್ದನು. ಅದಕ್ಕೆ ಮೊದಲು ಬಲಿಯಾದದ್ದು ಸಂತೆಬೆನ್ನೂರು. ಅಲ್ಲಿನ ನಾಯಕನಾದ ಕೆಂಗಾಹನುಮಪ್ಪನು ಸಿರಾ–ರತ್ನಗಿರಿಯವರ ಮೇಲೆ ವೈಯಕ್ತಿಕ ಸೇಡು ತೀರಿಸಿಕೊಳ್ಳಲು ರಣದುಲ್ಲಾಖಾನನನ್ನು ಬಳಸಿಕೊಂಡು ಸಿರಾದ ಮೇಲೆ ದಾಳಿ ಮಾಡುವಂತೆ ಪ್ರಚೋದಿಸಿದನು ಮತ್ತು ಖಾನನಿಗೆ ಅಲ್ಲಿನ ಎಲ್ಲಾ ರಹಸ್ಯಗಳನ್ನು ತಿಳಿಸಿ ಮಾರ್ಗವನ್ನು ತೋರಿಸಿದನು. ಇದರಿಂದ ಖಾನನು ಸಿರಾದ ಮೇಲೆ ದಾಳಿ ಮಾಡಿದನು. ದಾಳಿಯಲ್ಲಿ ಸಿರಾ–ರತ್ನಗಿರಿಯವರ ಪರವಾಗಿ ಗಿಡಗನಹಳ್ಳಿ ಗೌಡರು ಭಾಗವಹಿಸಿದ್ದರು. ಆದರೆ ಈ ದಾಳಿಯಲ್ಲಿ ಸರ್ಜಾರಂಗಪ್ಪ ನಾಯಕನು ಮರಣಹೊಂದಿದನು. ಸಿರಾ ರಣದುಲ್ಲಾಖಾನನ ವಶವಾಯಿತು. ನಂತರ ಈ ಪ್ರಾಂತ್ಯಕ್ಕೆ ಬಿಜಾಪುರದ ಆದಿಲ್ ಶಾಹಿಗಳು ಮಲ್ಲೀಕ್‌ರಿಹಾನ್ ಎಂಬುವನನ್ನು ಆಡಳಿತ ನಿರ್ವಹಿಸಲು ತಮ್ಮ ಪ್ರತಿನಿಧಿಯನ್ನಾಗಿ ನೇಮಕ ಮಾಡಿದರು. ಹೀಗೆ ಗಿಡಗನಹಳ್ಳಿಯು ಮಲ್ಲೀಕ್‌ರಿಹಾನನ ಆಡಳಿತಕ್ಕೆ ಒಳಪಟ್ಟಿತು. ಇವರು ತಮಗೆ ನೆಲೆ ಒದಗಿಸಿ ಅಧಿಕಾರದ ಸ್ಥಾನಮಾನವನ್ನು ಕೊಟ್ಟ ರತ್ನಗಿರಿ ನಾಯಕರ ಮೇಲೆ ಒಲವಿದ್ದರೂ ಅಂದಿನ ಸಂದರ್ಭದಲ್ಲಿ ಅಸಹಾಯಕರಾಗಿದ್ದ ಮತ್ತು ಸಿರಾದ ಮುಸ್ಲಿಂ ಸುಬೇದಾರನಾದ ಮಲ್ಲೀಕ್‌ರಿಹಾನನನ್ನು ಎದುರಿಸುವ ಶಕ್ತಿ ಇಲ್ಲದೆ ಇದ್ದುದರಿಂದ

ರತ್ನಗಿರಿಯವರಿಗೆ ಸಹಾಯ ಮಾಡಲು ಸಾಧ್ಯವಾಗಲಿಲ್ಲ.

ಹೀಗೆ ಕರಿಯಣ್ಣನು ಒಟ್ಟು 50 ವರ್ಷಗಳು ಆಳ್ವಿಕೆ ಮಾಡಿ ಕ್ರಿ.ಶ. 1685ರಲ್ಲಿ ಮರಣ ಹೊಂದಿದನು. ಅವನ ಅಧಿಕಾರದ ಅವಧಿಯಲ್ಲಿ ಸಿರಾದ ಮಲ್ಲೀಕ್‌ರಿಹಾನನಿಗೆ ಚಾಚೂತಪ್ಪದೆ ರತ್ನಗಿರಿಯವರ ಪರವಾಗಿ ಪೊಗದಿ ನೀಡುತ್ತಿದ್ದನು. ಆತನು ಕ್ರಿ.ಶ. 1651ರಲ್ಲಿ ಮರಣ ಹೊಂದಿದ ನಂತರ ಸಿರಾದಲ್ಲಿ ರಾಜಕೀಯ ಅಸ್ಥಿರತೆ ಉಂಟಾಯಿತು. ಇದು ಕೆಲವೊಮ್ಮೆ ಮೊಗಲರ ಅಥವಾ ಮರಾಠರ ದಾಳಿಗಳಿಗೆ ತುತ್ತಾದಾಗ ಕರಿಯಣ್ಣನು ನಿರ್ಲಿಪ್ತನಾಗಿದ್ದು ತನ್ನ ಪ್ರಾಂತ್ಯವನ್ನು ಕಾಪಾಡಿಕೊಂಡನು. ನಂತರ ಆತನ ಮಗ ತಿಮ್ಮಯ್ಯನು ಗಿಡಗನಹಳ್ಳಿ ಗೌಡನಾದನು.

ತಿಮ್ಮಯ್ಯ (1685–1745)

ಇವನ ಅಧಿಕಾರದ ಕಾಲದಲ್ಲಿ ಗಿಡಗನಹಳ್ಳಿ ಸಿರಾದ ಸುಬೇದಾರರ ಆಳ್ವಿಕೆಗೆ ಒಳಪಟ್ಟಿತ್ತು. ಬಿಜಾಪುರದ ಆದಿಲ್ ಶಾಹಿ ಸಾಮ್ರಾಜ್ಯವು ಮೊಗಲರ ಔರಂಗಜೇಬನ ವಶವಾದ ನಂತರ ಅವರು ಸಿರಾವನ್ನು ಏಳು ಪರಗಣಗಳ ಆಡಳಿತ ಕೇಂದ್ರವನ್ನಾಗಿ ಮಾಡಿ ಅದರ ಅಧಿಕಾರ ನಡೆಸಲು ಖಾಸಿಂಖಾನ್ ಎಂಬುವನನ್ನು ನೇಮಕ ಮಾಡಿದರು. ಈತನು ರತ್ನಗಿರಿ ಪಾಳೆಯಗಾರರೊಂದಿಗೆ ಸೌಹಾರ್ಧಯುತ ಸಂಬಂಧವನ್ನಿಟ್ಟುಕೊಂಡು ರತ್ನಗಿರಿ ಪಾಳೆಯಗಾರರನ್ನು ಪುನಃ ಅವರ ರಾಜ್ಯದಲ್ಲಿ ಪ್ರತಿಷ್ಠಾಪಿಸಿದರು. ಈ ಅವಧಿಯಲ್ಲಿ ಗಿಡಗನಹಳ್ಳಿಯನ್ನು ರತ್ನಗಿರಿಯವರಿಗೆ ನೀಡಲಾಯಿತು. ಅಂದಿನಿಂದ ಅವರು ರತ್ನಗಿರಿ ಪಾಳೆಯಗಾರರಿಗೆ ಮೊದಲಿನಂತೆ ವಾರ್ಷಿಕ ಪೊಗದಿ ನೀಡಲಾರಂಭಿಸಿದರು.

ಸಿರಾದಲ್ಲಿ ದಿಲಾವರ್ ಖಾನನ (1742–1756) ಆಳ್ವಿಕೆ ಆರಂಭವಾದ ನಂತರ ರತ್ನಗಿರಿ ಮತ್ತು ಸಿರಾದವರ ನಡುವಿನ ಸಂಬಂಧ ಹದಗೆಟ್ಟಿತು. ಆದ್ದರಿಂದ ದಿಲಾವರ್ ಖಾನ್ ರತ್ನಗಿರಿ ಮೇಲೆ ದಾಳಿಮಾಡಿ ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಕೊಳ್ಳೆಹೊಡೆದನು. ಆಗ ಅಂತಿಮವಾಗಿ ರತ್ನಗಿರಿಯವರಿಗೆ ಅವರ ರಾಜ್ಯದ ಅರ್ಧಭಾಗವನ್ನು ಮಾತ್ರ ಅವರಿಗೆ ಬಿಟ್ಟುಕೊಟ್ಟನಾದರೂ ಗಿಡಗನಹಳ್ಳಿಯನ್ನು ಸಿರಾಕ್ಕೆ ಸೇರಿಸಿಕೊಂಡನೆಂದು ಮೆಕಂಜಿಯ ದಾಖಲೆಯು ತಿಳಿಸುತ್ತದೆ. ಹೀಗೆ ರತ್ನಗಿರಿಯವರೊಂದಿಗೆ ಉತ್ತಮ ಸಂಬಂಧವಿದ್ದ ಗಿಡಗನಹಳ್ಳಿ ತಿಮ್ಮಯ್ಯನು ಸಿರಾದ ಸುಬೇದಾರರ ಅಧೀನಕ್ಕೆ ಒಳಪಟ್ಟನು. ಅವರು ನಿಗದಿಪಡಿಸಿದ್ದ ಪೊಗದಿಯನ್ನು ಸಿರಾದವರಿಗೆ ನೀಡುತ್ತಾ ಆಳ್ವಿಕೆ ಮಾಡಿ 1745ರಲ್ಲಿ ಮರಣ ಹೊಂದಿದನು. ತಿಮ್ಮಯ್ಯನಿಗೆ ರಂಗಪ್ಪ ಮತ್ತು ಚಿಕ್ಕತಿಮ್ಮಯ್ಯ ಎಂಬ ಇಬ್ಬರು ಪುತ್ರರಿದ್ದರು. ಅವನ ಮರಣದ ನಂತರ ಗಿಡಗನಹಳ್ಳಿಯಲ್ಲಿ ರಂಗಪ್ಪನ ಆಳ್ವಿಕೆ ಆರಂಭವಾಗುತ್ತದೆ.

ರಂಗಪ್ಪ ಮತ್ತು ಚಿಕ್ಕತಿಮ್ಮಯ್ಯನವರ ಆಳ್ವಿಕೆ

ಈ ವೇಳೆಗೆ ಮೊಗಲ್ ಸಾಮ್ರಾಜ್ಯ ಅವನತಿಯತ್ತ ಸಾಗಿ ಷಾಹಿ ಸುಲ್ತಾನರ ಬಲ ಸಂಪೂರ್ಣವಾಗಿ ಕುಗ್ಗಿತ್ತು. ಅದರೆ ಮರಾಠರು ಮತ್ತು ನಿಜಾಮರು ಪ್ರಬಲರಾಗಿದ್ದರು. ಆಗ ಮರಾಠ ಸಾಮ್ರಾಜ್ಯದ ಚಕ್ರವರ್ತಿ ನೆಪಮಾತ್ರವಾಗಿದ್ದು ಅವರ ಪ್ರಧಾನ ಮಂತ್ರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದ ಪೇಶ್ವೆಗಳು ಬಹಳ ಪ್ರಬಲರಾಗಿದ್ದರು. ಅದೇ ರೀತಿ ಮೈಸೂರಿನಲ್ಲಿಯೂ ಕೂಡ ರಾಜರು ಹೆಸರಿಗೆ ಮಾತ್ರ ಇದ್ದು ನಿಜವಾದ ಅಧಿಕಾರ ದಳವಾಯಿಗಳ ಕೈಯಲ್ಲಿತ್ತು. ಇಂತಹ ರಾಜಕೀಯ ಸನ್ನಿವೇಶದಲ್ಲಿ ಮರಾಠರ ಪೇಶ್ವೆಗಳು ಉತ್ತರ ಭಾರತವನ್ನು ಗೆಲ್ಲಲು ಸಂಪನ್ಮೂಲ ಬೇಕಾಗಿತ್ತು. ಅದನ್ನು ಕ್ರೋಢೀಕರಿಸಲು

ಕರ್ನಾಟಕದ ವಿವಿಧ ಪ್ರಾಂತ್ಯಗಳ ಮೇಲೆ ದಾಳಿ ಮಾಡಿದರು. ಇಂತಹ ದಾಳಿಗಳನ್ನು ಸಂಘಟಿಸಿದವನು ಬಾಲಾಜಿ ಬಾಜಿರಾವ್. ಅವನು ನಾನಾಜಿರಾವನ ನೇತೃತ್ವದಲ್ಲಿ ದಕ್ಷಿಣ ಭಾಗಗಳನ್ನು ಗೆಲ್ಲಲು ಸೈನ್ಯವನ್ನು ಕಳುಹಿಸಿದನು. ಅಂತಹ ಮರಾಠರ ದಾಳಿಗೆ ಸಿರಾ, ಗಿಡಗನಹಳ್ಳಿ ಪ್ರದೇಶಗಳು ಬಲಿಯಾದವು. ಸಿರಾದ ದಿಲಾವರ್ ಖಾನನ ಆಳ್ವಿಕೆ ಮತ್ತು ಗಿಡಗನಹಳ್ಳಿಯಲ್ಲಿ ರಂಗಪ್ಪನು ಮರಣ ಹೊಂದಿದ್ದು, ಅವನ ಸಹೋದರನಾದ ಚಿಕ್ಕತಿಮ್ಮಯ್ಯನ ಆಳ್ವಿಕೆ ಇತ್ತು. ಮರಾಠರಿಗೂ ಮತ್ತು ಸಿರಾದ ನವಾಬ ದಿಲಾವರ್ ಖಾನನ ನಡುವೆ ಯುದ್ಧ ಸಂಭವಿಸಿತು. ಗಿಡಗನಹಳ್ಳಿಯ ಚಿಕ್ಕತಿಮ್ಮಯ್ಯನೂ ಕೂಡ ಸಿರಾದವರ ಪರವಾಗಿ ಭಾಗಿಯಾಗಿದ್ದನು. ಆದರೆ ಯುದ್ಧದಲ್ಲಿ ದಿಲಾವರ್‌ಖಾನನು ಮರಣ ಹೊಂದಿದನು (ಕ್ರಿ.ಶ. 1756). ಚಿಕ್ಕತಿಮ್ಮಯ್ಯನ ಸಮೇತ ಸಿರಾದ ಪರವಾಗಿ ಯುದ್ಧದಲ್ಲಿ ಭಾಗಿಯಾಗಿದ್ದವರೆಲ್ಲಾ ಮರಾಠರಿಗೆ ಶರಣಾದರು. ಎಲ್ಲ ಪ್ರದೇಶಗಳು ಮರಾಠರ ವಶವಾದವು. ಅಂದಿನಿಂದ ಗಿಡಗನಹಳ್ಳಿ ಗೌಡರು ಮರಾಠರ ಅಧೀನಕ್ಕೆ ಒಳಪಟ್ಟರೆಂದು ಮೆಕಂಜಿಯ ದಾಖಲೆ ತಿಳಿಸುತ್ತದೆ.

ಕ್ರಿ.ಶ. 1756 ರಿಂದ 1761 ರವರೆಗೆ ಮರಾಠರ ಅಧೀನಕ್ಕೆ ಒಳಪಟ್ಟಿದ್ದ ಗಿಡಗನಹಳ್ಳಿಯ ಗೌಡರು ಅವರಿಗೆ ನಿಷ್ಠರಾಗಿದ್ದರು. ಇದೇ ವೇಳೆಗೆ ಮೈಸೂರು ಸಂಸ್ಥಾನದಲ್ಲಿ 1761ರಲ್ಲಿ ದಿಂಡಿಗಲ್ಲಿನ ಪೌಜುದಾರನಾಗಿ ಹೈದರಾಲಿಯ ಮೈಸೂರು ಅರಸರನ್ನು ಮತ್ತು ದಳವಾಯಿಗಳನ್ನು ಮೂಲೆಗೊತ್ತಿ ಪ್ರಬಲನಾಗಿದ್ದನು. ಇವನು ಉತ್ತರದಿಂದ ಬರುತ್ತಿದ್ದ ಮರಾಠರ ಆಕ್ರಮಣವನ್ನು ತಡೆಗಟ್ಟುವ ಪ್ರಯತ್ನದಲ್ಲಿದ್ದನು. ಇಂತಹ ಸನ್ನಿವೇಶದಲ್ಲಿ ಸಿರಾದಲ್ಲಿ ಮರಾಠರ ಆಳ್ವಿಕೆ ಇತ್ತು. ಅವರನ್ನು ಅಲ್ಲಿಂದ ಹೊರದೂಡಲು ಹೈದರಾಲಿಯು ಸೇನಾಸಮೇತನಾಗಿ ಸಿರಾದ ಮೇಲೆ ಆಕ್ರಮಣ ಮಾಡಿದನು. ಮೂರು ತಿಂಗಳ ಕಾಲ ಹೋರಾಟ ನಡೆಸಿ ಅಲ್ಲಿದ್ದ ಮರಾಠ ಅಧಿಕಾರಿ ಬಾಪೋಜಿ ನಾನಾನನ್ನು ಹೊರದೂಡಿ ಸಿರಾವನ್ನು ಗೆದ್ದುಕೊಂಡನು. ಚಿಕ್ಕತಿಮ್ಮಯ್ಯನು ಗಿಡಗನಹಳ್ಳಿಯ ಗೌಡನಾಗಿದ್ದು ಹೈದರಾಲಿಯ ಅಧೀನಕ್ಕೆ ಒಳಗಾದನು. ಸುಮಾರು 30 ವರ್ಷಗಳ ಕಾಲ ಗಿಡಗನಹಳ್ಳಿಯಲ್ಲಿ ಗೌಡನಾಗಿದ್ದ ಇವನು 1785ರಲ್ಲಿ ಮರಣ ಹೊಂದಿದನು.

ಕರಿಯಣ್ಣ (ಕ್ರಿ.ಶ. 1785 ರಿಂದ 1801)

ಈ ಮನೆತನದ ಕೊನೆಯ ಗೌಡನಾದ ಕರಿಯಣ್ಣನು ಚಿಕ್ಕತಿಮ್ಮಯ್ಯನ ಮಗ. ಸಣ್ಣಪುಟ್ಟ ಪಾಳೆಯಪಟ್ಟುಗಳ ದ್ವೇಷಿಯಾಗಿದ್ದ ಟಿಪ್ಪುಸುಲ್ತಾನನ ಆಳ್ವಿಕೆಯ ಕಾಲದಲ್ಲಿ ಮತ್ತೊಮ್ಮೆ ಸಿರಾ ಗಿಡಗನಹಳ್ಳಿಗಳು ಟಿಪ್ಪುವಿನ ಆಕ್ರಮಣಕ್ಕೆ ತುತ್ತಾದವು. ಹೀಗೆ ಟಿಪ್ಪುಸುಲ್ತಾನನ ಆಡಳಿತವನ್ನು ಒಪ್ಪಿಕೊಂಡ ಗೌಡರು ಕ್ರಿ.ಶ. 1799ರವರೆಗೂ ಅವನ ಅಧೀನದಲ್ಲಿದ್ದರು. 4ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಅಂತ್ಯವಾದ ನಂತರ ಗಿಡಗನಹಳ್ಳಿಯ ಕರಿಯಣ್ಣನು ಇನ್ನು ಇದರ ಗೌಡನಾಗಿ ಮುಂದುವರೆದಿದ್ದಾನೆ ಎಂದು ಮೆಕಂಜಿ ದಾಖಲೆಯು ತಿಳಿಸುತ್ತದೆ.

ಒಟ್ಟಾರೆ ಹೇಳುವುದಾದರೆ, ಗಿಡಗನಹಳ್ಳಿ ಗೌಡ ಮನೆತನ ಒಂದು ಚಿಕ್ಕ ಮನೆತನವಾಗಿದ್ದರೂ ಅಂದಿನ ರಾಜಕೀಯ ಸನ್ನಿವೇಶದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸಿ ಸು. 200 ವರ್ಷಗಳ ಕಾಲ ರತ್ನಗಿರಿ ಪಾಳೇಗಾರರು, ಸುಬೇದಾರರು, ಮರಾಠರು, ಹೈದರ್ ಮತ್ತು ಮೈಸೂರು ಅರಸರಿಗೆ ನಿಷ್ಠರಾಗಿ ಅಧಿಕಾರ ನಡೆಸಿದರು. ಇವರ ಈ ದೀರ್ಘ ಆಳ್ವಿಕೆಗೆ ಅವರಲ್ಲಿದ್ದ ಮುತ್ಸದ್ದಿತನವೇ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಆಕರ ಸೂಚಿ:

1. "N7 Account of Giddaganahully A subordinate Taraff of serah November 1801" (ಅಪ್ರಕಟಿತ) ಮೆಕಂಜಿ ಸಂಗ್ರಹಿಸಿದ ಕೈಬರಹದ ಈ ದಾಖಲೆಯು ಇಂಗ್ಲೆಂಡಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿದೆ.
2. ನಂದೀಶ್ವರ ಎನ್. 2008ಎ. **ಸಿರಾ ತಾಲ್ಲೂಕು ದರ್ಶನ**. ಸಿರಾ: ಪೂರ್ಣಚಂದ್ರ ತೇಜಸ್ವಿ ಪ್ರಕಾಶನ.
3. ನಂದೀಶ್ವರ ಎನ್. 2008ಬಿ. **ಸಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು**. ಸಿರಾ: ಪೂರ್ಣಚಂದ್ರ ತೇಜಸ್ವಿ ಪ್ರಕಾಶನ.
4. ವಸು ಎಂ.ವಿ. (ಸಂ.). 2001. **ದಕ್ಷಿಣ ಕರ್ನಾಟಕದ ಅರಸು ಮನೆತನಗಳು**. ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಅನುಬಂಧ –1

ಗಿಡಗನಹಳ್ಳಿ ಗೌಡರ ವಂಶಾವಳಿ

(ಮೆಕಂಜಿ ದಾಖಲೆಯನ್ನಾಧರಿಸಿ)

ಚಿಕ್ಕತಿಮ್ಮಯ್ಯ – ನಿಂದಾಸಯ್ಯ – ತಿಮ್ಮಯ್ಯ
(ಕ್ರಿ.ಶ. 1565–1635)

|

ಕರಿಯಣ್ಣ
(ಕ್ರಿ.ಶ. 1635–1685)

|

ತಿಮ್ಮಯ್ಯ
(ಕ್ರಿ.ಶ. 1685–1745)

|

ರಂಗಪ್ಪ (ಕ್ರಿ.ಶ. 1745–1755) – ಚಿಕ್ಕತಿಮ್ಮಯ್ಯ (ಕ್ರಿ.ಶ. 1755–1785)

|

ಕರಿಯಪ್ಪ
(ಕ್ರಿ.ಶ. 1785 – 1801ರಲ್ಲಿಯೂ ಮುಂದುವರಿದಿದ್ದಾನೆ)

N7 Account of Giddaganahully A subordinate Taraff of serah

November-1801

The ground where this village now stands was formerly covered with a thick jungle, Chikka Timmaiah, nindaasiah and Timma three brothers Natives of Beejanagar. When the Moguls besieged that country fled with their families & cattle towards ruttangerry. On their arrival on the west of the cusba of madaloor they found a good watering place in this jungle and the 3 brothers consulting together cut down the jungle and made this a roppah (or hamlet of a few straw thatched huts) enclave with a hedge they cut down the jungle around the Rooppah and brought the ground in to culture. Soon after this in the time of Sarja raja Rangappa Naik of Hurtee of the Samastan of Ruttangerry conplaint was made to the Rajah that some unknown persons had fixed themselves in this jungle and had cultivated the ground near it without permission of the Rajah was displeased & ordered the three brothers to be brought before him on this occasion. The Rajah expressed himself harshly to his ministers on his neglect observing that as unknown people fixed themselves and cultivated his ground. No enquiry was made in his country that they were & by what outhority they ploughed the soil. In like manner 17 robbers plundered his dominion. No one would enquire in to such enormities. The minister then sent to the Aumuldar of cusbe Madaloor & soon after the 3 brothers were brought to the cachari.

The raja then collects them near him and asked when they came and where they lived. The brothers replied that when the Mogals besieged Beejanagar. They had escaped with their families and hearing the reputation of the Ruttengeery samstan for charity they had therefore chosen to go this as a place of refuge. But on this was meeting a good place for water in his dominions they had cut down the jungle & were now cultivating there. Among the jungle having truly stated their circumstances to the Rajah. He was pleased with the brothers and ordered them to build a Fort. Permitting them to cultivate as much of the ground as possible. Then Timmanna asked of the Rajah how could be build a fort without same assistance, on which the Rajah ammenced some cultivated ground to his Rooppah & the brothers

took leave of the Rayal and went to their places. Sometime after they built the fort and gave it the name of Giddagenehally they soon peopled the village and continued to reside there.

After this the ruttengeery poleegar demanded from them a Tribute which they submitted to & from that time Timmanah paid a Tribute of 60 pagodas to ruttengerry. Timmanah lived at Giddaganahully 70 years.

After his death his son Karyapah an able man undertook the charge of his ancestors & was appointed in the room of his father. He paid tribute to the polligars; he manged for 50 years after his death his son Timmanah was appointed

Sometime after Deelawar khan came & conquered all these countries. When he came to Ruttengerry the polligars agreed to give up to Dillawas Khan half his country & search among these Districts. Then Deelawar khan took possession of seerah & half the country belonging to ruttingerry. Giddaganahully was continued under serah under its former possession timmanah. On his death he left two sons Rangapah & Chicktimmaiah Rungappah succeeded in the room of his father.

AD 1756

In his time the Mharatta Naunajee Row invaded the country with an army and besieged Deelawar khan in serah. When Naunajee row took serah the Giddaganahully manager Rungapah was then dead & his brother chickatimmaiah managed during the government of the mharattas. Hyder naik came from Seringapatam and laid siege to serah which he took after a siege of 3 months from Baupojee sanaa who held for the Mharattas.

AD 1761

Chicka timmaiah was gouda of Goddaganahully for thirty years. After his death his son Caryapa held it in the government of Tippoo. After the English Bahauders took Seringapatam Caryapa was goud of Giddaganahully.

The Giddaganahully Account is ended.

N.B. This account of a very inferior District is governed by way of spearmen of what are prescrued in the hands of the Natives. ■

ITIHASA DARPANA (Quarterly)
A Peer Reviewed Journal of Historical Research in Kannada
ISSN 2321-3590
Book No.: 40-41
January – June: 2019
Author: A.B. Vaggar
Title: kittūru saṃsthānada dattu samasyege sambandhisida briṭiṣ patragaḷu

ಕಿತ್ತೂರ ಸಂಸ್ಥಾನದ ದತ್ತು ಸಮಸ್ಯೆಗೆ ಸಂಬಂಧಿಸಿದ ಬ್ರಿಟಿಷ ಪತ್ರಗಳು

ಎ.ಬಿ. ವಗ್ಗರ
ಸಹಾಯಕ ಪ್ರಾಧ್ಯಾಪಕರು
ಶ್ರೀ ಸಿದ್ಧೇಶ್ವರ ಸರಕಾರಿ ಪ್ರಥಮ ದರ್ಜೆ ಕಾಲೇಜು
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ನರಗುಂದ, ಗದಗ ಜಿಲ್ಲೆ.

1857–58ರ ಮಹಾದಂಗೆಗಿಂತ ಪೂರ್ವದಲ್ಲಿ ದೇಶಾದ್ಯಂತ ಹಲವಾರು ಕಡೆಗಳಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಬ್ರಿಟಿಷ ವಿರೋಧಿ ಬಂಡಾಯಗಳು ನಡೆದಿವೆ. ಇವುಗಳಲ್ಲಿ ಕಿತ್ತೂರ ಸಂಸ್ಥಾನದಲ್ಲಿನ ಬಂಡಾಯ ಒಂದಾಗಿದೆ. ಇಲ್ಲಿನ ಬಂಡಾಯವನ್ನು ಸ್ಥೂಲವಾಗಿ ನೋಡಿದಾಗ ಮೂರು ಹಂತಗಳಲ್ಲಿ ಗುರ್ತಿಸಬಹುದು. 1824ರಲ್ಲಿ ಚೆನ್ನಮ್ಮಳ ಅವಧಿಯಲ್ಲಿ ದತ್ತು ಪಡೆಯುವ ಸಲುವಾಗಿ ನಡೆದ ಹೋರಾಟ, ಇದು ಸಂಸ್ಥಾನದ ಅಸ್ತಿತ್ವವನ್ನೆ ಕೊನೆಗೊಳಿಸಿತು. ಇದರ ಮುಂದುವರಿಕೆಯಾಗಿ ಪ್ರಾರಂಭಗೊಂಡ ಸಂಗೊಳ್ಳಿ ರಾಯಣ್ಣನ ಹೋರಾಟ ಅವನ ನಂತರವೂ ಕಿತ್ತೂರ ಪ್ರದೇಶದಲ್ಲಿ ಜೀವಂತವಾಗುಳಿಯಿತು. ಆತನ ಸಹಚರರು ಮತ್ತು ಕಿತ್ತೂರಿನ ಇತರೆ ಬಂಟರು ಸೇರಿ 1857ರ ಸಂದರ್ಭದಲ್ಲಿಯೂ ಕೂಡ ಮತ್ತೇ ದೇಸಾಯಿಯ ಅಧಿಪತ್ಯೆ ಸ್ಥಾಪನೆ ಮಾಡುವ ಹೋರಾಟ ಮುಂದುವರೆಸಿದ್ದನ್ನು ಕಾಣುತ್ತೇವೆ. ಈ ಕೊನೆಯ ಹೋರಾಟಕ್ಕೆ ಟಿಪ್ಪು ಸುಲ್ತಾನನ ಮಗನು ಸ್ಪಂದಿಸಿದ್ದನೆಂಬ ಮಾಹಿತಿ ನಮಗೆ ಬ್ರಿಟಿಷ್ ದಾಖಲೆಗಳಿಂದ ತಿಳಿದು ಬರುತ್ತದೆ.

ಮೊದಲನೆಯ ಹಂತವಾಗಿ 1824ರಲ್ಲಿ ದತ್ತು ಪ್ರಸಂಗಕ್ಕೆ ಸಂಬಂಧಿಸಿದ ಮತ್ತು ಬಂಡಾಯ ಕುರಿತು ಮೊತ್ತ ಮೊದಲು **The Asiatic Journal Vol-III, New Series Sept-Dec 1830,**

London-1830ರಲ್ಲಿ 'Occurrences at Kittur in 1824' ಎಂಬ ಲೇಖನ ಪ್ರಕಟಗೊಂಡಿತು. ನಂತರ **The Asiatic Journal Vol-I, Third Series May-Oct 1843, London-1843**ರಲ್ಲಿ **The Kittur Insurrection in 1824** ಲೇಖನ ಪ್ರಕಟಗೊಂಡಿತು. ಜೊತೆಗೆ H.H.Wilson- **The History of British India from 1805 to 1835,** London-1858. F.J.Goldsmid- James Outram-**A Biography Vol-I,** London-1881. J.S.Cotton-**Mountsturart Elphinstone-and the making of South-Western India, 1892.** W.W.Hunter- **The Thackerays in India and some Calcutta Graves,** London-1897. Lewis Melville, **The Life of William Makepeace Thackeray,** Vol-I, London-1899. ಪುಸ್ತಕಗಳು ಪ್ರಕಟಗೊಂಡವು. ಈ ವಸಾಹತುಶಾಹಿ ಬರೆಹಗಳಲ್ಲಿ ದತ್ತು ಪ್ರಸಂಗದ ಸತ್ಯತೆ ಬಗ್ಗೆ ಥ್ಯಾಕರೆಯಲ್ಲಿ ಉಂಟಾದ ಸಂದೇಹವನ್ನೆ ಇವರು ಉಲ್ಲೇಖಿಸುತ್ತಾರೆ. ಆದರೆ ಇದೇ ಘಟನೆಯನ್ನು ಕುರಿತು ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸ ಮಂಡಲ, ಬೈಲಹೊಂಗಲ ಇದರಿಂದ 1947ರಲ್ಲಿ ಪ್ರಕಟಗೊಂಡ **ಕಿತ್ತೂರ ಬಂಡಾಯ** ಪುಸ್ತಕದಿಂದ ಹಿಡಿದು ಸಾಕಿ (ಸಾಕೇತ ರಾಜನ್) ರಚಿಸಿದ **Making History**ವರೆಗೆ ಪ್ರಕಟಗೊಂಡ ಎಲ್ಲ ಬರೆಹಗಳಲ್ಲಿ ಕಿತ್ತೂರನ್ನು ಕಬಳಿಸುವ ಉದ್ದೇಶವನ್ನು ಬ್ರಿಟಿಷರು ಹೊಂದಿದ್ದರು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ದತ್ತು ಪ್ರಸಂಗಕ್ಕೆ ಸಂಬಂಧಿಸಿದ ಬ್ರಿಟಿಷರ ಸರಣಿ ಪತ್ರಗಳನ್ನು ಕನ್ನಡಕ್ಕೆ ಅನುವಾದಿಸಿ ನೀಡುವ ಪ್ರಯತ್ನವನ್ನು ಮಾತ್ರ ಮಾಡಲಾಗಿದೆ, ಇವುಗಳ ವಿಶ್ಲೇಷಣೆಯನ್ನು ಮಾಡಲು ಹೋಗುವುದಿಲ್ಲ.

ಕಿತ್ತೂರ ದತ್ತು ಸಮಸ್ಯೆಯ ಚರ್ಚೆಯನ್ನು 28 ಜುಲೈ 1818ರಂದು (P.D 1824 V.No. 18/162 S-73 p.13) ಸರ್ ಥಾಮಸ್ ಮನ್ರೋ ದೇಸಾಯಿಗೆ ನೀಡಿದ ಸನದನಿಂದ ಪ್ರಾರಂಭಿಸುವುದಾದರೆ, ಸನದಿನ 10ನೇ ಪ್ಯಾರಾಗ್ರಾಫಿನಲ್ಲಿ – "ಶಾಮೂರಿನ ವಾರ್ಷಿಕ ಪೇಶಕುಶ್(ನರಘುರ್/ಕಾಣಿಕೆ) ರೂಪಾಯಿ 1,75,000 ನಿಮ್ಮಿಂದ ವಸೂಲು ಮಾಡಲಾಗುವುದು ಹಾಗೂ ಸಂಸ್ಥಾನವನ್ನು ನಿಮ್ಮ ಮಕ್ಕಳಿಗೆ ಮುಂದುವರಿಸಲಾಗುವುದು ಮತ್ತು ಅವರ ಮಕ್ಕಳಿಗೂ (ಅವರ ಮೊಮ್ಮಕ್ಕಳು) ಹೀಗೆ ತಲೆಮಾರಿನಿಂದ ತಲೆಮಾರಿಗೆ ಮುಂದುವರಿಸಲಾಗುವುದು" ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿತ್ತು.

ನಂತರ ಶಿವಲಿಂಗ ರುದ್ರ ಸರ್ಜಾ ಪ್ರತಾಪ ರಾವ್ ಶಿಮಶೇರ್‌ಸಿಂಗ್ ಬಹಾದುರ್ ಸರ್‌ದೇಸಾಯಿ ತನಗೆ ಗಂಡು ಸಂತಾನ ಇಲ್ಲದ್ದರಿಂದ ದತ್ತು ಪಡೆಯುವುದಕ್ಕಾಗಿ ಜಾನ್ ಥ್ಯಾಕರೆಗೆ ಪತ್ರ ಬರೆದನು. ಅದರಲ್ಲಿ–"ಜನರಲ್ ವೆಲ್ಲೆಸ್ಲಿ ಮತ್ತು ನನ್ನ ತಂದೆ ಅಪ್ಪಾಸಾಹೇಬರ ಮಧ್ಯೆ ಮೈತ್ರಿ ನೆಲೆಸಿರುತ್ತದೆ. ನನ್ನ ಮತ್ತು ಇಬ್ಬರೂ ಗವರ್ನರ್‌ರ ನಡುವಣ, ಅಷ್ಟೇ ಅಲ್ಲ ಕಮಿಷನರ್ ಹಾಗೂ ನಿಮ್ಮ ಮಧ್ಯೆ ನಿರಂತರವಾಗಿ ಸುರಕ್ಷಿತವಾಗಿರಿಸಲಾದ ಹಾಗೂ ಬಲಗೊಂಡಿರುವ ಆ ಭಾವನೆಯು ಇಂದಿನವರೆಗೂ ಮುಂದುವರೆದಿದ್ದು ಆ ಸಂದರ್ಭದಲ್ಲಿ ನಾನು ನೆಲೆ ನಿಲ್ಲುವ ಅವಶ್ಯಕತೆ ಇಲ್ಲ.

ಅತೀವ ಅನಾರೋಗ್ಯದಿಂದ ಬಳಲುತ್ತಿದ್ದು ಮತ್ತು ಅಶಕ್ತನಾಗಿದ್ದು ಸಂಸ್ಥಾನಕ್ಕೆ ನನ್ನ ವಾರಸುದಾರನನ್ನು ನೇಮಕ ಮಾಡುವ ಇಚ್ಛೆ ಹೊಂದಿದ್ದೇನೆ. ಈ ಉದ್ದೇಶದಿಂದ ಮಲ್ಲಸರ್ಜಾ ಪ್ರತಾಪ ರಾವ್ ಶಮಶೇರ್ ಜಂಗ್ ಬಹಾದೂರ್‌ನನ್ನು ಹುಬ್ಬಳ್ಳಿಯ ಸರ್‌ದೇಸಾಯಿ ಸರ್‌ದೇಶಪಾಂಡೆ ಹಾಗೂ ನಾಡಗೌಡ, ಆಜಂ ನಗರ್ ತರಫ್, ಖಾನಾಪೂರ, ತರಫ್ ಚಾಂದಗಡ, ತರಫ್ ಸೂಪಾ ಸರ್‌ದೇಸಾಯಿ ಸರ್‌ದೇಶಪಾಂಡೆ ಮತ್ತು ಸರ್‌ದೇಸಾಯಿ

ಸರ್‌ದೇಶಪಾಂಡೆ ಕರಿಯತ್ ದೇವರ ಹುಬ್ಬಳ್ಳಿ, ಮಹಲ್ ಮತ್ತು ಸಂಸ್ಥಾನದ ಉತ್ತರಾಧಿಕಾರಿಯಾಗಿ ಎಂದು ನೇಮಕ ಮಾಡಿದ್ದೇನೆ ಹಾಗೂ ಮುದ್ರೆಯೊಂದಿಗೆ ದೃಢೀಕರಿದ್ದೇನೆ.

ಸಂಸ್ಥಾನವನ್ನು ಅವನಿಗೆ ಮುಂದುವರಿಸುವುದು ಘನವಂತರಾದ ತಮ್ಮ ಕೃಪೆಗೆ ಬಿಟ್ಟದ್ದು. ಅದು ನನ್ನ ವಾರಸುದಾರರು ಮತ್ತು ನನ್ನಿಂದ ಹಾಗೂ ತಮ್ಮ ಔದಾರ್ಯದಿಂದ ಅನುಭೋಗಿಸಲಾಗುತ್ತಿದೆ.

ಸಂಸ್ಥಾನವು ಆರಂಭದಿಂದ ಪ್ರಶ್ನಾತೀತವಾಗಿ ತಮ್ಮದಾಗಿದ್ದು, ಮಗುವಿಗೆ ಮುಂದುವರಿಸಲಾಗುವುದು ಎನ್ನುವುದು ಹೆಚ್ಚು ವಿಶ್ವಾಸಾರ್ಹವೆಂದು ನಾನು ಭಾವಿಸುತ್ತೇನೆ". ಎಂದು 10 ಜುಲೈ 1824ರಲ್ಲಿ ಬರೆದ ಪತ್ರವನ್ನು ಥ್ಯಾಕರೆಗೆ ಕಳಿಸಲಾಯಿತು. ಈ ಪತ್ರ ಕುರಿತು ಥ್ಯಾಕರೆ ದಿನಾಂಕ 14 ಸೆಪ್ಟೆಂಬರ್ 1824ರಂದು ಪೂನಾದಲ್ಲಿನ ಕಮಿಶನರ್ ವಿಲಿಯಂ ಚಾಪ್ಲಿನ್‌ರಿಗೆ ಪತ್ರ ಬರೆದು ತನ್ನ ಸಂದೇಹಗಳನ್ನು ವ್ಯಕ್ತಪಡಿಸಿದನು (P.D 1824 V.No. 18/162 S-63 p.3).

ಅವುಗಳೆಂದರೆ:

1. ಕಿತ್ತೂರಕರ್‌ನ ಮುಖ್ಯ ಸೇವಕರಲ್ಲಿ ಒಬ್ಬನಾದ ಕುನ್ನೂರ್ ಮಲ್ಲಪ್ಪನು ತನ್ನ ಪ್ರಭುವು ಮರಣಾಸನ್ನನಾಗಿದ್ದಾನೆ ಎಂದು ತಿಳಿಸಲು ಹಾಗೂ ದತ್ತಕ ಪುತ್ರನನ್ನು ಘೋಷಿಸುವ ಪತ್ರವನ್ನು – ಅದರ ಒಂದು ಪ್ರತಿಯನ್ನು ನಾನು ಸಾದರಪಡಿಸುತ್ತಿದ್ದೇನೆ – ತಲುಪಿಸಲು 12ನೇ ತಾರೀಖಿನ ಮಧ್ಯಾಹ್ನ ನನ್ನ ಬಳಿ ಬಂದಿದ್ದನು. ಪತ್ರದ ಮೇಲೆ 10ನೇ ತಾರೀಖು ಎಂದಿತ್ತು ಅಷ್ಟೊತ್ತಿಗೆ ದತ್ತಕ ವಿಧಿಯು ಪೂರ್ಣಗೊಂಡಿದೆ ಎಂದು ಅದು ಉಲ್ಲೇಖಿಸಿತ್ತು.

2. ಮಲ್ಲಪ್ಪನು 12ನೇ ತಾರೀಖಿನಂದು ಕಿತ್ತೂರ ಬಿಡುವ ಸಂದರ್ಭದಲ್ಲಿ ದೇಸಾಯಿಗೆ ಪ್ರಜ್ಞೆ ಇದ್ದಿರಲಿಲ್ಲ ಆದರೆ, ದತ್ತಕ ಸಮಾರಂಭ ಅಂದು ಬೆಳಿಗ್ಗೆ ನೆರವೇರಿತು ಹಾಗೂ ಅದರ ಗೌರವಾರ್ಥ ತೋಪಿನ ಗುಂಡು ಹಾರಿಸಿ ವಂದನೆ ಸಲ್ಲಿಸಲಾಯಿತು.

3. ದೇಸಾಯಿಯ ಮರಣದ ಸುದ್ದಿಯ ಹಲವಾರು ವರದಿಗಳು ಕೇಳಿ ಬಂದರೂ ವಿಧಿವತ್ತಾದ ದತ್ತಕ ಸಮಾರಂಭ ನಡೆದಿಲ್ಲವೆನ್ನುವುದನ್ನು ನಂಬುವುದಕ್ಕೆ ಬಲವಾದ ಕಾರಣವಿದ್ದಾಗ್ಯೂ ಸಿವಿಲ್ ಸರ್ಜನ್ ಅವನ ಒಡೆಯನನ್ನು ಭೇಟಿ ಮಾಡುವುದು ಉಚಿತವಲ್ಲವೆ ಎಂದು ನಾನು ಮಲ್ಲಪ್ಪನನ್ನು ಕೇಳಿದೆನು. ಅದಕ್ಕೆ ಅವನು ಹೌದೆಂದಾಗ ಸಿವಿಲ್ ಸರ್ಜನ್ ಡಾ.ಬೆಲ್‌ನನ್ನು ಕಿತ್ತೂರಿಗೆ ಧಾವಿಸಬೇಕು ಎಂದು ವಿನಂತಿಸಿಕೊಂಡೆ. ಆ ಸಾಹೇಬರು ತಕ್ಷಣವೇ ಹಾಗೆ ಮಾಡಿದರು. ಆದರೆ ಪಾಳೇಗಾರ ಆಗಲೇ ಮರಣವಪ್ಪಿದ್ದಾನೆ ಎಂದು ಮೃತ ದೇಹ ನೋಡಿದೊಡನೆ ಅವರಿಗೆ ಗೊತ್ತಾಯಿತು. ಮಲ್ಲಪ್ಪ ಕಿತ್ತೂರ ಬಿಡುವ ಮೊದಲೇ ಸಾವು ಸಂಭವಿಸಿತ್ತು ಎಂದು ನಿರ್ಣಯಿಸುವುದಕ್ಕೆ ಬಲವಾದ ಕಾರಣವಿತ್ತು. ಆದ್ದರಿಂದ ದೇಸಾಯಿ ದತ್ತಕ ತೆಗೆದುಕೊಳ್ಳಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರೆ ಅವನು ಅನುಮತಿ ಪಡೆದಿದ್ದ ಎನ್ನುವುದರ ಬಗ್ಗೆ ಬಲವಾದ ಸಂದೇಹ ಇದ್ದಿರಬಹುದು.

4. ಮೇ ತಿಂಗಳಲ್ಲಿ ಕೊಲ್ಹಾಪುರದಿಂದ ನನ್ನ ವಾಪಸಾತಿ ನಂತರ ನಾನು ತನಗೆ ವೈದ್ಯಕೀಯ ನೆರವು ರವಾನಿಸಬೇಕು ಹಾಗೂ ಧಾರವಾಡಕ್ಕೆ ಹೋಗುವಾಗ

ದಾರಿಯಲ್ಲಿ ನಾನು ತನ್ನನ್ನು ಕಿತ್ತೂರಲ್ಲಿ ಭೇಟಿ ಮಾಡಬೇಕೆಂದು ದೇಸಾಯಿ ವಿನಂತಿಸಿಕೊಂಡನು. ಅವನ ವಿನಂತಿ ಮನ್ನಿಸಿದೆ. ಮೇ 18ರಂದು ಅವನೊಂದಿಗೆ ದೀರ್ಘ ಮಾತುಕತೆ ಮಾಡಿದೆ. ಅವನು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದರೂ ತನ್ನ ವ್ಯವಹಾರಗಳನ್ನು ಬಿಚ್ಚು ಮನಸ್ಸಿನಿಂದ ಮಾತಾಡಿದಾಗ್ಯೂ ದತ್ತಕದ ವಿಷಯವಾಗಿ ಸಂಪೂರ್ಣ ಮೌನ ತಾಳಿದ್ದ.

5. ದೇಸಾಯಿಯ ಸೇವಕರ ಕುತಂತ್ರಗಳೇನೇ ಇದ್ದರೂ ಅವರಿಗೆ ಆ ಬಗ್ಗೆ ಆತಂಕವಿತ್ತೆಂದು ಭಾವಿಸಬಹುದಾದರೂ ತಮ್ಮ ಒಡೆಯನ ಸಾವಿನ ಸಂದರ್ಭದಲ್ಲಿ ದತ್ತಕ ತೆಗೆದುಕೊಳ್ಳಲು ಅವನು ಸರ್ಕಾರದಿಂದ ಅನುಮತಿ ಪಡೆಯಲು ಯಶಸ್ವಿಯಾಗಲಿಲ್ಲ ಎಂದು ಅವರು ಹೇಳಿಕೊಳ್ಳಬಹುದು. ಆ ವಿಷಯವಾಗಿ ಘೋಷಣೆ ಮಾಡಬೇಕು ಎನ್ನುವುದರ ಬಗ್ಗೆ ಕೇವಲ ಅರಿವಿನ ಕೊರತೆಯಿಂದಾಗಿ ಆರು ವಾರಗಳ ಹಿಂದೆ ಇತರ ಘೋಷಣೆಗಳೊಂದಿಗೆ ಈ ಘೋಷಣೆಯನ್ನು ಇತರ ಪಾಳೇಗಾರರ ವಕೀಲರ ಸಮ್ಮುಖದಲ್ಲಿ ಪುನರುಚ್ಚರಿಸಲಾಯಿತು. ಆದ್ದರಿಂದ ದತ್ತಕವನ್ನು ಕಾನೂನುಬದ್ಧಗೊಳಿಸಲು ಅವಶ್ಯವಿರುವ ಕ್ರಮಗಳ ಬಗ್ಗೆ ಸಂಪೂರ್ಣ ಅರಿವು ಅವರಿಗಿತ್ತು.

6. ದೇಸಾಯಿ ಸಾವಿನ ನಂತರ ಈ ಸಂದರ್ಭವನ್ನು ಅವನ ಮುಖ್ಯ ಸೇವಕನಿಗೆ ನೆನಪಿಸಿದೆ. ದತ್ತಕದ ಘೋಷಣೆಯ ತಾರೀಖಿನೊಂದಿಗೆ ದತ್ತಕದ ಸಮಯದ ವಿಷಯವಾಗಿ ಅವನ ಹೇಳಿಕೆಯನ್ನು ಹೇಗೆ ತಾಳೆ ಹಾಕುವೆ ಎಂದು ನಾನು ಅವನನ್ನು ಕೇಳಿದೆ. ಮಲ್ಲಪ್ಪ ಈ ವಿರೋಧಾಭಾಸವನ್ನು ಸ್ಪಷ್ಟಪಡಿಸಲಿಲ್ಲ. ನಾನು ಕೇಳಿದ್ದೆಲ್ಲದರ ಆಧಾರದಲ್ಲಿ ಮೃತನನ್ನು ಅವನ ಪಟ್ಟಭದ್ರ ಸೇವಕರು ಸಾಕಷ್ಟು ಒತ್ತಾಯಿಸಿದ್ದರೂ ತನ್ನ ದುರ್ಬಲ ಕ್ಷಣಗಳಲ್ಲಿ ಅವನು ದತ್ತಕಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸಲು ಸಮ್ಮತಿಸಿರಲಿಲ್ಲ. ದತ್ತಕ ಸಮಾರಂಭ ನಡೆದಿದ್ದೇ ಆಗಿದ್ದರೂ ಅದು ದೇಸಾಯಿ ಸತ್ತ ಮೇಲೆ ಇಲ್ಲವೆ ಪ್ರಜ್ಞೆ ಕಳೆದುಕೊಂಡ ಮೇಲೆ ನಡೆದಿರಬಹುದು.

7. ಪತ್ರದಲ್ಲಿ ಸೂಚಿಸಲಾದ ಮಗುವು ದೇಸಾಯಿಯ ವಂಶದ ದೂರದ ಸಂಬಂಧಿಕನಾಗಿದ್ದಾನೆ. ಹೊಸದಾಗಿ ರೂಪುಗೊಂಡ ಕಿತ್ತೂರು ಸಂಸ್ಥಾನದ ಉತ್ತರಾಧಿಕಾರಿಯಾಗುವುದರ ವಿವಾದಕ್ಕೆ ಸಂಬಂಧಿಸಿದಂತೆ ಅವನು ಇಲ್ಲವೆ ಮೃತನ ಬೇರೆ ಯಾರಾದರೂ ಉತ್ತರಾಧಿಕಾರಿಯಾಗಲು ಬಾಧ್ಯಸ್ಥರಾಗಿದ್ದಾರೆ ಎಂದು ತೋರುವುದಿಲ್ಲ. ದತ್ತಕದ ಉದ್ದೇಶದಿಂದ ವಿವಾದಿತ ಮಗುವನ್ನು ಆಯ್ದು ಕುಟುಂಬದಲ್ಲಿ ಪರಿಚಯಿಸಲಾಯಿತು. ಆದರೆ ಈಗಾಗಲೇ ಸೂಚಿಸಿದ ಕಾರಣಗಳಿಗಾಗಿ ಇದು ದೇಸಾಯಿಯ ಸೇವಕರ ಸಂಚಾಗಿದೆ ಎನ್ನುವುದು ಎದ್ದು ಕಾಣುತ್ತದೆ. ಇದು ತಮ್ಮ ಸ್ವಂತ ವರ್ಚಸ್ಸನ್ನು ಬೆಳೆಸಿಕೊಳ್ಳುವುದೊಂದೇ ಉದ್ದೇಶವಾಗಿತ್ತು. ದೇಸಾಯಿಯ ಹಿಂದಿನ ತಾರೀಖಿನ ಪತ್ರದ ಸಹಿಯನ್ನು ಗುರುತಿಸುವುದು ಕಷ್ಟವಾಗಿದೆ. ತುಂಬ ಸುಂದರ ಹಾಗೂ ಸ್ಪಷ್ಟವಾಗಿದ್ದ ಸಾಮಾನ್ಯ ಕೈಬರಹಕ್ಕಿಂತ ಈ ಅಕ್ಷರಗಳು ತೀರ ಭಿನ್ನವಾಗಿವೆ.

8. ಮೃತನ ಕುಟುಂಬವು ಅವನ ವಿಧವೆ (ವಯಸ್ಸು ಕೇವಲ 11 ವರ್ಷ), ಅವನ ಸೋದರನ ವಿಧವೆ (ವಯಸ್ಸು ಸುಮಾರು 16 ವರ್ಷ)ಯರನ್ನು ಒಳಗೊಂಡಿರುತ್ತದೆ. ಉಳಿದ ಸಂಬಂಧಿಕರು ದೂರದ ಸಂಬಂಧಿಕರು. ಅದೆಷ್ಟು ದೂರದ

ಸಂಬಂಧಿಕರೆಂದರೆ ಸಾಮಾನ್ಯ ಪೂರ್ವಿಕನನ್ನು ಪತ್ತೆ ಹಚ್ಚುವುದು ನನಗೆ ಸಾಧ್ಯವಾಗಿಲ್ಲ. ಸಂಸ್ಥಾನವನ್ನು ಮುಂದುವರಿಸುವುದೇ ಆಗಿದ್ದರೆ, ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಸರ್ಕಾರದ ತೀರ್ಮಾನ ಏನೇ ಆಗಿರಲಿ ಅಪ್ರಾಪ್ತ ವಯಸ್ಕತೆ ದೀರ್ಘಕಾಲದ್ದಾಗಿರಬೇಕು. ದತ್ತಕಕ್ಕೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣೆ ಮಾಡುವುದಕ್ಕಾಗಿ, ಶಾಂತಿ ನೆಲಸಲು ಮತ್ತು ದುರುಪಯೋಗವನ್ನು ತಡೆಯುವುದಕ್ಕೆ ನಾನು ಕಿತ್ತೂರಿಗೆ ಧಾವಿಸಿದ್ದನ್ನು ತಾವು ಮನ್ನಿಸುತ್ತೀರೆಂದು ನಂಬಿದ್ದೇನೆ.

9. ಮೊದಲಿಗೆ ಎಲ್ಲ ಸರ್ದಾರರಿಗೂ ಹಾಗೂ ಎಲ್ಲ ಇಲಾಖೆಯ ಮುಖ್ಯಸ್ಥರಿಗೂ ಕರೆ ಕಳಿಸುವುದು ಸಮಯೋಚಿತವೆಂದು ತೋರುತ್ತದೆ. ಅವರು ದತ್ತಕವು ಅಕ್ರಮವಾಗಿದೆ, ದೇಸಾಯಿಯ ವಿಧವೆ ಅಪ್ರಾಪ್ತೆ ಆಗಿದ್ದರಿಂದ ದತ್ತಕದ ವಿಷಯವನ್ನು ಸರ್ಕಾರದ ಪರಿಶೀಲನೆಗೆ ಸಾದರಪಡಿಸುವುದು ತಮ್ಮ ಜವಾಬ್ದಾರಿಯಾಗಿದೆ ಎನ್ನುವುದನ್ನು ಒಪ್ಪಿಕೊಂಡ ಮೇಲೆ, ಈ ಮಧ್ಯೆ ಆದೇಶವನ್ನು ಸುರಕ್ಷಿತವಾಗಿಡುವುದು, ರಾಜ್ಯವನ್ನು ಕಾಪಾಡುವುದು ಹಾಗೂ ಮಾಮೂಲಿನಂತೆ ಪ್ರತಿಯೊಬ್ಬರೂ ತಮ್ಮ ಕರ್ತವ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು ನನ್ನ ಕಾಳಜಿ ಆಗಿರುತ್ತದೆ.

10. ಖಜಾನೆಯ ಸ್ಥಿತಿಗತಿಗೆ ಸಂಬಂಧಿಸಿದಂತೆ ವಿಭಿನ್ನ ಹಾಗೂ ಸಮಾಧಾನಕಾರಕವಲ್ಲದ ಸುದ್ದಿ ಕೇಳಿದ ನಂತರ ಈ ವಿಷಯವಾಗಿ ಕುಟುಂಬದ ಪ್ರಮುಖ ಸದಸ್ಯರನ್ನು ಹಾಗೂ ಸೇವಕರನ್ನು ವಿಚಾರಿಸಿದೆ. ದೇಸಾಯಿ ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಅವನೇ ಖಜಾಂಚಿಯಾಗಿದ್ದನು, ತನ್ನ ಲೆಕ್ಕಪತ್ರವನ್ನು ತಾನೇ ಬರೆಯುತ್ತಿದ್ದನು, ಖಜಾನೆ ವಿಷಯವಾಗಿ ಅವನು ಯಾರನ್ನೂ ನಂಬುತ್ತಿರಲಿಲ್ಲ ಎಂದು ಅವರು ತಿಳಿಸಿದರು. ಅವರ ಮಾಹಿತಿ ಎಳ್ಳಷ್ಟೂ ಸಮಾಧಾನಕರವಾಗಿರಲಿಲ್ಲ ಆದ್ದರಿಂದ ಹಣಕಾಸಿನ ಲೆಕ್ಕದ ತಪಾಸಣೆ ಮಾಡುವುದರಲ್ಲಿ ಹಾಗೂ ಭಂಡಾರವನ್ನು ಸೀಲ್ ಮಾಡುವುದರಲ್ಲಿ ವಿಳಂಬವಾಗುವುದು ಉಚಿತವಲ್ಲವೆಂದು ತೋರಿತು. ಆದ್ದರಿಂದ ಇಡಿಯಾಗಿ ಭಂಡಾರವು ಠೇವಣಿಯ ರೂಪದಲ್ಲಿ ಉಳಿಯಬೇಕು ಹಾಗೂ ಮಿಕ್ಕಂತೆ ವಿಷಯವು ಅಮಾನತ್ತಿನಲ್ಲಿ ಇಡಬಹುದು.

11. ಆ ಕಾರಣಕ್ಕಾಗಿ ನಾನು ನನ್ನೊಂದಿಗೆ ಬಂದಿದ್ದ ಸ್ಟೀವನ್‌ಸನ್ ಮತ್ತು ಫ್ರೆಯರ್ ಪ್ರಮುಖ ಸೇವಕರ ಜೊತೆಗೆ ಖಜಾನೆಗೆ ಬರಬೇಕೆಂದು ವಿನಂತಿಸಿಕೊಂಡೆ. ಇಡೀ ಖಜಾನೆಯನ್ನು ದೇಸಾಯಿಯ ಮುದ್ರೆಯೊಂದಿಗೆ ಮತ್ತು ನನ್ನ ಮುದ್ರೆಯೊಂದಿಗೆ ಅವರ ಸುಮ್ಮುಖದಲ್ಲಿ ವಶಕ್ಕೆ ಪಡೆಯಬೇಕು ಎಂದೂ ಕೇಳಿಕೊಂಡೆ. ನಾನು ಏನನ್ನು ಕೇಳಿದೆನೋ ಅದರಿಂದ ನನಗೆ ಏನು ಮನನವಾಯಿತೆಂದರೆ ನಾವು ಅಂಗೀಕರಿಸಿದ ಕ್ರಮದಿಂದ ಇನ್ನೂ ಹೆಚ್ಚಿನ ಸುಲಿಗೆಯನ್ನು ತಡೆದಂತಾಯಿತು. ಖಜಾನೆಯ ಲೆಕ್ಕ ಮಾಡುವುದು ಅವಶ್ಯವೆಂದು ತೋರಲಿಲ್ಲ. ಕೆಲವು ಪೆಟ್ಟಿಗೆಗಳ ಬೀಗಗಳು ಬೀಗದ ಕೈಗಳಿಗೆ ಹೊಂದಲಿಲ್ಲ. ಆದರೆ ತೆರೆಯಲಾದ ಪೆಟ್ಟಿಗೆಗಳಲ್ಲಿ ಸಿಕ್ಕ ದೇಸಾಯಿಯ ಸ್ವಂತ ಕೈಬರಹದಲ್ಲಿದ್ದ ಮರಾಠಾ ನಿವೇದನ ಪತ್ರಗಳು ಮತ್ತು ತೆರೆಯಲಾಗದ ಪೆಟ್ಟಿಗೆಗಳ ಸ್ಥಿತಿಯಿಂದ ಖಜಾನೆ 8 ಲಕ್ಷ ರೂಪಾಯಿ ಒಳಗೊಂಡಿರಬಹುದು.

12. ವರದಿಗಳ ಮೇರೆಗೆ ಹುದುಗಿಸಿಟ್ಟ ಖಜಾನೆಯಲ್ಲಿ ಹಿಂದಿನ ದೇಸಾಯಿಯ ಕಾಲದಲ್ಲಿ ಕೂಡಿಡಲಾದ ಅಪಾರ ನಗದು ಇತ್ತು. ಆದರೆ ಪ್ರಮುಖ ಸೇವಕರು ವಾದಿಸುವ ಪ್ರಕಾರ ಆ ವರದಿಗೆ ಅನುಗುಣವಾದ ನಗದು ಇರಲಿಲ್ಲ. ದಿವಂಗತ ದೇಸಾಯಿಯ

ತಂದೆ ಮಲ್ಲಪ್ಪನು ಪುಣೆಯಲ್ಲಿ ಕೆಲ ವರ್ಷಗಳ ಹಿಂದೆ 25 ಲಕ್ಷ ರೂಪಾಯಿ ಖರ್ಚು ಮಾಡಿದ್ದ.

13. ದಿವಂಗತ ದೇಸಾಯಿಯ ಸೇವಕರ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ, ಸಾಮಾನ್ಯವಾಗಿ ಇಂಥ ಸಂಬಂಧಿಕರಲ್ಲಿ ಕಂಡು ಬರುವಷ್ಟು ಅವರು ಗೌರವಾರ್ಹರಾಗಿದ್ದರು. ಆದರೆ ನನ್ನನ್ನು ವಂಚಿಸುವುದಕ್ಕೆ ಹಲವಾರು ಪ್ರಕರಣಗಳಲ್ಲಿ ದಾಖಲೆಗಳನ್ನು ಸೃಷ್ಟಿಸಿದಂತೆ ಅವರು ಸಮಾಧಾನಕರವಾದ ಒಂದೇ ಒಂದು ದಾಖಲೆ ಒದಗಿಸದೆ ಇದ್ದುದರಿಂದ ಅಧಿಕೃತವಾಗಿ ಅಧಿಕಾರವನ್ನು ಅವರ ಕೈಗೆ ಕೊಟ್ಟು ಬಿಟ್ಟರೆ ಸಂಸ್ಥಾನದ ವ್ಯವಹಾರಗಳು ಸಾಂಗವಾಗಿ ಮುಂದುವರಿಯಲಾರವು. ಪ್ರಸಕ್ತ ಇಬ್ಬರು ಜಂಟಿ ಪ್ರಬಂಧಕರ ಮೂಲಕ ಆಡಳಿತ ನಡೆಸುವುದನ್ನು ನಾನು ಉದ್ದೇಶಿಸುತ್ತೇನೆ. ಒಬ್ಬರು ಆಡಳಿತದ ಪರ ಹಾಗೂ ಇನ್ನೊಬ್ಬರು ದೇಸಾಯಿಯ ವಂಶದವರ ಪರವಾಗಿ. ಈ ವ್ಯವಸ್ಥೆ ನನಗೆ ಅಧಿಕಾರದ ದುರುಪಯೋಗ ಆಗುವುದನ್ನು ತಡೆಯುವಲ್ಲಿ ಹಾಗೂ ಆಡಳಿತ ನಡೆಸುವುದರಲ್ಲಿ ನಮಗೆ ಸಹಾಯಕವಾಗಬಲ್ಲದು. ದೇಶದ ಪರಂಪರೆಗಳಲ್ಲಿ ಹಾಗೂ ಸಾಮಾನ್ಯ ಆಡಳಿತದ ವ್ಯವಸ್ಥೆಯಲ್ಲಿ ಇದು ಹಸ್ತಕ್ಷೇಪವಾಗಬಲ್ಲದು.

14. ಕಳೆದ ವರ್ಷದ ಭಾರಿ ಮೊತ್ತದ ಪೇಶಕುಶ್(ನಝರ್/ಕಾಣಿಕೆ) ಇನ್ನೂ ಬಾಕಿ ಇದೆ. ಆದರೆ ಇದನ್ನು ಯಾವುದೇ ಕಾಲಕ್ಕೆ ಠೇವಣಿ ಇರುವ ನಗದಿನಿಂದ ಸರಿ ತೂಗಿಸಬಹುದು.

15. ಕುಟುಂಬದ ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದಂತೆ ವಂಶಾವಳಿಯ ತೃಪ್ತಿಕರವಾದ ದಾಖಲೆಗಳನ್ನು ಒದಗಿಸುವುದರಲ್ಲಿ ನಾನಿನ್ನೂ ಯಶಸ್ವಿಯಾಗಿಲ್ಲ. ಆದರೆ ನಾನು ಕೇಳಿದ್ದರ ಪ್ರಕಾರ ಅವನಿಗೆ ಗಂಡು ಮಕ್ಕಳು ಇಲ್ಲವೆ ಸೋದರರು ಇಲ್ಲದ್ದರಿಂದ ಅವನ ವಿಧವೆಯನ್ನು ಮಾತ್ರ ಒಂದು ವಿಧದಲ್ಲಿ ಅವನ ವಾರಸುದಾರ ಎಂದು ಪರಿಗಣಿಸಬಹುದು. ಸನದಿನ ಕರಾರುಗಳು ಅವಳಿಗೆ ವಿಸ್ತರಿಸಬಹುದು ಎನ್ನುವುದನ್ನು ನಿರ್ಧರಿಸಬಹುದು. ವಾರಸುದಾರಿಕೆಗೆ ಸಂಬಂಧಿಸಿದ ಕಲಮಿನ ಪ್ರತಿಯನ್ನು ನಾನು ಸಾದರಪಡಿಸುತ್ತೇನೆ.

16. ಶೀಘ್ರವೇ ಕುಟುಂಬದ ವಂಶಾವಳಿಯ ದಾಖಲೆಯನ್ನು ತಮಗೆ ರವಾನಿಸುವುದು ಸಾಧ್ಯವೆಂದು ಆಶಿಸುತ್ತೇನೆ. ಮೃತ ದೇಸಾಯಿಯ ತಂದೆಯ ಕಾಲದಲ್ಲಿ, ಸಂಸ್ಥಾನದಲ್ಲಿ ಪಾಲು ಇರುವ ಸಾಧ್ಯತೆಯುಳ್ಳ ಬಹುತೇಕ ಎಲ್ಲ ಸಂಬಂಧಿಕರು ಅವನ ಸಾವಿಗೆ ಕಾರಣರಾಗಿದ್ದಾರೆ. ಎಲ್ಲ ದೂರದ ವಂಶಸ್ಥರು ಅದೆಷ್ಟು ದೂರದವರಾಗಿದ್ದಾರೆ ಎಂದರೆ ಸಾಮಾನ್ಯ ಪೂರ್ವಜನ ಕಾಲಾವಧಿಯಲ್ಲಿ ಸ್ವತಂತ್ರ ಕಿತ್ತೂರು ಸಂಸ್ಥಾನ ಅಸ್ತಿತ್ವದಲ್ಲಿ ಇದ್ದದ್ದೇ ಆಗಿದ್ದರೆ ಅವರ ಪೈಕಿ ಯಾರಾದರೂ ವಾರಸುದಾರರಾಗಿದ್ದರು ಎಂಬುದು ಸಂಶಯಾಸ್ಪದವಾಗಿದೆ" ಎಂಬ ಸಂಗತಿಗಳನ್ನು ವಿವರಿಸಿದರು.

ಈ ಮಧ್ಯೆ ದೇಸಾತಿ ಸಾವಿನ ಬಗ್ಗೆ ಅರಿಯಲು ಥ್ಯಾಕರೆ ಆದೇಶದಂತೆ ನಿಮ್ಮ ಆದೇಶದಂತೆ 12ನೇ ತಾರೀಖಿನಂದು ದೇಸಾಯಿಯನ್ನು ನೋಡಲು ಕಿತ್ತೂರಿಗೆ ತೆರಳಿದ್ದ ಡಾ. ಬೆಲ್ 17ನೇ ಸೆಪ್ಟೆಂಬರ್ 1824ರ ತನ್ನ ಪತ್ರದಲ್ಲಿ– "ಕಿತ್ತೂರಿನಿಂದ ಸುಮಾರು ಎರಡು ಮೈಲು ದೂರದಲ್ಲಿ ನನಗೊಬ್ಬ ಕುದುರೆ ಸವಾರ ಎದುರಾದನು. ಅವನು ರಾಜಾ ಮೃತನಾದನೆಂದು ಹೇಳಿದನು. ಆದಾಗ್ಯೂ ನಾನು ಶವವನ್ನು ಯಾವ ಸ್ಥಿತಿಯಲ್ಲಿ

ಕಂಡೆನೆಂಬುದನ್ನು ನಿಮಗೆ ತಿಳಿಸಲು ಶಕ್ಯವಾಗಬಹುದೆಂದು ಕಿತ್ತೂರಿಗೆ ಸಾಗಿದೆನು. ನಾನು ಅಲ್ಲಿಗೆ ತಲುಪಿದ ಮೇಲೆ (ಮಧ್ಯಾಹ್ನ 3 ಗಂಟೆಗೆ) ಶವವನ್ನು ತೋರಿಸಬೇಕೆಂದು ನಾನು ಕೇಳಿಕೊಂಡೆನು. 'ತೆರೆದ ದಿವಾನಖಾನೆ'ಯಲ್ಲಿ ಶವವನ್ನು ಇರಿಸಿದ್ದನ್ನು ಮತ್ತು ಎಲ್ಲ ಬಗೆಯ ಆಭರಣಗಳಿಂದ ಅದನ್ನು ಸಿಂಗರಿಸಿದ್ದನ್ನು ಕಂಡೆನು. ಶವದಿಂದ ಕೊಳೆತ ವಾಸನೆ ಬರುತ್ತಿದ್ದುದನ್ನು ಖಚಿತಪಡಿಸಿಕೊಳ್ಳಲು ನನಗೆ ಶಕ್ಯವಾಗಲಿಲ್ಲ, ಆದರೆ ಮುಖಚರ್ಯೆ ಮತ್ತು ಅದರ ಬಟ್ಟೆ ಬದಲಿಸಿ ಅದನ್ನು ನಾನು ಕಂಡ ವಿನ್ಯಾಸದಲ್ಲಿ ಇರಿಸಲು ಹಿಡಿಯಬಹುದಾದ ಸಮಯವನ್ನು ಗಮನಿಸಿ ಹೇಳುವುದಾದರೆ ನಾನು ಅಲ್ಲಿಗೆ ಹೋಗುವುದಕ್ಕಿಂತ ಕೆಲ ಹೊತ್ತು ಮೊದಲೇ ಸಾವು ಸಂಭವಿಸಿರಬೇಕೆಂದು ನನಗೆ ಅನಿಸುತ್ತದೆ.

ಮಹಲಿನ ಒಳಾಂಗಣ ಸ್ಥಾನಿಕ ಜನರಿಂದ ತುಂಬಿದ್ದಿತು. ಶವವನ್ನು ನೋಡಲು ಅಲ್ಲಿಯ ನಿವಾಸಿಗಳಿಗೆ ಮುಕ್ತ ಪ್ರವೇಶವಿದ್ದಿತು" ಎಂದು ತಿಳಿಸಿದನು (P.D 1824 V.No. 18/162 S-95 p.28).

ಚಾಪ್ಲಿನ್ ತನಗೆ ಥ್ಯಾಕರೆ ಬರೆದ ಪತ್ರವನ್ನು ಬಾಂಬೆಯಲ್ಲಿನ ಸರಕಾರದ ಮುಖ್ಯ ಕಾರ್ಯದರ್ಶಿ ನ್ಯೂನ್‌ಹ್ಯಾಮನ್ನಿಗೆ ಕಳಿಸಿದನು (P.D 1824 V.No. 18/162 S-61 p.01). ಅದರಲ್ಲಿ–"ಕಿತ್ತೂರು ದೇಸಾಯಿಯ ಸಾವನ್ನು ಘೋಷಿಸುವ ಧಾರವಾಡದ ಪೊಲಿಟಿಕಲ್ ಎಜೆಂಟ್‌ರ ಪತ್ರದ ಭಾಷಾಂತರದ ಜೊತೆಗೆ ಸದರಿ ಟಪಾಲಿನ ನಕಲು ಹಾಗೂ ಅದರ ಅಡಕಗಳನ್ನು ನಾನು ಹಾಜರುಪಡಿಸುವ ಗೌರವ ಹೊಂದಿರುತ್ತೇನೆ.

ಸರ್ಕಾರದ ಹಿಂದಿನ ಅನುಮತಿ ಪತ್ರದ ಪ್ರಕಾರ ಪುತ್ರನನ್ನು ದತ್ತಕ ತೆಗೆದುಕೊಂಡಿದ್ದರೆ ಉತ್ತರಾಧಿಕಾರಿಯ ಮುಂದುವರಿಕೆಯ ಧೋರಣೆ ಕುರಿತ ಸಂದೇಹವೇ ಇರುತ್ತಿರಲಿಲ್ಲ. ಹಿಂದೂ ಕಾನೂನಿನ ದೃಷ್ಟಿಯಲ್ಲಿ ದತ್ತಕ ತೆಗೆದುಕೊಳ್ಳುವುದು ವಿವಾಹ ಬಂಧನದಿಂದ ಜನಿಸಿದ ಪುತ್ರನ ಉತ್ತರಾಧಿಕಾರಕ್ಕೆ ಸಮನಾಗಿರುತ್ತಿತ್ತು. ಅಂತೂ ಈ ದತ್ತಕ ಪ್ರಕ್ರಿಯೆ ಸ್ಪಷ್ಟವಾಗಿ ಪಡೆದುಕೊಂಡ ಅನುಮತಿ (ಕಾನೂನುಬದ್ಧ)ಗೆ ಈ ಹಿಂದೆ ಪಡೆದ ಸರ್ಕಾರದ ಅನುಮತಿ ಅವಶ್ಯವಾಗುತ್ತಿರಲಿಲ್ಲ. ದೇಸಾಯಿ ಆರೋಗ್ಯ ವಿಷಮಿಸುವವರೆಗೆ ದತ್ತಕ ಸ್ವೀಕಾರ ಸಮಾರಂಭವನ್ನು ಮುಂದೂಡುವಂತಾಗುತ್ತಿರಲಿಲ್ಲ. ಕೃತ್ರಿಮ ದತ್ತಕಕ್ಕೆ ಸಂಬಂಧಿಸಿದ ರಕ್ತಸಂಬಂಧದ ಆಪ್ತತೆ ಸಹ ಅದೆಷ್ಟು ಅಪ್ರಸ್ತುತವಾಗುತ್ತದೆ ಎಂದರೆ ಕಿತ್ತೂರ ವಕೀಲ ಈಗ ಅದರ ಸುಳಿವು ನೀಡಲಾರನು. ಆದ್ದರಿಂದ ಶೀಘ್ರವೇ ವಾಸ್ತವಿಕವಾಗುವುದಕ್ಕೆ ಸಾಧ್ಯವಾಗುವವರೆಗೆ ಸಂದರ್ಭಗಳ ಇಂಥ ಸೂಕ್ಷ್ಮ ಸಂಧಿಕಾಲದಲ್ಲಿ ನನ್ನ ಮಾರ್ಗದರ್ಶನಕ್ಕೆ ಸರ್ಕಾರದ ಆದೇಶಗಳನ್ನು ಪಡೆದುಕೊಳ್ಳಲು ನಾನು ಉತ್ಸುಕನಾಗಿದ್ದೇನೆ. ಈ ಮಧ್ಯೆ ಮಿ. ಥ್ಯಾಕರೆ ಅಂಗೀಕರಿಸಿರುವ ಕ್ರಮಗಳು ಸರ್ಕಾರದ ಸಮ್ಮತಿಗೆ ಅನುಗುಣವಾಗಿರುತ್ತವೆಯೆಂದು ನಂಬಿದ್ದೇನೆ.

ಭೂಮಿಕಾಣಿ(ಎಸ್ಟೇಟ್)ಯು ತೀರ ಇತ್ತೀಚೆಗೆ ವಿಧಿವತ್ತಾಗಿ 'ಸಂಸ್ಥಾನ' ಎಂದು ಮನ್ನಣೆ ಪಡೆದಿದ್ದು ಅದನ್ನು ನಾನು ಪಾಳೇಪಟ್ಟು ಎಂದು ಪರಿಗಣಿಸುತ್ತೇನೆ. ಅದನ್ನು ಮುಂದುವರಿಸುವುದು ಪ್ರಾಯಶ: ಜನಪ್ರಿಯವಲ್ಲದ ಕ್ರಮವಾದೀತು. ಈ ದತ್ತಕವನ್ನು ದೃಢೀಕರಿಸದಿದ್ದರೆ, ಅನುಸರಿಸಲು ಇದು ಸ್ವಾಭಾವಿಕ ವಿಧಾನವಾದೀತು ಹಾಗೂ ಇದು ಸನದಿನ ಶರತ್ತುಗಳಿಗೆ ತಕ್ಕುದಾದೀತು.

ದತ್ತಕ ಒಂದು ವೇಳೆ ದೃಢೀಕರಿಸಲ್ಪಟ್ಟರೆ, ಉತ್ತರಾಧಿಕಾರಿಯು ಅದನ್ನು ವಹಿಸಿಕೊಳ್ಳುವ ವಯಸ್ಸಿನವನಾಗುವವರೆಗೆ, ಥ್ಯಾಕರೆ ವಹಿವಾಟನ್ನು ತನ್ನ ಕೈಗೆ ತೆಗೆದುಕೊಂಡರೆ ಅದು

ಏಸ್ಟೇಟಿನ(ಪಾಳೆಪಟ್ಟು) ಹಾಗೂ ಅಪ್ರಾಪ್ತನ ಹಿತದೃಷ್ಟಿಯಿಂದ ಸೂಕ್ತವೆಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಸದರಿ ಕುಟುಂಬಕ್ಕೆ ಸಂಬಂಧಿಸಿದ ಯಾವುದೇ ವಿಶ್ವಾಸಾರ್ಹ ವ್ಯಕ್ತಿ ಇಲ್ಲದ್ದರಿಂದ, ಅವರಿಗೆ ಜವಾಬ್ದಾರಿಯನ್ನು ವಹಿಸಿಕೊಡುವುದು ಸಲ್ಲದು" ಎಂದು ಚಾಪ್ಲಿನ್ ತನ್ನ 20 ಸಪ್ಟೆಂಬರ್ 1824ರ ಪತ್ರದಲ್ಲಿ ಉಲ್ಲೇಖಿಸಿದ್ದನು.

ನಂತರ ಥ್ಯಾಕರೆ ಕಳಿಸಿದ ವಂಶಾವಳಿ ಪತ್ರವನ್ನು ಚಾಪ್ಲಿನ್‌ನು ದಿನಾಂಕ 23 ಸಪ್ಟೆಂಬರ್ 1824ರಂದು ನ್ಯೂನ್‌ಹ್ಯಾಮ್‌ನಿಗೆ ಕಳಿಸಿದನು (P.D 1824 V.No. 18/162 S-83 p. 21). ಅದರಲ್ಲಿ– "20ನೇ ತಾರೀಖಿಗೆ ಕಳುಹಿಸಿದ ನನ್ನ ಪತ್ರಕ್ಕೆ ಸಂಬಂಧಿಸಿದಂತೆ, ಕಿತ್ತೂರ ದೇಸಾಯಿಯ ಸಾವಿನ ಸುದ್ದಿಯನ್ನು ತಿಳಿಸುವ ಮಿ. ಥ್ಯಾಕರೆಯ ಪತ್ರ ಹಾಗೂ ಧಾರವಾಡದ ಪೊಲಿಟಿಕಲ್ ಏಜೆಂಟನಿಂದ ಬಂದ ಅವರ ಕುಟುಂಬದ ವಂಶಾವಳಿಯ ಪ್ರತಿಯನ್ನು ತಮಗೆ ರವಾನಿಸುವ ಗೌರವ ನನ್ನದಾಗಿರುತ್ತದೆ.

1. ಈ ಕಾಗದವನ್ನು(ವಂಶಾವಳಿ) ಮೃತ ದೇಸಾಯಿಯ ಆಪ್ತ ಅಧಿಕಾರಿಗಳು ಸಿದ್ಧಪಡಿಸಿರುವುದರಿಂದ ಮತ್ತು ಯಾವುದೇ ರೀತಿಯ ಆಧಾರವಿಲ್ಲದ್ದರಿಂದ ಅದರ ಖಚಿತತೆಯನ್ನು ನಂಬಲಾಗದು. ಏಕೆಂದರೆ ಸಂಸ್ಥಾನದ ಎಲ್ಲ ವ್ಯವಹಾರಗಳು ಉದ್ದೇಶ ಪೂರ್ವಕವಾಗಿ ನಿಗೂಢತೆಯಲ್ಲಿ ಸಿಕ್ಕಿ ಹಾಕಿಕೊಂಡಿವೆ. ಮೃತ ದೇಸಾಯಿಗೆ ಹೊಸ ಸನ್ನದನ್ನು ನೀಡುವಾಗ ಕೆಲವು ನಮ್ಮ ಸ್ಥಳೀಯ ಸರಕಾರಿ ಅಧಿಕಾರಿಗಳು ಸಾಕಷ್ಟು ಇನಾಮುಗಳನ್ನು ಪಡೆದಿರಬಹುದೆಂಬ ವದಂತಿಗಳು ಸತ್ಯವಿರಬಹುದು ಎಂದು ನಮ್ಮ ಪೊಲಿಟಿಕಲ್ ಏಜೆಂಟರಿಗೆ ಅನಿಸುತ್ತಿದೆ. ಏನೇ ಆಗಲಿ ಮಿ. ಥ್ಯಾಕರೆ ಕುಟುಂಬದ ವಂಶಾವಳಿ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸುತ್ತಿದ್ದು, ಅದರ ಫಲಿತಾಂಶ ಬಂದ ನಂತರ ತಮಗೆ ರವಾನಿಸಲಾಗುವುದು.

2. ಸರಕಾರವು ಸದ್ಯದ ವಾರಸುದಾರನ ಕೈಯಲ್ಲಿ ಸಂಸ್ಥಾನ ನೀಡುವುದನ್ನು ಸಂತೋಷದಿಂದ ಮುಂದುವರಿಸಿದರೆ, ಆ ಪ್ರದೇಶದ ಪೊಲೀಸರನ್ನು ಇನ್ನೂ ಉತ್ತಮ ರೀತಿಯಲ್ಲಿ ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಕೆಲವು ಷರತ್ತುಗಳನ್ನು ಹಾಕುವುದು ಅವಶ್ಯವೆಂದು ನಾನು ಸೂಚಿಸಬಯಸುತ್ತೇನೆ. ನಮ್ಮ ಪ್ರದೇಶಗಳೊಂದಿಗೆ ಬಹಳ ನಿಕಟವಾಗಿ ಹೊಂದಿಕೊಂಡಿರುವುದರಿಂದ ಅಲ್ಲಿಯ ಪೊಲೀಸರಿಗೆ ಹೆಚ್ಚು ಸಮರ್ಥ ನೆಲೆ ಒದಗಿಸುವುದು ಅವಶ್ಯವಿರುತ್ತದೆ. ಬ್ರಿಟಿಷ ಪ್ರದೇಶದಲ್ಲಿ ಜಾರಿಯಲ್ಲಿರುವ ತೆರಿಗೆ ಪದ್ಧತಿಯನ್ನು ಇಲ್ಲಿಯೂ ಜಾರಿಯಲ್ಲಿ ತರುವುದು ಅವಶ್ಯವಿರುತ್ತದೆ ಮತ್ತು ಕಿತ್ತೂರ ಟಂಕಶಾಲೆ(ಖಜಾನೆ)ಯನ್ನು ಯಾವುದೇ ಕಾರಣಕ್ಕೆ ಮತ್ತೇ ತೆರೆಯಬಾರದು ಎಂಬುದನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕು.

3. ದೇಶಗತಿಯ ಹಕ್ಕುದಾರನ ಉತ್ತರಾಧಿಕಾರವನ್ನು ದೃಢಪಡಿಸುವಾಗ ಸಾಕಷ್ಟು ನಝುರ(ಕಾಣಿಕೆ) ತೆಗೆದುಕೊಳ್ಳುವುದು ವಾಡಿಕೆಯಾಗಿರುತ್ತದೆ. ಮಲ್ಲಪ್ಪ ವೀರಪ್ಪ ಸರ್ಜನನ್ನು ದೇಸಾಯಿ ವಂಶಕ್ಕೆ ಉತ್ತರಾಧಿಕಾರಿಯಾದ ಸಂದರ್ಭದಲ್ಲಿ ರೂ. 90,000ಗಳನ್ನು ನಝುರ ಎಂದು ಹೇರಲಾಗಿತ್ತು. ಈ ಹಣದಲ್ಲಿ ಪೇಶ್ವೆ ದರ್ಬಾರದ ಮಂತ್ರಿಗಳಿಗೆ ಗುಟ್ಟಾಗಿ ಕೊಡುವ ಇನಾಮ್ ಲೆಕ್ಕ ಸೇರಿರುವುದಿಲ್ಲ ಮತ್ತು ಮೃತ ದೇಸಾಯಿಯ ವಂಶಕ್ಕೆ ಗಂಡು ವಾರಸುದಾರ ಇರುವುದಿಲ್ಲ ಆದ್ದರಿಂದ ರೂ. 1,75,000 ರೂಪಾಯಿ ನಝುರಾಣಾ ಇಲ್ಲವೆ ಒಂದು ವರ್ಷದ ಹೆಚ್ಚಿನ ಪೇಶಕುಶ್(ನಝುರ್/ಕಾಣಿಕೆ)ನ್ನು ಸದ್ಯದ ಪರಿಸ್ಥಿತಿಯಲ್ಲಿ ಹಾಳತವಾದ ದಂಡ ಇಲ್ಲವೆ ಪರಿಹಾರ ಧನ ಹೇರುವುದು ಸೂಕ್ತವೆಂದು ನನ್ನ ಅನಿಸಿಕೆ.

4. 24 ಏಪ್ರಿಲ್ 1824ರಂದು ನಾನು ಸರಕಾರಕ್ಕೆ ಬರೆದ ಪತ್ರವು ನಝುರಗಳ ಈ ಮೊದಲಿನ ಬಳಕೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಅದು ಸದ್ಯದ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಗೌರವಾನ್ವಿತ ಗವ್ಹರ್ನರ್ ಇನ್ ಕೌನ್ಸಿಲ್‌ರಿಗೆ ನೆರವಾಗಬಹುದು". ಎಂದು ವಂಶಾವಳಿ ಪತ್ರದೊಂದಿಗಿನ ತನ್ನ ಪತ್ರದಲ್ಲಿ ಚಾಪ್ಲಿನ್ ತಿಳಿಸಿದನು.

ಇದರ ನಡುವೆ ಕಿತ್ತೂರ ಸರಕಾರದ ಪರವಾಗಿ ಮ್ಯಾನೆಜರ್ ಆದ ವೆಂಕಟರಾವ್‌ನಿಂದ ಮಿ. ಥ್ಯಾಕರೆ ಪಡೆದುಕೊಂಡ ಒಂದು ಗೌಪ್ಯ ಪತ್ರದ ವರದಿಯನ್ನು 24 ಸೆಪ್ಟೆಂಬರ್ 1824ರಂದು ಚಾಪ್ಲಿನ್ ನ್ಯೂನ್‌ಹ್ಯಾಮ್‌ಗೆ ಕಳಿಸಿದನು (P.D:1824 V.No.18/162, S-91 p.25). ಅದರ ಸಾರಾಂಶವೇನೆಂದರೆ, "ದೇಸಾಯಿಯು ಸೆಪ್ಟೆಂಬರ್ 11ನೇ ತಾರೀಖಿನಂದು ರಾತ್ರಿ 10 ಗಂಟೆಗೆ ತೀರಿಕೊಂಡಿದ್ದಾನೆ. ಈಗಾಗಲೆ ವರದಿ ಮಾಡಲಾಗಿರುವಂತೆ ದಿನಾಂಕ 12ರಂದು ಅಲ್ಲ. ಪ್ರಮುಖ ಅಧಿಕಾರಿಗಳಲ್ಲಿ ಮೂವರು ಅಧಿಕಾರಿಗಳು-ಪೇಶಕುಶ್(ನಝುರ್/ಕಾಣಿಕೆ)ದ ಬಾಕಿ ಹಣ ರೂ. 1,75,000ಗಳನ್ನು ಧಾರವಾಡಕ್ಕೆ ಕಳುಹಿಸುವ ನೆಪದಲ್ಲಿ ಖಜಾನೆಯಿಂದ ತೆಗೆದ ಆಭರಣಗಳ ಮೂರು ಪೆಟ್ಟಿಗೆಗಳ ವಿಷಯವನ್ನು ಮುಚ್ಚಿಟ್ಟಿದ್ದಾರೆ. ಕುಟುಂಬದ ಸದಸ್ಯರೊಂದಿಗಾಗಲಿ ಮತ್ತು ಹಳೆಯ ಸೇವಕರೊಂದಿಗಾಗಲಿ ಸಮಾಲೋಚನೆ ಮಾಡದೆ ದತ್ತು ಸ್ವೀಕಾರ ಕಥೆಯನ್ನು ತಾವೇ ಕಟ್ಟಿ ಅದನ್ನು ಮರುದಿನ ಮುಂಜಾನೆ ನೆರವೇರಿಸಿದ್ದಾರೆ. ಮತ್ತು ಮೃತ ದೇಸಾಯಿಯ ಹೇರಳ ಪ್ರಮಾಣದ ಹಣ ಮೃತ ಕಾರಭಾರಿ ಮಲ್ಲಪ್ಪನ ವಶದಲ್ಲಿದೆ. ಈ ಹೇಳಿಕೆಗಳು ತಮಗೆ ಬಂದ ಇತರೆ ಮಾಹಿತಿಗಳಿಂದ ದೃಢಪಟ್ಟಿರುತ್ತದೆ ಎಂದು ಮಿ. ಥ್ಯಾಕರೆ ತಿಳಿಸಿರುತ್ತಾರೆ.

ಸರಕಾರದಿಂದ ಆದೇಶ ಬರುವವರೆಗೆ ಕಿತ್ತೂರ ಸಂಸ್ಥಾನದಲ್ಲಿನ ಸುವ್ಯವಸ್ಥೆಯನ್ನು ಕದಡುವ ಮನಸ್ಸು ಮಿ.ಥ್ಯಾಕರೆಗೆ ಇಲ್ಲದಿದ್ದರೂ ಸಹ, ಇನ್ನೂ ಮುಂದೆ ಮಲ್ಲಪ್ಪನಂಥ ಕುತಂತ್ರ ವ್ಯಕ್ತಿಯನ್ನು ಕಾರಭಾರಿಯಾಗಿ ಅಧಿಕಾರಿಯಾಗಿ ಮುಂದುವರೆಸುವುದು ಕ್ಷೇಮವಲ್ಲವೆಂಬ ಅಭಿಪ್ರಾಯವನ್ನು ಥ್ಯಾಕರೆ ಹೊಂದಿದ್ದಾನೆ. ಮಲ್ಲಪ್ಪನು ಸದ್ಯ ಧಾರವಾಡ ಕಚೇರಿಯ ಮುಖ್ಯ ಗುಮಾಸ್ತನಾದ ವೆಂಕಟರಾವನ ಜೊತೆಗೆ ಸಹ ಮ್ಯಾನೆಜರ್ ಆಗಿರುತ್ತಾನೆ" ಎಂಬ ವಿಷಯ ತಿಳಿಸಿದನು. ಇತ್ತ ಸರಕಾರ ಕಿತ್ತೂರಿನ ಸುರಕ್ಷತೆಗಾಗಿ ಥ್ಯಾಕರೆಯವರ ಕ್ರಮಗಳನ್ನು ಕೌನ್ಸಿಲ್‌ನಲ್ಲಿ ಗವರ್ನರ್‌ರು ಸಂಪೂರ್ಣವಾಗಿ ಸಮ್ಮತಿಸಿದ್ದಾರೆ ಎಂದು ನ್ಯೂನ್‌ಹ್ಯಾಮ್‌ರು ವಿಲಿಯಂ ಚಾಪ್ಲಿನ್‌ಗೆ ದಿನಾಂಕ 25 ಸಪ್ಟೆಂಬರ್ 1824ರಂದು ಬರೆದ ಪತ್ರದಲ್ಲಿ ತಿಳಿಸುತ್ತಾ, ಮುಂದುವರೆದು ಈ ಕೆಳಗಿನ ಅಂಶಗಳನ್ನು ಉಲ್ಲೇಖಿಸಿದ್ದಾರೆ (P.D 1824 V.No. 18/162 S-75p.15).

"ಇಡೀ ಸನ್ನದನ್ನು ಪರಿಶೀಲಿಸುವ ಅವಶ್ಯಕತೆ ಇಲ್ಲವಾಗಿದ್ದು, ಬ್ರಿಟಿಷ್ ಸರ್ಕಾರದ ಸಮ್ಮುಖ ಕಿತ್ತೂರ ಧಣಿಯ ಸ್ಥಾನಮಾನ ಕುರಿತು ಕೌನ್ಸಿಲ್‌ನ ಗವರ್ನರ್ ಸಂದೇಹಾತೀತವಾಗಿಲ್ಲ. ಗ್ರ್ಯಾಂಟಿನ ಸ್ವರೂಪದಿಂದ, ಥ್ಯಾಕರೆ ರವಾನಿಸಿದ ಸನ್ನದಿನ ಕಲಮಿನಲ್ಲಿನ ಪದ ಪ್ರಯೋಗದಿಂದ ನೇರ ವಾರಸುದಾರಿಕೆಯ ವಂಶವೃಕ್ಷದ ಕಾಲಾವಧಿಯುದ್ದಕ್ಕೂ ಕಿತ್ತೂರಕರ್ ಮತ್ತು ಅವನ ಉತ್ತರಾಧಿಕಾರಿಗಳು ಸಂಸ್ಥಾನದ ರಾಜಕುಮಾರರೆಂದು ಸ್ಥಾಪಿತವಾಗಿದ್ದರು, ಹೀಗೆ ಅವರು ಜಹಾಗೀರದಾರರಿಗಿಂತ ಸ್ಥಾನಮಾನದ ದೃಷ್ಟಿಯಿಂದ ಭಿನ್ನವಾಗಿದ್ದಾರೆ. ಆದಾಗ್ಯೂ ಯಾವ ವಂಶದವರಿಗೆ ವಹಿಸಿಕೊಡಲಾಗಿತ್ತೋ ಆ ವಂಶ ಸಂಪೂರ್ಣವಾಗಿ ನಾಮಾವಶೇಷವಾದ ಸಂದರ್ಭದಲ್ಲಿ ಕಂಪನಿಗೆ ಪ್ರದೇಶವನ್ನು ಮರಳಿಸಬೇಕಾದುದನ್ನು ತಡೆಯುವಂಥದ್ದೇನೂ ಸನ್ನದಿನಲ್ಲಿ ಇಲ್ಲ.

ಕೆಳಕಂಡ ಸೂಚನೆಗಳು ಈ ತರ್ಕವನ್ನಾಧರಿಸಿವೆ. ಅದನ್ನು ತಾವು ಕಾರ್ಯರೂಪಕ್ಕೆ ತರುವ ಮೊದಲು ಸ್ಥಾನಮಾನ ಕಾನೂನುಬದ್ಧವಾಗಿದೆ ಎನ್ನುವುದನ್ನು ಸನದಿನ ಪರಿಶೀಲನೆ ಮೂಲಕ ನಿಮಗೆ ಸಮಾಧಾನವಾಗುವ ವಿಷಯದಲ್ಲಿ ಎಚ್ಚರ ವಹಿಸಬೇಕು.

ದತ್ತಕದ ವಿಷಯವಾಗಿ ಸಾಮಾನ್ಯ ತೊಡಕುಗಳಿಂದ ಪಾರಾಗಲು ಕಿತ್ತೂರಕರನಿಗೆ ಸನದಿನಲ್ಲಿ ಯಾವ ದಾರಿಯೂ ಇರಲಾರದೆಂದರೆ, ಅಕ್ರಮ ನಡೆದದ್ದನ್ನು ತೋರಿಸುವಲ್ಲಿ ಕಟ್ಟುನಿಟ್ಟಿನ ಎಚ್ಚರ ವಹಿಸುವ ಸರ್ಕಾರದ ಹಕ್ಕುಗಳು ಮತ್ತು ಉದ್ದೇಶಗಳ ಸ್ಪಷ್ಟ ಕಲ್ಪನೆಯಿಂದ ಬೇರೆ ಜಾಗೀರದಾರರಿಗೆ ಪಟಾಯಿಸುವುದು ಅವಶ್ಯವಾಗುತ್ತದೆ. ಅದೇನೇ ಇರಲಿ ನಾವು ನಡೆವಳಿಗಳ ಸತ್ವವನ್ನು ಕಡೆಗೂ ಹೆಚ್ಚಿಸಬಹುದು.

ಆದ್ದರಿಂದ ಬ್ರಿಟಿಷ ಸರಕಾರದ ಪರವಾನಿಗೆ ಇಲ್ಲದೆ ದತ್ತು ತೆಗೆದುಕೊಂಡಿದ್ದನ್ನು-ಅದು ಇದುವರೆಗೆ ಸಂಪೂರ್ಣ ಆಧಾರರಹಿತವಾಗಿರುವುದರಿಂದ ಮಾಡುವುದಿಲ್ಲವೆಂದು ಸಾರಬೇಕು. ಮಿ. ಥ್ಯಾಕರೆ ಸಂಪೂರ್ಣ ಸಂಸ್ಥಾನದ ಪ್ರಭಾರ ವಹಿಸಿಕೊಳ್ಳಲು ತೆರಳಬೇಕು. ಒಂದು ವೇಳೆ ದತ್ತು ಕಾರ್ಯಕ್ರಮ ಇನ್ನೂ ನಡೆದಿಲ್ಲವಾದರೆ, ದತ್ತು ಪ್ರಕ್ರಿಯೆಯ ಸಂದರ್ಭ ಕುರಿತ ವಿಚಾರಣೆಯನ್ನು ಜರುಗಿಸಬೇಕು.

ದತ್ತು ಪುತ್ರನ ಮತ್ತು ದೇಸಾಯಿಯ ಸಂಬಂಧವನ್ನು ಖಚಿತಪಡಿಸಿಕೊಳ್ಳುವುದು ಮೊಟ್ಟಮೊದಲ ಕೆಲಸವಾಗಿರುತ್ತದೆ. ಟಿಪ್ಪು ಸುಲ್ತಾನನು ಈ ಪ್ರದೇಶವನ್ನು ವಶಪಡಿಸಿಕೊಳ್ಳುವುದಕ್ಕಿಂತ ಮೊದಲಿನ ದೇಸಾಯಿಯ ವಂಶಸ್ಥನಾಗಿದ್ದರೆ, ದತ್ತು ಸ್ವೀಕಾರ ಕಾರ್ಯಕ್ರಮ ನಡೆಯದಿರದಿದ್ದರೂ, ಅವನು ದೇಸಾಯಿಯ ನಿಕಟ ವಾರಸುದಾರನಾಗುತ್ತಾನೆ. ದೇಸಾಯಿಗೆ ದತ್ತು ಪಡೆಯುವ ಉದ್ದೇಶ ಇದ್ದರೆ ಸಾಕು, ದತ್ತು ಸ್ವೀಕಾರದ ಎಲ್ಲ ಅನೌಪಚಾರಿಕತೆಗಳನ್ನು ಕಡೆಗಣಿಸಬಹುದು.

ದತ್ತು ಪುತ್ರನು ದೇಸಾಯಿಯ ಹತ್ತೀರದ ಸಂಬಂಧಿಯಾಗಿದ್ದರೆ ಸಾಕು, ದತ್ತು ಸ್ವೀಕಾರ ಕಾರ್ಯಕ್ರಮುವನ್ನು ಅಮೂಖ್ಯವೆಂದು ಪರಿಗಣಿಸಲಾಗುವುದು, ಮುಂದೆ ತಿಳಿಯಪಡಿಸುವ ಕರಾರುಗಳ ಮೇಲೆ ದತ್ತು ಪುತ್ರನೆಂದು ಕೂಡಲೆ ಸ್ವೀಕರಿಸಲಾಗುವುದು.

ಇನ್ನೊಂದೆಡೆ, ವಾರಸುದಾರ ಹಿಂದಿನ ದೇಸಾಯಿಗಳ ವಂಶದವನಾಗಿರದಿದ್ದರೆ, ಇಲ್ಲವೆ ಮೃತ ದೇಸಾಯಿಯ ಪತ್ನಿಯ ವಂಶದ ನಿಕಟ ಸಂಬಂಧ ಹೊಂದಿರದಿದ್ದರೆ, ದತ್ತು ಸ್ವೀಕಾರ ಎಷ್ಟೇ ವಿದ್ಯುಕ್ತವಾಗಿ ನಡೆದಿದ್ದರೂ ಅದನ್ನು ಮಾನ್ಯ ಮಾಡುವಂತಿಲ್ಲ. ಮತ್ತು ಸಂಸ್ಥಾನದ ಅಸ್ತಿತ್ವವನ್ನು ಕೊನೆಗೊಳಿಸಿ, ಅದನ್ನು ಕಂಪನಿಯ ಪ್ರದೇಶಗಳಲ್ಲಿ ಕೂಡಿಸಿಕೊಳ್ಳಬೇಕು, ಮತ್ತು ದೇಸಾಯಿಯ ಮನೆಯ ಹೆಣ್ಣು ಮಕ್ಕಳಿಗೆ ಮತ್ತು ಅವರ ಎಲ್ಲ ಹಿಂದಿನ ಸೇವಕರಿಗೆ ಮತ್ತು ಅವರ ಅವಲಂಬಿತರಿಗೆ ಇತರರಿಗೆ ಜೀವನೋಪಾಯವನ್ನು ಕಲ್ಪಿಸಬೇಕು.

ಸದ್ಯ ನಾನು ಜಹಗೀರನ್ನು ಮರಳಿಸುವ ಷರತ್ತಿಗೆ ಬರುತ್ತೇನೆ. ದತ್ತು ಸ್ವೀಕಾರಕ್ಕೆ ಅನುಮತಿ ಕೊಡಲು ಬೇಕಾಗುವಷ್ಟು ದತ್ತು ಬಂದ ವ್ಯಕ್ತಿಯು ಹತ್ತಿರದ ಸಂಬಂಧಿ ಆಗಿದ್ದರೆ, ದತ್ತು ಸ್ವೀಕಾರಕ್ಕೆ ಬ್ರಿಟಿಷ ಸರಕಾರ ಅನುಮತಿ ಕೊಡಬಹುದಾಗಿತ್ತು. ಒಂದು ವೇಳೆ ದತ್ತು ಸ್ವೀಕಾರ ಸತ್ಯತೆ ಮತ್ತು ಕ್ರಮಬದ್ಧತೆಯಿಂದ ಕೂಡಿದ್ದರೆ, ಸನದಿನಲ್ಲಿರುವ ಷರತ್ತು ಇಲ್ಲವೆ ಸನದಿನ ಭಾಷೆಯಲ್ಲಿ ಸಂದಿಗ್ಧತೆಯನ್ನು ತೊಡೆದು ಹಾಕಲು ಬೇಕಾಗುವುದಕ್ಕಿಂತ ಹೆಚ್ಚಿಗೆ ಯಾವುದೇ ಬದಲಾವಣೆಯನ್ನು ಮಾಡದೆ, ಸಂಸ್ಥಾನವನ್ನು ವಾರಸುದಾರನಿಗೆ ಕೊಡಬೇಕು.

ದತ್ತು ಪಡೆದ ವ್ಯಕ್ತಿಯು ದೇಸಾಯಿಯ ಹತ್ತಿರದ ಸಂಬಂಧಿಯಾಗಿದ್ದರೂ, ದತ್ತು ಸ್ವೀಕಾರ ಕ್ರಿಯೆ ಅಕ್ರಮವಾಗಿದ್ದರೆ ಅಥವಾ ದತ್ತು ತೆಗೆದುಕೊಳ್ಳಲಾದವನು ದೇಸಾಯಿಯ ಹತ್ತಿರದ ಸಂಬಂಧಿಯಾಗಿರದಿದ್ದರೂ ದತ್ತು ತೆಗೆದುಕೊಳ್ಳುವ ಕ್ರಿಯೆ ತುಂಬಾ ಕ್ರಮಬದ್ಧವಾಗಿದ್ದರೆ ಎರಡೂ ಸಂದರ್ಭಗಳಲ್ಲಿ ಸಂಸ್ಥಾನವನ್ನು ಅವನಿಗೆ ಕೊಡಬೇಕು. ಆದರೆ, ಹೊಸ ಷರತ್ತುಗಳನ್ನು ವಿಧಿಸಬೇಕಾಗುವುದು. ಅವುಗಳೆಂದರೆ, ಟಂಕಶಾಲೆ(Mint) ಸ್ಥಾಪಿಸಲು ಹಾಗೂ ನಮ್ಮ ಪ್ರದೇಶಗಳ ಬಲವರ್ಧನೆಗೆ ಬೇಕಾಗುವ ಅಗತ್ಯ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕು.

ದೇಸಾಯಿಯ ವೈಯಕ್ತಿಕ ಆಸ್ತಿಯನ್ನು ಊಹಿಸಲಾದ ಎಲ್ಲ ಸಂದರ್ಭಗಳಲ್ಲಿ ಉತ್ತರಾಧಿಕಾರದ ಹಿಂದೂ ಕಾಯ್ದೇಯ ಪ್ರಕಾರ ವಿಲೇವಾರಿಯಾಗಬೇಕು. ಅದರಲ್ಲಿ ಯಾವುದೇ ಭಾಗವನ್ನು ಪಡೆಯುವ ಹಕ್ಕನ್ನು ಸರಕಾರ ಹೊಂದಿದ್ದರೆ, ಹಕ್ಕುಗಳನ್ನು ಮತ್ತು ತೀರಿಕೊಂಡ ವ್ಯಕ್ತಿಯ ಸಂಬಂಧಿಗಳ ಎಲ್ಲ ಸಂದರ್ಭಗಳನ್ನು ಉದಾರವಾಗಿ ಪರಿಶೀಲಿಸದ ಹೊರತು ಅದನ್ನು ಸರಕಾರ ತೆಗೆದುಕೊಳ್ಳುವಂತಿಲ್ಲ." ಎಂದು ತಿಳಿಸಿದನು.

ದತ್ತು ಸಮಾರಂಭಕ್ಕೆ ಸಂಬಂಧಿಸಿದಂತೆ ಕಿತ್ತೂರ ಸಂಸ್ಥಾನದ ಕುನ್ನೂರ ಮಲ್ಲಪ್ಪನ ಸಾಕ್ಷಿ ತೆಗೆದುಕೊಳ್ಳಲಾಯಿತು (P.D 1824 V.No. 18/162 S-157p.73). ಅವನು ಹೇಳಿದ್ದೇನೆಂದರೆ, "ಸರದೇಸಾಯಿ ಶಿವಲಿಂಗರುದ್ರ ಸರ್ಜನು ಶ್ರಾವಣಮಾಸ(ಜೂನ್-ಜುಲೈ)ದಲ್ಲಿ ಅಸ್ವಸ್ಥನಾದನು. ಒಂದು ದಿನ ಅವನ ಕಾಯಿಲೆ ಉಲ್ಬಣಗೊಂಡು ಅದರಿಂದ ಅವನು ಗುಣಮುಖವಾಗುವ ನಿರೀಕ್ಷೆ ಇಲ್ಲವೆಂದನು. ಆ ಸಂದರ್ಭದಲ್ಲಿ ಕುನ್ನೂರ ವೀರಪ್ಪ, ಸರದಾರ ಮಲ್ಲಪ್ಪ ಮತ್ತು ನಾನು ಉಪಸ್ಥಿತರಿದ್ದು ರೋಧಿಸ ಹತ್ತಿದೆವು. ಆಗ ದೇಸಾಯಿ ಗುರುಸಿದ್ದಪ್ಪನನ್ನು ಕರೆಯಿಸಿ ಶಾಪೂರ ತಾಲೂಕಿನ ಸಿಂಧೋಳಿ ಮತ್ತು ಮಾಸ್ತಮರಡಿ ಮತ್ತು ಮುರಗೋಡ ತಾಲೂಕಿನ ಚಿಕ್ಕೊಪ್ಪಕ್ಕೆ ಹೋಗಲು ಹೇಳಿದನು. ಅಲ್ಲಿ ತನ್ನ ಅನೇಕ ಸಂಬಂಧಿಗಳಿದ್ದು ಅವರಲ್ಲಿ ಯಾರಾದರೊಬ್ಬರ ಮಗನನ್ನು ಕರೆತಂದು ಅವರು ಒಪ್ಪಿದರೆ ದತ್ತು ತೆಗೆದುಕೊಳ್ಳಬಹುದೆಂದು ಹೇಳಿದನು. ಅವನು ಸಿಂಧೋಳಿ ಮತ್ತು ಮಾಸ್ತಮರಡಿಗೆ ಹೋಗಿ ನಾಲ್ಕು ಹುಡುಗರನ್ನು ಕರೆತಂದನು, ಆದರೆ ಚಿಕ್ಕೊಪ್ಪಕ್ಕೆ ಹೋಗಿದ್ದ ಸುಬೇದಾರ ಮಲ್ಲಪ್ಪ ಅಲ್ಲಿದ್ದ ಹುಡುಗರೆಲ್ಲ ವಯಸ್ಸಾದವರಾಗಿದ್ದುದನ್ನು ಕಂಡನು. ಗುರುಸಿದ್ದಪ್ಪ ಕರೆತಂದ ಹುಡುಗರಲ್ಲಿ ಮೂವರನ್ನು ತಿರಸ್ಕರಿಸಿ ಅವರನ್ನು ತಿರುಗಿ ಕಳುಹಿಸಿದನು. ನಾಲ್ಕನೆಯ ಹುಡುಗ ಶಿವಲಿಂಗಪ್ಪನನ್ನು ಮನೆಯೊಳಗೆ ಬರಮಾಡಿಕೊಂಡು ಸಾಯುವ ಕಾಲಕ್ಕೆ ತನ್ನ ಅಂತಿಮ ನಿರ್ಣಯ ಘೋಷಿಸುವುದಾಗಿ ಹೇಳಿದನು. ಸೆಪ್ಟೆಂಬರ 11ನೇ ತಾರೀಖು ರಾತ್ರಿ 4 ಗಂಟೆಗೆ ದೇಸಾಯಿ ತೀರಿಕೊಂಡನು. ತಾನು ಸಾಯುವುದಕ್ಕಿಂತ ಪೂರ್ವದಲ್ಲಿ ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದನು. ಈ ಮೊದಲು ಬೇನೆಯಿಂದ ಸ್ವಲ್ಪ ಚೇತರಿಕೆ ಅನಿಸಿದಾಗ ಆ ಹುಡುಗನಿಗೆ ಬಟ್ಟೆಯ ಕಾಣಿಕೆ ಕೊಟ್ಟು ಅವನನ್ನು ಆತನ ತಂದೆಯ ಬಳಿ ಕಳಿಸಿಕೊಡಲು ನನಗೆ ಹೇಳಿದನು. ಅದಕ್ಕಿಂತ ಹೆಚ್ಚಿಗೆ ಏನೂ ನಡೆಯಲಿಲ್ಲ. ದೇಸಾಯಿ ಸತ್ತ ನಂತರ ಬೆಳಗಾದ ಕೂಡಲೆ ನಾವು ಮೂವರು (ಖುನ್ನೂರ ವೀರಪ್ಪ, ಸರದಾರ ಮಲ್ಲಪ್ಪ ಮುಂ.) ಸರದಾರ ಗುರುಸಿದ್ದಪ್ಪ, ಅಶ್ವದಳದ ಹಿಮ್ಮತಸಿಂಗ್, ನರಸಿಂಗರಾವ್, ಗುರುಪುತ್ರ, ಅವರಾದಿ ವೀರಪ್ಪ ಮತ್ತು ಜಮಾದಾರ ಖಾನ ಮುಲ್ಕಪ್ಪರನ್ನು ಕರೆ ಕಳುಹಿಸಿ, ದೇಸಾಯಿಯ ಸಾವಿನ ಸುದ್ದಿ ತಿಳಿಸಿ, ಸಂಸ್ಥಾನವನ್ನು ಮುಂದೆ ನಡೆಸುವುದು ಹೇಗೆ ಎಂದು ಕೇಳಿದೆವು. ಅದಕ್ಕೆ ಅವರು ಹೀಗೆ ಹೇಳಿದರು "ನಿಮಗೆ ಗೊತ್ತಿರುವಂತೆ ನಮಗೂ ನಿಮಗೂ ಹೊಂದಾಣಿಕೆ ಇಲ್ಲಾ,

ಆದರೆ ಸದ್ಯ ಎಲ್ಲ ವೈರವನ್ನು ಮರೆಯುತ್ತೇವೆ. ನಾವು ಎಲ್ಲ ಜನರನ್ನು ಕೂಡಿಸಿ, ಆ ಹುಡುಗನಿಗೆ ಸಂಸ್ಥಾನದ ಅಧಿಕಾರ ಲಾಂಛನವನ್ನು ವಹಿಸಿಕೊಟ್ಟು ಸಂಸ್ಥಾನವು ಮುಂದುವರಿಯಲು ಸರಕಾರದ ಅನುಮೋದನೆ ಪಡೆಯೋಣ". ಈ ಸಂಕಲ್ಪವನ್ನು ಕೈ ಮೇಲೆ ಕೈ ಹಾಕಿ ಪ್ರತಿಜ್ಞೆ ಮಾಡಿ ದೃಢಪಡಿಸಿ, ಬಳಿಕ ಕೂಡಲೇ ಕಾರ್ಯೋನ್ಮುಕರಾದೆವು. ಸಾಯುವ ಸಮಯದಲ್ಲಿ ದೇಸಾಯಿ ಯಾವ ನಿರ್ದೇಶನ ಕೊಡಲಿಲ್ಲ; ಕೇವಲ ಅವನು ಮೊದಲು ಹೇಳಿದಂತೆ ನಡೆದುಕೊಂಡೆವು.

ದೇಸಾಯಿ ಕಾಯಿಲೆ ಉಲ್ಬಗೊಂಡಾಗ ಆಶ್ವೀಜ ಮಾಸದಲ್ಲಿ ಮತ್ತೊಂದು ಘಟನೆ ಸಂಭವಿಸಿತು, ದೇಸಾಯಿ ನನ್ನನ್ನು ಜಮಾದಾರ ಖಾನನ ಬಳಿಗೆ ಕಳಿಸಿ ಒಂದಷ್ಟು ಆಭರಣ ತರಿಸಿಕೊಂಡು ತನ್ನ ಮಗ್ಗಲು ಕುಳಿತಿದ್ದ ಹೆಂಡತಿಗೆ ಕೊಟ್ಟು ನನಗೆ ಹೀಗೆ ಹೇಳಿದನು: ತಾನು ಸತ್ತರೆ ತನ್ನ ಹೆಂಡತಿ ಎರಡು ಲಕ್ಷ ರೂಪಾಯಿ ಪಡೆಯಬೇಕು, ದೇಸಾಯಿ ತೀರಿಕೊಂಡಾಗ ಈ ವಿಷಯ ಯಾರಿಗೂ ಗೊತ್ತಿರಲಿಲ್ಲ, ಅವನ ಉತ್ತರಾಧಿಕಾರತ್ವ ವಹಿಸಿಕೊಡಲು ಖಜಾನೆಯಿಂದ ರಾಜಮುದ್ರೆಯನ್ನು ಮುದ್ಕಪ್ಪ ಜಮಾದಾರ ಖಾನೆ, ಬಸಲಿಂಗಪ್ಪ ಮತ್ತು ಸರದಾರ ಮಲ್ಲಪ್ಪ ಮತ್ತು ನಾನು ಸೇರಿ ಖಜಾನೆಯಿಂದ ಹೊರ ತೆಗೆದೆವು. ಬಸಲಿಂಗಪ್ಪನನ್ನು ಬಿಟ್ಟು ಅವರು ಮೆಟ್ಟಿಲು ಇಳಿದು ಹೋದರು, ಬಸಲಿಂಗಪ್ಪ ಮತ್ತು ನಾನು ಖಜಾನೆಯಿಂದ ಒಂದು ಪೆಟ್ಟಿಗೆಯನ್ನು ತೆಗೆದುಕೊಳ್ಳಲು ಹಿಂದೆ ಉಳಿದೆವು. ಆದರೆ ಖಜಾನೆಯ ಕೀಲಿ ನಮಗೆ ಸಿಗಲಿಲ್ಲ. ನಾವು ಕುನ್ನೂರ ವೀರಪ್ಪನನ್ನು ಕರೆದೆವು. ಕೀಲಿ ತೆಗೆಯುವಲ್ಲಿ ಯಶಸ್ವಿಯಾದನು, ಬಳಿಕ ಕೆಳಗೆ ಹೋದೆವು. ಕೊಟಗಿ ಬೈಲಪ್ಪ, ಸಿದ್ಲಿಂಗಪ್ಪ, ದುಣ್ಣಗ ವೀರಪ್ಪ, ಕನ್ನೂರ ಸಕ್ರಪ್ಪ, ದಳವಾಯಿ ಮತ್ತು ರಾಮಪ್ಪ ಅಗಸಿ ಇವರ ಮೂಲಕ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳನ್ನು ದೇಸಾಯಿಯ ಪತ್ನಿ ಮಲಗುವ ಕೋಣೆಗೆ ಕೊಟ್ಟು ಕಳುಹಿಸಿದೆವು. ಆ ಪೆಟ್ಟಿಗೆಯಲ್ಲಿದ್ದ ಒಂದು ಯಾದಿ ಕೂಡ ಹರಿದು ಚೂರಾಗಿತ್ತು. ದೇಸಾಯಿಯು ಎಷ್ಟು ಹಣವನ್ನು ಹೊಂದಿದ್ದನೆಂದು ಅದೃಶ್ಯಪ್ಪನನ್ನು ಕೇಳಿದೆನು. ಅದಕ್ಕೆ ಅವನು ಸುಮಾರು ಒಂದು ಲಕ್ಷ ಇಲ್ಲವೆ ಮುಕ್ಕಾಲು ಲಕ್ಷ ಎಂದು ಉತ್ತರಿಸಿದನು. ಅದನ್ನು ಇದ್ದ ಸ್ಥಳದಿಂದ ಬೇರೆಡೆ ಸಾಗಿಸಲು ಹೇಳಿದೆ, ಅವನು ಹಾಗೇ ಮಾಡಿದನು. ಇದು ನಡೆದದ್ದು ಸೋಮವಾರ ಅದರಲ್ಲಿ ಎಷ್ಟು ಹಣವಿದ್ದಿತು ಎಂಬುದು ನಿಖರವಾಗಿ ನನಗೆ ಹೇಳಲಿಕ್ಕಾಗದು.

ಪ್ರಶ್ನೆ: ದೇಸಾಯಿ ಶನಿವಾರ ರಾತ್ರಿ ಸತ್ತಿದ್ದರೆ ನೀನೇಕೆ ರವಿವಾರ ಮುಂಜಾನೆ ಎಂದು ಹೇಳಿದೆ?

ಉತ್ತರ: ದೇಸಾಯಿ ಜೀವಿಸಿರುವಾಗಲೇ ದತ್ತು ಸ್ವೀಕಾರ ಕ್ರಿಯೆ ಜರುಗಿದೆ ಎಂದು ಜನರಿಗೆ ಮನಗಾಣಿಸುವ ಉದ್ದೇಶದಿಂದ.

ಪ್ರಶ್ನೆ: ಸುಮಾರು ಒಂದು ತಿಂಗಳ ಹಿಂದಿನ ದಿನಾಂಕ ಹೊಂದಿದ ದತ್ತು ತೆಗೆದುಕೊಂಡಾಗಿದೆ ಎಂದು ಹೇಳುವ ಪತ್ರವನ್ನು ದೇಸಾಯಿ ಇತ್ತೀಚೆಗೆ ಕಳಿಸಿದ್ದಾನೆ. ಅದು ಹೇಗೆ?

ಉತ್ತರ: ಅಂಥ ಒಂದು ಪತ್ರವನ್ನು ದೇಸಾಯಿ ಎರಡು ಮೂರು ತಿಂಗಳ ಹಿಂದೆ ಬರೆದದ್ದು ನಿಜ, ಆದರೆ ತಾನು ಸಾಯುವೆನೆಂದು ಅನಿಸಿದಾಗ ಹಾಗೆ ಮಾಡುವೆನೆಂದು ಹೇಳಿದ್ದಕ್ಕಾಗಿ ಅವನು ಅದಕ್ಕೆ ತನ್ನ ಅಂಕಿತ ಹಾಕಿರಲಿಲ್ಲ. ಆದ್ದರಿಂದ ಆ ಕಾಗದ ಈ ಸ್ಥಿತಿಯಲ್ಲಿ ಉಳಿಯಿತು. ಸರದಾರ ಮಲ್ಲಪ್ಪ ವೀರಪ್ಪ ಕನ್ನೂರ ಮತ್ತು ನಾನು ಏನು

ಮಾಡಬೇಕೆಂದು ಆಲೋಚಿಸಿ, ಸತ್ತವನ ಕೈಯಲ್ಲಿ ಪೆನ್ನು ಇಟ್ಟು ಹಾಗೆ ಮಾಡಿದೆವು. ನಾನು ನನ್ನ ಕೈಯಿಂದ ಅವನ ಕೈ ಹಿಡಿದು ಅಂಕಿತ ಹಾಕಿಸಿದೆನು. ಆ ಸಂದರ್ಭದಲ್ಲಿ ಸಾಧೂ ಬಸಪ್ಪ ಮತ್ತು ಲಿಂಗಪ್ಪ ತಿಮ್ಮಾಪೂರ ಹಾಜರಿದ್ದರು.

ಪ್ರಶ್ನೆ: ದೇಸಾಯಿ ಬಳಿ ಹೇರಳ ಹಣವಿದ್ದಿತು. ಅದನ್ನು ತನ್ನ ಆಶೆಯಂತೆ ತನ್ನ ಪತ್ನಿಗೆ ಕೊಡಲಿಕ್ಕೆ ಆಗಲಿಲ್ಲ. ಹಾಗಿದ್ದ ಬಳಿಕ ಅವನು ತನ್ನ ಪತ್ನಿಗೆ ಎರಡು ಲಕ್ಷ ಹಣ ಕೊಡಲು ಹೇಗೆ ಹೇಳಿದನು?

ಉತ್ತರ: ತನ್ನ ಪತ್ನಿ ಚಿಕ್ಕ ಹುಡುಗಿಯಾಗಿದ್ದು, ಒಂದು ವೇಳೆ ದತ್ತು ಸ್ವೀಕಾರ ಕಾರ್ಯ ಜರುಗಿದ್ದೇ ಆದರೆ, ತನ್ನ ವಾರಸುದಾರನ ಜೊತೆ ಸೌಹಾರ್ದ ಸಂಬಂಧ ಮುಂದುವರಿಸಲು ಅವಳಿಗೆ ಸಾಧ್ಯವಾಗಲಿಕ್ಕಿಲ್ಲ. ಅವಳಿಗೆ ಬೇರೆ ಇರುವುದು ಅವಶ್ಯವಾಗಬಹುದು ಎಂದು ದೇಸಾಯಿ ಹೇಳಿದ್ದರಿಂದ ನಾನು ಹಣ ತೆಗೆದುಕೊಂಡು ಅವಳ ಹತ್ತಿರ ಇಟ್ಟೆನು. ಈ ದಿಶೆಯಲ್ಲಿ ದೇಸಾಯಿಯು ನೀಡಿದ ನಿರ್ದೇಶನದ ಬಗ್ಗೆ ಯಾರಿಗೂ ಗೊತ್ತಿಲ್ಲ.

ಪ್ರಶ್ನೆ: ನೀನೂ ಕೂಡ ಆಭರಣದ ಕೆಲವು ಪೆಟ್ಟಿಗೆಗಳನ್ನು ತೆಗೆದುಕೊಂಡಿದ್ದು ಅವುಗಳನ್ನು ತಿರುಗಿ ಕೊಟ್ಟಿರುವಿ, ಹಾಗೆ ಮಾಡಲು ಏನು ಕಾರಣ. ತಿರುಗಿಕೊಟ್ಟ ಪೆಟ್ಟಿಗೆಳಿಂದ ಎಷ್ಟು ಆಭರಣಗಳನ್ನು ತೆಗೆದುಕೊಂಡೆ?

ಉತ್ತರ: ದೇಸಾಯಿಯ ಪತ್ನಿಗೆ ಸ್ವಲ್ಪ ಆಭರಣ ಬೇಕಾಗಬಹುದೆಂದು ಬಸಲಿಂಗಪ್ಪ ಜಕಾತಿಯ ವಶದಲ್ಲಿದ್ದ ಕೋಣೆಯಿಂದ ಮೂರು ಹಣದ ಪೆಟ್ಟಿಗೆಗಳನ್ನು ಮತ್ತು ಎರಡು ಆಭರಣದ ಪೆಟ್ಟಿಗೆಗಳನ್ನು ತೆಗೆದುಕೊಂಡೆನು. ಇದು ನಡೆದದ್ದು ದೇಸಾಯಿ ಸತ್ತ ಬಳಿಕ ಬೆಳಗು ಹರಿದ ಒಂದು ತಾಸಿನ ಬಳಿಕ. ಈ ಹಣದ ಮತ್ತು ಆಭರಣದ ಪೆಟ್ಟಿಗೆಗಳನ್ನು (ಮೇಲಿನ ಜಮದಾರ ಖಾನೆಯಿಂದ ಹಣ ತೆಗೆದುಕೊಂಡ ಬಂದ ವ್ಯಕ್ತಿಗಳ ಮೂಲಕ) ದೇಸಾಯಿಯ ಪತ್ನಿ ಮಲಗುವ ಕೋಣೆಗೆ ಕಳಿಸಿಕೊಡಲಾಯಿತು. ಬಳಿಕ ಬ್ರಿಟಿಷ ಪರ ವ್ಯಕ್ತಿಗಳು ಬಂದರು ಮತ್ತು ಸರಕಾರದ ಪರ ಉಳಿದಿದ್ದ ವೆಂಕಟರಾವನು ಆಭರಣಗಳ ಲೆಕ್ಕ ತೆಗೆದುಕೊಂಡನು. ಗುರುಸಿದ್ದಪ್ಪ ಮತ್ತು ಇತರೆ ನನ್ನ ವೈರಿಗಳು ನಾನೇ ಹಣವನ್ನು ತೆಗೆದುಕೊಂಡಿದ್ದೆನೆಂದು ಹೇಳಹತ್ತಿದರು. ಆಗ ನಾನು ಈ ಸುದ್ದಿ ಸರಕಾರದ ಕಿವಿಗೆ ಮುಟ್ಟುತ್ತದೆಂದು ಹೆದರಿ ಅವರನ್ನು ಹಿಂದಕ್ಕೆ ಕರೆದುಕೊಂಡು ಹೋಗಿ ಬಸಲಿಂಗಪ್ಪ ಜಕಾತಿ ಕೋಣೆಯ ಎದುರಿಗೆ ನಿಲ್ಲಿಸಿ, ನಾನು ಹಾಗೆ ಮಾಡಿದ್ದೇನೋ ನಿಜ. ಆದರೆ ಅವುಗಳೊಳಗಿಂದ ಏನನ್ನು ತೆಗೆದುಕೊಂಡಿಲ್ಲವೆಂದೂ, ನಾನು ತೆಗೆದುಕೊಂಡಷ್ಟು ಮರಳಿಕೊಟ್ಟಾಗಿದೆ ಎಂದು ಹೇಳಿದೆನು.

ಪ್ರಶ್ನೆ: ಕಿತ್ತೂರ ಗುರುಸಿದ್ದಪ್ಪನ ಮನೆಯಿಂದ ನೀನು ಸ್ವಲ್ಪ ಹಣ ತೆಗೆದುಕೊಂಡಿದ್ದೆ ಎಂದು ವರದಿಯಾಗಿದೆ. ಇದೇನು?

ಉತ್ತರ: ದೇಸಾಯಿಯ ಕೆಲವಷ್ಟು ಹಣ ಅವನ ವಶದಲ್ಲಿತ್ತು. ಎಷ್ಟಿದ್ದಿತು ನನಗೆ ಗೊತ್ತಿಲ್ಲ. ಸಾಯುವುದಕ್ಕಿಂತ ಮೊದಲು ದೇಸಾಯಿ ತನಗೆ ಹಣ ಬೇಕಾದಾಗಲೆಲ್ಲ ಇದರೊಳಗಿನ ಸ್ವಲ್ಪ ಹಣ ಪಡೆಯಲು ನರಸಿಂಗರಾವ್ ಮತ್ತು ಗುರುಪುತ್ರ ವೀರಪ್ಪ ಇವರನ್ನು ಕಳಿಸಿಕೊಡುತ್ತಿದ್ದನು. ಸಾಯುವುದಕ್ಕೆ ಒಂದು ವಾರ ಮೊದಲು ಉಳಿದ ಪೇಶಕುಶ್(ನಝರ್/ಕಾಣಿಕೆ) ಹಣವನ್ನು ಸರಕಾರ ಕೇಳಿದ್ದರಿಂದ ಅದನ್ನು ಕೊಡುವುದಕ್ಕಾಗಿ ಸಾಕಾಗುವಷ್ಟು ಹಣವನ್ನು ಕಿತ್ತೂರ ಶಿವಬಸಪ್ಪನ ಮನೆಯಿಂದ ತೆಗೆದುಕೊಂಡು ಬರಲು ಗುರುಪುತ್ರ ವೀರಪ್ಪನಿಗೆ ಹೇಳಿದನು. ನಾನು ಕೂಡಾ ಅಲ್ಲಿದ್ದ ಎಲ್ಲ ಹಣವನ್ನು ಅದು

ಯಾವುದೇ ರೂಪದಲ್ಲಿ-ಬಂಗಾರ ಇಲ್ಲವೆ ಬೆಳ್ಳಿ ತೆಗೆದುಕೊಂಡು ಬರಲು ಹೇಳಿದೆನು. ಅಲ್ಲಿ ಬೆಳ್ಳಿ ಇಲ್ಲವೆಂದೂ ಅಲ್ಲಿದ್ದ ಸುಮಾರು 6000 ರೂಪಾಯಿ ಜೊತೆ ಬಂಗಾರ ಅದೆಲ್ಲವನ್ನು ತಂದು ನಾನು ದೇಸಾಯಿಯ ಕೆಳಗಿನ ಜಮದಾರ ಖಾನೆಯಲ್ಲಿ ಇರಿಸಿದೆನು.

ಪುಣೆಯಲ್ಲಿರುವ ವಕೀಲ ರಾಚಪ್ಪ ಸರಕಾರಕ್ಕೆ ಕೊಡಬೇಕಾದ ರೂ. 6000ಗಳನ್ನು ತೆಗೆದುಕೊಂಡು ಬರಲು ಒಬ್ಬ ಕಾರಕೂನನ್ನು ಕಳುಹಿಸಿದ್ದನು. ಆದ್ದರಿಂದ ದೇಸಾಯಿ ಸತ್ತ ಬಳಿಕ ಸೋಮವಾರದಂದು ನರಸಿಂಗರಾವನಿಗೆ ಆ ಹಣವನ್ನು ವಕೀಲನ ಕಾರಕೂನ ಲಿಂಗಪ್ಪ ದೇವಲಾಪುರಗೆ ಕೊಟ್ಟು ಅದನ್ನು ತೆಗೆದುಕೊಂಡು ಹೋಗಲು ಹೇಳಿದ್ದನೆಂದು ತಿಳಿಸಿದೆನು. ಅವನು ರೂ. 2000 ತೆಗೆದುಕೊಂಡು ಉಳಿದ ರೂ. 4000 ಅಲ್ಲೇ ಬಿಡುವುದಾಗಿಯೂ ಅದು ನರಸಿಂಗರಾವನ ಮನೆಯಲ್ಲೇ ಇರಲೆಂದು ಹೇಳಿದನು. ಈ 4000 ರೂ.ಗಳನ್ನು ಆರು ದಿನಗಳ ಹಿಂದೆ ಕುನ್ನೂರ ವೀರಪ್ಪನ ಜೊತೆಗೆ ಪುಣೆಗೆ ಕಳಿಸಿಕೊಟ್ಟೆನು.

ಪ್ರಶ್ನೆ: ನೀನು ಹಣದ ಜೊತೆಗೆ ಲೆಕ್ಕದ ಪುಸ್ತಕವನ್ನೇಕೆ ಖಜಾನೆಯೊಳಗಿಂದ ಹೊರ ತೆಗೆದುಕೊಂಡೆ?

ಉತ್ತರ: ಸಂಸ್ಥಾನಕ್ಕೆ ಸಂಬಂಧಿಸಿದ ಗವ್ಹರ್ನರ್ ಮುಂತಾದವರಿಂದ ಬಂದ ನಾಲ್ಕು ಅಥವಾ ಐದು ಸನ್ನದುಗಳ ದಪ್ತರಗಳನ್ನು ಮತ್ತು ಕೆಲವು ಲೆಕ್ಕದ ಪುಸ್ತಕಗಳನ್ನು ಕಾಯ್ದಿಡುವ ಉದ್ದೇಶದಿಂದ ಅವಸರದಲ್ಲಿ ಹೊತ್ತೊಯ್ಯಲಾಯಿತು". ಎಂದು ತಿಳಿಸಿದನು.

ಅದೇ ರೀತಿಯಾಗಿ ಕಿತ್ತೂರ ಸರದಾರ ಮಲ್ಲಪ್ಪನ ವಿಚಾರಣೆಯಲ್ಲಿ ಆತ ನೀಡಿದ ಉತ್ತರಗಳು ಇಂತಿವೆ. (P.D 1824 V.No. 18/162 S-165 p.81)

ಪ್ರಶ್ನೆ: ಮಸ್ತಮರಡಿಯ ಹುಡುಗನನ್ನು ದತ್ತು ತೆಗೆದುಕೊಂಡ ಬಗ್ಗೆ ನಿನಗೆ ಗೊತ್ತಿದ್ದನ್ನು ಹೇಳು. ಯಾವ ಹೊತ್ತಿಗೆ ದತ್ತು ಸ್ವೀಕಾರ ಸಮಾರಂಭ ಜರುಗಿತು?

ಉತ್ತರ: ದೇಸಾಯಿ ರವಿವಾರ ಬೆಳಗಿನ 4 ಗಂಟೆ ಸುಮಾರಿಗೆ ತೀರಿಕೊಂಡ. ಹುಡುಗನ ಕೊರಳಿಗೆ ರಾಜಮುದ್ರೆ ನೇತು ಹಾಕಿ ಅದೇ ದಿನ (ರವಿವಾರ) ಮುಂಜಾನೆ 8 ಗಂಟೆಗೆ ದತ್ತು ಸ್ವೀಕಾರ ಸಮಾರಂಭವನ್ನು ನೆರವೇರಿಸಲಾಯಿತು. ದೇಸಾಯಿ ಜೀವಿಸಿದ್ದಾಗ ದತ್ತು ತೆಗೆದುಕೊಳ್ಳುವ ವಿಷಯಕ್ಕೆ ಸರಕಾರಕ್ಕೆ ಒಂದು ಪತ್ರ ಬರೆದಿದ್ದನು. ಆದರೆ ಅದಕ್ಕೆ ಅಂಕಿತ ಹಾಕಿರಲಿಲ್ಲ. ರವಿವಾರ ಮುಂಜಾನೆ ಮಲ್ಲಪ್ಪ ಕುನ್ನೂರ ಸತ್ತ ದೇಸಾಯಿಯ ಕೈ ಹಿಡಿದು ಪತ್ರಗಳಿಗೆ ಅಂಕಿತ ಹಾಕಿ ಅವುಗಳನ್ನು ಮದ್ರಾಸಿಗೆ, ಬಾಂಬೆಗೆ, ಪೂನಾಗೆ ಮತ್ತು ಧಾರವಾಡಕ್ಕೆ ಕಳಿಸಲಾಯಿತು.

ಆ ಸಂದರ್ಭದಲ್ಲಿ ಈ ಕೆಳಗಿನ ವ್ಯಕ್ತಿಗಳು ಉಪಸ್ಥಿತರಿದ್ದರು.

ಮಲ್ಲಪ್ಪ ಕುನ್ನೂರ, ಕುನ್ನೂರ ವೀರಪ್ಪ, ತಿಮ್ಮಾಪೂರ ಸಂಗಪ್ಪ, ದಳವಾಯಿ ಶಂಕರಪ್ಪ ಮತ್ತು ನಾನು ನನ್ನ ಜೊತೆಗೆ ಇನ್ನೂ ಹಲವರಿದ್ದರು. ಅವರ ಹೆಸರುಗಳು ನಂತರ ನೆನಪಿನಲ್ಲಿ ಉಳಿಯಲಿಲ್ಲ. ದೇಸಾಯಿಯು ತನ್ನ ಜೀವಿತ ಕಾಲದಲ್ಲಿ ಈ ಮಗುವನ್ನು ದತ್ತು ತೆಗೆದುಕೊಳ್ಳುವ ಇಚ್ಛೆ ಹೊಂದಿದ್ದನ್ನು ಮತ್ತು ಪತ್ರಕ್ಕೆ ಕೊನೆಯ ಕ್ಷಣದಲ್ಲಿ ಅಂಕಿತ ಹಾಕುವುದಾಗಿ ಭಾಷೆ ಕೊಟ್ಟಿದ್ದನ್ನು ಪರಿಗಣಿಸಿ ಅದನ್ನು ಈಡೇರಿಸಲು ಅನುಕೂಲ ಸಮಯ ಈಗ ಬಂದಿದೆ ಎಂದು ತಿಳಿದೆವು. ದತ್ತು ಸ್ವೀಕಾರ ಸಮಾರಂಭ ವಸ್ತುತಃ ಜರುಗಿದೆ ಎಂದು ಭಾವಿಸಲು ತೀರ್ಮಾನಿಸಿದೆವು. ಮತ್ತು ಅದರ ಪ್ರಕಾರ ಆ ಮಗುವಿನ

ಕೊರಳಲ್ಲಿ ರಾಜಮುದ್ರೆಯನ್ನು ನೇತು ಹಾಕಿದೆವು. ಆ ಸಿಕ್ಕಾ (ಮುದ್ರೆ) ಕೀಲಿ ಹಾಕಿ ಭದ್ರಪಡಿಸಿದ ಒಂದು ಕೋಣೆಯಲ್ಲಿದ್ದಿತು. ಮಲ್ಲಪ್ಪ ಕುನ್ನೂರ ಮತ್ತು ಅದ್ರುಶಪ್ಪ ಬಾಗಿಲ ತೆಗೆದು ನಾನು ಮೇಲೆ ವಿವರಿಸಿದ ಪ್ರಕಾರ ಅದನ್ನು ಉಪಯೋಗಿಸಲಾಯಿತು.

ಪ್ರಶ್ನೆ: ದೇಸಾಯಿ ತನ್ನ ಜೀವಿತ ಅವಧಿಯಲ್ಲಿ ಇದೇ ಮಗುವನ್ನು ದತ್ತು ಪಡೆಯಲು ಆಯ್ಕೆ ಮಾಡಿದ್ದ ಮತ್ತು ಇಚ್ಛಿಸಿದ್ದ ಎಂಬುದು ನಿಮಗೆ ಹೇಗೆ ಗೊತ್ತು?

ಉತ್ತರ: ಎರಡು ತಿಂಗಳ ಹಿಂದೆ ಕರೆತಂದಿದ್ದ 6 ಮಕ್ಕಳಲ್ಲಿ ಮಾಸ್ತಮರಡಿಯ ಪಟೇಲರ ಮಗನನ್ನು ಇರಿಸಿಕೊಂಡನು. ಆಗ ಅಲ್ಲಿ ಗುರುಸಿದ್ದಪ್ಪ, ಸರದಾರ ವೀರಪ್ಪ ಕುನ್ನೂರ, ಮಲ್ಲಪ್ಪ ಕುನ್ನೂರ, ನಾನು ಮತ್ತು ಇನ್ನೂ ಕೆಲವರು ಅವರ ಹೆಸರು ಈಗ ನೆನಪಿಲ್ಲ–ಉಪಸ್ಥಿತರಿದ್ದೆವು. ಆದರೆ, ಮೃತ ದೇಸಾಯಿ ಜೀವಿಸಿದ್ದಾಗ ದತ್ತು ಸ್ವೀಕಾರ ಪ್ರಕ್ರಿಯೆ ಜರುಗಲಿಲ್ಲ.

ಪ್ರಶ್ನೆ: ಖಜಾನೆಯಿಂದ ಹಣ ಮತ್ತು ಆಭರಣಗಳನ್ನೇನಾದರೂ ಮಲ್ಲಪ್ಪ ತೆಗೆದುಕೊಂಡದ್ದು ನಿನಗೇನಾದರೂ ಗೊತ್ತೇ?

ಉತ್ತರ: ಮೃತ ದೇಸಾಯಿಯು ತನ್ನ ಜೀವಿತಾವಧಿಯಲ್ಲಿ ಒಂದು ದಿನ ಮಲ್ಲಪ್ಪ ಕುನ್ನೂರ ಮತ್ತು ಪತ್ನಿ ವೀರವ್ವ ಇವರನ್ನು ತನ್ನ ಕೋಣೆಯೊಳಗೆ ಕರೆಯಿಸಿಕೊಂಡು ಮಲ್ಲಪ್ಪನು ಹೋಗಿ ಪೆಟ್ಟಿಗೆಯೊಳಗಿನ ಆಭರಣಗಳನ್ನು ತಂದು ತನ್ನ ಪತ್ನಿಗೆ ಕೊಡಲೆಂದು ಆಶಿಸಿದನು. ಆ ಪ್ರಕಾರ ಅವನು ಆಭರಣಗಳನ್ನು ತಂದು ದೇಸಾಯಿಗೆ ಕೊಟ್ಟನು. ಮತ್ತು ದೇಸಾಯಿ ಅವನ್ನು ಪತ್ನಿ ವೀರವ್ವಳಿಗೆ ಕೊಟ್ಟನು. ಆಗ ಕುನ್ನೂರ ಮಲ್ಲಪ್ಪ ಮತ್ತು ನಾನು ಬಾಗಿಲಿಗೆ ನಿಂತಿದ್ದೆವು. ದೇಸಾಯಿ ಆಡಿದ ಮಾತುಗಳನ್ನು ನಾವು ಕೇಳಿಸಿಕೊಂಡೆವು. ನಾವು ಹೊರಗೆ ಕೂಡಬೇಕೆಂದು ದೇಸಾಯಿ ಬಯಸಿದ್ದರಿಂದ ಬಾಗಿಲಿಗೆ ಕುಳಿತೆವು. ದೇಸಾಯಿ ತೀರಿಕೊಂಡ ಬಳಿಕ ಆಭರಣಗಳನ್ನು ಕೊಟ್ಟಿದ್ದನ್ನು ನಾನು ನೋಡಿದೆನು. ಕೋಣೆಯಿಂದ ಮುದ್ರೆಯನ್ನು ತೆಗೆದುಕೊಂಡ ಮರುದಿನ ಮಲ್ಲಪ್ಪ ಕುನ್ನೂರ ತಾನೂ ಕೂಡಾ ಕೆಲವೊಂದು ಆಭರಣ ಮತ್ತು ಹಣವನ್ನು ಖಜಾನೆಯಿಂದ ಹೊರಗೆ ತೆಗೆದಿದ್ದನ್ನು ಮಲ್ಲಪ್ಪ ಕುನ್ನೂರ ನನಗೆ ಹೀಗೆ ಹೇಳಿದನು. ಅದಕ್ಕೆ ನಾನು ಕಾರಣಗಳನ್ನು ಕೇಳಿದ್ದಕ್ಕೆ– ದಿವಗಂತ ದೇಸಾಯಿಯು ಅವುಗಳನ್ನು ವೀರವ್ವಳಿಗೆ ನೀಡುವಂತೆ ಆಜ್ಞೆ ಮಾಡಿದ್ದನು ಎಂದು ಉತ್ತರಿಸಿದನು. ಈ ಸಂಭಾಷಣೆ ನಡೆದಾಗ ಅಲ್ಲಿ ಯಾರೂ ಇದ್ದಿರಲಿಲ್ಲ. ದೇಸಾಯಿ ಯಾವುದೆ ಹಣವನ್ನು ವೀರವ್ವಳಿಗೆ ಕೊಡಲು ಆದೇಶ ನೀಡಿದ್ದನೆಂಬುದು ನನಗೆ ಗೊತ್ತಿಲ್ಲ. ಅವನು ಬಚ್ಚಿಟ್ಟ ಹಣ ಮತ್ತು ಆಭರಣಗಳು ನಂತರ ಒಂದು ಕೋಣೆಯಲ್ಲಿ ಸಿಕ್ಕವು. ಅಲ್ಲಿ ಹಣ ಇಟ್ಟಿದ್ದೇನೆ ಎಂದು ನನಗೆ ಹೇಳಿ ಆ ಕೋಣೆಗೆ ಕೀಲಿ ಹಾಕಿದ್ದನು ಮತ್ತು ಆ ಕೀಲಿಯನ್ನು ನನ್ನ ಕೈಗೆ ಕೊಟ್ಟನು. ನಾನು ಅದನ್ನು ವೀರವ್ವಳಿಗೆ ಮುಟ್ಟಿಸಿದೆನು. ಆದರೆ ಅವನು ಕೋಣೆಯಲ್ಲಿ ಹಣ ಇಡುವುದನ್ನು ನಾನು ನೋಡಲಿಲ್ಲ. ಎರಡು–ಮೂರು ದಿವಸಗಳ ಬಳಿಕ ವೀರವ್ವ ಮತ್ತು ನಾನು ಅದನ್ನು ನೋಡಿದೆವು.

ಪ್ರಶ್ನೆ: ಶಿವಬಸಪ್ಪನ ಬಳಿ ಹಣ ಇಡಲಾಗಿತ್ತು. ಅದಕ್ಕಾಗಿ ಅವನನ್ನು ಕರೆಸಿದ ಬಗ್ಗೆ ನಿನಗೇನು ಗೊತ್ತು?

ಉತ್ತರ: ದಿವಗಂತ ದೇಸಾಯಿಯ ಬಂಗಾರ ಮತ್ತು ಹಣ ಶಿವಬಸಪ್ಪನ ಬಳಿ ಇದ್ದುದರ ಬಗ್ಗೆ ನಾನು ಕೇಳಿದ್ದೇನೆ. ಮಲ್ಲಪ್ಪ ಕುನ್ನೂರ ಒಂದು ದಿನ ದೇಸಾಯಿಯ ಬಳಿಗೆ ಬಂದು ಅದಕ್ಕಾಗಿ ಬೇಡಿಕೆ ಇಟ್ಟನು. ದೇಸಾಯಿ ಗುರುವಿನ ಮಗ ವೀರಪ್ಪನನ್ನು

ಕರೆಕಳುಹಿಸಿ ಅವನ ಬೇಡಿಕೆಯ ಪ್ರಕಾರ ಅದನ್ನು ಮಲ್ಲಪ್ಪನಿಗೆ ಕೊಡಲು ಹೇಳಿದನು. ಆದರೆ ಎಷ್ಟು ಏನು ಮತ್ತು ಯಾರ ಮುಖಾಂತರ ಕೊಟ್ಟನೆಂಬುದು ಅಥವಾ ಆ ವ್ಯವಹಾರಕ್ಕೆ ಸಂಬಂಧಿಸಿದ ಮತ್ತೇನೂ ನನಗೆ ಗೊತ್ತಿರುವುದಿಲ್ಲ ಎಂದು ಸರದಾರ ಮಲ್ಲಪ್ಪನು ಥ್ಯಾಕರೆ ಮುಂದೆ ಸಾಕ್ಷಿ ನೀಡಿದನು.

ದತ್ತು ಪ್ರಸಂಗ ಕುರಿತು ಬಾಂಬೆ ಗವ್ಹರ್ನರ ಮೌಂಟ್‌ಸ್ಟುವರ್ಟ್ ಎಲ್ಫಿನ್‌ಸ್ಟನ್ ಇವರಿಗೆ ದಿನಾಂಕ: 8 ಅಕ್ಟೋಬರ್ 1824ರಂದು ಕಿತ್ತೂರಿನ ವಕೀಲ ರಾಚಪ್ಪನ ಕೋರಿಕೆ ಪತ್ರದ ಸಾರಾಂಶ ಈ ಕೆಳಗಿನಂತಿದೆ (P.D 1824 V.No. 18/162 S-253 p. 257).

"ಗೌರವಾನ್ವಿತರೆ ಸಂಸ್ಥಾನದ ಒಂದು ಪತ್ರದೊಂದಿಗೆ ಲಿಂಗೊಪಂತನನ್ನು ತಮ್ಮ ಕಡೆಗೆ ಕಳುಹಿಸಿಕೊಡಲಾಗಿದೆ ಎಂದು ಹೇಳುವ ಗೌರವ ನನ್ನದಾಗಿದೆ. ಕೆಲವು ಬೇಡಿಕೆಗಳನ್ನು ನಿಮ್ಮ ಮುಂದಿಡಲು ವೀರಪ್ಪನನ್ನು ಕೂಡಾ ನಿಮ್ಮ ಕಡೆಗೆ ಕಳುಹಿಸಿ ಕೊಡಲಾಗಿದೆ. ಆದರೆ ವಿಚಾರಣೆ ಸದ್ಯದಲ್ಲೆ ಪ್ರಾರಂಭವಾಗುವುದರಿಂದ ಮಿ. ಥ್ಯಾಕರೆ ಬರುವಿಕೆಗಾಗಿ ಕಾಯಬೇಕೆಂಬುದು ಮಿ. ಚಾಪ್ಲಿನ ಅಪೇಕ್ಷೆಯಾಗಿದೆ. ಆದ್ದರಿಂದ ವೀರಪ್ಪ ಧಾರವಾಡಕ್ಕೆ ಹೋಗಲು ಹೊರಟು ನಿಂತನು. ಆದರೆ ಅವನು ಹೊರಡುವುದಕ್ಕೆ ಮುಂಚೆ ಸಂಸ್ಥಾನಕ್ಕೆ ಸಂಬಂಧಿಸಿದ ಕೆಲವು ನಿರ್ದಿಷ್ಟ ವಿಷಯಗಳ ಕುರಿತು ವಿಚಾರಣೆ ಮಾಡಿದೆನು. ತನ್ನ ದಿವಂಗತ ಯಜಮಾನನ ಸಾವಿಗಿಂತ ಆರು ವಾರ ಮೊದಲು ದತ್ತು ತೆಗೆದುಕೊಳ್ಳುವ ಉದ್ದೇಶದಿಂದ ತನ್ನ ಕುಟುಂಬಕ್ಕೆ ಸೇರಿದ ಒಬ್ಬ ಹಸುಗೂಸನ್ನು ಕರೆ ತರಲಾಯಿತೆಂದು, ತನ್ನ ಯಜಮಾನನ ಆರೋಗ್ಯ ಸುಧಾರಿಸುವಂತೆ ಕಂಡು ಬರಲು ಅವನನ್ನು ತಿರುಗಿ ಕಳಿಸಿಕೊಡುವುದಾಗಿ ನಿರ್ಧರಿಸಲಾಗಿತ್ತಾದರೂ ಅವನನ್ನು ಮತ್ತು ಅವನ ಮೂರು ಜನ ಸಹಾಯಕರನ್ನು ನಿಲ್ಲಿಸಿಕೊಳ್ಳಲಾಯಿತು. ಆದರೆ ತಮ್ಮ ಯಜಮಾನನ ಕಾಯಿಲೆ ಉಲ್ಬಣಗೊಳ್ಳುತ್ತಿದ್ದಂತೆ ಅವರು ಅಪಾಯದ ಭೀತಿಗೊಳಗಾದರು. ಈ ನಾಲ್ವರು ತಮ್ಮೊಳಗೆ ಆಲೋಚನೆ ಮಾಡಿ, ಪ್ರತಿಜ್ಞಾಬದ್ಧರಾಗಿ ಆ ಹುಡುಗನನ್ನು ಸಂಸ್ಥಾನದ ವಾರಸುದಾರನನ್ನಾಗಿ ನೇಮಿಸಿದರು ಮತ್ತು ಅವನ ಹೆಸರಿನೊಂದಿಗೆ ಮುದ್ರೆ ಒತ್ತಲಾಯಿತೆಂದು, ನಂತರ ಅವರು ತಮ್ಮ ಯಜಮಾನನ ಕೈಯಲ್ಲಿ ಪೆನ್ನು ಇಟ್ಟು ಅನೇಕ ಕಾಗದ ಪತ್ರಗಳ ಮೇಲೆ ಅವನ ಸಹಿ ಮಾಡಿಸಿದರು. ಅವುಗಳನ್ನು ಬೇರೆ ಹಲವಾರು ಸ್ಥಳಗಳಿಗೆ ಕಳಿಸಿಕೊಟ್ಟರು, ಬಳಿಕ ತಮ್ಮ ಯಜಮಾನ ತೀರಿಕೊಂಡನೆಂದು ನನಗೆ ಹೇಳಿದನು. ಇದು ವೀರಪ್ಪನ ವರದಿ, ಮತ್ತು ನಾನು ಸ್ವತಂತ್ರ ವಹಿಸಿ ಹೇಳಬಯಸುವುದೆನೆಂದರೆ, ಕಾರಭಾರಿಗಳು ತಪ್ಪು ದಾರಿ ತುಳಿದರೂ, ಅವರು ಮಾಡಿದ್ದು ಸಂಸ್ಥಾನದ ಮತ್ತು ಅದರ ಅವಲಂಬಿತರ ಹಿತ ಕಾಪಾಡುವ ಉದ್ದೇಶದಿಂದ ಮಾಡಿದ್ದಾಗಿದ್ದರೂ, ಅವರು ಸನ್ಮಾನ್ಯರಾದ ತಮಗೆ ಸಮಾಚಾರ ತಿಳಿಸಬೇಕಾಗಿತ್ತು. ಅವರು ಅದನ್ನು ಮಾಡಲಿಲ್ಲ. ಆದಾಗ್ಯೂ ಈ ಕರ್ತವ್ಯಲೋಪವನ್ನು ಗಂಭೀರವಾಗಿ ಪರಿಗಣಿಸಬಾರದು ಇಲ್ಲವೆ ಸಂಸ್ಥಾನಕ್ಕೆ ಅನಾನುಕೂಲವಾಗಲು ಅವಕಾಶ ಕೊಡಬಾರದು. ಆದರೆ ದಿವಂಗತ ಯಜಮಾನರು ಇದ್ದ ಸಮಯದಲ್ಲಿ ತೋರಿಸುತ್ತಿದ್ದ ನಿಮ್ಮ ಬೆಂಬಲ ಮತ್ತು ದಯಾದೃಷ್ಠಿ ಮುಂದುವರಿಯಬೇಕು. ಈ ವಿಷಯದ ಬಗ್ಗೆ ಹೆಚ್ಚಿಗೆ ವಿವರಣೆ ಕೊಡುವುದು ನನ್ನ ಕೆಲಸವಲ್ಲ. ಮಿ. ಚಾಪ್ಲಿನ್‌ಗೆ ಅಮುಖ್ಯ ವಿಷಯಗಳ ಬಗೆಗೆ ಸುದ್ದಿ ತಿಳಿಸುವುದಕ್ಕಾಗಿ, ನನ್ನ ಯಜಮಾನನ ಆದೇಶದ ಮೇರೆಗೆ ನಾನು ಪುಣೆಯಲ್ಲಿದ್ದು 19 ತಿಂಗಳಾಯಿತು. ನನ್ನ ಯಜಮಾನ ಈಗ ಬದುಕಿರುವುದಿಲ್ಲ. ಆದರೆ ತನ್ನನ್ನು ಅವಲಂಭಿಸಿದ ಅನೇಕ ಕುಟುಂಬಗಳನ್ನು ಹಿಂದೆ ಬಿಟ್ಟು ಹೋಗಿದ್ದಾನೆ. ಅದರ ಪರಿಗಣನೆ ನನ್ನ ಕೋರಿಕೆಯನ್ನು ಕೇಳುವಂತೆ ಮತ್ತು ಅಲ್ಲಿಯ ವ್ಯವಹಾರಗಳು ಎಂದಿನಂತೆ

ನಡೆಯಲು ಅನುವು ಮಾಡಿಕೊಡಲು ನಿಮ್ಮ ಮನವೊಲಿಸಬಹುದು. ಈ ಎಲ್ಲ ಪರಿಸ್ಥಿತಿಯನ್ನು ನಾನು ಈಗಾಗಲೇ ಮಿ. ಚಾಪ್ಲಿನ್‌ಗೆ ಅರುಹಿದ್ದೇನೆ. ಆದರೆ, ಈ ವಿಷಯದ ಬಗ್ಗೆ ನಿಮ್ಮ ಆದೇಶವನ್ನು ಕೋರುತ್ತೇನೆ.

ಗೋಕಾಕದಲ್ಲಿ ನಡೆದ ಕದನದಲ್ಲಿ ಪಟವರ್ಧನರು ಶಿವಲಿಂಗ ರುದ್ರಸರ್ಜನ ಮುತ್ತಜ್ಜ ವೀರಭದ್ರಸರ್ಜನನ್ನು ಸೆರೆ ಹಿಡಿದರು. ಅವನನ್ನು ಮೀರಜದಲ್ಲಿನ ಸೆರೆಮನೆಯಲ್ಲಿರಿಸಿದರು. ಅವನು ಅಲ್ಲಿಯೇ ಮೃತನಾದನು. ಅವನು ತೀರಿಕೊಂಡ ಬಳಿಕ ಮೀರಜಕರ್‌ನು ಪಾರ್ಥಿವ ಶರೀರವನ್ನು ಪಲ್ಲಕ್ಕಿಯಲ್ಲಿಟ್ಟು ಸಂಸ್ಥಾನಕ್ಕೆ ಕೊಟ್ಟು ಕಳುಹಿಸಿದನು. ಅಲ್ಲಿ ಅವನ ಹೆಂಡತಿ ಪಾರ್ವತಿಬಾಯಿ ಸಾಹೇಬ್ ಮತ್ತು ಕಾರಭಾರಿಗಳು ಕೂಡಿಕೊಂಡು ಶಿವಲಿಂಗರುದ್ರನ ತಂದೆಯಾದ ಮಲ್ಲಸರ್ಜನನ್ನು ವೀರಭದ್ರನ ಮಗನಾಗಿ ದತ್ತು ತೆಗೆದುಕೊಂಡರು. ಆ ಸಮಯದಲ್ಲಿ ಪುಣೆ ಸರಕಾರದ ಪರವಾನಿಗೆ ಇಲ್ಲದೆ ಅವನ ಹೆಸರಿನ ಮುದ್ರೆ ಒತ್ತಲಾಯಿತು. ಎರಡು ವರ್ಷಗಳ ನಂತರ, ಪೇಶ್ವೆಯರು ರೂ. 90,000ಗಳನ್ನು ನಝರ ಪಡೆದುಕೊಂಡು ಸಂಸ್ಥಾನವನ್ನು ಅವನಿಗೆ ದೃಢಪಡಿಸಿದರು. ಇದುವರೆಗೆ ಅದು ಅವನ ವಶದಲ್ಲೇ ಇದ್ದಿತು. ರಾಜಕೊಡುಗೆಯ ಮೂಲಕ ಅದು ಮೊದಲು ಸಂಸ್ಥಾನವೆಂದು ಮುಂದುವರಿಯಿತು. ತರುವಾಯ ಜನರಲ್ ಮನ್ರೊ ಅದನ್ನು ಸಂಸ್ಥಾನವೆಂದು ಮಾನ್ಯ ಮಾಡಿದನು. ಅವನು ಕಾಗದ ಪತ್ರಗಳನ್ನು ಪರಿಶೀಲಿಸಿ ಸನದು ಒಟ್ಟು ಹುದ್ದೆಯನ್ನು ದೃಢೀಕರಿಸಿದನು. ನೀವು ಸದ್ಯ ಪೇಶ್ವೆ ಅರಸರ ಸ್ಥಾನದಲ್ಲಿದ್ದೀರಿ, ಪೇಶ್ವೆಗಳು ಈ ಸಂಸ್ಥಾನಕ್ಕೆ ಹೊಂದಿದ್ದ ಸಂಬಂಧವನ್ನೇ ನೀವೂ ಸದ್ಯ ಹೊಂದಿರುವಿರಿ. ಆದ್ದರಿಂದ ನಿಮಗೆ ಅರಿಕೆ ಮಾಡಿಕೊಳ್ಳುವ ಉದ್ದೇಶದಿಂದ ಲಿಂಗೊಪಂತನನ್ನು ಕಳಿಸಿಕೊಟ್ಟಿರುವೆವು."

ಜಮಾದಾರ ಖನ್ನೇ ಮಲ್ಲಪ್ಪನು ತನ್ನ ಸಾಕ್ಷಿಯಲ್ಲಿ– "ರವಿವಾರ ಸೂರ್ಯೋದಯಕ್ಕೆ ಒಂದು ಗಂಟೆ ಮುಂಚೆ, ಕುನ್ನೂರ ಮಲ್ಲಪ್ಪ ನನ್ನನ್ನು ದೇಸಾಯಿಯ ಮನೆಗೆ ಕರೆದನು, ಮತ್ತು ನನ್ನ ಅಧೀನದಲ್ಲಿದ್ದ ಪೆಟ್ಟಿಗೆಯ ಕೀಲಿಯನ್ನು ತೆಗೆದು ಅದರಲ್ಲಿನ ಸಿಕ್ಕಾ(ಮುದ್ರೆ)ವನ್ನು ತನಗೆ ಕೊಡುವಂತೆ ಹೇಳಿದನು. ದೇಸಾಯಿಯ ಆಜ್ಞೆ ಇಲ್ಲದೆ ನಾನು ಹಾಗೆ ಮಾಡಲಾಗದು ಎಂದು ಉತ್ತರಿಸಿದೆನು, ಮತ್ತು ನಂತರ ನಾನು ದೇಸಾಯಿ ಇರುವ ಕೋಣೆಗೆ ಹೋಗಿ ಇದು ನಿಮ್ಮ ಆಜ್ಞೆಯೇ ಎಂದು ಕೇಳಲು ಮೂರು ಸಲ ಜೋರಾಗಿ ಕೂಗಿದೆ. ಹಾಗಿದ್ದಲ್ಲಿ ನಾನು ಸಿಕ್ಕಾವನ್ನು ತೆಗೆದು ಕೊಡುವೆನೆಂದು ಕೂಗಿದೆ, ಅವರು ಯಾವುದೇ ಉತ್ತರ ನೀಡಲಿಲ್ಲ, ಅವರ ದೇಹದ ಯಾವುದೇ ಅಂಗವು ಕಾಣದ ಹಾಗೇ ಬಟ್ಟೆಯಿಂದ ಅವರ ದೇಹವನ್ನು ಮುಚ್ಚಿ ಮಲಗಿಸಿದ್ದರು. ದೇಸಾಯಿಯವರು ಮಾತನಾಡಲು ಆಗುತ್ತಿಲ್ಲ ಅದಕ್ಕೆ ಕೀಲಿಯನ್ನು ತೆಗೆದು ಮುದ್ರೆಯನ್ನು ನಮಗೆ ಕೊಡು ಎಂದು ಹೇಳಿದನು, ನಾನು ಹಾಗೆಯೇ ಮಾಡಿದೆ. ನಾನು ಕೆಳಗೆ ಇಳಿದು ಬಂದು ದೇಸಾಯಿಯವರನ್ನು ನೋಡಿದೆ ಅವರು ಸತ್ತಿದ್ದರು. ಎಲ್ಲರೂ ಸೇರಿದ್ದರು ಮತ್ತು ಮುದ್ರೆಯನ್ನು ಮಗುವಿನ ಕುತ್ತಿಗೆಯ ಮೇಲೆ ಹಾಕಿದರು. ದೇಸಾಯಿಯ ಮರಣದ ನಂತರ ಇದು ನಡೆಯಿತು. ಮಲ್ಲಪ್ಪನು ಲೇಖನಿಯನ್ನು ದೇಸಾಯಿಯ ಕೈಗೆ ಇಟ್ಟು ಕೆಲವು ಸಾರ್ವಜನಿಕ ಪತ್ರಗಳಿಗೆ ಸಹಿ ಹಾಕಿಸಿದನು. ಮಲ್ಲಪ್ಪನು ಹಣವನ್ನು ತೆಗೆದುಕೊಂಡನು ಎಂದು ಕೇಳಿದ್ದೆ ಆದರೆ ಹಾಗೆ ಮಾಡುವುದನ್ನು ನೋಡಿಲ್ಲ ಎಂದು ಹೇಳಿದನು ಎಂದು ವಾಲ್ಟೇರ್ ಇಲಿಯಟ್‌ನು 26ನೇ ಸೆಪ್ಟೆಂಬರ್ 1824ರಂದು ವರದಿ ಮಾಡಿದನು (P.D 1824 V.No. 18/162 S-173 p.89).

ದತ್ತು ಪಡೆದ ಬಾಲಕನು ದೇಸಾಯಿಯ ಹತ್ತಿರದ ಸಂಬಂಧಿಯಾಗಿದ್ದಲ್ಲಿ ಅಥವಾ ಮೈಸೂರಿನ ಸುಲ್ತಾನ ಈ ಪ್ರದೇಶವನ್ನು ಗೆಲ್ಲುವುಕ್ಕಿಂತ ಪೂರ್ವದಲ್ಲಿನ ಹಳೆಯ ದೇಸಾಯಿಯ ವಂಶಸ್ಥನಾಗಿದ್ದರೆ, ಗವ್ವರ್ನರ್ ಇನ್ ಕೌನ್ಸಿಲ್‌ರ ಅಭಿಪ್ರಾಯದಂತೆ ಸಂಸ್ಥಾನವನ್ನು ಈ ಹಿಂದೆ ನೀಡಿದ ನಿರ್ದೇಶನದ ಷರತ್ತಿನ ಮೇಲೆ ಆತನಿಗೆ ಮುಂದುವರೆಸುವುದು ಎಂದು ನ್ಯೂನ್‌ಹ್ಯಾಮ್‌ನು ಕಮೀಶನರ್‌ರಿಗೆ ತಿಳಿಸಿದನು (P.D 1824 V.No. 18/162 S-177 p.91).

ಸಂಸ್ಥಾನದ ಒಡೆಯನ ಸ್ಥಾನದಲ್ಲಿ ಒಂದು ಮಗುವನ್ನು ಇರಿಸಿದ್ದೇವೆ. ಅವನ ಹೆಸರಿನಲ್ಲಿ ಮುದ್ರೆಯನ್ನು ಮಾಡಿಸಲಾಗಿದೆ. ದರ್ಘದಿಂದ ಈಗ ಅವನನ್ನು ಮರಳಿ ಕಳಿಸಿಕೊಡಬೇಕೆಂದು ಬಯಸಲಾಗಿದೆ. ಮಗುವನ್ನು ಸಂಸ್ಥಾನದಲ್ಲಿ ಇರಿಸಿಕೊಳ್ಳಲಾಗಿತ್ತು. ಆದರೆ ಅವನನ್ನು ಮಾನ್ಯ ಮಾಡುವ ಆದೇಶ ಇನ್ನೂ ನಿಮ್ಮಿಂದ ಹೊರಡಲಿಲ್ಲ. ಮಗು ಇಲ್ಲೇ ಇದ್ದಿತ್ತು. ಸಂಸ್ಥಾನದ ಪದ್ಧತಿಯಂತೆ ಅವನಿಗೆ ವಿಧ್ಯುಕ್ತವಾಗಿ ಮಾಡಬೇಕಾದುದನ್ನು ಮಾಡಿಯಾಯಿತು. ಅದರಲ್ಲಿ ಹೊಸತೇನಿರಲಿಲ್ಲ. ಅದು ಜೀವನೋಪಾಯಕ್ಕಾಗಿ ಸಂಸ್ಥಾನವನ್ನು ಅವಲಂಬಿಸಿದವರು ಕೂಡಿ ಮಾಡಿದ ಕಾರ್ಯಕ್ರಮ ಅಷ್ಟೇ ಆದ್ದರಿಂದ ಮಗುವನ್ನು ಕೊಟ್ಟು ಕಳಿಸಲಿಕ್ಕಾಗದು. ಅವನನ್ನು ಕಳಿಸಿಕೊಟ್ಟರೆ ನಾವು ಇಲ್ಲಿ ಉಳಿಯುವುದು ಸಮಂಜಸವೆನಿಸದು (P.D 1824 V.No. 18/162 S-193p.100). ಮುಂತಾದ ವಿಷಯಗಳ ಕುರಿತು ಚೆನ್ನವ್ವ ಮತ್ತು ವೀರವ್ವ ವಿಲಿಯಂ ಚಾಪ್ಲಿನ್‌ಗೆ ಪತ್ರ ಬರೆದರು.

ಇವರ ವಂಶಾವಳಿಯ ಬಗೆಗೆ ಸಾಕಷ್ಟು ಬಿನ್ನಾಭಿಪ್ರಾಯಗಳ ಸುದೀರ್ಘ ಚರ್ಚೆ ಕೂಡಾ ನಡೆದಿದ್ದನ್ನು ಕಾಣುತ್ತೇವೆ. ಒಟ್ಟಿನಲ್ಲಿ ದತ್ತು ಪ್ರಸಂಗ ಕುರಿತ ಪತ್ರ ವ್ಯವಹಾರಗಳು ಸಂಪೂರ್ಣ ಮುಕ್ತಾಯಗೊಂಡು, ಸಮಸ್ಯೆ ಇತ್ಯರ್ಥಗೊಳ್ಳುವಷ್ಟರಲ್ಲಿಯೇ ಥ್ಯಾಕರೆ ಸಾವಿನ ಘಟನೆ ಜರುಗಿ, ಸಂಸ್ಥಾನ ಅವಸಾನ ಹೊಂದುವಂತಾಯಿತು.

ಆಕರ ಸೂಚಿ:

1. Political Department-1824 Volume No. 18/162, Department of Archives, Government of Maharashtra, Mumbai.



ಚಿತ್ರ–11: 1797ರಲ್ಲಿ ಕೊಲೀನ್ ಮೆಕೆಂಜಿ ರಚಿಸಿದ ಕಲಬುರ್ಗಿ ಪರಿಸರದ ನಕ್ಷೆ.
(ಸುಲ್ತಾನಾಪುರ ಗ್ರಾಮವನ್ನು ಕೂಡ ಕಾಣಬಹುದು) [ಕೃಪೆ : ಜೆನ್ನಿಫರ್ ಹೊವೆಸ್]

ITIHASA DARPANA (Kannada Quarterly) : A Peer Reviewed Journal of Historical Research in Kannada, Book: 40-41, (Combined Issue) January - June 2019, Pages: 240, Edited by: Rajesh H.G.
33/A, Near I.T.I. College, Kempegowda Nagara, Vishwaneedam Post, Bengaluru-560 091. Mob.: 7829404063. Email: itihasadarpana@gmail.com, Website: itihasadarpana.com



ರಕ್ಷಾಪುಟ ಚಿತ್ರ : ಪೂರ್ವ ದಿಕ್ಕಿನಿಂದ (ಕೆರೆಯ ಹಿನ್ನೆಲೆಯಲ್ಲಿ) ಕಲಬುರ್ಗಿ ನಗರದ ನೋಟ (ಚಿತ್ರ: ಕರ್ನಲ್ ಮೆಕೆಂಜಿ-1797)

ISSN 232-13590

ಬೆಲೆ: ₹250/-